THE BOOK WAS DRENCHED

UNIVERSAL
LIBRARY
OU_200609
UNIVERSAL
LIBRARY

MADRAS UNIVERSITY KANARESE SERIES No. 4.

Oriental
Research Institute Publication

PUSHPADANTA PURANAM

BY

GUNAVARMA

ಗುಣವರ್ಮ ಕೃತಮುಪ್ಪ

ಪುಷ್ಪದಂತ ಪುರಾಣಂ

EDITED BY

A. VENKATA RAU, B.A, LT., *Head of the Kanarese Department*

AND

PANDIT H. SESHA AYYANGAR, *Junior Lecturer in Kanarese*

Institute of Oriental Studies and Research

University of Madras



UNIVERSITY OF MADRAS

1933

Price Rs. 4.] **[Foreign 6 Sh.**

ವಿಷಯಸೂಚಿಕೆ.

ಪೀಠಿಕಾ ವಿವರಣಂ.

ಆ. ೧.	ಮಂಗಳಂ	ಪಂಚಗುರು ಸ್ತುತಿ	೧-೬
		ಗಣನಾಥ ಸ್ತುತಿ	೭
		ರತ್ನತ್ರಯ ಸ್ತುತಿ	೮-೯
		ಯಕ್ಷ ಯಕ್ಷಿಯರ ಸ್ತುತಿ	೧೦-೧೧
		ಪುಷ್ಪದಂತ ಜಿನಸ್ತುತಿ	೧೨
		ಗೌತಮ ಗಣಧರರೇ ಆದಿಯಾಗಿ ತನ್ನಗುರು ಮುನಿ ಚಂದ್ರದೇವರ ವರೆಗಣ ಗುರುವರಂಪರಾಸ್ತುತಿ	೧೩-೩೨
		ಮುನಿವ್ರಾತಸ್ತುತಿ	೩೩
		ಸತ್ಕವೀಂದ್ರಸ್ತುತಿ	೩೪-೩೫
		ಪೂರ್ವಕವಿಗಳಲ್ಲಿ ಕೆಲವರ ನಾಮಕಥನ ಪೂರ್ವಕಸ್ತುತಿ	೩೬
		ಧ್ವನಿ, ಸರಸ್ವತಿ ಮತ್ತು ಸತ್ಕೃತಿಗಳ ಶ್ಲಾಘನೆ	೩೭-೪೧
	ಪೀಠಿಕೆ	ಪ್ರಕೃತ ಕಥಾಪ್ರತಿಪಾದ್ಯ ಪುಷ್ಪದಂತನ ಚರಿತದ ಕನ್ನಡ ಪರಿವರ್ತನವಿಧಾನಂ ಮತ್ತು ಶ್ಲಾಘನೆ	೪೨-೪೪
		ದುರ್ಜನ ಕುಕವಿನಿಂದೆ	೪೫-೪೪
		ಸಜ್ಜನ ಸುಕವಿಸ್ತುತಿ	೪೫-೪೮
		ಸ್ವಕವಿತ್ವ ಪ್ರಶಂಸೆ	೪೯-೫೬
		ತನ್ನ ಪ್ರಕೃತ ಗ್ರಂಥರಚನೆಗೆ ಆಶ್ರಯ ದಾತೃವಾದ ಶಾಂತಿವರ್ಮನ ಪ್ರಶಂಸೆ (ಗದ್ಯ)	೫೭-೬೦
		ಪುರಾಣದ ಪ್ರಾಚೀನತೆ ಮತ್ತು ಅದರ ಪರಂಪರಾಗಮನ ಪ್ರಕಾರಂ	೬೩-೬೬
	ಕಥಾವತಾರಂ	ಲೋಕತ್ರಯವರ್ಣನಂ	೬೭-೬೯
		ಮಧ್ಯಮ ಲೋಕವರ್ಣನಂ	೭೦-೭೪
		(ಮೇರುವರ್ಣನ ಪದ್ಯಂ)	೭೫

ನಗರ ಸಂಪದ್ವರ್ಣನಂ

ಆ. ೨.		ಮೇರುಗಿರಿಯ ಪೂರ್ವ ಪಶ್ಚಿಮದೊಳ್ ಉಭಯವಿದೇಹ ವರ್ಣನಂ	೧-೫
		ಪೂರ್ವ ವಿದೇಹವರ್ಣನಂ (ಸೀತಾನದಿ-ಪುಷ್ಕಳಾವತಿ ದೇಶ)	೬-೧೧

ಕ್ಷೇತ್ರ ವರ್ಣನಂ	೧೨-೧೪
ಕಲಮಕ್ಷೇತ್ರ ವರ್ಣನಂ	೧೫-೨೦
ಅಯೋವಟ್ಟಿಗೆಯ ವರ್ಣನಂ	೨೧-೨೨
ನಂದನ ವನ ವರ್ಣನಂ	೨೩-೨೯
ದೇಶವರ್ಣನೋಪಸಂಹಾರಂ	೩೦-೩೧
ಪುಂಡರೀಕಿಣಿ ಪುರವರ್ಣನಂ	೩೨-೩೫
ಪುರೋದ್ಯಾನ ವರ್ಣನಂ	೩೬-೪೨
ಪರಿಸರದ ಕರ್ವುದೊಂಟದ ವರ್ಣನಂ	೪೪-೪೯
ಪುಷ್ಪವಾಟೀವರ್ಣನಂ, ರಹಟಘಟೀ ಯಂತ್ರಗಳ್	೫೦-೫೧
ಸರಸಿಜಾಕರ ವರ್ಣನಂ	೫೨-೫೪
ಮೈಹಳಿಗಳ ವರ್ಣನಂ	೫೫-೫೮
ಧನುರ್ವಿದ್ಯಾ ಶಾಲಾವರ್ಣನಂ	೫೯-೬೧
ಪರಿಖಾವರ್ಣನಂ	೬೨
ಪ್ರಾಕಾರವರ್ಣನಂ	೬೩-೬೪
ನಗರಪ್ರತೋಳೀವರ್ಣನಂ	೬೮-೭೦
ಜಿನಾವಾಸ ವರ್ಣನಂ	೭೩-೭೫
ಗಣಿಕಾವಾಟವರ್ಣನಂ	೭೬-೭೭
ಪೂವಿನ ಸಂತೆ, ಮತ್ತುತಾಂಬೂಲಿಕಾಪ್ರಸರಂ	೭೮-೮೧
ಘಟ್ಟವಳೆರ (ಗಂದಿಗವಸರ) ವರ್ಣನಂ	೮೨-೮೪
ಮಣಿಗಾರ ಪ್ರಸರವರ್ಣನಂ	೮೫
ಕಂಚಗಾರರವಸರಂ	೮೬
ಬಚ್ಚವಳೆರವಸರಂ	೮೭-೮೮
ರಾಜಾಲಯ ವರ್ಣನಂ	೮೯-೯೫
ಪದ್ಮನೃಪನರ ಸುತನಂ	೯೬-೯೭

ನಾಯಕಾಭ್ಯುದಯ ವರ್ಣನಂ

ಆ. ೩.	ಪದ್ಮನೃಪಕೀರ್ತಿ ವರ್ಣನಂ	೧-೨೧
	ಆತನರಾಣಿ ವನಮಾಲಾಪ್ರಸ್ತುತಿ	೨೨-೩೩
	ರಾಜನ ಅಂತಃಪುರಾಗಮನಂ	೩೪
	ವನಮಾಲೆಯ ಚಿಂತಾಕ್ರಾಂತತೆ	೩೫
	ಅರಸನ ಚಿಂತಾಹೇತು ಪ್ರಶ್ನೆ	೩೬-೩೩
	ಚತುರಿಕೆಯ ಉತ್ತರಂ	೩೪-೪೨
	ಅರಸನ ಸಮಾಧಾನೋಕ್ತಿ	೪೩-೪೪

ಚತುರಿಕೆ ನಿರೂಪಿಸಿದ ಅರಸಿಯವುತ್ರ
ದೋಹದ ಚಿಂತಾಪ್ರಕಾರಂ ೪೫-೧೦೦
ವುತ್ಪೋತ್ಪತ್ತಿನಿಮಿತ್ತಕಥನ ಪೂರ್ವಕಂ ಅರಸನ
ಸಮಾಧಾನೋಕ್ತಿ ೧೦೧-೧೦೪
ರಾಣಿಯ ಚತುರ್ವಿಧ ಧರ್ಮತತ್ಪರತೆ ೧೦೯-೧೧೪
ರಾಣಿಯ ಚತುರ್ಥ ಸ್ನಾನವರ್ಣನಂ ೧೧೫-೧೧೭
ರಾಣಿಯು ಕಂಡ ಸ್ವಪ್ನ ವೃತ್ತಾಂತಂ ೧೧೪-೧೨೧
ವುರೋಹಿತನಿಂ ತತ್ಫಲ ನಿರೂಪಣಂ ೧೨೨-೧೨೩
ಪದ್ಮರಾಜಂಗೆಯ್ದ ನಂದೀಶ್ವರೋತ್ಸವಂ ೧೨೪-೧೨೫
ಸಿಂಹವರ್ಮ ಸೇನಾವತಿಯು ದಿಗ್ವಿಜಯ ವೃತ್ತಾಂತಂ ೧೨೬-೧೩೦

ಕುಮಾರೋದಯ ವರ್ಣನಂ

ಆ. ೪. ವನಮಾಲಾದೇವಿಯ ಗರ್ಭವರ್ಣನಂ ೧-೪
ಗರ್ಭದೌಹಳ ವರ್ಣನಂ ೯-೧೨
ವುಂಸವನ ಮಹೋತ್ಸವಂ ೧೩-೧೪
ಗರ್ಭಭರಾಸಲತ್ವಾದಿ ವರ್ಣನಂ ೧೫-೨೧
ವುತ್ರಜನನೋತ್ಸವ ವರ್ಣನಂ ೨೨-೪೧
ನಾಮಕರಣೋತ್ಸವ ವರ್ಣನಂ ೪೨-೪೩
ಬಾಲಕ್ರೀಡಾ ವರ್ಣನಂ ೪೪-೫೧
ಸಹಪಾಂಸುಕ್ರೀಡಿತ ವರ್ಣನಂ ೫೨-೫೩
ಕುಮಾರನ ವಿದ್ಯಾಭ್ಯಾಸ ವರ್ಣನಂ ೫೪-೬೧
ಸತೀರ್ಥ್ಯಮಂತ್ರಿವುತ್ರಚಿತ್ರಭಾನು ವಿದ್ಯಾಭ್ಯಾಸವರ್ಣನಂ ೬೨-೬೪
ಕುಮಾರನ ಯೌವನೋದಯ ವರ್ಣನಂ ೬೫-೭೦
ಕುಮಾರನ ವಿದ್ಯಾಭ್ಯಾಸ ವರಿಸಮಾಪ್ತಿಯೊಳ್ನೃಪದರ್ಶನಂ ೭೧-೭೩
ಕುಮಾರನ ರಾಜ್ಞೀ ದರ್ಶನಾನಂತರಂ ಸ್ವಭವನಪ್ರವೇಶಂ ೭೪-೭೬
ಯುವರಾಜ ಪಟ್ಟಬಂಧೋತ್ಸವ ವರ್ಣನಂ ೭೪-೮೬
ಯುವರಾಜ ದಿಗ್ವಿಜಯೋದ್ಯೋಗದೊಳ್
ಶರತ್ಕಾಲ ವರ್ಣನಂ ೮೭-೯೭

ಯುವರಾಜ ದಿಗ್ವಿಜಯ ವರ್ಣನಂ

ಆ. ೫. ಕುಮಾರ ದಿಗ್ವಿಜಯ ವ್ಯಸ್ಥಾನ ವರ್ಣನಂ ೧-೪
ಕುಮಾರ ಚತುರಂಗಬಲ ಸನ್ನಾಹ ವಿವರಣಂ ೯-೧೧

ಕುಮಾರನ ರಾಜವೀಥೀಪ್ರಯಾಣ ವೈಭವ ವರ್ಣನಂ ೨೦-೩೪
ಕುಮಾರನ ಪುರಂದರ ದಿಶಾಮುಖ ಯಾನ ವರ್ಣನಂ ೩೫-೪೩
ಕುಮಾರ ವಿಜಯ ವರ್ಣನಂ ೪೪-೫೩
ಕುಮಾರನ ಉತ್ತರದಿಗ್ಗಮನ ವರ್ಣನಂ ೫೪-೫೯
ಸಂತ್ರಾಸಕಾರಣ್ಯಾನೀ ವರ್ಣನಂ (ಮೃಗ ನಿವಾಸ ವರ್ಣನಂ) ೬೦-೮೪
ಶಬರಶಿಬಿರ ವರ್ಣನಂ ೮೯-೧೦೦
ಶಂಬನೆಂಬ ವನಚರಾಧಿವನ ಸರ್ವಸ್ವ ಸಮರ್ಪಣಂ ೧೦೧-೧೦೩
ಅತಿಶಯ ಸುಗಂಧ ಮಾರುತನ ಕುಱುಪಿಂ ವೃಕ್ಷದೊಳ್
ಬದ್ಧನಾಗಿರ್ದ ವಿಯಚ್ಚರನ ದರ್ಶನಂ ೧೦೪-೧೦೮
ಕುಮಾರನಿಂ ಬಂಧವಿಮೋಚಿತನಾದ ವಿಯಚ್ಚರನ ಸ್ವಕೀಯ
ವೃತ್ತಾಂತ ಕಥನೋದ್ಯೋಗಂ ೧೦೯-೧೧೪

ಶಿಶಿರ ಸಮಯ ವರ್ಣನಂ

ಆ. ೬.

ಖಚರನ ರಿಪುದಂಡಯಾತ್ರಾನುಮತಿ ವರ್ಣನಂ ೧-೭
ಭೀಮಪುರದ ಮತಂಗರಾಜನ ವಿಜಯಂ ೮-೯
ಭಂಗುರವೇಣಿಯೆನಿಪ ನದೀ ವರ್ಣನಂ ೧೦-೧೫
ಆ ನದಿಯ ತೀರದೊಳ್ವೃದ್ಧಪುರೋಹಿತ ಸೂಚನೆಯಿಂದೆ
ಜಯಸ್ಕಂಭ ಸ್ಥಾಪನಾರ್ಥಮಾಗಿ ಶಿಬಿರನ್ಯಾಸ ವರ್ಣನಂ ೧೬-೨೪
ಹಯಗ್ರೀವಜಯದಿಂ ತುಷ್ಟನಾದ ಚಿತ್ರಾಂಗ ವಿಯಚ್ಚ
ರನ ಕೃತಜ್ಞತಾಸೂಚಕಮಾದ ಸರ್ವಸ್ವಪೂರ್ವಕ
ಕೃಪಾಣವೀಣಾವಿದ್ಯಾದಿಸಮರ್ಪಣ ವರ್ಣನಂ ೨೫-೩೪
ಹೇಮಂತರ್ತು ವರ್ಣನಂ ೩೫-೪೪
ಫಾಲ್ಗುಣ ಶುಕ್ಲಾಷ್ಟಮಿಯ ನಂದೀಶ್ವರ ಪೂಜಾ ವರ್ಣನಂ ೪೬

ದೂತಾಗಮನ ವರ್ಣನಂ

ಆ. ೭.

ಯುವರಾಜ ಕೃತ ಜಿನಾರ್ಚನಾ ವರ್ಣನಂ ೧-೪
ಯುವರಾಜ ಕೃತ ಜಿನಸ್ತುತಿ ೯-೧೭
ಕಟಕ ಪ್ರವೇಶಂ ೧೪-೨೦
ಸೇನಾಧಿಪ ಕೀರ್ತಿವರ್ಮನಿಂ ಸುಹೃನ್ನೃಪಸಾರ ವಸ್ತ್ವಾ
ಕರ್ಷಣ ಸಮರ್ಪಣಂ ೨೧-೨೨

	ಸೇನಾಧಿಪ ಕೀರ್ತಿವರ್ಮಸನ್ಮಾನಮುಂ-ಜಯಸ್ತಂಭ ಸ್ಥಾಪನಮುಂ	೨೩-೨೪
	ಯುವರಾಜನ ಒಡ್ಡೋಲಗದ ವರ್ಣನಂ	೨೫-೩೬
	ದಮನನೆಂಬ ರಾಯಭಾರಿಯ ಆಗಮನಂ	೩೭-೩೮
	ಭದ್ರಾವತೀಪುರದ ಜಯವರ್ಮಂ ತನ್ನನಟ್ಟಿದ ವೃತ್ತಾಂತ ಕಥನಂ	೩೯-೪೪
	ಜಯವರ್ಮಂಗೆ ಕನ್ಯಾರ್ಥಿಯಾಗಿ ಗಜಗರ್ಣನಿಂ ದೂತ ಪ್ರೇರಣಂ	೪೫-೪೯
	ಕನ್ಯಾದಾನ ವಿಷಯದಲ್ಲಿ ಮಂತ್ರಿಗಳೊಡನೆ ಮಂತಾ ಲೋಚನೆ	೫೦-೫೩
	ದಮನನಂ ಭಂಗ್ಯಂತರದಿಂದೆ ಕನ್ಯಾದಾನಕ್ಕೆ ಅನುಮತಿ ಸಲ್ ಯತ್ನಿಪುದು	೫೪-೫೫
	ದಮನನ ಪ್ರತಾಪ ಕಟೂಕ್ತಿ	೫೬-೬೧
	ಮಂತ್ರಿಗಳ ಸ್ಪಷ್ಟವಾಗಿ ಕನ್ಯಾದಾನನಿರಾಕರಣೋಕ್ತಿ ಯುಂ ಸ್ವನೃಪಪ್ರತಾಪಶ್ಲಾಘನಮುಂ	೬೨-೬೩
	ದೂತೋಕ್ತಿಯಿಂದೆ ಗಜಕರ್ಣನುರವಣೆ	೬೪-೬೯
	ಗಜಕರ್ಣನ ಮುತ್ತಿಗೆ	೭೦-೭೬
	ಯುದ್ಧಕ್ಕೆ ಯತ್ನಿಸಿದ ಜಯವರ್ಮಂಗೆ ಮಂತ್ರಿಗಳ ಡ್ಡಮಾಗಿ ಯುವರಾಜನಲ್ಲಿಗೆ ದೂತಪ್ರೇಷಣಂ	೭೭-೮೧
	ದೂತೋಕ್ತಿಯ ಉಪಸಂಹಾರಂ	೮೨

ಜಳಕೇಳೀ ವರ್ಣನಂ

ಆ. ೪.	ಯುವರಾಜನ ಸಹಾಯಾನುಮತಿ	೧-೪
	ಸಾಯಂತನ ವರ್ಣನಂ	೬-೮
	ಅಂಧಕಾರ ವ್ಯಾಪನಂ	೯
	ತಾರಕೋದಯಂ	೧೦-೧೧
	ದೀಪಿಕಾ ವರ್ಣನಂ	೧೨
	ಚಂದ್ರೋದಯ ವರ್ಣನಂ	೧೩-೧೪
	ಪ್ರಾತಃಕಾಲ ವರ್ಣನಂ	೧೬-೨೦
	ಸೂರ್ಯೋದಯ ವರ್ಣನಂ	೨೩-೨೪
	ಯುವರಾಜನಯುದ್ಧಪ್ರಸ್ಥಾನ ವರ್ಣನಂ	೨೫-೨೮
	ಪ್ರಸ್ಥಾನ ಶಿಬಿರದತ್ತಣಿಂದೆ ಪ್ರಯಾಣಂ	೨೯-೩೧
	ಭದ್ರಾವತೀನಗರಕ್ಕೆತ್ತಿ ಬರ್ಪ ಚತುರಂಗಬಲ ವರ್ಣನಂ	೩೨-೪೫

ಗಜಕರ್ಣನ ಪರಾಜಯಂ	೪೬
ಯುವರಾಜನ ಭದ್ರಾವತೀ ಪುರ ಪ್ರವೇಶ ವರ್ಣನಂ	೪೭-೪೯
ಯುವರಾಜ ವಿವಾಹೋತ್ಸವ ವರ್ಣನಂ	೪೯-೫೧
ಯುವರಾಜ ಸ್ವಪುರ ಪ್ರತಿನಿವರ್ತನ ಸಮಯದೊಳ್ ಗ್ರೀಷ್ಮ ವರ್ಣನಂ	೫೦-೫೪
ನಡುವಯಣದೊಳ್ ಸಂಧಿಸಿದ ಉದ್ಯಾನವನವರ್ಣನಂ	೫೯-೬೦
ರಾಣೀವಾಸದ ಪುಷ್ಪಾವಚಯ ವರ್ಣನಂ	೬೩-೬೯
ಜಲಕೇಳೀ ವರ್ಣನಂ	೬೦-೬೪
ಯುವರಾಜಂಗೆ (ಧನದೇವನೆನಿಪ ಪುತ್ರೋತ್ಪತ್ತಿ ವರ್ಣನಂ)	೬೫-೬೬
ಮಹಾಪದ್ಮನ ಸಂಧ್ಯಾಸ್ನಾನ ಸಮಯದೊಳ್ ಸೂರ್ಯಾಸ್ತವರ್ಣನಂ	೬೭-೧೦೦
ತಾರಾ ಚಂದ್ರೋದಯ ವರ್ಣನಂ	೧೦೧-೧೦೬
ಯುವರಾಜ ಚಂದ್ರಿಕಾವಿಹಾರ ವರ್ಣನಂ	೧೦೭-೧೧೬
ಸೂರ್ಯೋದಯ ವರ್ಣನಂ	೧೧೭-೧೧೯
ಭೂತಹಿತ ಜಿನವಂದನಾ ಭಕ್ತಿ ಪ್ರಯಾಣೋದ್ಯೋಗಂ	೧೧೯-೧೨೦

ಗರ್ಭಾವತರಣ ಕಲ್ಯಾಣಂ

ಆ. ೯	ಮಹಾಪದ್ಮರಾಜನ ಧರ್ಮಶ್ರವಣಂ	೧-೬
	ಮಹಾಪದ್ಮವೈರಾಗ್ಯೋತ್ಪತ್ತಿ ದೀಕ್ಷಾಗ್ರಹಣಾದಿ ವರ್ಣನಂ	೭-೯
	ಮಹಾಪದ್ಮಂಗೆ ಪ್ರಾಣತ ಕಲ್ಪದೇವತ್ವಪ್ರಾಪ್ತಿ ವರ್ಣನಂ	೧೦
	ಜಂಬೂದ್ವೀಪ ಕಾಶೇವಿಷಯ ವರ್ಣನಂ	೧೧-೧೪
	ತದ್ರಾಜಧಾನಿಯಪ್ಪ ಕಾಕಂದೀನಗರದ ಬಹಿರುದ್ಯಾನ ವರ್ಣನಂ	೧೫-೨೧
	ಇಕ್ಷ್ವಾಕುವನ ವರ್ಣನಂ	೨೨
	ಉವಶಲ್ಯ ವರ್ಣನಂ	೨೩
	ಖಾತಿಕಾ ವರ್ಣನಂ	೨೪
	ಪ್ರಾಕಾರ ವರ್ಣನಂ	೨೫-೨೭
	ರಾಜಮಂದಿರ ವರ್ಣನಂ	೨೮-೩೦
	ನಗರ ವರ್ಣನೋಪಸಹಾರಂ	೩೧-೩೨
	ತದಧಿರಾಜ ಸುಗ್ರೀವ ನೃಪವರ್ಣನಂ	೩೩-೪೦
	ತನ್ಮಹಿಷಿ ಜಯರಾಮಾದೇವಿ ವರ್ಣನಂ	೪೧-೪೩
	ತದಧಿರಾಜ ರಾಜ್ಯಭಾರ ವರ್ಣನಂ	೪೪-೪೯

	ತೀರ್ಥಕರೋತ್ಪತ್ತಿಸೂಚಕವಪ್ಪ ಇಂದ್ರನ ಆಸಕಂಪ ವರ್ಣನಂ	೪೦
	ಶಕ್ರಾಜ್ಞೆಯಿಂದ ಕಾಕಂದಿಯೊಳ್ ಧನದಕೃತ ಪಂಚರತ್ನ ವೃಷ್ಟಿಪೂರ್ವಕ ಪಂಚಾಶ್ಚರ್ಯ ವರ್ಣನಂ	೪೧-೪೪
	ಜಯರಾವಮಾ ಗರ್ಭಸಂಶೋಧನಾರ್ಥವಾಗಿ ದೇವತಾಸ್ತ್ರೀ ಸಂಪ್ರೇಷಣಮುಂ-ತತ್ಪರಿಚರ್ಯೆಯುಂ	೪೬-೬೦
	ಜಯರಾವಮಾ ಪುಷ್ಪವತೀತ್ವ ವರ್ಣನಂ	೬೧-೬೨
	ಚತುರ್ಥಸ್ನಾನಾನಂತರದ ಬೆಳ್ವಸದನದ ವರ್ಣನಂ	೬೩-೬೪
	ಶಯ್ಯಾ ಗೃಹವರ್ಣನಂ	(ಗ) ೬೪-೬೬
	ಜಿನೇಂದ್ರೋತ್ಪತ್ತಿಕಾರಣವಪ್ಪ ಷೋಡಶ ಸ್ವಪ್ನದರ್ಶನಂ	೬೭-೧೦೨
	ಪ್ರಭಾತ ಸವಿಾರವರ್ಣನಂ	೧೦೩
	ಜಯರಾವಮಾದೇವಿ ಸ್ವಪ್ನವೃತಾಂತವಮಂ ಅಧಿರಾಜಂಗೆ ನಿವೇದಿಸಿದುದು	೧೦೪-೧೦೯
	ಅಧಿರಾಜನಿಂ ಜಿನೋತ್ಪತ್ತಿಯೆನಿಪ ತತ್ಫಲಕಥನಂ	೧೧೦-೧೧೨
	ಪ್ರಾಣತ ಕಲ್ಪಾವರನ ಗರ್ಭಾವತರಣವರ್ಣನಂ	೧೧೩-೧೧೫
	ಜಯರಾವಮಾ ಗರ್ಭವತೀತ್ವ ವರ್ಣನಂ	೧೧೬-೧೨೦

ದೇವಾಗಮನವರ್ಣನಂ

ಆ. ೧೦.	ಪುಷ್ಪದಂತ ಜಿನೋತ್ಪತ್ತಿ	೧-೪
	ಇಂದ್ರಾಗಮನಂ	೫-೧೪
	ಶಚೀದೇವಿಯಿಂದೆ ಜನ್ಮಾಭಿಷೇಕಾರ್ಥವಾಗಿ ಜಿನಬಾಲಕಾನಾಯನಂ	೧೫-೨೨
	ಮಂದರಾಭಿಗಮನಂ	೨೩-೪೩
	ಮಂದರಾಭಿಮುಖವಾದ ಐರಾವತದ ವಿಗುರ್ವಣಾಕೃತಿ ವರ್ಣನಂ	೪೪-೫೫
	ಮೇರುನಗ ವರ್ಣನಂ	೫೬-೬೨
	ಮೇರುನಗಾರೋಹಣಂ	೬೩-೭೦
	ಪಾಂಡುಕವನ ಪಾಂಡುಕಶಿಲಾಗಮನಂ	೭೧-೭೩
	ಅಭಿಷವಪೀಠಾರೋಹಣಂ	೭೪-೭೯
	ಅಭಿಷವ ವರ್ಣನಂ	೮೦-೯೦
	ಧೂಪಾಘ್ರ್ಯೋದ್ಧರಣ ಕ್ರಿಯಾವರ್ಣನಂ	೯೧-೯೨

ಜನ್ಮಾಭಿಷೇಕೋತ್ಸವ ಕಲ್ಯಾಣಂ

ಆ. ೧೧.

ಸವನಪ್ರಾರಂಭ ವರ್ಣನಂ	೧-೫
ಪುಣ್ಯೋದಕ ನಾರಿಕೇಳೋದಕಾದಿ ಸ್ನಪನವರ್ಣನಂ	೬
ದೇವರಿಂದೆ ಪಂಚಮ ಜಲಧಿ ಜಲಾಹರಣ ವರ್ಣನಂ	೭-೧೫
ಕ್ಷೀರಜಲಧಿ ಜಲಾಭಿಷವ ವರ್ಣನಂ	೧೬-೩೦
ಜಿನ ಶಿಶುವಿನ ಸೀನ್ತ್ಯಪ್ರಕಾರದ ವರ್ಣನಂ	೩೧
ಗಗನಕ್ಕೆ ನೆಗೆದ ಕ್ಷೀರ ಬಿಂದುವರ್ಣನಂ	೩೨
ಅಭಿಷಿಕ್ತವಾಗಿ ಪ್ರವಹಿಸಿದ ಕ್ಷೀರವರ್ಣನಂ	೩೩-೪೨
ನೀರಾಜನ ವರ್ಣನಂ	೪೩
ಗಂಧೋದಕ ಸ್ನಾನ ವರ್ಣನಂ	೪೪-೫೦
ಜನ್ಮಾಭಿಷೇಕ ಕಾರ್ಯೋಪಸಂಹಾರ ಪ್ರಕಾರ ವರ್ಣನಂ	೫೧-೫೬
ಇಂದ್ರಕೃತ ಜಿನಸ್ತುತಿ(ಸಂಸ್ಕೃತಂ)	೧-೫
ಶಚೀದೇವಿಯ ಜಿನಶಿಶುಗ್ರಹಣಾನಂದ ವರ್ಣನಂ	೫೭-೬೧
ಜಿನ ಶಿಶುಗಂಧ ಲೇಪನ ವರ್ಣನಂ	೬೨
ಜಿನ ಶಿಶುನೇಪಥ್ಯ ವಿಧಾನ ವರ್ಣನಂ	೬೩-೬೫

ಕುಮಾರಪರಿಣಯನೋತ್ಸವ ವರ್ಣನಂ

ಆ. ೧೨.

ಕಾಕಂದೀಪುರ ಪ್ರತಿನಿವರ್ತನಂ	೧-೬
ಸುಗ್ರೀವಮಹಾರಾಜಂಗೆ ಪುತ್ರಾಭಿವೃದ್ಧಿಯಂಕೇಳ್ದು ಸಂತೋಷಪ್ರಾಪ್ತಿ	೭-೯
ಇಂದ್ರನ ವಿಜ್ಞಾಪ್ತಿ ಪೂರ್ವಕ ಜಿನ ಪಿತೃಸಭಾಜನಂ	೧೦-೧೫
ಜಿನಶಿಶು ಜಾತಕರ್ಮೋತ್ಸವ ವಿಧಾನ ವರ್ಣನಂ	೧೬-೨೭
ತದುತ್ಸವದೊಳ್ ಇಂದ್ರತಾಂಡವಾರಂಭ ವರ್ಣನಂ	೨೮-೩೪
ಇಂದ್ರನ ವೈಕುರ್ವಣದೇಹದೊಳ್ ಅಚ್ಚರಸಿಯರ ನರ್ತನ ವರ್ಣನಂ	೩೯-೪೭
ಇಂದ್ರತಾಂಡವ ವರ್ಣನಂ	೪೮-೫೦
ಜಿನ ಶಿಶು ನಾಮಕರಣೋತ್ಸವ ವರ್ಣನಂ	೫೩-೫೬
ಇಂದ್ರನ ಸ್ವರ್ಗ ಗಮನಂ	೫೭
ಜಿನಶಿಶುವಿನ ಬಾಲ್ಯವರ್ಣನಂ	೫೮-೬೭
ಜಿನಬಾಲಕನ ಕುಮಾರಕಾಲದೊಳ್ ಸಕಲ ವಿದ್ಯಾಗ್ರಹಣ ವಿಧಾನ ವರ್ಣನಂ	೬೮-೭೫
ಜಿನಬಾಲಕನ ಚರಮದೇಹ ಮಾಹಾತ್ಮ್ಯ ವರ್ಣನಂ	೭೬-೮೮
ಜಿನಬಾಲಕನ ಯೌವನಪ್ರಾಪ್ತಿ ವರ್ಣನಂ	೮೯-೯೦

ಜಿನಬಾಲಕನ ವಿವಾಹೋದ್ಯಮ ವರ್ಣನಂ	೯೦-೯೭
ಸಹಸ್ರಕನ್ಯಾವರಣ ವಿವರಣಂ	೯೮-೯೯
ಜಿನ ವೈವಾಹವೈಭವ ವರ್ಣನಂ	೧೦೦-೧೧೦
ಯುವರಾಜಪಟ್ಟಬಂಧೋತ್ಸವ ವರ್ಣನಂ	೧೧೧-೧೧೪

ಪರಿನಿಷ್ಕ್ರಮಣಕಲ್ಯಾಣಂ

ಆ. ೧೩.	ಪುಷ್ಪದಂತ ರಾಜ್ಯಭಾರ ವರ್ಣನಂ	೧-೭
	ಚಂದ್ರಿಕಾದೇವಿಯ ಪಟ್ಟಮಹಿಷೀತ್ವ ವರ್ಣನಂ	೮-೯
	ಕೀರ್ತಿಧರನಂದನೋತ್ಪತ್ತಿ	೧೦
	ಮಲಯಾನಿಲಾದಿ ಮಹಿಷಿಗಳೊಳ್ ನರದೇವಾದಿ ನಾಲ್ವತ್ತೆಣ್ಬರುತ್ಪತ್ತಿ	೧೧-೧೪
	ಶ್ರೀಕೀರ್ತಿಧರ ಕುಮಾರಯುವರಾಜ ಪಟ್ಟಬಂಧೋತ್ಸವ ವರ್ಣನಂ	೧೫-೧೬
	ನಿದಾಘ ವರ್ಣನಂ	೧೭-೧೮
	ಸೂರ್ಯಾಸ್ತ ವರ್ಣನಂ	೧೯-೨೩
	ಚಂದ್ರೋದಯ ವರ್ಣನಂ	೨೪-೨೫
	ಉಳ್ಕಾಪಾತದರ್ಶನಂ	೨೬
	ಉಳ್ಕಾಪಾತದರ್ಶನದಿಂದೆ ಪುಷ್ಪದಂತನಿರ್ವೇಗಪರತ್ವ ವರ್ಣನಂ	೨೭-೪೩
	ದ್ವಾದಶಾನುಪ್ರೇಕ್ಷಾಸ್ಮರಣಂ	೪೪-೫೬
	ಸೂರ್ಯೋದಯ ವರ್ಣನಂ	೫೭-೬೧
	ಲೋಕಾಂತಿಕದೇವ ಪ್ರತಿಬೋಧನಂ	೬೨-೭೧
	ಕೀರ್ತಿಧರ ರಾಜ್ಯಾಭಿಷೇಕ ವರ್ಣನಂ	೭೨-೭೪
	ಪರಿನಿಷ್ಕ್ರಮಣೋದ್ಯೋಗ ವರ್ಣನಂ	೭೫-೭೬
	ಇಂದ್ರನಿರ್ವರ್ತಿತ ಪರಿನಿಷ್ಕ್ರಮಣೋತ್ಸವ ವರ್ಣನಂ	೭೭-೮೧
	ಶಿಬಿಕಾಗಮನಾರೋಹಣಾದಿ ವರ್ಣನಂ	೮೨-೮೩
	ಶಿಬಿಕೆಯಿಂ ಪುಷ್ಪಕೋದ್ಯಾನಾಗಮನಂ	೮೪
	ಪುರಜನಂಗಳ ನೃಪವಿಯೋಗ ದುಃಖ ವಿವರಣಂ	೮೯-೯೧
	ಶುದ್ಧಾಂತಕಾಂತಾವಿಯೋಗ ದುಃಖಪ್ರಕಾರ ವರ್ಣನಂ	೯೨-೧೦೦
	ಶುದ್ಧಾಂತಕಾಂತಾ ದುಃಖ ಸಮಾಧಾನ ಪ್ರಕಾರ ವರ್ಣನಂ	೧೦೧
	ಪುಷ್ಪದಂತ ಜಿನನ ಶಿಲಾಪಟ್ಟಾಧಿರೋಹಣಂ	೧೦೨-೧೦೪
	ಜಿನದೀಕ್ಷಾಂಗವಾದ ನಿಜಕೇಶೋಲ್ಲುಂಚನಂ	೧೦೯-೧೧೨

	ನಿರ್ವರ್ತಿತತೃತೀಯಕಲ್ಯಾಣನಪ್ಪ ಇಂದ್ರನ ಸ್ವರ್ಗ ಪ್ರತಿನಿವರ್ತನಂ	೧೧೩-೧೧೪
	ಮುನೀಶ್ವರಪಾರಣಾವಾಗರ್ಣ ಪ್ರಕಾಶ ವರ್ಣನಂ	೧೧೫-೧೧೬
	ಪುಷ್ಯಮಿತ್ರನ ಆಹಾರದಾನವಿಧಾನಂ	೧೧೭-೧೨೩

ಪರಿನಿರ್ವಾಣಕಲ್ಯಾಣಂ

ಆ. ೧೪.	ಪುಷ್ಯಮಿತ್ರನ ಮುನಿಪೂಜಾವಿಧಾನ ವರ್ಣನಂ	೧-೧೦
	ತತ್ಕಾಲವಂಚಾಶ್ಚರ್ಯ ವರ್ಣನಂ	೧೧
	ಮುನಿಯ ಆಹಾರ ಸ್ವೀಕಾರವರ್ಣನಂ	೧೨-೧೩
	ಮುನಿಯ ಸಮುತಾಪಪ್ರಾಪ್ತಿವರ್ಣನಂ	೧೪-೧೭
	ಪುಷ್ಪದಂತನ ಪರಮಯೋಗನಿಯೋಗ ಮಾಹಾತ್ಮ್ಯ ವರ್ಣನಂ (ತಪ್ಪನೆ ಮೃಗಜಾತಿವೈರದೂರೀಕರಣ ವರ್ಣನಂ)	೧೮-೨೦
	ಮುನಿಯ ತಪೋವರ್ಣನಂ	೨೧-೨೯
	ಘಾತಿಕರ್ಮ ಚತುಷ್ಟಯ ನಾಶ ವರ್ಣನಂ	೩೦-೩೭
	ಕೇವಲ ಜ್ಞಾನೋದಯವರ್ಣನಂ	೩೮-೪೧
	ಇಂದ್ರಾಗಮನಂ	೪೨-೪೮
	ಸಮವಸೃತಿ ಮಂಟಪ ನಿರ್ಮಾಣಂ	೪೯-೫೦
	ಧರ್ಮವಿಹಾರ ವರ್ಣನಂ	೫೧
	ಸುವಿಧ (ಪುಷ್ಪದಂತ) ಜಿನನ ನಿರ್ವಾಣಂ	೫೨
	ಇಂದ್ರನ ವರಿನಿರ್ವಾಣಕಲ್ಯಾಣೋತ್ಸವ ವಿರಚನಂ	೫೩
	ಕೀರ್ತಿಧರನ ನಿರ್ವಾಣಸ್ಥಲ ಪೂಜಾವರ್ಣನಂ	೫೪
	ಗುಣವರ್ಮವಾಕ್ಕ್ರುಶಸ್ತಿ	೫೫
	ಈ ಗ್ರಂಥಲೇಖಕ ಮಾಪರಾಜ ವಿಬುಧ ವರ್ಣನಂ	೫೬-೫೭
		ಪುಟದಿಂ-ವರೆಗೆ
ಪರಿಶಿಷ್ಟಂ ೧.	ಚಂದ್ರನಾಥಾಷ್ಟಕಂ	೨೪೯-೨೫೦
ಪರಿಶಿಷ್ಟಂ ೨.	ಪದ್ಯಗಳ ಅಕಾರಾದ್ಯನುಕ್ರಮಣಿಕೆ	೨೫೧-೨೬೯
ಪರಿಶಿಷ್ಟಂ ೩.	ವೃತ್ತಜಾತಿ ಮತ್ತು ಸಂಖ್ಯೆ	೨೭೦
ಪರಿಶಿಷ್ಟಂ ೪.	ಚಾವುಂಡರಾಯವುರಾಣಾಂತರ್ಗತ ಪುಷ್ಪದಂತ ಪುರಾಣಕಥೆ	೨೭೧-೨೭೪

ಪುಷ್ಪದಂತ ಪುರಾಣದ

ಕಥಾಸಂಗ್ರಹವು.



ಜೈನಮತದವನಾದ ಈ ಗ್ರಂಥಕರ್ತಾರನು ನಿರ್ವಿಘ್ನವಾಗಿ ಸ್ವಪರಿಶ್ರಿತಗ್ರಂಥವು ಕೊನೆಗಾಣುವುದಕ್ಕಾಗಿ ಶಿಷ್ಟಾಚಾರಾನುಸಾರ ಮಂಗಳವನ್ನು ಗ್ರಂಥಾದಿಯಲ್ಲಿ ಶಿಷ್ಯಶಿಕ್ಷೆಗಾಗಿರಚಿಸಲಾಟಿಸಿ ಸ್ವಮತಪದ್ಧತಿಯಂತೆ ಆರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸಾಧುಗಳೆಂಬ ಪಂಚ ಪರಮೇಷ್ಠಿಗಳು (೧-೬) (೭) ರತ್ನತ್ರಯ (೮) ಜಿನೇಂದ್ರಧರ್ಮ, ಸರಸ್ವತಿ, (೯) ಜಿನಶಾಸನ ದಕ್ಷರಾದ ಯಕ್ಷಿ, (೧೦) ಯಕ್ಷರು (೧೧) ಪುಷ್ಪದಂತ (ತೀರ್ಥಕರ) ಮಕರಧ್ವಜ ಇವರ ಸ್ತುತಿರೂಪವಾದ ಮಂಗಳವನ್ನು ನಿರ್ವರ್ತಿಸಿ, ಗುರು ವಂದನೆಯ ಪ್ರಸ್ತಾವದಲ್ಲಿ, ಅನುಬದ್ಧ ಕೇವಲಿಗಳು (೧೩) ಶ್ರುತ ಕೇವಲಿಗಳು (೧೪) ದಶಪೂರ್ವಿಗಳು ಏಕಾದಶಧಾರಿಗಳು (೧೫) ಆಚಾರಾಂಗಧರರು (೧೬) ಈ ಪ್ರಾಚೀನಾಚಾರ್ಯರನ್ನು ವಂದಿಸಿ, ಕೊಂಡಕುಂದಮುನಿಯನ್ನು ಮೊದಲುಮಾಡಿ (೧೭) ಗೃಧ್ರ ಪಿಂಛಾಚಾರ್ಯ (೧೮) ಬಳಾಕ ಪಿಂಛ ಮಯೂರ ಪಿಂಛ (೧೯) ಅರ್ಹದ್ಬಲಿ (೨೦) ಭೂತಬಲಿ (೨೧) ಸಮಂತಭದ್ರ (೨೨) ಅಕಳಂಕ (೨೩) ಪೂಜ್ಯಪಾದ (೨೪) ವಿದ್ಯಾನಂದಸ್ವಾಮಿ (೨೫) ಕವಿ ಪರಮೇಷ್ಠಿ (೨೬) ವೀರಸೇನ, ಜಿನಸೇನ (೨೭) ಗುಣಭದ್ರಸ್ವಾಮಿ (೨೮) ಜಟಾನಂದಿ ಸಿಂಹಣಂದಿಗಳು (೨೯) ಏಳಾಚಾರ್ಯರು (೩೦) ದೇವಚಂದ್ರ (೩೧) ಮುನಿಚಂದ್ರದೇವರ (೩೨) ವರೆಗಣ ಸ್ವಾಚಾರ್ಯಪರಂಪರೆಯನ್ನು ವಂದಿಸಿ, ಭೂತಭವದ್ಭಾವಿ ಮುನಿಗಳನ್ನೂ (೩೩) ಕವೀಶ್ವರ (೩೪-೩೫)ರನ್ನೂ ಪ್ರಾರ್ಥಿಸಿ, ಗುಣವರ್ಮ ಮೊದಲಾದ ಕೆಲವು ಪ್ರಸಿದ್ಧಕವಿಗಳ ಮೆಯ್ಸಿರಿ ಮೊದಲಾದ ಕಾವ್ಯಗುಣಗಳನ್ನು ತತ್ತನ್ನಾಮ ಸಂಕೀರ್ತನ ಪೂರ್ವಕವಾಗಿ ಯಾಚಿಸಿ, (೩೬) ಮೇಲಾದ ವ್ಯಜ್ಜ್ಯಾನೈತ್ತಿ (ಧ್ವನಿ)ಯಿಂದ ಸರಸ್ವತಿಯು ಸ್ವಾಧೀನತೆಯನ್ನು ವರ್ಣಿಸಿ, (೩೭-೩೯) ಕವಿಯು ಧ್ವನಿಸ್ಫೋರಕವಾದ ಕಾವ್ಯವನ್ನೇ ವಿರಚಿಸಬೇಕೆಂದು ನಿರ್ಣಯಿಸಿ (೩೯-೪೦-೪೧) ಹಿಂದೆ ಜಿನ ಗಣಧರಾದಿಗಳು ಅರ್ಧಮಾಗಧೀ ಸಂಸ್ಕೃತಭಾಷೆಗಳಲ್ಲಿ ಹೇಳಿದ ಜಿನಪುರಾಣಗಳಲ್ಲಿ ಒಂದಾದ ''ಪುಷ್ಪದಂತ ಪುರಾಣ''ವನ್ನು ಕನ್ನಡಭಾಷೆಯಲ್ಲಿ ಕಾವ್ಯರೂಪವಾಗಿ ಹೇಳುವೆನೆಂದು ಪ್ರತಿಜ್ಞೆ ಮಾಡಿ, ಮಹತ್ತಾದ ಅದನ್ನು ವಿರಚಿಸುವ ವಿಷಯದಲ್ಲಿ ತನ್ನ ಅಸಾಮರ್ಥ್ಯವನ್ನು ಹೇಳಿಕೊಂಡು, (೪೨) ಕತೆಯು ಚಿಕ್ಕದಾಗಿದ್ದರೂ ವರ್ಣನೀಯನಾದ ಉನ್ನತವಂಶದ ನಾಯಕನ ಮಹತ್ವದಿಂದ ಹೆಚ್ಚು ಪ್ರಖ್ಯಾತಿಗೆ ಸಂದಿರುವುದೆಂದು ನಿರೂಪಿಸಿ, (೪೩) ಜಿನನುತಿಯು ಮಹತ್ವವನ್ನು ಪ್ರತಿಪಾದಿಸಿ, (೪೪) ದುರ್ಜನರಾದ ಕುಕವಿಗಳನ್ನು ನಿಂದಿಸಿ, (೪೫-೪೭) ಸಜ್ಜನರನ್ನು ಚಮತ್ಕಾರೋಕ್ತಿಯಿಂದ ಅತಿಸಂಗ್ರಹವಾಗಿ ಶ್ಲಾಘಿಸಿ, (೪೮) ಗುಣವರ್ಮ ಬುಧನಾದ ತನಗೆ ಕವಿತ್ವಶಕ್ತಿಯು ಮುನಿಚಂದ್ರವಂಡಿತ ದೇವರ ಅನುಗ್ರಹದಿಂದ ದೊರೆಕೊಂಡಿತೆಂದು ಸೂಚಿಸಿ, (೪೯) ತನ್ನ ಕವಿತ್ವದ ಮಹತ್ವವನ್ನು ವರ್ಣಿಸಿ, (೬೬) ತನ್ನ ಕವಿತ್ವದ ಮಾಧುರ್ಯವನ್ನನುಭವಿಸಬೇಕೆಂದು ವಜ್ರದೇವನರ ನಾಥನಾಸ್ಥಾನದಲ್ಲಿ ಕೋವಿದರು ಕೊಂಡುಕೊನೆಯಲು ಅದನ್ನು ಕೇಳಿದ ಶಾಂತಿವರ್ಮದಂಡನಾಥನು ತನ್ನನ್ನು ಆದರಿಸಿ ಜಿನಪುರಾಣವನ್ನು ರಚಿಸೆಂದು ಪ್ರಾರ್ಥಿಸಲು ಈ ಜಿನಕಥೆಯನ್ನು ಹೇಳಲಾರಂಭಿಸಿದೆನೆಂದು ಹೇಳಿ, (೬೭) ಕಾವ್ಯವನ್ನು ಕನ್ನಿಗೆ ಹೋಲಿಸಿ ಶಾಂತಿವರ್ಮನಿಗೆ ಸಮರ್ಪಿಸಿದ ವಿಷಯವನ್ನು ವಿವರಿಸಿ (೬೮-೭೦) ತನ್ನ ಆಶ್ರಯದಾತೃವಾದ ಶಾಂತಿವರ್ಮ ದಂಡನಾಥನನ್ನು ಅತಿ

ಶಯವಾಗಿ ಪ್ರಶಂಸಿಸಿ, (೩೨-೪೦ ಗದ್ಯ) ಆತನ ಯಶೋಲತೆಗಾಲಂಬನವಾಗಿ ಮನೋಹರವಾದೀ ಕಥಾವನಿತೆಗೆ ಉದ್ಭವಸ್ಥಾನವು ನಾಲ್ಕನುಯೋಗದ ನಾಲ್ಕು ಶ್ರುತಸ್ಕಂಧಂಗಳಲ್ಲಿಯ ಪೂರ್ವಾನುಯೋಗವೆಂದು ನಿರೂಪಿಸಿ, (೪೩) ಈ ಕಥಾಭಾಗವು ಪುರುಜಿನ (ಮೊದಲ ತೀರ್ಥಂಕರ) ವೀರ ಜಿನರ (ಒಳನೆಯ ಕೊನೆಯ ತೀರ್ಥಕರ) ಮುಖೋದ್ಗತವಾದುದೆಂದೂ, ಬಳಿಕ ಅದನ್ನೀ ಆದಿಯಲ್ಲಿ ವೃಷಭಸೇನಗಣಧರರು ಭರತ ನೃಪನಿಗೆ ರೂಪ್ಯಗಿರಿಯಲ್ಲೂ, ಕೊನೆಯಲ್ಲಿ ಗೌತಮ ಗಣಧರರು ಮಗಧ ರಾಜನಿಗೆ (ಶ್ರೇಣಿಕನಿಗೆ) ವಿಪುಳಗಿರಿಯಲ್ಲೂ, ಹೇಳಿದರೆಂದು ನಿರೂಪಿಸಿ, (೪೪) ಕಥಾಭಾಗವನ್ನು ಶ್ಲೇಷೆಯಿಂದ ಪ್ರಶಂಸಿಸಿ ಈ ಕಾವ್ಯದಲ್ಲಿ ಶಾಂತರಸವೇ ಮುಖ್ಯವೆಂದೂ ಆದರ ಸಂಸರ್ಗದಿಂದ ಶೃಂಗಾರಾದಿಯಾದ ಶಿಷ್ಟರಸಾಷ್ಟಕಗಳೂ ಶಾಂತರೂಪವಾಗಿಯೇ ಪರಿಣಮಿಸುವುದೆಂದೂ ನಿರೂಪಿಸಿ ಕಥೆಯನ್ನು ಆರಂಭಿಸುವನು—(೪೬)

ಅನಂತವಾದ ಆಕಾಶಪಂಜರದಲ್ಲಿ ಷಡ್ದ್ರವ್ಯಗರ್ಭಿತವೂ ಆದ್ಯಂತಶೂನ್ಯವೂ, ಅಧಸ್ತಿರ್ಯ್ ಗೂರ್ಧ್ವವೆಂಬ ಮೂರು ಪ್ರಭೇದಗಳುಳ್ಳದೂ, ಪದಿನಾಲ್ಕುರಜ್ಜು ಪ್ರಮಾಣವುಳ್ಳದೂ ಘನೋದಧಿ ಮೊದಲಾದ ವಾತತ್ರಯಗಳಿಂದ ಆವೃತವೂ ಆಗಿ ಶೋಭಿಸುವ ಲೋಕತ್ರಯದಲ್ಲಿ (೪೯) ಅಸಂಖ್ಯಾತ ದ್ವೀಪ ಸಮುದ್ರಗಳಿಂದ ತೀವಿದ ಮಧ್ಯಮಲೋಕದೊಳಗೆ (೬೦) ಜಂಬೂದ್ವೀಪ ಲವಣಸಮುದ್ರಗಳೂ, ಬಳಿಕ ಧಾತಕೀಖಂಡ ಕಾಳೋದಧಿ ಸಮುದ್ರಗಳೂ, ಬಳಿಕ ಪುಷ್ಕರವರದ್ವೀಪವೂ ಇರುವುದು (೬೧) ಆ ದ್ವೀಪದ ಬಾಹ್ಯಾರ್ಧವನ್ನಲಂಕರಿಸಿ ಸುತ್ತಿ ಮಾನುಷೋತ್ತರಶೈಲವೂ (೬೨) ಮಧ್ಯದಲ್ಲಿ ಮೂಡಣ ಮಂದರವೂ (ಇದನ್ನೇ ಕನಕಾಚಲವೆಂದೂ ವ್ಯವಹರಿಸುವರು) ಶೋಭಿಸುತ್ತಿರುವುವು (೬೩) ಈ ಗಿರಿಯು ತನ್ನವಿಶ್ವಜಗನ್ನುತದಿವ್ಯಪಾದತ್ವಾದಿಗುಣಗಳಿಂದ ಜಿನಪತಿನೊದಲಾದವರ ಮಹಾಮಹಿಮೆಯಂ ಪೆತ್ತು ಶೋಭಿಸುತ್ತಿರುವುದು. ಎಂಬಲ್ಲಿಗೆ—

ಪ್ರಥಮಾಶ್ವಾಸಂ

II

ದ್ವಿತೀಯಾಶ್ವಾಸಂ.

(ನಗರಸಂಪದ್ವರ್ಣನಂ)

ಭೂಮಧ್ಯಸ್ಥಿತವಾದ (೧) ಆ ಮೇರುವಿನ ಪೂರ್ವಪಶ್ಚಿಮ ಪ್ರದೇಶದಲ್ಲಿ ಮೂವತ್ತೈರಡು ನಾಡುಗಳಿಂದ ಕೂಡಿದ ಪೂರ್ವೋತ್ತರವಿದೇಹ ದೇಶಗಳು ಶೋಭಿಸುತ್ತಿರುವುವು (೨) ಅಲ್ಲಿ ಜಿನಮತವು ತವು ಎಂದೂ ಕೆಡದು. ಸುಭಿಕ್ಷವಿಲ್ಲದ ವರ್ಷವೇ ಇಲ್ಲ. ಜನರು ಐದು ಬಿಲ್ಲುದ್ದದವರೂ, ಪೂರ್ವಿತ ಪ್ರಮಿತಾಯುಷ್ಯರೂ ಆಗಿರುವರು (೩) ಮಹಾಲಯಾದಿ ದೋಷಗಳೊಂದೂ ಅಲ್ಲಿಲ್ಲವು. (೪-೫) ಅವೆರಡರಲ್ಲಿ ಪೂರ್ವವಿದೇಹವು ಷೋಡಶಕಳಾಪರಿಪೂರ್ಣಚಂದ್ರನಂತೆ ಷೋಡಶ ಮಹಾವಿಷಯಂಗಳಿಂದ (ನಾಡುಗಳಿಂದ) ಸುಖೈಕನಿಧಿಯಾಗಿರ್ಪುದು (೬) ಆ ಮಹಾವಿಷಯಂಗಳು ತದ್ಮಧ್ಯದಲ್ಲಿ ಹರಿಯುತ್ತ್ಪೂರ್ವವಾರ್ಧಿಯೊಡನೆ ಸಂಗಮಿಸುವ ಸೀತಾನದಿಯು ಎರಡು ದಡಗಳಲ್ಲೂ ಎಂಟೆಂಟರಂತೆ ಶೋಭಿಸುತ್ತಿರುವುವು (೭-೮) ಅಲ್ಲಿಯ ಎಂಬನೆಯ ತಾಣದಲ್ಲಿ ವಕ್ಷಾರಮಹೀಧರ, ಪಂಕಾವತೀ ನದಿ, ಸೀತಾನದಿ, ನೀಳನಗ ಈಚತುಸ್ಸೀಮೆಯ ಮಧ್ಯದಲ್ಲಿ ಪುಷ್ಕಲಾವತೀನಗರವು. (೯) ಗ್ರಾಮನಗ

---

[1] ಆಶ್ವಾಸಾಂತ್ಯಪದ್ಯದಲ್ಲಿ ಶಾಂತಿವರ್ಮನನ್ನು ಮೇರುಗಿರಿಗೆ ಹೋಲಿಸಿ ಹೇಳಿರುವನು.

ರಾದಿ ಜನಪದ ಭೇದಗಳಿಂದೆ (೧೦) ಮನೋಹರವಾಗಿರುವುದು. ಆ ದೇಶದಲ್ಲಿ ವಿಶೇಷವಾದ ಪೈರು ಪಚ್ಚೆಗಳಿಂದ ರಮ್ಯವಾಗಿ ಫಲವತ್ತಾದ ನೆಲವೂ; ಅತಿಶಯಿತವಾದ ಪ್ರಕೃತಿ ಸೌಂದರ್ಯವೂ; ಭೋಗಿಗಳೂ, ಗುಣಶಾಲಿಗಳೂ ಆದ ಪ್ರಜೆಗಳೂ; ಫಲವತ್ತಾದ ಮಾವು ನೇರಿಲೆ ಮೊದಲಾದ ಫಲ ವೃಕ್ಷಗಳೂ; ಅತ್ಯಂತ ಸುಂದರಿಯರಾದ ಗಿಳಿಸೋವ ಪಾಮರಿಯರಿಂದ ತುಂಬಿದ ಕಳಮೆಳ್ಳು ವನಂ ಗಳೂ; ದಾರಿಗರಿಗೆ ಮೋಹಾವೇಶವನ್ನುಂಟುಮಾಡುವ ಅತಿಸುಂದರಿಯರಿಂದಧಿಷ್ಠಿತಂಗಳಾದ ಅಱು ಪಟ್ಟಿಗೆಗಳೂ; ಪೂತಬಳ್ಳಿಗಳಿಂದಲೂ, ಗಿಡುಮರಗಳಿಂದಲೂ ಶೋಭಿಸುವ ಉದ್ಯಾನ ವನಗಳೂ; ಎಲ್ಲೆ ಲ್ಲಿಯೂ ಕಣ್ಗೊಳಿಸುತ್ತಿರುವುವು. (೧೧-೩೧) ಇಂತು ಅನೇಕ ಗಿರಿನಗರಸರಿದರಣ್ಯ ಕೇದಾರನೆಂದನ ಜನಸ್ಥಾನ ಸಂಪತ್ತಿಗುತ್ಪತ್ತಿನಿಳಯವಾದ ತನ್ಮಹಿಗೆ ಸಕಳಸೌಂದರ್ಯಯೋನಿಯಾದ ಪುಂಡರೀಕಿ ಣೀಪುರವು ರಾಜಧಾನಿಯೆನಿಸಿರುವುದು (೩೨) ಆ ರಾಜಧಾನಿಯ ಪೊರವೊಱಿಲ್ ಶೈತ್ಯಸೌರಭ್ಯ ವಾಂದ್ಯ ಗುಣಯುತವಾಗಿ ಬೀಸುವ ಹೃದ್ಯಮಾರುತನಿಂದೆ ಕೂಡಿ ಅಂದವಾದ ಪುರೋದ್ಯಾನಪಂಡೆ ದಿಂದೆ ಸಮುಜ್ಜ್ವಳಿಸುತ್ತಿರುವುದು. (೩೩-೪೦) ಆ ರವೋದ್ಯಾನಗಳಲ್ಲಿ ಯುವತಿಯರಾದ ಸ್ತ್ರೀ ಯರು ತಂತಮ್ಮ ನಲ್ಲರೊಡಗೂಡಿ ಪುಷ್ಪಾವಚಯ ಮೊದಲಾದ ವನಜಳಕೇಳಿಯಿಂದೆ ಸಂತೋಷದಿಂ ದಿರುವರು. (೪೦-೪೫) ಪಾಂಥರು ತನ್ನೆಳಲ್ಲಿ ಫಲಾದಿಗಳನ್ನುಸವಿದು ಕೊಳಗಳಲ್ಲಿ ಪರಿಮಳಶೀತವಾರಿ ಯನ್ನು ಕುಡಿದು ಸುಖದಿಂದ ಮಲಗಿ ನಿದ್ರಿಸುತ್ತ್ತ ದಾರಿಯಾಸರನ್ನು ಕಳೆಯುತ್ತಿರುವರು. (೪೬) ಅದಕ್ಕನತಿದೂರದಲ್ಲಿಯೇ ಹಾರಿದ್ರಕಾದಿ ಕ್ಷೇತ್ರಗಳಲ್ಲಿ ಇಕ್ಷುಯಂತ್ರದ ಪೊರೆತವು ನಿರಂ ತರವಾಗಿ ಕೇಳಿ ಬರುತ್ತಿರುವುದು (೪೭-೪೯) ಆ ಬಯಿಯಲ್ಲಿಯೇ ಪುಷ್ಪವಾಟಿಗಳೂ, ಉಪ ಶಲ್ಯಕದಲ್ಲಿ ಘಟೀಯಂತ್ರಗಳೂ ತೀವಿರುವುವು. (೫೦-೫೯) ಎತ್ತನೋಡಿದರೂ ಕಮಲಕಲ್ಹಾ ರಾದಿಪುಷ್ಪಗಳಿಂದಲೂ, ಹಂಸಸಾರಸಾದಿಜಲಚರಗಳಿಂದಲೂ, ರಮ್ಯವಾದ ಸೋಪಾನಗಳಿಂದಲೂ ಕೂಡಿದ ಕೆಱಿಶಿ, ದೊಣೆ ಮೊದಲಾದ ಹಲವು ಬಗೆಯ ಜಲಾಶಯಗಳು ಜನರ ಕಣ್ಮನಂಗಳನ್ನು ಸೆಱಿಶಿಗೊಳ್ಳುತ್ತಿರುವುವು. (೫೦-೫೪) ಇಂತು ಸೊಗಯಿಸುವ ನಗರದ ಮೂಱಣ ಪಡುವಣ ವಿಭಾಗಗಳಲ್ಲಿ ವೈಹಳಿಗಳೂ, (೫೫) ಗಜಾಶ್ವಶಿಕ್ಷಣಸ್ಥಾನಗಳೂ (೫೬-೫೯) ಆಪ್ರದೇಶಕ್ಕಾಸನ್ನ ವಾಗಿ ಶಸ್ತ್ರಾಶ್ರಮಸ್ಥಾನವೂ (೫೯-೬೧) ಕಂಗೊಳಿಸುತ್ತಿರುವುವು. ಇಂತನೇಕ ಜನಮನೋಹಾರಿ ಸೌಂದರ್ಯವೃತ್ತಿಗವಕಾಶವಾದ ವಿವಿಧಪ್ರದೇಶದಿಂದೊಳಗೆ ಬಳಸಿದ ಬಾಳ್ವೇಲಿಯಿಂದನತಿದೂರ ದಲ್ಲಿ ಕಾಂಚನಪ್ರಾಕಾರವು (೬೦-೬೩) ಅಂಬುಗಂಡಿ, ಅತ್ಯುನ್ನತವಾದ ಕೂಪದಲ್ಲಿ ಶೋಭಿಸುವ ಕಳಶಕಿಂಕಿಣಿಗಳು, ಧ್ವಜಸ್ತಂಭಗಳು ಇವುಗಳಿಂದ ಪಗೆಗಳ ಪ್ರವೇಶಕ್ಕೆ ದುರ್ಗಮವಾಗಿರುವುದು. (೬೯-೬೯) ಈ ಪ್ರಕಾರದಿಂದೆ ಹಲವು ವಿಶಾಲವಾದ ಕೇರಿಗಳಲ್ಲಿ ಸಂಪತ್ಸಮೃದ್ಧವಾದ ಅತ್ಯುನ್ನತ ಸೌಧಂಗಳೂ, ಜನಾವಾಸಗಳೂ ರಂಜಿಸುತ್ತಿರುವುವು. (೬೩-೭೫) ಇವುಗಳಲ್ಲದೆ ಹಲವು ಬಗೆಯ ಭೋಗಸಾಮಗ್ರಿಗಳಿಂದ ತೀವಿದ ಗಣಿಕಾವಾಟಗಳೂ ವಿಲಾಸಿಗಳ ವಿಲಾಸಕ್ಕೆ ಆಕರವಾಗಿರುವುವು. (೭೬-೭೭) ಈ ಗಣಿಕಾವಾಟಗಳ ಸುತ್ತಿನಲ್ಲಿಯೇ ಹಲವು ಬಗೆಯ ಹೂಗಳ ಅತಿಶಯವಾದ ಪರಿ ಮಳಗಳಿಂದ ಘಮಘಮಿಸುವ, ಸುಂದರಿಯರಾದ ಮಾಲೆಗಾರ್ತಿಯರಿಂದ ಶೋಭಿಸುವ ಹೂವಿನ ಸಂತೆಯೂ (೭೮-೮೦) ಎಲೆಗಳ ಪೇಂಟೆಯೂ, (೮೧-೮೨) ಘಟ್ಟವಳರಂಗಡಿಗಳೂ (೮೩) ಅಸಾ ಧಾರಣಶೋಭೆಯಿಂದ ಪೆಱಿಶಿಯುತ್ತಿರುವುವು.

ಗಂಧಿಗವಸರವೂ (೮೪) ದೂಸಿಗವಸರವೂ (೮೫) ಕಂಬಗಾರರ ಪಟ್ಟಗಳೂ (೮೬) ಬಚ ರಾಪಣಗಣಂಗಳೂ ಅಳುಂಬವಾಗಿ ತೋರುವುವು. (೮೭-೮೮) ಇಂತು ಶೋಭಿಸುವ ವಿಪಣಿವೀಥಿ

ಯೆಂಬ ಬಿಸಜನಾಳಕ್ಕೆ ವಿಚಿತ್ರಪತ್ರದಂತೆ ರಾಜಭವನವು ಅಂದದ, ಸಂವದದ, ತಾಯ್ನುರುವಾಗಿ ಶೋಭಿಸುತ್ತಿರುವುದು. (೪೯-೫೪) ಅದರಲ್ಲಿ ನೃಪತಿಲಕನಾದ ಪದ್ಮನು[1] ಉತ್ಸಾಹದಿಂದ ವಾಸಿಸುತ್ತಿರುವನು ಎಂಬಲ್ಲಿಗೆ.

ದ್ವಿತೀಯಾಶ್ವಾಸಂ

ತೃತೀಯಾಶ್ವಾಸಂ

(ನಾಯಕಾಭ್ಯುದಯವರ್ಣನಂ)

ಸಮರ್ಥನಾದ ಆಪದ್ಮನ ತೋಳ್ಗಳಲ್ಲಿ ಧರಾಲಲನೆಯು ಸುಖವಾಗಿ ನಿರಂತರವಾಸಕ್ಕೆಡೆ ಮಾಡಿಕೊಂಡಳು. ಆ ಪದ್ಮನು ಇಂದ್ರಿಯಗಳಿಗೆ ವಶನಾಗದೆ ಅರಿಗಳನ್ನಡೆಗಿಸಿ ಅತ್ಯುತ್ತಮವಾದ ನೀತಿಮಾರ್ಗದಿಂದ ರಾಜಕದ್ವಾದಶಕವನ್ನೂ ವಶಪಡಿಸಿಕೊಂಡು (೧-೧೬) ಅರ್ಥಿಗಳಿಗೆ ಅವರಿಮಿತವಾಗಿ ಧನವನ್ನಿತ್ತು ಪ್ರತಾಪ ಸತ್ಕೀರ್ತಿಗಳಿಂದ ಶೋಭಿಸಿದನು. ಅವನ ರೂಪಕ್ಕೆ ಮೋಹಿಸದ ಸ್ತ್ರೀಯರೇ ಇಲ್ಲ, ಅವನ ಪ್ರತಾಪ ಸತ್ಕೀರ್ತಿಗಳು ಮೂರು ಲೋಕಗಳನ್ನೂ ವ್ಯಾಪಿಸಿದುವು (೧೭-೨೧) ಅಷ್ಟದಿಕ್ಪಾಲಕಾಂಶದಿಂದ ಕೂಡಿ ಜೀವತಾಸ್ವರೂಪನೆನಿಸಿದ ಆ ಮಹೀಕಾಂತನಿಗೆ ಅತಿ ಸೊಬಗೆಯಾದ ವನಮಾಲಾ ದೇವಿಯು ವಲ್ಲಭಾಗ್ರಣಿಯಾಗಿದ್ದಳು. (೨೨)ಆಕೆಯ ಸಕಲಾಂಗ ಸೌಂದರ್ಯವೂ, ಸೌಕುಮಾರ್ಯವೂ, ಸೌಶೀಲ್ಯವೂ ತ್ರಿಲೋಕಾತಿಶಯಿತಗಳಾಗಿದ್ದುವು.[2] (೨೩-೨೯ ಗ) ನಿಖಿಲಸದ್ಗುಣವಾಲೆಯೆನಿಪ ಆ ವನಮಾಲೆಯಲ್ಲಿ (೩೦) ಆ ಪದ್ಮನುಹೀರಮಣನು ಸಮುತ್ಕರ್ಷದಿಂದ ಸಕಲ ಭೋಗಗಳನ್ನೂ ಅನುಭವಿಸುತ್ತಿದ್ದನು. (೩೧) ಹಲಬರವರೋಧಕಾಂತೆಯರಲ್ಲಿ ಆಕೆಯೇ ಪಟ್ಟಮಹಿಷಿಯಾಗಿದ್ದಳು. (೩೨-೩೩) ಇಂತು ಹಲವುದಿನಗಳು ಸುಖದಿಂದ ಕಳೆಯುತ್ತಿರಲು ಒಂದು ದಿವಸ ಆ ಪದ್ಮರಾಜನು ಆವನಮಾಲೆಯ ಅಂತಃಪುರಕ್ಕೆ ಬಂದು (೩೪) ತತ್ಕಾಲದಲ್ಲಿ ಚಿಂತೆಯಿಂದ ಕಂದಿದಾನನದ ಪಟ್ಟಮಹಿಷಿಯನ್ನು ನೋಡಿ ಚಿಂತಾಕ್ರಾಂತನಾಗಿ ಆಕೆಯ ಪರ್ಯಂಕದಲ್ಲೇ ಕುಳಿತಿರಲು ರಾಣಿಯು ಕಣ್ಣನ್ನೆಯಿಂದ ಸಖಿಯನ್ನು ನೋಡಿದಳು (೩೫-೩೭) ಆ ಸಮಯದಲ್ಲಿ ಅರಸು ರಾಣಿಯನ್ನು ಕುರಿತು ಆಕೆಯ ಚಿಂತೆಗೆ ಕಾರಣವನ್ನು ಬೆಸಗೊಂಡನು. (೩೮-೩೯) ರಾಣಿಯು ಉದ್ರಿಕ್ತವಾದ ದುಃಖಾವೇಶದಿಂದ ಕಣ್ಣೀರನ್ನು ಗುಡುಗುಡನೆ ಸುರಿಸುತ್ತಾ ಕೆಳದಿಯ ಮುಖವನ್ನು ಮತ್ತೊಮ್ಮೆ ನೋಡಿದಳು, (೩೯) ರಾಣಿಯ ಇಂಗಿತಾಕಾರಗಳನ್ನರ್ಜಿತ ಚತುರಿಕೆಯೆಂಬ ಕಳೆದಿಯು "ಅರಸೇ! ದೇವಿಯಿಷ್ಟವನ್ನು ನಿರವೇರಿಸಲು ಸ್ವಾಮಿಯೇ ಶಕ್ತರು. ಇಂದು ವರ್ಷದಿವಸವಾದುದರಿಂದ ದೇವಿಯು ಉದಯಕಾಲದಲ್ಲಿ ಮಂಗಳಾಲಂಕೃತೆಯಾಗಿ ಅರ್ಚನಾದ್ರವ್ಯಗಳೊಡನೆ ವ್ರಮದವನಕ್ಕೆ ಹೋಗಿ ಅಲ್ಲಿಯ ಜಿನಗೃಹವನ್ನು ಸಂದು ಜಿನನನ್ನು ಪೂಜಿಸಿ ಬರುತ್ತಾ ಆ ಉದ್ಯಾನದ ಎರಡು ಕಡೆಯಲ್ಲಿಯೂ ನೋಡುತ್ತಿರಲು (೪೫) ಒಂದು ವಸಲೆನೆಲದಲ್ಲಿ ಪಳುಕಿನ ಪಾಸರೆಯಮೇಲೆ ಪಟ್ಟೆರ್ದ ಹುಲ್ಲೆವರಿಯನ್ನು ನೋಡಿ (೪೬) ತಾನು ನಾಕಿದ ಹುಲ್ಲೆಯು ಮರಿಯನ್ನು ಪಡೆದು ಆನಂದ ಪಡು

---

[1] ಇಲ್ಲಿ ಪದ್ಮನನ್ನು ತನ್ನ ಆಶ್ರಯದಾತೃವಾದ ಶಾಂತಿವರ್ಮನೊಡನೆ ಅಭಿನ್ನತೆಯಿಂದೆ ವರ್ಣಿಸಿರುವನು.; [2] ಇಲ್ಲಿ ಆಕೆಯ ಅಂಗಾಲನ್ನು ಮೊದಲುಮಾಡಿ ತಲೆಯವರಿಗೂ ಪ್ರತಿಯೊಂದು ಅಂಗವನ್ನೂ ಉಪಾಂಗವನ್ನೂ ಮನೋಹರವಾಗಿ ವರ್ಣಿಸಿರುವನು.

ತ್ತಿರುವುದನ್ನು ಕಂಡು ತನಗೆ ಸಂತಾನವಿಲ್ಲದುದರಿಂದ ಚಿಂತಿಸುತ್ತಾ ಅರಮನೆಗೆ ಬಂದು ಕೆಳದಿಯರೆಲ್ಲ ರನ್ನೂ ಕಳುಹಿಸಿಕೊಟ್ಟು ಎನ್ನೊಡನೆ ಇಂತು ಹೇಳಿದಳು (೩೩-೩೯) 'ಸಖೀ ನಾನು ನಡೆಪಿದ ಹುಲ್ಲೆ ಮೊದಲಾದುವೂ, ಬಳ್ಳಿ ಮೊದಲಾದುವೂ ಸುಫಲಪ್ರಸವವನ್ನು ಪಡೆದಿರುವುವು. ನನಗೆ ಮಾತ್ರ ಸಂತಾನ ವನ್ನು ಪಡೆವ ಭಾಗ್ಯವು ಲಭಿಸಲಿಲ್ಲ. ಮಕ್ಕಳಿಲ್ಲದ ಹೆಂಗುಸಿನ ಬಾಳೊಂದು ಬಾಳೇ?' (೩೮-೪೦) ಎಂದು ತನ್ನ ಮನಸ್ಸಿನ ಆಕಾಂಕ್ಷೆಯನ್ನು ತಿಳಿಸಿದಳು", ಎಂದು ಹೇಳಲು, ಅರಸು 'ಪ್ರಿಯೆ ಇದಕ್ಕಾಗಿ ನೀನು ಇಷ್ಟು ಚಿಂತಿಸಬೇಕೇ? ಸ್ವಲ್ಪದಿನಗಳಲ್ಲೇ ಅತ್ಯುತ್ತಮನಾದ ಕುವರನು ನಿನ್ನ ಗರ್ಭದಲ್ಲಿ ಜನಿಯಿಸುವನು" ಎಂದು ತತ್ಕಾಲೋಚಿತ ಪ್ರಿಯ ವಚನಗಳಿಂದ ಸಂತೈಸುತ್ತಿರಲು ಕೆಳದಿಯು ಮುತ್ತೆ ಮುಂದುವರಿವಳು: ರಾಣಿಯು—ಸುತನನ್ನು ಪಡೆದು ಆನಂದವಪಡೆವ (ಪುತ್ರದೌಹೃದ) ಪ್ರಕಾರವನ್ನು ಚಿಂತಿಸುತ್ತಾ ಹಂಬಲಿಸುತ್ತಿರುವಳು. ಇದೇ ನಮ್ಮ ರಾಣಿಯ ಚಿಂತೆಗೆ ಕಾರಣವು ಎಂದು ಚತುರಿಕೆಯು ಆದ್ಯಂತಂಬರವಾಗಿ ಬಿನ್ನವಂಗೆಯ್ಯಲು (೪೪-೧೦೦) ಅರಸು—"ರಾಣಿಯೇ ಇದು ದೈವಾಯತ್ತವು. ಚಿಂತಿಸಿದರೆ ಸಂತತಿಯು ಲಭಿಸುವುದೇ? ಸುತರಿಲ್ಲದವರಬಾಳೇನೋ ವ್ಯರ್ಥವಾದುದೇ; ಈವಿಷಯದಲ್ಲಿ ನಮ್ಮ ಯತ್ನ ವೇನಿರುವುದು. ಆದರೂ ಇಂದು ನಿನ್ನಿಷ್ಟಸಿದ್ಧಿಯನ್ನು ಸೂಚಿಸುವ ಸಂಗತಿಯೊಂದು ನಡೆಯಿತು. ಅದನ್ನು ಸಾವಧಾನದಿಂದ ಕೇಳು. (೧೦೧-೧೦೬) ಇಂದು ಅಷ್ಟಮಿಯೆಂದು ನಾನು ಪುರವಜೈತ್ಯ ಗೃಹಕ್ಕೆ ಹೋಗಿ ದೇವನನ್ನು ವಂದಿಸಿ 'ದೇವಾ ನನ್ನಿಷ್ಟವನ್ನು ನೆರವೇರಿಸೆಂದು' ಬೇಡಿಕೊಳ್ಳುತ್ತಿರುವಾಗ ಆ ದೇವನ ಪಾದಮೂಲದಲ್ಲಿಟ್ಟ ಮಾವಳೆದ ಹಣ್ಣು ಜಾರಿ ನನ್ನಹತ್ತಿರಕ್ಕೆ ಬಂದಿತು. ಅದನ್ನು ಕಂಡು ಹತ್ತಿರಿದ್ದ ಪುರೋಹಿತನು, 'ಅರಸೇ ಇದು ನಿನಗೆ ಪುತ್ರಪ್ರಾಪ್ತಿಗೆ ಸೂಚಕವು. ಇದನ್ನು ಕೊಂಡು ಹೋಗು,' ಎಂದುಹೇಳಿ ನನ್ನ ಕೆಯ್ಗಿತ್ತನೆಂದು ಹತ್ತಿರದ ಅಡವಿವಳ್ತಿಯ ಕೆಯ್ಯಲ್ಲಿ ಕೊಟ್ಟಿದ್ದ ಆ ಫಲವನ್ನು ಅರಸಿಯ ಕೆಯ್ಯಲ್ಲಿ ತೆಗೆದುಕೊಟ್ಟನು. ಅರಸಿಯು ಅದನ್ನು ವರಮು ಭಕ್ತಿ ಸಂತೋಷಗಳಿಂದ ಸ್ವೀಕರಿಸಿದಳು. (೧೦೭-೧೦೬) ಬಳಿಕ ಅರಸು, "ಅರಸಿಯೇ ಇಷ್ಟರಿಂದಲೇ ನೀನು ತೃಪ್ತವಡೆಯಬೇಡ; ಧರ್ಮವನ್ನು ಮಾಡದೆ ಯಾವ ಸುಖವೂ ದೊರಕಲಾರದು. ಇಂದಿನಿಂದ ವಿಶೇಷವಾಗಿ ದಾನಶೀಲೆಯಾಗು", ಎಂದು ನಿಯಮಿಸಲು, ಆಕೆಯು ಚತುರ್ವಿಧ ದಾನ ಧರ್ಮತತ್ಪರೆಯಾಗಿ ಅಷ್ಟಾಹ್ನಿಕ ಮೊದಲಾದ ಜಿನಮಹಿಮೆಗಳನ್ನು ಆಚರಿಸುತ್ತಾ ಗರ್ಭಶಯ್ಯಾಸುಪ್ತೆಯಾಗಿ ಕಾಲವನ್ನು ಸಲಿಸುತ್ತಿದ್ದಳು. (೧೦೬-೧೧೪) ಬಂದು ದಿವಸ ಆಕೆಯು ಋತುಮತಿಯಾದ ಕಾಲದಲ್ಲಿ ಚತುರ್ಥದಿನ ಸ್ನಾನಾನಂತರದಲ್ಲಿ ಧವಳಮಂಗಳಾಲಂಕೃತೆಯಾಗಿ ತನ್ನ ಪ್ರಿಯನ ಸೂಳ್ಗೆವಂದು ಬೆಳಗಿನಝಾವದಲ್ಲಿ ಕಂಡ ಕನಸಿನಲ್ಲಿ ಪರಿಪೂರ್ಣಚಂದ್ರ ಮೊದಲಾದ ಕೆಲವು ಉತ್ತಮ ವಸ್ತುಗಳನ್ನು ನೋಡಿ ಹಾಸುಗೆಯಿಂದೆದ್ದು ಸ್ನಾನ ಜಿನಪೂಜಾದಿ ನಿತ್ಯಕೃತ್ಯಗಳನ್ನು ನಿರ್ವರ್ತಿಸಿ ಬಂದು ಅರಸನ ಸಿಂಹಾಸನಾರ್ಧಾಲಂಕೃತೆಯಾಗಿ ತಾನು ಕಂಡ ಕನಸಿನ ವಿವರವನ್ನು ಅರಸನಿಗೆ ತಿಳಿಸಿದಳು. (೧೧೪-೧೩೧) ಹತ್ತಿರಿದ್ದ

---

[1] ಈ ಸ್ಥಳದಲ್ಲಿ ಮೂಲಗ್ರಂಥದೊಳಗೆ ೯೨ ನೆಯ ಪದ್ಯವಾದ ಬಳಿಕ "ಅರಸು ರಾಣಿಯೊಡನೆ ನೀನು ಬಹುಕಾಲ ಮಕ್ಕಳಿಲ್ಲದಿದ್ದರೂ ಈಗ ಅತ್ಯುತ್ತಮನಾದ ಮಗನನ್ನುಪಡೆವೆ" ಎಂದು ಹೇಳಿದನೆಂದು ಹೇಳಿ ೯೪ ನೆಯ ಗದ್ಯವಾದಬಳಿಕ, ಅರಸು ಎಂದ ತತ್ಕಾಲೋಚಿತ ಪ್ರಿಯವಚನಗಳಿಂದ ಸ್ವಲ್ಪ ಕಡಮೆಯಾದ ಚಿಂತೆಯುಳ್ಳವಳಾಗಿ ಬಯಕೆಗಳನ್ನು ಬಯಸುತ್ತಿದ್ದಳೆಂದು ಆ ದೌಹೃದ ಪ್ರಕಾರವನ್ನೂ ವಿವರಿಸಿ ಇಂತಿದು ಆದ್ಯಂತಂಬರಂ ಚತುರಿಕೆ ಬಿನ್ನವಿಸಲರಸನು ಕೇಳ್ದು ಮುತ್ತೆ ಹೇಳಿದನೆಂದು ಮೂಲದಲ್ಲಿ ಹೇಳಿರುವುದು ಸಮಂಜಸವಾಗಿಲ್ಲ.

ಪುರೋಹಿತನು ಆಕನಸಿನಲ್ಲಿ ಕಂಡ ವಸ್ತುಗಳಿಂದ ಸೂಚಿತವಾಗುವ ಉತ್ತಮ ಗುಣಗಳುಳ್ಳ ಮಗನು ನಿಮಗೆ ಜನಿಸುವನೆಂದು ಹೇಳಲು, ಆತನನ್ನು ಸನ್ಮಾನಿಸಿ ಕಳುಹಿ ಸಂತೋಷದಿಂದ ಕೆಲವು ಕಾಲವನ್ನು ಕಳೆಯುತ್ತಿದ್ದರು. ಒಂದುದಿವಸ ನಂದೀಶ್ವರದ ಜಿನೋತ್ಸವವು ಒದಗಿಬಂದಿತು. ಅಂದು ಅರಸು ಅಷ್ಟಾಹ್ನಿಕದ ಮಹಿಮೆಯನ್ನು ನಿರ್ವರ್ತಿಸಿ ಬಹಿರುದ್ಯಾನದಿಂದ ನಗರಾಭಿಮುಖವಾಗಿ ಬರುತ್ತಿರುವಾಗ ದೂತನೊಬ್ಬನು ಬಂದು ಸಂಭ್ರಮದಿಂದ (೨೧-೧೨೫) "ಅರಸೇ ಪುಳಿಂದರು ನಿನ್ನ ವೈರಿನೃಪರ ದೇಶವನ್ನು ಸೂರೆ ಮಾಡಿಕೊಂಡು ಬಂದು ಚಂಪಾನಗರಕ್ಕೆ ನುಗ್ಗಿ ತದಧಿಪನನ್ನೂ ನೆರೆಗೆಯ್ದು ಈಗ ನಮ್ಮಾದೇಶಕ್ಕೆ ದಾಟಿಬಿಯಿಡುತ್ತಿರುವರು ಎಂದು ಚರರು ತಿಳಿಸಲು ಸಿಂಹವರ್ಮರಾಜನ ಸೇನಾಪತಿಯು ಚತುರ್ಬಲದೊಡನೆ ಚಂಪಾಪುರಕ್ಕೆ ಮುತ್ತಲು ಆಪುರವನ್ನು ಮೊದಲೇ ಮುತ್ತಿದ್ದ ಪುಳಿಂದಸೇನೆಯು ಹಿಂದಿರುಗಿ ಯುದ್ಧಕ್ಕೆ ನಿಂತು ಗಾಳಿಯನ್ನಿಓರಿಸಿದ ಮುಗಿಲ ಪಡೆಯಂತೆ ನಿಶ್ಶೇಷವಾಗಿ ಸೋತು ಓಡಲು ಚಂಪಾಪುರವನ್ನು ಪ್ರವೇಶಿಸಿ ತತ್ಪುರಾಧಿಪನ ಸೆರೆಯನ್ನುಬಿಡಿಸಿ ಆ ಪುಳಿಂದರು ತಂದೊಟ್ಟಿದ್ದ ಸಾರವಸ್ತುಗಳೆಲ್ಲವನ್ನೂ ಭಂಡಿ, ಒಟ್ಟಿ, ಕೊಟ್ಟಿಗೆ, ಪೊಜ್ಜೆಯೊಳುಗಳಿಂದಲ್ಲದೆ ಚತುರ್ಬಲದವರಿಂದಲೂ ಹೊರಿಸಿಕೊಂಡು ನಿನ್ನ ಪಾದವದ್ಮವನ್ನು ಕಾಣಲು ಬರುತ್ತಿರುವನು" (೧೨೬-೧೩೦) ಎಂದು ಬಿನ್ನವಿಸಲು ಅರಸು ಆತನನ್ನು ಸನ್ಮಾನಿಸಿ ಕಳಿಪಿ ತದುದ್ಯಾನಬಾಹಿರವಾಹಳಿಗೆ ಬರುವಷ್ಟರಲ್ಲಿ ಮುಂದೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ ಅವರಿಮಿತವಾದ ಅಮೂಲ್ಯವಸ್ತುಗಳನ್ನು ಕಾಣ್ಕೆಗೊಟ್ಟು ಸಿಂಹವರ್ಮನ ತಲೆಯ ಮೇಲೆ ಪಾದಗಳನ್ನಿಟ್ಟು ಮನ್ನಿಸಿ ಇಷ್ಟಕ್ಕೆ ಕಾರಣಭೂತನಾದ ತನ್ನ ಈ ಸೇನಾಪತಿಯ ಸಾಹಸವನ್ನು ವೈಶ್ರವಣಾಮಾತ್ಯನೊಡನೆ ಶ್ಲಾಘಿಸಿ ಮಂಗಳವಾದ್ಯದೊಡನೆ ನಗರವನ್ನು ಪೊಕ್ಕು ಜನರ ಸ್ತೋತ್ರಕ್ಕೆ ಪಾತ್ರನಾಗಿ ಮುಂದುವರಿದನು[1] ಎಂಬಲ್ಲಿಗೆ.

ತೃತೀಯಾಶ್ವಾಸಂ

ಚತುರ್ಥಾಶ್ವಾಸಂ.

(ಕುಮಾರೋದಯ ವರ್ಣನಂ)

ಇಂತು ವದ್ಮನು ಮಹಾವೈಭವದಿಂದೆ ಬಂದು ಅರಮನೆಯನ್ನು ಹೊಕ್ಕು ಚಂಪಾಪುರದ ಸೂರೆಯಿಂದ ತಂದ ವಸ್ತುಗಳೆಲ್ಲವನ್ನೂ ತನ್ನ ಬೊಕ್ಕಸಕ್ಕೆ ತುಂಬಿಸಿ, ಸಿಂಹವರ್ಮನನ್ನು ಮಾನ ಮರ್ಯಾದೆಗಳಿಂದೆ ಸಂತೋಷ ಪಡಿಸಿ ಬೀಡಿಂಗೆ ಕಳುಹಿಸಿ (೧) ಸುಖದಿಂದಿರಲು ರಾಣಿಯು ಗರ್ಭವತಿಯಾದಳು. (೨) ಪಳಿಗಳೆನಾಶ, ಕರ್ಗಿದಬಾಸೆ, ಬೆಳರ್ತಮುಖವು ಇವೇ ಮೊದಲಾದ ಗರ್ಭದ ಚಿಹ್ನೆಗಳು ವ್ಯಕ್ತವಾಗಲು (೩-೩) ಸುರಕುಜದ ವನ ಮೊದಲಾದುವನ್ನು ವರಿಜನಕ್ಕೆ ಕುಡುವುದು, ತ್ರಿಷಷ್ಟಿಶಲಾಕಾಪುರುಷಪ್ರತತಿಯ ಕಥೆಯನ್ನು ಕೇಳುವುದು ಮೊದಲಾದ ಅತಿ ಪುಣ್ಯತಮವಾದ ದೌಹೃದದ ಬಯಕೆಗಳು ಆಕೆಗೆ ಉಂಟಾದುವು (೩-೧೦) ಗರ್ಭವತಿಗೆ ಸಹಜವಾದ ಮೃತ್ಸ್ನೇವನಿಯು ಆಕೆಯನ್ನು ಬಿಟ್ಟುಹೋಗಲಿಲ್ಲ (೧೧) ಒಂದು ದಿನ ಅರಸು ಈ ಸಂತಸದ ಸುದ್ದಿಯನ್ನು ಕೇಳಿ ಮಂತ್ರಿ

---

[1] ಇಲ್ಲಿಯೂ ಕವಿಯು ಪದ್ಮನನ್ನು ಸ್ತುತಿಸುವ ವಿಶೇಷಣಗಳಿಂದ (ಪ್ರಭುವಂಶ ಮೇರು ಮೊದಲಾದುವು) ತನ್ನ ಕಾವ್ಯಕ್ಕೆ ಆಶ್ರಯದಾತೃವಾದ ಶಾಂತಿವರ್ಮನನ್ನು ಸ್ತುತಿಸಿರುವನು.

ಯೊಡನೆ ರಾಣೀವಾಸಕ್ಕೆ ಬಂದು ಯಥಾವಿಧಿಯಾಗಿ ಪುಂಸವನಾದಿಕರ್ಮಂಗಳಂ ನಿರ್ವರ್ತಿಸಿ (೧೩) ಆಕೆಯ ಗರ್ಭರಕ್ಷಣೆಗೆ ಕುಶಲರಾದ ಪರಿಜನರನ್ನು ನಿಯಮಿಸಿ ತನ್ನರಮನೆಗೆ ಹೋದನು. (೧೪) ಇತ್ತ ಗರ್ಭವು ದಿನೇದಿನೇ ಬಳೆಯುತ್ತಿರಲು ಗುರುಗರ್ಭಭರಾಲಸೆಯಾದ ಆಕೆಯು ಭಾರವಾದ ಕನಕರತ್ನಗಳ ಆಭರಣಗಳನ್ನು ಕಳೆದು ಹಗುರವಾದ ಪುಂಗಳಸೂಚಕವಾದ ಮುಕ್ತಾಭರಣಗಳಿಂದ ಶೋಭಿಸುತ್ತಾ ವಿನೋದದಿಂದ ಕೆಳದಿಯರೊಡನೆ ಕಾಲವನ್ನು ಕಳೆಯುತ್ತಿರಲು (೧೫-೧೧) ನವಮಾಸವು ನೆಱೆದು ಪ್ರಸವ ಸಮಯವು ಸನ್ನಿಹಿತವಾಗಲು ಭವ್ಯಲೋಕೈಕಮಿತ್ರನಾದ ಸುತನನ್ನು ಪಡೆದಳು. (೧೨) ಆಗ ತಣ್ಣನೆ ಗಾಳಿ ಬೀಸುವುದು ಮೊದಲಾದ ಅಮಾನುಷ ಕಾರ್ಯಗಳು ಜರುಗಿದುವು. ಅರಮನೆಯೆಲ್ಲಿ ದಾನಧರ್ಮಗಳೂ, ಗೊಂದಣವೆಕ್ಕಣಮೊದಲಾದ ವಿನೋದಕ್ರೀಡೆಗಳೂ ವಿಶೇಷವಾಗಿ ನಡೆದುವು. (೧೩-೧೫) ಈ ವೃತ್ತಾಂತವನ್ನು ಕೇಳಿದ (೧೬) ಅರಸನು ವಿಶೇಷವಾಗಿ ಸಂತಸಗೊಂಡನು. (೧೭-೧೯) ರಾಜಾಲಯದಲ್ಲಿ ಹಲವು ಬಗೆಯ ಅಲಂಕಾರಗಳು ಶೋಭಿಸಿದುವು. (೨೦-೨೭) ಅರಸು ತನ್ನ ಮಂತ್ರಿ ವೈಶ್ರವಣನೊಡನೆ ರಾಣೀವಾಸಕ್ಕೆ ಬಂದು ಪುತ್ರಮುಖಾವಲೋಕನಮಾಡಿ ಆಮಗುವಿಗೆ ಜಾತಕರ್ಮಾದಿ ತತ್ಕಾಲೋಚಿತ ಕರ್ಮಗಳನ್ನು ಅತಿ ಸಂಭ್ರಮದಿಂದ ನೆರವೇರಿಸಿ (೨೮-೪೦) ಹತ್ತನೆಯ ದಿನ ಜೋಯಿಸರು ನಿರ್ಧರಿಸಿದ ಶುಭ ಮುಹೂರ್ತದಲ್ಲಿ, ಮಹಾಪದ್ಮನೆಂದು ನಾಮಕರಣಂಮಾಡಿ ಯಾಚಕರಿಗೆ ಅಪರಿಮಿತವಾಗಿ ದಾನಧರ್ಮಾದಿಗಳನ್ನು ನಡೆಯಿಸಿ ಸುಖದಿಂದಿರಲು (೪೦-೪೩) ಆ ಬಾಲಕನು ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಬೆಳೆಯುತ್ತಾ ಬಾಲದುಡುಗೆಗಳಿಂದ ಮನೋಹರನಾಗಿ ತನ್ನ ಬಾಲಲೀಲೆಗಳಿಂದ ತಂದೆ ತಾಯ್ವಿರಿರ್ವರನ್ನೂ, ಪರಿಜನವನ್ನೂ ಆನಂದಸಾಗರದಲ್ಲಿ ತೇಲಿಸಿದನು. (೪೩-೫೧) ಚಕ್ರವರ್ತಿಯು ಇಂತು ಬಳೆವ ಬಾಲಕನಿಗೆ ಅನ್ನಪ್ರಾಶನ ಮೊದಲಾಗಿ ಚೂಡಾಕರ್ಮಪರಿಯಂತವಾದ ಕರ್ಮಗಳನ್ನು ಆಯಾ ಕಾಲಗಳಲ್ಲಿ ರಾಜವೈಭವದಿಂದ ನಿರ್ವರ್ತಿಸಿದನು. ಆ ಬಾಲಕನು ಕ್ರಮ ಕ್ರಮವಾಗಿ ಶೈಶವವನ್ನು ಕಳೆದು ಸಹಪಾಂಸುಕ್ರೀಡಿತರಾದ ಬಾಲಕರೊಡನೆ ಬಗೆಬಗೆಯ ಅತಿಶಯಿತಬಾಲಕೇಳಿಗಳಿಂದ ತಂದೆತಾಯ್ಗಳಿಗೆ ಮುದವನ್ನೊದವಿಸುತ್ತೆ ಬಾಲ್ಯವನ್ನು ಕಳೆದು ತಾರುಣ್ಯವನ್ನು ಪಡೆದನು. [1](೫೧-೫೩) ಅರಸನು ಒಂದು ಶುಭ ಮುಹೂರ್ತದಲ್ಲಿ ವಿದ್ಯಾಲಯವನ್ನು ನಿರ್ಮಿಸಿ ಪ್ರೌಢರಾದ ವಿದ್ಯಾಗುರುಗಳ ವಶದಲ್ಲಿ ವೈಶ್ರವಣಪುತ್ರನಾದ ಚಿತ್ರಭಾನುವಿನೊಡನೆ ಈಮಹಾಪದ್ಮನನ್ನು ವಿದ್ಯಾಭ್ಯಾಸಕ್ಕಾಗಿ ಒಪ್ಪಿಸಿಕೊಟ್ಟನು. ಮಹಾಪದ್ಮನಾದರೋ ಅತಿಶೀಘ್ರಕಾಲದಲ್ಲಿಯೇ ಅನಾಯಾಸದಿಂದ ಲಿಪಿ ಶಬ್ದಶಾಸ್ತ್ರವೊದಲಾದ ದ್ವಿಜಾತಿವಿದ್ಯೆಗಳೆಲ್ಲಾ, ಶಸ್ತ್ರಪ್ರಯೋಗ ಗಜಾರೋಹಣಾದಿ ಕ್ಷತ್ರಿಯ ವಿದ್ಯೆಗಳೆಲ್ಲಾ ಅತಿಪ್ರೌಢವಡೆದನು. (೫೩-೬೧) ವೈಶ್ರವಣ ಪುತ್ರನಾದ ಚಿತ್ರಭಾನು ಕುಮಾರನೂ ಈತನಿಗೆ ನೇರ್ಗಿಱಿಯನಾಗಿ ಸಕಲವಿದ್ಯೆಗಳನ್ನೂ ಅಭ್ಯಸಿಸಿದನು. (೬೨-೬೩) ಜವ್ವನ ದೀಪ್ತಿವಡೆದು ಅತಿಶಯದಿಂದ ಶೋಭಿಸುತ್ತಿರುವ ಮಹಾಪದ್ಮಕುಮಾರನು ಇಂತು ಸಕಲವಿದ್ಯಾಪರಿಣತನಾಗಿ ವಿದ್ಯಾ ಮಂಟಪವನ್ನು ಬಿಟ್ಟು ತಂದೆಯ ಆಸ್ಥಾನವನ್ನು ಸೇರಿ ತಂದೆಯಿಂದ ಆಶೀರ್ವಾದವನ್ನು ಪಡೆದು ತಂದೆಗೂ, ಆ ಸಭೆಗೂ ವಿಶೇಷವಾದ ಸಂತೋಷವನ್ನುಂಟುಮಾಡಿ (೬೩-೭೩) ತಾಯಿಯ ಅಂತಃಪುರವನ್ನು ಸೇರಿ ಆಕೆಗೆ ಪೊಡೆವಟ್ಟು ಅತಿಶಯವಾದ ಸಂತೋಷದಿಂದ ಆಕೆಯು ನೇನೆಯೊಡಗೂಡಿದ ಪರಕೆಯನ್ನು ಕೆಯ್ಕೊಂಡು ತನಗಾಗಿ ನಿರ್ಮಿಸಿದ್ದ ಅರಮನೆಯಲ್ಲಿ ನಿಯಮಿತವಾದ ಪರಿವಾರದೊ

[1] ಇಲ್ಲಿಂದಮುಂದೆ ಯುವರಾಜ ದಿಗ್ವಿಜಯದ ವರೆಗಣ ಕಥಾಭಾಗದಲ್ಲಿ "ಕಾದಂಬರಿ"ಯ ಛಾಯೆಯಿದೆ.

ಡನೆ ಕಾವ್ಯ ನಾಟಕಾದಿ ವಿನೋದಗೋಷ್ಠಿಗಳಿಂದ ಸುಖವಾಗಿ ಹೊತ್ತುಗಳೆಯುತ್ತಿದ್ದನು (೭೩-೭೭) ಚಕ್ರವರ್ತಿಯು ಇಂತು ಕವಚಹರನಾದ ತನ್ನ ಕುವರನಿಗೆ ಒಂದು ದಿನ ಶುಭ ಮುಹೂರ್ತದಲ್ಲಿ ಯುವರಾಜಪಟ್ಟಬಂಧಮಹೋತ್ಸವವನ್ನು ಅತಿವೈಭವದಿಂದ ನೆರವೇರಿಸಿದನು. (೭೭-೮೫) ಇಂತು ಆರಾಯಗುವರನು ಯುವರಾಜನೆನಿಸಿ ತಂದೆಗೆ ರಾಜ್ಯಭಾರದ ಭಾರವನ್ನು ತಗ್ಗಿಸಿ ದಿಗ್ವಿಜಯಕ್ಕೆ ಹೊರಡಲುದ್ಯುಕ್ತನಾದನು. (೮೫-೮೬) ಆಗ ಶರದೃತುವು ಆರಂಭವಾಯಿತು. ಮಯೂರವೂ, ಚಾತಕವೂ ಕೊರಗಿದವು; ಅಂಚೆಯೂ, ಚಾದಗೆಯೂ ಮುದವೇಱಿಸಿದುವು; ಕೇದಗೆ, ನೀಪ, ಕುಟಜ ಕದಂಬದ ಪೂಗಳು ಬೀತುವು. ಏಬಿಲೆವಾಬಿಲೆ, ಪೊನ್ನೆ, ಕುಮುದ, ನೆಯ್ದಿಲ ಪೂಗಳು ಏಬಿಲ್ಗೊವಡೆದುವು. (೮೬-೮೮) ಮೇಳುವಲ್ಲಭನು ತಳರಲು ನದೀಲಲನೆಯರು ಕಂಠಗತಜೀವನವೃತ್ತಿಯನಾಂತು ಬೈಶೋತ್ಕಲಿಕೆಯರಾದರು. ಮೇಳುಗಳೆಲ್ಲವೂ ನಿಸ್ಸಾರವಾಗಿ ಬಿಳುಪೇಱಿದುವು. (೮೯) ಕೊಳಗ ಳೆಲ್ಲವೂ ತಿಳಿದುವು. (೯೦) ಎತ್ತೆತ್ತಲೂ ಬೆಳ್ಮುಗಿಲು ಬೆಳ್ಸರಿಗಳನ್ನು ಸುರಿಸಲಾರಂಭಿಸಿದುವು. (೯೨) ಕಾಮನಬಿಲ್ಲು ಶೋಭಿಸಿತು. (೯೩) ಭತ್ತದ ಗದ್ದೆಗಳು ಪರಿಪಕ್ವಶಾಲಿಕಣಿಶಗಳಿಂದ ಪೊಂಬಣ್ಣವಾಗಿ ಶೋಭಿಸಿದುವು. (೯೪) ಶರತ್ಕಾಲದ ಶೀತಾನಿಳವು ಬೀಸತೊಡಗಿತು. (೯೫) ಈ ಕಾಲದ ಸಂಧ್ಯಾ ಸಮಯದಲ್ಲಿ ಚಂದ್ರಮಂಡಲವು ಜಲಕ್ಕನೆ ಶೋಭಿಸುತ್ತಾ ಸಕಲ ಜನ ಚೇತೋಹಾರಿಯಾಗಿ ಕಣ್ಗೊಳಿಸುತ್ತಿತ್ತು. (೯೬) ಇಂತು ಶರತ್ಕಾಲವು ಎನೆವ ಮಿತ್ರಮಂಡಲತ್ವ ವೊದಲಾದ ತನ್ನ ಗುಣಗಳಿಂದ ನಾಪ್ರಿಭುವಂಶ ಮೇರುವನ್ನು ಪೋಲ್ತು ಎನೆಯುತ್ತಿತ್ತು (೯೭) ಎಂಬಲ್ಲಿಗೆ.

ಚತುರ್ಥಾಶ್ವಾಸಂ
ಮುಗಿದುದು.

ಪಂಚಮಾಶ್ವಾಸಂ

(ಯುವರಾಜ ದಿಗ್ವಿಜಯ ವರ್ಣನಂ.)

ಅಂತು ಬಂದ ಶರತ್ಸಮಯದೊಳ್ ಯುವರಾಜನುಂ ಚಿತ್ರಭಾನು ಸಮೇತನಾಗಿ ಜನಕನೊಡ್ಡೋಲಗಕ್ಕೆ ವಂದು ಜನಕನಂ ನಮಿಸಿ ದಿಗ್ವಿಜಯಕ್ಕೆ ಬೆಸನಂ ಪೆತ್ತು (೧-೫) ಶುಭ ಮುಹೂರ್ತದೊಳ್ ಪಯಣಂಗೆಯ್ಯಲುಜ್ಜುಗಿಸಿದಂ (೬) ಆ ಪ್ರಸ್ತಾವದೊಳ್ ಪೊಯ್ಸಿದ ಭೇರೀಪಟಹ ಪ್ರಣಾದವು ದಶದಿಶಾ ವಿವರಮಂ ವ್ಯಾಪಿಸಿತ್ತು. ಆನೆ, ಕುದುರೆ, ತೇರ್, ಕಾಲಾಳ್ಗಳ ದಟಿವು ಪ್ರಬಲ ಮಾಗಿ ನೆಱೆಯಿತು (೬-೧೩) ಅಂತು ನೆಱೆದ ಚತುರಂಗ ಬಲ ಸಮೇತನಾದ ಯುವರಾಜಂ ರಾಜ ವಿಭವದಿಂ ರಾಜಭವನಮಂ ಪೊಱಮಟ್ಟು ರಾಜಮಾರ್ಗದೊಳ್ ಬರ್ಪಾಗಳ್ (೧೩-೨೦) ನಗರ ನಾರೀಜನಮೆಲ್ಲಂ ಸಸಂಭ್ರಮ ಲೀಲಾಪ್ರೇಮವಿಸ್ಮಯಹರ್ಷ ಪ್ರಕರ್ಷದರ್ಶನಭ್ರಾಂತವಾಗಿ ವಿವಿಧ ಶೃಂಗಾರ ಚೇಷ್ಟೆಗಳಿಂ ಗೆಯುತ್ತಮಾಯುವರಾಜನಂ ತಣಿವಿಲ್ಲದೆ ನೋಡುತ್ತಿರ್ದುದು. (೨೦-೩೪) ಇಂತು ಪುರಮಾರ್ಗದಿಂದಂ ಪುರಮಂ ಪೊಱಮಟ್ಟು ಮೊತ್ತಮೊದಲ್ ಪೂರ್ವ ದಿಶಾಭಿಮುಖನಾಗಿ ಬಲಭರದಿಂ ಶೇಷಕಮಠ ದಿಗ್ಗಜಾದಿಗಳ್ ಕುಸಿವಂತು ನಡೆದು ತದ್ದಿಶಾಮಂಡಳಿಕರಂ ಯುದ್ಧದೊಳ್ ಗೆಲ್ದುದಂ ಕಂಡು ಅಪರದಿಶಾ ಪುರಾಧಿಪರ್ ಯುದ್ಧಮಂ ಮಾಡದೆಯೇ ತಮ್ಮುಳ್ಳ ಸಕಲ ವಸ್ತೂತ್ಕರಂಗಳಂ ತಂದೀಯೆ ಕೊಂಡು, ಮೂಡಣಿಂ ಮೊದಲ್ಗೊಂಡು ಪುಷ್ಕಲಾವತೀ ವಿಷಯದ ಅರವಿಂದವು ರಾದಿ ಕನಕಪುರ ಪರ್ಯಂತದರಸುಗಳನಾಕ್ರಮಿಸುತ್ತಂ ಉತ್ತರಾಭಿಮುಖಮಾಗಿ ನಡೆದು ಶಿಖಂಡಿ ಮೆಂಬ ಮಂಡಲದೊಳಗೆ ವರಿವರಿ ಸಂತಾಸಕಮೆಂಬ ಘೋರಾರಣ್ಯಂ ನೇತ್ರ ಗೋಚರವಾದುದು. (೬೦) ಆಗಳ್ ಚಿತ್ರಭಾನುಮಿತ್ರಂಗೆ ಚಿತ್ರಸೇನನೆಂಬ ಸಾರಥಿ—ಸ್ವಾಮಿ—ಇದು ಸಂತಾಸಕಮೆಂ

ಖರಣ್ಯಂ. ಇಲ್ಲಿಯ ಕಾರಂಗನೆಂಬ ಬೇಡರಿಱಿಯಂ ಅತಿ ಪ್ರಬಳನಾಗಿ ನಾಡೆಲ್ಲಮಂ ಪೀಡಿಸುತ್ತಿರ್ದು, ನಿಮ್ಮಮ್ಮನ ದಿಗ್ವಿಜಯ ಪ್ರಸಕ್ತಾವದೊಳಿಂತು ನಿಂದು ಪೊರ್ದಿದಂ. ಇಲ್ಲಿಯ ಅಶೋಕ ದಾಸವಣ ಮೊದಲಾದ ಕೆಚ್ಚನೆಯ ಪೂಗಳಿಗಳ್ ನಿನ್ನ ಪಿತೃಗೊಡ್ಡಿಸಿ ಸತ್ತರ ನೆತ್ತರಿನ್ನು ಮಾಱಿದಂತೆ ತೋಱುತ್ತಿರ್ದವುದು,' ಎಂದು ತದ್ಗಹನ ವರ್ಣನಾವ್ಯಾಜದಿಂ ಪಿತೃ ದಿಗ್ವಿಜಯ ವೃತ್ತಾಂತ ಮನಱಿಪೆ (೬೦-೬೩) ಚಿತ್ರಭಾನುವುಂ ಆ ಗಹನದ ತಾಳ ಪುನ್ನಾಗಾದಿ ವಿವಿಧ ವೃಕ್ಷಂಗಳಂ ಚದುರತೆಯಿಂ ವ್ಯಾವರ್ಣಿಸುತ್ತುಮಿರೆ (೬೩-೬೯) ಅರಗುವರಂ ವರಾಹ ಶಾರ್ದೂಲಾದಿ ಘಾತುಕ ಮೃಗಂಗಳ ಭಯಂಕರಾಕಾರ ಕೃತ್ಯಂಗಳಂ, ವನಮಹಿಷ ಹರಿಣಾದಿ ಪಶುಗಳ ಸ್ವರೂಪ ಕೃತ್ಯಂಗಳಂ (೬೯-೮೩) ಕುತೂಹಲದಿಂ ನೋಡುತ್ತುಂ; ಸಮೀಪದ ಶಬರ ಶಿಬಿರದೊಳ್ ವಿನೋದ ಹೇತು ವಪ್ಪ ಶಬರಶಬರೀವೇಷಭೂಷಾವ್ಯಾಪಾರಾದಿಗಳನಭಿವೀಕ್ಷಿಸುತ್ತುಂ ಬರೆವರೆ ತಚ್ಛಬರಾಧೀಶಂ ಶಂಬನೆಂಬೊಂ ಗಜದಂತಾದಿ ವನಜಾತ ವಸ್ತೂತ್ಕರಂಗಳಂ ಕಾಣ್ಕೆಗೊಟ್ಟು ವಿನಯದಿಂ ಬಂದೆಱಿಗೆ ಆತನ ಭೃತ್ಯಭಾವಮನೊಪ್ಪುಗೊಂಡು (೮೩-೧೦೩) ನಡೆವ ಯುವರಾಜಂಗೆ ಮುಂದೊಂದೆಡೆಯೊಳ್ ತೀಡುವ ಅದ್ಭುತಗಂಧವಹವಮಾದ ಗಂಧವಾಹಂಗೆ ಬೆಱಿಗುವಟ್ಟು ನಿಂದಂದು ಆ ಗಹನವಾಸ್ತವ್ಯನಪ್ಪಾಕಾರಂಗನೆನಿಪ ಪುಳಿಂದನಾಯಿಡೆಯನಾರಯ್ದಲ್ಲಿಗೊಡಗೊಂಡೊಯ್ದು ತೋರ್ವುದು ಮಲ್ಲಿ ಒಂದು ಮಹಾವೃಕ್ಷವೃಕ್ಷದೊಳ್ ನಾಗಪಾಶದಿಂ ಬಿಗಿವಡೆದಿರ್ದ ಖಚರನಂ ಕಂಡು ತದವತಂಸಗಂಧಮಾಗಂಧವೆಂದು ನಿರ್ಣಯಿಸಿ (೧೦೮) ತತ್ಖಚರಂಗಾದಾಬಂಧನಂ ವಿರೋಧ ಕೃತವೆಂದು ಬಗೆದು ತನಗೆ ಭವಾಂತರ ಪ್ರಿಯತೆಯಿಂದೆ ಬಳಾಹಕನೆಂಬ ಖೇಚರನಿತ್ತ ವಿವೋ ಚನೀವಿದ್ಯಾಬಲದಿಂದಾತನ ಬಂಧಮುಂ ಬಿಡಿಸಿ ತತ್ಖಚರನಾತಂಗೆಱಿಗಿ ತನ್ನ ವೈರಿಯುಂ ವಧಿಸಲಾತನಂ ಬೇಡಿ, ತನ್ನ ವೃತ್ತಾಂತಮುಂ ಕೇಳ್ದಾತಂಗೆ ಸಂಕ್ಷೇಪದಿಂ ಕೇಳಿಸಲುದ್ಯತನಾದನೆಂಬಲ್ಲಿಗೆ

ಪಂಚಮಾಶ್ವಾಸಂ

ಮುಗಿದುದು.

ಷಷ್ಠಾಶ್ವಾಸಂ.

(ಶಿಶಿರ ಸಮಯವರ್ಣನಂ)

ಆರ್ಯಾ ಅರಸೇ ಕೇಳು, ಈ ನನ್ನ ವೃತ್ತಾಂತವು ವಿಶೇಷ ಲಜ್ಜಾಕರವು. ನಾನು ಹೇಮಕೂಟದ ವಿದ್ಯಾಧರರಾಜನು. ನನ್ನಹೆಸರು ಚಿಂತಾಂಗನು, ನಾನು ನನ್ನ ಪ್ರಿಯೆಯೊಡಗೂಡಿ ಮುಂದರಕಂದರದ ಕಲ್ಪದ್ರುಮೋದ್ಯಾನದಲ್ಲಿ ಕ್ರೀಡಿಸುತ್ತಿರ್ದ್ದು ಬಳಲಿ ನಿದ್ರಿಸಿರ್ದ್ದ ಸಮಯಮನೀ ನಿರೀಕ್ಷಿಸುತ್ತಿರ್ದ್ದ ಪುಷ್ಕರವುರದ ಹಯಗ್ರೀವಂ ನನ್ನನೀನಾಗವಿದ್ಯೆಯಿಂದೆ ಬಂಧಿಸಿ ಎನ್ನೋಪಳಂ ಕೊಂಡು ಪೋದಂ. (೧-೩) ಈನೀಚನಿದ್ರಾವೃತ್ತಿಯಿಂದೀ ಪರಿಭವಮೆನಗೆ ಸಂಭವಿಸಿತು. ಇಲ್ಲದಿರ್ದ್ದೊಡೆನಗೆ ಮಾಱಿಲಾಂಪರಾರುಂಟು? ಆದೊಡಂ ನಿನ್ನಂತಹ ಮಹಾತ್ಮನ ದರ್ಶನಕ್ಕವಕಾಶವಿತ್ತ ಆತನೆನಗುಪಕಾರಿಯೇ ಆದನೆಂದು ಪೇಳಿದ ಚಿತ್ರಾಂಗನಂ ಕುಱಿತು ಯುವರಾಜಂ 'ಆರ್ಯಾ—ಮಿತ್ರನೇ ಚಕ್ರವಾಳವುರದ ವಿದ್ಯಾಧರಾಧಿಪತಿಯಾದ ಬಳಾಹಕನು ಎನಗೆ ಪರಮಪ್ರಿಯಮಿತ್ರನು. ಅವನ ಸಹಾಯವು ನಿನಗೆ ದೊರಕುವಂತೆ ಮಾಡುವೆನೆನ್ನಲು' (೩-೬) ಚಿತ್ರಾಂಗನು—'ಅರಸೇ ನಿನ್ನಪ್ರಸಾದವೇ ಎನಗೆ ಸಾಕು, ಇತರರ ನೆರವು ಎನಗೆ ಆವಶ್ಯಕವಿಲ್ಲ. ಎನ್ನ ಬಲದೊಡನೆ ಪೋಗಿ ಹಗೆಯನ್ನು ಗೆದ್ದು, ಎನ್ನ ಮಾದೇವಿಯೊಡಗೂಡಿ ಬಂದು ನಿನ್ನನ್ನು ನಮಸ್ಕರಿಸಿ ಯೆನ್ನಪೊಲಿಲ್ಗೆ ಪೋಪೆಂ, (೭) ಎಂದು ಚಿತ್ರಾಂಗನತ್ತಪೋಗಲ್ ಪದ್ಮ ಪುತ್ರಂ ಮಲೆತಿರ್ದ ಮತಂಗರಾಜನಂ ಸಂಹರಿಸಿ

ಆತನ ರಾಜ್ಯಮುಂ ವಶವಾಡಿಕೊಂಡು ಮುಂದೆ ನಡೆದು ಭಂಗುರವೇಣಿಯೆಂಬ ನದಿಯ ದಡಮುಂ ಸೇರಲ್ ವೃಷಸೇನನೆಂಬ ವೃದ್ಧಪುರೋಹಿತಂ, ಕ್ಷತ್ರಕಿರೋಮಣೀ, ನಿನ್ನ ತಂದೆ ಮುನ್ನೆ (ಪಿಂದೆ) ತನ್ನ ದಿಗ್ವಿಜಯದಲ್ಲಿ ಇಲ್ಲಿಯವರೆಗೂ ಭೂಪರನ್ನು ಆಜ್ಞಾನಪ್ರರನ್ನಾಗಿ ಮಾಡಿ ಈ ನದಿಯ ತೀರದಲ್ಲಿಯೇ ಜಯಸ್ತಂಭವನ್ನು ನಿಲ್ಲಿಸಿರ್ದ್ದನು. ನೀನೂಕೂಡ ಇಲ್ಲಿಯೇ ಬೀಡುವಿಟ್ಟು ಯಶಸ್ತಂಭವನ್ನು ನಿಲ್ಲಿಸಬೇಕು. (೪-೧೭) ಅಲ್ಲದೆ ಯುದ್ಧಶ್ರಾಂತವಾದೀ ಬಲವು ಜಲತೃಣಸಮೃದ್ಧವಾದ ಈ ಸ್ಥಳದಲ್ಲಿಯೇ ಕೆಲವು ದಿವಸಗಳ ವರೆಗೆ ವಿಶ್ರಾಂತಿಯನ್ನೂ ಪಡೆಯಲಿ, ಮತ್ತು ಇಲ್ಲಿಗೆ ಏಕಗವ್ಯೂತಿ ಪ್ರಮಾಣಾಂತರದಲ್ಲಿ ಚಿತ್ರಕೂಟಗಿರಿಯಲ್ಲಿ ಸುಪಾರ್ಶ್ವಪರಮೇಶ್ವರರಿಂದಲಲಂಕೃತವಾದ ಚೈತ್ಯರಂತನ ವೆನಿಸಿದ ಸಿದ್ಧಶೇಖರವೆಂಬ ತ್ರಿಜಗತ್ಪಾವನವೆಪ್ಪ ಉನ್ನತ ತೀರ್ಥವೊಂದನೆಯುತ್ತಿರ್ಪುದು. (೧೪) ಬರಿಸಬರಿಸಕಂ ಫಾಲ್ಗುಣನಂದೀಶ್ವರಪೂಜೆಗೆ ಅಷ್ಟಾಹ್ನಿಕದಲ್ಲಿ ಇಲ್ಲಿ ಮಹಾಯಾತ್ರೆಯು ನಿರೆಯುವುದು. (೧೯) ನೀನೂ ಕೂಡೆ ಆ ದಿವಸ ಅಲ್ಲಿಗೆ ಹೋಗಿ ಜಿನಮಹಾಮಹಿಮೆಯನ್ನು ಮಾಡಿಸಲು ನಿನ್ನ ಈ ದಿಗ್ವಿಜಯಯಾತ್ರೆಗೆ ಸಫಲತೆಯುಂಟಾಗುವುದು (೨೦) ಎಂದು ಬಿನ್ನವಿಸಿದ ಪುರೋಹಿತನ ವಚನಮನನುಮತಿಸಿ ಗುಣತುಂಗನಾನದೀತೀರದಲ್ಲಿ ಬೀಡಂ ಬಿಟ್ಟು ಸುಖವಾಗಿ ವಾಸಿಸುತ್ತಿರ್ದ್ದನು. (೨೪)

ಇತ್ತ ಚಿತ್ರಾಂಗನು ಹಯವದನನ್ನುಮುಟ್ಟಿ ಯುದ್ಧವನ್ನಾರಂಭಿಸಿದನು. ಅನ್ಯಕಳತ್ರಾ ಪಹಾರಿಯಾದ ಹಯವದನನು ತನ್ನ ವಿದ್ಯೆಗಳು ಸಹಾಯವಾಡದಿರಲು ಚಿತ್ರಾಂಗನ ಮುಹಿಮೆಯನ್ನು ಬಿಟ್ಟು ಯುದ್ಧರಂಗದಿಂದ ಓಡಿಹೋದನು. (೨೭) ಚಿತ್ರಾಂಗನು ತನ್ನ ಪ್ರಿಯಭಾರ್ಯೆಯೊಡನೆ ವಿಮಾನಾರೂಢನಾಗಿ ಬಂದು ಯುವರಾಜ ಶಿಬಿರಪ್ರದೇಶವನ್ನು ಸವಿಾಪಿಸುತ್ತಿರಲು ಯುವರಾಜಸೈನ್ಯವು ಯಾವನೋ ವಿಯಚ್ಚರನೊಬ್ಬನು ದಂಡೆತ್ತಿ ಬರುತ್ತಿರುವನೆಂದು ಭ್ರಾಂತಿಗೊಂಡು ಯುದ್ಧಕ್ಕೆ ಸಿದ್ಧವಾಗುತ್ತಿರಲು (೨೯) ಚಿತ್ರಾಂಗನು ತನ್ನ ಬರವನರಸಂಗೆ ಮುಂದಲಿಪಲಟ್ಟು ಗಗನತಳದಿ ನವನೀತಳಕ್ಕವತರಿಸಿ ದೌವಾರಿಕನಿವೇದಿತನಾಗರಸಂಗೆ ನಮಸ್ಕರಿಸಿ (೩೦) ಕದನದಲ್ಲಿ ಪಗೆಯಂ ಗೆಲ್ದು ತನ್ನ ಪತ್ನಿಯನ್ನು ಕರೆತಂದ ಸಂತೋಷದ ಸುದ್ದಿಯನ್ನು ತಿಳಿಸಿ ತಾನು ತಂದಿದ್ದ ಕುಲಥನಗಳೆನ್ನು ಅರಸನ ಮುಂದೊಟ್ಟಿ (೩೧) ಅರಸೇ, ನೀನು ಮಾಡಿದುಪಕಾರಕ್ಕೆ ಪ್ರತ್ಯುಪಕಾರವನ್ನಿನಗತಕ್ಕ ಸೈಪೆನಗಿಲ್ಲ. ನನ್ನಭಕ್ತಿ ಪ್ರದರ್ಶಕವಾದ ಇವನ್ನು ಸ್ವೀಕರಿಸಬೇಕೆಂದು ವಿನಯದೊಡನೆ (೩೨-೩೩) ಅವಂಧ್ಯ ಕೋಪವೆಂಬ ಕೃಪಾಣವೊಂದು, ಸಮರಸಾಥಕವೆಂಬ ಕವಚವೊಂದು, ಜಯಾನಂದಕವೆಂಬ ಕಾರ್ಮುಕವೊಂದು ಆಹವದೋಹಳೆವೆಂಬ ಬಾಣವೊಂದು, ನಂದಿನಿಯೆಂಬ ಹಾರಲತೆಯೊಂದು, ಕಳಭಾಷಿಣಿಯೆಂಬ ವೀಣೆಯೊಂದು, ಇವುಗಳೊಡನೆ, ಪರವಿದ್ಯಾಚ್ಛೇದಿನಿ, ಮೋಹಿನಿ, ಬಹುರೂಪಿಣಿಯೆಂಬ ಮೂಱಿ ವಿದ್ಯೆಗಳೆನ್ನೂ ಕಾಣ್ಕೆಗೊಟ್ಟು ನಿಜಪುರಕ್ಕೆ ತೆರಳಿದನು (೩೪) ಶರತ್ಕಾಲದಲ್ಲಿ ಅರಸನ ದಂಡಿಗೊದಗಿದ್ದ ಖೇದವನ್ನು ಮಾಣಿಪಂತೆ ಹಿಮಂತರ್ತುವು ಸಾರ್ತಂದುದು. (೩೫) ಉತ್ತರದಿಕ್ಕಿನ ಶೀತವಾತವು ಬೀಸಲಾರಂಭಿಸಿತು. (೩೬) ಚಂದ್ರಿಕೆಯು ಮಸುಮಸುಳೆನಾಯ್ತು (೩೭) ಮಂಜಿನುಬ್ಬರವು ಜಗತ್ತಿಗೆ ಪಾಂಡುಕಂಬಳವನ್ನು ಮುಸುಕಿಟ್ಟಂತೆ ವ್ಯಾಪಿಸಿತ್ತು. (೩೮)ಕಮಲವು ಶೀತಕ್ಕಗಿದು ಕೊಱಗಿತು. (೩೯-೪೦) ಸಿಂಧುವಾರ(೪೧) ಕುಂದ (೪೨) ಜಾತಿ (೪೩) ಕುಮುದಂಗಳು ವಿಕಸಿತಂಗಳಾಗಿ ಶೋಭೆವೆತ್ತುವು. (೪೪) ಹಿಮವು ಅನಂಗತಪ್ತರನ್ನು ಅತಿಯಾಗಿ ಬೇಡಿಸುತ್ತಾ ಎಲ್ಲೆಲ್ಲಿಯೂ ತಾನೇ ತಾನಾಗಿ ವಿಜೃಂಭಿಸುತ್ತಿತ್ತು. (೪೫-೪೬) ಹಿಮವು ಬರು ಬರುತ್ತಾ ಕ್ಷಿರವಾಗಿ ಪರಿಣಮಿಸಿತು. (೪೮) ಸೂರ್ಯನುಕೂಡ ಶೀತಕ್ಕಗಿದು ಅಗ್ನಿದಿಕ್ಕನ್ನು

ಸಾರ್ದನು. (೪೯) ಮೂಳುಡಂಬರವು ತಡೆಯಲು ಅಸಾಧ್ಯವಾಗಿತ್ತು. (೫೧) ಜಾತಿಕುಂದಗಳ ಉತ್ಸವವು ಹೆಚ್ಚಿತು. (೫೨) ಶಿಶಿರ ವುಅಗ್ನಿಪ್ಪಿಟಕೆ, ಸ್ತ್ರೀಯರ ಕುಚತಟಗಳು, ಅಗರುವಹೊಗೆ, ಪೊಸ ಕುಂಕುಮದಣ್ಪು, ನೆಲವಾಳಿಗೆವನೆ; ಇವುಗಳನ್ನು ಆಶ್ರಯಿಸಿದವರ ಸಮೀಪವನ್ನು ಸಾರಲು ಅಂಜಿ ದೂರದೂರವಾಗುತ್ತಿತ್ತು. (೫೬) ಪೌರನಾರೀಕದಂಬವು ನವಸಿಂಧುವಾರದಲರ್ದೊಂಗಲ ಕರ್ಣಪೂರವು, ನವಮಾಳಿಕಾಕುಸುಮಶೇಖರವು, ಲೋಧ್ರಪುಷ್ಪಪರಾಗೋದ್ವರ್ತನಗಳು ಇವುಗಳಿಂದ ಸಂತೋಷಗೊಂಡಿತು. (೫೪) ವಾಸರಕ್ಕೆ ತಾಪಚ್ಯುತಿಯೂ, ಕುಂದವಲ್ಲರಿಗೆ ಸುಮಶ್ರೀ ಸಂಪದವೂ ಉತ್ಪಳಿನಿಗೆ ಉದ್ಯದ್ವೀತರಾಗತ್ವವೂ, ಅಂಬುರುಹಶ್ರೇಣಿಗೆ ಉದಾತ್ತತೀಕ್ಷ್ಣತ್ವವೂ, ಪೌಷ್ಯಕ್ಕೆ ವಿಶೇಷವಾಗಿ ದಿಗಂಬರನಾಂಗತ್ಯವೂ ಉಂಟಾಯಿತು (೫೫) ಅಂತೆನಿಸಿದ ಶಿಶಿರಸಮಯಲಕ್ಷ್ಮಿಯ ಕಲಂಕಾರವೆಂಬಾ ಫಾಲ್ಗುಣದ ಶುಕ್ಲಾಷ್ಟಮಿಯಂದು ಅರಸಂ ನಂದೀಶ್ವರಪೂಜೆಗೆಂದು ಸಿದ್ಧಶೇಖರಜಿನಾಲಯಕ್ಕೆ ಸಪರಿವಾರನಾಗಿ ಹೋಗಿ ತ್ರಿಜಗದಧೀಶ್ವರ ಚೈತ್ಯಗೃಹಮಂ ಮೂಱುಸೂಟಿಂ ಬಲವಂದು ಜಿನನ ಪಾದಪದ್ಮಂಗಳ್ಗೆಱಗಿ ಬಂದಿಸಿದನೆಂಬಲ್ಲಿಗೆ

ಆರನೆಯ ಆಶ್ವಾಸಂ
ಮುಗಿದುದು.

ಸಪ್ತಮಾಶ್ವಾಸಂ
(ದೂತಾಗಮನ ವರ್ಣನಂ)

ಱಟಿಕ ಅರಸು ತೀರ್ಥಂಕರನಿಗೆ ಅಭಿಷೇಕವಮಾಡಿ, ಅಷ್ಟವಿಧ ಮಂಗಳ ದ್ರವ್ಯಂಗಳಿಂದರ್ಚಿಸಿ, ಸಹಸ್ರನಾಮಸ್ತುತಿಪೂರ್ವಕವಾಗಿ ಅಷ್ಟಾಹ್ನಿಕಮಹವನ್ನು ನಿರ್ವರ್ತಿಸಿ, ಸ್ನಪನದ ಗಂಧೋದಕವನ್ನು ತಲೆಯಲ್ಲಿ ಧರಿಸಿ, ಹಲವು ಸ್ತೋತ್ರಗಳಿಂದ ಸ್ತುತಿಸಿ, ಸಿದ್ಧಶೇಷೆಯನ್ನು ಕೊಂಡು, (೧-೧೬) ಅಲ್ಲಿಂದ ಹೊರಟುಬಂದು ಇದಿರೊಳ್ ಸಮೂಢಯೊಳಗಿದ್ದ ದುರಿತಕ್ರಕಚಮುನಿವರರಿಗೆ ಪೊಡೆವಟ್ಟು ಅವರ ಆಶೀರ್ವಾದಮಂ ಪಡೆದು ಸಂತೋಷದಿಂದ ಕಟಕವನ್ನು ಬಂದು ಹೊಕ್ಕನು. ತನ್ನ ರಾಜಮಂದಿರದ ಬಾಗಿಲಲ್ಲಿ ಆನೆಯಿಂದಿಳಿದು ಅಲ್ಲಿ ನೆರೆದಿದ್ದ ಮಂಡಲಿಕನಾಮಂತಸಚಿವಾದಿ ಮನ್ನೆಯರಿಂದೆ ಗೌರವಿಸಲ್ಪಟ್ಟು ಚಿತ್ರಭಾನುದತ್ತಹಸ್ತಾವಲಂಬನಾಗಿ ಆಸ್ಥಾನಮಂಟಪಕ್ಕೆ ಬಿಜಯವಮಾಡಿಸಿ, ಸಿಂಹಾಸನನಾಸೀನನಾಗಿರಲು (೧೭-೨೦) ದಂಡೇಶ ದಿಕ್ಕುಂಜರನಾದ ಕೀರ್ತಿವರ್ಮ ಸೇನಾಪತಿಯು ದಿಗ್ವಿಜಯಂಗೆಯ್ದು ಬಂದು ತಾನು ತಂದಿರ್ದ ಉತ್ಕೃಷ್ಟವಾದ ವಿಜಯವಸ್ತುಗಳನ್ನು ಸಮರ್ಪಿಸಿ ನಿಜೋಚಿತಾಸನದಲ್ಲಿ ಕುಳ್ಳಿರಲು ವಿಜಯಸೇನನೆಂಬ ಹಿತವುರೋಹಿತನು ಆತನ ವಿಜಯ ವೃತ್ತಾಂತವನ್ನು ಬಿನ್ನವಿಸಲು, ಅರಸನು ಕೀರ್ತಿವರ್ಮನನ್ನು ಸಮಸ್ತಸಾರವಸ್ತುಗಳಿಂದ ತಣಿಪಿ ಬೀಡಿಂಗೆ ಕಳಿಪಿ ವಂದಿವಾಗಧಾದಿಗಳ ಸ್ತೋತ್ರದಿಂದ ಉತ್ಸಾಹಗೊಂಡವನಾಗಿ ಆಂದಿನ ಒಡ್ಡೋಲಗವನ್ನು ವಿಸರ್ಜಿಸಿ ಅರಮನೆಯನ್ನು ಸೇರಿ ಸುಖದಿಂದಿದ್ದನು (೨೧-೨೪) ಮತ್ತೊಂದುದಿವಸದೊಳರಸಂ ಒಡ್ಡೋಲಗದಲ್ಲಿ ಅಂತಃಪುರ ಸ್ತ್ರೀಯರೊಡನೆ ಸಿಂಹಾಸನಾಸೀನನಾಗಿ, ಎರಡುಪಕ್ಕಗಳಲ್ಲಿಯೂ ಅಲಂಕೃತರಾದ ರಾಜರಸಮೂಹವು ಶೋಭಿಸುತ್ತಿರಲು, ಭಾರತಿಕವೃಂದವು ಅತಿನೈಪುಣ್ಯದಿಂದ ನೃತ್ಯವನ್ನು ಕೇಳಿಸುತ್ತಿರೆ ಅತ್ಯಂತವೈಭವದಿಂದಿರುತ್ತಿರ್ಪಂದು (೨೫-೩೬) ಪ್ರತೀಹಾರಿಯೊರ್ವಂ ಬಂದು ನಮಸ್ಕರಿಸಿ ರಾಜಾಧಿರಾಜಾ, ಜಯವರ್ಮ ಭೂಪತಿಯು ಅಟ್ಟಿದ ದಮನನೆಂಬ ರಾಯಭಾರಿಯು ಬಾಗಿಲಲ್ಲಿ ಬಂದಿರುವನು, ಎಂದು ಬಿನ್ನಪಂಗೆಯ್ದು ಮಹೀಶಲಬ್ಧಾನುಮತಿಯಾಗಿ ಪೋಗಿ ತಂದು ಕಾಣಿಸಲು ದಮನನು ಆಸ್ಥಾನವನ್ನು ಪ್ರವೇಶಿಸಿ ನಿಜೋಚಿತಾಸನದಲ್ಲಿ ಕುಳಿತುಕೊಂಡನು. ಬಳಿಕಅರಸು ಪ್ರಸಾ

ದದೃಷ್ಟಿಯಿಂದ ಆತನನ್ನು ನೋಡಿ, ಅಯ್ಯಾ, ನನ್ನ ಮಾವನಾದ ಜಯವರ್ಮ ಭೂಪತಿಗೆ ಕುಶಲವೇ? ಅವನ ಸಪರಿವಾರದಲ್ಲಿ ಯಾವುದೊಂದು ಕೊರತೆಯೂ ಇಲ್ಲವಷ್ಟೆ? ಎಂದು ಕುಶಲ ಪ್ರಶ್ನೆಮಾಡಲು ಆ ದಮನನು ಮಹಾಸ್ವಾಮಿ, ನಮ್ಮೊಡೆಯ ಜಯವರ್ಮ ಭೂಪನು ಸರ್ವವಿಧದಲ್ಲಿಯೂ ಕುಶಲಿಯಾಗಿರುವನು. ಈಗ ಮಹತ್ತರವಾದ ಕಾರ್ಯವೊಂದೊದಗಿರುವುದರಿಂದ ನಿಮ್ಮ ಸಹಾಯವನ್ನು ಬಯಸಿ ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿರುವನು. ನಿಮ್ಮ ತಂದೆಯ ತಂಗೆಯಾದ ಚಂದ್ರಿಕಾದೇವಿಗೂ ಭದ್ರಾವತೀಪುರನಾಥನಾದ ಜಯವರ್ಮ ನೃಪತಿಗೂ ಸುಟ್ಟದ ಸರ್ವಾಂಗಸುಂದರಿಯಾದ ಭಾನುಮತಿಯೆಂಬ ಕನ್ಯಾರತ್ನವನ್ನು ತನಗೆ ವಿವಾಹಮಾಡಿಕೊಡಬೇಕೆಂದು ಕನಕಪುರದ ಗಜಕರ್ಣನೆಂಬರಸು ದೂತನನಟ್ಟಿದನು. ಅರಸನು ಆ ದೂತನನ್ನು ಕುರಿತು, ಅಯ್ಯಾ, ತನ್ನಂತಹ ಗುಣವೃದ್ಧನೂ ಸನ್ನುತಕುಲೀನನೂ ಆದವನು ಕನ್ನಿಗೆ ಯೋಗ್ಯನೆ? ನೀನು ಹೇಳಿದುದೇ ಯೋಗ್ಯವಲ್ಲದೆ ಇದು ಕರಣೀಯವಾದುದೇ? (೩೭-೪೯) ಎಂದು ಭಂಗಿ ಭಾಷಿತದಿಂದ ಸವಾಧಾನಮಾಡಿ ಅವನ ಬೀಡಿಂಗೆ ಕಳುಹಿಸಿ, ಆಸ್ಥಾನವನ್ನು ವಿಸರ್ಜಿಸಿ, ಮಂತ್ರಾಲಯಕ್ಕೆ ಹೋಗಿ ನೀತಿಶಾಸ್ತ್ರಪಟುಗಳಾದ ಮಂತ್ರಿಗಳೊಡನೆ ಪ್ರಕೃತಕಾರ್ಯವನ್ನು ಚೆನ್ನಾಗಿ ವಿಮರ್ಶಿಸಿ.—ಆ ಗಜಕರ್ಣನು ವಂಶ ಸಂಪದಗಳಲ್ಲಿ ಮೇಲಾದವನಾದರೂ, ಭಾನುಮತಿಗೆ ಮಾತ್ರ ನೀನಲ್ಲದೆ ಮತ್ತಾವನೂ ಯೋಗ್ಯನಾದ ವರನಲ್ಲವೆಂಬದನ್ನು ನಿಶ್ಚಯಿಸಿ ಆ ಮರುದಿವಸ ಆಸ್ಥಾನಕ್ಕೆ ಗಜಕರ್ಣನೆಂಬ ದೂತನನ್ನು ಬರವಾಡಿ ಅಯ್ಯಾ ದೂತನೇ, ಭಾನುಮತಿಗೆ ಪುಂಡರೀಕಿಣೀಶ್ವರನೂ, ನನ್ನ ತಂಗೆಯ ಮಗನೂ ಆದ ಮಹಾಪದ್ಮನೇ ಯಾವತೆಱದಿಂದ ನೋಡಿದರೂ ಉಚಿತನಾದ ವರನು. ಆದುದರಿಂದ ಈ ಕನ್ಯಾರತ್ನದ ಮಾತಂತಿರಲಿ, ನನ್ನ ಕಿಱಿಯ ಮಗಳಾದ ಮದಲೇಖೆಯನ್ನು ನಿಮ್ಮರಸನಿಗೆ ಅಕ್ಕರೆಯಿಂದ ಕೊಡುವೆನು, ಎಂದು ಹೇಳಿ ಹತ್ತಿರದಲ್ಲಿಯೇ ಇವ್ವ ಆಮುದಲೇಖೆಯನ್ನು ತೋರಿಸಲು(೪೯-೫೫)ಆ ದೂತನು ವಿಷಾದವನ್ನು ತೋರಿಸುತ್ತಾ ಅರಸೇ! ನಿನ್ನ ಪಟ್ಟಮಹಿಷಿಯ ಪುತ್ರಿಯಾದ ಭಾನುಮತಿಯಿಂದ ನಮ್ಮರಸನು ವಿಶೇಷವಾಗಿ ಸಂತೋಷಿಸುವನಲ್ಲದೆ ಇತರ ಕನ್ಯಾರತ್ನವನ್ನು ಆತನು ಕಣ್ಣೆತ್ತಿಯೂ ನೋಡುವುದಿಲ್ಲ. ನೀವು ಈಬಗೆಯ ಬೇಳುವೆಯ ಮಾತುಗಳನ್ನಾಡಿ ಭಾನುಮತಿಯನ್ನು ನಮ್ಮರಸನಿಗೆ ಕೊಡದಿದ್ದರೆ ಆತನೇ ಬಲಾತ್ಕಾರವಾಗಿ ಬಾಹುಬಲದಿಂದ ಕೊಂಡೊಯ್ಯುವನು. ನೀನು ಅಪ್ಪಕ್ಕೆ ಅವಕಾಶಕೊಟ್ಟರೆ ಈ ಕನ್ಯಾರತ್ನವೊಂದನ್ನುಮಾತ್ರವಲ್ಲ; ನಿನ್ನೀರಾಪ್ಪನನ್ನೂ ಕಳೆದುಕೊಳ್ಳುವೆ (೫೫-೬೧) ಎಂದತಿಕ್ರಮಿಸಿ ನುಡಿದ ದೂತನ ಮಾತನ್ನು ಕೇಳಿ ಅರಸು ಮಿತಿಮೀಱಿದ ಕೋಪದಿಂದ ವಿಜೃಂಭಿಸುತ್ತಿರುವುದನ್ನು ಕಂಡು ಮಂತ್ರಿಗಳು—ಓ ದೂತನೇ—ಕಮಲವು ಸೂರ್ಯನಿಂದ ವಿಕಸಿಸುವಂತೆ ನಮ್ಮ ಅರಗುವರಿಯು (ಭಾನುಮತಿ) ಮಹಾಪದ್ಮನಿಂದಲ್ಲದೆ ಮತ್ತಾರಿಂದಲೂ ಸಂತೋಷವನ್ನು ಪಡೆಯಳು. ಅಲ್ಲದೆ ನಿಮ್ಮರಸನು, ಮದಮಳಿನನು, ಆಱಿಡಿದಾಣನು, ಉರುಮಾತಂಗ ಧರ್ಮಪುಳ್ಳವನು. ಇಂತಹ ಕೀಟ್ಮನು ಜನನ್ನು ನಮ್ಮರಗುವರಿಯು ಕಣ್ಣೆತ್ತಿಯೂ ನೋಡುವುದಿಲ್ಲ, ಎಂದು ಇವೇ ಮೊದಲಾಗಿ ಹಲವು ಬಿರುನುಡಿಗಳನ್ನಾಡಿ ಧಿಕ್ಕರಿಸಿ ಕುಳುಹಿಸಲು (೬೦-೬೭) ಆ ದೂತನು ಹೋಗಿ ಗಜಕರ್ಣನಿಗೆ ಯಥಾವಸ್ಥಿತವಾಗಿ ನಡೆವ ಸಂಗತಿಯೆಲ್ಲವನ್ನೂ ತಿಳಿಸಿದನು. ಇದನ್ನು ಕೇಳಿದೊಡನೆಯೇ ಗಜಕರ್ಣನು ಅತ್ಯಂತ ಕೋಪಾಟೋಪವಿಜೃಂಭಿತನಾಗಿ ಚತುರಂಗಬಲದೊಡನೆ ಸಮಗ್ರಯುದ್ಧಸಾಮಗ್ರಿವೆರಸು ದಂಡೆತ್ತಿಬಂದು ಭದ್ರಾವತೀನಗರದ ಕೋಟೆಯನ್ನುಲಗ್ಗೆ ಹತ್ತಿರುವನು (೬೮-೭೯) ಜಯವರ್ಮನು ಯುದ್ಧಸಾಮಗ್ರಿಯೆಲ್ಲವನ್ನೂ ಅಣಿಮಾಡಿಕೊಂಡು ಸಿಟ್ಟಿನಿಂದಲೂ, ಸಹಜವಾದ ಕ್ಷತ್ರಪರಾಕ್ರಮದಿಂದಲೂ ಶತ್ರುವನ್ನು ಹುಟ್ಟಡಗಿಸುವ ಛಲದಿಂದ ಯುದ್ಧಕ್ಕೆ ಹೊರಡಲು ಮಂತ್ರಿಗಳು

ಆವನ ಯುದ್ಧೋದ್ಯೋಗವನ್ನು ಮಾಕೊರ್ಂಡು (೭೦-೭೭) ಮಹಾಸ್ವಾಮಿ, ತಾವು ಸಹಾಯ ರಹಿತರಾಗಿ ಸಹಸಾಯುದ್ಧಕ್ಕೆ ಹೊರಡಕೂಡದು, ನಿಮ್ಮ ಸೋದರಳಿಯನನ್ನು ದೂತರನ್ನಿಟ್ಟು ಬರ ಮಾಡಿಕೊಳ್ಳಿರಿ. ಆತನು, ಮದಿಸಿದ ಆನೆಯು ಕಮಲಕಾನನವನ್ನು ಹೊಕ್ಕು ಧ್ವಂಸಮಾಡುವಂತೆ ಶತ್ರುಗಳನ್ನು ನಿರ್ಮೂಲಮಾಡಿ ಜಯಲಕ್ಷ್ಮಿಯನ್ನು ಎಳೆದು ತರುವನು, ಎನ್ನಲು ಜಯವರ್ಮ ಭೂಪನು ಅದಕ್ಕೆ ಸಮ್ಮತಿಸಿ ನಿಮ್ಮಲ್ಲಿಗೆ ನನ್ನನ್ನು ಕಳುಹಿಸಿರುವನು. ಪರಹಿತವೇ ಮುಖ್ಯಕರ್ತವ್ಯವೆಂಬ ವ್ರತವನ್ನು ಕೈಗೊಂಡಿರುವ ಸ್ವಾಮಿಯವರು ಈ ವಿಷಯದಲ್ಲಿ ಸಹಾಯವಾಡಿ ನಮ್ಮೊಡೆಯನನ್ನು ಈ ಆಪತ್ತಿನಿಂದ ಉದ್ಧರಿಸಬೇಕು, (೭೮-೮೬) ಎಂದು ದಮನನೆಂಬ ದೂತಂ ಬಿನ್ನವಿಸಿದನೆಂಬಲ್ಲಿಗೆ

ಏಟಿನೆಯ ಅಶ್ವಾಸಂ
ಮುಗಿದುದು.

ಅಷ್ಟಮಾಶ್ವಾಸಂ

(ಚಂದ್ರಿಕಾವಿಹಾರ ವರ್ಣನಂ)

ಬಟಿಕ ಮಹಾಪದ್ಮನು ಶರಣಾಗತರನ್ನು ರಕ್ಷಿಸುವುದೇ ಕ್ಷತ್ರಿಯ ಧರ್ಮವಾದುದರಿಂದ ನಾನು ನಿಮ್ಮೊಡೆಯನಿಗೆ ಸಹಾಯವಾಡುವೆನು ಎಂದು ದೂತನನ್ನು ಕಳುಹಿಸಿ, ರಣಭೇರಿಯನ್ನು ಹೊಡೆಯಿಸಿ ಸೈನಿಕರಿಗೆಲ್ಲಾ ಯುದ್ಧಕ್ಕೆ ಹೊರಡಬೇಕೆಂಬುದನ್ನು ಸಾರಿಸಿದನು. (೧-೫) ಅಷ್ಟರಲ್ಲೇ ಹೊತ್ತು ಮುಟಿಗಿತು. ಎಲ್ಲೆಲ್ಲಿಯೂ ಮುಂಗತ್ತಲು ಕವಿಯಿತು, ಬಟಿಕ ನಕ್ಷತ್ರಗಳು ಮಿಣುಗುಟ್ಟಲಾರಂಭಿಸಿದುವು. ಚಂದ್ರನು ಉದಯಿಸಿ ಸಂಪೂರ್ಣ ಕಳೆಗಳಿಂದ ವಿರಾಜಿಸುತ್ತಿದ್ದನು. (೬-೧೫) ಈ ಸಮಯದಲ್ಲಿ ಮಹಾಪದ್ಮನು ಕಾವ್ಯಗೋಷ್ಠಿಯಿಂದ ಯಾಮಿನಿಯ ಪ್ರಥಮಯಾಮವನ್ನು ಕಳಿಪಿ ಓಲಗವನ್ನು ವಿಸರ್ಜಿಸಿ ಸೆಜ್ಜೆವನೆಗೆ ಬಿಜಯಂಗೆಯ್ದಿ ಸುಖಸುವ್ತನಾಗಿ ನಿಶಾವಸಾನ ಸಮಯದಲ್ಲಿ, ಶೀತಳ ಪ್ರಭಾತವಾರುತನ ತೀಟದಿಂದಲೂ, ಗೃಹದೀರ್ಘಿಕೆಗಳಲ್ಲಿಯ ಪಕ್ಷಿಗಳ ಕಲಕಲದಿಂದಲೂ, ವಂದಿವಾಗಧಾದಿಗಳ ಸ್ತುತಿರವಗಳಿಂದಲೂ, ಉದಯಿಸಿದ ಸೂರ್ಯನ ತೇಜಸ್ಸಿನ ಬೆಳಗಿನಿಂದಲೂ ನಿದ್ರೆಯನ್ನು ಬಿಟ್ಟು ಎಚ್ಚತ್ತನು. (೧೫-೨೫)

ಆ ಪ್ರಸಸ್ತಾವದಲ್ಲಿ ನೃಪಜಯಪ್ರಸ್ಥಾನಭೇರಿಗಳು ಭೋರ್ಗರೆಯುತ್ತಿದ್ದುವು. ಚತುರಂಗಬಲವು ಬಂದು ವಿಜಯ ಪ್ರಯಾಣಕ್ಕೆ ಹೊರಡಲು ಸಿದ್ಧವಾದುವು. ಮಾಂಡಳಿಕ ಸಾಮಂತ ರಾಜರೆಲ್ಲರೂ ಬಂದು ನೆರೆದರು. ಅರಸನು ಸಿದ್ಧವಾದ ಪಟ್ಟಗಜವನ್ನೇರಿ ಪ್ರಯಾಣಹೊರಟು (೨೬-೨೮) ಜಯಪ್ರಸ್ಥಾನ ಶಿಬಿರಕ್ಕೆ ಬಂದು, ಆ ದಿವಸವೆಲ್ಲಾ ಅಲ್ಲಿಯೇ ಬೀಡುಬಿಟ್ಟದ್ದು ಮಾರನೆಯದಿನ ಸೂರ್ಯೋದಯ ಸಮಯದಲ್ಲಿ ಸಿದ್ಧವಾಗಿದ್ದ ತೇರನ್ನೇರಿ ಶಂಖ ಕಾಹಳಾದಿ ವಾದ್ಯ ಧ್ವನಿಯು ದಿಗ್ವಿವರನ್ನು ಆವರಿಸುತ್ತಿರಲು ಚತುರಂಗಬಲದೊಡನೆ ಆ ಪ್ರಸ್ಥಾನ ಶಿಬಿರದಿಂದ ಮುಂದಣ ಪ್ರಯಾಣವನ್ನು ಬಳೆಯಿಸಿದನು. (೨೯-೩೧) ಈ ಚತುರಂಗಬಲದ ವಿಜಯಪ್ರಯಾಣ ಸಂರಂಭವು ಸಕಳಕ್ಷೋಣೀತಲಕ್ಷೋಭಕಾರಿಯಾಗಿತ್ತು. (೩೧-೪೫) ಇಂತುಗ್ರೋಗ್ರತರಸಾಮಗ್ರಿ ವೆರಸು ಕತಿಪಯ ಪ್ರಯಾಣಂಗಳಿಂದೆ ಭದ್ರಾವತೀಪುರವನ್ನು ಸೇರಿ ಮುತ್ತಿದ್ದ ಚತುರಂಗಬಲವನ್ನೂ ಎಬ್ಬಿಟ್ಟು ಸರ್ವಸ್ವವನ್ನೂ ಸೂಱೆಗೊಂಡು ಗಜಕರ್ಣನನ್ನು ಪಿಡಿವೊಲಂಗೊಂಡು ಜಯಶ್ರೀಯೊಳ್

ನೆರೆದು ನಗರಮಂ ಪ್ರವೇಶಿಸುವಲ್ಲಿ ಪೌರರಿಲ್ಲರಿಂದಲೂ ಅತ್ಯಂತ ಕುತೂಹಲ ಸಂತೋಷಗಳಿಂದ ನೋಡಲ್ಪಡುತ್ತಾ ರಾಜಬೀದಿಯನ್ನು ದಾಟಿ ಸೌಧಾಲಯಂಗಳನೊಳಕೊಂಡ ರಾಜಾಂಗಣವನ್ನು ಪೊಕ್ಕು, ಸೌಧತಲವನ್ನು ನೇರಿ ಜಯವರ್ಮನ ವಿಶೇಷವಾದ ಆದರ ಸನ್ಮಾನ ಸ್ತುತಿಗಳಿಗೆ ಪಾತ್ರವಾದನು. (೪೫-೪೯) ಬಲಿಕ ವಿವಾಹಮಂಟಪವು ಅಣಿಯಾಯಿತು, ಸಕಲ ಪರಿಣಯ ಸಂಭಾರಗಳೂ ಸಿದ್ಧವಾದುವು. ಒಂದು ಶುಭಮುಹೂರ್ತದಲ್ಲಿ ಜಯವರ್ಮನು ಮಜ್ಜನ ವಸನಭೂಷಣಾದಿಗಳಿಂದ ಶೋಭಿಸುತ್ತಿರುವ ಮಹಾಪದ್ಮ ಭಾನುಮತಿಯರಿಗೆ ಪಾಣಿಗ್ರಹಣಮಹೋತ್ಸವವನ್ನು ನೆರವೇರಿಸಿದನು. (೫೦-೬೨) ಧರಾಮರರು ಹರಸಿದರು, ಮಂಗಳಪಾಠಕರು ಮಂಗಳವೃತ್ತಂಗಳನ್ನೋದಿದರು. ಜಯವರ್ಮನ ಅಪಾರವಾದ ದಾನಭೋಜನಾದಿಗಳಿಂದ ಎಲ್ಲರೂ ಅತ್ಯಂತವಾಗಿ ಸಂತೋಷಗೊಂಡರು. ಜಯವರ್ಮನ ಸಂತೋಷಕ್ಕೆ ಪಾರವೆಂಬುದೇ ಇಲ್ಲವಾಯಿತು ಇಂತು ಜಯವರ್ಮನು ಮಗಳ ಮದುವೆಯನ್ನು ಬಹು ವಿಜೃಂಭಣೆಯಿಂದ ನಡೆಯಿಸಿ ಕೆಲವು ದಿನಗಳವರೆಗೂ ಅಳಿಯನನ್ನು ತನ್ನರಮನೆಯಲ್ಲಿಯೇ ಇರಿಸಿಕೊಂಡಿದ್ದು ಒಂದುದಿನ ಶುಭಮುಹೂರ್ತದಲ್ಲಿ ಅಮಿತವಾದ ಬಲಿ ವಲಿಯಿತ್ತು ಅಳಿಯನನ್ನೂ ಮಗಳನ್ನೂ ಪುಂಡರೀಕಿಣೀ ನಗರಿಗೆ ಕಳುಹಿಸಿಕೊಟ್ಟನು. (೬೩-೭೧) ಮಹಾಪದ್ಮನು ನೂತನ ವಧೂಸಮಾಗಮದಿಂದ ಸುಖವಾಗಿ ಪ್ರಯಾಣಮಾಡುತ್ತಿದ್ದನು. ಆಗ ಬದಗಿ ಬಂದಿದ್ದ ಬೇಸಗೆಯ ತಾಪವು ಬಾಯಿಂದ ವರ್ಣಿಸುವುದಕ್ಕೂ ಸಾಧ್ಯವಿಲ್ಲದಂತಿತ್ತು. (೭೨-೭೯) ಆದಾರಿಯಲ್ಲಿ ಮನೋಹರವಾದ ವನವೊಂದು ಮಹಾಪದ್ಮನ ದೃಷ್ಟಿಗೋಚರವಾಯಿತು. (೭೪-೮೦) ಅರಸನು ಅಲ್ಲಿ ಬಿಡಾರಬಿಟ್ಟನು. ಅಂತಃಪುರಸ್ತ್ರೀಯರು ತಮ್ಮ ಸಖಿಯರೊಡನೆ ಹೂಗಳನ್ನು ಕೊಯ್ದು ಆಯಾಸಗೊಂಡು (೮೩-೮೮) ಜಲಕೇಳಿಯನ್ನಾಡಿ ಮಹಾಪದ್ಮನ ಮನಸ್ಸಿಗೆ ಹೆಚ್ಚಾಗಿ ಸಂತೋಷವನ್ನುಂಟುಮಾಡಿದರು. (೮೯-೯೪) ಅರಸು ಅಂದಿನ ದಿನವನ್ನು ಅಲ್ಲಿಯೇ ಕಳೆದು ಮರು ದಿವಸ ಪ್ರಯಾಣವನ್ನು ಮುಂದುವರಿಸಿ ನಿಚ್ಚವಯಣಂ ಬಂದು ತನ್ನ ಪುಂಡರೀಕಿಣೀ ನಗರವನ್ನುನೇರಿ ಅರಮನೆಯನ್ನು ಪ್ರವೇಶಿಸಿ ಭಾನುಮತಿಯೊಡನೆ ಸುಖವಾಗಿರುತ್ತಿದ್ದನು. (೯೫) ಕೆಲವು ದಿವಸಗಳಲ್ಲಿ ಭಾನುಮತಿಯು ಗರ್ಭವತಿಯಾಗಿ ಧನದೇವನೆಂಬ ಸುಕುಮಾರನನ್ನು ಪ್ರಸವಿಸಿದಳು (೯೯) ರಾಜನು ಪುತ್ರೋತ್ಸವಾದಿಗಳನ್ನು ನೆರವೇರಿಸಿ ಸಂತೋಷದಿಂದಿದ್ದನು. ಒಂದು ದಿವಸ ರಾಜನು ಓಡ್ಡೋಲಗದಲ್ಲಿ ಕುಳಿತಿರಲು ಸೂರ್ಯಾಸ್ತವಾಯಿತು, ಕತ್ತಲೆಯು ಎಲ್ಲೆಲ್ಲಿಯೂ ಹರಡಿಕೊಂಡಿತು. (೯೬-೧೦೧) ನಕ್ಷತ್ರಗಳು ಮೂಡಿದುವು, ಚಂದ್ರನೂ ಉದಗಿರಿ ಶಿಖರಶೇಖರನಾದನು. ಆಗ ಮಹಾಪದ್ಮನು ಓಲಗವನ್ನು ವಿಸರ್ಜಿಸಿ ಒಳಹೊಕ್ಕು ನಿತ್ಯಕೃತ್ಯಗಳನ್ನು ನಿರ್ವರ್ತಿಸಿ ಚಂದ್ರಿಕೆಯ ಸಂಪತ್ತನ್ನು ಅಭಿನಂದಿಸಿ ಪುರವನ್ನು ಸುತ್ತಿ ವಿನೋದಗಳನ್ನು ನೋಡಬೇಕೆಂದು ಬಯಸಿ ನಾಗರಿಕ ವಿಟವಿದೂಷಕಾದಿಗಳೊಡವೆರೆದು(೧೦೧-೧೦೬) ರಾಜಭವನಮಂ ಪೊಱಮಟ್ಟು ಗಣಿಕಾವಾಟವನ್ನು ಪ್ರವೇಶಿಸಿ, ಅಲ್ಲಿ ಗಣಿಕಾಭುಜಂಗಾದಿಗಳ ಹಲವು ಬಗೆಯ ಶೃಂಗಾರಕೇಳಿಗಳನ್ನು ನೋಡುತ್ತಾ ಬರುತ್ತಿರಲು ಚಂದ್ರಾಸ್ತವಾಯಿತು. (೧೦೬-೧೧೪) ಸೂರ್ಯನು ಉದಯೋನ್ಮುಖನಾದನು. ಆ ಸಮಯದಲ್ಲಿ ಅರಸನು ಅರಮನೆಯನ್ನು ನೇರಿ, ಪ್ರಾತಸ್ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ನೆರವೇರಿಸಿ, ಆಸ್ಥಾನಮಂಟಪವನ್ನುನೇರಿ, ಒಡ್ಡೋಲಗದಲ್ಲಿರುತ್ತಾ ಬಹಿರುದ್ಯಾನವನದಲ್ಲಿ ಭೂತಹಿತ ಜಿನರು ಬಿಜಯಂಗೆಯ್ಸಿರುವ ಸುದ್ದಿಯನ್ನು ತಂದು ತಿಳಿಸಿದ ಋಷಿನಿವೇದಕನಿಗೆ ಅಂಗಚಿತ್ತವನ್ನಿತ್ತು ಆ ಋಷಿಗಳಿರುವ ದಿಕ್ಕಿಗೆ ಏಳಡಿನಡೆದು ಸಾಷ್ಟಾಂಗ ಪ್ರಣಾಮಮಾಡಿ ವಂದನಾಭಕ್ತಿಯನ್ನು ಮೆ ಅರಿಹು ಋಷಿವರ್ಯರು ಇಬ್ಬರಿದ್ದಸ್ಥಳಕ್ಕೆ ಹೋಗಬೇಕೆಂದು ಸನ್ನಾಹಭೇರಿಯನ್ನು ಪೊಯ್ಸು ಸವು

ಸ್ತ್ರೀಂತಃಪುರದೊಡಗೂಡಿ ಮಾಂಡಲಿಕ ಸಾಮಂತಾದಿಗಳಿಂದ ಅನುಸರಿಸಲ್ಪಟ್ಟು ಬಹಿರುದ್ಯಾನವನ್ನು ಬಂದು ಸೇರಿದನು (೧೮೪-೧೯೦) ಎಂಬಲ್ಲಿಗೆ

ಎಂಟನೆಯ ಆಶ್ವಾಸಂ
ಮುಗಿದುದು.

ನವಮಾಶ್ವಾಸಂ

(ಗರ್ಭಾವತರಣ ಕಲ್ಯಾಣವರ್ಣನಂ)

ಬಟ್ಟಿಕ ಮಹಾಪದ್ಮನು ಬಹಿರುದ್ಯಾನವನ್ನು ಸೇರಿ ವಸ್ತ್ವಸ್ತ್ರವಗುಣಸ್ತ್ರವ ರೂಪಸ್ತ್ರವಗಳಿಂದ ಭೂತಹಿತಜಿನರನ್ನು ಸ್ತುತಿಸಿ ಪೊತೆವಟ್ಟು ಅಪ್ಪ್ರಮುಂಗಳ ದ್ರವ್ಯಂಗಳಿಂದರ್ಚಿಸಿ ಗುರುಭಕ್ತಿ ಪೂರ್ವಕಂ ಪಂಚಮುಷ್ಟಿಯಿಂ ಬಂದಿಸಿ ತದೀಯಾಶೀರ್ವಾದವನ್ನು ಶಿರದಲ್ಲಿ ತಳೆದು ಸಮುಚಿತಾಸನದಲ್ಲಿ ಕುಳ್ಳಿರಲು (೧-೬) ಋಷಿವರ್ಯರು ಅಗಾಧ ಕೇವಳ ಬೋಧದಿಂದ ಈತನು ಆತ್ಯಾಸನ್ನ ಭವ್ಯನೆಂದು ತಿಳಿದು ಜಿನಮತ ತತ್ವವನ್ನು ಪದೇಶಿಸಿದರು. ಮಹಾಪದ್ಮನು ಆ ಉಪದೇಶದಿಂದ ತತ್ವಗಳನ್ನು ಭಾವಿಸುತ್ತಾ ನಿರ್ವಿಣ್ಣನಾಗಿ ಸಂಸಾರಭೀರುಗಳಪ್ಪ ಸಾಸಿರ್ವರರಸುಮಕ್ಕಳ್ವೆರಸು ಜಿನದೀಕ್ಷೆಯಂ ಕೆಯ್ಕೊಂಡು ಗ್ರಾಮನಗರಾದಿಗಳಂ ವಿಹಾರಿಸುತ್ತುಂ ಷೋಡಶಭಾವನೆಗಳಿಂ ತೀರ್ಥಕರ ಪುಣ್ಯಮುಂ ಕಟ್ಟಿ ತದಾರಾಧನವಿಧಿಯಿಂ ಮುಡಿಪಿ ಪ್ರಾಣತಕಲ್ಪದಲ್ಲಿ ದೇವನಾಗಿ ಸ್ವರ್ಗಸುಖವನ್ನನುಭವಿಸುತ್ತಿರ್ದ್ದನು.

ಅನ್ನೆಗಮಿತ್ತಲ್ ಜಂಬೂದ್ವೀಪದ ಭರತಖಂಡದಲ್ಲಿ ಕಾಶೀವಿಷಯವು ಸಕಲ ವಿಧವಾದ ಸುಖಕ್ಕೂ ತವರ್ಮನೆಯಾಗಿತ್ತು. ಆ ದೇಶವು ಯಾವ ಬಗೆಯಲ್ಲಿಯೂ ಭೋಗಭೂಮಿಗೆ ಕೀಟುಮಾಗಿರಲಿಲ್ಲ. (೭-೧೪) ಅವರ ರಾಜಧಾನಿಯಾದ ಕಾಕಂದಿಪುರದ ಸೌಭಾಗ್ಯ ಸಂಪತ್ಸಮೃದ್ಧಿಗಳನ್ನು ಆದಿಶೇಷನಿಗೂ ಪೊಗಟಲಳವಲ್ಲ, (೧೯-೨೪) ಅಗಟುಂ, ಪ್ರಾಕಾರಮುಂತಾದ ದುರ್ಗಗಳಿಂದ ಶತ್ರುಗಳಿಗೆ ಮನದಿಂದ ಪ್ರವೇಶಿಸುವುದಕ್ಕೂ ಸಾಧ್ಯವಿರಲಿಲ್ಲ. (೨೫-೩೦) ಅದನ್ನು ಸುಗ್ರೀವಭೂಪಾಲಕನು ಧರ್ಮದಿಂದ ಆಳುತ್ತಿದ್ದನು. ಅವನು ಅನಿವಾರ್ಯವೀರ್ಯನು, ವದಾನ್ಯಶಿರೋಮಣಿಯು, ರಿಪುಭಯಂಕರನು, ಶರಣಾಗತವಜ್ರಪಂಜರನು, ಇವನಿಗೆ ರೂಪವತಿಯೂ, ಗುಣವತಿಯೂ, ವಿನಯವತಿಯೂ ಆದ ಜಯರಾಮೆಯೆಂಬವಳು ಪಟ್ಟಮಹಿಷಿಯು, (೩೩-೪೭) ಇವರಿರ್ವರೂ ಸುಖಸಂಕಥಾ ವಿನೋದದಿಂದ ಸುಖವಾಗಿ ಕಾಲವನ್ನು ಕಳೆಯುತಿದ್ದರು (೪೮-೪೯).

ಒಂದುದಿವಸ ಸ್ವರ್ಗದಲ್ಲಿ ಸೌಧರ್ಮೇಂದ್ರನಿಗೆ ಆಸನ ಕಂಪವಾಯಿತು. ಆಗ ಪ್ರಾಕಶಾಸನನು ಓಹೋ! ಭರತಕ್ಷೇತ್ರದಲ್ಲಿ ತೀರ್ಥಕರನು ಅವತರಿಸುವನು! ಎಂಬುದನ್ನು ಜಲಕ್ಕನೆ ಅವಧಿಬೋಧದಿಂದ ತಿಳಿದು, ಕುಬೇರನನ್ನು ಕರೆದು "ಅಯ್ಯಾ ಮಿತ್ರನೇ, ಇನ್ನು ಆರು ತಿಂಗಳಲ್ಲಿ ಕಾಕಂದಿಯಲ್ಲಿ ತೀರ್ಥಕರನು ಅವತರಿಸುವನು. ನೀನು ಆ ನಗರದೊಳಗೆ ಪಂಚರನ್ನದ ಮಟಿಯನ್ನು ಸುರಿಸುವುದು" ಎಂದು ಅಪ್ಪಣೆಮಾಡಲು ಕುಬೇರನು ಇಂದ್ರನ ಬೆಸದಂತೆ ಮೂಜಿವರೆಕೋಟಿಯಷ್ಟು ರತ್ನಗಳನ್ನು ಮಟಿಯಂತೆ ಕಾಕಂದಿಯಲ್ಲಿ ಸುರಿಸಿದನು. ಬಟ್ಟಿಕ ಇಂದ್ರನು ಜಯರಾಮಾದೇವಿಯ ಗರ್ಭಶೋಧನ ಮೊದಲಾದ ಊಳಿಗಕ್ಕಾಗಿ ಕುಳಾಚಲಗಳಲ್ಲಿ ವಾಸಿಸುವ ಶ್ರೀ, ಹ್ರೀ, ಮೊದಲಾದ ಹಲವು ದೇವಿಯರನ್ನು ಕಳುಹಿಸಿಕೊಟ್ಟನು. ಅವರೆಲ್ಲರೂ ಒಟ್ಟಾಗಿಬಂದು ಜಯರಾಮಾದೇವಿಗೆ ನಮಸ್ಕರಿಸಿ ತಮ್ಮ ಖಂದ ಕೆಲಸವನ್ನು ನಿವೇದಿಸಿ, ಅನುಮತಿಯನ್ನುಪಡೆದು, ಅಡಪ, ಚಾಮರ ಮೊದಲಾದ ಎಲ್ಲಾ ಊಳಿಗದಲ್ಲೂ ವ್ಯಾಪೃತರಾಗಿರುತ್ತಾ ರಾಣಿಯನ್ನು ಸೇವಿಸುತ್ತಿದ್ದರು. (೫೦-೯೦)

ಒಂದು ಪುಣ್ಯದಿನದಲ್ಲಿ ಜಯರಾಮಾದೇವಿಯು ಚತುರ್ಥಸ್ನಾನವಂ ಮಿಂದು, ಬೆಳ್ವಸದನಂ ಗೊಂಡು ಭೂಪನ ಸೂಚಿಸ್ಸಿವಂದು ಸುಖಸುಪ್ತೆಯಾಗಿರ್ದು (೯೧-೯೭) ನಿಶಾವಸಾನದಲ್ಲಿ ಸಿಂಹ, ಆನೆ ಮೊದಲಾದ ಹದಿನಾರು ವಸ್ತುಗಳನ್ನು ಸ್ವಪ್ನದಲ್ಲಿ ಕಂಡು, ಒಡನೆಯೇ ಪ್ರಭಾತಕೀತವಮಾರುತ ನಿಂದಲೂ, ವಂದಿಸ್ತುತಿಗಳಿಂದಲೂ ಎಚ್ಚಿತ್ತು, ಸ್ನಾನ ಮೊದಲಾದ ನಿತ್ಯಕೃತ್ಯಗಳನ್ನು ನಿರ್ವರ್ತಿಸಿ ಕೈಗೆಯ್ದು ಪರಿಜನಪರೀತೆಯಾಗಿ ಆಸ್ಥಾನಕ್ಕೆಬಂದು ಅರಸನ ಪಕ್ಕದ ಅರ್ಧಾಸನದಲ್ಲಿ ಕುಳಿತು ತನ್ನ ಕಂಡ ಕನಸೆಲ್ಲವನ್ನೂ ಮನಃಪ್ರಿಯನಲ್ಲಿ ಬಿನ್ನವಿಸಿದಳು. ಆ ಅರಸು ಅವಧಿ ಬೋಧದಿಂದ ಆ ಸ್ವಪ್ನಗಳ ಫಲವನ್ನೆಱೀತು ಮನಃಪ್ರಿಯೆಯನ್ನು ನೋಡಿ, "ವಲ್ಲಭೇ ಈ ಸ್ವಪ್ನಫಲಗಳ ಹೆಚ್ಚು ವಿವರಣವು ಸಾಕು. ನಿನ್ನುದರದಲ್ಲಿ ತೀರ್ಥಕರನು ಅವತರಿಸುವನು" ಎನ್ನಲು ಆಕೆಯು ತುಂಬಾಸಂತಸಗೊಂಡು ತನ್ನಂತಃಪುರಕ್ಕೆ ಹಿಂದಿರುಗಿ ಬಂದು ಸುಖದಲ್ಲಿರ್ದ್ದಳು. (೯೭-೧೧೭)

ಅತ್ತ ಪ್ರಾಣತಕಲ್ಪದಲ್ಲಿ ದೇವನಾಗಿದ್ದ ಮಹಾಪದ್ಮಚರನು ತನ್ನ ಸ್ವರ್ಗಸುಖಾನುಭವ ಹೇತುವಾಗಿರ್ದ ಪುಣ್ಯವು ಕುಂದಲು, ಫಾಲ್ಗುಣಕೃಷ್ಣನವಮೀರಾತ್ರ್ಯಂತದಲ್ಲಿ ಮೂಲ ನಕ್ಷತ್ರದಲ್ಲಿ ಜಯರಾಮಾ ಮಹಾದೇವಿಯ ಗರ್ಭವನ್ನು ಪ್ರವೇಶಿಸಿದನು. ಜಯರಾಮಾದೇವಿಯ ಗರ್ಭವು ದಿನದಿನಕ್ಕೂ ಬಳೆಯುತ್ತಿದ್ದಿತು. ಸುಗ್ರೀವ ಮಹಾರಾಜನು ಅವಳು ಬಯಸಿದ ವಸ್ತುವು ಸ್ವರ್ಗದಲ್ಲಿದ್ದರೂ ಬಿಡದೆ ತರಿಸಿಕೊಟ್ಟು ಆಕೆಯ ಗರ್ಭಿಣೀದೋಹದವನ್ನು ಕೊರತೆಯಿಲ್ಲದೆ ನೆರವೇರಿಸುತ್ತಿದ್ದನೆಂಬಲ್ಲಿಗೆ.

ಒಂಭತ್ತನೆಯ ಆಶ್ವಾಸಂ
ಮುಗಿದುದು.

ದಶಮಾಶ್ವಾಸಂ
(ದೇವಾಗಮವರ್ಣನಂ)

ಇಂತು ಪರಿಪೂರ್ಣಗರ್ಭಿಯಾದ ಜಯರಾಮಾದೇವಿಗೆ ನವಮಾಸವು ತುಂಬಲು ಮೈಜನನ ಮಾಸದಲ್ಲಿ,ಮಾರ್ಗಶಿರ ಬಹುಳ ದಶಮಿಯ ದಿವಸ, ತ್ರೈಲೋಕ್ಯನಾಥನಾದ ಜಿನನು ಆಕೆಯ ಗರ್ಭದಿಂದವತರಿಸಿದನು. ಆ ಸಮಯದಲ್ಲಿ ಪಂಚಭೂತಗಳೂ ಪ್ರಸನ್ನವಾಗಿದ್ದುವು. ದೇವತೆಗಳ ದುಂದುಭಿ ಧ್ವನಿ, ಪುಷ್ಪವರ್ಷ ಮೊದಲಾದ ಹಲವು ಮಹಾಪುರುಷಜನನ ಸೂಚಕವಾದ ಅದ್ಭುತಕಾರ್ಯಗಳು ಸಂಭವಿಸಿದುವು. (೧-೪) ಸೌಧರ್ಮೆಂದ್ರನು ತನ್ನ ಆಸನ ಕಂಪವಾಗಲು ಅವಧಿಜ್ಞಾನದಿಂದ ಭೂಲೋಕದಲ್ಲಿ ಜಿನನು ಅವತರಿಸಿರುವುದನ್ನು ತಿಳಿದು, ಸಂತುಷ್ಟನಾಗಿ ಚತುರ್ವಿಧಾಮರಸಂದೋಹದಿಂ ಕೂಡಿ ಕಾಕಂದಿಗೆ ಬಂದು, ಆ ನಗರದ ಹೊರಗಡೆಯಲ್ಲಿಯೇ ಪರಿವಾರದವರನ್ನು ನಿಲ್ಲಿಸಿ ಶಚಿಯೊಡಗೂಡಿ ಸುಗ್ರೀವರಾಜನ ರಾಜಭವನಕ್ಕೆ ಬಂದು ಸೂತಿಕಾಗೃಹದ ಬಾಗಿಲಲ್ಲಿ ನಿಂತು, ಮಗುವನ್ನೆತ್ತಿಕೊಂಡು ಬರುವಂತೆ ಬೆಸನಿತ್ತು ಶಚಿಯನ್ನು ಸೂತಿಕಾಗೃಹಕ್ಕೆ ಕಳುಹಿಸಲು ಆ ಶಚಿಯು ಸೂತಿಕಾಗೃಹವನ್ನು ಹೊಕ್ಕು ಆ ಜಿನಬಾಲನನ್ನು ತನ್ನ ಕೈಯ್ಗಳಲ್ಲಿ ಎತ್ತಿಕೊಂಡು ಆಕೆಯ ಮಗ್ಗುಲಲ್ಲಿ ಮಾಯಾ ಶಿಶುವೊಂದನ್ನು ಮಲಗಿಸಿ ಹೊರಗೆ ಬಂದು ಐರಾವತಸ್ಕಂಧಾಸೀನನಾಗಿದ್ದ ತನ್ನ ಪತಿಯ ಕೈಯಲ್ಲಿ ಕೊಟ್ಟಳು. (೫-೧೪) ಇಂದ್ರನು ಆ ಜಿನಶಿಶುವನ್ನು ಭಕ್ತಿಯಿಂದೆತ್ತಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡು ಆನಂದಸಾಗರದಲ್ಲಿ ಮುಳುಗಿದನು. ಈಶಾನೇಂದ್ರಸನತ್ಕುಮಾರಮಾಹೇಂದ್ರ ಕಲ್ಪೇಂದ್ರರು ತಮ್ಮತಮ್ಮ ಆನೆಗಳನ್ನು ಐರಾವತದ ಪಕ್ಕಕ್ಕೆ ಚಾಚಿದರು. ಈಶಾನೇಂದ್ರನು ಬೆಳ್ಗೊಡೆಯನ್ನು ಹಿಡಿದನು. ಸನತ್ಕುಮಾರಮಾಹೇಂದ್ರ ಕಲ್ಪಾಧಿಪತಿಗಳು ಚಾಮರಗಳನ್ನು ಬೀಸುತ್ತಿದ್ದರು. ಬ್ರಹ್ಮಬ್ರಹ್ಮೋತ್ತರ ಲಾಂತವ ಕಾಪಿಷ್ಠ ಕಲ್ಪಾಧಿಪತಿಗಳು ಕುಂಚವನ್ನಿಕ್ಕಿದರು. ಉಳಿದ

ಶುಕ್ರ ಮಹಾಶುಕ್ರ ಮೊದಲಾದ ಕಲ್ಪಪತಿಗಳೊಂಬದಿಂಬರುಂ ಅಖಿಳಪಾಳಿ ಧ್ವಜಗಳನ್ನು ಹಿಡಿದರು. ಇಂತು ಸಕಲವೈಭವದೊಡನೆ (೧೯-೨೬) ಇಂದ್ರನು ಜಿನನ ಜನ್ಮಾಭಿಷೇಕಕಲ್ಯಾಣವನ್ನು ನೆರವೇರಿಸಲು ಮುಂದರಾಭಿಮುಖನಾದನು ನಾರ್ಥ ಸಪ್ತಕೋಟಿ ದೇವಭೇರಿಗಳು ಮೊಳಗಿದುವು. ಇಂದ್ರನ ಸನ್ನೆಯನ್ನರಿದು ದೇವತೆಗಳೆಲ್ಲರೂ ಹಾರಿಗೊಂಡು ತಂತಮ್ಮ ವಿಮಾನಂಗಳಲ್ಲಿ ಕುಳಿತು ಮುಂದರಾಭಿಮುಖವಾಗಿ ಹೊರಟರು. ಆ ದೇವಾಗಮನವು ತುಂಬಾರಮಣೀಯವಾಗಿತ್ತು. ಆಗ ಐರಾವತವು ವಿಗುರ್ವಣದಿಂದ ಅದ್ಭುತವಾದ ರೂಪವನ್ನು ತಾಳಿ ಹೊರಟಿತು. (೨೭-೪೫) [ಅದಕ್ಕೆ ಮೂವತ್ತೆರಡು ಮುಖಗಳು. ಒಂದೊಂದು ಮುಖಕ್ಕೂ ಕೊಂಬುಗಳೆಂಟೆಂಟು, ಒಂದೊಂದು ಕೊಂಬಿನಲ್ಲೂ ಎರಡೆರಡು ಕೊಳಗಳು. ಒಂದೊಂದು ಕೊಳದಲ್ಲಿಯೂ ಅರಳ್ದ ಕಮಲಗಳು ಮೂವತ್ತೆರಡು. ಒಂದೊಂದುಕಮಲಕ್ಕೂ ದಳಗಳು ಮೂವತ್ತೆರಡು, ಒಂದೊಂದು ದಳದಮೇಲೂ ನರ್ತಿಸುವ ಅಪ್ಸರಸ್ತ್ರೀಯರು ಮೂವತ್ತೆರಡುಮಂದಿ ಅವರು ಆ ಎಸಳ್ಗಳನ್ನು ಮೆಟ್ಟ್ಯದೆಯೇ ನರ್ತಿಸುತ್ತಿರುವರು.] (೪೫-೫೮) ಇಂತು ದೇವತೆಗಳು ಬರೆ ಬರೆ ಮುಂದರಗಿರಿಯು ಮುಂದೆ ಕಣ್ಗೆ ಗೋಚರಿಸಿತು. ಇಂದ್ರನು ಅದರ ಪ್ರಕೃತಿ ಸೌಂದರ್ಯವನ್ನು ಶಚಿಗೆ ತೋರಿಸಿ ವರ್ಣಿಸುತ್ತಾ (೪೬-೬೪) ಖಂದು ಮುಂದರಗಿರಿಯನ್ನು ಪ್ರದಕ್ಷಿಣ ನಮಸ್ಕಾರಂಗಳಿಂದರ್ಚಿಸಿ ದೇವತಾಪರಿವಾರದೊಡನೆ ಮೇಲಕ್ಕೆ ಏಱಿ, ದನು. ಭದ್ರಶಾಲ, ನಂದನ ಸೌಮನಸ, ಪಾಂಡುಕವೆಂಬ ಪೂರ್ವಾದಿಯಾಗಿ ನಾಲ್ಕುದಿಕ್ಕಿನ ಮೇಖಲೆಗಳನ್ನು ತೊಪಿಲ್ದು ಪಾಂಡುಕವನದ ಪೂರ್ವದಿಗ್ಭಾಗದಲ್ಲಿ ಪಳಚ್ಚನಿಸಿವ ಅರ್ಧಚಂದ್ರಾಕೃತಿಯ ಪಾಂಡುಕಶಿಲಾತಳವನ್ನು ಮುಟ್ಟಿವಂದು (೬೬-೭೩) ಆ ಕಲ್ಲಿನಮೇಲೆ ಅಭಿಷವಮಂಡಪವನ್ನು ಕುಬೇರನಿಂದ ನಿರ್ಮಾಪಿಸಿ ಅದರ ಮಧ್ಯದಲ್ಲಿ ಜಿನಶಿಶುವನ್ನು ಪೂರ್ವಾಭಿಮುಖವಾಗಿ ಮಲಗಿಸಿದನು. ಎಲ್ಲ ದಿಕ್ಪಾಲಕರೂ ತಂತಮ್ಮ ವಾಹನಾಯುಧ ಕಾಂತಾಪರಿಜನ ವ್ಯಸನಾಧನಚಿಹ್ನಾನಂತ ವಿಭೂತಿಗಳಿಂದ ಉಚಿತಪ್ರದೇಶಗಳಲ್ಲಿ ನಿಂತರು. ಇಂದ್ರಾಣಿಯು ಮಂಗಳ ವಸ್ತುಗಳೆಲ್ಲವನ್ನೂ ಪಸರಿಸುತ್ತಿದ್ದಳು. ಇತರ ದೇವಿಯರೂ ಆ ಕಾರ್ಯದಲ್ಲಿ ಸಹಾಯಮಾಡುತ್ತಿದ್ದರು (೭೪-೮೬) ದೇವತೆಗಳೆಲ್ಲರೂ ಅಪ್ಯಯೋಜನಾವಗಾಹದ ಅಷ್ಟಕೋಣಗಳಿಂದ ಶೋಭಿಸುವ ನವರತ್ನಗಳ ಕೊಡೆಗಳನ್ನು ಹಿಡಿದುಕೊಂಡು ಕ್ಷೀರ ಸಮುದ್ರದವರೆಗೂ ಎರಡು ವರಸೆಯಾಗಿ ನಿಂತರು. ಕಾಳಾಗುರುವಿನ ಧೂಪದಹೊಗೆಯು ಆ ಮಂಟಪವನ್ನೆಲ್ಲಾ ಆವರಿಸಿ ದಿಗಂತಗಳನ್ನೂ ಮುಟ್ಟುತ್ತಿತ್ತು. ಇಂದ್ರನು, ಗಂಧಾಕ್ಷತಪುಷ್ಪಗಳಿಂದ ಜಿನನಾಥನಿಗ ಅರ್ಘ್ಯೋದ್ಧರಣೋಚಿತ ಕ್ರಿಯೆಯನ್ನು ನೆರವೇರಿಸಿದನೆಂಬಲ್ಲಿಗೆ

ದಶಮಾಶ್ವಾಸಂ

ಮುಗಿದುದು.

ಏಕಾದಶಾಶ್ವಾಸಂ

(ಜನ್ಮಾಭಿಷೇಕೋತ್ಸವ ವರ್ಣನಂ)

ಅನಂತರದಲ್ಲಿ ಪ್ರಥಮದ್ವಿತೀಯ ಕಲ್ಪಾಮರೇಂದ್ರರ್ ಸರ್ವಜ್ಞನ ಉಭಯಪಾರ್ಶ್ವಂಗಳಲ್ಲಿಯುಂ ಉತ್ತರದಕ್ಷಿಣಾಭಿಮುಖರುಂ, ಸಜ್ಜೀಕೃತವುಜ್ಜನೋಪಕರಣರುವಾಗಿ ಮಜ್ಜನಂಗೆಯ್ಯಲುಜ್ಜುಗಿಸಿದರ್. ಹಲವು ದೇವವಾದ್ಯಗಳು ಭೋರ್ಗರೆಯುತ್ತಿದ್ದುವು. ದೇವತೆಗಳೆಲ್ಲರೂ ನೊಸಲಲ್ಲಿ ಕೆಯ್ಗಳನ್ನುಮುಗಿದು ಜಯಜಯಧ್ವನಿಯನ್ನು ಮಾಡಿದರು. ಇಂದ್ರನು ಪದ್ಮಾದಿಸರೋವರಗಳ ನೀರಿನಿಂದೆ ಮೊದಲು ಅಭಿಷೇಕಮಾಡಿದನು. ಕ್ರಮಕ್ರಮವಾಗಿ ಎಳನೀರು, ಕಬ್ಬಿನರಸ, ಮಾವಿನಹಣ್ಣಿನರಸ ಇವುಗಳ ಅಭಿಷೇಕವೂ ನಡೆಯಿತು. ಬಳಿಕ ಇಂದ್ರನು ಕ್ಷೀರಸಮುದ್ರದವರೆಗೂ ಗೋಡೆಕಟ್ಟಿದಂತೆ ವರಸೆಯಾಗಿ ನಿಂತು ನೀರನ್ನು ನವರತ್ನಕುಟಗಳಿಂದ ಮೊಗೆದು ದೇವತೆಗಳು ನೀಡುತ್ತಿರಲು

(೧-೨೦) ವಿಗುರ್ವಣರೂಪದಿಂದೆ ಸಾವಿರಾರು ತೋಳುಗಳನ್ನು ಪಡೆದು ಆ ಗಡಿಗೆಗಳೆಲ್ಲವನ್ನೂ ತೆಗೆದು ಕೊಂಡು ಜಿನಶಿಶುವಿಗೆ ಅಭಿಷೇಕಮಾಡಿದನು. ಜಿನಶಿಶುವು ತನ್ನ ಮೇಲೆ ನಿರಂತರವಾಗಿ ಸುರಿಯುತ್ತಿದ್ದ ನೀರಿನಿಂದ ಉಸಿರುಕಟ್ಟಿ ಒಂದಾವೃತ್ತಿಸೀನಲು ದೇವವಿಮಾನ ಕೋಟಿಗಳೆಲ್ಲವೂ ದಿಕ್ಕುಪಾಲಾಗಿ ಚೆದರಿಹೋದುವು. ಕ್ಷೀರಾಭಿಷೇಕಕಾರ್ಯವು ಮುಗಿದ ಬಳಿಕ ಗಂಧೋದಕನ್ನಾನವನ್ನು ಮಾಡಿಸಲು (೨೦-೪೬) ಆ ಗಂಧೋದಕ ವ್ಯಾಪನೆಯಿಂದ ಆ ದೇವತೆಗಳಿರಲಿ ಆ ಬೆಟ್ಟದ ಕಲ್ಮರಗಿಡು ಬಳ್ಳಿಗಳೆಲ್ಲವೂ ಪವಿತ್ರವಾದುವು (೪೬-೪೦) ಇಂತು ಇಂದ್ರನು ಜನ್ಮಾಭಿಷೇಕವನ್ನು ಕ್ರಮವಾಗಿ ನಿರ್ವರ್ತಿಸಿ, ಅಕ್ಷತಾದ್ಯಷ್ಟವಿಧಾರ್ಚನಂಗಳನ್ನು ಮಾಡಿ ವಸ್ತುಗುಣರೂಪಸ್ತವಗಳಿಂದ ಸ್ತುತಿಯಿಸಿ, ಮೆಯ್ಯನ್ನು ಒಣಗಿದ ವಸ್ತ್ರದಿಂದೊರಸಿ (೪೧-೪೯) ನೀರಾಜನವನ್ನು ಸಮರ್ಪಿಸಿದನು. (೬೦) ಬಳಿಕ ಶಚಿಯು ಜಿನಶಿಶುವನ್ನು ಕೆಯ್ಗಳಿಂದ ಹಿಡಿದೆತ್ತಿ ತನ್ನ ತೊಡೆಯಲ್ಲಿ ಮಲಗಿಸಿಕೊಂಡು ಮೆಯ್ಗೆ ಸುಗಂಧವನ್ನು ಲೇಪಿಸಿ, ಅನರ್ಘವಾದ ನವರತ್ನದಾಭರಣಗಳನ್ನು ತೊಡಿಸಿದಳು. ಇಂತಲಂಕೃತನಾಗಿ ಶೋಭಿಸುವ ಜಿನ ಶಿಶುವನ್ನು ಇಂದ್ರನು ತನ್ನ ಸಾವಿರ ಕಣ್ಣುಗಳಿಂದಲೂ ನೋಡಿನೋಡಿ ತೃಪ್ತಿಯನ್ನೇ ಪಡೆಯಲಿಲ್ಲ (೬೦-೬೪) ಎಂಬಲ್ಲಿಗೆ

ಪನ್ನೊಂದನೆಯ ಆಶ್ವಾಸಂ
ಮುಗಿದುದು.

ದ್ವಾದಶಾಶ್ವಾಸಂ

(ಕುಮಾರಪರಿಣಯನೋತ್ಸವ ವರ್ಣನಂ)

ಅಂತು ದೇವೇಂದ್ರನು ಜನ್ಮಾಭಿಷೇಕೋತ್ಸವವನ್ನು ಸಾಂಗವಾಗಿ ನಿರವೇರಿಸಿ, ಐರಾವತವನ್ನು ಏಱಿಸಿ, ಸಕಲ ದೇವತೆಗಳಿಂದಲೂ ಪರಿವೃತನಾಗಿ ದಕ್ಷಿಣಾಭಿಮುಖವಾಗಿ ಪ್ರಯಾಣ ಹೊರಟು ಕಾಕಂದೀನಗರವನ್ನು ಬಂದು ಸೇರಿ ಮುನ್ನೆವೆ ನಿರ್ಮಿತಮಾಗಿರ್ದ ಮಣಿಮಂಟಪಮಧ್ಯದಲ್ಲಿ ತೊಳಗುವ ಸಿಂಹಾಸನದಮೇಲೆ ಆ ಶಿಶುವನ್ನು ಇರಿಸಿ, ಅಕ್ಕಪಕ್ಕಗಳಲ್ಲಿ ಉಚಿತಾಸನಗಳಲ್ಲಿ ದಿಕ್ಪಾಲರೊಡನೆ ಕುಳಿತುಕೊಂಡಿದ್ದನು. ಸುಗ್ರೀವಮಹಾರಾಜನು ತನ್ನ ಪಟ್ಟಮಹಿಷಿಯೊಡಗೂಡಿ ಪುತ್ರಮುಖಾವಲೋಕನೋತ್ಸುಕನಾಗಿ ಅಲ್ಲಿಗೆ ಬಂದು ಎರಡನೆಯ ದಿವಿಜರಾಜನಂತ ಸಮುಚಿತವಾದ ಆಸನದಲ್ಲಿ ಕುಳಿತನು. (೧-೭) ಆಗ ಇಂದ್ರನು ಸುಗ್ರೀವಮಹಾರಾಜನನ್ನು ನೋಡಿ, ಮಹಾತ್ಮನೇ, ತ್ರೈಲೋಕ್ಯಾಧೀಶನಾದ ಈ ಜಿನನು ನಿನಗೆ ಮಗನಾಗಿರುವನು. ನಾನು ಈತನ ಜನ್ಮಾಭಿಷೇಕವನ್ನು ಮಂದರಗಿರಿಯಲ್ಲಿ ನಿರ್ವರ್ತಿಸಿ ಕೃತಾರ್ಥನಾಗಿ ಮತ್ತೆ ತಂದು ಇಲ್ಲಿ ಬಿಟ್ಟಿರುವೆನು. ನೀವು ಭುವನತ್ರಯ ಗುರುವಿಗೂ ಗುರುಗಳಾದುದರಿಂಹ ನಿಮ್ಮಂತಹ ಧನ್ಯರು ಮತ್ತಾರಿರುವರು! ಎಂದು ವಿನಯೋಕ್ತಿಗಳಿನ್ನಾಡಿ ಅವರನ್ನು ಉಚಿತ ದ್ರವ್ಯಗಳಿಂದ ಪೂಜಿಸಿದನು. ಸುರಜನರೂ ಪುರಜನರೂ ಪರಮಾನಂದ ಪರವಶೀಭೂತರಾಗಿರಲು ಅರಸನು ಜಾತಕರ್ಮೋತ್ಸವಕಲ್ಯಾಣದೊಸಗೆಯನ್ನು ಮಾಡಿಸಿದನು. (೪-೧೫) ನಗರವೆಲ್ಲವೂ ಧ್ವಜಪತಾಕಾದಿಗಳಿಂದ ಅಲಂಕೃತವಾಗಿ ಶೋಭಿಸುತ್ತಿತ್ತು. ಆ ಮಹೋತ್ಸವದಲ್ಲಿ ಇಂದ್ರನ ಬೆಸದಿಂದ ಕಲ್ಪಾಮರಮುಖರಿಗಳು ಮೇಲಾಗಿ ಹಾಡಿದರು. ದಿವಿಜೇಂದ್ರವಾದಕರು ವಾದ್ಯಗಳನ್ನು ಬಾಜಿಸಿದರು (೧೬-೨೬) ಇಂತಾ ದೇವಸಂಗೀತವು ತುಂಬಾಮನೋಹರವಾಗಿತ್ತು.

ಈ ಸಂದರ್ಭದಲ್ಲಿ ಇಂದ್ರನು ಪುಷ್ಪಾಂಜಲಿಯನ್ನು ಚೆಲ್ಲಿ ರಂಗಂಬೊಕ್ಕು ಆರಭಟೀವೃತ್ತಿಯಿಂದ ತಾಂಡವವನ್ನು ಆರಂಭಿಸಿದನು. (೨೪-೪೦) ಊರ್ವಶಿ ಮೊದಲಾದ ಅಚ್ಚರಿಯರೂ ನಾಟ್ಯವಾಡಿದರು. ಇಂತು ಲಾಸ್ಯತಾಂಡವಗಳು ನೋಕರ ಕಣ್ಮನಗಳನ್ನು ಆಕರ್ಷಿಸುತ್ತಿತ್ತು. (೪೦.೪೪)

ಕೆಲವುಮಂದಿ ಆಚ್ಚರಿಯರೂ ದೇವಕುಮಾರರೂ ಇಂದ್ರನ ಆಂಗ್ಳೈ, ತೋಳು, ಉಗುರುಗಳು ಇವುಗಳ ಮೇಲೆ ನಿಂತು ನಾಟ್ಯವಾಡಿದರು. (೪೫-೪೬) ಇಂದ್ರನ ಈ ಆನಂದ ನೃತ್ಯವು ಬ್ರಹ್ಮಾಂಡವೆಲ್ಲವನ್ನೂ ವ್ಯಾಪಿಸಿತು. ಸಭೆಯೆಲ್ಲವೂ ನಾಟ್ಯರಸಾಮೃತಪೂರದಲ್ಲಿ ತೇಂಕಾಡುತ್ತಿತ್ತು. ಇಂತು ಇಂದ್ರನು ತನ್ನ ನರ್ತನವು ಮುಗಿದ ಬಳಿಕ (೪೬-೫೦) ನಾಮಕರಣ ಮಹೋತ್ಸವ ಸಮಯದಲ್ಲಿ ವಿತತ ಪುಣ್ಯೋದಯವುಳ್ಳವನೂ, ಕುವಳಯಕಮಲೋತ್ಸವಕರನೂ ಆದ ಈ ಜಿನಕುಮಾರನಿಗೆ ಸುವಿಧಿ, ಪುಷ್ಪದಂತ ಎಂಬ ಅನ್ವರ್ಥವಾದ ಹೆಸರನ್ನಿಟ್ಟು, (೫೩) ಹಲವು ಮಂದಿ ದೇವತೆಗಳಿಂದ ದಾದಿಯರನ್ನು ಈ ಜಿನಶಿಶುವಿನ ಪೋಷಣೆಗೆ ನಿಯಮಿಸಿ, ಓರಗೆಯ ಹಲವು ದೇವಕುಮಾರರನ್ನು ಜಿನಶಿಶುವಿನ ಆಟಪಾಟಗಳಿಗೆಯರಾಗಿರುವಂತೆ ಬೆನಸಿ ಕೃತಾರ್ಥನಾಗಿ ತನ್ನ ಕಲ್ಪಕ್ಕೆ ಪ್ರಯಾಣ ಬಳೆಸಿದನು. (೫೩-೫೭) ಇತ್ತ ಜಿನಾರ್ಭಕನು ಏಟಿಟ್ಟಿಗೆವಾಡಿವದ ತಿಂಗಳಂತೆ ದಿನದಿನಕ್ಕೂ ತೇಜೋವಿಶೇಷವನ್ನು ಪಡೆದು ಬಳೆಯುತ್ತಿದ್ದನು. ಜಿನಾರ್ಭಕನ ಅತಿಶಯವಾದ ಬಾಲಕೇಳಿಗಳು ತಂದೆತಾಯ್ವಿರಿಗೆ ಅಧಿಕವಾದ ಸಂತೋಷವನ್ನುಂಟುಮಾಡಿದುವು. (೫೮-೬೭) ಅಂತು ಜಿನಕುಮಾರನು ತನ್ನ ಬಾಲ್ಯಕಾಲವನ್ನು ಕಳೆದು ಕೌಮಾರಕಾಲದಲ್ಲಿ ಸಕಳವಿದ್ಯಾವಿಳಾಸ ಭವನನಾದನು. ಕ್ಷತ್ರಿಯೋಚಿತವಾದ ವಾಹನಾದಿಗಳನ್ನು ಏಜಿಸುವುದು, ಅಸ್ತ್ರಶಸ್ತ್ರಗಳನ್ನು ಪ್ರಯೋಗಿಸುವುದು ಮೊದಲಾದ ವೀರವಿದ್ಯೆಗಳಲ್ಲಿಯೂ ಈ ಜಿನಕುಮಾರನು ಅದ್ವಿತೀಯನಾದನು. ದೇವಸ್ತ್ರೀಯರೂ, ದೇವಕುವರರೂ ಅತ್ಯಂತ ಭಕ್ತಿವಿನಯ ಪ್ರೀತಿಗಳಿಂದ ಜಿನಕುಮಾರನನ್ನು ಓಲಗಿಸುತ್ತಿದ್ದರು, (೬೭-೭೫) ಈ ಜಿನಕುಮಾರನ ಚರಮದೇಹವು ಅತ್ಯುತ್ತಮವಾದ ಲಕ್ಷಣಗಳಿಂದ ಕೂಡಿ ಚಂದ್ರಬಿಂಬದಂತೆ ತೊಳಗುತ್ತಿತ್ತು. (೭೬-೮೦) ಬಳಿಕ ಕೌಮಾರಕಾಲವು ಕಳೆದಬಳಿಕ ಯೌವನಕಾಲವು ಪ್ರಾಪ್ತವಾಯಿತು. ಸುಗ್ರೀವಮಹಾರಾಜನು ಮಗನ ಯೌವನವನ್ನು ನೋಡಿ ವಂಶಾಭಿವೃದ್ಧಿಗಾಗಿ ಆತನಿಗೆ ಮದುವೆಯನ್ನು ಮಾಡಬೇಕೆಂಬ ಸಂಕಲ್ಪದಿಂದ ತನ್ನ ಹೆಂಡತಿಯೊಡನೆ ಈ ವಿಷಯವನ್ನಾಲೋಚಿಸಿ ಮಗನ ಹತ್ತಿರಬಂದು ಕುಳಿತು ಭಯಭಕ್ತಿಗಳಿಂದ ಕನ್ಯಾವರಣ ವಿಷಯವನ್ನು ತಿಳಿಸಿ ನಗೆಮೊಗದಿಂದ ಅತನ ಅನುಮತಿಯನ್ನು ಪಡೆದಂತಾಗಿ ಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸಿ, ಮದುವೆಗೆ ತಕ್ಕ ಸಾಮಗ್ರಿಗಳನ್ನು ಅಣಿಮಾಡಿ ಕುಲೀನೆಯರಾದ ಸಾವಿರಮಂದಿ ಕ್ಷತ್ರಿಯ ಕುಮಾರಿಯರನ್ನು ತಂದು ಶುಭಲಗ್ನದಲ್ಲಿ ವಿವಾಹ ಮಂಗಳೋತ್ಸವವನ್ನು ನಿರವೇರಿಸಿದನು. (೮೦-೮೬) ಇಂದ್ರಾದಿಗಳೆಲ್ಲರೂ ಬಂದು ಈ ಉತ್ಸವವನ್ನು ಸ್ವಲ್ಪವೂ ಕೊರತೆಯಿಲ್ಲದಂತೆ ನಡೆಯಿಸಿದರು. ಸುವಿಧಿಕುಮಾರನು ನವವಧುಗುಳೊಡವೆರೆದು ಸುಖವಾಗಿರುತ್ತಿದ್ದನು. (೮೭-೧೦೩) ಸುಗ್ರೀವ ಮಹಾರಾಜನು ಒಂದು ದಿವಸ ಪ್ರಾಪ್ತ ಯೌವನನೂ, ಕೃತದಾರಪರಿಗ್ರಹನೂ ಆದ ಸುವಿಧಿಕುಮಾರನಿಗೆ ಒಳ್ಳೆಯ ಮುಹೂರ್ತದಲ್ಲಿ ರಾಜ್ಯಾಭಿಷೇಕ ಮಹೋತ್ಸವವನ್ನು ನಡೆಸಿದ (೧೦೪) ನೆಂಬಲ್ಲಿಗೆ

ಪನ್ನೆರಡನೆಯ ಆಶ್ವಾಸಂ
ಮುಗಿದುದು.

ತ್ರಯೋದಶಾಶ್ವಾಸಂ

(ಪರಿನಿಷ್ಕ್ರಮಣ ಕಲ್ಯಾಣವರ್ಣನಂ)

ಪುಷ್ಪದಂತ ಮಹಾರಾಜನು ತಂದೆಯಿತ್ತ ರಾಜ್ಯಭಾರವನ್ನು ವಿಧಿಯಿಲ್ಲದೆ ತಳೆದು ಶತ್ರುನಿಗ್ರಹ ಶಿಷ್ಟಪರಿಪಾಲನಕ್ರಮದಿಂದ ಧರ್ಮಮಾರ್ಗದಲ್ಲಿ ರಾಜ್ಯವನ್ನಾಳಲಾರಂಭಿಸಿದನು. (೧-೭) ಆತನ ಸಾವಿರಪತ್ನಿಯರಲ್ಲಿ ಚಂದ್ರಿಳವುರಾಧಿಪ ಸಿಂಹರಥರಾಜನ ಮಗಳು ರೂಪ ವಿಭ್ರಮ ವಿಲಾಸ

ಗುಣಾನ್ವಿತೆಯಾದ ಚಂದ್ರಿಕಾದೇವಿಯು ಪಟ್ಟಮಹಿಷಿಯಾಗಿದ್ದಳು. ಇಂತು ಕೆಲಕಾಲವು ಕಳೆಯಲು ಚಂದ್ರಿಕಾದೇವಿಯು ಗರ್ಭವನ್ನು ಧರಿಸಿ ಕೀರ್ತಿಧರನೆಂಬ ಸುಕುಮಾರನನ್ನು ಪಡೆದಳು. (೪-೧೦) ಬಬ್ಬಿಕ ಮಲಯಾನಿಲೆ, ಮದನಲತೆ, ಮಹಾನಂದೆ, ಜಯನಂದೆ, ಚಿತ್ರಲೇಖೆ, ಕನಕಲತೆ ಮೊದಲಾದ ಕೆಲವುಮಂದಿ ಪ್ರಸಿದ್ಧೆಯರಾದ ಅರಸಿಯರು ನರದೇವ, ಇಂದ್ರವರ್ಮ, ಹರಿಷೇಣ, ವಿಜಯ, ಅಶನಿಘೋಷ ಅನಂತ, ವರುಣ, ಅಜಬಾಹು, ಸಂಜಯ, ನಿರನುಪಕ್ರಾಣ, ಜಯ ಮೊದಲಾದ ಹಲವು ವೀರಸುತರನ್ನು ಪಡೆದರು. ದ್ವಿಗುಣಿಸಿದ ಚತುರ್ವಿಂಶತಿ ತೀರ್ಥಕರರಂತೆ ಈ ನಾಲ್ವತ್ತೆಣ್ಪರು ಕುಮಾರರೂ ಪ್ರಸಿದ್ಧರಾಗಿದ್ದರು. (೪-೧೬) ಇವರಲ್ಲಿ ಹಿರಿಯವನಾದ ಕೀರ್ತಿಧರನು ಯುವರಾಜ ಪಟ್ಟವನ್ನು ಪಡೆದನು. (೧೩-೧೫) ಇಂತು ಸುಖದಿಂದ ರಾಜ್ಯಭಾರಂಗೆಯ್ಯುತ್ತಿರ್ದ ಸುವಿಧಿಜಿನನಿಗೆ ಅಯ್ವತ್ತುಸಾವಿರ ಪೂರ್ವದೊಡನೆ ಇಪ್ಪತ್ತಯ್ದು ಪೂರ್ವಾಂಗಕಾಲವು ಕಳೆಯಿತು. (೧೬) ಆ ಕಾಲಕ್ಕೆ ಸರಿಯಾಗಿ ನಿದಾಘಕಾಲವು ಪ್ರಾಪ್ತವಾಯಿತು. ಸುವಿಧಿರಾಜನು ಉಪವನವಿಹಾರ ಶಿಶಿರಕೇಳೀಲೀಲೆಯಿಂದ ತತ್ಕಾಲೋಚಿತ ಕ್ರಿಯೆಗಳನ್ನಾಚರಿಸುತ್ತಿದ್ದನು. ಒಂದುದಿವಸ ಸೂರ್ಯಾಸ್ತಕಾಲದಲ್ಲಿ ಅರಸನು ಆಸ್ಥಾನವನ್ನು ವಿಸರ್ಜಿಸಿ ಚಂದ್ರಶಾಲೆಯನ್ನುನೇರಿ ತತ್ಕಾಲದಲ್ಲಿ ಉದಯಿಸಿ ವಿಜೃಂಭಿಸುತ್ತಿರುವ ಚಂದ್ರಬಿಂಬದ ರಾಮಣೀಯಕವನ್ನು ನೋಡುತ್ತಾ ಅಭಿನಂದಿಸುತ್ತಿರಲು ಆಕಾಶದಿಂದ ಒಂದು ಉಳ್ಕೆಯು ಭೋಂಕನೆ ನೆಲದಲ್ಲಿ ಬಿದ್ದಿತು. (೧೭-೨೬) ಅರಸನು ಅದನ್ನುನೋಡಿ ಸಂಸಾರರಾಜ್ಯ ಸಂಪತ್ತುಗಳಲ್ಲಿ ನಿರ್ವೇದಪರನಾಗಿ, (೨೭-೪೩) ದ್ವಾದಶಾನುಪ್ರೇಕ್ಷೆಗಳನ್ನು ಕ್ರಮವಾಗಿ ಸ್ಮೃತಿಪಥಕ್ಕೆ ತಂದು ನಿದಾಘಹೀನನಾಗಿ ಚಿಂತಿಸುತ್ತಿರಲು (೪೪) ಪ್ರಭಾತ ಶೀತ ಮಾರುತವು ಬೀಸಲಾರಂಭಿಸಿತು. (೪೮) ಕ್ರಮವಾಗಿ ಚಂದ್ರನು ಕಳೆಗುಂದಲು ಸೂರ್ಯನು ಉದಯಿಸಿದನು. (೪೯-೬೦) ಆ ಸಮಯದಲ್ಲಿ ಬ್ರಹ್ಮಲೋಕಾಂತದಿಂದ ಸಾರಸ್ವತಾದಿ ಎಂಟುಮಂದಿ ಲೋಕಾಂತಿಕ ದೇವರು ಬಂದು ಸುವಿಧಿಮಹಾರಾಜನಿಗೆ ರಾಜ್ಯಭೋಗಗಳನ್ನು ತ್ಯಜಿಸಿ ವಿರಕ್ತನಾಗಿ ಜಿನದೀಕ್ಷೆಯನ್ನು ತೆಗೆದುಕೊಳ್ಳುವ ವಿಷಯವನ್ನು ಎಚ್ಚರಿಸಿ ತಮ್ಮ ಲೋಕಗಳಿಗೆ ತೆರಳಿದರು. (೬೨-೭೧) ಬಬ್ಬಿಕ ಜಿನದೀಕ್ಷೆಯನ್ನು ಸ್ವೀಕರಿಸಲು ಕೃತಸಂಕಲ್ಪನಾದ ಸುವಿಧಿಯು ತನ್ನ ಹಿರಿಯಮಗನೂ, ಯುವರಾಜನೂ ಆಗಿದ್ದ ಕೀರ್ತಿಧರನಲ್ಲಿ ರಾಜ್ಯಭಾರವನ್ನಿಟ್ಟು ಪರಿನಿಷ್ಕ್ರಮಣಕ್ಕೆ ಸಿದ್ಧನಾದನು. (೭೨-೭೬) ಈ ವಿಷಯವನ್ನು ಆಸನಕಂಪದಿಂದ ಅರಿತ ಇಂದ್ರನು ಬಂದು, ಹಿಂದೆ ಮಂದರದಲ್ಲಿ ಜನ್ಮಾಭಿಷೇಕವನ್ನು ಮಾಡಿದಂತೆ ಇಂದು ಅರಮನೆಯಲ್ಲಿಯೇ ಪರಿನಿಷ್ಕ್ರಮಣಾಭಿಷೇಕಮಹೋತ್ಸವವನ್ನು ನೆರವೇರಿಸಿದನು. (೭೭-೮೦) ಇಷ್ಟರಲ್ಲಿಯೇ ಸೂರ್ಯಪ್ರಭವೆಂಬ ದಿವ್ಯ ಸಿವಿಗೆಯು ಸಿದ್ಧವಾಗಿ ಬಂದು ನಿಂತಿತು. ಸುವಿಧಿಜಿನನು ಸಿಂಹಾಸನದಿಂದಿಳಿದು ಸಿವಿಗೆಯನ್ನೇರಿದನು. ಮೊದಲು ಅರಸರು ಪಲ್ಲಕ್ಕಿಯನ್ನು ಹೊತ್ತುಕೊಂಡೊಯ್ದರು. ಬಬ್ಬಿಕ ನಭದಲ್ಲಿ ಪಲ್ಲಕ್ಕಿಯನ್ನು ಅಂಬರಚರರೂ, ಮತ್ತೆ ಪಲ್ಲಕ್ಕಿಯನ್ನು ಸುರಾಸುರರೂ, ಮುಂದೆ ಪಲ್ಲಕ್ಕಿಯನ್ನು ಇಂದ್ರರೂ ಹೊತ್ತು ಮುಂದುವರಿದರು. ಆ ಪುರಕ್ಕೆ ಸಮೀಪದಲ್ಲಿದ್ದ ಪುಷ್ಪಕೋದ್ಯಾನದಲ್ಲಿ ಸಿವಿಗೆಯನ್ನು ಇಂದ್ರರು ತಂದಿಳಿಸಿದರು. (೪೦-೪೭) ನಗರದಲ್ಲಿ ಪೌರರೂ, ಬಂಧುಜನಗಳೂ ಅರಸನ ವಿಯೋಗವನ್ನು ಸಹಿಸಲಾರದೆ ಹಲವು ಬಗೆಯಲ್ಲಿ ಹಂಬಲಿಸುತ್ತಿದ್ದರು. ರಾಣೀವಾಸದವರೆಲ್ಲರೂ ಅತ್ಯಧಿಕವಾದ ವಿರಹತಾಪದಿಂದ ದುಃಖಸಾಗರದಲ್ಲಿ ಮುಳುಗಿ ಹಲವು ಬಗೆಯಲ್ಲಿ ಹಂಬಲಿಸುತ್ತಿರುವುದನ್ನು ಕಂಡು ಸೌವಿದಲ್ಲರು ಅವರನ್ನು ಉಚಿತೋಕ್ತಿಗಳಿಂದೆ ಸಮಾಧಾನಮಾಡಿದರು. (೪೮-೫೦೧) ಇತ್ತ ಸುವಿಧಿರಾಜನು ಸಿವಿಗೆಯಿಂದಿಳಿದು ಆ ಪುಷ್ಪಕೋದ್ಯಾನದಲ್ಲಿ ಇಂದ್ರ

ನಿರ್ಮಾಪಿತವಾದ ಮಂಟಪದ ಮಧ್ಯದಲ್ಲಿ ಶೋಭಿಸುವ ಚಂದ್ರಕಾಂತಶಿಲಾಪಟ್ಟವನ್ನು ಏಱಿ ಕುಳಿತು. "ನಮಸ್ಸಿದ್ಧೇಭ್ಯಃ" ಎಂಬ ಮಂತ್ರೋಚ್ಚಾರಣ ಪುರಸ್ಸರವಾಗಿ ಆತ್ಮಕೇಶಾವಳಿಗಳನ್ನು ಪಱಿದು ಬಿಸುಟು, ಷಷ್ಠೋಪವಾಸದಿಂದ ಜಿನದೀಕ್ಷೆಯನ್ನು ಕೆಯ್ಕೊಂಡನು. ಬಳಿಕ ಇಂದ್ರನು ನಿರ್ವಾಣಪತಿಯಾದ ಸುವಿಧಿಜಿನನನ್ನು ಅರ್ಚಿಸಿ ತೃತೀಯ ಕಲ್ಯಾಣೋತ್ಸವವನ್ನು ನಿರ್ವರ್ತಿಸಿ ತನ್ನ ಕಲ್ಪಕ್ಕೆ ಹೊರಟು ಹೋದನು. ಆಸುವಿಧಿ ಮುನೀಶ್ವರನು ಧ್ಯಾನಾಧೀನವಾನಸನಾಗಿ ಆಱು ದಿವಸವಿರ್ದು ಮೂರನೆಯ ದಿವಸಂ ಕೆಯ್ಯತ್ತಿಕೊಂಡು ಪಾರಣೆಗಾಗಿ ಮಾರ್ಗಪ್ರಕಾಶವನ್ನು ಮಾಡಲೆಂದು ಈರ್ಯಾವಿಶುದ್ಧಿಯಿಂದ ಆ ಉದ್ಯಾನವನವನ್ನು ಬಿಟ್ಟು ಹೊರಟು ಬರುತ್ತಾ (೧೦೧-೧೧೪) ದಾರಿಯಲ್ಲಿ ಸಿಕ್ಕಿದ ಶೈಲಪುರವನ್ನು ಹೊಕ್ಕು ಆ ನಗರದಧಿರಾಜನ ಅರಮನೆಯ ಮುಂದೆ ಬರಲು ಪುಷ್ಪಮಿತ್ರನೆಂಬಾನಗರದರಸು ಮಂಗಳದ್ರವ್ಯಾಷ್ಟಕಗಳೊಡನೆ ಇದಿರ್ಗೊಂಡುವಂದು ಪಂಚಮುಷ್ಟಿಯಿಂ ಬಂದಿಸಿ ಶ್ರದ್ಧಾದಿ ಸಪ್ತಗುಣಗಳೂ ಪ್ರತಿಗ್ರಹಾದಿ ನವವಿಧಪುಣ್ಯಗಳೂ ಸಮಸಂದಿರಲು ಆ ಮುನಿವರನನ್ನು ನಿಲ್ಲಿಸಿದನು. ಅರಮನೆಯಲ್ಲೆಲ್ಲಾ ಸಂಪತ್ತು ಬಂದು ನೆರೆದಂತೆ ಅತ್ಯಂತಶೋಭೆಯೂ, ಜನಗಳೆಲ್ಲಿ ಉಲ್ಲಾಸವೂ ಮೇರೆ ವಿಱಿತ್ತು. (೧೧೪-೧೨೦) ಅರಸು ಆ ಮುನಿಯನ್ನು ಉತ್ತಮವಾದ ಪೀಠದಲ್ಲಿ ಕುಳ್ಳಿರಿಸಿ ತತ್ಪಾದಪದ್ಮಗಳನ್ನು ತೊಳೆದು ತತ್ತೀರ್ಥಸೇಚನದಿಂದ ಪುತ್ರಮಿತ್ರ ಕಳತ್ರ ಸಹಿತನಾಗಿ ಪರಿಶುದ್ಧನಾದ (೧೨೩) ನೆಂಬಲ್ಲಿಗೆ

ಪದಿಮೂಱನೆಯ ಆಶ್ವಾಸಂ
ಮುಗಿದುದು

ಚತುರ್ದಶಾಶ್ವಾಸಂ

ಬಳಿಕ ಅರಸು ಗಂಧೋದಕವೊದಲಾದ ಅಷ್ಟವಿಧ ಪೂಜಾದ್ರವ್ಯಗಳಿಂದ ಆ ಮುನೀಶ್ವರನನ್ನು ಅರ್ಚಿಸಿ (೧-೪) ಅವನ ಮೃದುಲವಾದ ಪಾಣಿಪಾತ್ರದಲ್ಲಿ ನಿರ್ಮಲವಾದ ಪಾಯಸವನ್ನಿಕ್ಕಿದನು. ಇಂತು ಜಗತ್ಪವಿತ್ರ ಪಾತ್ರನಿಗೆ ಪುಷ್ಪಮಿತ್ರನು ಶುದ್ಧಾಹಾರ ದಾನವಮಾಡಲು, ಅರಮನೆಯಲ್ಲಿ ಸುವರ್ಣವೃಷ್ಟಿಯೂ, ಪುಷ್ಪವರ್ಷವೂ ಸುರಿದುವು. ದೇವದುಂದುಭಿಗಳೂ, ದೇವರ ಅಹೋ(ದಾನ)ಧ್ವಾನವೂ ದಿಗಂತವನ್ನೆಲ್ಲಾ ವ್ಯಾಪಿಸಿತು. ಶೀತಲ ಸುರಭಿ ಮಂದಮಾರುತವು ಎತ್ತೆತ್ತಲೂ ಬೀಸುತ್ತಿತ್ತು. ಇಂತು ಪಂಚಾಶ್ಚರ್ಯಗಳು ನಡೆದ ಬಳಿಕ ಅರಸು ಮುನಿಗಳ ಪಾದದಲ್ಲಿ ಉಪಚಾರೋಕ್ತಿಗಳನ್ನು ಹೇಳಿ ನಮಸ್ಕರಿಸಿದನು (೯-೧೩) ಆ ಮುನಿಯು ಇಂತು ತನ್ನ ಕಾಯಸ್ಥಿತಿಯನ್ನು ನಿರ್ವರ್ತಿಸಿಕೊಂಡು ಶೈಲಪುರವನ್ನು ಬಿಟ್ಟು ಹೊರಟುಬಂದು ಗ್ರಾಮ ನಗರ ಖೇಡ ಖರ್ವಡಮಡಂಬ ದ್ರೋಣಾಮುಖ ನಿಗಮ ಪತ್ತನಾದಿಗಳನ್ನು ಪಾದನ್ಯಾಸದಿಂದ ಪವಿತ್ರೀಕರಿಸುತ್ತಾ, ಮೌನವ್ರತವನ್ನು ಹಿಡಿದು ಗೌರವತ್ರಯ, ದಂಡತ್ರಯ, ಶಲ್ಯತ್ರಯ, ಕಾಲತ್ರಯಗಳನ್ನು ದೂರವಾಡಿ ಅಪ್ರತಿಹತಯೋಗತ್ರಯವನ್ನವಲಂಬಿಸಿ, ಆತ್ತಗುಪ್ತಿತ್ರಿತಯನಾಗಿ ಕ್ಷಮೆಮೊದಲಾದ ಪತ್ತು ಧರ್ಮಗಳನ್ನೂ, ಮೂವತ್ತಾರು ಗುಣಗಳನ್ನೂ ಪಡೆದು ಘಾತಿಕರ್ಮಗಳನ್ನು ಘಾತಿಸಲು ಆರಂಭಿಸಿದನು. (೧೩-೧೬) ಬುದ್ಧಿಕ್ರಿಯಾದ್ಯಷ್ಟವಿಧಋದ್ಧಿಗಳನ್ನೂ, ನಾಮ ಸತ್ಯರೂಪವೊದಲಾದ ದಶವಿಧಸತ್ಯಗಳನ್ನೂ, ಕಾಯಶುದ್ಧ್ಯಾದ್ಯಷ್ಟವಿಧ ಶುದ್ಧಿಗಳನ್ನೂ, ಅನಶನಾದಿ ಷಡ್ವಿಧಬಾಹ್ಯತಪಸ್ಸುಗಳನ್ನೂ, ಪ್ರಾಯಶ್ಚಿತ್ತಾದಿ ಷಡ್ವಿಧ ಆಂತರತಪಸ್ಸುಗಳನ್ನೂ ಸ್ವೀಕರಿಸಿ ಕ್ಷುತ್ಪಿಪಾಸಾದಿ ದ್ವಾವಿಂಶತ್ಪರೀಷಹಗಳನ್ನು ಜಯಿಸಿ, ಷಡ್ಜೀವನಿಕಾಯದಯೆಯನ್ನು, ಆಶ್ರಯಿಸಿ, ಜೀವಾದಿಸಪ್ತ ತತ್ವವಿಚಾರವನ್ನು, ನೈಗಮಸಂಗ್ರಹಾದಿ ಸಪ್ತನಯಭಾವನೆಯನ್ನೂ ಭಾವಿಸಿ ಅನಂತಾನುಬಂಧಿಕ್ರೋಧವಾ

ನಾದಿ ಚತುಷ್ಕಷಾಯಗಳಿಗೂ, ಶಬ್ದಸ್ಪರ್ಶಾದಿ ಪಂಚೇಂದ್ರಿಯ ವಿಷಯಗಳಿಗೂ ವಿಚ್ಛತ್ತಿಯನ್ನೆಸಗಿದ ಆ ಯೋಗಿಗೆ ಸಮಗ್ರಸಮತೆಯು ಸಮನಿಸಿತು. (೧೩)

ಇಂತು ಪುಷ್ಪದಂತ ಮಹಾಯೋಗಿಯು ಮಹಾತಪಃಶ್ರೀನಿವಾಸಿಯಾಗಿ ಮುನ್ನಿನ ಪುಷ್ಕೋ ದ್ಯಾನಕ್ಕೆ ವಂದು ಪ್ರತಿಮಾಯೋಗದಲ್ಲಿ ನಿಲ್ಲಲು ಆ ವನದಲ್ಲೆಲ್ಲಾ ಶಾಂತರಸವು ಹರಡಿಕೊಂಡಿತೋ! ಎನ್ನುವಂತೆ ಸಕಲಪ್ರಾಣಿಗಳೂ ತಂತಮ್ಮ ಕ್ರೌರ್ಯವನ್ನೂ ಜಾತಿದ್ವೇಷಗಳನ್ನೂ ಬಿಸುಟು ಶಾಂತ ಭಾವದಿಂದೆ ವರ್ತಿಸುತ್ತಿದ್ದುವು. (೧೪-೩೦) ಯೋಗೋಪಯೋಗ ಸ್ಥಿತನಾದ ಆ ಪುಷ್ಪದಂತ ಮುನಿ ಪನು ಇಂತು ಧ್ಯಾನಾಧೀನನಾಗಿ ಆಜ್ಞಾವಿಚಯವೊದಲಾಗ ನಾಲ್ಕು ಬಗೆಯ ಧರ್ಮಧ್ಯಾನವನ್ನು ಚಿಂ ತಿಸ ತೊಡಗಿದನು. ಬಲಿಕ ಅನಂತ ಚತುಷ್ಟಯವನ್ನೂ, ವಿತರ್ಕಾದಿಸಿದ್ಧಾಷ್ಟಗುಣಗಳನ್ನೂ ಅಚಂ ಚಲವಾದ ಮನದಲ್ಲಿ ಸಂತತಭಾವಿಸಿದನು. (೩೧-೩೭) ಅಂತು ಘಾತಿಕರ್ಮ ಚತುಷ್ಟಯವು ನಷ್ಟ ವಾಗಲು ನಿಜವಾದ ಕೇವಲಜ್ಞಾನವು ಅಂಕುರಿಸಿ ಬಳೆದು ಪ್ರಜ್ವಲಿಸತೊಡಗಿತು. (೩೮-೪೦) ಇಂ ದ್ರನು ಆಸನಕಂಪದಿಂದ ಪುಷ್ಪದಂತ ಜಿನನ ಕೇವಲ ಜ್ಞಾನೋತ್ಪತ್ತಿಯನ್ನು ಅಱಿದು ಸಪರಿವಾರ ನಾಗಿ ಬಂದು ಆ ಚತುರ್ಥಕಲ್ಯಾಣೋತ್ಸವಕ್ಕಾಗಿ (೪೧-೪೬) ಕುಬೇರನಿಂದ ಸಮವಸೃತಿ ಮಂಟಪ ವನ್ನು ನಿರ್ಮಾಣಮಾಡಿಸಿದನು. ಸುವಿಧಿ ಜಿನನು ಆ ಸಮವಸೃತಿಮಂಟಪದ ನಡುವಿದ್ದ ಸಿಂಹಾಸನ ವನ್ನೇಱಿ ಕುಳಿತನು. (೪೭-೪೯) ಇಂದ್ರನು ಕೇವಲ ಕಲ್ಯಾಣೋತ್ಸವವನ್ನು ನೆರವೇರಿಸಿ, ನಾಸಿರ ದೆಂಟು ಅನ್ವರ್ಥನಾಮಗಳಿಂದ ಸ್ತುತಿಸಿ ಸ್ವರ್ಗಾಯಕ್ಕೆ ಹೋದನು. (೫೦) ಇತ್ತ ಸುವಿಧಿಜಿನನ ಸಮವಸರಣವು ಗಣಧರರೇ ಮೊದಲಾದ ದ್ವಾದಶಗಣಗಳಿಂದ ಅಧಿಕಶೋಭಿಸುತ್ತಿತ್ತು. ಬಲಿಕ ಸಂಚರಿಸಲಾರಂಭಿಸಿದ ಆ ಮಂಟಪದಲ್ಲಿ ಜಿನನು ಲೋಕವೆಲ್ಲವನ್ನೂ ಧರ್ಮೋಪದೇಶಮಾಡುತ್ತಾ ಸುತ್ತಾಡಿ ಒಂದು ತಿಂಗಳಕಾಲ ವಿಹಾರವನ್ನು ನಿಲ್ಲಿಸಿ ಮತ್ತೆ ಪ್ರತಿಮಾಯೋಗದಲ್ಲಿ ದೃಢಸಂಕಲ್ಪ ನಾಗಿ ನಿಂತನು. ಅನಾದಿಯಾಗಿ ಸಕಲ್ಯನ್ತವಾಗಿದ್ದ ಕರ್ಮಗಳೆಲ್ಲವೂ ನಿರ್ಮೂಲವಾಗಿ ನಾಶವಾ ಗಲು ಸಹಜವಾಗಿದ್ದ ಸಿದ್ಧಾಷ್ಟಗುಣಗಳು ಮತ್ತೆ ಉಜ್ಜ್ವಲಿಸಹತ್ತಿತು. ಸುವಿಧಿಜಿನನು ಭಾದ್ರಪದ ಶುಕ್ಲಾಷ್ಟಮಿಯಂದು ಮೂಲನಕ್ಷತ್ರದಲ್ಲಿ ಅಪರಾಹ್ಣಕಾಲದಲ್ಲಿ ಪರಮ ಶ್ರೀಮುಕ್ತಿಲಕ್ಷ್ಮಿಯನ್ನು ಕೆಯ್ಕೊಂಡನು. (೫೧-೫೩) ಒಡನೆಯೇ ಇಂದ್ರನು ಸಪರಿವಾರನಾಗಿ ಅಲ್ಲಿಗೆ ಬಂದು ಪರಿನಿರ್ವಾಣ ಮಹಾಕಲ್ಯಾಣ ಪೂಜೆಯನ್ನು ಯಥಾವತ್ತಾಗಿ ಮಾಡಿ, ಆನಂದನೃತ್ಯವನ್ನು ನರ್ತಿಸಿ ಹೋದನು. ಸುವಿಧಿಜಿನನು ಪರಮಸುಖವನ್ನು ತಾಳಿದನು. (೫೪) ಇತ್ತ ತಂದೆಯ ವಿಯೋಗದಿಂದ ಸಂತಾಪ ವಾಂತ ಕೀರ್ತಿವರ್ಮನು ಬಹುವಾಗಿ ಅತ್ತು ಕೊನೆಗೆ ವಿದರ್ಭಗಣಧರಸ್ವಾಮಿಗಳ ಶಾಂತಿವಚನ ದಿಂದ ವ್ಯಸನವನ್ನು ತೊಲಗಿಸಿ ತಾನೂ ಗುರುನಿರ್ವಾಣಭೂಮಿಯನ್ನರ್ಚಿಸಿ ಕೃತಾರ್ಥನಾಗ ಬೇಕೆಂದು ಸಕಲವಿಧ ಪೂಜಾಸಾಮಗ್ರಿವೆರಸು ಅಲ್ಲಿ ಬಂದು ದೇವೇಂದ್ರನು ಮಾಡಿದ ಪೂಜೆಗ ಇಮ್ಮಡಿಯೆನ್ನುವಂತೆ ನಿರ್ವಾಣಸ್ಥಳಪೂಜೆಯನ್ನು ನೆರವೇರಿಸಿ ಕೀರ್ತಿಯನ್ನೂ, ಆತ್ಮಾಕೃತಿಯ ನ್ನೂ ಪಡೆದನು. (೫೫) ಕಾವ್ಯಸತ್ಕ ರ್ಣಾವ ಮೃಗಲಕ್ಷನಾದ ಗುಣವರ್ಮಕವಿಯ ಲಕ್ಷಣಬದ್ಧ ವಾದ ವಾಗ್ವನಿತೆಯನ್ನು ಬುಧರೆಲ್ಲರೂ ಒಲ್ದುಬಣ್ಣಿಸುವರು (೫೬) ಬಂಕರಸನಂಕದ ಮಾಚಿಯನ ಮಹದೇವಿ ಸೋಮನ ಚಾವು ಇವರಿರ್ವರಿಗೂ ಜನಿಸಿದ ನವಿಲ್ಗುಂದದ ಮಾದಿರಾಜನು ಈ ಪ್ರಬಂಧ ವನ್ನು ಬರೆದನು (೫೭) ಈ ಮಾದಿರಾಜವಿಬುಧನ ಅಕ್ಷರವಿನ್ಯಾಸವು ಅತ್ಯುತ್ಕೃಷ್ಟವಾಗಿತ್ತು (೫೮) ಎಂಬಲ್ಲಿಗೆ ಪುಷ್ಪದಂತ ಕಥಾಭಾಗದೊಳ್ ಉಪಸಂಹಾರ ಭಾಗವಾದ

ಪದಿನಾಲ್ಕನೆಯಾಶ್ವಾಸಂ
ಮುಗಿದುದು.

ಮುನ್ನುಡಿ

ಈ ಗ್ರಂಥವು ಮೂರು ಹಸ್ತಲಿಖಿತಪ್ರತಿಗಳ ಪರಾಮರ್ಶದಿಂದ ಮುದ್ರಿತವಾಗಿರುವುದು. ಇವುಗಳಲ್ಲೊಂದು ಮದ್ರಾಸ್‌ಸರ್ಕಾರದ ಪ್ರಾಚ್ಯವುಸ್ತಕಕೋಶಾಗಾರದಲ್ಲಿ (ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ) ಸಂಗೃಹೀತವಾಗಿರುವ ತಾಳಪತ್ರಾತ್ಮಕವಾದ ಹಸ್ತಲಿಖಿತ ಪ್ರತಿಯು. ಎರಡನೆಯದು ಮೈಸೂರು ಸರ್ಕಾರದ ಪ್ರಾಚ್ಯವುಸ್ತಕಕೋಶಾಗಾರದಲ್ಲಿ ಸಂಗ್ರಹಿಸಿ ಇಡಲ್ಪಟ್ಟಿರುವ ತಾಳಪತ್ರದ ಪ್ರತಿಯು. ಮೂರನೆಯದು ಇದೇ ಪ್ರಾಚ್ಯಕೋಶಾಗಾರದಲ್ಲಿಯು ಕಾಗದದ ಹಸ್ತಲಿಖಿತ ಪ್ರತಿಯು. ಈ ಮೂರು ಪ್ರತಿಗಳಲ್ಲೂ ಲೇಖಕ ಪ್ರಮಾದಜನ್ಯಗಳಾದ ಅಕ್ಷರಸ್ಖಲಿತ್ಯಾದಿಗಳೂ, ಗ್ರಂಥಪಾತಗಳೂ ಹೇರಳವಾಗಿ ಉಂಟು. ಮೊದಲನೆಯ ಪ್ರತಿಯು ಗ್ರಂಥಾಂತ್ಯದಲ್ಲಿ ಈ ಗ್ರಂಥವನ್ನು ಪ್ರತಿಮಾಡಿದ ನವಿಲ್ಗುಂದದ ಮಾದಿರಾಜನ ಪ್ರಾಶಸ್ತ್ಯಬೋಧಕವಾದ ಎರಡು ಪದ್ಯಗಳು ಹೆಚ್ಚಾಗಿವೆ. ಈ ಪದ್ಯಗಳ ಬಂಧ ಗೌರವವನ್ನೂ, ವಿಷಯ ಗೌರವವನ್ನೂ ಪರಾಮರ್ಶಿಸಿದರೆ ಈ ಮಾದಿರಾಜನೂ ಒಬ್ಬ ಪ್ರಸಿದ್ಧಕವಿಯಾಗಿರಬೇಕೆಂದು ಊಹಿಸಲು ಅವಕಾಶವುಂಟು. ಈತನು ಪ್ರಕೃತಕವಿಯ ಪ್ರತ್ಯಕ್ಷದಲ್ಲಿಯೇ ಈ ಗ್ರಂಥವನ್ನು ಪ್ರತಿಮಾಡಿದನೋ, ಅಥವಾ ಕಾಲಾನಂತರದಲ್ಲಿ ಪ್ರತಿಮಾಡಿದನೋ ಎಂಬ ಸಂದೇಹವನ್ನು ದೂರೀಕರಿಸಲು ನಿಷ್ಕೃಷ್ಟ ಸಾಧನಗಳಾವುವೂ ಅದ್ಯಾಪಿ ದೊರಕಿಲ್ಲ. ಸ್ವತಂತ್ರವಾಗಿ ಉತ್ತಮಕಾವ್ಯವನ್ನು ಬರೆಯತಕ್ಕ ಸಾಮರ್ಥ್ಯವುಳ್ಳ ಇಂತಹ ಪ್ರೌಢ ಕವಿಯು ಈ ಗ್ರಂಥವನ್ನು ಪ್ರತಿಮಾಡಿರುವುದನ್ನು ನೋಡಿದರೆ ಈ ಗ್ರಂಥವು ಅತ್ಯುತ್ತಮವಾದುದೆಂದು ಹೇಳಲು ಸ್ವಲ್ಪವೂ ಸಂಶಯವಿರಲಾರದು. ಮೂರನೆಯಪ್ರತಿಯಲ್ಲಿ ಹಲವು ಪ್ರಕ್ಷಿಪ್ತಪದ್ಯಗಳೂ, ಗದ್ಯಗಳೂ ಅಲ್ಲಲ್ಲಿ ಸೇರಿಸಲ್ಪಟ್ಟಿರುವುವು. ಹೀಗೆ ಸೇರಿಸಲ್ಪಟ್ಟಿರುವ ಗ್ರಂಥಭಾಗದಲ್ಲಿ, ಅನ್ವಯವೂ, ಅಶುದ್ಧಪದವಾಕ್ಯ ಪ್ರಯೋಗಗಳೂ, ಹೊಸಗನ್ನಡ ಶೈಲಿಯೂ ಇರುವುದರಿಂದ ಅದನ್ನು ಮುದ್ರಣದಲ್ಲಿ ಸೇರಿಸಲಿಲ್ಲ.[1]

ಗ್ರಂಥಪಾತವೊದಲಾದ ದೋಷಗಳು ಅಲ್ಲಲ್ಲೇ ಅಲ್ಪಸ್ವಲ್ಪವಾಗಿ ಇದ್ದರೂ ಗ್ರಂಥದ ಸಂಪೂರ್ಣರಸಾಸ್ವಾದಕ್ಕೆ ಯಾವ ಕೊರತೆಯೂ ಇಲ್ಲವೆಂದು ಮಾತ್ರ ಇಲ್ಲಿ ನಾವು ಹೇಳಬಹುದು. ಲಲಿತವೂ, ಸರಸವೂ ಆದ ಈ ಪ್ರಬಂಧದ ಪ್ರಯೋಜನವನ್ನು ಕನ್ನಡಿಗರು ಪಡೆದು ನಮ್ಮ ಶ್ರಮವನ್ನು ಸಾರ್ಥಕಗೊಳಿಸುವರೆಂದು ವಿದ್ವಜ್ಜನ ಸಾನ್ನಿಧ್ಯದಲ್ಲಿ ನಮ್ಮ ಸವಿನಯ ಪ್ರಾರ್ಥನೆಯು.

ಕಾವ್ಯವಿಚಾರಂ

ಈ ಗ್ರಂಥವು ಜೈನಮತೀಯರಲ್ಲಿ ಶಲಾಕಾಪುರುಷರೆಂದು (ಕಾರಣಪುರುಷರೆಂದು) ಪ್ರಸಿದ್ಧರಾದ ಅರುವತ್ತು ಮೂವರಲ್ಲಿ (ತ್ರಿಷಷ್ಟಿ ಲಕ್ಷಣ ಶಲಾಕಾಪುರುಷರಲ್ಲಿ) ೯ನೆಯ ತೀರ್ಥಂಕರನಾದ "ಪುಷ್ಪದಂತಜಿನನ" (ಸುವಿಧಿಜಿನನ) ಚರಿತವನ್ನು ತಿಳಿಸುವ ಚಂಪೂರೂಪವಾದ ಗ್ರಂಥವು. ಇದರಲ್ಲಿ ಹದಿನಾಲ್ಕು ಆಶ್ವಾಸಗಳಲ್ಲಿ ಒಟ್ಟು ೧೩೬೫ ಪದ್ಯಗಳೂ, ಹಲವು ಗದ್ಯಗಳೂ ಇರುವುವು. ಬಂಧವು ಲಲಿತವಾಗಿಯೂ ಸುರಸವಾಗಿಯೂ ಇರುವುದು. ಅಲ್ಲಲ್ಲಿ ಕನ್ನಡ ನಾಡಿನಲ್ಲಿ ವ್ಯವಹಾರದಲ್ಲಿರುವ

---

[1] ಮಾದರಿಗಾಗಿ ಈ ಪ್ರತಿಯ ಸ್ವಲ್ಪಭಾಗವನ್ನು ೬ನೆಯ ಪರಿಶಿಷ್ಟವಾಗಿ ಕೊಟ್ಟಿದೆ.

ಹಲವು ನ್ಯಾಯನೀತಿಗಳು[1] ಛಂದೋರೂಪದಲ್ಲಿ ನಿಬದ್ಧವಾಗಿ ಸೇರಿಸಲ್ಪಟ್ಟಿರುವುವು. ಕಾವ್ಯರಸಾಸ್ವಾದಕ್ಕೆ ವಾಂಧ್ಯನನ್ನುಂಟುಮಾಡುವುದರಿಂದ ಕಾವ್ಯಶರೀರದಲ್ಲಿ ಗಸುಭೂತಗಳೆಂದು ಆಲಂಕಾರಿಕರಿಂದ ನಿರ್ಣೀತವಾಗಿ ಪಂಪಾದಿ ಮಹಾಕವಿಗಳಿಂದ ಪ್ರಯುಕ್ತವಾಗದಿರುವ, ವೃತ್ಯನುಪ್ರಾಸಯಮಾದಿ ಶಬ್ದಾಲಂಕಾರಗಳು[2] ಈ ಕಾವ್ಯದಲ್ಲಿ ಅಲ್ಲಲ್ಲಿ ಹೇರಳವಾಗಿ ದೊರಕುವುವು. ಸಾರಸ್ವತಪ್ರಪಂಚದಲ್ಲಿ ಸಿದ್ಧಾಂತವಡೆದಿರುವಧ್ವನಿಯು ಕಾವ್ಯಕ್ಕೆ ಪ್ರಾಣಭೂತವೆಂಬುದನ್ನು ಈತನು ಪೀಠಿಕಾ ಪ್ರಕರಣದಲ್ಲಿ ಉಪಪಾದಿಸಿರುವುದು ಪಾತ್ರವಲ್ಲದೆ[3], ಆಚರಣೆಯಲ್ಲಿಯೂ ತಂದಿರುವನು, ಜನಗಳಲ್ಲಿ ವಾಡಿಕೆಯಾಗಿರುವ ಹಲವು ನಾಣ್ಣುಡಿಗಳನ್ನು ಛಂದಸ್ಸಿನಲ್ಲಿ ಸೇರಿಸಿ ಹೇಳಿರುವನು[4]. ಹಲವು ಸಂಸ್ಕೃತವಾಕ್ಯಗಳೂ ಅಲ್ಲಲ್ಲಿ ಅನುವಾದಮಾಡಲ್ಪಟ್ಟಿರುವುವು[5]. ಶಾಸ್ತ್ರೀಯವಾದ ಸಂಸ್ಕೃತದಲ್ಲಿರುವ ಹಲವು ನ್ಯಾಯಗಳನ್ನು ಸಂದರ್ಭಗಳಲ್ಲಿ ಸೇರಿಸಿರುವನು[6]. ತ್ರಿಷಷ್ಟಿ ಶಲಾಕಾಪುರುಷರ ಚರಿತದಲ್ಲಿ ಈ ಪುಷ್ಪದಂತಚರಿತದ ಕಥಾಭಾಗವು ಅತ್ಯಂತ ಕಿರಿದಾದುದು. ಇದನ್ನೇ ಕವಿಯು ಪೀಠಿಕೆಯಲ್ಲಿ 'ಕತಕಿಱಿದಾದೊಡಂ.....'ಎಂದೂ ಹೇಳಿರುವನು.

ಈ ಪುರಾಣದ ಕಥಾಭಾಗವು ಆದಿಪುರಾಣ, ಶಾಂತಿಪುರಾಣಗಳ ಕಥಾಭಾಗದಂತೆ ಹಲವು ಜನ್ಮಾಂತರ ಕಥಾಶೃಂಖಲೆಗಳ ತೊಡಕಿನಿಂದ ವಾಚಕರ ಮನಕ್ಕೆ ಬೇಸರವನ್ನು ಹುಟ್ಟಿಸುವಂತಿಲ್ಲ. ಕಥಾಭಾಗವೇ ಇಲ್ಲವೆಂದು ಹೇಳುವಷ್ಟು ಅತ್ಯಲ್ಪವಾದ ಈ ಕಥೆಯನ್ನು ಬಳಿಯಿಸಿ ಪಂಪಾದಿಕವಿಗಳ ಗ್ರಂಥಕ್ಕೆ ಯಾವಭಾಗದಲ್ಲಿಯೂ ಕಡಿಮೆಯಾಗಿಲ್ಲವೆನ್ನುವಂತೆ ಹದಿನಾಲ್ಕಾಶ್ವಾಸಗಳುಳ್ಳ ದೊಡ್ಡ ಕಾವ್ಯವನ್ನಾಗಿ ಹೊಸೆದಿರುವ ಈ ಕವಿಯ ಬುದ್ಧಿಚಾತುರ್ಯವು ಶ್ಲಾಘನೀಯವಾದುದೇ ಸರಿ. ವರ್ಣನಾಭಾಗವನ್ನು ಇಷ್ಟು ಹೆಚ್ಚಾಗಿ ಸೇರಿಸಿದ್ದರೂ ಯಾವುದೊಂದುಭಾಗವೂ, ಅಪ್ರಕೃತವಾದುದು, ಅಸಂಬದ್ಧವಾದುದು, ಎಂದು ಯಾವ ಸೂಕ್ಷ್ಮದರ್ಶಿಯೂ ಆಕ್ಷೇಪಿಸುವುದಕ್ಕೆ ಅವಕಾಶವನ್ನು ಕೊಡದಂತಿರುವ ಔಚಿತ್ಯವಿಚಾರವು ಶ್ಲಾಘನೀಯತಮವಾಗಿಯೇ ಇರುವುದು. ಜೈನಪುರಾಣದ ತೀರ್ಥಂಕರಚರಿತ್ರದಲ್ಲಿ ತೀರ್ಥಕರರ ಪಂಚಕಲ್ಯಾಣವು[7] ವರ್ಣಿತವಾಗುವುದು, ಶಾಂತರಸವೇ

---

[1] ಪುಲಿಗಂಜಿ ಪುತ್ತನಿಜ್ಜೀಗೊಳೆರೆ ವಾವು ಕೊಂದುದು (ಇವು ಮೊದಲಾದುವು)

[2] ೧-೬, ೨-೫೧, ೫೧, ೫೬, ೫೩. ೯-೪೩. ೪-೪೯, ೧೧, ೨೪, ೨೫. ೧೩-೩೩. ೪-೪೯, ೧೪-೪, ೫-೬೪

[3] ೧-೩೨, ೩೪.

[4] ಹರಣಮುಳ್ಳೊಡೆ ಹಾಡಿಯುಣಲಿಕ್ಕೆ ಬಪ್ಪುದು, ದೇವಂಗಾಱಿದೆ ಧರ್ಮಿಯಂಬಡಿದರ್, ಬಡವಂ ಬಡಿದಂಜಿಸುವಂ ಬಲ್ಲಿತ್ತನೆಂದು, ಇರೆ ಇರೆ ಬಾವೆ ಕಾಲವಶದಿಂ ನೆಲಮುಕ್ಕಿನಿವಂತೆ. ಪಾಲ್ಗಡೆ ಮುರ್ದು (ಇವು ಮೊದಲಾದುವು)

[5] ಸಕಲಕರ್ಮ ವಿಪ್ರಮೋಕ್ಷೋ ಮೋಕ್ಷಃ, ಪ್ರಾಯೇಣ ಸೇಷ್ಯಾಃ ಸ್ತ್ರಿಯಃ ೧೩-೯೦. ಇತ್ಯಾದಿ.

[6] ಅಂಧವರ್ತಕನ್ಯಾಯ. ಅಜಾಕೃಪಾಣೀಯ. ಕಾಕತಾಳೀಯ. (ಇವೇ ಮೊದಲಾದುವು.)

ಪರಿಶಿಷ್ಟ. ೪ ಮತ್ತು ೫ ನ್ನು ನೋಡಲು ಸ್ಪಷ್ಟವಾಗುವುದು.

[7] ಪರಿಶಿಷ್ಟ ೪-೫ ರಲ್ಲಿರುವ ಚಾವುಂಡರಾಯಪುರಾಣ ಶ್ರೀ ಪುರಾಣಗಳ ಕಥಾಭಾಗವನ್ನು ನೋಡಿದರೆ ಇದು ವ್ಯಕ್ತವಾಗುವುದು.

[8] ಗರ್ಭಾವತರಣ ಕಲ್ಯಾಣ, ಜನ್ಮಾಭಿಷೇಕ ಕಲ್ಯಾಣ, ಪರಿನಿಷ್ಕ್ರಮಣ ಕಲ್ಯಾಣ, ಕೇವಲ ಜ್ಞಾನೋದಯ ಕಲ್ಯಾಣ, ಸಮವಸರಣ ಕಲ್ಯಾಣ.

ಪ್ರಧಾನವಾದ ರಸವು. ಶೃಂಗಾರಾದಿ ಇತರ ರಸಗಳು ಈ ಪ್ರಧಾನರಸವನ್ನು ತಿರೋಹಿತವಾಡದೆ ತದನುಜೀವಿಗಳಾಗಿಯೇ ಅಳ್ಳಿ ಕಂಗೊಳಿಸುವುವು. ಶೃಂಗಾರರಸವೇ ಕಾವ್ಯಗಳಲ್ಲಿ ಪ್ರೇಕ್ಷಾ ವತ್ಪ್ರವೃತ್ತ್ಯಂಗವಾಗಿರುವುದು. ಕಟುಕೌಷಧಗಳಲ್ಲಿ ಪ್ರವೃತ್ತಿಯುಂಟಾಗಲು ಶಿಶುಗಳಿಗೆ ಶರ್ಕರಾದಿಗಳನ್ನು ಮಿಶ್ರಮಾಡಿ ಉಪಯೋಗಿಸುವಂತೆ ಸಾಮಾನ್ಯವಾಗಿ ಅನಿಷ್ಟವಾದ ಮೋಕ್ಷಸುಖದಲ್ಲಿ ಮಂದಾದರರಾದವರನ್ನು ಆಕರ್ಷಿಸುವುದಕ್ಕಾಗಿ ಕಾವ್ಯಗಳಲ್ಲಿ ಶೃಂಗಾರಾದಿರಸಗಳು ಅಂಗಗಳಾಗಿ ಇವ್ದೇ ಇರಬೇಕಾಗುವುದು ಈ ರಸವೇ ಕಾವ್ಯಜೀವಾತುವು. ಆದುದರಿಂದಲೇ ಭೋಜನು, ತನ್ನ ಅಲಂಕಾರ ಗ್ರಂಥಗಳಲ್ಲಿ,[1] "ಶೃಂಗಾರ ಏಕ ಏವ ರಸಃ" ಶೃಂಗಾರವೆಂಬುದೊಂದೇ ರಸವೆಂದು ನಯುಕ್ತಿಕ್ಷವಾಗಿ ಉಪಪಾದಿಸಿರುವನು. ಮೋಕ್ಷದಲ್ಲಿ ಅಭಿನಿವೇಶವನ್ನುಂಟುಮಾಡುವ ಶಾಂತ ರಸಪೂರ್ಣವಾದ ಗ್ರಂಥದಲ್ಲಿ ಶೃಂಗಾರಾದಿರಸಗಳನ್ನು ಅತಿವಿಸ್ತೃತಗಳನ್ನಾಗಿ ವರ್ಣಿಸಿ ಮುಖ್ಯ ಶಾಂತರಸವನ್ನು ತಿರೋಹಿತವಾಡದೆ ತತ್ಪೋಷಕಗಳಾಗಿರುವಂತೆ ವರ್ಣಿಸುವುದೇ ಕವಿಯ ಪ್ರತಿ ಭಾಚಾತುರ್ಯವು. ಅದನ್ನು ಈ ಗ್ರಂಥದಲ್ಲಿ ಹಲವೆಡೆಗಳಲ್ಲಿ ನೋಡಬಹುದು.

ಜೈನಪುರಾಣಕ್ಕೆ ಅಂಗಗಳು ಎಂಟು — ಎಂದು ಪಂಪನು ಆದಿಪುರಾಣದಲ್ಲಿ ಹೇಳಿರುವನು,[2] ಜನ್ನನಾದರೋ ತನ್ನ ಅನಂತನಾಥ ಪುರಾಣದಲ್ಲಿ 'ಪುರಾಣಕ್ಕೆ ಅಂಗವು ಐದು, ಕಾವ್ಯ ರೂಪವಾದ ಪುರಾಣಕ್ಕೆ ಎಂಟು' ಎಂದು ಹೇಳಿರುವನು[3], ವೈದಿಕರು ಪುರಾಣಲಕ್ಷಣದಲ್ಲಿ "ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ॥ ವಂಶಾನುಚರಿತಂ ಚೇತಿ ಲಕ್ಷಣಾನಾಂ ತು ಪಂಚ ಕಮ್" ಎಂದು ಪುರಾಣಕ್ಕೆ ಅಂಗಗಳು ಐದೆಂದು ಹೇಳುವರು. ಈ ಲಕ್ಷಣಗಳು ಅವರವರ ಮತಗಳ ಮೂಲತತ್ವಗಳನ್ನನುಸರಿಸಿ ಭಿನ್ನಭಿನ್ನವಾಗಿರುವುವು. ಜೈನರು ಪ್ರಪಂಚಕ್ಕೆ ಸ್ಥಿತಿಯೊಂದನ್ನಲ್ಲದೆ ಉತ್ಪತ್ತಿನಾಶಗಳನ್ನು ಒಪ್ಪಿಕೊಳ್ಳುವುದಿಲ್ಲ. ಲೋಕದಲ್ಲಿರುವ ವಸ್ತುಗಳಲ್ಲಿ ಸ್ವರೂಪ ಪರಿಣಾಮವನ್ನು ಮಾತ್ರ ಹೇಳುವರು, ಆದುದರಿಂದ ಇವರು ಆದಿಯಲ್ಲಿ ಲೋಕಸ್ವರೂಪವನ್ನು ಅನಾಧಿನಿಧನವೆಂದು ಪುರಾಣಗಳಲ್ಲಿ ಹೇಳುವರು. ವೈದಿಕಮತದವರು ಈ ಪ್ರಪಂಚಕ್ಕೆ ಸೃಷ್ಟಿ, ಸ್ಥಿತಿ, ಲಯಗಳನ್ನು ಒಪ್ಪಿಕೊಳ್ಳುವುದರಿಂದ, ಈ ಸೃಷ್ಟಿ ಸ್ಥಿತಿ ಲಯಗಳ ಕ್ರಮವನ್ನೂ, ಇವೆಲ್ಲಕ್ಕೂ ನಿಯಂತೃವಾದ ಸರ್ವಶಕ್ತನೂ ಸರ್ವಜ್ಞನೂ ಆದ ಈಶ್ವರನ ಸ್ವರೂಪಗುಣವಿಭವಪ್ರಭೃತ್ಯಾದಿಗಳನ್ನೂ ವರ್ಣಿಸು

---

[1] ಸರಸ್ವತೀ ಕಂಠಾಭರಣ, ಶೃಂಗಾರ ಪ್ರಕಾಶಗಳೆಂಬ ಲಕ್ಷಣ ಗ್ರಂಥಗಳಲ್ಲಿ.

[2] ಆ ಪುರಾಣಕ್ಕಂ - ಲೋಕಾಕಾರಕಥನಮುಂ, ದೇಶನಿವೇಶೋಪದೇಶಮುಂ[33]
ತ್ಪರಿವರ್ಣನಮುಂ, ರಾಜ್ಯರಾಮಣೀಯಕಾಖ್ಯಾನಮುಂ, ತೀರ್ಥಮಹಿಮ
ರ್ಗತಿಸ್ವರೂಪನಿರೂಪಣಮುಂ, ತಪೋದಾನವಿಧಾನ ವರ್ಣನಮುಂ
ಮೆಂದಿಂತವಯವಂಗಳೆಂಟಕ್ಕುಂ (ಆದಿ-ಆ-೧-ಗ-೧೦).

[3] ಮುನಿಪುಂಗರ್ಕೋಕ್ತ ಪುರಾಣಪದ್ಧತಿಗೆ ಲೋಕಾ
ರ್ತನಮುಂ ವ್ಯಾಪ್ತ ಚತುರ್ಗತಿ ಸ್ಥಿತಿಗಳುಂ ಭಾ
ರ್ತನಮುಂ ತತ್ಫಲಸಿದ್ಧಿಯುಂ ನೆಗಬಿದ್ದೈದಂಗ
ವ್ಯನಿಬಂಧೋಚಿತ ಮೆಂಟು ದೇಶನಗರೀರಾ

ವುದು ಪುರಾಣವೆಂದು ಪುರಾಣಲಕ್ಷಣವನ್ನು ಅಂಗೀಕರಿಸಿರುವರು. ಈ ಕಾವ್ಯದಲ್ಲಿ ಜೈನಪುರಾಣಾಂಗಗಳೆಂಟೂ ಸಂಪೂರ್ಣವಾಗಿರುವುವು. ಲೋಕಾಕಾರಕಥನವು ಪ್ರಥಮಾಶ್ವಾಸ ೪೭ ನೆಯ ಪದ್ಯದಿಂದ ೯೦ ರ ವರೆಗೂ ವರ್ಣಿತವಾಗಿರುವುದು. ದೇಶನಿವೇಶೋಪವರ್ಣನವು ಎರಡನೆಯ ಆಶ್ವಾಸದ ೧೪ ನೆಯ ಪದ್ಯದವರೆಗೂ ವಿಸ್ತೃತವಾಗಿರುವುದು. ನಗರಸಂಪದ್ವರ್ಣನ ರಾಜ್ಯರಾವಣೀಯಕಾಖ್ಯಾನ ಇವೆರಡರಿಂದ ಎರಡನೆಯ ಆಶ್ವಾಸವು ಕೊನೆಗಂಡಿರುವುದು ಅಲ್ಲದೆ ೯ ನೆಯ ಆಶ್ವಾಸದಲ್ಲಿಯೂ ಈ ವರ್ಣನವುಂಟು. ತೀರ್ಥಮಹಿಮಾನುವರ್ಣನವು ೧೦ ನೆಯ ಆಶ್ವಾಸದಲ್ಲಿ ಉಂಟು. ಚತುರ್ಗತಿ ಸ್ವರೂಪನಿರೂಪಣವು ಆ-೧೩ ಪದ್ಯ ೯೨ ರಿಂದ ಮುಂದೆ ಹೇಳಿದೆ. ಉಳಿದುವೆರಡಂಗಗಳೂ ಆ-೧೪ ರಲ್ಲಿ ವರ್ಣಿತವಾಗಿವೆ.

ಇವನ ಕಾವ್ಯದಲ್ಲಿ ಅಲ್ಲಲ್ಲಿ ಕಂಡುಬರುವ ಪೂರ್ವಚೀನಕಾವ್ಯಗಳ ಛಾಯಾನುವಾದಗಳು ಸ್ವಪ್ರತಿಭಾಶಕ್ತಿಯಿಂದ ಮಾರ್ಪಡಿಸಲ್ಪಟ್ಟು ನವೀನತ್ವವನ್ನು ಪಡೆದಿರುವುದರಿಂದ ಕವಿಯ ಯಶಸ್ಸಿಗೆ ಇನಿತಾದರೂ ಕುಂದನ್ನು ತರುವಂತಿಲ್ಲ. ಮಾದರಿಗಾಗಿ ಬಂದರಡನ್ನು ಇಲ್ಲಿಕೊಟ್ಟಿದೆ.

ತಂತವ್ಮ ರಾಜ್ಯಚಿಹ್ನಂ । ತಂತವ್ಮ ಮಹಾವಿಭೂತಿ ತಂತವ್ಮ ಬಲಂ ॥
ತಂತವ್ಮೆಸೆವ ವಿಳಾಸಂ । ತಂತಮ್ಮಿರ್ದೆಡೆಯೊಳೋಳಿಯಿಂ ಕುಳ್ಳಿರ್ದರ್ ॥

ಪಂ ಭಾ. ೩-೪೩

ತಂತವ್ಮ ವಾಹನಾಯುಧ । ಕಾಂತಾಜನ ವರಿಜನಪ್ರಸಾಧನ ಚಿಹ್ನ ॥
ನಂತವಿಭೂತಿಯಿನುಚಿತದಿ । ಗಂತಸೊಳುಚಿತಾಸನ ಪ್ರದೇಶವೊಳಿರ್ದರ್ ॥

ಪುಷ್ಪ ೧೦-೪೧

ಉದ್ಯೋತಿತವಿಶ್ವರ್ ಕೃತ । ವಿದ್ಯರ್ ಸೋಪ್ಮಪ್ರತಾಪರಖಿಲಾಂತಪದ ॥
ಕಾಕ್ಯರ್ ವ್ಯಂಜನದಂತನ । ವದ್ಯರ್ ಮೂವತ್ತುಮೂವರಾದರ್ ದೇವರ್ ॥

ಕಾವ್ಯಾವಲೋಕನ-೨

ಅಂಶುಪ್ರಭರುದ್ಯೋತಿತ । ವಂಶರ್ ಪುಟ್ಟಿದರನುಪಮ ಪುರುಷ ।
ತ್ಯಂಶರ್ ದ್ವಿಗುಣಿಸಿದ ಚತು । ರ್ವಿಂಶತಿತೀರ್ಥಕರರೆನಿಸಿ ನಾಲ್ವತ್ತೆಂಟ್ಬರ್ ॥

ಪುಷ್ಪ—೧೩-೧೦

ಕಱುತ್ತಡಗಿಡಲ್ ಸುಟ್ಟುಂ ಬಿಟ್ಟಿಕ್ಕಲ್ಲಿ ನೂ ।
ಯಂ ನೆಗಟ್ಟಿಪಂತು..... ॥

ಪುಷ್ಪ ೫-೫೦

ಕಿತಿ ಮಿಂಧನೇದ್ಧೋ
ನಃ ಕರೋತಿ ॥

ರಘು ೯-೪೦

.....ಧ್ಯಾನಸ್ತಿಮಿತ ಲೋಚನಃ ।
ಕ್ಷಣಮಾತ್ರ ವ್ಯಪಿಸ್ತಸ್ಥೌ ಸುಪ್ತಮೀನ ಇವ ಹ್ರದಃ ॥

ರಘು ೧-೬೩

ಧ್ಯಾನಾಪೇಕ್ಷೆಕ..... ಕಮಲಾಕರಮಂ

ಪುಷ್ಪ-೧೪-೩ ೦

ಪಾಸಿನವಿಚಾರದಲ್ಲಿ ಔಪ ಕುಳಕ್ಷಳಂಗಳಿಗೂ, ಲಕಾರಕುಳಕ್ಕೂ ಒಂದೆರಡೆಡೆಗಳಲ್ಲಿ ಭೇದ ಸವು ನಿಬದ್ಧವಾಗಿರುವುದು.[1]

ಗ್ರಂಥಕರ್ತೃವಿಚಾರಂ

ಈ ಪುಷ್ಪದಂತ ಪುರಾಣವನ್ನು ಬರೆದ ಕವಿಯ ಹೆಸರು **ಗುಣವರ್ಮ**ನೆಂದು.

ಇದನ್ನೀಕವಿಯು—

ವ್ಯಕ್ತಂ ಸುಕವಿಮಧುವ್ರತ ।
ನಿಕರಮನೆಱಗಿಸುವ ಚೂತಮಂಜರಿ ಕುಕವಿ ॥

ವ್ಯಕ್ತರ ಮಧುವಕ್ಕೆ ಕೃತಿ ಚಂ ।
ಪಕಮಂಬರಿ ಯೆನಿಸೆ ಪೇೞ್ದಿವಂ **ಗುಣವರ್ಮ**ಂ ॥ ೧-೬೧ ॥

ಎಂಬ ಪದ್ಯದಲ್ಲೂ—

ಇದು ಸಮಸ್ತಭುವನ..... .....ಮಾನಸ **ಗುಣವರ್ಮ** ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್[2]

ಎಂದು ಆಶ್ವಾಸಾಂತಿಮಗದ್ಯಗಳಲ್ಲೂ ತಾನೇ ಹೇಳಿಕೊಂಡಿರುವನು. ಈ ಕವಿಯು ತನ್ನ ಗ್ರಂಥದ ಪೀಠಿಕೆಯಲ್ಲಿ ಪೂರ್ವ ಕವಿಸ್ತವನಾವಸರದಲ್ಲಿ "ಗುಣವರ್ಮ" ನೆಂಬ ಮತ್ತೊಬ್ಬ ಕವಿಯನ್ನು ಸ್ತುತಿಸಿರುವುದರಿಂದಲೂ, ನಾಗವರ್ಮನ "ಕಾವ್ಯಾವಲೋಕನ," ಅಭಿನವವಾದಿ ವಿದ್ಯಾನಂದನ "ಕಾವ್ಯಸಾರ" ಇವುಗಳಲ್ಲಿ ಉದಾಹೃತವಾಗಿರುವ ಹರಿವಂಶ ಮತ್ತು ಶೂದ್ರಕ ವೆಂಬ ಗ್ರಂಥಗಳ ಕರ್ತೃವೂ ಆದ ಗುಣವರ್ಮನೆಂಬುವನು ಸು. ಕ್ರಿ. ಶ. ೯೦೦ ಇದ್ದವನೆಂದು ತಿಳಿದು ಬರುವುದರಿಂದಲೂ ಆತನು ಪಿತತ್ಕವಿಗಿಂತಲೂ ಭಿನ್ನನೆಂಬುದು ಸ್ಪಷ್ಟವು; ಈ ಕಾರಣವನ್ನೇ ಉದ ಹರಿಸಿ ಕವಿಚರಿತ್ರಕಾರರು ಒಂದನೆಯ ಗುಣವರ್ಮ, ಎರಡನೆಯ ಗುಣವರ್ಮ ಎಂದು ತಾವು ಬರೆ ದಿರುವ ಕವಿಚರಿತೆಯಲ್ಲಿ ಬೇರೆ ಬೇರೆಯಾಗಿ ಇವರಿಬ್ಬರನ್ನೂ ವ್ಯವಹರಿಸಿರುವರು.

[1] ೨-೪೧, ೪-೬೩. ೬-೧೩, ೪೨. ೩-೪೪. ೪-೧೦೪, ೧೧೦. ೧೦-೪. ೧೨-೬೬.

ಇವನು ಜೈನಮತಕ್ಕೆ ಸೇರಿದವನು. ಜೈನಪುರಾಣವಾದ ಈ ಗ್ರಂಥವನ್ನು ಬರೆದಿರುವುದು ಮೊತ್ರವಲ್ಲದೆ ಗ್ರಂಥಮಧ್ಯದಲ್ಲಿಯೂ ಅಲ್ಲಲ್ಲಿ ತಾನು ಜಿನಮತದವನೆಂದು ಹೇಳಿಕೊಂಡಿರುವನು.[1] ಹಲವೆಡೆಗಳಲ್ಲಿ ಜಿನಮತಕ್ಕೆ ಸಂಬಂಧಿಸಿದ ವರ್ಣನೆಗಳೇ ಕಂಡುಬರುವುವು.[2] ಈತನಿಗೆ "ಕವಿತಿಲಕ"[1] "(೧-೬೦) ಸರಸ್ವತೀ ಕರ್ಣಪೂರ"[3] (೪) ಸಹಜಕವಿಸರೋವರಹಂಸ[3] "ಪ್ರಭುಗುಣಾಬ್ಜ ನೀಕಳಿಹಂಸ"[4] (ಆ. ಆದಿ) "ಗುಣರತ್ನಭೂಷಣ"[4] "ಭವ್ಯರತ್ನಾಕರ", "ಶ್ರೀರಾಜವಿದ್ಯಾಧರ"[5] "ಮಾನಮೇರು"[5] "ಸಾಹ್ಲರಸಮುದಯಾವಲಂಬಿ"[1] ಮುಂತಾದ ಬಿರುದುಗಳಿದ್ದುವು. ಈತನ ವಾಕ್ಚಾತುರ್ಯವನ್ನೂ, ಕವಿತ್ವದ ಮೇಲ್ಮೆಯನ್ನೂ ಪಂಡಿತರು ಆ ಕಾಲದಲ್ಲಿ ಪ್ರಸಿದ್ಧರಾಜನಾಗಿದ್ದ ವಜ್ರದೇವ ನರನಾಥನ ಆಸ್ಥಾನದಲ್ಲಿ ಶ್ಲಾಘಿಸುತ್ತಿದ್ದರೆಂದು ಪೀಠಿಕಾಪ್ರಕರಣದ "ಭಾವಿಸೆ ಚಿತ್ರಮು ನಲ್..."(೧-೫೬) ಎಂಬ ಪದ್ಯದಿಂದ ಆರಂಭಿಸಿ "ಎಂದೋರಂತಿರೆ ವಜ್ರದೇವನರನಾಥಾಸ್ಥಾನ ದೊಳ್ ಕೂರ್ತು..."(೧-೬೩) ಎಂಬ ಪದ್ಯದವರೆಗೂ ತಾನೇ ಹೇಳಿಕೊಂಡಿರುವನು. ಈ ವಜ್ರದೇವನಾರೆಂಬುದನ್ನು ನಿರ್ಧರಿಸಬೇಕಾದುದು ಪ್ರಕೃತದಲ್ಲಿ ಅತಿ ಮುಖ್ಯ ವಿಷಯವಾಗಿರುವುದು.[6] ಪುರಾತನಕವಿಗಳ ಪದ್ಯರತ್ನಗಳನ್ನು ಆರಿಸಿ ತೆಗೆದು "ಸೂಕ್ತಿ ಸುಧಾರ್ಣ"ವೆಂಬ ರತ್ನಮಾಲಿಕೆಯನ್ನು ರಚಿಸಿದ ಮಲ್ಲಿಕಾರ್ಜುನನ ಕಾವ್ಯರತ್ನಮಾಲಿಕೆಯಲ್ಲಿ ಈ ಕವಿಯ ಪದ್ಯರತ್ನಗಳೂ ಸೇರಿರುವುವೆಂದ ಮೇಲೆ ಈ ಕವಿಯ ಉಕ್ತಿಯು ಆತ್ಮಸ್ತುತಿಯಾಗಿ ಪರಿಣಮಿಸದೆ ಸಹಜಗುಣವನ್ನು ಪ್ರೇಕ್ಷಾವತ್ಪ್ರವೃತ್ತಿಗಾಗಿ ಅನುವಾದ ಮಾಡಿದಂತೆಯೇ ಆಗಿರುವುದು.

ವಜ್ರದೇವನ ಆಸ್ಥಾನದಲ್ಲಿ ಪ್ರಸ್ತುತವಾದ ತನ್ನ ಪಾಂಡಿತ್ಯ ಪ್ರಶಂಸೆಯಿಂದ ಸಂತುಷ್ಟನಾದ ಶಾಂತಿವರ್ಮನು ತನ್ನನ್ನು ಪ್ರೋತ್ಸಾಹಿಸಿದುದರಿಂದ ಈ ಪುಷ್ಪದಂತ ಪುರಾಣವೆಂಬ ಜಿನಕಥೆಯನ್ನು ಬರೆದಂತೆ ಕವಿಯು ಪೀಠಿಕಾ ಪ್ರಕರಣದಲ್ಲಿ "ಎಂದೋರಂತಿರೆ.....ಶಾಂತಿವರ್ಮಂ ದೀನಾನತ ವರ್ಮನಾದರಿಸಿ ಪೇಟಿಪಿಂದೊಡೀಗಳ್ ಮನಂದಂದೆಂ".....೧-೬೭) ಎಂದು ಹೇಳಿರುವನು. ಮತ್ತು ಈ ಕಾವ್ಯರಚನೆಗೆ ಶಾಂತಿವರ್ಮನ ಪ್ರೋತ್ಸಾಹವು ಸಾಮಾನ್ಯವಾದುದೆಂದು ಹೇಳಿದೆ ಈ ಕೃತಿ

---

[1] ಪಿರಿಮಜಿನನುತಿಗಳ್ಗಮ। ಪರಮಶ್ರೀವಿಭವವೆಯ್ದದೆಂದಾರ್ ನುಡಿದರ್ ॥
ಪರವಾಣುಮಾತ್ರಮುಮ್ಮತದ । ವರಿಸೇವನೆ ಘಟಿಸಲಮರದೇನಮರತ್ವಂ ॥ ೧-೪೪ ॥
ಸ್ವೀಕೃತಜಿನಧರ್ಮನನಂ। ಗೀಕೃತಖಳಧರ್ಮ ನಮಳವಾಣೀಕರುಣಾಂ ॥
ಗೀಕೃತಕವಿತಾವರ್ಮ ನ। ಪಾಕೃತ ದುಷ್ಕರ್ಮ ನಮಮ ಕವಿಗುಣವರ್ಮಂ ॥ ೧-೬೭ ॥
ಇದು ಸಮಸ್ತಭುವನ ಸಂಸ್ತೂತಜಿನಾಗಮ ಕುಮುದ್ವತೀಚಾರು....ಗುಣವರ್ಮನಿರ್ಮಿತ ಮುಪ್ಪ .. ೨. ಅಂತ್ಯಗದ್ಯ.

[2] ಒಂದೆರಡು ಕಡೆಗಳಲ್ಲಿ ಮಾತ್ರ ಇದಕ್ಕೆ ವಿರುದ್ಧವಾದ ವರ್ಣನೆಗಳೂ ಇರುವುದು. ಆ ೪-೧೬.

[3] ಈ ಬಿರುದುಗಳು ವಿದ್ಯಾನಿಮಿತ್ತವಾಗಿ ಬಂದುವು. [4] ಇವು ಮತೋದ್ಧಾರನಿಮಿತ್ತವಾಗಿ ಬಂದುವು.

[5] ತನ್ನ ಆಶ್ರಯದಾತೃವಾದ ರಾಜನ ಸಂಬಂಧದಿಂದ ಬಂದುವು.

ಕವಿಗಳು ತಮ್ಮ ಬಿರುದುಗಳನ್ನು, ತಾವುರಚಿಸುವ ಕಾವ್ಯಗಳಲ್ಲಿ, ತಮ್ಮ ರಾಜರಿಗೂ ಕಥಾನಾಯಕನಿಗೂ ಅವರ ಬಿರುದುಗಳನ್ನು ತಮಗೂ ಸಂಬಂಧಿಸಿಕೊಂಡು ಹೇಳುವ ಪದ್ಧತಿಯುಂಟು.

[6] ಈ ಮುನ್ನುಡಿಯ ಪು ix ಟಿಪ್ಪಣಿ.

ಪುಟ. x ರಲ್ಲಿ ಕೊಟ್ಟಿರುವ ಶಾಸನವು ಈ ವಿಷಯದಲ್ಲಿ ಸ್ವಲ್ಪ ಬೆಳಕನ್ನು ಬೀರುವುದು.

ಯನ್ನು ತನ್ನ ಮಗಳೆಂದು ರೂಪಿಸಿ ಅದನ್ನು ವರಿಸಿದ ಶಾಂತಿವರ್ಮನನ್ನೇ ತನ್ನ ಅಳಿಯನನ್ನಾಗಿ ಭಾವಿಸಿ, (ಸಾಮಾನ್ಯ ಅಳಿಯನಲ್ಲ ವಿಷ್ಣುವಿಗೆ ಸಮಾನನಾದವನು) ವಿಷ್ಣುವು ತನ್ನನ್ನೇ ಹೇರಸಮು ದ್ರಕ್ಕೆ ಸಮರ್ಪಿಸಿ ಲಕ್ಷ್ಮಿಯನ್ನೂ, ಕೌಸ್ತುಭರತ್ನವನ್ನೂ ಕೊಂಡಂತೆ ಈ ಶಾಂತಿವರ್ಮನು ಕವಿಗೆ ತನ್ನನ್ನೇ ಸಮರ್ಪಿಸಿ ಕೀರ್ತಿಯನ್ನೂ, ಈ ಕಾವ್ಯರತ್ನವನ್ನೂ ಕೊಂಡಂತೆ ಹೇಳಿರುವುದರಿಂದ (ಪ್ರಥಮ. ಆಶ್ವಾ. ೬೪ ರಿಂದ ೭೦) ಪ್ರಾಯಶಃ ಆತನಿಂದ ದ್ರವ್ಯಾದಿಯಾಗಿ ಯಾವ ಪ್ರತಿಫಲ ವನ್ನೂ ಅಪೇಕ್ಷಿಸದೆ ಕೇವಲ ಅನುರಾಗದಿಂದಲೇ ಈ ಕಾವ್ಯವನ್ನು ಆತನಿಗೆ ಸಮರ್ಪಿಸಿದಂತೆ ತೋರು ವುದು. ಶಾಂತಿವರ್ಮನ ಸ್ತೋತ್ರವನ್ನು ಪೀಠಿಕೆಯಲ್ಲಿ ವಿಶೇಷವಾಗಿ ಸ್ತುತಿಸಿದ್ದರೂ,[1] ಆತನ ದೇಶ ಕುಲಗೋತ್ರಾದಿಗಳೊಂದನ್ನೂ ಸ್ಪಷ್ಟವಾಗಿ ಹೇಳಲಿಲ್ಲ. ಆದರೆ ಈ ಶಾಂತಿಯನ್ನು ಕಥಾನಾಯಕ ನಿಗೆ ಅಭಿನ್ನನೆಂದು ಅಲ್ಲಲ್ಲಿ ವರ್ಣಿಸಿರುವ ಈತನ ಪದ್ಧತಿಯಂತೆ ವಿವಾಹಿತನಾದ ಪದ್ಮರಸನನ್ನು ಸ್ತುತಿ ಪಾಠಕರಿಂದ ಆ. ೪-೬೭ ನೆಯ ಪದ್ಯದಲ್ಲಿ ಹೊಗಳಿಸಿರುವುದನ್ನು ಗಮನಿಸುವುದರಿಂದ ಈ ಶಾಂತಿಯ ತಂದೆ ಬೊಪ್ಪನು, ತಾಯಿ ಮಾದಾಂಬಿಕೆ, ಹೆಂಡತಿ ಭಾಮಲೆ, ಅಧಿರಾಜನು ಕಾರ್ತವೀರ್ಯ, ಎಂಬಂಶಗಳು ತಿಳಿದುಬರುವುವು. ಈ ಶಾಂತಿನಾಥನ ಬಿರುದಿಗಾಗಿಯೇ (೧-೪-೨) ನೆಯ ಗದ್ಯ ವನ್ನು ರಚಿಸಿರುವನು. ಬಿರುದುಗಳಲ್ಲಿ "ಕರ್ಣಾಟಕೀಕರ್ಣಾವತಂಸ" ಮೊದಲಾದ ಈ [2]ನಾಲ್ಕು ಬಿರುದುಗಳನ್ನು ನೋಡಿದರೆ ಶಾಂತಿಯು ತಾನೊಬ್ಬ ನಾಪ್ಪ್ರಭುವಾಗಿದ್ದರೂ ತನ್ನ ಒಡೆಯನಿಗಾಗಿ ಕರ್ಣಾಟಕ, ಕೇರಳ, ಮಳಯ, ಸಿಂಹಳಗಳೆಂಬ ದಕ್ಷಿಣದೇಶದ ಪಶ್ಚಿಮ ದಕ್ಷಿಣಭಾಗಗಳ ಅಧಿ ಪತಿಯಾಗಿದ್ದನೆಂದು ಮಾತ್ರ ತಿಳಿಯ ಬಹುದು. ಈತನ ಗುರುವು ಮುನಿಚಂದ್ರ ಪಂಡಿತನೆಂಬುದು [3]"ಇದು.....ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತಸೂಕ್ತಿ ಚಂ

---

[1] ಆದಿಪುರಾಣವನ್ನು ಬರೆದ ಪಂಪನು ತನ್ನ ಆಶ್ರಯದಾತನಾದ ಅರಿಕೇಸರಿಯ ಹೆಸರನ್ನೇ ತನ್ನ ಆದಿಪುರಾಣದಲ್ಲಿ ಯಾವ ಸಂದರ್ಭದಲ್ಲಿಯೂ ಹೇಳಲಿಲ್ಲ. ಆದರೆ ಅವನನ್ನು ಉದ್ದೇಶಿಸಿ ಅರ್ಜುನ ನಾಮ್ಯದಿಂದ ಏಕ್ಕನೂರ್ಜುನವಿಜಯವೆಂಬ ಬೇರೊಂದು ಗ್ರಂಥವನ್ನೇನೋ ಬರೆದಿರುವನು. ಪೊನ್ನ ನು ತನಗೆ ಆಶ್ರಯವನ್ನುಕೊಟ್ಟವ್ವ ರಾಜನನ್ನುದ್ದೇಶಿಸಿ ಭುವನೈಕರಾಮಾಭ್ಯುದಯವೆಂಬ ಗ್ರಂಥವ ನ್ನು ಬೇರೆಯಾಗಿ ಬರೆದಿದ್ದರೂ (ಇದು ಕೇವಲ ಊಹಾಲಬ್ಧವಾದುದು). ಶಾಂತಿಪುರಾಣವನ್ನು ಬರೆ ಯಿಸಿದ ಮಲ್ಲಪಾರ್ಯ ಪುನ್ನಮಾರ್ಯ ದಂಡನಾಥರನ್ನು ತನ್ನ ಶಾಂತಿಪುರಾಣದ ಪೀಠಿಕೆಯಲ್ಲಿ ವಿಶೇಷವಾಗಿ ಸ್ತುತಿಸಿರುವನಲ್ಲದೆ ತನ್ನ ಗುರುವಾದ ಜಿನಚಂದ್ರನನ್ನೂ ಶಾಂತಿನಾಥಜಿನನಿಗೆ ಅಭಿನ್ನ ನೆಂದು ಕಾವ್ಯದ ಹಲವೆಡೆಗಳಲ್ಲಿ ಹೇಳಿರುವನು. ರನ್ನನಾದರೋ ತನ್ನಿಂದ ಆಜಿತಪುರಾಣವನ್ನು ಬರೆಸಿದ ಅತ್ತಿಮಬ್ಬೆಯ ಚರಿತ್ರೆಯನ್ನೇ ಸಂಕ್ಷೇಪವಾಗಿ ತನ್ನಪುರಾಣದ ಪೀಠಿಕಾ ಪ್ರಕರಣದಲ್ಲಿ ಹೇಳಿರುವನು. ಈ ಕವಿಯಾದರೋ ತನ್ನ ಆಶ್ರಯ ದಾತನಾದ ಶಾಂತಿವರ್ಮನನ್ನು ಪೀಠಿಕೆಯಲ್ಲಿ ವಿಶೇಷವಾಗಿ ಸ್ತುತಿಸಿರುವುದು ಮಾತ್ರವಲ್ಲದೆ ಕಥಾನಾಯಕನಾದ ಪುಷ್ಪದಂತನಿಗೆ ಅಭಿನ್ನನೆಂದೂ ಅಲ್ಲಲ್ಲಿ ವರ್ಣಿಸಿರುವನು.

[2] "ಕರ್ಣಾಟಕೀ ಕರ್ಣಾವತಂಸನುಂ, ಮಳಯವಾನಿನೀ ಮನೋವಾನಸಹಂಸನುಂ, ಕೇರಳೀ ಕುಚಕಲಶತಾರಹಾರನುಂ, ಸಿಂಹಣ ಸೀಮಂತಿನೀ ಸಿಂಧೂರನುಮೆನಿಸಿ ನೆಗಟ್ವಿ ನಾಪ್ಪ್ರಭುನಭೋ ಮಣಿ ಶಾಂತಿವರ್ಮನ ಯಶೋಲತೆಗಾಲಂಬವಾಗಿ ಮನೋಹರವಾದ ಕಥಾವನಿತೆಗುದ್ಭವಸ್ಥಾನ ವೆಂತೆಂದೊಡೆ"—ಇವು ಮೊದಲಾದ ಕಾವ್ಯಭಾಗಗಳಿಂದ ಇದು ಸ್ಪಷ್ಟವಾಗುವುದು.

[3] ಆಶ್ವಾಸಾಂತ್ಯ ಪದ್ಯಗಳಿಂದ ಇದು ಸ್ಪಷ್ಟಪಡುವುದು.

ದ್ರಿಕಾವಿಾನಪರಿವುಷ್ಪವಮಾನಸಮುರಾಳ ಗುಣವರ್ಮ....."ಎಂಬ ಆಶ್ವಾಸಾಂತ್ಯ ಗದ್ಯಗಳಿಂದ ಸ್ಪಷ್ಟವಾಗುವುದು. ಈ ಮುನಿಚಂದ್ರಪಂಡಿತನು ಉಭಯಕವಿಯಾದುದರಿಂದ ಕನ್ನಡದಲ್ಲಿಯೂ ಪ್ರಸಿದ್ಧಕವಿಯಾಗಿದ್ದಿರಬಹುದು.

ಈತನು ತನ್ನ ಗ್ರಂಥದ ಕಾಲವನ್ನು ಕಂರೋಕ್ತವಾಗಿ ಎಲ್ಲಿಯೂ ಹೇಳಿಲ್ಲ. ಪೂರ್ವಕವಿಸ್ತುವಾವಸರದಲ್ಲಿ [1]ಗುಣವರ್ಮಾದಿ ಪೂರ್ವಕವಿಗಳೊಡನೆ ಜನ್ನಿಗನನ್ನೂ (೧೨೦೦-೧೨೩೫) ನೇರಿಸಿ ಹೇಳಿರುವುದರಿಂದ ೧೨೩೫ ಕ್ಕಿಂತ (೧೩ ನೆಯ ಶತಮಾನದ ಆರಂಭಕ್ಕೆ) ಹಿಂದಣವನಲ್ಲವೆಂದು ಸ್ಪಷ್ಟವಾಗುವುದು. ಅಂತೆಯೇ ಮಲ್ಲಿಕಾರ್ಜುನನು (೧೨೪೫ ಅಥವಾ ೧೨೬೦) ತನ್ನ ಸೂಕ್ತಿ ಸುಧಾರ್ಣವದಲ್ಲಿ ಈ ಪುಷ್ಪದಂತ ಪುರಾಣದ ಪದ್ಯಗಳನ್ನು ಉದ್ಧರಿಸಿರುವುದರಿಂದ ೧೩ ನೆಯ ಶತಮಾನದ ಪೂರ್ವಾರ್ಧಕ್ಕಿಂತ ಮುಂದಣವನಲ್ಲವೆಂದೂ ನಿರ್ಧರವಾಗಿ ಹೇಳಬಹುದು ಈತನು ತನಗೆ ಆಶ್ರಯವನ್ನಿತ್ತು ಈ ಕಾವ್ಯವನ್ನು ಬರೆಯಿಸಿ ಸ್ವೀಕರಿಸಿದವನು ನಾಪ್ರಿಭು ಶಾಂತಿವರ್ಮನೆಂದೂ, ಗುರುವು ಮುನಿಚಂದ್ರ ಪಂಡಿತನೆಂದೂ ಈ ಕಾವ್ಯದಲ್ಲಿ ಹಲವೆಡೆಗಳಲ್ಲಿ ಹೇಳಿಕೊಂಡಿರುವನು. ಆದರೆ ಸೌಂದತ್ತಿಯ (ಸುಗಂಧವರ್ತಿ) ರಟ್ಟರಸರಲ್ಲಿ ಲಕ್ಷ್ಮದೇವನ ಮಗನಾದ IV ಕಾರ್ತವೀರ್ಯನಿಗೆ ಲಕ್ಷ್ಮದೇವನೆಂಬ ಮಗನಿದ್ದನು. ಇವನ ಗುರು ಪುಟ್ಟರಾಜ್ಯ ಪ್ರತಿಷ್ಠಾಚಾರ್ಯನೆಂಬ ಬಿಗುದುಳ್ಳ ಮುನಿಚಂದ್ರ ಪಂಡಿತನು. ಈತನು ಕಾರ್ತವೀರ್ಯನಿಗೆ ಮಂತ್ರಿ ಮತ್ತು ಗುರು, ಕಾರ್ತವೀರ್ಯನ ಮಗ

---

[1] ಅನುಗುಣವಾಗಿ ಕೂಡೆ ಗುಣವರ್ಮನ ಪೆಯ್ನಿರಿ ಪಂಪನೋಜೆ ಪೊ।
ನ್ನನ ಪೊಸದೇಸೆ ರನ್ನನ ಗುಣೋನ್ನತಿ ಯಗ್ಗಳನಿಳ್ಪ ನಾಗವ ॥
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂವು ನಾಗಚಂ।
ದ್ರನ ರಸವೃತ್ತಿ ರಂಜಿಸುಗೆ ನಿರ್ಣಯವೆನ್ನಯ ನವ್ಯಕಾವ್ಯದೊಳ್ ॥ ೧-೩೬ ॥

ಧರಣೀಶಾಗ್ರಣಿ ಕಾರ್ತವೀರ್ಯ ಸುತನಪ್ಪೀ ಲಕ್ಷ್ಮದೇವಂಗೆ ಸು।
ಸ್ಥಿರಮಪ್ಪಂತಿರೆ ಧಾತ್ರಿಯಂ ನಯದಿನೇಕಾಯತ್ರಮಂ ಮಾಡಿದಂ ॥
ವರಬಾಹಾಬಳದಿಂ ವಿರೋಧಿನೃಪರಂ ಬೆಂಕೊಂಡನೀ ವಾಣನಾ।
ಭರಣಂ ಶ್ರೀಮುನಿಚಂದ್ರದೇವನಸುಹೃನ್ಮಾತಂಗಕಂಠೀರವಂ ॥

ಆರ್ಯಂ ಸಚಿವರೊಳಿತಿಚಾ।
ತುರ್ಯಂ ಪುಟ್ಟೋರ್ವಿಪಪ್ರತಿಷ್ಠಾಚಾರ್ಯಂ ॥
ಕಾರ್ಯಧುರಂಧರತೆಯೊ ಳ್।
ದಾರ್ಯದೊ ಳಿರಿಂದವಧಿಕನೀ ಮುನಿಚಂದ್ರಂ ॥

ಆ ಮುನಿಚಂದ್ರ ದೇವನಲಮಾತ್ಯ ರಿಳಾಸ್ತುತರಿಷ್ಟ ಶಿಷ್ಟಚಿಂ।
ತಾಮಣಿ ಕಾಮರಾಜ ತನಯಂ ಕರಣಾಗ್ರಣಿ ಶಾಂತಿನಾಥನು ॥
ದ್ದಾಮಪರಾಕ್ರಮಂ ನೆಗಟ್ಟಿ ಕೂಂಡಿಯನಾಗ ನುದಾರಚಾರು ಲ।
ಕ್ಷ್ಮೀಮಹಿಮಾವಳಂಬನ ಸುಖಾನುಭವಂ ಸಲೆ ಮಲ್ಲಿಕಾರ್ಜುನಂ ॥

ಎನೆ ನೆಗಟ್ಟಿ ಮಲ್ಲಿಕಾರ್ಜುನನ ವಂಶಾವತಾರಮೆಂತೆಂದೊಡೆ.

ಲಷ್ಮೀದೇವನಿಗೆ ಶಸ್ತ್ರಶಾಸ್ತ್ರ ಶಿಕ್ಷಕರಾಗುವನು. ಕರಣಿ ಕಾಗ್ಗಣಿ ಶಾಂತಿವರ್ಮ, ಕೊಂಡಿಯನಾಗ, ಮಲ್ಲಿಕಾರ್ಜುನ ಎಂಬ ಮೂವರು ಈತನಿಗೆ ಇತರ ಮಂತ್ರಿಗಳು. ಈ ಮೂವರಲ್ಲಿ ಶಾಂತಿನಾಥನು ಇಪ್ಪತ್ತೆಪ್ಪು ಚಿಂತಾಮಣಿಯು. ಕಾಮುರಾಜನ ತನಯನು ಎಂದು (ಶಕ ೧೧೪೧-ಕ್ರಿ. ೧೨೭೯) ರಲ್ಲಿ ಪುಟ್ಟಿದ ಕುಂಡಿಯ ಮಲ್ಲಿಕಾರ್ಜುನನ ಒಂದು ಶಾಸನದಲ್ಲಿ ಹೇಳಿರುವುದರಿಂದ ಈ ಶಾಸನದಲ್ಲಿ ನಿರ್ದಿಷ್ಟನಾದ ಶಾಂತಿವರ್ಮನೇ ಈ ಕವಿಯ ಆಶ್ರಯದಾತೃವೆಂದೂ, ಈ ಮುನಿಚಂದ್ರಪಂಡಿತನೇ ಈತನ ಗುರುವೆಂದೂ ನಾವು ಊಹಿಸಿ ತಿಳಿಯುವುದರಿಂದ ಈ ಕವಿಯು ೧೨೩೦ ರಲ್ಲಿ ಇದ್ದಿರಬೇಕೆಂದು ಸ್ಪಷ್ಟವಾಗುವುದು.

ಅಲ್ಲದೆ ತನ್ನ ಪಾಂಡಿತ್ಯವು ವಜ್ರದೇವನರನಾಥಾಸ್ಥಾನದಲ್ಲಿ ಶ್ಲಾಘಿಸಲ್ಪಡುತ್ತಿತ್ತೆಂದು ಈ ಕವಿಯೇ ಗ್ರಂಥದ ಪೀಠಿಕೆಯಲ್ಲಿ ಹೇಳಿಕೊಂಡಿರುವನು. (ಶಕ ೧೧೪೩ ಕ್ರಿ. ಶ. ೧೨೨೧) ರಲ್ಲಿ ಹುಟ್ಟಿದ ಶಾಸನ ಒಂದರಲ್ಲಿ[1] ಬಲ್ಲಾಳ ರಾಜನಾದ II ನೆಯ ನೃಸಿಂಹನ ಸೇನಾನಾಯಕ ಬೊಮ್ಮನು ವಜ್ರನ ಸೇನೆಯನ್ನು ಒಕ್ಕಲಿಕ್ಕಿ ಮಡಿದನೆಂದು ಹೇಳಿರುವುದು. ಬಲ್ಲಾಳ II ನೆಯ ನೃಸಿಂಹನನ್ನು ಇದಿರಿಸಿದ ವಜ್ರನು ಈ ಕವಿಯಿಂದ ಉಕ್ತನಾಗಿರುವ ವಜ್ರದೇವನರನಾಥನೇ ಎಂದು ನಾವು ಹೇಳಬಹುದಾದುದರಿಂದ ೧೨೨೧ ರಲ್ಲಿಯೇ ಈ ಗುಣವರ್ಮನು ಪಾಂಡಿತ್ಯದಿಂದ ಪ್ರಸಿದ್ಧಿಗೆ ಬಂದಿದ್ದನೆಂದು ಸ್ಪಷ್ಟವಾಗುವುದು.

---

[1] ಮೈಸೂರು ಎಫಿಗ್ರಾಫಿಯಾ ಕರ್ಣಾಟಕ ವಾಲ್ಯೂಂ ನಂ 6.

ಹಾಸನ—೧೦೬

ಶ್ರೀ ತೊಲತೊಲಗೆಂದು ಮಾರ್ಮಲೆವ ವಜ್ರನ ಸೇನೆಯು ನೊಕ್ಕಲಿಕ್ಕಿ ತಾಂ।
ತೊಲಗದೆ ನಿಂದು ವೈರಿಭಟರಂ ತವೆ ಕೂಂದು ರಣಾಜಿರಂಗದೊಳ್ ॥
ಮಲೆದಿದಿರಾಂತರಂ ತಱಿಯದು ಕಣ್ಬಸವೊತ್ತುವಿನೊಂದು ತಳ್ಗಿನಿಂ
ಕಲಿತನಮಂ ನೃಸಿಂಹನರನಾಥನ ನಾಯಕ ಬೊಂಮ್ಮನುರ್ವಿಯೊಳ್ ॥

ಬಱಿಸಿಡಿಲೆಱಿಗುವ ತೆಱಿದಿಂ।
ದುಱಿದಾಂತರನಿಕ್ಕಿ ಪೊಕ್ಕು ಸಂಗರಧರೆಯೊಳ್ ॥
ಕುಱಿದಱಿದಱಿದಱಿದಂ ಪಲವರ।
ನುಱಿಗಲಿ ನಿಟ್ಟೂರ ಮಾಚಗೌಡನ ಬಮ್ಮಂ ॥

ಈ ಕಂದವು ತುಂಬಾ ಅಶುದ್ಧ. ಅರ್ಥವಾಗುವಂತಿಲ್ಲ.

ಯಿದುಱಿದು ವಿರ್ದ್ದ ಬಮ್ಮವ।
ವನಕಾ ಸುರಕಾನ್ಕೆಯಿಕ್ಕಿ ನಿವುಗೆವುಗೆಂಬಾ ॥
ತಿಱಿನಿರವ ಮಣ್ಮತಿರೆಸಂ।
ತೊಸ(ದಿಂ) ದಿದಿರ್ಗೊಂಡರಂದು ಸುರಲೋಕದೊಳಂ॥

ಸ್ವಸ್ತಿ ಶ್ರೀ ಸಕವರಿಷ ೧೧೪೩ನೆಯ ವಿಕ್ರಮ ಸಂವತ್ಸರದ ಫಾಲ್ಗುಣ ಶು. ೫ ಬು. ಶ್ರೀ ವೀರನಾರಸಿಂಹದೇವರು ದೋರಸಮುದ್ರದ ನೆಲೆವೀಡಿನಿಂದಲು ಪೃಥ್ವೀರಾಜ್ಯಂಗೆಯ್ಯುತ್ತುಂ ವಜ್ರದೇವನ ಮೇಲೆ ಮಾಧವದಂಡನಾಯಕರದಂಡ ಹಳ್ಳದಿಂತನಱಿಯ ಕಾಳೆಗದಲ್ಲಿ ನಿಟ್ಟೂರ ಮಾಚಗೌಡನ ಮಗ ಬೊಂಮೆಯ ನಾಯಕ ಕಾದಿ ಸುರಲೋಕ ಪ್ರಾಪ್ತನಾದ–ಮಂಗಳ ಮಹಾ ಶ್ರೀ ಶ್ರೀ

ಕಾರ್ತವೀರ್ಯನ ಕರಣಿಕಾಗ್ರಣಿಯು ಒಬ್ಬ ಶಾಂತಿವರ್ಮನೆಂದು ಶಾಸನದಲ್ಲಿ ಕೀರ್ತಿತವಾಗಿರುವುದು. ಈ ಕವಿಯೂಕೂಡ ತನ್ನ ಈ ಗ್ರಂಥದ ಪೀಠಿಕೆಯಲ್ಲಿ

ಎಂದೋರಂತಿರೆ ವಜ್ರದೇವನರನಾಥಾಸ್ಥಾನದೊಳ್ ಕೂರ್ತ ನ।
ಣ್ಪಿಂದಂ ಕೋವಿದರೆಯ್ದೆ ಕೊಂಡುಕೊನೆಯಲ್ ಕೇಳ್ದೆಲ್ಲರಿಂ ಶಾಂತಿ ವ॥
ರ್ಮಂ ದೀನಾನತವರ್ಮನಾದರಿಸಿ ನೀಂ ಪೇಟಿಂದೊಡೀಗಳ್ ಮನಂ॥
ದಂದೆಂ "ಪಾಲ್ಗಡ ಮರ್ದೆ"ನಲ್ ಜಿನಕಥಾವಿಸ್ತಾರಮಂ ಸಾರಮಂ।

ಈ ಪದ್ಯವನ್ನು ಬರೆದಿರುವನು. ಕವಿಚರಿತ್ರಕಾರರು ಈ ಪದ್ಯದಲ್ಲಿ ಉಕ್ತನಾಗಿರುವ ವಜ್ರದೇವನೇ ಶಾಸನೋಕ್ತನಾದ ಕಾರ್ತವೀರ್ಯನೆಂದೂ, ಈತನ ಕರಣಿಕನಾದ ಶಾಂತಿವರ್ಮನ ಆಶ್ರಯದಿಂದ ಈ ಪುಷ್ಪದಂತ ಪುರಾಣವನ್ನು ಕಾರ್ತವೀರ್ಯನ ಸಭೆಯಲ್ಲಿ ಬರೆದಂತೆಯೂ ಅಭಿಪ್ರಾಯ ಪಟ್ಟಿರುವಂತೆ ಕಾಣುವುದು.[1] ಅಲ್ಲದೆ ಕವಿಚರಿತ್ರಕಾರರು ಈ ಪದ್ಯದ ಆಧಾರದಿಂದಲೇ ೧೦೦೦ರಿಂದ ೧೦೨೦ ರ ವರೆಗೆ ಆಳಿದ ಕಾರ್ತವೀರ್ಯರಾಜನ ಸಭೆಯಲ್ಲಿ ಈ ಪುಷ್ಪದಂತಪುರಾಣವು ರಚಿತವಾದುದೆಂದು ಹೇಳಿ ಈ ಕವಿಯು ಪೂರ್ವಕವಿಸ್ತವಾವಸರದಲ್ಲಿ ಹೊಗಳಿರುವ ಜನ್ನನು (೧೨೦೦ ರಲ್ಲಿ ಅನಂತನಾಥಪುರಾಣವನ್ನು ಬರೆದವನು) ೧೨೩೦ ರ ವರೆಗೂ ಇದ್ದುದರಿಂದ ಇದಕ್ಕೆ ವಿರುದ್ಧವಾಗದಂತಿರಬೇಕೆಂದು ಈ ಕವಿಯ ಕಾಲವನ್ನು ೧೨೩೫ ಎಂದು ಕವಿಚರಿತ್ರೆಯಲ್ಲಿ ಹೇಳಿರುವಂತೆ ಕಾಣುವುದು. ಇದನ್ನೇ ಡಾಕ್ಟರ್. ವೆಂಕಟಸುಬ್ಬಯ್ಯನವರು 'ಕವಿಚರಿತ್ರಕಾರರು ಹೇಳಿರುವ ಈ ಕವಿಯ ಕಾಲದಲ್ಲಿ ಎಂದರೆ ೧೨೩೫ ರಲ್ಲಿ ಕಾರ್ತವೀರ್ಯನಾಗಲಿ ಅವನ ಮಗ ಲಕ್ಷ್ಮೀದೇವನಾಗಲಿ ಇರಲಿಲ್ಲವಾದುದರಿಂದ (ಕೆಲವು ಕವಿಗಳ ಜೀವಮಾನ. ಪುಟ. ೧೦೧) ಈ ಕವಿಯು IV ನೆಯ ಕಾರ್ತವೀರ್ಯನ ಸಭೆಯಲ್ಲಿ ಈ ಪುಷ್ಪದಂತ ಪುರಾಣವನ್ನು ಬರೆದುದು ಅಸಂಭವವೆಂದು ಹೇಳಿ ಜನ್ನನು ಯಶೋಧರಚರಿತ್ರೆಯನ್ನು ಬರೆದ ಕಾಲದಿಂದ ಎಂದರೆ ೧೨೦೯ ರಿಂದ ಈ ಕಾರ್ತವೀರ್ಯನ ಆಳಿಕೆಯ ಅಂತ್ಯಕಾಲವಾದ ೧೨೨೦ ರೊಳಗೆ ಎಂದರೆ ಸು. ೧೨೧೬ ರಲ್ಲಿ ಈ ಕಾವ್ಯವನ್ನು ಬರೆದಿರುವನು ಎಂದು ನಿರ್ಧರಿಸಿರುವರು.[2] ಇದರಿಂದ ಇವರೂ ಕೂಡ ಕವಿಚರಿತ್ರಕಾರರಂತೆಯೇ ಕುಂಡಿಯ ಶಾಸನದಲ್ಲಿ ವ್ಯಪದಿಷ್ಟನಾದ ಮುಟ್ಟರ ಕಾರ್ತವೀರ್ಯನೇ ಈ ಕವಿಯು ಹೇಳಿರುವ ವಜ್ರದೇವನರನಾಥನೆಂದೂ ಆತನ ಸಭೆಯಲ್ಲೇ ಈ ಪುಷ್ಪದಂತ ಪುರಾಣವು ಬರೆಯಲ್ಪಟ್ಟಿತೆಂದೂ ಅಭಿಪ್ರಾಯಪಟ್ಟಂತಾಗುವುದು. ಆದುದರಿಂದಲೇ ಇವರು ಕವಿಚರಿತ್ರಕಾರರು ಹೇಳಿರುವ ಈ ಕವಿಯ ಕಾಲವನ್ನು ಮಾತ್ರ ಮಾರ್ಪಡಿಸಲು ಯತ್ನಿಸಿರುವರು.

ಆದರೆ ಮೇಲೆ ಹೇಳಿದ ವಿಷಯಕ್ಕೆ ಅರ್ಥವಾಡುವಾಗ ಈ ಪದ್ಯದಲ್ಲಿ ಉಕ್ತವಾಗಿರುವ ಶಾಂತಿವರ್ಮನ ಸ್ಥಿತಿಯೇನೆಂಬುದನ್ನು ಇಬ್ಬರೂ ವ್ಯಕ್ತಪಡಿಸಲಿಲ್ಲ. ಅಲ್ಲದೆ ಪದ್ಯದ ಅರ್ಥವನ್ನು ಸಾವಧಾನವಾಗಿ ಪರ್ಯಾಲೋಚಿಸಿದಂತೆಯೂ ಕಾಣುವುದಿಲ್ಲ. ಹಾಗೆ ಪದ್ಯಾರ್ಥವನ್ನು ವಿಮರ್ಶಿಸುವುದಾದರೆ ಈ ಪುಷ್ಪದಂತ ಪುರಾಣವು ಕಾರ್ತವೀರ್ಯನ ಸಭೆಯಲ್ಲಾಗಲಿ ಪದ್ಯದಲ್ಲಿ ಉಕ್ತ

[1] ಇದಕ್ಕೆ "ಕಾರ್ತವೀರ್ಯನ ಹಿತಕ್ಷ್ಮಾಭೃದ್ವಜ್ರನಾಥ ನೆನಲ್ ನಾಟ್ಯಪ್ರಭು" ಆ. (೪-೬೭) ಎಂಬ ಪದ್ಯವು ಸ್ವಲ್ಪ ಕಾರಣವಾಗಿರಬಹುದು.

[2] ಇವರು ಜನ್ನನ ಅನಂತನಾಥಪುರಾಣವನ್ನು ಬರೆದ ಕಾಲವನ್ನು ಗಣನೆಗೆ ತರಲಿಲ್ಲ.

ನಾಗಿರುವ ವಜ್ರದೇವನರನಾಥನ ಆಸ್ಥಾನದಲ್ಲಾಗಲಿ ಬರೆಯಲ್ಪಟ್ಟಿತೆಂಬ ತಾತ್ಪರ್ಯವು ಎಂದೂ ಲಭಿಸುವುದಿಲ್ಲ. ''ವಜ್ರದೇವ ನರನಾಥಾಸ್ಥಾನದೊಳ್ ಎಂದೋರಂತಿರೆ ಕೋವಿದರ್ ಕೂರ್ತ ನಣ್ಪಿಂದೆ ಕೊಂಡುಕೊನೆಯಲ್ ಅದಂ ಶಾಂತಿವರ್ಮಂ ಕೇಳ್ದು ಎನ್ನಂ ಆದರಿಸಿ ಈಗಳ್ 'ನೀಂ ಈ ಪುರಾಣಮುಂ ಪೇಳ್ದು' ಎಂದು ಎನಗೆ ಪೇಳಲ್ ಈ ಜಿನಕಥಾ ವಿಸ್ತಾರಮುಂ ಪೇಳಲ್ ಮನಂದಂದೆಂ'' ಎಂಬುದು ಈ ಪದ್ಯದ ಅನ್ವಯವು. ಇದರಲ್ಲಿ 'ಈಗ ಶಾಂತಿವರ್ಮನು ಈ ಪುರಾಣವನ್ನು ಹೇಳುವಂತೆ' ತನಗೆ ಹೇಳಿದುದರಿಂದ ಈ ಪುರಾಣವನ್ನು ಬರೆಯುವೆನೆಂದು ಕವಿಯು ಹೇಳುವುದರಿಂದ ವಜ್ರದೇವನಿಗೂ ಈ ಪುರಾಣರಚನೆಗೂ ಯಾವ ಸಂಬಂಧವೂ ಇಲ್ಲವೆಂದು ಸ್ಪಷ್ಟವಾಗುವುದು. ಆದರೆ ಈ ಪದ್ಯದಿಂದ ವಜ್ರದೇವನರನಾಥನ ಆಸ್ಥಾನದಲ್ಲಿ ಈ ಕವಿಯ ಪಾಂಡಿತ್ಯವು ಶ್ಲಾಘಿಸಲ್ಪಡುತ್ತಿತ್ತೆಂಬುದು ಮಾತ್ರ (ಈ ಪದ್ಯದ ಆದಿಭಾಗದಿಂದ) ದೊರಕಿದಂತಾಗುವುದು. ಅಲ್ಲದೆ ಈ ವಜ್ರದೇವನೇ ಆ ಕಾರ್ತವೀರ್ಯನೆಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ. ಆದುದರಿಂದ ಈ ಪದ್ಯೋಕ್ತನಾದ ವಜ್ರದೇವ ನರನಾಥನು ''ಹಾಸನದ ಡಿಸ್ಟ್ರಿಕ್ಟಿನ ಶಾಸನ ಪುಸ್ತಕ''ದಲ್ಲಿ ೧೦೬ನೆಯ ಶಾಸನದಲ್ಲಿ[1] ಉಕ್ತನಾಗಿರುವ II ನೆಯ ಬಲ್ಲಾಳನ ಪ್ರತಿ ದ್ವಂದ್ವಿಯಾದ ವಜ್ರದೇವನೇ ಈ ಕವಿಯಿಂದ ಉಕ್ತನಾದ ವಜ್ರದೇವನು ಎಂದು ಹೇಳುವುದರಿಂದ ಯಾವ ಅನುಪಪತ್ತಿಯೂ ಇರಲಾರದು.

ಈ ಕಾರಣಗಳಿಂದ ಈ ಕವಿಯಕಾಲವು ಸುಮಾರು ೧೨೦೦ ರಿಂದ ೧೨೩೦ ಎಂದು ಹೇಳುವುದರಿಂದ ಪ್ರಕೃತ ಸ್ಥಿತಿಯಲ್ಲಿ ತಿಳಿದುಬಂದಿರುವ ವಿಷಯಗಳಲ್ಲಿ ಯಾವುದೊಂದು ವಿರೋಧವೂ ಇರದು.

ಗ್ರಂಥಲೇಖಕವಿಚಾರಂ

ಎಪಿಗ್ರಾಫಿಯ ಇಂಡಿಯ ಬಾಂಬೈ ಬ್ರಾಂಚ, ವಾಲ್ಯು X ರಲ್ಲಿ VIII ನೆಯದಾಗಿ ಮುದ್ರಿತವಾಗಿರುವ ಶಾಸನವು ಕ್ರಿ. ಶ. ೧೨೧೯ II ರಲ್ಲಿ ಲಕ್ಷ್ಮಿದೇವರಸರು ವೇಣುಗ್ರಾಮದಲ್ಲಿರುವಾಗ ದಂಡನಾಯಕ ಮಲ್ಲಿಕಾರ್ಜುನನಮಗ ಕೇಶಿರಾಜನ ಸಿಸು ಮಾದಿರಾಜನಿಂದ ಬರೆಯಲ್ಪಟ್ಟಿತೆಂದು ಶಾಸನದ ಅಂತ್ಯದಲ್ಲಿರುವ

ಎನೆವೀ ಶಾಸನಮುಂ ವಿರ।
ಚಿಸಿ ಬರೆದಂ ಪೂರ್ವಜನ್ಮದೊಳ್ ಸುಕೃತಮನಾ ॥
ರ್ಚಿಸಿ ಕೇಸಿರಾಜ ವಿಭುವಿನ।
ಸಿಸುವೆನಿಸಿದ ಮಾದಿರಾಜನಾ ವಿಭುಮತದಿಂ ॥

ಎಂಬ ಪದ್ಯದಿಂದ ವ್ಯಕ್ತವಾಗುವುದು. ಸಾಮಾನ್ಯವಾಗಿ ಶಾಸನಗಳಲ್ಲಿ ಪದ್ಯವೊದಲಾದವುಗಳ ರಚನೆಯು ಪಂಡಿತರದು, ಬರವಣಿಗೆಯು ಅಂದವಾಗಿ ಬರೆವ ಶಕ್ತಿಯುಳ್ಳ ಬರಹಗಾರನದು. ಕಂಡರಿಸುವವನು ಮಾತ್ರ ಓಜನು. ಈ ಶಾಸನವಾದರೋ ಮಾದಿರಾಜನಿಂದ ರಚಿಸಲ್ಪಟ್ಟು ಅವನಿಂ

[1] ಶಾಸನಸಂಗ್ರಹವನ್ನು ಪುಟ ix ರಲ್ಲಿ ಕೊಟ್ಟಿದೆ.

[2] ಪಂಡಿತರಬರವಣಿಗೆಯು ಅಸ್ಪಷ್ಟವೆಂಬುದು ''ಪ್ರಯತ್ನಲಿಖಿತಾನ್ಯಸ್ಯಸ್ಪಷ್ಟಾ ನಿವೈದಿಕಾಕ್ಷರಾಣಿ'' ಎಂಬ ಮುದ್ರಾರಾಕ್ಷಸ ನಾಟಕದ ವಾಕ್ಯದಿಂದ ಬಹುಕಾಲದಿಂದ ಬಂದ ಹೆಸರುವಾಸಿಯಾಗಿರುವುದು.

ದಲೇ ಬರೆಯಲ್ಪಟ್ಟಿರುವುದು. ಇದರಿಂದಲೇ ಈ ಶಾಸನ ಲೇಖಕನಾದ ಮಾದಿರಾಜನು ಲಿಪಿ ಲೇಖನ ವಲ್ಲಿ ಪ್ರಸಿದ್ಧನೆಂದು ವ್ಯಕ್ತವಾಗುವುದು. ಪುಷ್ಪದಂತ ಪುರಾಣದ ಲೇಖಕನಾದ ಮಾದಿರಾಜನೂ, ಸುಂದರವಾದ ಬರವಣಿಗೆಯನ್ನು ಬರೆಯುತಕ್ಕವನೆಂದು ಶ್ಲಾಘಿಸಲ್ಪಟ್ಟಿರುವನು.[1]* ಅಲ್ಲದೆ ಈ ಶಾಸನವನ್ನು ಬರೆದ ಮಾದಿರಾಜನು ಆ ಶಾಸನ ಕಾವ್ಯ ಭಾಗವನ್ನೂ ರಚಿಸಿರುವುದರಿಂದ ಪಂಡಿತ ನೆಂದು ವ್ಯಕ್ತವಾಗುವುದು. ಈ ಪುರಾಣವನ್ನು ಬರೆದ ಮಾದಿರಾಜನೂ ಮಾದಿರಾಜವಿಬುಧನು. ಆ ಶಾಸನದಲ್ಲಿ ದತ್ತವಾಗಿರುವ ಭೂಮಿಯು ನವಿಲ್ಕುಂದದ ಕೋಲಿನಲ್ಲಿ ಅಳೆಯಲ್ಪಟ್ಟಿದೆ. ಈ ಪುರಾಣ ಲೇಖಕನೂ ನವಿಲ್ಗುಂದದ ಮಾದಿರಾಜನು. ಈ ವಿಷಯಗಳೆಲ್ಲವನ್ನೂ ಪರ್ಯಾಲೋಚಿಸಿದರೆ ಈ ಶಾಸನವನ್ನು ಬರೆದ ಮಾದಿರಾಜನೇ ತತ್ಕಾಲದಲ್ಲಿ ರಚಿತವಾಗಿದ್ದ ಈ ಪುಷ್ಪದಂತಪುರಾಣವನ್ನೂ ಬರೆದಿರುವನೆಂದು ಹೇಳುವುದರಲ್ಲಿ ಯಾವ ವಿರೋಧವೂ ಇರಲಾರದು ಮತ್ತು 'ವಿಬುದ್ಧೋದ್ಧತ ನವ್ಯ ಕಾವ್ಯಮುಂ ಮಾದಿರಾಜವಿಬುಧಂ ಬರೆದಂ' ಎಂಬ ವಧ್ಯಭಾಗದಲ್ಲಿರುವ ನವ್ಯಶಬ್ದದ ಅರ್ಥಕ್ಕೂ ಸಾರ್ಥಿಕ್ಯವುಂಟಾಗುವುದು. ಆದುದರಿಂದ ಕವಿಚರಿತ್ರೆಯಲ್ಲಿ ಹೇಳಿರುವ ಪುಷ್ಪದಂತಪುರಾಣ ಲೇಖಕನಾದ ಮಾದಿರಾಜನ ಕಾಲವನ್ನೂ ಕ್ರಿ. ಶ. ೧೬೦೫-೧೬೩೫ ಎಂದು ಮಾರ್ಪಡಿಸಿಕೊಳ್ಳಬಹುದೆಂದು ತೋರುವುದು.

ನಮಗೆ ದೊರೆತ ಆಧಾರಗಳಿಂದ ಸಂಗ್ರಹವಾಗಿ ಈ ಕಾವ್ಯ ಕರ್ತೃವಿನ ಚರಿತವನ್ನು ಸದ್ಯಕ್ಕೆ ಬರೆಯಲಾಗಿದೆ. ವಿಮರ್ಶಕರು ಇದರಲ್ಲಿರಬಹುದಾದಕುಂದು ಕೊರತಗಳನ್ನು ಸೌಹಾರ್ದದಿಂದ ತಿಳಿಯಪಡಿಸುವುದಾದರೆ ಮುಂದಣ ಮುದ್ರಣಗಳಲ್ಲಿ ಸರಿಪಡಿಸಿಕೊಳ್ಳಲಾಗುವುದು.


ಈ ಮುದ್ರಣಕ್ಕೆ ಬೇಕಾದ ಹಸ್ತಲಿಖಿತ ಪ್ರತಿಗಳನ್ನು ಪ್ರಯೋಜನಾಪೇಕ್ಷೆಯಿಲ್ಲದೆ ಸ್ವಂತವಾದ ಉತ್ತರವಾದಿತ್ವವನ್ನು ವಹಿಸಿ ಕಳುಹಿಸಿಕೊಟ್ಟು ಉಪಕರಿಸಿದ ಆರಾ ಸೆಂಟ್ರಲ್ ಜೈನ ಲೈಬ್ರರಿಯ ಅಧಿಕಾರಿಗಳಾದ ಕೆ ಭುಜಬಲಿಶಾಸ್ತ್ರಿಗಳವರಿಗೂ, ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರರಿಯಿಂದ ನಮಗಾಗಿ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಆನುಕೂಲ್ಯವನ್ನು ಕಲ್ಪಿಸಿಕೊಟ್ಟ B. M. ಶ್ರೀ ಕಂಠಯ್ಯ, M. A. (ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್) ರವರಿಗೂ ನಮ್ಮ ಮನಃಪೂರ್ವಕವಾದ ಧನ್ಯವಾದಗಳನ್ನರ್ಪಿಸಿ ಈ ಮುನ್ನುಡಿಯನ್ನು ಉಪಸಂಹರಿಸಿರುವೆವು.

ಇಂತು
ಗ್ರಂಥಪ್ರಕಾಶಕರು,
A. VENKATA RAO
and
H. SESHA IYENGAR

---

[1] *ಬಿಂದುವಿನೊಂದುಶೋಭೆ ತಲೆಕಟ್ಟಿನ ಪೊಕ್ಕುಟಿ ಚೆಲ್ವು ಮಾತ್ರೆಯೊಳ್ ।
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂ ವಿನಗರ್ದೊ ॥
ಳ್ಳಿಂದಿರಲಕ್ಕರಕ್ಕೆ ಬರೆವಂ ಚತುರರ್ ಪರಿವರ್ಣಿಸಲ್ ನವಿ ।
ಲ್ಗುಂದದ ಮಾದಿರಾಜವಿಬುಧಂ ವಿಬುಧೋದ್ಧುರನವ್ಯಕಾವ್ಯಮುಂ ॥

(1) ಸೌಂದತ್ತಿ (ಸುಗಂಧವರ್ತಿ)ಯ ಜಟ್ಟರ ವಂಶಾವಳಿ.



(2) ಸೌಂದತ್ತಿಯ ರಟ್ಟರ ಮತ್ತು ಅವರ ಅಧಿರಾಜರ ಕಾಲ:—

(ಋಟ್ಟರಾಜರು)	(ಅಧಿರಾಜರು)	(ಕಾಲ)
ಪೃಥ್ವೀರಾಮ	ರಾಷ್ಟ್ರಕೂಟ—ಕೃಷ್ಣರಾಜ (ಶಕ. 798 ರಿಂದ 825)	ಸು. 800
ಶಾನ್ತಿವರ್ಮ	ಚಾಲುಕ್ಯ ತೈಲಪದೇವ II (ಶಕ 895—919)	903
ಕಾರ್ತವೀರ್ಯ I	ಚಾಲುಕ್ಯ ಸೋಮದೇವ I (ಶ. 895—919 ?)	...
ಅನ್ಕ	ಚಾಲುಕ್ಯ ಸೋಮದೇವ I	971
ಕನ್ನ II		1009
II ಕಾರ್ತವೀರ್ಯ	ಚಾ—ಸೋಮದೇವ II (ಶ. 991—998) ಮತ್ತು	
	ಚಾ—ವಿಕ್ರಮಾದಿತ್ಯ II (ಶ. 998—1049)	1010
II ಸೇನ	ಚಾಲುಕ್ಯ ವಿಕ್ರಮಾದಿತ್ಯನ ಮಗ ಜಯಕರ್ಣ (ಸ್ವತಂತ್ರನಾದ ಬಳಿಕ)	ಸು. 1050
IV ಕಾರ್ತವೀರ್ಯ ಮತ್ತು ಮಲ್ಲಿಕಾರ್ಜುನ	ಸ್ವತಂತ್ರರು	1124—1127
V ಕಾರ್ತವೀರ್ಯ	,,	1141
II ಲಕ್ಷ್ಮದೇವ	,,	1151

(3) ಹೊಯ್ಸಳ ವಂಶದರಸರ ವಂಶವೃಕ್ಷ:—

ಸಳ—1006

|

ನೃಪಕಾಮ - 1022 - 27 (47)

|

ವಿನಯಾದಿತ್ಯ 1047 - 1100

|

ಎರೆಯಂಗ (1063—1093) ಯುವರಾಜನಾಗಿದ್ದುದು

I ಬಲ್ಲಾಳ 1100—1106 ಬಿಟ್ಟಿದೇವ 1111 - 1141 ಉದಯಾದಿತ್ಯ 1123

|

I ನರಸಿಂಹ 1141—1173

|

II ಬಲ್ಲಾಳ 1173 - 1220

|

II ನರಸಿಂಹ 1220 (17) - 1235 (ವಜ್ರದೇವನ ಪ್ರತಿದ್ವಂದ್ವಿ)
ಶಕ 1143 + 78 = ಕ್ರಿ. ಶ. 1221

|

ಸೋಮೇಶ್ವರ 1235 - 1254 (62)

|

III ನರಸಿಂಹ 1254 - 1291 ರಾಮನಾಥ 1254 - 1295

|

III ಬಲ್ಲಾಳ 1291 - 1342 ವಿಶ್ವನಾಥ - 1295—97

|

IV ಬಲ್ಲಾಳ 1343.....

ಶ್ರೀ

ಗುಣವರ್ಮ ವಿರಚಿತಮಪ್ಪ

ಪುಷ್ಪದಂತಪುರಾಣಂ



ಪ್ರಥಮಾಶ್ವಾಸಂ.

ಸ್ರ॥ ಶ್ರೀಪೌಲೋಮೀಶಭೂಭೃತ್ಸಮುದಯವಿನುತಂಗಳ್ ತಮನ್ತೋಮಚೈತ್ರಾ ।
ದೀಪಂಗಳ್ ದರ್ಶಿತಾಶಾಂಬರಸಕಲಪದಾರ್ಥಕ್ರಮಂಗಳ್ ಸದಾಲೋ ॥
ಕಾಪದ್ವಿಚ್ಛೇದಕಂಗಳ್ ಮಹದಮೃತನಿಧಿಸ್ಫೂರ್ತಿಗಳ್ ಪುಷ್ಪದಂತ ।
ಶ್ರೀಪಾದಂಗಳ್ ಸಮುತ್ಪಾದಿಸುಗೆಮುಗೆ ಹೃದಿಂದೀವರಾನಂದದೊಳ್ಪಂ ॥ ೧ ॥

ಮ॥ ಅನಿಶಂ ಸ್ವಾತ್ಮಗುಣಪ್ರಬದ್ಧರೆನಿಸಿರ್ದುಂ ಮುಕ್ತರಾದಂ ನಿರಂ ।
ಜನರಾಗಿರ್ದುಮಶೇಷಲೋಕನಿಹಿತಾರ್ಥಗ್ರಾಹಿಗಳ್ ಯೋಗವ ॥
ರ್ತನವೊಂದುಂ ತಮಗೆಂದುಮಿಲ್ಲೆನಿಸಿಯುಂ ಸಿದ್ಧರ್ಕಳೆಂದೆಂಬ ಪೆಂ ।
ಪಿನಮೂರ್ತರ್ ಪರಮಾತ್ಮರುದ್ಧರಿಸುಗೆಮ್ಮಂ ಸಿದ್ಧಿಯಪ್ಪನ್ನೆಗಂ ॥ ೨ ॥

ಮ॥ಸ್ರ॥ ವರಪಂಚಾಚಾರಮಾಚಾರವನೊದವಿಸೆ ಷಟ್ತ್ರಿಂಶ[ದುದ್ಯ]ದ್ಗುಣಂ ಬಿ ।
ತ್ತರದಿಂದಂ ಸದ್ಗುಣವ್ರಾತದೊಳೆನುವಿಸೆ ಸಮ್ಯಕ್ತಪಃಶೀಲಜಾಲಂ ॥
ಪೊರೆದಂತೇವಾಸಿಭವ್ಯಾವಳಿಗತುಳತಪಃಶೀಲಮುಂ ಮಾಡೆ ಲೋಕೋ ।
ತ್ತರರಾದಾಚಾರ್ಯರೆಮ್ಮಂ ನಿಯಮಿಸುಗೆ ನಿಜಾನುಗ್ರಹಪ್ರೌಢಿಯಿಂದಂ ॥ ೩ ॥

ಮ॥ ನಯವಾದಂ ನಯಮಾಗಿ ಕೂಡೆ ಪೊಳೆಯಲ್ ನಿಕ್ಷೇಪಮಾಕ್ಷೇಪಮಾ ।
ರಯಮಿಲ್ಲೆಂದೆನಿಸಲ್ ಪ್ರಮಾಣಗದಿತಾರ್ಥಂ ಸಂಶಯಂಗೊಳ್ವವಾ ॥
ದಿಯೊಳುಂಟಾಗೆ ಲನತ್ಪ್ರಮಾಣಮತಿಯುಂ ರತ್ನತ್ರಯಂ ಮುಕ್ತ್ಯಲಂ ।
ಕ್ರಿಯೆಯಾಗಲ್ ಮಿಗೆ ಪೇಳ್ವಿರೀಗೆಮಗುಪಾಧ್ಯಾಯರ್ ಸುಖೋಪಾಯಮುಂ ॥ ೪ ॥

ಖಗೆ ತತ್ತ್ವಾರ್ಥವಿನಿಶ್ಚಯಂಬಡೆಯೆ ನೈರ್ಗ್ರಂಥ್ಯಂ ಪೊದಟ್ಟಿತ್ತು ಶಾಂ ।
ತಿಗಡಪರ್ವಾಗಿರಲುಗ್ರಕರ್ಮರಿವುವಂ ನಿರ್ಮೂಲನಂಮಾಡುವು ॥
ಜ್ಜುಗಮಾಯೊಂದಿರಲಪ್ರಮತ್ತತೆಯೊಳೆನ್ಯಪ್ರೀತಿಶೀಲಕ್ಕೆ ಕೇ ।
ಡೊಗೆದತ್ತಂಖ ವಿರುದ್ಧವೃತ್ತರೆವುಗೊಳ್ಪಂ ಮಾಬಿಸ್ಕಿ ಸಾಧೂತ್ತಮರ್ ॥ ೫ ॥

ಕಂ॥ ಎಮಗೀಗೆ ಪಂಚಗುರುಪದ ।
ಕಮಲಂಗಳ್ ಕಡೆಯದೊಂದೆ ಕಲ್ಯಾಣವುನೇ ॥
ವೆಮೊ ಮಿಕ್ಕಾನಾಲ್ಕುಮವನಿ ।
ಗೆ ವಾಣ್ಗೆ ತಾಂ ಮೇಣಿದೊಂದೆ ಮುಖ್ಯಪ್ರಕೃತಂ ॥ ೬ ॥

ಚಂ॥ ಜಿನಪರಮೇಷ್ಠಿಚಾರುಚತುರಾನನದಿಂದೊಗೆತಂದು ನಂದ ಸೈ ।
ಪಿನ ಗಣನಾಥವಕ್ತ್ರಸರಸೀರುಹಕೇಳಿನಿವಾಸದಲ್ಲಿ ನ ॥
ರ್ತನಮನೊಡರ್ಚಿ...ವಿನಯಾನನದಿಂ..... ।
ದಿನಿಸುಬಿಲ್ಲ ವಾಗ್ವನಿತೆ ವಿಶ್ರಮಿಸಿರ್ಕೆ ಮದಾನನಾಬ್ಜದೊಳ್ ॥ ೭ ॥

ಶಾ॥ ಸ್ವಚ್ಛಂಗಳ್ ನಿಜದಿಂ ವಿರಕ್ತವಿನುತಂಗಳ್ ಸಂದನರ್ಘ್ಯಂಗಳ ।
ಸ್ವಚ್ಛದ್ರುಂಗಳನೂನಮುಂಗಳಕರಂಗಳ್ ಸಂತತಾಂತಸ್ತಮೋ ॥
ವಿಚ್ಛೇದಂಗಳುಪಾತ್ತಸೂತ್ರಗತಿಗಳ್ ರತ್ನತ್ರಯಂಗಳ್ ಹೃದ ।
ವ್ಯುಚ್ಛನ್ನಾಭರಣಂಗಳಕ್ಕೆವುಗೆ ಮುಕ್ತಿಶ್ರೀ ಮನಂಗೊಳ್ವಿನಂ ॥ ೮ ॥

ಚಂ॥ ಇಹಪರಸೌಖ್ಯವೆಂಬೆರಡುಮಿಲ್ಲದ ನಾಸ್ತಿಕಧರ್ಮದಿಂದವೊಂ ।
ದಿಹವುನೆ ಃ ಖಲ್ವಬಿಲ್ವ ವಿಧಿ'ಯಿಂದಿನಿಸೆಯ್ದಿಪ ಸೌಗತಾದಿದು ॥
ರ್ವಹಿತಕುಧರ್ಮದಿಂದಮಿಹವುಂ ಪರವುಂ ಬಗೆದಂತೆ ಮಾಟ್ಪಿ ಸ ।
ನ್ಮಹಿತಜಿನೇಂದ್ರಧರ್ಮವುಭವಾಂಛಿತದಾಯಿ ಯೆನಿಪ್ಪುದೊಪ್ಪದೇ ॥ ೯ ॥

ಮು॥ ಕನಕಚ್ಛಾಯೆಯಿನಾಳ್ದ ದೇಹರುಚಿ ಚೆಲ್ವಂ ಬೀಱಿಸಿ ದೋರ್ವಲ್ಲಿ ನಾ ।
ಲ್ಕೆನಸುಂ ತಳ್ತಿರೆ ಖಡ್ಗಖೇಟಕಲಸದ್ವಜ್ರಾಬ್ಜವೊಳ್ಪೊಪ್ಪುವಾ ॥
.....ರಹ್ಮಿಪ್ಪ ಮಾಕಾಳಿಯು ।
ಹ್ಮೆ ನವೀನಾಭರಣಾಂಗೆ ಮುತ್ಕೃತಿಗೆ ಮಾಟಿಪ್ಕೊರ್ಗುಂತೆ ನಿರ್ವಿಘ್ನಮುಂ ॥ ೧೦ ॥

ಉ॥ ಸ್ಫೂರಿಪ...ನವ್ಯಕುಮುದದ್ಯುತಿಮುತ್ತನು ಕೂರ್ಮವಾಹನಂ ।
ಸ್ಫಾರಕಶಾತ್ರಿಶೂಲಘನದಂಡಕುಠಾರಚತುಷ್ಪ್ರಯೋಲ್ಲಸ ॥
ದ್ಭೂರಿಭುಜಾಚತುಷ್ಪ್ರಯನಶೇಷ ಜಿನೇಶ್ವರಧರ್ಮವರ್ತಿ ವಿ ।
ಸ್ತಾರಕನೀಗೆ ಕೂರ್ತಜಿತಯಕ್ಷನವಿಘ್ನವಚೋವಿಲಾಸಮುಂ ॥ ೧೧ ॥

ಚಂ॥ ಹರಿಹರಪದ್ಮಜೌದಿಗಳನೋವದೆ ಕಂತು ಲತಾಂತಬಾಣಮೊಂ ।
ದೆರಡೆಱನೆಚ್ಚು ಗೆಲ್ದ ಜಯದಗ್ಗದ ಸುಗ್ಗಿಯ ಪೊಯಿಸ್ಗಿದೆಂದು ಬಂ ॥
ದಿರದೆ ಪೊಣರ್ಚಿ ನೋಲ್ತು ವಿಜಯಧ್ವಜಮಂ ತೆಱಿಸಿದತ್ತು ಪೋದುದಂ ।
ನಿರವಿಪ ವುಪ್ಪದಂತಮಕರಧ್ವಜನೀಗೆ ಮನೋನುರಾಗಮುಂ ॥ ೧೨ ॥

ಕಂ॥ ಗೌತಮ ಸುಧರ್ಮ ಜಂಬೂ ।
ಖ್ಯಾತ ವಿಶುದ್ಧಾನುಬದ್ಧ ಕೇವಲಿಗಳಭಿ ॥
ದ್ಯೋತಿಸುಗೆ ಭವತಮೋಹರ ।
ಣಾತಿಶಯಂಬಡೆವ ವಿಮಳರತ್ನತ್ರಯಮುಂ ॥ ೧೩ ॥

ಓವುಗೆ ಮನ್ನತಿಯಂ ಶ್ರುತ ।
ಕೇವಲಿಗಳ್ ಮೊದಲ ವಿಷ್ಣುವುನಿವೆರಸು ಜಗ ॥
ತ್ಸೇವಿತ ನಂದ್ಯಪರಾಜಿತ ।
ಗೋವರ್ಧನ ಭದ್ರಬಾಹುವೆಂದಿಂತಯ್ವರ್ ॥ ೧೪ ॥

ದಶಪೂರ್ವಿಗಳೀವನುವವು ।
ದಶವಿಧಸಮ್ಯಕ್ತ್ವಮಣಿಗಳೊಲ್ಪಂಗೈಕಾ ॥
ದಶಧಾರಿಗಳೀವೇಕಾ ।
ದಶನಿಳಯದ ಸಂಪದಂಗಳಕ್ಕೆವುಗೆಂದುಂ ॥ ೧೫ ॥

ಆಚಾರಾಂಗಧರರ್ ವರ ।
ಮಾಚಾರಪವಿತ್ರರೆನಿಪ ಮುನಿಗಳ್ ಸಂ ॥
ದಾಚಾರಸೂತ್ರಮುಂ ಮಿಗೆ ।
ಗೋಚರಿಸುಗೆ ಕಳೆದು ಹೃದಯಮಣಿಗಳ ಮಲಮುಂ ॥ ೧೬ ॥

ಅತಿಶಯತಪದಿಂ ಪಡೆದೊಡೆ ।
ಚತುರಂಗುಳಚಾರಣರ್ದ್ಧಿಯಂ ಪದೆದರ್ಹ ॥
ತ್ಪತಿ ಮೆಚ್ಚಿತ್ತಂ ತ್ರಿಪರ್ಯ ।
ಭೃತಮನೆನಲ್ ಕೊಂಡಕುಂದಮುನಿಪತಿ ಸಂದಂ ॥ ೧೭ ॥

ನುಡಿದುದೆ ತತ್ವಾರ್ಥಂಕೆ ।
ಯ್ವಿಡಿದುದೆ ಸತ್ವೈಕಹಿತಕರಂ ಕುಂದದೆ ತಾಂ ॥
ನಡೆದುದೆ ಸನ್ಮಾರ್ಗಮಿದೇಂ ।
ಪೊಡವಿಯೊಳುತ್ತಮನೊ ಗೃಧ್ರ ಪಿಂಛಾಚಾರ್ಯಂ ॥ ೧೮ ॥

ಚಂ॥ ಅನುಪಮಜೈನಶಾಸನಘನಾಗಮದೊಳ್ ಮಿಗೆ ಧರ್ಮವೃಷ್ಟಿಯಂ ।
ಘನಮೆನೆ ಸಂತತಂ ಸುರಿದರುನ್ನತವೃತ್ತ ಬಳಾಕಪಿಂಛ ಭೂ ॥
ವಿನುತಮಯೂರಪಿಂಛಮುನಿಪರ್ ಸಫಲಂ ನಲೆ ಭವ್ಯಸಸ್ಯವಾ ।
ರ್ತ್ತನಸು ಮಜಿಲ್ಚಿರೋದಸಿಯೊಳೆಯ್ದೆ ಬಳಾಕಮಯೂರಪಿಂಛಮುಂ ॥ ೧೯ ॥

ಕಂ॥ ಅರ್ಹದ್ಬಲಿಮುನಿಪತಿಯ ।
ಭ್ಯರ್ಹಿತವೃತ್ತಿಯನದೇವೊಗಟಿವ್ವಿದೊ ನೆಗಟಿಶ್ಕಿಂ ॥
ದರ್ಹನ ಮತಮಲ್ಲದುದತಿ ।
ಗರ್ಹಿತಮೆಂದೆನಿಸಿದಂ ಮಹೀಮಂಡಲದೊಳ್ ॥ ೦೦॥

ಭೂತಬಲಿ ಮುನಿಪನೀ ವಿ ।
ಖ್ಯಾತಜಿನಂ ದಿವ್ಯಭಾಷೆ ಸಿದಾದ್ಧಂತಂ ಮು ॥
ತ್ತೀತೊದಳೊ ಗಣಾಗ್ರಣಿಯೀ ।
ಭೂತಳದೊಳ್ ವುಪ್ಪದಂತಪರಮಾಚಾರ್ಯಂ ॥ ೦೧ ॥

ಉ॥ ಬಿತ್ತರಮಾಗೆ ಸೂತ್ರಗತಿಯಿಂ ಮಿಗೆ ಪಣ್ಣಿದ ಗಂಧಹಸ್ತಿತೊಂ ।
ಭಿತ್ತಿಯಿಸಾಸಿರಕ್ಕೆ ಶಿವಕೋಟಿಯ ಕೋಟೆ ವಿಪಕ್ಷವಿದ್ವದು ॥
ನ್ಮತ್ತಗಜಂ ಮುದಂ ಬಱಿತು ಕೆಯ್ಯೆಡೆಗೊಟ್ಟುದೆನಲ್ಕೆ ಪೇಟಿವ್ವಿದೇಂ ।
ಮತ್ತೆ ಸಮಂತಭದ್ರಮುನಿರಾಜನುದಾತ್ತಜಯಪ್ರಶಸ್ತಿಯಂ ॥ ೦೦ ॥

ಕಂ॥ ಸತತಮಕಳಂಕಮಂದರ ।
ಕೃತಮಹನನಯಪ್ರಮಾಣ ಪಾರಾವಾರೋ ॥
ದ್ಗತಯುಕ್ತ್ಯಾವೃತಂ ವಿಬುಧ ।
ಪ್ರತತಿಯ ಮಿಥ್ಯಾತ್ವವೃತಿಯ ನಳಿಪುದರಿದೇ ॥ ೦೩ ॥

ಮ॥ ನಿಸದಂ ತನ್ನ ನಿರಾಮಯಾಕೃತಿ ಜಗದ್ವಿಖ್ಯಾತವಾದತ್ತು ಭಾ ।
ವಿನೆ ಸರ್ವಾರ್ಥದಸಿದ್ಧಿಯೊಳ್ ತೊಡೆದರ್ಬೋಧಂ ಭವ್ಯಸಂನೇವ್ಯವಾ ॥
ಯ್ತು ಸುಹೃತ್ಪದ್ಮದೊಳಿಂಬುವೆತ್ತುದು ಪದನ್ಯಾಸಂ ಗಡಾರಣ್ಣಬ ।
ಣ್ಣಿಸರೋರಂತೆ ಜಿನೇಂದ್ರಬುದ್ಧಿವೆಸರಂ ಕ್ರೀಪೂಜ್ಯಪಾದೇಶನಾ ॥ ೦೪॥

ಕಂ॥ ವಾಂದಿಸಿ ತಮಮಂ ದೃಷ್ಟ್ಯೆಯೊ ।
ಳೊಂದಿಸಿ ತತ್ವಾರ್ಥಮಂ ಜಗದ್ವ್ಯವಹಾರ ॥
ಕ್ಕಂದು[ರೆ]ವಾಡಿದ ವಿದ್ಯಾ ।
ನಂದ ಸ್ವಾಮಿಯ ಮಹೋದಯಂ ಕೇವಳವೆಂ ॥ ೦೫ ॥

ನಿರುಪಮಸರಸ್ವತೀ ಸುಂ ।
ದರಜತುರಾನನ ನಶೇಷವಿಬುಧಸ್ತುತ್ಯಂ ॥
ಪರಮಬ್ರಹ್ಮ ನೆನಲ್ ಕವಿ ।
ಪರಮೇಷ್ಠಿ ಪುರಾಣಪುರುಷನೆಂಬುದು ವುಸಿಯೇ ॥ ೦೬ ॥

ಕಂ॥ ವರ ವೀರಸೇನ ಜಿನಸೇ ।
ನರೆಂಬ ಮುನಿವೃಷಭರಾಂತು ಕಲಿಯುಗದೊಳ್ ವಿ ॥
ಸ್ತರಿಸಿ ಜಿನಧರ್ಮರಥಮಂ ।
ಪರಿಯಿಸಿದರ್ ಸಕಲವಸುಮತೀ ಮಂಡಲದೊಳ್ ॥ ೭೬ ॥

ಗುಣಭದ್ರಸ್ವಾಮಿಯ ಗುಣ ।
ದಣಿಕೆಗೆ ಜಿಹ್ವಾಸಹಸ್ರಮಂ ಪಡೆದುಮವಂ ॥
ಫಣಿರೂಪದಿನಿರ್ಮಡಿಸಿದ ।
ಫಣೀಶನೇನಣ್ಣ ಬುದ್ಧಿಯೊಳ್ ಪೆರ್ಚಿದನೋ ॥ ೭೭ ॥

ನಡೆವಳಿಯೊಳ್ ತನ್ನ ಸಮಂ ।
ಬಡೆದಾರುಂ ನಡೆದರಿಲ್ಲ ಗಡಮೆಂತೆರ್ದೆಯಂ ॥
ನುಡಿಯುಂ ನಡೆದುವೊ ಪದುಳಿಕೆ ।
ಯೆಡೆಗೆ ಜಟಾಸಿಂಹಣಂದಿ ಮುನಿವುಂಗವನಾ ॥ ೭೮ ॥

ಏಲಾನದಿಯೂದುದು ಗಡ ।
ಕಾಲುದಕಂ ನಿಂದಭೂಮಿ ಸಿದ್ಧಾಂತವೆಸ ॥
ರ್ಗಾಲಂಬನವಾಯ್ತು ಗಡೆನ ।
ಲೇಲಾಚಾರ್ಯಪ್ರಸಿದ್ಧಿ ಸಾಧಾರಣಮೇ ॥ ೭೯ ॥

ಕಲಿಕಾಲವಶದೆ ಬೋಧಾ ।
ಕುಲಿತಕುದೃಷ್ಟಿಗಳಡಂಗೆ ನಿಜರುಚಿಯಿಂ ಪ ॥
ಜ್ಜ್ವಳಿಸಿ ದಿಗಂಬರಕುಲಮಂ ।
ಬೆಳಗಿದ ಯೋಗೀಂದ್ರದೇವಚಂದ್ರನೆ ವಂದ್ಯಂ ॥ ೮೦ ॥

ಚಂ॥ ವದನಮತಿಪ್ರಸನ್ನತೆಯನಾಳ್ದುದು ಶಾಂತಿಯನಾಂತುದಂತ ವೆ ।
ಯ್ದಿದುದತಿಕಾಂತಿಯಂ ತನು ದಯಾರ್ಣವಮಂ ನೆಲೆವೆರ್ಚಿಸಿತ್ತು ನೋ ॥
ಡಿದೊಡೊಗೆತಂದ ಚಂದ್ರಿಕೆ ಕಳಾಕಳಿತಂ ವಚನಾಮೃತಂ ಮನೋ ।
ಮುದಮನೊಡರ್ಚಿದತ್ತು ವಿಬುಧರ್ಗಿಳೆಯೊಳ್ ಮುನಿಚಂದ್ರದೇವನಾ ॥ ೮೧ ॥

ಕಂ॥ ಭೂತಭವದ್ಭಾವಿಮುನಿ ।
ವ್ರಾತಂ ಸತತಂ ತ್ರಿಹೀನನವಕೋಟೀಸಂ ॥
ಖ್ಯಾತಂ ಮಾನಸಹಂಸ ।
ಪ್ರೀತಿಯನೊಡರಿಕೆ ದಯಾಪಯೋವಾಹಿನಿಯಿಂ ॥ ೮೨ ॥

ಚಂ॥ ವಿಷಯವಿಲೀನಮಾನಸದ ಮಾನಸರಂ ತಿಳಿಪಲ್ಕೆ ವೇಡಿ ನಿ ।
ರ್ವಿಷಯಿಜಿನೇಂದ್ರರುಂದ್ರ ಕಥೆಯೊಳ್ ನವಭಾವರಸಂಗಳಂ ತಟಂ ॥
ಕಷಮೆನಿ ತೋಱಿ ತದ್ರುಚಿಯ ಮೆಯ್ಯೊಳೆ ಸದ್ರುಚಿಯೊಳ್ ತೊಡರ್ಚುವೀ ।
ವಿಷದ ಕವೀಂದ್ರರೀಗೆ ಸುಖಸೃಷ್ಟಿರತರ್ ಕವಿತಾಪ್ರಸಾದಮುಂ ॥ ೩೪ ॥

ಮ॥ ಸ್ರ॥ ಮಣಿಯಂ ತೇರಂಜಿಪಂತೊಪ್ಪುಮನೆಸಗುಗೆ ಕೆಯ್ಕೊಂಡುಂ ಕೊಂಡಾಡಿ ವಿದ್ಯಾ ।
ಗ್ರಣಿಗಳ್ ಭವ್ಯೌಘಸಂಸೇವ್ಯಮನಮಳವಚೋನವ್ಯಮುಂ ಸ್ವಾರ್ಥಸಿದ್ಧಿ ॥
ಪ್ರಣಯಿಪ್ರೋದ್ಯೋದ್ಯಮಂ ವಿಶ್ರುತನವರಸಭಾವಾಭಿಧಾನವ್ಯಮುಂ ಸ ।
ದ್ಗುಣವಿದ್ವದ್ಭವ್ಯಮುಂ ಶ್ರವ್ಯಮನನುಪಮಮುತ್ಕಾವ್ಯಮುಂ ಸತ್ಕವೀಂದ್ರರ್ ॥ ೩೫ ॥

ಚಂ॥ ಅನುಗುಣಮಾಗಿ ಕೂಡೆ ಗುಣವರ್ಮನ ಪೆಸರಿರಿ, ಪಂಪನೋಜೆ, ಪೊ ।
ನ್ನನ ಪೊಸದೇಸೆ ರನ್ನನ ಗುಣೋನ್ನತಿ ಯಗ್ಗಳನೊಳ್ಪು ನಾಗವ ॥
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗಚಂ ।
ದ್ರನ ರಸವೃತ್ತಿ ರಂಜಿಸುಗೆ ನಿರ್ಣಯ ಮೆನ್ನಯ ನವ್ಯಕಾವ್ಯದೊಳ್ ॥ ೩೬ ॥

ಕಂ॥ ಚತುರಾನನನಂ ಬಿಡಿಸಿದ ।
ರತಿಶಯಿತಾರ್ಥಮನೆ ತೋಱಿ ಪದಿರಿಂ ಪೆಱಿರಾರ್ ॥
ಪತಿಗಳೊಳನುರಕ್ತೆಯೆ ಸರ ।
ಸತಿ ದನಿಯಂ ತೋಱಿ ನೆರೆವಳೆಮ್ಮೊಳ್ ಚಿತ್ರಂ ॥ ೩೭ ॥

ಎನಿತಂ ಪದಪದದೊಳ್ ಸಾ ।
ಲ್ವನಿತರ್ಥಮನಿತ್ತೊಡಂ ಮನಂಗೊಳ್ವೆಳೆ ನು ॥
ಣ್ಣನಿಯಂ ತೋಱುತ್ತುಮೆ ವಾ ।
ಗ್ವನಿತೆಯ ನೊಲಿಪೊಂದು ಸೊಬಗು ಸಮನಿಸವೇಡಾ ॥ ೩೮ ॥

ಚಂ। ಅನುಗುಣಮಾಗೆ ವರ್ಣನಮೊಡಂಬಡೆ ರೀತಿ ರಸಕ್ಕೆ ಭಾವವ ।
ಚ್ಚೆನಿಸಿರೆ ಭಾವದೊಳ್ ಪದುಳಮಾಗಿರೆ ಚೌತೆಱಿನರ್ಥವೃತ್ತಿಯೊ ॥
ಳ್ದನಿ ಪೊಸದೇಸಿ ಮಾತಿನೊಳುದಾರತೆವೆತ್ತಿರೆ ಸಯ್ತು ಪೇೞ್ವುದಿಂ ।
ಪೆನಿಸೆ ಕವೀಶ್ವರಂ ಕೃತಿಯನಲ್ಲದೊಡೇಕದಱಿಂದು ದಂದುಗಂ ॥ ೩೯ ॥

ಮೃದುಪದಬಂಧಮುಂ ಸುರುಚಿರಾರ್ಥಮು ಮುತ್ಕಟವೃತ್ತಿಯಾಗಿ ತೀ ।
ವಿದ ರಸಮುಂ ಮನಂಗೊಳಿಪ ಭಾವಮು ಮಾರಯಲಿಲ್ಲ ನೂತ್ನಕಾ ॥
ವ್ಯದೊಳೆನವೇಡ ಚೈತ್ರದ ರಸಾಳದ ಗಾಳಿಯ ಕೋಕಿಲಪ್ರಣಾ ।
ದದ ನೆಱಿಸಿದಿಂಗಳಿಂಗದಿರ ಸೊಂಪತಿನೂತನಮಿಂಪುವೀಱಿದೇ ॥ ೪೦ ॥

ಕಂ। ರಸವೃತ್ಯಭಿನಯ ಭಾವದ ।
ಪೊಸದೇಸಿಯ ರೂಪನೀಕ್ಷಿಪಂ ಪ್ರೌಢಂ ನಿ ॥
ಟ್ಟಿಸಿ ಮೈಸಿರಿ ನವಕಾವ್ಯಮುಂ ।
* ಕೇಳಿ ಸಂತೋಷಿಪರ್ ಚಿತ್ತದೊಳ್ ॥ ೪೧ ॥

ಉ॥ ನೋಡಿರೆ ಪೂರ್ವದೊಳ್ ಗಣಧರಾದಿಮಹಾಮುನಿಸತ್ಕವೀಶ್ವರರ್ ।
ಮಾಡಿದ ಪುಷ್ಪದಂತಜಿನನಾಥಪುರಾಣಮನಿಂದು ಕನ್ನಡಂ ॥
ಮಾಡುವೆನೆಂದು ಪೂಣ್ದೆನಿದು ಶಕ್ತಿಯೊ ಭಕ್ತಿಯೊ ಮೈನತೇಯನಿ ।
ದರ್ಪಡಿದ ಗಾಳಿವಟ್ಟಿಗೆ ಮನಂಬಿಡೆ ಧೀಂಕಿಡುವಂತೆ ಪಿಟ್ಟಭಂ ॥ ೪೨ ॥

ಚಂ॥ ಕತೆ ಕಿಱಿದಾದೊಡಂ ಕತೆಯ ನಾಯಕನುನ್ನತವಂಶವೀರ್ಯವಿ ।
ಶ್ರುತಮಹಿಮಪ್ರವಂಚಿತಗುಣಂ ಪಿರಿದಂತದಱಿಂದೆ ವರ್ಣನ ॥
ಸ್ಥಿತಿ ಮಿಗೆ ಸಾಲ್ವುದೇ ಗಣಧರಾದಿಗಳುಚ್ಚಯದನುಚ್ಚಿ ಮಾಟಿಕ್ಕಿಯಿಂ ।
ಕಥಿಸಿದರಿಲ್ಲಿ ಪೇಟ್ವಿ ಕವಿಕಲ್ಪಮಿದೆಂಬವ ನಲ್ಪನಲ್ಲನೇ ॥ ೪೩ ॥

ಕಂ॥ ಪಿರಿದುಂ ಜಿನನುತಿಗಲ್ಲದೆ ।
ಪರಮಶ್ರೀವಿಭವಮೆಯ್ದದೆಂದಾರೆಂದರ್ ॥
ಪರಮಾಣು ಮಾತ್ರಮಮೃತದ ।
ಪರಿಸೇವನೆ ಘಟಿಸಲಮರದೇನಮರತ್ವಂ ॥ ೪೪ ॥

ಎಣೆಯಾಗಿ ಸುಕವಿಯಾಳ್ ಸಂ ।
ದಣಿಸುವರೇಕಯ್ಯ ವಿಬುಧ ಸಭೆಯೊಳ್ ತಾಮೇಂ ॥
ಗಣನೀಯರೆ ಕುಕವಿಗಳಾರ್ ।
ಗಣಿಸಿದಪರ್ ಮುನುಱಿ ವರೆವ ನೊರಜಂ ನೊಟಿವುಂ ॥ ೪೫ ॥

ಪದಮಿಡಲಱಿಯಂ ಗಡ ಮಾ ।
ರ್ಗದೊಳಂತವನೆಂತೊ ನಡೆವೊನರ್ಥದ ಸೊಂಪಿ ॥
ಲ್ಲದ ಕುಕವಿ ನವರಸಾನುಭ ।
ವದೆ ತನ್ನಂ ಪೆಱಿರನೆಂತೊ ಪೇಟ್ಪುತ್ತಣಿಪದಪಂ ॥ ೪೬ ॥

ಥಳಥಳಿಪ ಪದಾರ್ಥವನೆಂ ।
ಗಳ ಕಾಣ್ಬನೆ ದೋಷದೃಷ್ಟಿ ದುರ್ಮತಿ ಗಡದೇಂ ॥
ತಿಳಿವನೆ ಗುಣಸಂತತಿಯಂ ।
ಖಳಂ ಗಡೆಂತುಂ ರಸಂಗಳೊಳ್ಪೊರೆದಪನೇ ॥ ೪೭ ॥

* ೪೧ನೆಯ ಕಂದದ ಕೊನೆಯಪಾದವೂ ಮತ್ತೊಂದು ವೃತ್ತದ ಮೂರುವರೆಪಾದಗಳೂ ಲುಪ್ತವಾದಂತಿದೆ. "ಕೇಳಿ ಸಂತೋಷಿಪರ್ ಚಿತ್ತದೊಳ್" ಎಂಬುದು ವೃತ್ತದ ಕೊನೆಯ ಭಾಗವಾಗಿರಬಹುದು.

ಕಂ॥ ತೊಳೆಗುವ ನಭದೊಳ್ ಪಿತ್ತಾ ।
ವಿಳದೃಷ್ಟಿಗವಿದ್ಯಮಾನಮೇಚಕರುಚಿ ಯೊಂ ॥
ದೆಳಸಿ ಮಿಗೆ ತೋರ್ಪ ತೆಱದಿಂ ।
ಖಳಂಗೆ ಪೊಲನಲ್ತೆ ಕೃತಿಯೊಳಿಲ್ಲದ ದೋಷಂ ॥ ೪೯ ॥

ತಲೆದೂಗನೆ ಖಳನೆದು ಮೂ ।
ದಲೆಯಕ್ಕುಂ ಮುಂದೆ ಕೇಳ್ದು ಸತ್ಕವಿಕೃತಿಯಂ ॥
ತಲೆದೂಗೆ ಖಳರ್ಗೆಂದಾ ।
ತಲೆ ಭೂಮಿಗೆ ಭಾರಮೆಂತೊ ಪೇಟಿಲ್ ತೂಗಿದಪಂ ॥ ೪೯ ॥

ಉ॥ ಮೆಚ್ಚಿಯುಮೇನೊ ಮೆಚ್ಚದೆಯುಮೇನೊ ಖಳರ್ ವಿಬುಧಾಂತರಂಗಮುಂ ।
ಮೆಚ್ಚಿಪ ಕಾವ್ಯರತ್ನಮವರಂ ಮಿಗೆ ಮೆಚ್ಚಿಸದೇ ಸುವೃಷ್ಟಿ ಸೊಂ ॥
ಪಚ್ಚರಿಯಾಗೆ ಸಸ್ಯಚಯಮುಂ ಪರಿವರ್ಧಿಸುತಿರ್ಪುದಣ್ಣ ಪೇ ।
ಟಿರೊಚ್ಚತವಾಗೆ ಪೆರ್ಚಿಸದೆ ಮಿಕ್ಕ ತೃಣಾಂಕುರಸಂಕುಳಂಗಳಂ ॥ ೫೦ ॥

ಕಂ॥ ಪುಟ್ಟಿಸಿದ [1][ನದೇ]ಕೆಯೊ ಬಿದಿ ।
ನಿಟ್ಟುರದಿಂ ಲೋಕದೊಳಗೆ ದುರ್ಜನನಿದಂ ॥
ನಿಟ್ಟಿಸಿ ತಿಳಿದೆಂ ಸುಜನರೊ ।
ಳಿಟ್ಟಣಿಸಿದ ಗುಣಮನಱಿಯ [ಪಲೇಂ] ಸಂದೆಯುಮೇ ॥ ೫೧ ॥

ಖಳನಂ ಗುಣಗಣದಾವಾ ।
ನಳನಂ ಸುಜನಾಂತರಂಗಸಂತೋಷವ್ಯಾ ॥
ಕುಳನಂ ಸಮಗ್ರದೋಷಾ ।
ವಿಳನಂ ಪೆಸಗೊಂಡು ಬರ್ದುಕುವನ್ನನದಾವಂ ॥ ೫೨ ॥

ವಿಷದಿಂ ಕೊಲ್ವಹಿಯುಂ ನಿ ।
ಟ್ಟುಸಿರಿಂ ಕೊಲ್ವಹಿಯು ಮಳುರ್ವ ದಿಟ್ಟಿಯ ನೋಟಂ ॥
ಮಸಗಿ ಕೊಳಲ್ ಕೊಲ್ವಹಿಯುಂ ।
ಪೆಸಗೊಳೆ ಕೊಲಲಾರ್ಪ ಖಳನೊಳೆಣೆವಂದವುಮೇ ॥ ೫೩ ॥

ಅಕ್ಕಟ ಖಳನಂ ಜವನೇ ।
ಕಿಕ್ಕನೊ ತುತ್ತಾಗಿ ಬಾಯೊಳಿದನಱಿದೆನವಂ ॥
ಪೊಕ್ಕೊಡೆ ತನ್ನೊಡಲಂ ಪೋ ।
ಟ್ಟಿದ್ದಕ್ಕುಗು ಮೆಂದಂಜಿದಂದವಾಗಲೆ ವೇಟಿಕ್ಕುಂ ॥ ೫೪ ॥

[1] ಪುಟ್ಟಿಸಿದನೇಕೆಯೋ (ಕಾ).

ಕಂ॥ ಕೊಂದೊಡೆ ಬಿಡದವಗುಣಮಿನಿ ।
ನೆಂದೊಡೆ ಬಿಟ್ಟಪುದೆ ಖಳರೊಳೆಮಗದನಿನಲೇ ॥
ವಂದವುದವರ್ಗಳ ಭಯಮುಂ ।
ಮಾಂದಿಸುವೊಡೆ ಸುಜನಸಂಸ್ತವಂ ಕರಣೀಯಂ ॥ ೫೫ ॥

ಇಲ್ಲದ ಗುಣಮುಂ ಪೆಱರೊಳ್ ।
ನೊಲ್ಲಿಸುವಂ ತನ್ನೊಳುಳ್ಳ ಗುಣಮುಂ ತಾ ॥
ನಿಲ್ಲೆಂದಾಡುವ ಪುಸಿಕಂ ।
ಗೆಲ್ಲಿಂದಂ ಬಂದುದಮುಮ ! ಸುಜನತೆ ಚಿತ್ರಂ ॥ ೫೬ ॥

ರಸಮಯಮುಂ ಕೃತಿಯುಂ ನೇ ।
ವಿಸಿ ವಿರಸಮನಿಯ್ದೆ ಜೋಡುಮಾಡುವ ವಿಬುಧ ॥
ಪ್ರಸರಂ ಪೊಸವಾವಂ ನೇ ।
ವಿಸಿ ಬಿದಿರಂ ಪೊಸೆವ ತುಂಬಿಯೊಡನಾಡಿದರೇಂ ॥ ೫೭ ॥

ಕೊಂಡಾಡದರಂ ತಮ್ಮಂ ।
ಕೊಂಡಾಡುವರೆಂದು ಪೊಗಟ್ಪಿವ್ದೀ ಧರೆಯಿದನಾಂ ॥
ಕೊಂಡೆಸಗುವೆ ನೀನುಡಿ ಬೆಂ ।
ಗೊಂಡುದು ಸಜ್ಜನರನೊಂದುಮಾತಿನ ಮುಱಿಯಿಂ ॥ ೫೮ ॥

ವ॥ ಅದೆಂತೆನೆ·—

ಕಂ॥ ಭಾವಿಸೆ ಚಿತ್ರಮೆನಲ್ ವಿಬು ।
ಧಾವಳಿ ಗುಣವರ್ಮಬುಧನನತಿಕೃಪೆಯಿಂ ಕೂ ॥
ರ್ತೋವಿ ಮುನಿಚಂದ್ರಪಂಡಿತ ।
ದೇವರ್ ಗುರುವಾಗೆ ಕವಿತೆ ಬಂದುದು ಚಿತ್ರಂ ॥ ೫೯ ॥

ತಣಿವಂತಿರೆ ರಸದಿಂ ಬುಧ ।
ರಣಿಯುರವೆಸಗುವುದು ಸುಕವಿ ಸತ್ಕೃತಿಯನಣಂ ॥
ಗುಣವರ್ಮನಾಗಿ ಕಿತವಮಾ ।
ರ್ಗಣದಂತುಚ್ಚಳಿಪದಿರ್ಪಿನಂ ಖಳವಚನಂ ॥ ೬೦ ॥

ಪ್ರಕಟಂ ಸುಕವಿಮಧುವ್ರತ ।
ನಿಕರಮನಿಱಿಗಿಸುವ ಚೂತಮಂಜರಿ ಕುಕವಿ ॥
ಪ್ರಕರಮಧುಪಕ್ಕೆ ಕೃತಿ ಚಂ ।
ಪಕಮಂಜರಿ ಯೆನಿಸೆ ಬೇಱ್ದಿಸಂ ಗುಣವರ್ಮಂ ॥ ೬೧ ॥

ಕಂ॥ ಪದಮೆ ಪದವರ್ಥಮರ್ಥಂ ।
ವುದಿದ ರಸಂ ತೃಪ್ತಿಕರರಸಂ ಭಾವಂ ಪೊ ॥
ಣ್ಮಿದ ಸದ್ಭಾವಂ ದನಿ ಯಿಂ ।
ಪೊದವಿದ ದನಿ ಯೆನಿನಿ ಪೇಳ್ದಪಂ ಕವಿತಿಲಕಂ ॥ ೬೦ ॥

ಸ್ವೀಕೃತ ಜಿನಧರ್ಮ ನನಂ ।
ಗೀಕೃತಖಳವರ್ಮ ನಮಳವಾಣೀಕರುಣಾಂ ॥
ಗೀಕೃತಕವಿತಾವರ್ಮ ನ ।
ಪಾಕೃತದುಪ್ಕರ್ಮ ನಮುಮ ! ಕವಿ ಗುಣವರ್ಮಂ ॥ ೬೨ ॥

ಕವಿಗಮುಕಿವಾದಿವಾಗ್ಮಿ ।
ಪ್ರವರರ್ ಗುಣವರ್ಮನೊಳ್ ಸಮಂ ಬರ್ಪವರಾರ್ ॥
ಕವಿತೆಯೊಳಂ ಗಮಕದೊಳಂ ।
ಕುವಾದಿವಿಜಯದೊಳಮುಮೃತವಾಗ್ವೃತ್ತಿಯೊಳಂ ॥ ೬೪ ॥

ವಿವಿಧಕಳಾಭಿಜ್ಞಂ ಭಾ ।
ವವಿದಂ ರಸರಸಿಕನುಚಿತಕವಿತಾಚತುರಂ ॥
ಸುವಿವೇಕನಿಧಾನಂ ವಿಬು ।
ಧವತ್ಸಳಂ ಮಾನಮೇರು ನೃಪತತಿಮಹಿತಂ ॥ ೬೫ ॥

ಚಂ॥ ರತಿ ಪದೆದಂತೆ ಚಂದ್ರಕಿರಣಂಗಳೆ ಪಾಲ್ಗುಡಿದಂತೆ ಮುಂದಮಾ ।
ರುತನೊಡಗೂಡಿ ಬಂದಸಹಕಾರಪರಾಗದೊಳಾಡಿದಂತೆ ರಾ ॥
ಜಿತಮಧುಮಾಸದೊಳ್ ಪರಿಯದಿಂ ಪೊರೆದಂತಬಲಾಕಟಾಕ್ಷಕೆ ।
ಕ್ಷಿತಮೆನಿಪಂತೆ ಮೋಹಿಸದೆ ಪೇಟಿರ್ ಗುಣವರ್ಮನ ಸೂಕ್ತಿಸಂಚಯಂ ॥ ೬೬ ॥

ಶಾ॥ ಎಂದೋರಂತಿರೆ ವಜ್ರದೇವನರನಾಥಾಸ್ಥಾನದೊಳ್ ಕೂರ್ತ ನ ।
ಣ್ಪಿಂದಂ ಕೋವಿದರೆಯ್ದೆ ಕೊಂಡುಕೊನೆಯಲ್ ಕೇಳ್ದಟ್ಟಿಲೀಂ ಶಾಂತಿವ ॥
ರ್ಮಂ ದೀನಾನತವರ್ಮನಾದರಿಸಿ ನೀಂ ಪೇಟಿರೆಂದೊಡೀಗರ್ ಮುನಂ ।
ದಂದಂ ಪಾಲ್ಗಡೆ ಮರ್ದನಲ್ ಜಿನಕಥಾವಿಸ್ತಾರಮಂ ಸಾರಮಂ ॥ ೬೭ ॥

ಕಂ॥ ಕೃತಿ ಗಡೆ ಕೊಳ್ವಂ ಕುಡುವಂ ।
ಕೃತಿ ಗಡೆ ಭಾವಿಸುವೊಡಾಪತಿಂವರೆಯುಂ ತಾಂ ॥
ಕೃತಿ ಗಡೆನಲ್ಕೊಳೆ ಕ್ಕೊಡೆಯೇ ।
ನತಿಶಯವಮಾದುದೊ ಕೃತಾರ್ಥಮೆನೆ ಭುವನಜನಂ ॥ ೬೮ ॥

ಕಂ॥ ಕುಡುವವನಂ ಕೊಳ್ವವನೆಂ ।
ದಡೆಯುಡುಗದೆ ಕೊಳ್ವನಂ ಕರಂ ಕುಡುವವನೆಂ ॥
ದಡಿಗಡಿಗೆ ವಿಬುಧವೃಂದಂ ।
ನುಡಿದುದು ಸಾಶ್ಚರ್ಯಮುಲ್ಲೆ ಕೊಳ್ಕೊಡೆ ಕೃತಿಯಾ ॥ ೮೯ ॥

ಅಳಿಯಂ ಮೊಱೆಯಿಂ ಭಾಗ್ಯದಿ ।
ನಳಿಯಂ ಸೌಭಾಗ್ಯದಿಂದ ಮುಳಿಯಂ ಗುಣದಿಂ ॥
ದಳಿಯಂ ವಿತರಣಗುಣದಿಂ ।
ದಳಿಯನೆನಿಪ್ಪಂಗೆ ಕುಡುಗೆ ಕೃತಿಕನ್ಯಕೆಯಂ ॥ ೯೦ ॥

ಕೃತಿ ಬೆಲೆಯಿಂ ಬರ್ಕುಮೆ ಪಂ ।
ಡಿತರಾರ್ ಬೆಲೆಯಿಲ್ಲದಿಟ್ಟೊಡಂ ಕೃತಿಗೊಳ್ವಂ ॥
ಕೃತಿಗೆ ಬೆಲೆಯಂ ಬಱಿದು ಮನ ।
ಕತವಾದೊಡೆ ಕೇಳ ವಿಬುಧವಿದ್ವತ್ಸಭೆಯೊಳ್ ॥ ೯೧ ॥

ಮ॥ಸ್ರ॥ ಕ್ಷಿತಿಯೊಳ್ ಮುನ್ನಬ್ಜನೇತ್ರಂ ಮನೆಯಳಿಯನಿನಲ್ ಕ್ಷೀರವಾರಾಕೆಯಿಂ ವಿ ।
ಶ್ರುತಲಕ್ಷ್ಮೀದೇವಿಯಂ ಕೌಸ್ತುಭಮಣಿಸಹಿತಂ ಕೊಂಡನೆಂತಂತೆ ತನ್ನಂ ॥
ಸತತಂ ಕೂರ್ತಿತ್ತು ಕೊಂಡಂ ಗುಣನಿಧಿ ಗುಣವರ್ಮಂಗೆ ಕೀರ್ತ್ಯನ್ವಿತಂ ಸ ।
ತ್ಕೃತಿಲಕ್ಷ್ಮೀಕಾಂತೆಯಂ ರಂಜಿತವಿಬುಧಜನಸ್ವಾಂತೆಯಂ ಶಾಂತಿವರ್ಮಂ ॥ ೯೨ ॥

ಕಂ॥ ಆತನ ನಿಖಿಳಮಹೀವಿ ।
ಖ್ಯಾತನ ಸನ್ಮಾನದಾನಸಂಚಿತಸುಕೃತ ॥
ವ್ರಾತನ ಗುಣವೆಣಿಕೆಗೆ ಋನ ।
ವೇತಱಿಂಗೊಳಂ ಕಿಱಿದಱಿಂದಮಱಿವುವೆನಿನಿಸಂ ॥ ೯೩ ॥

ವ॥ ಅದೆಂತೆಂದೊಡೆ·—

ಚಂ॥ ಸಕಳಜನೈಕಮಿತ್ರ ನನವದ್ಯಕಳಾಧರ ನಿಷ್ಟಶಿಷ್ಟಕ ।
ಲ್ಪಕುಜ ನುಪಾಶ್ರಿತಾಖಿಳಬುಧಂ ನಯವಾಕ್ಪತಿ[1]ಸತ್ಕವಿತ್ವರಂ ॥
ಜಿತ ನಹಿತಾದ್ರಿಸಂಗತಮಹಾಶನಿ ಸಂತತಭೋಗಿ ರೂಪಕ್ಕೌ ।
ತುಕಜಿತವಿಮಾನಕೇತು ವೆನೆ ಶಾಂತಿ ನವಗ್ರಹಭಾಸಿ ಲೋಕದೊಳ್ ॥ ೯೪ ॥

ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ ।
ಕ್ಷರಜನಕಂ ಜಗಜ್ಜನಕ ನೊಲ್ದುದನಿತ್ತ ಭರಕ್ಷಿಪಱ್ತಿಯಿಂ ॥
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ ।
ಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ ॥ ೯೫ ॥

[1] ಸತ್ಕವೀಶ್ವರಂಜಿತ

ಮು॥ ಜಗದೊಳ್ ನಾಲ್ಪ್ರಭು ಶಾಂತಿವರ್ಮನೆನೆವಂ ಪ್ರೋದ್ಯಾಮಲಕ್ಷ್ಮೀಗೃಹಂ ।
ಜಗತೀಮಂಗಳರತ್ನಭೂಷಣಗೃಹಂ ಸಾಹಿತ್ಯಲೀಲಾಗೃಹಂ ॥
ಭಗವಜ್ಜಿನಮತೋಕ್ತಿನರ್ತನಗೃಹಂ ದಿಕ್ಕಾಮಿನೀವರ್ತಿಕೀ ।
ರ್ತಿಗೃಹಂ ಕೀರ್ತಿತಸತ್ಯಸಂಪದಗೃಹಂ [1]ಸಂಗೀತವಿದ್ಯಾಗೃಹಂ ॥ ೭೬ ॥

ಚಂ॥ ವಸುಧೆಯೊಳೊಳ್ಪುವೆತ್ತ ನರರೇಮಜಿಜೀವನ್ನರೆ ಶಾಂತಿ ನೀಂಬರಂ ।
ರಸಿಕರೆ ನೀಂಬರಂ ವಿನಯವೃತ್ತರೆ ನೀಂಬರ ವಾತ್ತಸತ್ಕಳಾ ॥
ಪ್ರಸರರೆ ನೀಂಬರಂ ಬುಧಜನಸ್ತುತಮಾರ್ಗರೆ ನೀಂಬರಂ ಗುಣ ।
ವ್ಯಸನರೆ ನೀಂಬರಂ ಶ್ರುತವಿಳಾಸರೆ ನೀಂಬರವೇನು[2]ದಾತ್ತರೇ ॥ ೭೭ ॥

ಉ॥ ಶ್ರೀಯುತಶಾಂತಿವರ್ಮ ಪೆಜಿರಾವ್ರು ವಿಚಾರಿಪೊಡಂಥವರ್ತಕ ।
ನ್ಯಾಯವೆಂ ಬೀರದೇಜಿಜ್ಞಿ ಪರಿಭಾವಿಪೊಡಂತದು ತಾನಜಾಕೃಪಾ ॥
ಣೀಯವೆಂ ನಿಕ್ಕುವಂನುಡಿವ ಪೆಂಪು ವಿಚಾರಿಪೊ [3]ಡಂತು ಕಾಕತಾ ।
ಳೀಯವೆಂ ಭಾಪ್ಪು ನಿನ್ನವೊಲುದಾರರೆ ಬೀರರೆ ಸತ್ಯವಾಕ್ಯರೇ ॥ ೭೮ ॥

ಚಂ॥ ಎನಗೆನಗೀವನಾವ ತೆಱದಿಂ ವರವಸ್ತ್ರಸುವರ್ಣಮಂ ಸಮಂ ।
ತೆನಗೆನಗಬ್ಜಿಜೀಂ ಪದೆದು ಮನ್ನಿಪನಿನ್ನೆನದಾವನೆಂದಣಂ ॥
ತನತನಗಬ್ಜಿಜೀಂ ತಯಿಂದೆ ಸಕಳಾರ್ಥಿಜನೋತ್ಕರವಾತ್ತು ಕೀರ್ತಿಸು ।
ತ್ತನುದಿನಮಿರ್ವ್ವುದೆಂದೊಡಖಿಳಸ್ತುತನೋಪ್ರಭು [4] ಶಾಂತಿಯುರ್ವಿಯೊಳ್ ॥ ೭೯ ॥

ಚಂ॥ ಪರಹಿತದೊಳ್ ನಯಕ್ರಮದೊಳಾಯತಿಯೊಳ್ ಸುಚರಿತ್ರದೊಳ್ ದಯಾ ।
ಪರಿಣತಿಯೊಳ್ ಕಳಾವಿಭವದೊಳ್ ವರವಿಕ್ರಮದೊಳ್ ಗಭೀರದೊಳ್ ॥
ಗರಿಮೆಯೊಳೂರ್ಜಿತಪ್ರಭುತೆಯೊಳ್ ಸುಜನಾಗ್ರಣಿ ಶಾಂತಿವರ್ಮ ನಾ ।
ಹ್ವರಸಮಯಾವಲಂಬಿ ನಿನಗಾರ್ ಬೊರೆ ಮಾನವರೀಧರಿತ್ರಿಯೊಳ್ ॥ ೮೦ ॥

ಮು॥ಸ್ರ॥ ಸ್ಫುರಿತೋದ್ಯತ್ತಾರ ತಾರಾಚಳ ಹರಹಸನಾವಭ್ರಶುಭ್ರಾಭ್ರಹಂಸೀ ।
ಹರಿದಿಜ್ಯಾತಂಗ ಗಂಗಾಸರಳತರಳ [5] ಕಲ್ಹಾರ ಕರ್ಪೂರ ಪೂರಾ ॥
ಮುರರಾಜೋರ್ವೀಜ ರಾಜತ್ಕುಸುಮವಿಸರ ನೀಹಾರ ನೀರೇಜ ನೀರಾ ।
ಕರ ನೀರೇಜಾರಿ [6]ಗೌರದ್ಯುತಿ [7] ವಿಶದಯಶಃಕಾಂತ ನೀಶಾಂತಿವರ್ಮಂ ॥ ೮೧ ॥

ನಿರವದ್ಯಶ್ರೀನಿಜೌನ್ನತ್ಯದಿನಮೃತನಿಧಸ್ಫೂರ್ತಿಯಂ ಸತ್ಯಭಾವಾ ।
ಪರಿಭಾಸ್ವ[8]ತ್ಸಂಗದಿಂ ಶಾರ್ಜಿಯನುಮೆಯಿನುಮಾಧೀಶನಂ ಮಾರ್ಗಣಾಡಂ ॥
ಬರದಿಂ ನೈಷಂಗಮಂ ಸತ್ಕವಿಕಳಿತಕಳಾರಂಭದಿಂ ಶುಂಭದಬ್ಜಾ ।
ಕರಮಂ ಪೊಲ್ವಂ ಮಹೀಭಾಸುರಗುಣನಿಳಯಂ ಶಾಂತನುರ್ಕೀರ್ತಿಕಾಂತಂ [9] ॥ ೮೨ ॥

---

[1] ಸನ್ನೀತಿವಿದ್ಯಾ [2] ಸುದಾರರೇ [3] ಡುಂತೆ. [4] ಶಾಂತನುರ್ವಿ. [5] ಕಲ್ಲೋಲ. [6] ಗೌರೀ. [7] ವಿತತ. [8] ಸ್ವಸ್ಪಂದದಿಂ. [9] ಯುಕ್ತಂ.

ವ॥ ಎಂದಿಂತು ಸಮಸ್ತಭುವನಜನಂ ಪೊಗಟ್ಪಿ ನೆಗಟ್ಪಿತ್ತಿವಡೆದನವ್ವುದಱಿಂ ಕೀರ್ತಿಪತಾಕನುಂ, ಅಗಣ್ಯಪುಣ್ಯಲಕ್ಷ್ಮೀಸದನವಕ್ಷಸ್ಥಳನವ್ವುದಱಿಂ ಪುರುಷೋತ್ತಮನುಂ, ಆತ್ಮೀಯಾನ್ವಯಮುಂ ಗುಣರತ್ನದಿನಲಂಕರಿಸುವುದಱಿಂ ಗುಣರತ್ನಭೂಷಣನುಂ, ಚಾತುರ್ಯಚಾರಾಯಣನವ್ವುದಱಿಂ ಸರಸ್ವತೀಕರ್ಣಪೂರನುಂ, ಮಱಿದಪ್ಪೊಡಂ ತೊದಳ ನುಡಿದಱಿಯನವ್ವುದಱಿಂ ಸತ್ಯರಾಧೇಯನುಂ, ಭುನಗಭೀರತೆಯಿನಾರ್ಗಮಥಿಕನವ್ವುದಱಿಂ ಗಂಭೀರನೀರಾಕರನುಂ, ವಿರೋಧಿನಾಥನಭಯಂಕರನವ್ವುದಱಿಂ ಕದನಕಂಠೀರವನುಂ, ಅಪ್ರತಿಮಪ್ರಭಾವಾಭಿನುತನವ್ವುದಱಿಂ ಪ್ರಭು[1]ಕುಲಶಿರೋಮಣಿಯುಂ, ಕವಿತ್ವತತ್ವನಿಕಷಣಪ್ರತಿಭಾವನವ್ವುದಱಿಂ ವಿವೇಕಚತುರಾನನುಂ, ನಿಸರ್ಗಸುರಭಿಪರಿಮಳಪರಿಮಿಳಿತನವ್ವುದಱಿಂ ಮಲ್ಲಿಕಾವಲ್ಲಭನುಂ, ಸುಕವಿಕದಂಬಾವಲಂಬನನವ್ವುದಱಿಂ ಸಕಳಸುಕವಿಪಿಕಮಾಕಂದನುಂ, ಜಿನಧರ್ಮಹರ್ಮ್ಯಮಾಣಿಕ್ಯಕಳಶನವ್ವುದಱಿಂ ಭವ್ಯಜಿನಾರ್ಣವಪೂರ್ಣಚಂದ್ರನುಂ, ವಿದ್ವಜ್ಜನಹೃ[2]ದಯನವ್ವುದಱಿಂ ಸಕಳಜನಮನೋಹರನುಂ, ಕರ್ಣಾಟಕೀಕರ್ಣಾವತಂಸನುಂ, ಮಳಯಮಾನಿನೀಮನೋಮಾನಸಹಂಸನುಂ, ಕೇರಳೀಕುಚಕಲಶತಾರಹಾರನುಂ, ಸಿಂಹಣಸೀಮಂತಿನೀಸಿಂಧೂರನುಮೆನಿಸಿ ನೆಗಟ್ವಿ ನಾಪ್ಪ್ರಭು ನಭೋಮಣಿ ಶಾಂತಿವರ್ಮನ ಯಶೋಲತೆಗಾಲಂಬನವಾಗಿ ಮನೋಹರವಾದ ಕಥಾವನಿತೆಗುವ್ಯವಸ್ಥಾನಮೆಂತೆಂದೊಡೆ.

ಮ॥ ನಿರುತಂ ನಾಲ್ಕನುಯೋಗಮೆಂಬ ದೆಸೆಯೊಳ್ ನಾಲ್ಕುಂ ಶ್ರುತಸ್ಕಂಧಬಂ ।
ಧುರಭೂಚಕ್ರದೊಳೊಪ್ಪುತಿರ್ಪುದದಱಿಂದೊಳ್ ಪೂರ್ವಾನುಯೋಗಸ್ಥಿತಂ ॥
ಸುರರಾಜದ್ವಿಪದಂತೆ ಪೆಂಪೆನೆವುದೀ ಶುಂಭತ್ಕಥಾಂಗಂ ನಿರಂ ।
ತರದಾನಪ್ರವಿಭಾಸಿ ಭದ್ರಗುಣಸಂಪೂರ್ಣಂ ಬುಧಾಧಿಷ್ಠಿತಂ ॥ ೪೩ ॥

ಕಂ॥ ಪುರುಜಿನವೀರಜಿನೋಕ್ತಿ ।
ಸ್ವರೂಪಮಂ ವೃಷಭನೇನಗೌತಮಗಣಿಗಳ್ ॥
ಭರತನೃಪಮಗಧರಾಜ ।
ರ್ಗೆ ರೂಪ್ಯಗಿರಿವಿಪುಳಗಿರಿಗಳೊಳ್ ಬೆಸಸಿದುದಂ ॥ ೪೪ ॥

ಮ॥ ಹರಿಯಂತಂತಿರನೇಕಪಾಪಹರಣೈಕಪ್ರೌಢಮಂ ಕಿನ್ನರೇ ।
ಶ್ವರನಂತಂತಿರಗಣ್ಯಪುಣ್ಯಜನಸೇವ್ಯೈಶ್ವರ್ಯಮುಂ ಮೇರುಭೂ ।
ಧರಮೆಂತಂತಿರೆ ಪುಷ್ಪದಂತವರಿವೃತ್ತೋದಾತ್ತಮುಂ ಭವ್ಯರಾ ।
ದರಿಸಲ್ ಭಕ್ತಿಯಿನಾಂ ವಿನಿರ್ಮಿಸುವೆ ನೀಶ್ರೇಯುತ್ಕಥಾಬಂಧಮಂ ॥ ೪೫ ॥

ಸುಕೃತಂ ಶಾಂತದಿನಕ್ಕುವಿಾಕಥೆಗೆ ಶೃಂಗಾರಾದಿನಾನಾರಸಾ ।
ಪ್ಟಕವೇಬಾಪ್ಪಿತ್ತಿಯೊ ರಾಗಕಾರಣಮೆನಲ್ವೇಡೆಯ್ದುಗುಂ ವೀತರಾ ॥
ಗಕಥಾಂತರ್ಗತಮಾದೊಡಾವರಸಮುಂ ಶಾಂತತ್ವಮುಂ ನೀರದ ।
ಪ್ರಕರಾಂತರ್ಗತ ವಾರ್ಧಿವಾರಿ ಪಡೆವಂತತ್ಯಂತಮಾಧುರ್ಯಮುಂ ॥ ೪೬ ॥

[1] ಕುಲರೋಧೋಮಣಿ. [2] ಹೃದಯಂಗಮ.

ವ॥ ಆ ಕಥಾವತಾರಮೆಂತೆಂದೊಡೆ.

ಮ॥ ಸ್ರ॥ ನಿರುತಂ ಷಡ್ದ್ರವ್ಯಗರ್ಭೋದರವಿತರವಿತರ್ಕಾತಿರಿಕ್ತಸ್ವರೂಪಂ ।
ಪರಮೇಷ್ಠಿಜ್ಞಾನದೃಷ್ಟಿಪ್ರಸರವಿಷಯಮಾದ್ಯಂತಶೂನ್ಯಂ ವಿಯತ್ಪಂ ॥
ಜರಮಧ್ಯಸ್ಥಾಯಿ ಲೋಕಂ ಕ್ರಮಗತಿಯಿನಧಸ್ತಿರ್ಯಗೂರ್ಧ್ವ [1] ಪ್ರಭೇದಂ ।
ಬೆರಸೊಪ್ಪುತ್ತಿರ್ಪ್ಪುದಾತ್ಮೋಚ್ಛ್ರಯಮದು ಪದಿನಾಲ್ಕಾಗೆ ರಜ್ಜು ಪ್ರಮಾಣಂ ॥ ೪೩ ॥

ಕಂ॥ ಏತೊದಳೊ ಘನೋದಧಿ ಘನ ।
ವಾತಂ ತನುವಾತಮೆಂಬ ವಳಯಂಗಳನು ॥
ಸ್ಯೂತಂಗಳ್ ಬಳಸಿರೆ ಸಮು ।
[2] ಪೇತತ್ರಸನಾಳಗರ್ಭಮದು ಸೊಗಯಿಸುಗುಂ ॥ ೪೪ ॥

ಚಂ॥ ಪರಿವೃತ ತೋಯವಾಯುಗಳ ನಂಬರಮಂ ಪೊಜಿಗಿಕ್ಕಿತೆಂಬುದೇ ।
ವಿರಿದದು ಮಾಪ್ಪಿ ಸಂಹರಿಪ ದಂದುಗಮಂ ಪೊಜಿಗಿಕ್ಕಿತೆಂಬ ವೆ ॥
ಯ್ದಿರಿ ಸಹಜಾತಮಾಗೆ ತಳೆದಿರ್ಪುದನುಕ್ರಮದಿಂದೆ ವೇತ್ರವಿ ।
ಷ್ಟರನಿಭ ಝಲ್ಲರೀನಿಭ ಮೃದಂಗನಿಭಾಕೃತಿಯಿಂ ಜಗತ್ರಯಂ ॥ ೪೫ ॥

ವ॥ ಆ ಲೋಕತ್ರಿತಯಮಧ್ಯದೊಳೊಂದುರಜ್ಜುಪ್ರಮಾಣಮುಂ, ಸ್ವಯಂಭೂರಮಣಸಮುದ್ರಪರ್ಯಂತಮುಂ, ಸಕಳತಿರ್ಯಕ್ಪರಿಭ್ರಮಣ [3]ಪರಿಗತನುಮಂಮಧ್ಯಸ್ಥಿತಮಂದರಮುಮೆನಿಸಿ

ಕಂ॥ ನಿಸದಮಸಂಖ್ಯಾತದ್ವೀ ।
ಪ ಸಮುದ್ರದ ಬಳ್ಳವಳ್ಳಿ ವಳಯಾಕೃತಿಯಿಂ ॥
ದೆಸೆದೊಂದನೊಂದು ಪರಿವೇ ।
ಷ್ಟಿಸಿರಲ್ ಕಣ್ಗೊಳಿಪುದದುವೆ ಮಧ್ಯಮಲೋಕಂ ॥ ೪೦ ॥

ಮ॥ ಸ್ರ॥ ಇರೆ ಜಂಬೂದ್ವೀಪಮಲ್ಲಿಂ ಪೊಜಿಗಿರೆ ಲವಣಾಂಬೋಧಿ ತದ್ವಾರ್ಧಿಯುಂ ಬಂ ।
ಧುರಲೋಕಾಕಾರದಿಂದಂ ಬಳಸಿರೆ ವಿಲಸದ್ಧಾತಕೀಷಂಡವೋರಂ ॥
ತಿರದಂ ಸುತ್ತಿರ್ದ ಕಾಳೋದಕಜಲಧಿ ಬೆಡಂಗಾಗೆ ತದ್ಬಾಹ್ಯದೊಳ್ ಪು ।
ಷ್ಕರನಾಮದ್ವೀಪಮಿಕ್ಕುಂ ವಿವಿಧಗಿರಿಸರಿದ್ದೇಶ ಸಂಪತ್ಕಳಾಪಂ ॥ ೪೧ ॥

ವ॥ ಆ ದ್ವೀಪದ ಬಾಹ್ಯಾರ್ಧಮನಳಂಕರಿಸಿ,

ಕಂ॥ ನವರತ್ನರಾಜಿ ಫಣಮಣಿ ।
ಕವಿದ ಮುಗಿಲ್ [4]ಪೆರೆ ಕರಾಳವದನಂ ಸ್ಫೂತ್ಯಾ ॥
ರವೆನಲ್ ಮಂಡಲಿತಮಹಾ ।
ಹಿವೊಲಿರ್ಪ್ಪುದು ಸುತ್ತಿ ಮಾನುಷೋತ್ತರಶೈಲಂ ॥ ೪೨ ॥

[1] ತ್ರಿಭೇದಂ. [2] ದಾತ್ತ, ಸಮುಪಾತ್ತ. [3] ಮತಿಕಲ್ಪ. [4] ಲ್ತೆರೆ, ಲೆರೆ.

ಉ॥ ಆ ಪೃಥಿವೀಧರೇಂದ್ರಫಣಿಪಂ ಪರಿವೇಷ್ಟಿಸಿ ಕಾವ ಪುಷ್ಕರ ।
ದ್ವೀಪ ಮಹಾನಿವಾಸದ ಸಮುನ್ನತಕಾಂಚನರಾಶಿಯಂತಿರು ॥
ದ್ದೀಪಿತರಶ್ಮಿ ರಂಜಿಪುದು ಮೂಡಣಮಂದರ ಮರ್ಹದಂಘ್ರಿಪೂ ।
ಜೋಪನಮತ್ಪುರಂದರ [1] ವಿಳಾತಳ ಸೌಂದರಮುದ್ಧಕಂದರಂ ॥ ೯೩ ॥

ಚಂ॥ ಅಡಿಮೊದಲಿಂಗಧೂಭುವನಮೋಲಗಿಸುತ್ತಿರೆ ಮಧ್ಯಲೋಕಮೋ ।
ಗಡಿಸದೆ ಸುತ್ತಲುಂಬಳಸಿ ಜೀವಿಸೆ ಚೂಳಿಕೆ ನಾಕಲೋಕಮುಂ ॥
ನೆಡೆಯೆದೆ ಪೊತ್ತು ನಿತ್ತಿರಿಸೆ ಮೈಮೆಯಿನಿಂತು ಜಗತ್ತ್ರಯಕ್ಕೆಮೂ ।
ವಡಿವುದು ಲಕ್ಷಯೋಜನಮಿತೋಚ್ಚ್ರಯ ಮಾಕನಕಾವನೀಧರಂ ॥ ೯೪ ॥

ವ॥ ಅಂತುಮಲ್ಲದೆಯುಂ,

ನೆನೆಯಿವುದೆಯ್ದೆ ಮೇರುಗಿರಿ ವಿಶ್ವಜಗನ್ನುತದಿವ್ಯಪಾದದಿಂ ।
ಜಿನವತಿಯಂ ಮಹಾಕಟಕದಿಂ ನೃಪನಂ ವಿಧೃತಕ್ಷಮತ್ವದಿಂ ॥
ಮುನಿಜನಮಂ ನಿತಂಬಗತಕಾಂಚನಮೇಖಳೆಯಿಂ ಲತಾಂಗಿಯಂ ।
ವಿನುತಪವಿತ್ರಪುಣ್ಯಗುಣದಿಂ ಗುಣಿ ನಾಪ್ಪಿಭು ಶಾಂತಿವರ್ಮನಂ ॥ ೯೫ ॥

ಗದ್ಯ

ಇದು ಸಮಸ್ತಭುವನಜನಸಂಸ್ತುತಜಿನಾಗಮ
ಕುಮುದ್ವತೀಚಾರುಚಂದ್ರಾಯಮಾಣಮಾನಿತ
ಶ್ರೀ ಮದುಭಯಕವಿ ಕಮಳಗರ್ಭಮುನಿಚಂದ್ರ ಪಂಡಿತ ದೇವ
ಸುವ್ಯಕ್ತಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸಮುರಾಳ

ಗುಣವರ್ಮ ನಿರ್ಮಿತಮಪ್ಪ

ಪುಷ್ಪದಂತ ಪುರಾಣದೊಳ್

ಪೀಠಿಕಾವರ್ಣನಂ

ನಾಮ

ಪ್ರಥಮಾಶ್ವಾಸಂ

[1] ವಿಳಾಸಿತ. [2] ಯಿ.

ದ್ವಿತೀಯಾಶ್ವಾಸಂ

ಕಂ॥ ಶ್ರೀನಿಧಿ ಮಹಿಮಾಧ್ಯಸ್ಥಂ ।
ಮಾನಿತಕಲ್ಯಾಣರೂಪಮೆಸೆವುದು ಸತ್ವಂ ॥
ತಾನಯುತಂ ದಿವಿಜಾದ್ರಿ ಸ ।
ಮಾನೀಕೃತಸಹಜಕವಿಸರೋವರಹಂಸಂ ॥ ೧ ॥

ವ॥ ಆಮೇರುವಿನ ಪೂರ್ವಪಶ್ಚಿಮಪ್ರದೇಶದೊಳ್.

ಕಂ॥ ಓರೊಂದಱೊಳಗೆ ನಾಡುಗ ।
ಳೀರೆಂಟುಗಳಾಗೆ ಕೂಡಿ ಮೂವತ್ತೆರಡುಂ ॥
ರಾರಾಜಿಸೆ ಸೊಗಯಿಪ್ಪುದಿ ।
ಳಾರಮಣೀರಮ್ಯಗೇಹಮುಭಯವಿದೇಹಂ ॥ ೨ ॥

ಮ॥ ಅಮಳಶ್ರೀಜಿನವರ್ತನಂ ಕಿಡದು ಷಟ್ಖಂಡಾವನೀಮಂಡಳಾ ।
ಕ್ರಮಿಗಳ್ ಕುಂದರಭೀಪ್ಸವೃಷ್ಟಿ ಕಱಿಸಿಯುತ್ತಿಕ್ಕುಂ ಪದಂದಪ್ಪದ ॥
ನ್ಯಮತಕ್ಕುದ್ಭವಮಿಲ್ಲ ಪಂಚಶತಚಾಪೋತ್ಸೇಧರುಂ ಪೂರ್ವಿತ ।
ಪ್ರಮಿತಾಯುಷ್ಯರುಮಪ್ಪರಲ್ಲಿ ಮನುಜರ್ ಭೂಪರ್ ಪ್ರಜಾಪಾಳಕರ್ ॥ ೩ ॥

ಕಂ॥ ನೆಗಟ್ಟಿ ಮಹಾಲಯಮಲ್ಲದೆ ।
ನೆಗಟ್ಟಿ ಮಹಾ ಲಯಮದಿಲ್ಲ ಯುತವರನಾರೀ ॥
ಯುಗಪರಿವರ್ತನ ಮಲ್ಲದೆ ।
ಯುಗಪರಿವರ್ತನ ಮದಿಲ್ಲ ತದ್ಭೂತಳದೊಳ್ ॥ ೪ ॥

ಲಂಚಂ ಕವರ್ತೆ ನೆಱಿತೆ ಕೋ ।
ಳಿಂಚೆ ಖಱಿಂ ಪನವು ಮಾರಿ ಬಂದೀಗ್ರಹಣಂ ॥
ಮುಂಚಲ್ ಕಳವಾಱಿಡಿ ಭಯ ।
ನಂಚಯ ಮೆಂಬಿವಱಿ [1]ಪೆಸರುಮಿಲ್ಲಾನಾಡೊಳ್ ॥ ೫ ॥

---

[1] ಪೆಸರ್ಗಳಿಲ್ಲಾ.

ಚಂ॥ ಮೃಗಧರನೆಂತು ಷೋಡಶಕಳಾಪರಿಪೂರ್ಣತೆಯಿಂ ಪ್ರಮೋದಮಂ ।
ಬಗೆಗೆಡೆವಾಟ್ಟುಗೆಯಂತು ನವಯೌವನೆ ಷೋಡಶವರ್ಷಲೀಲೆಯಿಂ ॥
ಸೊಗಯಿಕುಮಂತೆ ಷೋಡಶಮಹಾವಿಷಯಂಗಳಿನೊಪ್ಪಿ ಮಾಟ್ಟಿಪ್ಪುದು ।
ರ್ವಿಗೆ ಮುದಮಂ ಸುಖೈಕನಿಧಿ ಪೂರ್ವವಿದೇಹಮುಖರ್ವಸಂವದಂ ॥ ೬ ॥

ಮ॥ ಇದು ವೆಂಲೊಕ್ಕಂಡ ದುಕೂಲಚೇಲಮೆನೆ ತದ್ಭೂಮಧ್ಯಮಾಂತೊಪ್ಪುತಿ ।
ರ್ದುದು ನೀಳಾಚಳಚೂಳಿಕಾವರಸರಃಸಂಜಾತೆಯಂ ಕಂಜಕಾ ॥
ಮುದಸೌಗಂಧ್ಯಸಮೇತೆಯಂ ಚಳತರಂಗವ್ರಾತೆಯಂ ಪೂರ್ವವಾ ।
ದ್ಧಿರ್ದೃಢೋಪೇತೆಯ ನುನ್ಮದಾಂಖುವಿಹಗಪ್ರೋದ್ಭೂತೆಯಂ ಸೀತೆಯಂ ॥ ೭ ॥

ವ॥ ಅಂತು ನಿಜಲಲಿತಲಹರಿಭುಜಾಲಿಂಗಿತಪ್ರಾಚೀನಜಳನಿಧಾನೆ ಯೆನಿಸಿ.

ಮ॥ ಕುಲಭೂಭೃದ್ಭವೆ ಲಕ್ಷ್ಮಣಾಭಿನುತೆ ರಾಮೋತ್ಕಂಠೆ ವೈದೇಹಿ ಮಂ ।
ಜುಲವೇಣೀರಮಣೀಯೆ ಸತ್ಕುಶಲವವ್ಯಾಸಂಗೆ ಕಂದರ್ಪಜೋ ॥
ತ್ಕಳಿಕಾಕ್ರಾಂತೆ [1] ದಶಾನನಾತ್ಮೆ ವಿಮಲಶ್ರೀಮಜ್ಜನನ್ಯಾನೆ ಕ ।
ಣ್ಗೊಳಿಕುಂ ವಾಹಿನಿ ಸೀತೆ ಪೋಲ್ತು ಭುವನಪ್ರಖ್ಯಾತೆಯಂ ಸೀತೆಯಂ ॥ ೮ ॥

ವ॥ ಎನೆ ಮನಂಗೊಳಿಪ ಸೀತಾತರಂಗಿಣಿಯ ದಕ್ಷಿಣೋತ್ತರತಟಂಗಳೆರಡಱಲೊಳೆಮೆಂಟಿಂ ಟಿಷಟ್ಟುಂಡಮುಂಡಳೆಂಗಳಿಪ್ಪುವಲ್ಲಿಯುಮೆಂಟನೆಯ ತಾಣದಲ್ಲಿ.

ಮ॥ ವರವಕ್ಷಾರವಮಹೀಧರಂ ಪ್ರವಿಳಸತ್ಪಂಕಾವತೀಸಿಂಧು ಬಿ ।
ಧುರಸೀತಾನದಿ ರಮ್ಯನೀಳನಗಮೆಂಬೀ ನಾಲ್ಕು ಮಾಘಾಟಮಾ ॥
ಗಿರೆ ಪೂರ್ವಾಪರದಕ್ಷಿಣೋತ್ತರದಿಶಾದೇಶಕ್ಕೆ ದೇಶಂ ಮನೋ ।
ಹರಮಾಗಿರ್ಪುದು ಪುಷ್ಕಳಾವತಿ ಧರಾದೇವೀಶಿರೋಮಂಡನಂ ॥ ೯ ॥

ವ॥ ಅಲ್ಲಿ.

ಕಂ॥ ಗ್ರಾಮಸಮೂಹಂ ನಗರ ।
ಸ್ತೋಮಂ ಖರ್ವಡಕುಳಂ ಮಡಂಬಗಣಂ ದ್ರೋ ॥
ಣಾಮುಖಸಂತತಿ ಖೇಟ ।
ಗ್ರಾಮಂ ವತ್ತನಕದಂಬ ಮಳವಿಗಳುಂಬಂ ॥ ೧೦ ॥

ಚಂ॥ ವಿದಳಿತಕಂಜವಿಲ್ಲದ ಕೊಳಂ ಗಜವಿಲ್ಲದ ಕಾಡು ಚೂತವಿ ।
ಲ್ಲದ ಬನ ಮಂಚೆಯಿಲ್ಲದ ನದೀನಿಕಟಂ ಘನಗಂಧಶಾಲಿಯಿ ॥
ಲ್ಲದ ಪೊಲ ನಚ್ಚರನ್ನಗಣಿಯಿಲ್ಲದ ಬೆಟ್ಟು ಜನಾನುರಾಗಮಿ ।
ಲ್ಲದ ಪೊಟಿಲ ತ್ಯುದಾತ್ತಗುಣಮಿಲ್ಲದ ಮಾನವರಿಲ್ಲದೆಲ್ಲಿಯುಂ ॥ ೧೧ ॥

[1] ದಶಾನನಾತ್ತ್ಮ ವಿಮಲಶ್ರ.

ಕಂ॥ ಆನಾಡೂರೂರ್ದಪ್ಪದ ।
ದೇನೆನೆವುವೊ ಕೌದ್ರವೀಣದೌವಿಾನದ ತೈ ॥
ಳೀನದ ವಾಷೀಣದ ಮೌ ।
ದ್ಗೀನದ ಬಹುಸಾರಸಸ್ಯಸಕಳಫಳಿಂಗಳ್ ॥ ೧೦ ॥

ಮಡಿಯಿಂ ಮಡಿವಳಿನೊಳ್ ಕಾ ।
ಲ್ವಿಗಿದಿರವಿಂ ಶರನೊಳಿಮರ್ದ ವಾರಿಯಿ ನಿಭದೊಳ್ ॥
ನಿಡುದೆನೆಯಿಂ ಪ್ರಾಕಾರದೊ ।
ಳುಬ್ಬುಗದ ಕಣೆಯಿಂದ ಡೊಣೆಯೊಳೆಣ ಯೆನಿಸಿದುವಂ ॥ ೧೩ ॥

ಶಾಳಿಗಳಂ ಬಹುಪರಿಮಳ ।
ಶಾಳಿಗಳಂ ನಿಕಟಕುಮುದಸೌಗಂಧ್ಯಕೃತಾ ॥
ಶಾಳಿಗಳಂ ರುಚಿನಿಚಿತದಿ ।
ಶಾಳಿಗಳಂ ಬೆಳೆವ ನೆಲನೆ ಪೊಲ ನಾನೆಲದೊಳ್ ॥ ೧೪ ॥

ವ॥ ಅದಲ್ಲದೆಯದಿ ನದೀಮಾತೃಕಮುಂ, ದೇವಮಾತೃಕಮುಮೆಂಬ ಭೇದಮಿಂ ಪೇರ್ವರಿಸಿ.

ಚಂ॥ ಗಿಳಿಗಳ ಚಂಚುವಿಂದೊಡೆದ ಮಾವಿನ ಪಣ್ಣ ರಸಪ್ರವಾಹದಿಂ ।
ಬೆಳೆವುವು ಗಾಳಿಯಿಂ ದೂಡೆವ ಕರ್ವಿನ ಸೋರ್ವೆಳನೀರ ಸಾರದಿಂ ॥
ಬೆಳೆವುವು ಪಾಮರೀಮುಖಶಶಿದ್ಯುತಿಯಿಂದೊಸರ್ವಿಂದುಕಾಂತನಿ ।
ರ್ಮಳಜಳಪೂರದಿಂ ಬೆಳೆವುವಲ್ಲಿಯ ಬಿಂಧುರಗಂಧಶಾಲಿಗಳ್ ॥ ೧೫ ॥

ಕಂ॥ ಕಳಮವನಂಗಳ ವೀಲಾ ।
ಗಳುವಾಸುವ [1]ಗಿಳಿಗಳಿಂ ಪಸುರುಂ ನಭಂ ಕ ॥
ಣ್ಗೊಳಿಪುದು ತದ್ವನವತ್ರಂ ।
ಗಳ ಪಸುರ್ವೆಳಗಡೆರ್ದು ಮುಸುಕಿದತ್ತೆಂಬಿನೆಗಂ ॥ ೧೬ ॥

ಎಳನೀರ ಮನಿಗಳೊಳ್ ಮಾ ।
ತ್ರೂಳಗುವ ಪಾಮರಿಯರಾನನಂಗಳು ಮುಲರ್ಗ ॥
ಣ್ಗಳು ಮೆನೆವುವಲರ್ದ ಕಮಳಂ ।
ಗಳ ವಿಾನ್ಗಳ ಬಳಗಮೆಂಬ ಬಗ ಮಿಗುಮನಿಗಂ ॥ ೧೭ ॥

ಗಿಳಿಸೋವಂಗನೆಯರ ಕ ।
ಣ್ಗಳ ರುಚಿ ದೆಸೆದೆನೆಗೆ ಪಸರಿಸಿರೆ ಪಾಸಿದ ನಿ ।
ರ್ಮಳಜಾಳಮೆಂದು ಪಾಲ್ದೆನೆ ।
ಗಳ ದೆಸೆಗಂ ಸಾರವಂಜಿ ಕೆಲವರಗಿಳಿಗಳ್ ॥ ೧೮ ॥

---

1 ಗಿಳಿಪಸುರ್ತುನಾಡೆನಭಂ.

ಕಂ॥ ಲಲಿತಾಂಗನ ಬೆಮರ್ವನಿಗಳ ।
ನಲೆದಾಱಿವ ಕೀರಕುಳಲೆದೆಱಿಂಕೆಯು ಕಡುವ ॥
ಣ್ಣೆಲರ್ಗಳಸಿ ಪಕ್ಕಿಸೋಯದೆ ।
ಕೆಲಬರ್ ಪಾಮರಿಯರವಱು ಬರಮನೆ ಪಾರ್ವರ್ ॥ ೧೯ ॥

ವ॥ ಮತ್ತಮುಮ್ಮಲ.

ಚಂ॥ ಒದವಿದ ಶಾಲಿಗದ್ದೆಗಳ ಪಾಳಿ ಕುಕಿಲ್ವ ಲಿಕಾಳಿ ತಣ್ಪುವೇ ।
ಱಿದ ಸುಱಿಗಾಳಿ ಪಾಮರಿಯರೋಳಿ ವಿಟೇವಿಟಕೇಳಿ ಪೂಗಳಿಂ ॥
ಕೆದಱುವ ಧೂಳಿ ಪಾಡುವ ಮದಾಳಿ ಪೊದಪ್ಪಿಲರೋಳಿ ಯೆಂಬಿನಂ ।
ಮುದನನ ದಾಱಿಗೆತ್ತು ಸುಗಿದಿಪ್ಪುದು ಪಾಂಥಜನಂ ನಿರಂತರಂ ॥ ೨೦ ॥

ವ॥ ಅದಲ್ಲದೆಯುಂ.

ಉ॥ ರಾಗಿಮುಖೀಂದುಬಿಂಬದ ಲತಾಂಗದ ಕಣ್ಗಳ ಕಾಂತಿ ವಾರಿಧಾ ।
ರಾಗಣದೊಳ್ಕೊನಲ್‌ಕವಿದು ಪಾಂಥರ ಕನ್ನ ಮನಕ್ಕೆ ರೂಪುಗೊಂ ॥
ಡಾಗಳೆ ತೃಪ್ತಿಯಿಂ ಕುಡೆ ಮನಂಗೊಳಿಸಿರ್ಪ ರನಂಗರಾಜಧಾ ।
ರಾಗೃಹಶಾಳಭಂಜಿಕೆಗಳಂತಱು [1]ವಟ್ಟೆಗೆಯೊಳ್ ಲತಾಂಗಿಯರ್ ॥ ೨೧ ॥

ವ॥ ಅಂತುಮಲ್ಲದೆಯುಂ.

ಮ॥ ನೆವದಿಂ ತೃಷ್ಣೆಯನಾಗಿವಂದವಿದು ತೃಷ್ಣಾಭೇದಮಂ ಮಾಡುವಂ ।
ದವಿವಲ್ಲಪ್ಪೊಡಿವಂದಿರೇಕೆ ಸುರಭಿಸ್ರಾಲೇಯತೋಯಂಗಳಂ ॥
ಯುವಪಾಂಥರ್ಗೆಱೆವಲ್ಲಿ ತಮ್ಮ ಲಲಿತಾಂಗೋಪಾಂಗಶೃಂಗಾರಗಳ್ ।
ರವಮಂ ಬೀಱುವರೆಂಬ ದೂಱುನೆಸಗುತ್ತಿ [2]ರ್ವರ್‌ಪ್ರಸಾಕಾಂತೆಯರ್ ॥ ೨೨ ॥

ವ॥ ಆ ಪ್ರದೇಶಕ್ಕನತಿದೂರಮಾಗಿ

ಚಂ॥ ಸಲೆ ನಿಲೆ ಮಾವು ಪೂವು ವಕುಳಂ ಮುಕುಳಂ ಪೊಸತೆಂಗು ಕೌಂಗು ಕಾ ।
ದಲರೆಲರಂಚ ಬೆಂಚೆ ಪುಳಿನಂ ನಳಿನಂ ಗಿಳಿವಿಂಡು ಬಂಡು ಕೋ ॥
ಗಿಲೆ ಗೊಲೆ ತುಂಬಿ ಬಿಂಬಿ ಸುಱಿಗೇದಗೆ ಚಾದಗೆ ಕಂಪು ಸೊಂಪಗುಂ ।
ದಲೆ ಯೆನೆ ರಮ್ಯಮಾ ವಿಷಯದೊರ್ಗಳ ನಂದನವೃಂದವೆತ್ತಲುಂ ॥ ೨೩ ॥

ಮ।ಸ್ರ॥ ವನವಲ್ಲೀಲಾಸ್ಯದಿಂ ಜೀರ್ಕೊಳೆವಿಯನನುಬದ್ಧಾಳಿಯಿಂ ವಾರನಾರೀ ।
ಜನಮಂ ಥಾರಾಲಯೋದ್ಯತ್ಪ್ರತಿಚತುರತೆಯಿಂ ವಾಱಿಯಂ ನೋರಭಾಲಂ ॥
ಬನದಿಂ ಗೋಸರ್ಗಮಂ ಲಾಲಿತಕುಶಲವನಾಂಗತ್ಯದಿಂ ರಾಮಸೀಮಂ ।
ತಿನಿಯಂ ಪೋಲ್ತಲ್ಲಿ ನಿಚ್ಚಂ ಸುಱಿವುದು [3] ಬಹಳಾಪೋದಪೂರಂ ಸವಿಸಾರಂ ॥ ೨೪ ॥

[1] ವಂಟಿಗೆ. [2] ತ್ತಿರ್ಕುರ್ಂ [3] ವನದೊಳ್ ಸ್ವೈರಚಾರಂ.

ವ॥ ಅಂತುಮಲ್ಲದೆಯುಂ.

ಚಂ॥ ಕರಗಿಸುವಂತೆ ಗರ್ವ ಘನಜಾಳವನುರ್ವಿಸುವಂತೆ ಕಾಮತೋ ।
ಮುರಜನಿತಾಗ್ನಿಯಂ ನಿಱಿಸಿಯೆ ನಂದಿಸುವಂತೆ ವಿವೇಕದೀಪಮಂ ॥
ಬಿರಯಿಗಳಂ ಪಳಂಚಲೆವ ತಣ್ಣೆಲರಾಱಿಸುತಿರ್ಪುದಲ್ಲಿ ನ ।
ಲ್ಲರ ವಿಳಸದ್ವತಾಂತಪರಿಖೇದಮನೆಯ್ದೆ ಲತಾವನಂಗಳೊಳ್ ॥ ೨೫ ॥

ವ॥ ಅದಲ್ಲದೆಯುಂ.

ಮಾಸ್ರ॥ ನನೆಯಂಬಂ ಕಂತುವಿಂದಂ ಬಿಸುಡಿಸಿದಲರ್ಗಣ್ ಚಂದ್ರಬಿಂಬೋದಯಪ್ರಾ ।
ರ್ಥನೆಯಂ ಕರ್ನ್ನೆಯ್ದಿಲಿಂ ಪಿಂಗಿಸಿ ಕಳೆದ ಮೊಗಂ ಜನ್ಮಸಾಫಲ್ಯಮಂ ಭೂ ॥
ಜನನೇತ್ರಾನೀಕದಿಂದೆಯ್ದಿಸಿದನುಪಮಸೌಂದರ್ಯಮೊಳ್ಗಂಡರಂ ಬ ।
ದ್ದಿನ ಬಲ್ಪಿಂ ಗಂಡುದೊಟಿಪ್ಪಾತ್ಮೋತ್ಸವಕದ ನೊಬಗಾನಾಡೆ ಪೆಂಡಿರ್ಗೆ ಸಾಜಂ ॥ ೨೬ ॥

ಚಂ॥ ಅರಲ ಸರಲ್ಗಡಾರ ಮನಮುಂ ಗುಱಿಮಾಡದೊ ನಾಡೆ ನೀಱಿವೆಂ ।
ಡಿರ ನಡೆವೊಪ್ಪುವಪ್ಪುವೊಡಗೂಡುವ ನೋಡುವ ಸುತ್ತುವೊತ್ತುವಾ ॥
ದರಿಪೊಲಿಪೊಲ್ವಗೆಲ್ವ ಬಸದಾಗಿವ ಭೋಗಿವ ಕಾಯ್ವಬಯ್ವ ನಾ ।
ಣ್ಗರೆವೆರೆವಿಂಬುಕೆಯ್ಯುವೊಳಪೊಯ್ಯುವನೇಕ ವಿಚಿತ್ರಚೇಷ್ಟೆಗಳ್ ॥ ೨೭ ॥

ವ॥ ಮತ್ತಮಲ್ಲಿ.

ಕಂ॥ ಜಾಲಾಶೋಕಂ ವಿಗ್ರಹ ।
ಲೀಲೆ ರಜೋವಿಕೃತಿ ಜಾತಿಸಂಕರಮನಿಲೋ ॥
ಲ್ಲಾಲತರಶಿಖಿಶಿಖಾಕುಳ ।
ಕೋಳಾಹಳಮಿಲ್ಲ ಬನಮೊಳಲ್ಲದೆ ಜನದೊಳ್ ॥ ೨೮ ॥

ಮು॥ ಧೃತಧರ್ಮ ಚ್ಯುತಿ ಬಾಣಸಂಹತಿಗೆ ಬದ್ಧಾವೈಕೃತಂ ವಾರಣ ।
ಕ್ಕೆ ತಮಃಸಂಗತಿ ರಾತ್ರಿಗಾಱಿಡಿ ಸುಗಂಧೋತ್ಪಲ್ಲಪುಷ್ಪಕ್ಕುಪಾ ॥
ತ್ತತಪೋಹೀನತೆ ಚೈತ್ರದೇಱಿಶ್ಗೆ ಮಹದ್ವಂದಿಗ್ರಹಂ ತ್ಯಾಗಿಗ ।
ವ್ರತಯೋಗಂ ಜಳಪಹ್ನೆಗಲ್ಲದೆ ಜನಕ್ಕಿಲ್ಲಲ್ಲಿ ಬೇಱಿಲ್ಲಿಯುಂ ॥ ೨೯ ॥

ಮು॥ ಲತಿಕಾಪಲ್ಲವಮಲ್ಲದಿಲ್ಲಖಿಳಲೋಕಾಪಲ್ಲವಂ ಜೈನನಿ ।
ರ್ಮಿತಧರ್ಮೋದಯಮಲ್ಲದಿಲ್ಲರಿಚಮೂಧರ್ಮೋದಯಂ ಕೇತಕೀ ॥
ಧೃತಸತ್ಕಂಟಕಮಲ್ಲದಿಲ್ಲ ವಸುಧಾಸತ್ಕಂಟಕಂ ಕಾಳಕ ।
ಲ್ಪಿತದೋಷೋದ್ಗಮಮಲ್ಲದಿಲ್ಲ ಪೆಱಿವುಂ ದೋಷೋದ್ಗಮಂ ದೇಶದೊಳ್ ॥ ೩೦ ॥

ಕಂ॥ ಗುಣಮಿಲ್ಲದ ಯತಿ ಮುಹಿರ ।
ಕ್ಷಣಮಿಲ್ಲದ ನೃಪತಿ ಶೀಲಮಿಲ್ಲದ ಸತಿ ಲ ॥
ಕ್ಷಣಮಿಲ್ಲದ ಕೃತಿ ಜಿನಗೃಹ ।
ಗಣಮಿಲ್ಲದ ನಗರತತಿಯುಮಿಲ್ಲಾನಾಡೊಳ್ ॥ ೨೧ ॥

ವ॥ ಎಂಬಿನಮನೇಕಗಿರಿನಗರಸರಿದರಣ್ಯಕೇದಾರನಂದನಜನಸ್ಥಾನಸಂಪತ್ತಿಗುತ್ಪತ್ತಿನಿಳಯು ಮಾದ ತನ್ಮಹೀವಳಯದೊಳಗೆ ಸಕಳಸೌಂದರ್ಯಯೋನಿಯುಂ ರಾಜಧಾನಿಯುಮೆನಿಸಿ.

ಚಂ॥ ಅರಮನೆ ಮೂಗು ಕಂಪಿಡಿದೆಲರ್‌ನಱುಸುಯ್ ಸಿತಕೇತುಮಾಳೆ ಭಾ ।
ಸುರನಯನಾಂಶು ಪಂದಳಿರ ತೋರಣಮೊಳ್ನಿಡುವುರ್ವಪಾಸಕಾ ॥
ಧ್ವರಶಿಖಿಧೂಮಮಂಡಳಿ ಚಳಾವಳಕಮಾಗಿರೆ ಪುಂಡರೀಕಿಣೀ ।
ಪುರಮೆನೆದಿರ್ಪುದಾ ವಿಷಯಲಕ್ಷ್ಮಿಯ ಮುಗ್ಧಮುಖೇಂದುವೆಂಬಿನಂ ॥ ೨೦ ॥

ಕಂ॥ ಅದು ಗುಹ್ಯಕೋಪಗತಸಂ ।
ಪದ ವೆಂದಕುಲೀನವೆಂದು ಬಹುವಿಷಧರವೆಂ ॥
ದೊದವಿದ ಮಹತ್ವದಿಂದಿಱಿ ।
ವುದು ಧನಪತಿದಿವಿಜವತಿಫಣಾವತಿಪುರಮುಂ ॥ ೨೨ ॥

ಅದಱಿಶಿಖಂಡನೆಕೂಡಿ ತೊಲೆಯೊಳ್ ।
ಬಿದಿ ತೂಗಿದೊಡೊಂದೆ ನೆಲೆಗೆ ನಿರುತಂ ಬರಲಾ ॥
ಱಿದೆ ತನ್ನಲಘುತೆಯಿಂದಂ ।
ಬುದನೆರಡಱಿ ನಿಂದ ನಿಲವೆ ಸೂಚಿಪುದಿನ್ನುಂ ॥ ೨೪ ॥

ಭುವನದ ರಮಣೀಯವದಾ ।
ರ್ಥವೆಲ್ಲವಂ ಮಾಡಿಮಾಡಿ ನಿಜಕೌಶಳದೊ ॥
ಳ್ಪು ವಿಶೇಷಮಾಗೆ ಬಿದಿ ಬಱಿ ।
ಕವೆ ಮಾಡಿದನೆನಿಪುದದಱಿ [1]ಪೊಱಿವೊಱಿಲಂದಂ ॥ ೨೫ ॥

ವ॥ ಅದೆಂತೆನೆ.—

ಮಾಸ್ರ್ಯ॥ ನರನಾರೀಯೋಗದೀಕ್ಷಾಭವನಮಿದೆನಿಕುಂ ನಾಗವಲ್ಲೀಪಿನದ್ಧೋ ।
ದ್ಧುರಪೂಗಂ ಮಾಧವೀವೇಷ್ಟಿತಕುರವಕ ವೇಳಾಲತಾಬದ್ಧಕಾಳಾ ॥
ಗರು ಮಲ್ಲೀನದ್ಧಚೂತಂ ಲವಲೀಯುತಲವಂಗಂ ತವಾಳೀಪರೀತ ।
ಸ್ಫುರಿತಾಶೋಕಂ ಮೃಣಾಳೀಪರಿಗತಖರದಂಡಂ ಪುರೋದ್ಯಾನಷಂಡಂ ॥ ೨೬ ॥

[1] ಪೊಱಿವೊಱಿಲಂದಮುಮಂ.

ಚಂ॥ ದಿನಪನ ಕೆಯ್ಯ ಕಂಜದೊಡವುಟ್ಟಿದ ತಾವರೆ ಕಾವುಚಾವದಿಂ ।
ಜನಿಯಿಸಿದಿಹ್ಪು ಚಂದ್ರನವುರ್ದಿಂ ಮಡುಗೊಂಡ ಕೊಳಂ ದಿವಂ ತವ ॥
ರ್ಮನೆ ತನಗೆಂಬ ಪುಷ್ಪಲತೆ ಕಲ್ಪವುಮಹೀಜದ ಬೀಜದಂಪ್ರಿಪಂ ।
ವನಜಜನಂಚೆ ಗಗ್ನಿಜನ ಸೋಗೆಗೆ ಪುಟ್ಟಿವ ಹಂಸಕೇಕಿಗಳ್ ॥ ೩೭ ॥

ಕಂ॥ ಕಳರುತಿಯಂ ರತಿಯೊಳ್ ಕ ।
ಲ್ತೆಳವುರುಳಿಗಳಗ್ನಿಶಾಪವೆಯ್ದಿದ ಗಿಳಿಗಳ್ ॥
ಕಳಗೀತಿಕೆಗಳ್ ನಾಕದ ।
ವಿಳಸನದಿಂದೊಪ್ಪಿ ತೋರ್ವ ಪಿಕನಿಕರಂಗಳ್ ॥ ೩೮ ॥

ಮ॥ ಒಳಪೊಕ್ಕೆಯ್ದಿ ತೊಟಿಲ್ವುದಲ್ಲಿ ವಧುಕವ್ರಾತಂಗಳೊಳ್ ಪೋರುತುಂ ।
ತಳಿರ್ವೋಯ್ಲಿಂ ದೊಳಸೋರುತುಂ ಪುಟಿಲ ತಣ್ಪಂ ನಾರುತುಂ [1]ಪಿಂದ ನಿಂ ॥
ದಳಿವ್ಯೆಂದಂ ಬರೆ [2]ಪಾರುತುಂ ಕುಳಿರ್ವ ನೀರಂ ಪೀರುತುಂ ಪ್ರೌಢ್ಢಸ ।
ತ್ಕಳಕಂಠೀರುತ ಮಾತ್ಮಸಾತ್ಕೃತವನಶ್ರೀಚಾರು [3]ತನ್ಮಾರುತಂ ॥ ೩೯ ॥

ವ॥ ಅಂತು ಸಂಚರಿಪ ಮುಂದಗಂಧವಹನಿನಲ್ಲುಗುವ ತರುಶತದೊಳುದಿರ್ವ ಕುಸುಮರಜದ ಮುಂದೈಸಿ ನೆಗೆದ ಕೆಂಧೂಳಿಯಿಂದೆ ಮುಂದುಗೆಟ್ಟು ಮೊರೆವ ಮಧುಕರಂಗಳುಂ, ಮಧುಕರಧ್ವನಿಯಿನಲರ್ವಿಲ್ಲ ಜೀವೊಡೆಯ ರವವೆಂದು ಕಿವಿಯಿತ್ತು [1]ಕೇಳಲುಮ್ಮಳಿಸಿ ತಪ್ಪೊಳ್ ಬಿಗುರ್ವ ಬಿರಯಿಗಳುಂ, ಬಿರಯಿಗಳ ಮೆಯ್ಸುಯ್ಯ ಬೆಂಕೆ ಸೋಂಕೆ ಕಜ್ಜಿಗಂದಿದಂತೆ ಕಪ್ಪುವಿಡಿದಂಗಮೆಸೆಯೆ ಕುಸುಮಶರಸಖನ ವಡಿಯಜ್ಜವೆಸಕೆ ಪಕ್ಕಾಗಿ ಪುಗಲ್ಪುಗಲೆಂದು ಬಂಡಿಳಿಸಿ ತೊಂಡುಗೆಡೆವ ಗಂಡು ಗೋಗಿಲೆಗಳುಂ, ಗಂಡುಗೋಗಿಲೆಗಳ ತುಂಡಖಂಡನದಿನೊಜ್ಜಿತುಗುವ ಮಾಮರದ ಸೊನೆಯು ನೋನೆಯಿಂ ನಾೞ್ದು ಕೆಂದಳಿರೊಳೊಂದಿ ಮುಂದಯಿವಶೋಕವನಮನೆಳವಿಸಿಲ ಬಳಗಮೆಂದೆಳಸಿ ಬಳಸುವೆಳಗಿಳಿಗಳುಂ, ಎಳಗಿಳಿಗಳ ಬಳಗದ ನುಡಿಯನನುದಿನಂ ಕಲ್ತು ನುಡಿವಂಗನಾರತಿರಹಸ್ಯ ನಿಶ್ವಸನನಂಗಳಂ ಕೇಳ್ದು ನಗೆಯಿಂದ ಬಿರಿವಂತೆ ಬಿರಿವ ಬಿರಿಮುಗುಳ ತಗುಳೆದಿಂ ಸೊಗಯಿಸುವ ಮಲ್ಲಿಕಾಲತೆಯ ಹೊಂಪಂಗಳುಂ, ಮಲ್ಲಿಕಾಲತೆಯ ಬೊಂಪಕ್ಕೆ ಪಕ್ಕಾಗಿ ಕುಳಿರ್ವ ತಿಳಿಗೊಳದ ತಡಿಯ ತಣ್ಪುಟಿಲ ನುಣ್ಮಣಲೊಳತನುಗುರು ರತಿಯನೋದಿಸುವ ಶುದ್ಧಾಹ್ವರಂಗಳಿನಿವ ಶುಕ ಪಿಕ ಚಕೋರ ಚಕ್ರವಾಕ ಬಕ ಬಳಾಕ ನಾರಸ ಮರಾಳ ಪಾರಾವತ ಮಯೂರ ಹಾರೀತ ಕಾರಂಡ ಕುರವಕ ಸಂಕುಳಚರಣಸಂಚರಣದಿಂ ಪಳಚ್ಚನೆಸೆವ ಪಜ್ಜೆಗಳುವಳುಂಬಮೆನಿಸುಗು ಮತ್ತಮಲ್ಲಿ.

ಚಂ। ಸೊನೆ ತನಿವಣ್ಣ ನಾರ್ಪರಿವನೀರೆಳನೀರಲರ್ವಂಡು ಬೆಂಚೆ ಕ ।
ರ್ಬಿನರಸವೆಟ್ಟಿರ್ದ ಜಾಗದ ಪೊನಲ್ ಕೃತಕಾಚಳನಿರ್ಝರಾಂಬು ವೆಂ ॥
ಬಿನಿತಜ್ಞಾನಾದಕೊಟ್ಟಿಸಜ್ಞಾನಾಜ್ಞಾಪಿ ಪಾಂಥರ ಕಂತುತಾಪಮುಂ ।
ಘನತರಪುಷ್ಪರೇಣುಗಳೆ ಕೂರ್ತೊಡೆಗೂಡುವಗರ್ಬಮಾಡುಗುಂ ॥ ೪೦ ॥

[1] ಪ್ರೀತಿಯಿಂ. [2] ಪಾಜಿಸುತುಂ. [3] ತಂವಾರುತಂ. [4] ಕೇಳಲಣ್ಮದುಮ್ಮಳಿಸಿ.

ಕಂ॥ ಎಳಲತೆವನೆಯೆನಿತನಿತುಂ ।
ತಳಿರ್ವೊದಱಿನಿತನಿತುಮುಮರ್ದ ಪುಟಿಲೆನಿತನಿತುಂ ॥
ಕೊಳನೆನಿತನಿತುಂ ಕೃತಕಾ ।
ಚಳವೆನಿತನಿತುಂ ರತಾರ್ತರಿಳೆಸಿರೆ ರಯ್ಯಂ ॥ ೪೧ ॥

ಚಂ॥ ವಿಹಗಕುಳಿಂಗಳಿಂ ನೆರಪಿ ಕೂಜನದೇಟಿಸ್ಸಿ ಮನೋಜರಾಜ್ಯಮುಂ ।
ಬಹಳಿಕೆಯಿಂದೆ ಮೂವಡಿಸಿ ಕಾವಮುಮಾರ ಮನಕ್ಕಮಾಳಿಪಾ ॥
ಗ್ರಹಮನೊಡರ್ಚಲಲ್ತು ಮೊಱಿಯಂ ಮುರಸುತ್ತಿರಲಾತ್ಮಮನ್ಯಥ ।
ಗ್ರಹಮನದೇಂ ಕಟಿಲ್ಚುವರೊ ಯುವ್ವನಮತ್ತೆಯರಲ್ಲಿ ನಲ್ಲರೊಳ್ ॥ ೪೦ ॥

ಹರಿಣೀವೃತ್ತಂ॥ ನಳಿನದಳದೊಳ್ ತೀವಿರ್ದ ಚಾಮ್ಪಂಬು ತಳ್ತಲರ್ವಾಸು ಕೆಂ ।
ದಳಿರ ತೆರೆ ತಾಂಬೂಲಂ ರಂಭಾದಳವ್ಯಜನಂ ಲತಾ ॥
ನಿಳಯ ಮಳಿನೀಗೀತಂ ಪೂಗಂಪು ರಾಗದಲಂಪನ ।
ಗ್ಗಳಿಸೆ ಬನದೊಳ್ ನಿಚ್ಚಂ ಮೆಚ್ಚಿಪ್ಪ ರಿಚ್ಚೆಯಿನೋವವರ್ ॥ ೪೨ ॥

ವ॥ ಅದಲ್ಲದೆಯುಂ.

ರಗಳೆ॥ ಅಲ್ಲಿ ಬಹುಕುಸುಮಕುಜವೀಥಿಗಳೊಳೆಡೆಯಾಡಿ ।
ಸಲ್ಲಲಿತಲತೆಗಳಂ ಕಣ್ಣಾರೆ ನಡೆನೋಡಿ ॥
ಮುಂಚಿ ತಿಱಿದಲರ್ಗಳಂ ಕೂರ್ವಕೆಳದಿಗೆ ನೀಡಿ ।
ಲಂಚಮುಂ ಪ್ರಿಯರಿತ್ತ ಪೂಮಾಲೆಯುಂ ಸೂಡಿ ॥
ನನೆಯ ಮುಗುಳಲರ ಮಿಡಿಯೊಳ್ದುಡಿಗೆಯುಂ ಮಾಡಿ ।
ತನಿಗೊರ್ವಿದೆಲೆವಳ್ಳಿಯೊಳ್ ಗುಂಡುಗುಱಿಚಾಡಿ ॥
ತುಱಿಗಿದ ತಮಾಲದೊಳಗವಿದು ಸಖಿಯುಂ ಕಾಡಿ ।
ನಱಿಸುಯ್ಯೆ ಸುಟಿವಳಿಗೆ ಸುಗಿದು ಸಂಪಗೆಗೂಡಿ ॥
ಬಂದೊಳ್ವ ಬೆಚ್ಚಿಸುವ ಚವಳಕಪಿಗಲ್ಲಾಡಿ ।
ಬಂದು ಮಾವುರದ ತಳಿಗೊರ್ಂಬನುಯ್ಯಲಾಡಿ ॥
ತುಂಬಿಗಳುವೊಡನೊಡನೆ ತೇರಯ್ಸುತಿರೆ ಪಾಡಿ ।
ತಿಂಬಿ ಗಳಿವುವ ಗಿಳಿಗಳೊಡನೆಳಸಿ ಮಾತಾಡಿ ॥
ನುಡಿಯ ನುಣ್ಪಿಂ ಪಿಕನಿನಾದಮುಂ ಕೊಜ್ಜಚಾರಿ ।
ಬಿಡುಮುಡಿಯ ಬಿಂಕದಿಂ ನೋಗೆಯುಂ ಕೀಱುತ್ತಾಡಿ ॥
ನಡೆಯ ನಯದಿಂದಂಚೆಯಳವನೆಱಿಕುಳಿಯಾಡಿ ।
ತೊಡೆಯ ಚೆಲ್ವಿಂ ಕನಕಕದಳಿಯಂ ಱೞೋಡಾಡಿ ॥
ಕೃತಕಗಿರಿಗಳನೇಱಿದನಿತಱಿಂಗಳಿ ನಸುಬಾಡಿ ।
ಲತೆವನೆಗಳೆಸಳ ಪಸೆಯೊಳ್ ತನುವನೀಡಾಡಿ ॥
ಬೆಳೆದಳಿಪಿನಿಂ ಪಿಡಿದು ನಲ್ಲರಂ ಮುಂಡಾಡಿ ।
ಮುಳಿವ ತಿಳಿಪುವ ವಿನೋದಂಗಳಂ ಕೊಂಡಾಡಿ ॥

ಮಚ್ಚಱಿದು ಮನಮಿಚ್ಚೆವಟ್ಟ ಪುರುಳಂ ಬೇಡಿ ।
ಪೊಚ್ಚಮಿಲ್ಲದ ರಾಗರಸದಿಂ ಕುಳಿರ್ಕೊಂಡಿ ॥
ತಣ್ಬುಱಿಲ ತಾಣದೊಳ್ ಬಗರಗೆಗಳಂ ತೋಡಿ ।
ಕಣ್ಬೊಲದ ತಾವರೆಗೊಳಿಂಗಳೊಳಗೋಲಾಡಿ ॥
ವಿವಿಧಕೇಳೀಜಳದ್ರೋಣಿಯೊಳ್ ಮುಱಿಯಾಡಿ ।
ನವನಾಳಿಕೇರರಸಪೂರಮಂ ತುಳಿಯಾಡಿ ॥
ನಿಖಿಳಕೃತ್ರಿಮನದಿಗಳಿರ್ತ್ತಡಿಯೊಳೀನಾಡಿ ।
ಮುಖಶಶಿಯ ಪಗೆಯೆಂದು ಕಮಲಮಂ ಬೀನಾಡಿ ॥
ತನುಲತೆಯನಾಱಿಸೆ ಸುಗಂಧಪವನಂ ತೀಡಿ ।
ವನವಿಹರಣದೊಳಗೆ ಬೇಱೊಂದು ಕಡುಗಾಡಿ ॥
ಪೊಬ್ಬಿಗಳೆವುದು ನೃವನ ಪೆಂಡವಾಸಂ ಕೂಡಿ ।
ವರ್ತಿಸುತ್ತಿರೆ ತಮ್ಮ ಬಿಯದ ಚಾಗದ ರೂಢಿ ॥ ॥ ೪೪ ॥

ಚಂ॥ ಅಳಿಗಲರ್ಗೊಂಚಲಂ ಗಿಳಿಗೆ ಮಾಮಿಡಿಯಂ ಕಳಹಂಸೆಗಬ್ಜಕೋ ।
ಮಳೆದಳೆಮಂ ಪಿಕಕ್ಕೆ ಕೊನರಂ ತಿಱಿದಿಕ್ಕಿ ಪುರಾಂಗನಾಜನಂ ॥
ಬಳೆವ ವಿನೋದದಿಂ ತಣಿಪುತಿಪ್ಪುದು ನಲ್ಲರಗಲ್ದ ಕಾಲದೊಳ್ ।
ಮುಳಿಯದೆ ಸಂತಮಿಕ್ಕುಮೆಮಗೆಂದವಱಿಂಗೊಳ್ ಕೆಳೆಗೊಳ್ವ ಮಾಟಿಕ್ಕಿಯಿಂ ॥ ೪೫ ॥

ವ॥ ಮತ್ತಂ—

ಚಂ॥ ಅಲರ್ವನೆಯೊಳ್ ಬಱಿಲ್ದುಸಿರ್ದು ತಣ್ಬುಱಿಲೊಳ್ ತಳರ್ದಿಕ್ಕೆ ದಾಣದೊಳ್ ।
ನಲಿದೆಳೆನೀರ್ಗಳಂ ಕುಡಿದು ತುಂಬಿಯ ಗೀತಮನೊಲ್ದು ಕೇಳ್ದು ನು ॥
ಣ್ಬಲಸಿನ ಬಾಱಿಸಿಯೊಱಿಸಿಯರನೇಱಿಲ ಮಾವಿನ ಪಣ್ಗಳಂ ಮನಂ ।
ನಿಲೆ ಸವಿದಲ್ಲಿ ತೀರಮೆಯುಮಂ ಮಱಿಸಿದಿಪ್ಪುದು ಪಾಂಥಸಂಕುಳಂ ॥ ೪೬ ॥

ಕಂ॥ ವನಲಕ್ಷ್ಮಿಯ ನೇತ್ರಾಂಶುಕ ।
ವೆನೆ ನೇತ್ರಕ್ಕೆಸೆದು ಮಿಸುಗಿ ವಸುರ್ವಡೆದುವು ನಂ ॥
ವನದ ಕೆಲಂಬಿಡಿದಾರ್ದ್ರಕ ।
ವನಜೀರಕವನಹರಿದ್ರವನ ಸಂತತಿಗಳ್ ॥ ೪೭ ॥

ವ॥ ಅವಕ್ಕನತಿದೂರದೊಳ್.

ಚಂ॥ ಎನಗಮರ್ದಿಂಪಿನೊಳ್ ಮಧುವಿನಿಂವು ರಸಾಯನದಿಂವುಕೂರೆ ಕೂ ।
ರ್ತಿನಿಯರ ಕೂಟದಿಂವಮರ್ದಿನಿಂ[1]ಪೆಣೆಯಲ್ತು ದಿಟಕ್ಕೆ ಬೀಗುವಂ ॥
ತನುಪಮಮಾಗಿ ಬೀಗಿ ಬೆಳೆದಿಂಪಿನ ಪರ್ವಮೆನಿಪ್ಪ ಪರ್ವದಿಂ ।
ತನಿರಸಮೆಚ್ಚುಪಾಯ ಬಗೆಗೊಳ್ವುದು ಕರ್ಮಿನ ಸುರ್ವು ತೋಂಟದೊಳ್ ॥ ೪೮ ॥

[1] ಎಣೆಯಕ್ಕೆ.

ವ॥ ಅಲ್ಲಿ.

ಚಂ॥ ಸ್ಫುರಿಯಿಸುವೆಮ್ಮ ಪುರ್ವೆ ನೆಱಿಗುಂ ಜಗಮುಂ ಗೆಲಲಿನ್ನದೇಕೆ ನೀಂ ।
ಪರಿಹರಿಸೆಂದು ಮತ್ಕುಲದ ಕರ್ವಿನ ಬಿಲ್ಲ ನನಂಗನಿಂದಗ ॥
ಲ್ಬಿರಿಸಿದರೀಪುರಾಂಗನೆಯರೆಂಬ ಕನಲ್ಕೆಯಿ ನಿಕ್ಷುಕೋಟಿ ಪ ।
ಲ್ಮೊರೆವವೊಲಿಕ್ಷುಯಂತ್ರನಿವಹಂ ಮೊರೆವಬ್ಬರ ಮೆಂದು ಮುಬ್ಬರಂ ॥ ೪೯ ॥

ಉ॥ ಓಲಗಶಾಲೆ ಪೂಗಿಡುಗಳೋಳಿಗೆ ಜೇವಣಶಾಲೆ ಮತ್ತಭೃಂ ।
ಗಾಳಿಗೆ ಜೇನಶಾಲೆ ಕುಸುಮೋಪುಗೆ ಸೌರಭಸತ್ರಶಾಲೆ ತ ॥
ಣ್ಣಾಳಿಗೆ ನಾಟ್ಯಶಾಲೆ ಕುಸುಮೋಪಚಯಪ್ರಚಳತ್ಪುರಾಂಗನಾ ।
ಲೋಲಕಟಾಕ್ಷಲಕ್ಷ್ಮಿಗೆನಲೊಪ್ಪುವುವಲ್ಲಿಯು ಪುಷ್ಪವಾಟಿಗಳ್ ॥ ೫೦ ॥

ಕಂ॥ ಅಹಿಯಂತೆ ವಿಷೋದ್ಗಾರಿಗ ।
ಳಹರ್ನಿಶಪ್ರಹರದಂತೆ ಘಟಿಕಾತ್ಮಂಗಳ್ ॥
ರಹಟಘಟೀಯಂತ್ರಂಗಳ್ ।
ಬಹುವಿಧವಿಭ್ರಮದಿ ನೆನೆವುವುವಶಲ್ಯಕದೊಳ್ ॥ ೫೧ ॥

ಚಂ॥ ವಿಳಸದನಂತಪದ್ಮವಸುರಾಂತಕನಂ ಫಣಿವಂಶಮುಂ ಸದಾ ।
ನಳಕುಮುದಾವಭಾಸಿ ದೆಸೆಯಂ ರಘುನಂದನನೈನ್ಯಮುಂ ನಿರಾ ॥
ಕುಳಕವಿರಾಜಹಂಸಸುಭಗಂ ನಭಮುಂ ನೃಪಗೇಹಮುಂ ಸಮುಂ ।
ತಿಳಿವುಗುಮುಲ್ಲಿ ಮುಂದವವನೋಜ್ಜ್ವಳಶೀಕರಮುಂಬುಜಾಕರಂ ॥ ೫೨ ॥

ವ॥ ಮತ್ತಂ.

ಉ॥ ಪಾವಕದಿಕ್ಕಿನಂತೆ ವನದಂತೆ ವಿಜೃಂಭಿತಪುಂಡರೀಕ ವಿಂ ।
ದೀವರನಾಭರಮ್ಯಸಭೆಯಂತೆ ರನಾತಳದಂತನಂತಪ ॥
ದ್ಮಾವಹಮುರ್ವಿಯಂತೆ ನಭದಂತವಲಂಬಿತರಾಜಹಂಸ ವಾ ।
ಮ್ರಾವಳಿಯಂತೆ ಕಾಮಿಜನದಂತೆ ಸಮುತ್ಕಳಿಕಾಕುಳಂ ಕೊಳಂ ॥ ೫೩ ॥

ವ॥ ಮತ್ತಮಲ್ಲಿ.

ಚಂ॥ ನಿಗಳ್ದಿನವದ್ಯವಿದ್ಯರ ಕಳಾವನದಂತೆ ಪರೋಪಭೋಗವೈ ।
ತ್ತಿಗಳೆನಿತಕ್ಕುವಂತನಿತು ಕುಂದದೆ ಪೆರ್ಚುವ ತೋಯದಿಂದ ಮಾ ॥
ನಗರದ ಬಾವಿ ಪೊಕ್ಕರಣೆ ದೀರ್ಘಿಕೆ ಪೆರ್ಗಱಿ ದೊಣ್ಣೆ ಪೂಗೊಳಂ ।
ಬಗರಗೆ ಬೆಂಜೆ ಪಳ್ಳ ವೊಱಿವೆಂಬ ಜಲಾಶಯಮಿಂತು ಸುತ್ತಲುಂ ॥ ೫೪ ॥

ಕಂ॥ ನೀಡಿರದೆ ಪಿರಿಯಕರಿ ಸೆಂ।
ಡಾಡೆ ನೃಪಂ ನಿಚ್ಚಮತುಳಜನಕಳಕಳದಿಂ ॥
ಕೂಡಿ ಸೊಗಯಿಪುವು ನಗರದ।
ಮೂಡಣ ಪಡುವಣ ವಿಭಾಗದೊಳ್ ವೈಹಳಿಗಳ್ ॥ ೫೫ ॥

ನಯನಿಪುಣಸೂತ್ರಧಾರರ್।
ನಿಯಮಿಸುವರ್ ಭದ್ರಮಂದಮೃಗಸಂಕೀರ್ಣಾ ॥
ನ್ವಯದ ನೃಪಕರಿಗಳಂ ಪ್ರಣಿ।
ಧಿಯೊಡಂಬಡೆ ಸಕಳಕಿಕ್ಷೆ[1] ಕಣ್ಣೊಡಿಪುವಿನಂ ॥ ೫೬ ॥

ಉ॥ ವರ್ತಿಪ ಬೃಂಹಿತಂಗಳೊಳೊಳನೋರ್ವ ಮದಸ್ರವದಂಬು ಕೊಂಬು ಸಂ।
ವರ್ತದ ಬಲ್ಸಿಡಿಲ್ಗಳೆನೆ ವಜ್ರಧರಂ ಸೆಱಿತಿಗೆಯ್ದ ಪುಷ್ಕಳಾ ॥
ವರ್ತಘನಾಘನಂಗಳವೊಲಂಜನಕಾಂತಿಗಳುಗ್ರದಂತಿಗಳ್।
ಮಾರ್ತುಡುಗೀಗವೇಟಿನಿಯಮಂ ತಡವಂದಮನಾಂತು ಕಂಭದೊಳ್ ॥ ೫೭ ॥

ವ॥ ಅದಲ್ಲದೆಯುಂ.

ಮ॥ ನವರತ್ನೋತ್ಕರದಿಂ ಸುರೇಂದ್ರಧನುವಂ ಮೆಯ್ವಣ್ಣದಿಂ ತಾರ್ಕ್ಷ್ಯನಂ।
ಪವಮಾನಾತ್ಮಜನಂ ಜವಪ್ರಸರದಿಂ ಸೂರ್ಯಾಶ್ವಮುಂ ಶಕ್ರವಾ ॥
ಹವನಕ್ಷೋಣಗುಣಂಗಳಿಂ ವಿಗುವ ಜಾತ್ಯಶ್ವಂಗಳಂ ತಿರ್ದುತಿ।
ರ್ಪ್ಪವರ್ಗೇಂ ಸಾರ್ದುವೊ ಶಾಲಿಹೋತ್ರರವಿಪುತಾರೋಹಣಪ್ರೌಢಿಗಳ್ ॥ ೫೮ ॥

ವ॥ ಆಪ್ರದೇಶಕ್ಕಾಸನ್ನವಾಗಿ ವಿಹಿತಲೋಹಪಟಪ್ರಮುಖಬಹುವೇಧ್ಯಸಾನ್ನಿಧ್ಯಪರುವಿರಚಿತಾಂಗುಳಿತ್ರಾಣರಪ್ಪ ಶಿಷ್ಯರಂ

ಕಂ॥ ನಿಯಮಿಸವರ್ ತ್ರಿವಿಧಧನುಃ।
ಪ್ರಯೋಗದೊಳ್ ದೃಷ್ಟಿಮುಷ್ಟಿಶರಸಂಧಾನ ॥
ಕ್ರಿಯೆ ಲಕ್ಷ್ಯಸಿದ್ಧಿ ನಿಜಶಿ।
ಕ್ಷೆಯಿನನುಪಮವಾಗೆ ಚತುರಚಾಪಾಚಾರ್ಯರ್ ॥ ೫೯ ॥

ವ॥ ಮತ್ತಮಲ್ಲಿ.

ಚಂ॥ ಒದವಿ ಪೊದಟ್ಟಿ ಮೇಳೆಯದ ಕೇತನವಾಳಿಕೆ ವೀರಲಕ್ಷ್ಮಿ ದೂ।
ರದ ಭಟರಂ ನಿಜೋಚ್ಚಲಪಟಾಂಚಲದಿಂ ಕರೆವಂತುಟಾಗೆ ಮ ॥
ತ್ತದು ಭೃಗುದೇವತಾಕಟಕಪರ್ವತಮೆಂಬಿನವೊಪ್ಪುತಿರ್ಪುದಂ।
ಕದ ಕಳೆನಲ್ಲಿ ಬಿನ್ನಣದ ಬೀರರಿಳಾಪತಿ ಮೆಚ್ಚೆ ಕಾದುವರ್ ॥ ೬೦ ॥

[1] ಕಣ್ಣೊಡಿಪಿನಿಗಂ.

ವ॥ ಆಕಳೆದ ಕೆಲದೊಳ್ ಸಾರಿಯಂ ಕೋಲೊಡ್ಡಿಗೆಲ್ವ ನಿಗಳನನೆಗಟಿಶ್ತಿಗಿಡಿಪ ಬೈಗುವಂ ನಗುವ ಬೇತಾಳನಂ ಬೇಡೆನಿಪ ತಕ್ಕು ಮಿಕ್ಕು ವರೆ ಕಲ್ತ ಬಿನ್ನಣಿಗಳಿರ್ದು.

ಚ॥ ಕಿಟಿಪುವ ಗೇಣ ಕೇಣಮಿವರಿಂ ನವಯೌವನಯೋಗ್ಯಮಾಯ್ತ್ತಕ ।
ಣ್ಣಿಟಿಶಿದುದು ರೂವುಗೊಂಡುದೆನೆ ಚಾರಿ ಪುಗಿಲ್ ನೆಲೆ ನೋರ್ಪು ದಂಡೆ ಸೂಟಿತ್ ॥
ನಿಟಿಸು ನಿಘಾತ ಮೂಂಕೆ ಬಗೆ ಬಗ್ಗಣೆ ವಂಚನೆ ಬಂಧ ಮೆಂಬಿವಂ ।
ಮೆಟಿಶಿವೊವಜರ್ಕಳೇಂ ಕಲಿಸುತಿರ್ಪರೊ ಚಟ್ಟರನಟಿಶ್ತಿವಟ್ಟರಂ ॥ ೬೧ ॥

ವ॥ ಇಂತನೇಕ ಜನಮನೋಹಾರಿ ಸೌಂದರ್ಯವೃತ್ತಿಗವಕಾಶಮಾದ ವಿವಿಧಪ್ರದೇಶದಿಂದೊಳಗೆ ವಿಷಮವಿಷಲತಾ ಗುಲ್ಮಕಂಟಕವಿಕೀರ್ಣಮಾಗಿ ಬಳಸಿ ಬಳ್ವಳಿಪ ಬಾಟಿಶ್ವೀಲಿಗನತಿದೂರದೊಳ್.

ಮ॥ ಪರಿವೇಷಂ ರವಿಬಿಂಬಮಂ ಜಳಧಿ ಜಂಬೂದ್ವೀಪಮಂ ಸುತ್ತಿಸೌಂ ।
ದರಮಾಗಿರ್ಪವೊಲಿಪ್ಪುದಪ್ರತಿಮಕೋಟಾವಚಕ್ರಮಂ ಸುತ್ತಿಕಂ ॥
ಜರಜಃಪುಂಜವಿಚಿತ್ರವೀಚಿರುಚಿರಂ ಪರ್ಯಂತಹಂಸಂ ನಿರಂ ।
ತರಕಾಂತಂ ಪರಿಖಾಂತರಂ ಪುರವಧೂಚೇನೋತ್ತರೀಯೋಪಮಂ ॥ ೬೨ ॥

ಕಂ॥ ಪೊಱವೊಱಲ ಬನದ ಕಟ್ಟಿಲೆ ।
ಮಱೀದುಂಬಿಗಳಿಂದೆ ಬಯ್ದು ಪಾಡಿಸಿ ಸಾರ್ತಂ ॥
ದುಱಿದೊಡ್ಡಿದರ್ಕ ಬಿಂಬದ ।
ತುಱುಗಲದೆನಿಸುವುದು ಕಾಂಚನಪ್ರಾಕಾರಂ ॥ ೬೩ ॥

ಚಂ॥ ಇದು ತೆಱಿಶಿದಿರ್ದ ರಾಹುವುಖವೆಂಬ ವಿಶಂಕೆಯಿನಿಂದ್ರನೀಲರ ।
ತ್ನದ ತೆನೆಯಂಬುಗಂಡಿಯೊಳಗಂ ವುಗಲಂಜಿ ನಭಂಬರಂ ಪೊದ ॥
ಟಿಶ್ಕಿದವಿದ ಕೋಂಟಿಯಂ ನುಗುಟಿಶ್ದ ಪೋಗಲಹಃಪತಿ ಬೇಱಿಶಿಬಟ್ಟಿಗಾ ।
ಣದೆ ತಡೆದಿರ್ಪನಲ್ಲಿ ಪೊಣರ್ವಕ್ಕಿಗೆ ಸಂತಸಮಾಗೆ ಸಂತತಂ ॥ ೬೪ ॥

ಕಂ॥ ಪ್ರತ್ಯಾಸನ್ನದೆ ನಡೆವಾ ।
ದಿತ್ಯನ ರುಚಿ ಪೊನ್ನ ಕೋಂಟಿಯಂ ಕರಗಿಸಿದಂ ॥
ತತ್ಯುಚ್ಚ ಕೂಟಹತಿಯಿಂ ।
ನಿತ್ಯಂ ಪಱಿಪಱಿದು ಸಾರ್ವುವಲ್ಲಿಯ ಮುಗಿಲ್ಗಳ್ ॥ ೬೫ ॥

ಮುಗಿಲಟ್ಟಳೆಗಳ ಪಚ್ಚೆಯ ।
ಪೊಗರ್ವೆಳಗಿಡಿದಡರ್ವ ಪಾಂಗು ಗಗನಾಪಗೆಯಂ ॥
ಜಗುನೆಯ ಕರ್ಮ್ಮಡು ವಱಿಸಲ್ ।
ನೆಗೆವಂತೊಪ್ಪುವುದು ಕಣ್ಗೆ ತತ್ಪುರಜನದಾ ॥ ೬೬ ॥

ಕಂ॥ ವ್ರಣಿಹಿತಕಲಶಾವಳಿ ಕಿಂ ।
ಕಿಣಿಯೊಳ್ ಪೊಱಿಮಡುವ ವುಗುವ ಜನದುಲಿಯುಲಿಯೊಳ್ ॥
ತೊಣೆಯಾಗೆ ನಗರಲಕ್ಷ್ಮಿಯೆ ।
ಮಣಿನೂಪುರದಂತೆ ಗೋಪುರಂ ಸೊಗಯಿಸುಗುಂ ॥ ೬೩ ॥

ತುಂಗತರಂಗಂ ಸುಟಿವ ತು ।
ರಂಗಂ ನೊರೆವಿಂಡು ನೃಪರ ಬೆಳ್ಗೊಡೆಯಾಗಲ್ ॥
ಗಂಗಾಪ್ರವಾಹಮೆನಿಪುದು ।
ಸಂಗತಜನಕಳಕಳಂ ಪ್ರತೋಳೀವಳಯಂ ॥ ೬೪ ॥

ಮ॥ ಪುರಪೂರ್ವಾಪರದಕ್ಷಿಣೋತ್ತರದಿಶಾಖಂಡಂಗಳೊಳ್ ನೀಳ್ದು ಬಿ ।
ತ್ತರದಿಂದೊಪ್ಪುವ ಬೀದಿಗಳ್ ಸುಜನಚಿತ್ತಾಹ್ಲಾದಿಗಳ್ ಕೀರ್ಣವು ॥
ಪ್ಪರಸಾವೋದಿಗಳೋಳಿಯೊಳ್ ಸ್ಫಟಿಕಲೀಲಾವೇದಿಗಳ್ ಗೋತ್ರಭಿ ।
ತ್ಪುರಸಂವಾದಿಗಳುದ್ಧತೋರಣಪತಾಕಾಸ್ತಂಭಸಂಭೇದಿಗಳ್ ॥ ೬೯ ॥

ಚಂ॥ ದ್ವಿಗುಣಿಸೆ ಱಣ್ಣವಿಂದುಮಣಿಮಂಡಪಕಾಂತಿಗಳಿಂ ಮುಗುಳ್ತ ಮು ।
ಳ್ಗಿಗೆಗೆ ಹರೀತರತ್ನಭವನಾಂಶುಗಳಿಂ ದಳೆವಾಟಿಕಿಗಿಂದ್ರನೀ ॥
ಲಗೃಹಮರೀಚಿಯಿಂ ಮಧುಕರಪ್ರಕರಕ್ಕರುಣಾಶ್ಮವೇಶ್ಮರ ।
ಶ್ಮಿಗಳಿ ನಶೋಕೆಗೀವುವು ಗೃಹೋಪವನಾವಳಿ ಕೇರಿಗೇರಿಯೊಳ್ ॥ ೭೦ ॥

ಕಂ॥ ಬಾಂದೊಱಿಯೊಳೊಗೆದ ನೊರೆವಿಂ ।
ಡೆಂದು ಪುರಶ್ರೀಗೆ ಪಿಡಿದ ಬೆಳ್ಗೊಡೆಯು ತಗು ॥
ಟಿಪ್ಪಿಂದು ನೆಗೆತಂದ ಬೆಳ್ಮುಗಿ ।
ಲೆಂದೆನಿಸುವುವಭ್ರಚುಂಬಿಸೌಧತಳಂಗಳ್ ॥ ೭೧ ॥

ಪುರವರದ ಸೌಧತಲದೊಳ್ ।
ಕರುವಿನ ಚಿತ್ರದ ಬಿಡಾಲಮಂ ಕಂಡೊಡೆ ಚೆ ॥
ಚ್ಚರಮೆ ಪುಲಿಗೆತ್ತು ಚಂದ್ರನ ।
ಹರಿಣಂ ಬಿಟ್ಟಿತೋಡಿ ನಗಿಸದಿರ್ಕ್ಕುಮೆ ಜನಮಂ ॥ ೭೨ ॥

ಮ॥ ಕಳಶಂ ಕನ್ನಡಿ ರಂಗವಲ್ಲಿ ರಸವದ್ಗೀತಂ ವರಸ್ತ್ರೀಜನಂ ।
ತಳಿರುಯ್ಯಲ್ ಮಣಿದೀಪರಾಜಿ ಗುಡಿ ಮಾಂಗಲ್ಯಸ್ವನಂ ವೇದಿಕಾ ॥
ವಳಯಂ ಪೂವಲಿ ಮತ್ತವಾರಣಮುದಂಚತ್ತೋರಣಂ ಚಿತ್ರಭಿ ।
ತ್ತಿ ಲತಾಮಂಟಪವೆಂಬಿವಿಲ್ಲದ ಜಿನಾವಾಸಂಗಳಿಲ್ಲೆಲ್ಲಿಯುಂ ॥ ೭೩ ॥

ಶಾ॥ ಶ್ರೀನೀಡಂ ಪುರಮುಬ್ಧಿ ತತ್ವನಯಘೋಷಂ ಕರ್ಣಧಾರಂ ಮಹಾ ।
ಮಾನಸ್ತಂಭಕುಳಂ ಶಿಳಂ ಪರಮಧರ್ಮವ್ಯಾಪ್ತಿ ಬಿಣ್ಗುಂಡು ಭ ॥
ವ್ಯಾನೀಕಂ ಶುಭಲಾಭಲಂಪಟಮನಸ್ಸಂಯಾತ್ರಿಕವ್ರಾತಮಾ ।
ಗೇನೊಪ್ಪಿರ್ಪುವೊ ಪೋಲ್ತು ದಿವ್ಯಜಿನಚೈತ್ಯಂಗಳ್ ಬಹಿತ್ರಂಗಳಂ ॥ ೭೪ ॥

ಮ॥ ಗುರುಧರ್ಮಶ್ರವಣಾವಭಾಸಿ ನಭದೊಳ್ ನಿಷ್ಕಲ್ಮಷಾಶಾಂಬರ ।
ಸ್ಫುರಿತಂ ಶಾರದದೊಳ್ ಸುಧಾಧವಳಧಾಮಂ ಸೋಮನೊಳ್ ಚಿತ್ರವಿ ॥
ಚ್ಛುರಿತಂ ಮಂಡಿತಮಾನನೀನಿಲದೊಳ್ ನಿರ್ವಾಣಸೌಖ್ಯ ಪ್ರಿಯಾ ।
ನಿರತಂ ಸಾಮಜದೊಳ್ ಸಮಾನವೆನಿಕುಂ ಪ್ರೋತ್ತುಂಗಚೈತ್ಯಾಲಯಂ ॥ ೭೫ ॥

ವ॥ ಎನಿಸಿದುತ್ಥಂಭಿತಮಾನಸ್ತಂಭಮಕರತೋರಣವಿರಚಿತಂಗಳುಂ, ಅನೇಕಮಣಿಕೂಟಕೋಟಿ ವಿಟಂಕಟಂಕಿತವಿಯತ್ತಳಂಗಳುಂ, ಜಿನರಾಜಪೂಜಾನುರಕ್ತಪುರಜನವ್ಯವೇಶನಿಸ್ಸರಸಂಕೀರ್ಣಗೋಪುರಂಗಳುಂ, ಅಂತರಾಂತರವಿಕೀರ್ಣಸೌವರ್ಣಕಳಶಮುಕುರಚಾಮರವ್ಯಜನಧೂಪದೀಪಾದ್ಯುಪಕರಣವಿಳಸಿತಂಗಳುಂ, ಪ್ರಚಂಡಪಂಡಿತಸ್ಯಾದ್ವಾದವಿದ್ಯಾನುವಾದಶಬ್ದಾರ್ಥನಯಪ್ರಮಾಣವಾಣೀ ವಿಳಾಸಿಗಳುಮಪ್ಪ ಜಿನನಿವಾಸಂಗಳಲ್ಲದೆಯುಂ.

ಕಂ॥ ಮನಸಿಜನ ಭುವನಸಮ್ಮೋ ।
ಹನವಿದ್ಯಾಪೀಠವೆನಿಸಿ ರಂಜಿಪುದು ವಿಯೋ ॥
ಗಿನಿಕಾಯಕಾಳಕೂಟಂ ।
ಘನಕನಕಕವಾಟಮಲ್ಲಿ ಗಣಿಕಾವಾಟಂ, ॥ ೭೬ ॥

ಉ॥ ಮೇನಕೆ ರಂಭೆ ಯೂರ್ವಶಿ ಸುಕೇಶಿ ತಿಲೋತ್ತಮೆ ಮಂಜುಘೋಷೆ ಯೆಂ ।
ಬೀನೆಗಟ್ಟಿದ್ದಗ್ಗದಚ್ಚರಿಯರಚ್ಚರಿಯಪ್ಪ ವಿಳಾಸಮಂ ನಿಜ ॥
ಭೂನಟನೈಕದೇಶಮೆ ತಜಿಂಬಿಮದೆಂಬ ಸುರೂಪವಿಭ್ರಮ ।
ಶ್ರೀ ನಿಜಮಾಗೆ ರಂಜಿಸುವರಲ್ಲಿಯ ರೂಢಿಯ ಗಾಡಿಗಾರ್ತಿಯರ್ ॥ ೭೭ ॥

ವ॥ ಎನಿಪಗಣ್ಯಲಾವಣ್ಯಪಣ್ಯಾಂಗನಾಜನದ ಭಾಗ್ಯದ ಸೌಭಾಗ್ಯದ ನಯದ ಬೀಯದ ಚಾಗದು ಪಭೋಗದೆಸಕದೊಳಂ, ಬರ್ದುಗಾರ್ತಿಯರ ಬಹಿರಂಗಣಂಗಳೊಳ್ ಅಳವಟ್ಟ ಕಂಭಂಗಳಲ್ಲಿ ನೆಗಟಿಶ್ತಿಗೆತ್ತಿ ತೆತ್ತಿಸಿದ ಸೌಭಾಗ್ಯಘಂಟೆಗಳೊಳಂ, ಸೌಧತಳಂಗಳ ವಿನೋದವೇದಿಕೆಯ ಮತ್ತವಾರಣದ ಮಲಂಗಂ ಮಲಂಗಿ ಚದುರ ಚಾಗದ ದಗುಂತಿಯಂ ಮೆಱಿಶಿವ ವಿವಿಧವಿಟರೊಳಂ, ಚತುರ ಚತುರಿಕೆಯರೋದಿಸಿದ ಮದನಾಗಮಂಗಳಂ ಪದಂಗುಟ್ಟಿ ಪರಮಪಂಡಿತಂಗಳೆನಿಪ ಪಂಜರದಪಂಡಿತವಕ್ಕಿಗಳೊಳಮತಿಮನೋಹಾರಿಯಪ್ಪ ಸೂಟಿಶಿಗೇರಿಗಾಸನ್ನಮಾದ ವಿಪಣಿವೀಥಿಯೊಳ್.

ಚಂ॥ ಬಳಸುವ ತುಂಬಿವಿಂಡು ಜಲದಾವಳಿ ಸೂಸುವ ಬೆಳ್ಮುಗುಳ್ ಘನೋ ।
ಪಳತತಿ ಮಾಳೆಯಿಂದೊಸರ್ವ ಪುಷ್ಪರಸಂ ಮಬಿಶಿ ಮಾಳೆಗಾರ್ತಿಯ ॥
ರ್ಕಳ ಕಡೆಗಣ್ಣ ಬೆಳ್ಪು ಕುಡುವಿಂಚು ಕನನ್ಮಣಿಕಂಕಣಸ್ವನಂ ।
ಗಳೆ ಮೊಬಿಗಾಗೆ [1]ಕಾರ್ಮೊಗಮನಲ್ಲಿಯ ಪೂವಿನ ಸಂತೆ ತೋಱುಗುಂ ॥ ೭೯ ॥

ಕಂ॥ ಬಿರಯಿಗಳನಿಸಲನಂಗಂ ।
ಗರಲಂಬಿನ ಪೊದೆಯನಖಿಳವನದೇವತೆಯರ್ ॥
ವಿರಚಿಸಿ ನೀಡಲ್ ಬಂದಂ ।
ತಿರಲೆಸೆವರ್ ಪುಷ್ಪಮಾಲಿಕಾಧಾರಿಣಿಯರ್ ॥ ೭೯ ॥

ಚಂ॥ ಶ್ವಸಿತದ ಕಂವು ಕಂಪನಭಿವರ್ಧಿನೆ ಬಣ್ಣದ ಸೊಂಪು ಬಣ್ಣವೇ ।
ಱಿಸೆ ಮಧುರಸ್ಮಿತಾಂಶು ಮಧುರಸ್ಮಿತಲೀಲೆಯ ನೀಯೆ ಮಾಲೆಗೇ ॥
ನೆನೆದುವೊ ಮಾಲೆಗಾರ್ತಿಯರ ವರ್ತನೆ ಮಾಱುಗಳಂತೆ ಮಾಱುಗಳ್ ।
ರಸಿಕರನೊತ್ತೆ ಬಾಸಿಗಮನೆತ್ತುವ ಚೆಲ್ವಗೆಯೆತ್ತೆ ಚಿತ್ತಮಂ ॥ ೮೦ ॥

ವ॥ ಅದಲ್ಲದೆಯುಂ ಅತಿಮಧುರಪೂಗಫಲಂಗಳೊಳಂ ಸರಸನಾಗವಲ್ಲೀದಳಂಗಳೊಳವೆಸೆವ ತಾಂಬೂಲಿಕಾನಿಕೇತನಂಗಳೊಳ್.

ಕಂ॥ ಪೊಸಮುತ್ತಿನ ಸಿಪ್ಪುಗಳಂ ।
ತೆಸೆದವುವೆಂಬವರ ನೀರಸೋಕ್ತಿಯ ಪುರುಳೇಂ ॥
ವಸುಧೆಗಿಱಿಂದಿಂದುಕಳೆಗಳ ।
ಪೊಸಬೆಳಸೆನಿಪುವು ಪೊದಪ್ಪಿ ಬೆಳ್ಪಿಡಿದೆಲೆಗಳ್ ॥ ೮೧ ॥

ವ॥ ಅದಲ್ಲದೆಯುಂ.

ಕಂ॥ ವಿರಹಭರೋತ್ಕಂಠಮನೋ ।
ಹರಿಯ ಕಪೋಳಂಗಳಂತೆ ನಿಬ್ಬರಿಸಿದ ಬೆ ॥
ಳ್ಕರಿಸಿದೆಲೆಗಳಿನೆದೆಲೆಗಳ ।
ಬರಿಸುವುದನುನಯದೆ ಪೆಂಟಿ ಗೆಂಟೆರ ವಿಟರಂ ॥ ೮೨ ॥

ವ॥ ಆದಱಿ ಕೆಲದೊಳ್.

ಕಂ॥ ನೆರೆವದಳದರೆವ ಸಾಂದಿನ ।
ವೊರೆವಳಿಗಳ ಪರೆವ ಕಂಪನೆರೆವನಿಳಿನ ಮು ॥
ಯ್ಯೊರೆವ ವಿಟಭೋಗಿಗಳ ವಿ ।
ಸ್ತರದಿಂ ಸೊಗಯಿಪುವು ಘಟ್ಟವಳೆರಂಗಡಿಗಳ್ ॥ ೮೩ ॥

[1] ಕಾರ್ಮುಕಮು,

ವ॥ ಅದಲ್ಲದೆಯುಂ.

ಕಂ। ಉಂಡೊಡೆ ಕಿಡುವುದು ಪಿರಿದೇಂ।
ಕಂಡೊಡೆ ಪೆಸರ್ಗೊಂಡೊಡೊಮ್ಮೆ ನೆನೆದೊಡೆ ಕಿಡುಗುಂ॥
ಚಂಡಾಮಯಮೆನಿಪೌಷಧ।
ಮುಂಡೆಳಿಯಿಂ ಸೇವ್ಯಮುಲ್ಲಿ ಗಂದಿಗವಸರಂ ॥ ೪೪ ॥

ಇದು ಪೂವಲಿಗೆದಱಿದ ನೀ।
ಲದ ರಂಗಂ ಭಗಣಬಿಂಬಚುಂಬಿತಯಮುನಾ॥
ಹ್ರದಮೆನಿಪುದು ಚಿತಮಣಿಗಳ।
ಪುದುವಿಂ ಮಣಿಗಾಱಿವಸರ ಮಸಿತಾಂಬರದೊಳ್ ॥ ೪೫ ॥

ತರಳವೃತ್ತ॥ ಕಮಳವೃಂದಮುನಾವಿರಲ್ ಪಗಲುಂ ವಳಂಚಲೆವೀವುರೋ।
ತ್ತಮವಧೂವದನೇಂದುಗಳ್ಕಿದುವುಂತು ಮಾಣಿವ ಶಕ್ತಿಯಿ॥
ಲ್ಲೆಮಗವಂ ಕೆಳೆಗೊಂಡು ಮಾಣಿಪೆವೆಂದು ಬಂದ ದಿನೇಶರಂ।
ತಮರ್ದ ಭಂಡದ ಸೊಂಪು ಪೊಂಪುಱಿ ಕಂಚಗಾಱಿರ ಪಟ್ಟದೊಳ್ ॥ ೪೬ ॥

ಕಂ॥ ಧನದನ ಕಾಂಚನಮಿವರನು।
ದಿನಮೊರೆವ ಸುವರ್ಣರಜದ ತೂಕಕ್ಕೆ ವರಲ್॥
ಕನಸಿನೊಳವಾಱಿದೆನಿಸುವ।
ಧನಪತಿಗಳ ಬಚ್ಚ[1]ರಾಪಣಂಗಳೆಳ್ಪುಂಬಂ ॥ ೪೭ ॥

ಉ॥ ವಲ್ಲಭಮಂತ್ರತಂತ್ರಪರಿರಕ್ಷೆಯಿದೆಂದುಮಬಾಧ್ಯ ಮಿಂತಿದೆಂ।
ದಿಲ್ಲಿಯೆ ರತ್ನಮುಂ ಧರಣಿ ಬಯ್ತ್ರಳೊ ವೇಣ್ ವಡಬಾಗ್ನಿಗಳ್ಕಿ ತ॥
ನ್ನಿಲ್ಲಿಯೆ ರತ್ನಮುಂ ಕಳಿಪಿತೋ ಕಡಲೀಪುರಿಗೆಂಬ ಮಾತನ।
ಲ್ಲಲ್ಲಿ ನಿಮಿರ್ಚುಗುಂ ವಿಪಣಿ ವೀಥಿಯೊಳೊಪ್ಪುವ ರತ್ನರಾಶಿಗಳ್ ॥ ೪೮ ॥

ವ॥ ಅದಲ್ಲದೆಯುಂ.

ಕಂ॥ ನಾನಾಜನಬಹಳತೆಯಿಂ।
ನಾನಾಮಣಿಕನಕವಸ್ತುವಿಸ್ತೀರ್ಣತೆಯಿಂ॥
ನಾನಾಕ್ರಯವಿಕ್ರಯದಿನ।
ನೂನಮೆನಲ್ ಪಣ್ಯಮಾರ್ಗಮಾರ್ಗಂ ಸೇವ್ಯಂ ॥ ೪೯ ॥

[1] ದಾಪಣಂ

ವ॥ ಆ ವಿಪಣಿವೀಥಿಯೆಂಬ ಬಿಸಜನಾಳಕ್ಕೆ ವಿಚಿತ್ರಪತ್ರದಂತೆ ರಾಜಭವನಮುಂ ಬಳಸಿ.

ಮುದ್ರಿಕೆ॥ ನಗರನಾಯಕನುನ್ನತಿ ತನ್ನಂ ಮುನ್ನಲೆಯುತ್ತಿರೆ ಮುಂದರಂ ।
ಬಗೆಯೊಳ್ಕೊಡ್ಡಿಸಲಣ್ಮದ ನೇವಾವೃತ್ತಿಗೆ ಪೂಣ್ದು ನಿತಾಂತಮೋ ॥
ಲಗಿಸಲಟ್ಟಿದ ಸಾನುವದೆತ್ತಂ ಬಂದೆಳಸಿರ್ದಪುದೆಂಬಿನಂ ।
ನೊಗಯಿಪ್ಪುದು ಪೊಮ್ಮದಿಲುಗ್ರಾಂಶೂದ್ಗತವಾಗಿರೆ ಕೆಮ್ಮುಗಿಲ್ ॥ ೯೦ ॥

ವ॥ ಅಲ್ಲಿಂದೊಳಗೆ ವಿಚಿತ್ರಚೀನಾಂಬರಾವಳಂಬಿತಸಂಭೃತವಾಗಿ

ಚಂ॥ ಜಲಧಿಯೊಳಿಪ್ಪ ಕಾಲವೊಡಗೂಡಿದ ಬಂಧುಗಳಿಪ್ಪ ರತ್ನಮುಂ ।
ಡಳಗಳಿಳೀಶಮಂದಿರದೊಳಿರ್ದೊಡವಂ ನೆನೆದಟ್ಟಿಕೊಂದೆ ಬಂ ॥
ದೊಳವುಗಲಾಱಿದಾವರುಣವಾಹನ ವೀಕ್ಷಿಸಲೇಱಿ ನಿಂದುದುದ್ದ ।
ದೊಳೆನೆ ರಂಜಿಕುಂ ಮಕರತೋರಣವೀಕ್ಷಣಸೌಖ್ಯಕಾರಣಂ ॥ ೯೧ ॥

ವ॥ ಮತ್ತಮನವರತವೋಲಗಿಸಲೆಂದೊಳಪುಗುವ ಮುಂಡಳಿಕದಂಡನಾಥಸಾಮಂತವೃಂದದಂ ದಣದ ಸತ್ತಿಗೆಯ ಸಂದಣಿಯಿನೊಂದಿದುತ್ತರಾಭಿಮುಖಮಪ್ಪ ಬಾಗಿಲ್ವಾಡಮುಂ, ಮದಪರಿಮಳಕ್ಕೆಳಸಿ ಬಳಸುವಳಿವಾಲೆ ಮೇಲೆ ಪೀಲಿದಱಿತಿಯ ಲೀಲೆಯನೊಡರ್ಚಿ ಬಾಳ್ಗಂಬದೊಳೆನೇಕನಿಗಳ ನಿಯಮಮುಂ ತಳೆದು ಗರಳಗಳನಿಂದೆ ನೆಱಿಸಿವಟ್ಟ ಗಜದನುಜನಂತಿರ್ದ ಪಟ್ಟವರ್ಧನಗಜೇಂದ್ರಮಿ ಪರ್ವಾನೆಶಾಲೆಯುಂ, ಜವದ ಜಗಳಕ್ಕೆ ಪುರುಡಿಸುವ ಗರುಡನಂ ಗಜಱಿವಂತೆ ದುಂದುಭಿಗಭೀರಹೇ ಷಾರವಂಗಳೊಗೆಯೆ ಸೊಗಯಿಸುವ ನಿತ್ಯನೀರಾಜನವಿರಾಜಮಾನವಾಜಿರಾಜಿಗವಕಾಶಮಪ್ಪ ಮುಂ ದುರಮುಂ, ಒಳಗೆ ತಳತಳಿಸಿ ಪೊಳೆವ ಕೆಯ್ದುಗಳ ಬಳಗಮಂ ತಳೆದ ವಿಷಮವಿಷಧರ[ಪೂರ್ಣ] ಮಪ್ಪ ಪಾತಾಳಕುಹರದಂತಗುರ್ವಿಸುವ ಶಸ್ತ್ರಶಾಲೆಯುಂ, ಸುರುಚಿರಪರಾರ್ಧ್ಯಮಣಿಕನಕವಸ್ತು ವಿಸರೈರವೆಸೆಯೆ ನಿಜಕವಾಟಘಟಿತಕುಳಿಶಮಣಿಕಿರಣದಿಂ ಹಿಮಕಿರಣವಿಭೂತಿಯಂ ನಗುವಂತೆ ರಂಜಿಸುವ ಕೋಶಭವನಮುಂ, ಕುಬ್ಜವಾಮನಕಿರಾತವರ್ಷಧರಬರ್ಬರಪರ್ಯಾಯವುರುಷಪರಿ ವೃತೆಯರಾಗಿ ಗಿಡುಗಳ ಕಂಟಕಿತಜರತ್ತರುಳೊಳಗೆಗಳಲತೆಗಳಂತೆ ಕಣ್ಗೊಳಿಪ ಶುದ್ಧಾಂತಕಾಂತೆ ಯರಿನೊಪ್ಪುವಂತವುರದಾವಾಸಮುಂ ನೃಪವಿಭೂತಿಯಂ ಕಣ್ಣಾರೆ ನೋಟ್ಪಿ ಬಲದೇವಿಯರ್ಕಳ ಲರ್ಗಣ್ಣ ಬಳಗಂಗಳೆಂತಲರ್ದ ಕುಮುದವನಂಗಳಿಂ ಮನಂಗೊಳಿಪ ಭವನದೀರ್ಘಿಕಾನಿಕರಮುಂ, ನಿಜಸ್ಫುರಿತ ಹರಿತ ಕಿರಣಂಗಳಿಂ ಕಳಧೌತ ವಿಳಸಿತ ಪ್ರಾಸಾದ ಪಙ್ತಿಯಿಂ ಮಾಯಂಮಾಟ್ಪು ಪವನಂಗಳು ಮಳುಂಬವೂಗೆ ತದನಂತರೋದ್ದೇಶದೊಳ್

ಚಂ॥ ಬರೆವೊಡೆ ಚೀರಶುಟ್ಟಿ ಕರುವಿಟ್ಟಪನೆಂದೊಡೆ ಪದ್ಮಯೋನಿ ಕಂ ।
ಡರಿಪೊಡೆ ವಿಶ್ವಕರ್ಮನಱಿಗುಂ ನೆಱಿಸಿಯಂ ಪೆಱಿನಿಂತಿದಂ ಸುರೇ ॥
ಶ್ವರಭವನಕ್ಕೆ ತಾನೆ ಪಡಿಚಂದವಿದೆಂಬಿನ ಮಚ್ಚರಕ್ಕೆ ತಾ ।
ಯ್ಗರು ಕರುವಾಡೆವೊಪ್ಪುವುದಳಂಕೃತಸಪ್ತತಳಂ ನಿರಾಕುಳಂ ॥ ೯೨ ॥

ಚಂ॥ ಅದು ಪೊಸಪೊನ್ನ ಕುಂಟಿಯ ದುಕೂಲವಿತಾನದ ಮೌಕ್ತಿಕಪ್ರಲಂ।
ಬದ ಬಹುಭೂಮಿಕಾಗಣದ ಕುಟ್ಟಿಮರಂಗದ ಚಿತ್ರಭಿತ್ತಿಭಾ ॥
ಗದ ನವರತ್ನವುತ್ರಿಕೆಯ ಚಿನ್ನದ ಕಂಬದ ರಮ್ಯಜಾಳಿಯೂ।
ರ್ಗದ ವಿಳಸತ್ಕವಾಟದ ವಿಚಿತ್ರವಿಭೂತಿಗೆ ಜನ್ಮಮುಂದಿರಂ ॥ ೯೩ ॥

ಕಂ॥ ಲಲನೆಯರ ಬಳ್ಳಿಮೂಡದ।
ನೆಲೆಮಾಡದ ಕನ್ನೆಮಾಡದೊದವಿದ ಬಳಸಿಂ ॥
ನೆಲಸಿ ಕರುಮಾಡ ಮಿಟ್ಟಿಪುದು।
ಕುಲಗಿರಿಗಳ್ ಬಳಸಿ ನಿಂದ ಮುಂದರಗಿರಿಯಂ ॥ ೯೪ ॥

ಚಂ॥ ಸೊಗಯಿಪ ನಾಟ್ಯಶಾಲೆಗೆ ವಿರಾಜಿಪ ಮುಜ್ಜನಶಾಲೆಗೊಳ್ಪಿನಿಂ।
ಸೊಗಯಿಪ ಮಂತ್ರಶಾಲೆಗೆಸೆವೋಲಗಶಾಲೆಗೆ ರಂಜಿಪಾನೆಶಾ ॥
ಲೆಗೆ ಮಿಸುವಸ್ತ್ರಶಾಲೆಗಮುರ್ದೊಪ್ಪುವ ಚೇವಣಶಾಲೆಗುನ್ಮಣಿ।
ಸ್ಪಗಿತತಟಾಂಶುವಿಂದಮುದು ಮಾಟಿಪ್ಪುದಕೃತ್ಯವಿಚಿತ್ರಶೋಭೆಯಂ ॥ ೯೫ ॥

ಮ॥ಸ್ರ॥ ಅದಱೊಳ್ ನಾವಮ್ರಾಜ್ಯಲಕ್ಷ್ಮೀವಿಳಸಿತವಿಪುಳೋರಸ್ಥಳಂ ವೀರಲಕ್ಷ್ಮೀ।
ಸದನಪ್ರೌಢಚಂಡದೋರ್ದಂಡನ ನವಮಳಿನಸತ್ಕೀರ್ತಿ ಲಕ್ಷ್ಮೀವಿಭಾಸ್ವ ॥
ದ್ವದನಂ ಸತ್ಕೀರ್ತಿಲಕ್ಷ್ಮೀಪರಿಚಿತ ನಿಖಿಲಾಶಾಮುಖಂ ದಾನಲಕ್ಷ್ಮೀ।
ಮುದಿತಾರ್ಥವ್ರಾತ ನಿರ್ವ್ಯಂ ನೃಪಕುಳತಿಲಕಂ ವಮ್ಮ ನುತ್ಸಾಹಸದ್ಮಂ ॥ ೯೬ ॥

ಚಂ॥ ಅತನುಸಮರ್ಥತಾಪವೊಡೆಗೂಡಿದ ಕೂಡೆದ ಪೆಂಡಿರೊಳ್ ಕುಳ।
ಕ್ಷಿತಿಸಹವರ್ತನಂ ವದನತಾನತಭೂಪರೊಳುದ್ಭುದಾನಸಂ ॥
ಗತಿ ಬಹುಶಿಷ್ಯದುಷ್ಟರೊಳೊಡಂಬಡುತಿರ್ವ ನಿದೇನೊ ಚಿತ್ರವಿಾ।
ಕ್ಷಿತಿಪಚರಿತ್ರಮೆನ್ನದವರಾರ್ ಗಳ ನಾಟ್ಪಿಪ್ರಭುವಂಶಮೇರುವಂ ॥ ೯೭ ॥

ಗದ್ಯ

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀ
ಚಾರುಚಂದ್ರಾಯಮಾಣಮಾನಿತಶ್ರೀ ಮದುಭಯಕವಿ ಕಮಳಗರ್ಭ
ಮುನಿಚಂದ್ರಪಂಡಿತದೇವಸುವ್ಯಕ್ತಸೂಕ್ತಿಚಂದ್ರಿಕಾಪಾನವರಿಪುಷ್ಟಮಾನಸಮರಾಳ
ಗುಣವರ್ಮನಿರ್ಮಿತಮಪ್ಪ
ಪುಷ್ಪದಂತ ಪುರಾಣದೊಳ್
ನಗರ ಸಂಪದ್ವರ್ಣನಂ
ನಾಮ
ದ್ವಿತೀಯಾ ಶ್ವಾಸಂ

ತೃತೀಯಾಶ್ವಾಸಂ

ಕಂ॥ ಶ್ರೀಕಾಂತೆ ತನ್ನುರಃಪ ।
ದ್ಮಾಕರದೊಳ್ ಹಂಸಿಯಂತೆ ನೆಲಸಿರೆ ಪುಣ್ಯ ॥
ಶ್ರೀಕಾಂತ ನೆನಿಪ್ಪನಖಿಳಕ ।
ಳಾಕಾಂತಂ ಪ್ರಭುಗುಣಾಬ್ಜವನಕಳಹಂಸಂ ॥ ೧ ॥

ಧರೆಯಂ ಸ್ಥಿರೆ ಯೆನಿಸಿದನಿಂ ।
ದಿರೆಯಂ ಪದ್ಮಾಲಯಾಖ್ಯೆ ಯೆಂದೆನಿಸಿದನಾ ॥
ಸರಸತಿಯಂ ಚತುರಾನನ ।
ವರಿಚಿತೆ ಯೆನಿಸಿದನದೇಂ ಸಮರ್ಥನೊ ಪದ್ಮಂ ॥ ೨ ॥

ಚಂ॥ ಪರಿವೃತರಾಜಹಂಸಕೃತಸೇವೆಯು ಮುದ್ಗತವಾದ ಸದ್ಗುಣೋ ।
ತ್ಕರಮು, ಮನೂನಲಕ್ಷ್ಮಿ ನೆಲೆಗೊಂಡಿರವುಂ ದೊರೆವೆತ್ತು ತನ್ನೊಳೊಂ ॥
ದಿರೆ ಜಡಸಂಗಮುಂ ಪುದಿದ ಕಂಟಕಮುಂ ರಜಮುಣ್ಮಿ ತೋರ್ವುದುಂ ।
ಪರಿಕಿಪೊಡಿಲ್ಲೆನಿಪ್ಪಸಕವೆಂ ದೊರೆ[1]ಯೆಂದೆನಿಸಿತ್ತೊ ಪದ್ಮನಾ ॥ ೩ ॥

ತೆಗೆದತಿನಿಷ್ಠುರಂ [2]ತಳೆಯಲಾಕಮರಂ ವಿಷವಕ್ಕ್ರನಾಗಿ ನಾ ।
ಲಗೆಯೆರಡಾದ ವಾಸುಗಿ ಕರಂ ತಲೆವಾಗಿಯುಮಾವಗಂ ಮುದಂ ॥
ಜಗುಬಿದಿಭಂಗಳಾಂತ ಪೊರೆ ನಿಲ್ಲಳೆ ವಕ್ಷದ ಲಕ್ಷ್ಮಿ ಕೂರ್ತ್ತು ಪ ।
ತ್ತುಗೆಗೊಳೆ ತಳ್ತು ತೋಳೊಳೆಸದಳ್ ಧರಣೀವಧು ಪದ್ಮಭೂವನಾ ॥ ೪ ॥

ಕಂ॥ ಸ್ವವಶಮನಿರದಿಂದ್ರಿಯವ ।
ರ್ಗವನೆಡಬಿಂದರಾತಿವರ್ಗಮುಮನೆಯ್ದಿಸಿ ತ ॥
ದ್ವಿವಿಧವಿಷಯೋಪಭೋಗಮು ।
ನವಿರುದ್ಧಕ್ರಮದೆ ಸಲಿಸಿದಂ ನೃಪನುಚಿತಂ ॥ ೫ ॥

ಸತ್ಯಂ ಸಾತ್ವಿಕಗುಣಕೆ ಮು ।
ಹಾತ್ಯಾಗಂ ರಾಜಸಕ್ಕೆ ವಿಕ್ರಮು ಮಧಿಕೋ ॥
ದ್ಧತ್ಯಂ ತಮಕ್ಕೆ ನೆಲೆಯಾ ।
ಯತ್ತತ್ಯಂತಂ ನೃಪನಿದೇಂ ತ್ರಿಮೂರ್ತ್ಯಾತ್ಮಕನೋ ॥ ೬ ॥

---

[1] ಯಿಲ್ಲೆನಿಸಿತ್ತೊ. [2] ತಲೆಯನಾ.

ಕಂ॥ ನಯವೊದವಿರಿ ನೆಗೆದಪನಪ ।
ಜಯಮುಂ ನೃಪತಿಲಕನಾಜಿಯೊಳ್ವಗೆಗಳ್ಗಾ ॥
ರಯೆ ಗೆಲ್ಲನೆ ನಯಶೌರ್ಯ ।
ದ್ವಯದಿಂ ಪೊಲಿವಗೆಯ ರಾಜಕದ್ವಾದಶಮಂ ॥ ೬ ॥

ರಿವುರಾಜಮುಂಡಳಂ ಕುಂ ।
ದಿ ಪದ್ಮತೇಜದಿನದೊರ್ಮೆಯುಂ ಪೆರ್ಚದು ಭಾ ॥
ವಿಪೊಡೆಯ್ದಿ ವಿತ್ರಮುಂಡಳ ।
ಮುಪಚಯಮುಂ ತಾಳ್ವುದಂತದುಚಿತಂ ಚಿತ್ರಂ ॥ ೭ ॥

ವಸುವಂ ಸನ್ಮಾರ್ಗದೊಳಿಂ ।
ರ್ಜಿಸುವಂ ವರ್ಧಿಸುವನೆಯ್ದೆ ರಕ್ಷಿಸದೀವಂ ॥
ನಿಸದಂ ವಿಬುಧರ್ಗಿದು ಭಾ ।
ವಿಸೆ ಚಿತ್ರಂ ರಾಜವೃತ್ತಮಾಯ್ತನ್ಯೂನಂ ॥ ೯ ॥

ಪ್ರಜೆಗಳದೃಷ್ಟೋಪಾದಾ ।
ನಜದುಃಖಪರಾಪ್ತಿಗಾವಗಂ ಪ್ರತಿಕೃತಿಯಂ ॥
ಸೃಜಿಯಿಸುವ ನೃಪಂ ಸ್ವನಿಮಿ ।
ತ್ತಜದುಃಖಮನೆಂತುಮೆಂದುವೇಂ ಮಾಡುಗುಮೇ ॥ ೧೦ ॥

ಗುಣಮೇಱಿದ ಧರ್ಮಂ ಮಾ ।
ರ್ಗಣತತಿಯಂ ಲಕ್ಷ್ಯಸಿದ್ಧಿಯೊಳ್ ಕೂಡಿ ನೃಪಾ ॥
ಗ್ರಣಿಯನಿಹಸೌಖ್ಯದಿಂದಮೆ ।
ತಣಿಪುದದೆ ಪರಮಸುಖೈಕಕಾರಣಮುಲ್ತೇ ॥ ೧೧ ॥

ಧರೆಯೊಳಗುಳ್ಳಖಿಲಾರ್ಥಿಗ ।
ಳೆರೆದರ್ಥಮನೇನನಿತ್ತೊಡಂ ತವೆಯದ ಮೆ ॥
ಯ್ಸಿರಿಯುಂ ಸಿರಿಯುಂ ಪದ್ಮಂ ।
ಗೆರವೇ ನೃಪನಿಧಿ ಯೆನಿಪ್ಪ ಪೆಸರನ್ವರ್ಥಂ ॥ ೧೨ ॥

ಚಂ॥ ವಿತರಣಲಕ್ಷ್ಮಗಿತ್ತು ಬೆರಲಂ ಜಯಲಕ್ಷ್ಮಗೆ ಮುಯ್ವನಿತ್ತು ಸಂ ।
ಗತಮೆನೆ ಲಕ್ಷ್ಮಗಿತ್ತುರಮು ನಾನನಮಂ ವರವಾಣಿಗಿತ್ತು ಕೂ ॥
ರ್ಪತಿಶಯವಾಗೆ ಮಾಡಿ ಕಡುಗೂರ್ತ ಯಶೋವಧುಗೇಕದೇಶಸಂ ।
ಸ್ಥಿತಿಯುಮನಿತ್ತನಿಲ್ಲ ನೃಪನೊಲ್ದಬಲಾವಳಿಗಾಸೆಮುಟ್ಟದೇ ॥ ೧೩ ॥

ಮಾಸ್ಯ॥ ಜಗಮೆಲ್ಲಂ ಗಂಗೆಯಂ ಮಿಂದುದೊ ದುಗುಲದೆ ಮೇಲ್ಕೊಂಡುದೋ ಕೂಡೆ ಮೆಯ್ಗ ।
ಣ್ಪುಗಳಂ ಶ್ರೀಖಂಡಕರ್ಪೂರದೆ ರಚಿಸಿತೊ ಮುಕ್ತಾಳಿಯಂ ತೊಟ್ಟುದೋ ಮು ॥
ಲ್ಲಿಗೆಯಂ ಸೂಡಿತ್ತೊ ಪೀಯೂಷದೆ ತಣಿದುದೊ ಬೆಳ್ದಿಂಗಳೊಳ್ ಸಂದುದೋ ಸಂ ।
ದಿಗಮೇನೆಂಬಂತದೇಂ ಪರ್ವಿದುದೊ ನೃಪನತಿಸ್ಫೂರ್ತಿಕೀರ್ತಿವ್ರತಾನಂ ॥ ೧೪ ॥

ಮು॥ ನಿಡುದೋಳುರ್ವಿದ ಮುಯ್ವು ಕೊರ್ವಿದ ಪೆಗಲ್ ತಾವ್ಮಾಥರಂ ನಾಡೆ ಕೆಂ ।
ಪೆಡೆಗೊಂಡಾಯತನೇತ್ರ ಪೊಡ್ಡಿದ ನೊಸಲ್ ವಿಸ್ತೀರ್ಣವಕ್ಷಸ್ಸ್ಥಲಂ ॥
ಪೊಡವಿವುತ್ತುಂಗಕಟೀತಟಂ ಕಡುಪುವೆತ್ತೂರುದ್ವಯಂ ಕೂರ್ಮೆಯಂ ।
ಪಡೆಗುಂ ಲಕ್ಷ್ಮಿಯೊಳಿನ್ನದಾರ್ ನೃಪನ ರೂಸಿಂ ನೋಲದಬ್ಜಾಕ್ಷಿಯರ್ ॥ ೧೫ ॥

ಕಂ॥ ಎಡೆಗೊಂಡಿರೆ ತನ್ನಯ ತೋ ।
ಳೆಡೆಯಂ ಜಯಲಕ್ಷ್ಮಿ ವೊಗದ ಪೊಗರಿಂದತಿನೀ ॥
ಳ್ದೊಡನೊಡನೆ ನೃಪನ ಜಡಿಪದೆ ।
ನಡುಗುವಳಸಿಕಾಂತೆ ಕೂರ್ಪಿದೇಂ ಕೈವಸಮೋ ॥ ೧೬ ॥

ಚಂ॥ ಹರಿ ಮದಸಿಂಧುರಂಗಳೆ ಜಯಕ್ಕೆ ನಿರಂ ಮೃಗಯೂಥಮೆಂದವಂ ।
ಪೊರೆವುದೆ ಚಂದ್ರನಂಥತಮಮಂ ಕಿಡಿಸಲ್ ನಿರಮೆಂದು ತಾರಕೋ ॥
ತ್ಕರಮನದೆಂದು ಮುಜ್ಜಳಿಪನೇ ರಿಪುಸಂತತಿಯಂ ಸೆಲಲ್ ನೃಪಂ ।
ಪೊರಿವನೆ ಚಾತುರಂಗಬಲಮುಂ ಪುಸಿ ಪೆರ್ಮೆಗೆ ಕಾಣ ನಿಶ್ಚಯಂ ॥ ೧೭ ॥

ಮು॥ ಕದನಕ್ಷೇತ್ರದೊಳಾಂತ ಶತ್ರು ಪಿಡಿಪಟ್ಟಂ ಕೂಡೆ ಕಣ್ಗೆಟ್ಟ ನೋ ।
ಡಿದ ನಟಿಪ್ಯಾಡಿದ ನೆಂಬ ಮಾತವನ ವಂಶಕ್ಕೆಯ್ದುಗುಂ ತಳ್ತು ಕಾ ॥
ದಿದ ನಾದಂ ಸರಿವೋದನೆಂಬ ನುಡಿ ತಾನಿಲ್ಲೆಂದೊಡೆಲ್ಲಿತ್ತೊ ಗೆ ।
ಲ್ಲದ ಮಾತಿಂತುಟು ಪದ್ಮರಾಜನರಿದುಷ್ಪ್ರಾಪ್ರತಾಪೋದಯಂ ॥ ೧೮ ॥

ಉ॥ ಆತನ ದಿಗ್ವಿಯೋದ್ಯಮಮನಾಂ ಮಿಗೆ ಪೇಟಿದೊಡೇನೊ ಶತ್ರುಸಂ ।
ಘಾತಮಿದಿರ್ಚಿ ದೀಪ್ತಿಗಿದಿರಾದ ಪತಂಗದ ಮಾಳೆಯಾದುದುಂ ॥
ಭೀತನೃಪಾಲರಿತ್ತಿರೆದುದುಂ ಮಿಗೆ ಬಾಟಿವ್ವದು ಮುಂತೆ ಕೈತವೋ ।
ಪೇತರಡರ್ತು ಬೆರ್ಚಿ ಬೆಸಕೆಯ್ದು ಬಟಿಲ್ದುದು ವೆಯ್ದೆ ಪೇಟಿವೇ ॥ ೧೯ ॥

ಉ॥ ಕಿನ್ನರಗಾಣರಾ ನೃಪನ ಗೀತಮನೊಪ್ಪಿರೆ ಪಾಡುವಾಗಳುಂ ।
[1]ತನ್ನ ಸುಖಾಶ್ರುವಿಂದೆನೆಯೆ ನೇತ್ರಸಹಸ್ರ ಪೊಱಲ್ದು ಕೇಳುತಾಂ ॥
ಪನ್ನಗರಾಜನಾಗೆ ಸಫಳಂ ಗಳೆ ಜನ್ಮವೆನುತ್ತೆ ವಾಸವಂ ।
ಮನ್ನಿಸಿ ಮಾತನಾಡಿ ಪರಿತೋಷಿಸುವಂ ದಿವಿಜಪ್ರಧಾನರಂ ॥ ೨೦ ॥

[1] ತೆನ್ನ.

ಉ॥ ಸಮುದಾರಾತಿಗಳಂ ಪಡೆಲ್ವಡಿಸಿ ಭೀತವ್ರಾತಮುಂ ಕಾಯ್ದು ಕಾ ।
ರ್ಯಮನಾಳೋಚಿಸಿ ಮಾಡಿ ಮಾಡಿದನಿತುಂ ಧರ್ಮಾರ್ಥಕಾಮಂಗಳಂ ॥
ಕ್ರಮದಿಂ ಪೆರ್ಚಿಸಿ ಪೆತ್ತು ನಿತ್ಯಸುಖಮುಂ ಸತ್ಕೀರ್ತಿಯಂ ತಾಳ್ದಿ ರಾ ।
ಜ್ಯಮನಾರಾಳ್ದರೊ ಪದ್ಮರಾಜನವೊಲುರ್ವೀಭಾಗದೊಳ್ ಭೂಭುಜರ್ ॥ ೭೧ ॥

ವ॥ ಮತ್ತಮಾನರೇಂದ್ರನನೂನದಾನವಿಧಾನನಾಗಿಯು ಮುದಿತಮುದೋದ್ರೇಕನಲ್ಲದ ರಾಜ ದಿಕ್ಕುಂಜರನುಂ, ಅಹೀನವೃತ್ತಿಪ್ರವರ್ತಕನಾಗಿಯುಂ ವಿನತಾನಂದನವಿದ್ವೇಷಿಯಲ್ಲದ ಭೋಗೀಶ್ವ ರನುಂ, ಜಗತ್ಪ್ರೀತಿಕರಪರಿಗೃಹೀತನಾಗಿಯುಂ ದೋಷಾನುವರ್ತನೆಗೊಳಗಾಗದ ಕಳಂಕರಾ ಜನುಂ, ಅತುಳಪ್ರತಾಪತೇಜಃಸಮಾಜನಾಗಿಯುಂ ತಮಃಪ್ರಮೋಷಿತನಲ್ಲದ ಜಗನ್ಮಿತ್ರನುಂ, ಅಗ ಣ್ಯಲಾವಣ್ಯ ಪೂರ್ಣರೂಪನಾಗಿಯುಂ ನಿಮಗ್ನಕುಲಗೋತ್ರನಲ್ಲದ ಮಹಿಜೀವನಾಧಾರಭೂತನುಂ, ನಿರಂತರಲಕ್ಷ್ಮೀನಿವಾಸನಾಗಿಯುಂ ವಿರಥವೃತ್ತಿಯೊಳ್ ವರ್ತಿಸದ ಪುರುಷೋತ್ತಮನುಂ, ಅಧಿಗತ ಸ್ವಾಮಿಸಂಪತ್ಪ್ರಮೋದಿತನಾಗಿಯುಂ ದುರ್ಗಾಶ್ರಯವಿಗ್ರಹನಲ್ಲದ ವಿಭೂತಿಭೂಷಿತನುಂ, ಸರಸ ಸರಸ್ವತೀಸುಂದರಮುಖಾರವಿಂದನಾಗಿಯುಂ ರಜೋರಂಜಿತಮೂರ್ತಿಯಲ್ಲದಾಲೋಕೇಶನುಂ, ವಿಪಕ್ಷಭೂಭೃತ್ಪಕ್ಷವಿಚ್ಛೇದಿಯಾಗಿಯುಂ ತ್ರಿದಿವಪರಿಪಾಪ್ತಪರಮೈಶ್ವರ್ಯನಲ್ಲದ ವಿಬುಧವತಿಯುಂ, ಸಮವರ್ತಿಯಾಗಿಯುಂ ಕೃತಾಂತನಲ್ಲದ ಧರ್ಮರಾಜನುಂ, ಅನೇಕರತ್ನಾಕರಾಧಿಪತಿಯಾಗಿಯುಂ ಜಡಾಶ್ರಯನಲ್ಲದ ಪ್ರಚೇತಸನುಂ, ಶಿವಾನುಬಂಧಸಯುಕ್ತನಾಗಿಯುಂ ದಶಾನನಾಸ್ತಂಗತಪಾ ಭವನಲ್ಲದ ಪುಣ್ಯಜನೇಶ್ವರನು ಮೆನಿಸಿ ದೇವತಾಸ್ವರೂಪನಾದನಾ ಮಹೀಕಾಂತಂಗೆ

ಕಂ॥ ಶ್ರೀಧರನೆನೆ ಸಕಳಧರಿ ।
ತ್ರೀಧರನೆನೆ ಸಂದದೊಂದು ಸೊಬಗಿಂ ವನಮಾ ॥
ಲಾಧರನಾದನೆನಲ್ ಮಧು ।
ರಾಧರೆ ವನಮಾಲೆ ವಲ್ಲಭಾಗ್ರಣಿಯಾದಳ್ ॥ ೭೦ ॥

ಮಾಸ್ರ॥ ಯುವತೀನಿರ್ಮಾಣನಂ ಕರ್ಮದ ವಿಧಿಕೃತವೆಂ ಬಾಪಿಶ್ತ ಲೋಕತ್ರಯಿಯಾಜಿ ।
ಪುಣ್ಣವನೆನ್ನಂ ಭೂಪನಂದಂ ತೃಣ[ವೆನೆ]ಲಘುವಂ ಮಾಡಿತೆಂದೇವದಿಂ ಕಂ ॥
ತುವೆ ತಾಂ ಪದ್ಮೋದ್ಭವತ್ವಂಬಡೆದುಲಿದು ತಪಸ್ತಪ್ತನಾಕಾಂತೆಯಂ ನಾ ।
ರವಿಲಾಸಾಕ್ರಾಂತೆಯಂ ನಿರ್ಮಿಸಿ ಜಯಿಸಿದನಿಂ ಬಣ್ಣಿಸಲ್ ಬಲ್ಲನಾವಂ ॥ ೭೩ ॥

ಕಂ॥ ಶೃಂಗಾರಾಬ್ಧಿಯೊಳೊಗೆತಂ ।
ದಂಗಜಜಯಲಕ್ಷ್ಮಿಯೆನೆ ಕಳಾನಿಧಿಸಹಿತಂ ॥
ಸಂಗಳಿಸಿ ಚೆಲ್ವನಾಕೆ ಬೆ ।
ಡಂಗಿಂ ಪದ್ಮಾಂತರಂಗದೊಳ್ ರಂಜಿಸಿದಳ್ ॥ ೭೪ ॥

ಮಾಸ್ರ್ಯ॥ ರತಿಯಿಂ ಸೌಂದರ್ಯಸೌಭಾಗ್ಯಮನೊ ಸಗೆ[ಯ]ಪೌಲೋಮಿಯಿಂ ಭಾಗ್ಯಮಂ ಭಾ ।
ರತಿಯಿಂ ನಾನಾಕಳಾಕೌಶಲಮನತಿಶಯಂಬೆತ್ತರಲ್ ಮೈಮೆಯಂ ಪಾ ॥
ರ್ವತಿಯಿಂದೀಬಿಕ್ಕೊಂಡು ಮೂಲೋಕದೊಳನುಪಮ ವಿಗ್ರಹಾಂತೆಯೆಂ(ದಂ)ತಪೂರ್ವಾ ।
ಕೃತಿಯಂ ಕೆಯ್ಗೊಯ್ದು ಕಣ್ಣಿಟ್ಟವೊಲರರೆ ಮಹಾದೇವಿ ಕಣ್ಗೆಡ್ಡವಾದಳ್ ॥ ೭೫ ॥

ಕಂ॥ ಅಡಿಗಿಕ್ಕಿ ಮೆಟ್ಟಿ ತಮ್ಮಿ ।
ಟ್ಟಿ(ಡೆ)ವಡೆದನುರಾಗ ಮೆಲ್ಲಮಂ ಕಾಂತೆಯು ಮೆ ॥
ಲ್ಲಡಿಯಡಿ ಯೆನಿಸಿರ್ದನಿತಱಿಸಿ ।
ಳೆಡೆಗೊಂಡುದೆ ಗೆಲ್ಲವರುಣಪಲ್ಲವತತಿಯೊಳ್ ॥ ೭೬ ॥

ಮೃಗನೇತ್ರೆಯ ತೊಳೆಗುವ ಕಾ ।
ಲುಗುರಿಂ ಕಂಗೊಳಿವ ಕೋಮಲಾಂಗುಳಿಗಳೆದೇಂ ॥
ಬಗೆಯಂ ಬೆದಱಿಪುವೊ ಪುಣಂ ।
ಬುಗಳೆಂಬಂತಿಂಬುವೆತ್ತು ವಿಷಮಾಯುಧನಾ ॥ ೭೭ ॥

ಒದವಿದ ಲಾವಣ್ಯರಸಂ ।
ಪುದಿದೆತ್ತಂ ತುಳ್ಕಿ ತೋರ್ಪ ಕುಪ್ಪಿಗೆಯಿವೆ ದಲ್ ॥
ಮದನನ ಮೋಹನಭಂಡಾ ।
ರದ ಬಾಬಿಸ್ಮೊದಲೆನಿಸಿ ಸತಿಯು ಪೊಱಮಡಿಯಿಸೆಗುಂ ॥ ೭೮ ॥

ಪಡೆದುವೆ ನಮ್ಮುನ್ನತಿಯಂ ।
ಮಡದಿಯು ಪಾದಾಶ್ರಿತಂಗಳಾಗಿಯು ವಿಂತೀ ॥
ಮಡಮುಂ ಬೆರಲ್ಗಳುಂ ಕಿ ।
ತ್ತಡಿಯುಂ ಮೆನುತ್ತುರ್ವಿದಂತೆ ಮೇಂಗಾಲೆಸೆಗುಂ ॥ ೭೯ ॥

ಕಳನೂಪುರಕೇಲಿತಮಣಿ ।
ಗಳಿನೊಗೆದುನ್ಮಯೂಖ ಲೇಖೆ[ಯಿಂದವದೇಂ] ಕ ॥
ಣ್ಗೊಳಿಪುದೊ ಬರ್ಚಿನೆ ರತಿಯೋ ।
ಕುಳಿಯಾಡುವ ಕನಕಶೃಂಗಮಂ ಕಿಱುದೊಡೆಗಳ್ ॥ ೮೦ ॥

ಒಳಕೆಯ್ವುವು ಗಡ ರಂಭಾ ।
ವಿಳಸನಮಂ ಸತಿಯ ಬಟ್ಟನುಣ್ದೊಡೆಗಳದಿಂ ॥
(ನ್ನೆ)ಳಕೊಳಿಸುವುದರಿದೇ ಕ ।
ಣ್ಣೊಳೆ ನಿಟ್ಟಪ ಸತಿಯ ದಿಟ್ಟಗೆಮೆಯಿಕ್ಕದುದಂ ॥ ೮೧ ॥

ಕಂ॥ ಇನಿಯನ ಮನಮುಂ ಪೊಲಿವಾ ।
ಱನೆಂದು ಮೆಯ್ದಿಸದ ಸತಿಯು ಪೊಲಿವಾಱುಂ ಕಾ ॥
ಮನ ಕೇಳೀನಗವೆಂದೆಂ ।
ಬನ ನುಡಿ ಯೇನುಚಿತವಾಯ್ತೊ ಮಣಿಮೇಖಲೆಯಿಂ ॥ ೩೦ ॥

ಇಲ್ಲದೊಡಗ್ರವಿಭಾಗ ।
ಕ್ಕೆಲ್ಲಿಯದಾಧಾರವದಱಿನುಂಟಾದೊಡೆ ತೋ ॥
ಱಿಲ್ಲಿರ್ದುದೆನಿಪ್ಪೊಹೆಯು ।
ಸೊಲ್ಲಿಂಗೆಡೆಯಾದುದಸಿಯನಡು ಕಾಮಿನಿಯಾ ॥ ೩೩ ॥

ಬಳವಳಿಯಿಂದಿವು ಸೊಬಗಿನ ।
ಬಳವಳಿಯಂದೆನಿಸಿ ಮಿಸುವ ಲಾವಣ್ಯರಸೋ ॥
ತ್ಕಳಿಕೆಗಳೆ ತಪ್ಪದೆನಲು ।
ತ್ಕಳಿಕೆಯನಿನಿಯಂಗೆ ಮಾಟಿಪ್ಪವಾಕೆಯ ವಳಿಗಳ್ ॥ ೩೪ ॥

ಇನಿಯನ ಮನೋಮದೇಭವ ।
ನೆನಸುಂ ಕೆಡಪಲ್ಕೆವೇಡಿ ಕಾಮುಕಿರಾತಂ ॥
ಮುನಿಸಿಂವಾಡಿದ ಕುಟಿ ಯಿಂ ।
ದೆನೆ ವನಿತೆಯ ನಿಮ್ನನಾಭಿ ಯೇನೊಪ್ಪಿದುದೋ ॥ ೩೫ ॥

ಮದನನ ಕಟ್ಟಿದ ಕಿಱುಗೇ ।
ಣಿದು ಸಂದೆಯವಾವುದೆನಿಸಿ ನುಣ್ಗರ್ಪಿಂದು ॥
ಣ್ಮಿದ ಬಾಸೆಯ ದೇಸಿಗೆ ವ ।
ರ್ದುದೆ ಮಿಕ್ಕುಪವಾನವರ್ಗ ವಾಕಾಮಿನಿಯಾ ॥ ೩೬ ॥

ಒತ್ತಿದುವಿರ್ಕ್ಕೆಲನ ಮು[ದು ।
ದ್ವೃತ್ತ]ತೆಯಿಂದೆಯ್ದಿ ತಮ್ಮೊಳಿದಿರೆಱಿಪ್ಪ ವೊಗ ॥
ಕ್ಕೆತ್ತಂ ಪಾಯ್ದುವುವೀಯು ।
ದ್ವೃತ್ತತೆ ಕಠಿಣತೆ ಕುಚಕ್ಕೆ ಸಹಜಂ ಸತಿಯಾ ॥ ೩೭ ॥

ಮನಸಿಜಸಿದ್ಧನ ವಿವಿಧಾ ।
ರ್ಚನೆಗೆಯ್ದಿರಿಸಿಟ್ಟ ಯಂತ್ರಮೆನೆ ಮಾಟಿಪ್ಪುದು ಕಂ ॥
ಪಿನ ನೊಂಪಿನ ಪೊಗರಿಂದಂ ।
ವನಿತೆಯ ಕಕ್ಷಪುಟ ವಿಾಕ್ಷಣಾಕರ್ಷಣಮುಂ ॥ ೩೮ ॥

ಕಂ॥ ಇದೆ ಪೋ ಕಂದರ್ಪನ ಬಾ ।
ಟಿಶ್ಮೊದಲೆಂದು ವಿದಗ್ಧರಾಡೆ ತೋಳ್ಮೊದಲಂತ ॥
ಪ್ಪುದು ಬಾಳೆಂದರ್ ಚದುರರ್ ।
ಸುದತಿಯ ತೋಳ್ಗಳನದಾವಬಾಟಿಶಿಂದೆಂಬೆಂ ॥ ೩೯ ॥

ಬಾಡುವ ಕೆಂದಳಿರಂ ನೀ ।
ರೋಡುವ ತಾವರೆಯನೀಕೆ ವಡಿಯಿಡುವರವೇಂ ॥
ತೋಡಪ್ಪುವೆ ಕರತಳದೊಳ ।
ಗುಣ್ಮಿದ ಸೌಭಾಗ್ಯರೇಖೆಯೊಂದಱಿಶಿಳವಳಾ ॥ ೪೦ ॥

ಸುದತಿಯ ಬೆರಲಿಂ ಮೂವಡಿ ।
ಸಿದುವು ಸರಲ್ ಗೆಲ್ದನಾಗಳೊಂದೊಂದಱಿ ನಿಂ ॥
ಪದಿನಾಲ್ಕುಜಗವ ನಂಗಜ ।
ನದೊಂದೆ ಕಿಱುಗುಣಿಕೆಯಿಂದೆ ಗೆಲ್ಲನೆ ವತಿಯುಂ ॥ ೪೧ ॥

ಲಲನೆಯ ಕರಜಂಗಳ್ ಕೆಂ ।
ಬೆಳಗಂ ದೆಸೆದೆಸೆಗೆ ಪಸರಿಸುತ್ತೊಪ್ಪಿದುವು ॥
ಜ್ವಳಿಸುವ ತೇಜದ ಕೀರ್ತಿಯ ।
ಬೆಳಸಿನ ಬಿತ್ತುಗಳ ತೆಱದೆ ಕುಸುಮಾಯುಧನಾ ॥ ೪೨ ॥

ಸುರನರಪನ್ನಗವನಿತೋ ।
ತ್ಕರಸೌಭಾಗ್ಯಮನೆ ಗೆಲ್ದ ಮೂರೇಖೆಯ ಸುಂ ॥
ದರಿಯೊಪ್ಪುವ ಕೊರಲೇಂ ಬಿ ।
ತ್ತರಿಸಿದುದೋ ಹಾರಲತೆಯ ಕಂದದ ಚೆಲ್ವಂ ॥ ೪೩ ॥

ಯುವತಿಯ ನಗೆವೊಗಮುಂ ಮಿ[1]ಗು ।
ಗುವೆ ಭಾವಿನೆ ದರ್ಪಣೇಂದುಜಳಜಂಗಳ್ ಸೋ ॥
ಲವನಾಂತುವು ಗಡ ಮುನ್ನವ ।
ಱವಯವವೊಂದೊಂದಱಿಶೊಡನೆ ತವ್ಮೊಂದೊಂದುಂ ॥ ೪೪ ॥

ರದನಂಗಳೋಳಿಯಿಂ ತೀ ।
ವಿದ ಪಳಿಕಂ ಪೋಲೆ ಸತಿಯ ಬಾಯ್ದೆಱಿಶಿ ಪೋಲ್ಗುಂ ॥
ಮದನಂ ತನ್ನಟಿತ್ತಿಗೆ ಮಾ ।
ಡಿದ ಮಾಣಿಕವೆಸದ ಕಪ್ಪುರದ ಕರಡಿಗೆಯಂ ॥ ೪೫ ॥

[1] ಮಿಸುಗುವ.

ಕಂ॥ ವದನಂ ಗೆಲವಿಂ ವಿಧುಬಿಂ ।
ಬದ ಕಳೆಗಳನೊಳಗೆ ಪಾಯ್ಸಿಕೊಂಡುದೆನಲ್ ಕುಂ ॥
ದದ ಕಾಂತಿಯಿ ನಾಕಾಂತೆಯ ।
ರದನಾವಳಿ ಯೇಂ ಕರಂ ತಳತ್ತಳಿಸಿದುದೋ ॥ ೪೬ ॥

ಮನಸಿಜ ನರ್ಚಿಸಿ ಸಂವೋ ।
ಹನದ ಮರ್ದಂ ಮಣಿಯು ಭರಣಿಯೊಳ್ ತೀವಿಯೆ ನ ॥
ಚ್ಚಿನ ನಿಧಿಯು ವೊಗದೊಳಿರಿಸಿದ ।
ನೆನಲ್ಕೆ ಮಧುರಾಧರಂ ಮನೋಹರ ಮವಳಾ ॥ ೪೭ ॥

ಲಾವಣ್ಯಾಮೃತರಸದೊಳ್ ।
ತೀವಿದ ಪೊಸಪೊನ್ನ ಮಿಸುಪ ಶುಕ್ತಿಕೆಗಳೆನಲ್ ॥
ದೇವಿಯ ತಾಂಬೂಲಚ್ಛಾ ।
ಯಾವಿಷ್ಕೃತ ಮಾದ ತೆಳ್ಗದಂವುಗ ಳೆಸೆಗುಂ ॥ ೪೮ ॥

ಅನುವಮಸುಗಂಧಿ ವನಜಾ ।
ನನಮಂ ವರಿಮುತ್ತುಗೊಳ್ವ ತುಂಬಿಯು ರಹ್ಸಾ ॥
ವಿನಿಯೋಗಕ್ಕಿಕ್ಕಿದ ಕಾಂ ।
ಚನಚಂವಕ ಮುಲ್ಕೆ ಸತಿಯ ನಾಸಾಮುಕುಳಂ ॥ ೪೯ ॥

ಎಡೆಬಲನಲ್ಲದೆ ಭೇದಂ ।
ಬೆಡಂಗಿನಿಂ ಕೂರ್ಪಿನಿಂ ಬೆಳರ್ಪಿಂದಿಲ್ಲಾ ॥
ಗಡುಮಾಕೆಯ ಕಣ್ಣೆಕೆಯೊ ।
ಗಡೆ ಕಿವಿವರ್ಚಿರ್ವುವೆತ್ತರೊಂದೊಂದಿತ್ತಂ ॥ ೫೦ ॥

ಪೆಜುವೆಬ್ಬ ತುಜುಗಿ ಮಿಗೆ ತ ।
ಳ್ತಿಜಿಸದವ್ವೊಡನೊಡನೆ ತವ್ಮೊಳೀಕಾಂತೆಯ ನು ॥
ಣ್ವುಜುಗೆವೆಗ[ಣ್ಗ]ಳ್ಕೀಗಿನ ।
ಕೊಜಿತೆಗೆ ದಲ್ವಾಜುಗಣ್ಣ ಬಲಿಗದು ಸಹಜಂ ॥ ೫೧ ॥

ಮೋಹನಲಕ್ಷಣರೇಖೆಗ ।
ಳೀಹರಿಣಾಕ್ಷಿಯ ಮುಖಾಮೃತಾಂಶುಗಿವೆಂದೇ ॥
ನಾಹಾರವದಿಂ ಮನ್ಮಥ ।
ನೂಹಿಸಿ ನಲಿವನೊ ಸವಿಭ್ರಮಭ್ರೂಯುಗಮುಂ ॥ ೫೨ ॥

ಕಂ॥ ಪರಿಪೂರ್ಣೇಂದುವ ಗೆಲವಿಂ ।
ದರಸ್ಮಿತಸ್ಮೇರವಕ್ತ್ರಶಶಿಯೊಳ್ ಮತ್ತೊಂ ॥
ದರರೆ ಕಲೆ ಯೆನಿಸಿತೆನೆ ಸುಂ ।
ದರ ಮಾಯ್ತ್ತನ್ವರ್ಥಮಾಗಿ ಪೆಜಿಶಿನೊಸಲವಳಿತಾ ॥ ೫೩ ॥

ಅವತಂಸಲಕ್ಷ್ಮ್ಮಿಗಿಂತಿದೆ ।
ಸವತಿ ಯೆನಲ್ ಮೇಲೆ ವಂದಪಾಂಗಶ್ರೀಯು ॥
ತ್ಸವಲೀಲಾಗ್ರಹ ಮೆಂಬೆಂ ।
ಕಿವಿಯಂ ಪೆಜಿತೇನನೆಂಬೆ ನಾಕೋಮಳೆಯಾ ॥ ೫೪ ॥

ಎಂತೋ ಕಾಂತೆಯ ವರಸೀ ।
ಮಂತಂ ಕೆಳೆಗೊಂಡು ದಿರ್ಕ್ಕಲದ ಕುಟಿಲಾಂತಃ ॥
ಕುಂತಳಮುಂ ಸ್ನಿಗ್ಧಮೃದು ।
ತ್ವಂ ತೋಜಿಲ್ ಪೊಜಿಗೆ ರುಜುಗಳೇನಂ ಬಲ್ಲರ್ ॥ ೫೫ ॥

ತಲೆಪೊತ್ತ್ತ ತಾರಕಾವಳಿ ।
ತಲೆಗರಿದಿವೆ ರಾಹು ವದನಶಶಿಬಿಂಬದ ಪಿಂ ॥
ದಲೆಯೊಳೆನೆ ತೋರಮುತ್ತಿನ ।
ತಲೆಮುಡುಗೆಯಿ ನೆನೆದುದಲರ ನೋರ್ಮುಡಿ ಸತಿಯಾ ॥ ೫೬ ॥

ಮದನನ ದಿಗ್ವಿಜಯದೊಳಿಂ ।
ತಿದೆ ಬೆನ್ನಾಗಿರ್ದುವೆಂಬ ಚೆನ್ನಿಂ ದೆನೆಗುಂ ॥
ಸುದತಿಯ ನೊಬಗಿನ ಸರ್ವ ।
ಸ್ವದ ಭಾಗಂಗೊಂಡ ಪೂರ್ವ ಭಾಗಾಭೋಗಂ ॥ ೫೭ ॥

ಮ॥ ಮೃಗಭೂಕುಂಕುಮಚಂದನಾಗರುವಿಲೇಪಕ್ಕಂಗಸೌರಭ್ಯ ಮೊಂ ।
ದುಗೆಯಂ ಮಾಟ್ಟಿದಪೂರ್ವಗಂಧಮು ನುದಂಚದ್ರತ್ನನಾನಾವಿಭೂ ॥
ಷೆಗಳಂ ದೇಹದ ಕಾಂತಿ ರಂಜಿಪುದಪೂರ್ವಚ್ಛಾಯೆಯಿಂ ಮಾಲ್ಯಲ ।
ಕ್ಷ್ಮ್ಮಿಗೆ ಕೆಯ್ಗೆಯ್ದುದು ಕೇಶಸಂಚಯ ಮಪೂರ್ವಸ್ಮೇರ ಮಾಕಾಂತೆಯಾ ॥ ೫೮ ॥

ಕಂ॥ ವನಮಾಲೆ ವನಕ್ರೀಡೆಗೆ ।
ವನಮಾಲೆಯೆ ಪದ್ಮನೊಳ್ ಜಲಕ್ರೀಡೆಗೆ ತ ॥
ದ್ವನಮಾಲೆ ರತಿಕ್ರೀಡೆಗೆ ।
ಮನೋಜ್ಞ ಮನುಕೂಲ ಮುಚಿತ ಮೆನೆ ರಂಜಿಸಿದಳ್ ॥ ೫೯ ॥

ವ॥ ಮತ್ತ ಮಾಮದನಮೋಹನವಿದ್ಯಾಲಕ್ಷ್ಮಿ ಯಾಚತುಷ್ಪಷ್ಟಿವಿದ್ಯಾಚಾತುರ್ಯಚತುರಾನನ ಸಹಜಪ್ರಸನ್ನಸುಂದರದರವಿಕಸಿತಾನನಸರಸಿಹದೊಳ್ ನಲಿದು ನೆಲಸಿ ನೆಲೆಗೊಂಡ ಹಿತಮಿತಾಸ್ವಿ ತೋದಾರಗಂಭೀರತಾಸಾರಸಾರಸ್ವತಲಕ್ಷ್ಮಿಯಂ ತನ್ನ ನಿರತಿಶಯರೂಪಯೌವನವಿಳಾಸವಿಭ್ರಮ ಸೌಭಾಗ್ಯಭಾಗ್ಯಾದಿನಿಖಿಳಗುಣಗಣವರ್ಣನವ್ಯಾಪಾರದೊಳ್ ನಿತ್ಯನಿಯಮದಿಂ ನಿರವಿಸಿ ಸುಸ್ಥಮಿರಿಸಿಯುಂ, ಆಕಾಮಸಾಮ್ರಾಜ್ಯಲೀಲಾಲಕ್ಷ್ಮಿ ಯಾಪರಮಪುರುಷೋತ್ತಮಾವತಾರನ ವಿಶಾಲೋರಸ್ಥಳಪದ್ಮಪೀಠದೊಳಿಚಳಸ್ಥಿತಿಲೀಲೆಯಿಂತಳೆದ ಸಕಳಸುರಾಸುರಲೋಕವಿಸ್ಮಯಾವಹಾನೇಕವಿಪಕ್ಷ ಕ್ಷತ್ರಿಯಾವಹಪರಾವಾರಮಹಾಮಥನಪರಿಲಬ್ಧಮಹನೀಯಮಹಾಲಕ್ಷ್ಮಿಯಂ ಸ್ವಕೀಯನಿತ್ಯನೈಮಿತ್ತಿಕದಾನಪೂಜಾತ್ಯಾಗಭೋಗೋಚಿತಪರಿಮಿತದ್ರವ್ಯದತ್ತಿಯೊಳೊಡಂಬಡಿಸಿ ಸಂಭಾವಿಸಿಯುಂ, ಆ ಸಂಕಲ್ಪಜನ್ಮನ ಮನೋರಥಜನ್ಮಭೂಮಿ ಯಾಮಹೇಶ್ವರಮಹಾವರಾಹೋತ್ಪಾತತೀಕ್ಷ್ಣಕೌಕ್ಷೇಯಕದಂಷ್ಟ್ರಾಸಮುದ್ಧರಣಪ್ರೀತಿಯಿಂ ಪ್ರಚಂಡದೋರ್ದಂಡಪರಿರಂಭಸಂಭವಸುಖಾನುಭವಲಂಪಟಿಯಾದಕ್ಷೋಣಕ್ಷೋಣಿಯಂ ತನ್ನಾಣತಿಯೊಳ್ ತೊಡರ್ಚಿ ವಿನಯಮನೊಡರ್ಚಿಯುಂ, ಆಮನೋ [ಜ]ರಾಜವಿಜಯಲಕ್ಷ್ಮಿ ಯಾವಿಕ್ರಾನ್ತಕಂಠೀರವನ ಮೆಯ್ಯೊಳ್ ಸಕಲದಿಗ್ವಿಜಯಯಾತ್ರಾಸಮಯ ಸಮುಜ್ಜೃಂಭಿತಸಂಕ್ಷುಬ್ಧಸೈನ್ಯಕೋಳಾಹಳಾಭೀಳಭೇರೀಭಾಂಕಾರಕ್ಷ್ವೇಡಾಕ್ರೀಡಾತಿಚಕಿತನಿಶ್ಚಳ ಕರ್ಣತಾಳದಿಕ್ಕುಂಡಳಾಪುಂಡಳೆಯೆನಿಸಿ ಮೆಯ್ವೆತ್ತಿದ ವೀರಲಕ್ಷ್ಮಿಯ ನಸಿಧಾರಾಚರಣಪರಿಣತೆಯೊಳ್ ಪತ್ತಿಸಿಮುದಂಬೆತ್ತುಂ, ಆಮದನಮಂಗಳಯಶೋಲಕ್ಷ್ಮಿ ಯಾರಾಜೇಂದ್ರಚಂದ್ರನ ವಂದಿಚಕೋರವೃಂದಾರಮಂದಾನಂದಕರಣವಿತರಣಕರಣಪ್ರಭೂತೆಯೆನಿಸಿ ನಿಖಿಳದಿಗ್ದಂತಿದಂತದಂಡಾಂದೋಳಡೋಳಾವಿನೋದವಿಶ್ರಾಂತವಿಹಾರ ಕೇಳಿಯೊಳ್ ಮನಂಗೊಂಡವಿಶದಯಶಶ್ಚಂದ್ರಿಕಾಲಕ್ಷ್ಮಿ ಯಾನಿಜಮನೋರಾಗಸುಧಾಸಾಗರಮುಂ ನೆರೆ ಪೆರ್ಚಿಸುವಂತು ನಿರಂತರಂ ಸಂತಮಿರಿಸೆಯುಂ, ಇಂತು ನಿಸ್ಸಪತ್ನೀವೃತ್ತಿಯೊಳ್ ನೆಗಳ್ತಿವೆತ್ತುಂ ಸಪತ್ನೀಜನಾನುಕೂಲ್ಯದಿಂ ಬೇಱೊಂದು ಪೊಗಟ್ತಿವೆತ್ತಳೆಂತುಮಲ್ಲದೆಯುಂ.

ಚಂ॥ ಜಿತರತಿಕಾಮಿನೀಲಲಿತಲೀಲೆ ಮನೋಭವಮೋಹನಾಕ್ಷರಾಂ ।
ಚಿತನುತಭಾಲೆ ವಿಶ್ರುತಕಳಾಳವನರ್ತನಶಾಲೆ ಸಂತತಂ ॥
ಪತಿಚರಿತಾನುಕೂಲೆ ಘನರಾಗರಸಾರ್ಣವಪೇಲೆ ಲೋಕಸಂ ।
ಸ್ತುತಿಯುತಪುಣ್ಯಶೀಲೆ ಗುಣಮಾಲೆ ಯೆನಲ್ ವನಮಾಲೆ ರಂಜಿಪಳ್ ॥ ೬೦ ॥

ಉ॥ ಆ ಸತಿಯೊಳ್ ಮಹೀರಮಣ ನುತ್ಕಟರಾಗದೆ ಭೋಗಗಂಧಸಂ ।
ವಾಸಿತ ನಾಗಿ ಧರ್ಮದೊಳ ಮರ್ಥದೊಳಂ ಬಗೆಯಂ ಕಟಿಲ್ಲದು ॥
ದ್ಭಾಸಿಸಿದಂ ಗಡಂತವ ನವರ್ಕ್ಕೆ ಫಲಂ ಸುಖ ಮೆಂದು ಬಲ್ಲವಂ ।
ಬೇಸಱಿನಾಳ್ವನೇ ಬೆಳೆವ ಬಿತ್ತಿನ ಸಂಕ್ರಮದೊಳ್ ಫಲೋತ್ಸುಕಂ ॥ ೬೧ ॥

ಕಂ॥ ಪಲಬರವರೋಧಕಾಂತೆಯ ।
ರೊಲವಿಂ ಪತ್ತಿರೆಯು ಮಾಕೆಯೊಳ್ ನೃಪ ನನಿಶಂ ॥
ನಲಿದೊಂದಿರ್ಪಂ ತಾರಾ ।
ವಳಿ ತಳ್ತಿರ ಲಿಂದು ಚಂದ್ರಿಕೆಯೊಳೊಂದುವವೋಲ್ ॥ ೬೨ ॥

ಚಂ॥ ಚತುರುಪಧಾವಿಶುದ್ಧ ನನವದ್ಯಚರಿತ್ರ ನನೂನವಂಶ ನ ।
ಸ್ವಿತಮಹಿಮಾವಭಾಸಿ ಸಕಳಕ್ಷಿತಿಭಾರಧುರೀಣ ನನ್ವಯಾ ॥
ಗತ ನೆನೆ ಸಂದ ವೈಶ್ರವಣಮಂತ್ರಿವರೇಣ್ಯನ ಮೇಲೆ ರಾಜ್ಯಸಂ ।
ಸ್ಥಿತಿಗೆಡೆವಾಡಿ ತದ್ವನಿತೆಯೊಳ್ ನಲಿವಂ ನೃಪ ನೇಂ ವಿವೇಕಿಯೋ ॥ ೬೩ ॥

ವ॥ ಇಂತಿಪ್ಪವಿಷಯೋಪಭೋಗಂಗಳಿಂ ದನೇಕಸಂವತ್ಸರಂಗ ಳೀಕ್ಕೈಕಕ್ಷಣಂಗಳಂತೆ ವಿದಿತ ಸ್ವರೂಪಂಗಳಾಗಿ ಸಲುತ್ತು ಮಿರ್ಪಿನ ಮೊಂದುದಿವಸಂ.

ಚಂ॥ ತುಱುಗಿ ತುರಂಗಮಂ ಪೊಳೆದು ಮೆಟ್ಟುವ ದೇಸೆಯ ನಾಡಿತೋರ್ಪ ವೋಲ್ ।
ತುಱುಗಿ ಕಪೋಲರಂಗತಟದೊಳ್ ಕುಣಿಯಲ್ ಮಣಿಕುಂಡಳದ್ವಯಂ ॥
ತುಱುಗಿ ಕರಂಗಳಂ ಕೆದಱಿ ವಕ್ಷದೊಳುಜ್ವಳತಾರಹಾರ ಮೀಂ ।
ಮೆಱಿದನೋ ಭೂಪ ನುತ್ಸವದಿ ನೆಲ್ಪಿರುತುಂ ಮನೆಗಾಗಿ ದೇವಿಯಾ ॥ ೬೪ ॥

ವ॥ ಅಂತಂತಃಪುರಮಂ ಪೊಕ್ಕಾಕಾಂತೆಯಂತಿಕಕ್ಕಾಮುಹೀಕಾಂತ ನೆಯ್ದೆವಂದಾಗಳ್.

ಕಂ॥ ಎಂದಿನ ತೆಱಿನಲ್ಲದಿದೇ ।
ನಿಂದೀವಲ್ಲಭೆಯ ವದನವನಜಂ ಕೊರಗಿ ॥
ತ್ತೆಂದುದನೆ ಪರ್ಚುಗೊಳ್ಪೆಂ ।
ದಂದದಿ ನೇನರಸನಾನನಂ ಕೊರಗಿದುದೋ ॥ ೬೫ ॥

ಚಿಂತಾಪರವಶತೆಯಿ ನಿನಿ ।
ಸಂ ತಡೆದಿದಿರೇಱಿದಾತ್ಮಪರ್ಯಂಕದೊಳಾ ॥
ಕಾಂತಂ ಕುಳ್ಳಿರೆ ಕಂಡು ಕ ।
ರಂ ತಳವೆಳಗಾಗಿ ಸಖಿಯ ನೇಂ ನೋಡಿದಳೋ ॥ ೬೬ ॥

ವ॥ ಆಗಳಾ ವಿಳೋಕನಾಮಳಜಳಕ್ಷಾಳಿತಾತ್ಮಹೃದಯಸರಃಶಂಕಾಪಂಕನಾಗಿ ಭೂಕಾಂತಂ ಮೆಲ್ಲನಿಂತೆಂದಂ.

ಕಂ॥ ಪೊಗಸಿನ ಚಂದ್ರನ ತೆಱಿದಿಂ ।
ನಗೆವೊಗ ಮೇಕಾಂತುದುಬ್ಬರಂ ಬಿರಿವಿನ ಮೇ ॥
ಕುಗುತಿರ್ದುವು ತುಱುಗೆವೆದುಂ ।
ಬಿಗಳುಳ್ಳಲರ್ದ ಹ್ರಿಕುಮುದಮಧುಬಿಂದುಗಳಂ ॥ ೬೭ ॥

ಕದಪನದೇಕೆಯೊ ಪತ್ತಿ ।
ರ್ದುದು ಕೆಂದಳದೊಂದು ಪಜ್ಜೆ ತದ್ವರ್ಣಮನಾಂ ॥
[ತುದು]ತಮದ ಮಱಿಯ ಮುತ್ತಿಗೆ ।
ಯೊದವೆನೆ ಮುಖಶಶಿಗಿದೇಕೆ ಕುರುಳಿಱಿದವುದೋ ॥ ೬೮ ॥

ಚಂ॥ ಒಸರದಿದೇಕೆ ನಿನ್ನವದನೇಂದು ವಚೋಮೃತಮುಂ ಸುಕೇಸರ ।
ಪ್ರಸವಮು ನೀಕೆ ಚುಂಬಿಸವು ತುಂಬಿಗುರುಳ್ ತನುವಲ್ಲಿ ಪಲ್ಲವ ॥
ಪ್ರಸರಮು ನೀಕೆ ಸಂಗಳಿಸ ದುನ್ಮಣಿಭೂಷಣದಿಂದ ಮೋಕೆ ಸಂ ।
ತಸಮು ನೊಡರ್ಚೆ ಯೆನ್ನ ಮನದಂಚೆಗೆ ಪೇಟಿಪ್ ದರಹಾಸದುಗ್ಧದಿಂ ॥ ೬೯ ॥

ಕಂ॥ ಅಂತಸ್ತಾಪಂ ತನುಲತೆ ।
ಯಂ ತವೆ ಕೊರಗಿಸಿದುದೆಯ್ದೆ ನೀಂ ಬಿಸುಸುಯ್ಯಿಂ ॥
ದಿಂತೇಕೆ ತಿಱಿದ ತಳಿರೆಂ ।
ಬಂತಿರೆ ಕೊರಗಿಸುವೆ ಯಧರನವಪಲ್ಲವಮುಂ ॥ ೭೦ ॥

ಚಂ॥ ಅನುವಶವೃತ್ತಿ ಗಲ್ಲದ ಸಪತ್ನಿಯರಿಲ್ಲ ಮನಕ್ಕೆ ನಲ್ಮೆಯಂ ।
ಜನಿಯಿಸುವಟ್ಟಿಗಲ್ಲದ ಸುವಸ್ತುಗಳಿಲ್ಲಿನಿಕೆಯುದ್ದು ರಾಗದಿಂ ॥
ನನೆಕೊನೆವೋಗಲಿಲ್ಲದವರಾಥಲವಂ ಪೆಱತೆನ್ನೊಳಿಲ್ಲ ಪೇಟಿಪ್ ।
ನಿನಗಿನಿತೊಂದು ಚಿತ್ತದ ನಿಮಿತ್ತದ ಚಿಂತೆ ಲತಾಂತಕೋನುಳೇ ॥ ೭೧ ॥

ಉ॥ ಈ ತೆಱದಿಂ ನೃಪಂ ಪ್ರಿಯೆಯ ಚಿತ್ತದ ಖೇದಮನೆಯ್ದೆ ಕೇಳ್ದು ಸಂ ।
ಜಾತಕುತೂಹಳಂ ನುಡಿಯದಶ್ರುಗಳಂ ಸಿಡಿಯುತ್ತಿರಲ್ಕೆ ಮ ॥
ಚ್ಚೇತದೊಳುಣ್ಮಿ ಪೊಣ್ಮುವ ತನೂಭವಲಾಭದ ಚಿಂತೆ ಪೋ ಸುನಿ ।
ರ್ಣೀತ ವಿದೆಂದದೇಂ ನುಡಿದನೋ ಬಗೆಯಂ ನವಭಾವಕೋವಿದಂ ॥ ೭೨ ॥

ವ॥ ಆಗಳ್

ಕಂ॥ ನುಡಿದಾಮಾತಿನ ಬಟ್ಟಿಯನೆ ।
ಗುಡುಗುಡನುಗಲಶ್ರು ಹರ್ಷಬಾಷ್ಪ ಮೆನಲ್ ತ ॥
ಳ್ತಿಡಿದು ಮೊಳೆಯಾಯ್ತೊ ಪುಟಿಕಂ ।
ಕಡೆಗಣ್ಣಿಂ ನೋಡಿದಳ್ ವಯಸ್ಯೆಯು ಮೊಗಮುಂ ॥ ೭೩ ॥

ಪ॥ ಆಗಳಾವುಹಾದೇವಿಯ ಕಣ್ಣಟ್ಟಿದು ಚತುರಿಕೆಯೆಂಬ ಕೆಳದಿ ಯಿಂತೆಂದಳ್.

ಕಂ॥ ದೇವಿಯು ಬಗೆಯು ನಲರ್ಚಲ್ ।
ದೇವರವೋಲ್ ಬಲ್ಲರಾರೊ ಸಖಿಯರ್ಕಳ್ ತಾ ॥
ರಾವಳಿ ಯಲರ್ಚಲಾರ್ಕುಮೆ ।
ಭಾವಿಸೆ ಹಿಮಕಿರಣನಂತೆವೋಲ್ ಕುಮುದಿನಿಯಂ ॥ ೭೪ ॥

ವ॥ ಎಂದಭಿಮುಖಂಬಡೆದು ಪೇಟಿಲ್ತಗುಳ್ದಳ್. ಇಂದು ಪರ್ವದಿನಮಪ್ಪುದಱಿಂ ದೇವಿಯುದಯಸಮಯದೊಳ್ ಮುಂಗಳಾಲಂಕಾರಾಲಂಕೃತೆಯಾಗಿ ಪರಿವಾರಾಂಗನಾಕರತಳಪರಿಕಳಿತವಿವಿಧಾರ್ಚನಾವಿಶೇಷುಂಬೆರಸು

ಚಂ॥ ಪ್ರಮದವನಕ್ಕೆ ಪೋಗಿ ನವರತ್ನವಿನಿರ್ಮಿತನೂತ್ನ ಜೈನಗೇ ।
ಹಮ ನತಿಭಕ್ತಿಯಿಂದೆ ಬಲವಂದು ಶಚೀವಧು ವೆಂದೆನಲ್(ಸ)ಸಂ ॥
ಭ್ರಮ ವಿವಿಧಾರ್ಚನಾವಳಿಯಿ ನರ್ಚಿಸಿ ದೇವನ ನಟಿಸ್ತಿಯಿಂ ಬರು ।
ತ್ತಮರ್ದಿನ ಸೋನೆಯಂ ಸುರಿದವೋಲ್ ನಡೆ ನೋಡಿದಳಾವನಾಂತಮಂ ॥ ೭೫ ॥

ವ॥ ಅಲ್ಲಿ ಮನಂಗೊಳ್ವ ಮರಾಳ [1] ಬಾಳಕಂಗಳ್ಗೆ ಮುಂದಮುಂದಪದನ್ಯಾಸಮು ನುಪದೇಶಿಸು ತ್ತುಂ ಬರುತ್ತು ಮಿರೆ ತದ್ವನ್ಯೈಕದೇಶದೊಳ್.

ಮಾಸ್ರ್ಯ॥ ಪಸುರ್ಗರ್ಪ್ಪಿಂ ಸುತ್ತಲುಂ ಕಟ್ಟಿಲಿಪ ಪಸಲೆ ಯಾಕಾಸಮುಂ ಮಧ್ಯದೊಳ್ .ಶೋ ।
ಭಿಸಿ ತೆಳ್ಪಂ ತಾಳ್ದ ಚಂದ್ರೋಪಳ ಮಮಳಶರತ್ಪೂರ್ಣ ಶುಭ್ರಾಂಶುವಂ ಸಂ ॥
ತಸದಿಂದಂತಲ್ಲಿ ಪಟ್ಟಿರ್ದರಲೆವಱಿ ಲಸಲ್ಲಹ್ಲ್ಮಮಂ ಪೊಲ್ತುದೇಂ ಪು ।
ಟ್ಟಿಸಿದತ್ತೋ ದೃಕ್ಕಕೋರಂಗಳನಿ ತಣಿಪುವಾ ಶಕ್ತಿಯಂ ದೇವಿಗಾಗಳ್ ॥ ೭೬ ॥

ವ॥ ಅಂತು ಮನಂಗೊಳೆ ನೋಟಿಪ್ಪಿನ ಮದಱಿ ಕೆಲನೆಲದ ಪಸುರ್ವುಲ್ಲಂ ಮೇವುತಿರ್ದ ಪೊಸವಾ ಣಿತಿವುಲ್ಲೆ ಮುನ್ನ ತನ್ನ ನಡಪಿದುದಪ್ಪುದಱಿಂ ಪರಿಚಯಕ್ಕೆಳಸಿ ಪರಿತರಲುಜ್ಜುಗಂಗೆಯ್ದು ಪಟ್ಟಿರ್ದ ಕೊಣಸುಮಂ ಬಿಟ್ಟು ಬರಲಾಱಿದಂಗದೇಶಂಗಳನಲ್ಲಲ್ಲಿಗಾಘ್ರಾಣನಂಮಾಡಿಯುಂ ಮುಗುಟ್ಟಿ ಮಾ ಲೇಹನಂಗೈದು ಮೆಟ್ಟಿಱಿಸಿ ತೊಱಿಸಿದ ಮೂಲೆಯಂ ಸಾರ್ಚಿ ತಣಿಯೂಡದೆ ನಡೆಸೊಳಿಸಿ ತವಕದಿಂ ಬರುತ್ತುಂ ಕೂಡೆ ವರಲು ಮಿರಲು ಮಱಿಯದೆ ತಡಂಗಾಲ್ಗೊಂಡು ತಡೆದು ತಡೆದಡವರ್ಪ ತರುಣ ಹರಿಣಂ ಕೂಡೆವರ್ಪಂತಡಿಗಡಿಗೆ ನಿಂದು ನೋಡುತ್ತುಂ, ಕಡೆವಾಯ ಕಱುಂಕೆಯೆಸಳಂ ಬಾಯ್ವಾ ಯೊಳ್ ನೀಡುತ್ತುಂ, ಪೋಹರಸದೊಳೋಲಾಡುತ್ತು ಬಂದುತುಡುಗೆಯ ವಚ್ಚೆವರಲ ಪಸುರ್ವೆಳಗು ಪಸರಿಸಿದ ಪರಿಸರಸ್ಥಳಿಯುಂ ಪಸಲೆಗೆತ್ತು ಕಾರ್ದುಕನಲ್ವ ಮೃಗ್ಧಶಾಬಕದ ಪೊಗಮುಂ ಪೊಗಪೊಗ ದಿಂ ನೂಂಕಿ ಪೊಲೆಯೂಡುವ ಹರಿಣಿಯಂ ನೀಡುಂ ಭಾವಿಸಿ ನೋಡಿ ವಿಸ್ಮಯಾಂಬುರಾಶಿಯೊಳ್ ಮುಬ್ಬಿಗ್ಗಡಿ ಮತ್ತ ಮಾಕುರಂಗಿಯ ತನ್ನೊಳಾದ ನಿರತಿಶಯಸ್ನೇಹಮುಂ ಮಱಿಯೊಳಾದಸಾಧಾ ರಣಮೋಹಮುಮು ನಾವುದಗ್ಗಳಂ ಪೇಱಿಪಿಂಬಂತೆನ್ನಂ ಕೂಂಕಿ ತೋಱಿತ್ತು ಮುತ್ತರಮುಂ ತಾನೆ ನುಡಿವಂತೆನ್ನೊಳಿಂತೆಂದಳ್.

ಕಂ॥ ಎನ್ನಯ ನಡಪಿದ ವುಲ್ಲೆಯಿ ।
ದೆನ್ನಂ ಕಾಣುತ್ತೆ ಪರಿದು ಬರುತಿರ್ಪುದು ದಲ್ ॥
ಮುನ್ನೀಗಳ್ ಸಖಿ ಕೊಣಸಂ ।
ನಿಲ್ಲದು ತಾಂ ಬಿಟ್ಟು ಪುತ್ರಸುಖಮೇಂ ಪಿರಿದೋ ॥ ೭೭ ॥

ವ॥ ಎಂದದನೆ ಪುನಃಪುನಃಕಥನಂಮಾಡಿ ಮುಹುರ್ಮುಹುಶ್ಚೀರ್ಷಾಂದೋಳನಂಗೆಯ್ವುತ್ತು ಮಿಂತಃಪುರಕ್ಕೆ ವರ್ಪಾಗಳ್.

[1] ಬಳಗಂಗಳ್ಗೆ.

ಕಂ॥ ಏನೆಂಬುದೊಂದುಹರ್ಷದ ।
ಹಾನಿಯ ನೀಪರಮುಕರ್ಮಹೋ ಪಲಕಾಲಂ ॥
ತಾನಿರ್ದಂದದ ಚಿಂತಾ ।
ಗ್ಲಾನಿ ಮನಂಬೊಕ್ಕುದರಸಿಗಾತ್ಮಜವಿಷಯಂ ॥ ೭೮ ॥

ವ॥ ಅಂತಚಿಂತ್ಯಚಿಂತಾಪರತಂತ್ರಾಂತರಂಗೆಯಾಗಿ ಬಂದರಮನೆಯಂ ಪೊಕ್ಕೆಲ್ಲರುವಂ ವಿಸರ್ಜಿಸಿ ಮೆಲ್ಲನೆನ್ನೊಳಿಂತೆಂದಳ್.

ಚಂ॥ ನಡೆಪಿದ ಪುಲ್ಲೆ ನೋಡೆ ಕೊಣಸಂ ಪಡೆದಿಂತೆನೆದಿರ್ದುದೀಗಳೀ ।
ನಡೆಪಿದ ಪಕ್ಕಿಗಳ್ ಮುಱಿಗಳೊಳ್ ಗಱಿಸೊಂಕಿ ಸುಖಕ್ಕೆ ಸಂದುವಾ ॥
ನಡೆಪಿದ ಬಳ್ಳಿಗಳ್ ಪಲವುಸೂಟಿಗಳ್ ಸುಫಲಪ್ರಸವಕ್ಕೆ ವಂದುವಾಂ ।
ಪಡೆಯದೆ ಸರ್ವಲೋಕಹಿತನಂ ಸುತನಂ ತಡೆದಿರ್ದ ನೀಕೆಯೋ ॥ ೭೯ ॥

ಕಂ॥ ನೋಡೆನ್ನೋರಗೆವೆಣ್ಗಳ್ ।
ಕೂಡೆ ಮನಂಗೊಳ್ವ ಮುಕ್ಕಳಂ ಮುದದಿಂ ಮು ॥
ದ್ದಾಡಿಸುತಿದಿರ್ವರ್ಪ್ಪರ್ ತಾ ।
ಮೇಡಿಸುವಂತೆನ್ನ ಸಿರಿಯುಮುಂ ಪರಿಯುವುಮುಂ ॥ ೮೦ ॥

ಚಂ॥ ಕ್ಷಿತಿವನ ಮಾಡಿದುನ್ನತಿ ಸಪತ್ನಿಯರೊಳ್ಪಿನ ಮಾಟ್ಪಿನೂನಸ ।
ತ್ಕೃತಿ ಜನಮೆಯ್ದೆ ಕೀರ್ತಿಸುವ ಸನ್ನುತಿ ಲೋಕದೊಳಾಣೆ ಸಲ್ವುಹಂ ॥
ಕೃತಿ ದೊರೆವೆತ್ತ ಭಾಗ್ಯದ ಚಮತ್ಕೃತಿ ಸಂದ ವಿವೇಕವೃದ್ಧಸ ।
ಮ್ಮತಿ ಸುತನಿಲ್ಲದಂದೆನಗೆ ನಿಷ್ಫಲ ಮೆನ್ನದದೇನ ನೆಂಬುದೋ ॥ ೮೧ ॥

ಚಂ॥ ಇಹಪರಲೋಕಸಂಭವಸುಖಂ ಸಮನಿಪ್ಪುದು ಪುತ್ರ ನಪ್ಪುದುಂ ।
ಗೃಹಿಗವನಿಲ್ಲದಿರ್ಪ ಧಿಕರಾಜ್ಯವಿಭೂತಿಯಿ ನಪ್ಪುದೇನೊ ನಿ ॥
ರ್ವಹಿಸದರಣ್ಯದೊಳ್ ಚರಿಪೊಡಂ ತಪದಿಂ ಸತಿಯರ್ಗೆ ಮುಕ್ತಿ ಯಾ ।
ನಹಹ ನಿರರ್ಥಜನ್ಮ ಯೆನುತುಂ ಸುರಿದಳ್ ಬಿಸುಸುಯ್ದು ಬಾಷ್ಪಮುಂ ॥ ೮೨ ॥

ವ॥ ಅಂತಳವಿಗಱಿದಳಲನೊಳಕೊಳ್ವುದು ಮಾತನಿಂತೆಂದಂ.

ಉ॥ ಸರ್ವಕಳಾವಿಭಾಸಿ ಸುಮನಃಪರಿತೋಷಕರಂ ಸಲಕ್ಷಣಂ ।
ಪೂರ್ವಣಚಂದ್ರ ನಸ್ತಮಿತದುಸ್ತಮ ನಾತ್ತಸುವೃತ್ತ ನೊರ್ವೆಯೇ ॥
ಪೂರ್ವದಿಶಾಸಮುದ್ಭವನೆ ಪೇಟಿಸ್ ಪಲರುಂ ದಿನಮಿರ್ದೊಡಲ್ಲದಂ ।
ತುರ್ವಿಗೆ ರಾಜನಪ್ಪ[ನು]ದಯಂ ನಿನಗಪ್ಪುದು ದೇವಿ ನಿಶ್ಚಯಂ ॥ ೮೩ ॥

ಚಂ॥ ಪಡೆದೊಡದೇನೊ ಕಾಡ ಲತೆಗಳ್ ಪಲವಂ ಪಲವುಂ ಫಲಂ ದಿಟಂ ।
ತಡೆದೊಡಮೇನೊ ಕಲ್ಪಲತೆ ಲೋಕದದೃಷ್ಟದೆ ಸೇವ್ಯಸತ್ಪಲಂ ॥
ಬಿಡಿಯದುದಲ್ತು ಮಿಕ್ಕ ವಧುಗಳ್ ಪಡೆದೇಂ ಗಳ ಮುಕ್ಕಳಂ ಮಗಂ ।
ಬಡೆದಪೆ ನೀನೆ ದಲ್ ಜಗದ ಭಾಗ್ಯದ ಮುಂಬಿನೊಳಂಬುಜಾನನೇ ॥ ೪೪ ॥

ವ॥ ಎಂದೆನೆ ತತ್ಕಾಲೋಚಿತವಚನತುಷಾರಸೇಚನದಿನೀಷದ್ವಿಶ್ರಾಂತಚಿಂತಾಸಮುದ್ಭೂತಾಂತಃಶೋಕಸಂತಾಪಶ್ರಮಮಯಾಗಿ ಮತ್ತಮಿನಿತುಂ ಪೊಟ್ಟುಂ ಬಸಿಱುಶೊಳಪ್ಪ ಬಯಕೆಗಳ್ಗಿವೆ ಕಾರಣಂಗಳೆನಿಸಲ್ತಕ್ಕ ಬಯಕೆಗಳಂ ಬಯಸುತಿರ್ದಳೆದೆಂತೆಂದೊಡೆ.

ಕಂ॥ ಈ ತನುವಲ್ಲಿ ಜಗತ್ಸಂ ।
ಪ್ರೀತಿಕರಪ್ರಸವಮೊಂದರೊಳವೊಂದದೆ ತಾ ॥
ನೇತಕ್ಕೆ ನಿಷ್ಫಲಂ ಪು ।
ಷ್ಪಾತಿಶಯಂಬಡೆದು ಬೀಸಱಿಂ ಬೀಱುವುದೋ ॥ ೪೫ ॥

ಪೊಲೆ ಪಿಂಗದೆ ಪೊಂಗುವುದ ।
ಕ್ಕಲಸುವರಾಳಿಜನಂಗ ಳೆನ್ನಯ ಬಸಿಱುಶೊಳ್ ॥
ಕುಲಪೂತ ನೆನಿಪ್ಪ ಮಗಂ ।
ನೆಲಸುತ್ತೀಪೊಲೆಯ ನೆಂದು ಪೇಳಿತ್ ಪಿಂಗಿಪನೋ ॥ ೪೬ ॥

ಅಂಗಭವನಂಗಭವನೆನೆ ।
ಪಿಂಗದೆ ಮನದೊಳಗೆ ಪುಟ್ಟೆ ರತಿಯುತ್ತವಳಂ ॥
ಸಂಗಳಿಸಲ್ತೋರ್ವನೆಂ ।
ದಂಗದೊಳೊಗೆದೆನಗೆ ಸಿರಿಯ ಸೈಪಂ ಮಾಟ್ಪಂ ॥ ೪೭ ॥

ಸುವಿದಿತಮಿನಿತುದಿನಂ ಸ್ತ್ರೀ ।
ಸವನಂ ನಿನಗಿಂದು ಕಾಂತೆ ಪುಂಸವನಂ ಮಾ ॥
ಡುವದೊಂದರ್ಥಾಂತರದಿಂ ।
ದವನೀಶಂ ಸರಸವಾಡಿ ಕಾಡುಗು ಮೆಂದೋ ॥ ೪೮ ॥

ಪೆರ್ಚಿಸಿದ ಪೊಕ್ಕುಟಿಶೊಳ್ ಮಿಗೆ ।
ಸಾರ್ಚಿ [1]ಹರಿದ್ರಾಂಭಕಾಂಶಮಂ ತಳ್ತೆಮೆಗಳ್ ॥
ಬಿರ್ಚಿದ ಬಾಳಕನಂ ಮೆ ।
ಯ್ವೆಚ್ಚುರ್ತ್ತೀಹ್ಪಿಸುವ ಸೈಪದೆಂದಾದವುದೋ ॥ ೪೯ ॥

1 ಹರಿದ್ರಾಂಶುಕಾಂಶಮಂ

ಕಂ॥ ಕಂದಂಗೆ ರಾಜ್ಯಚಿಹ್ನಮು ।
ನೊಂದಿರಡುಮ ನುಬಿಸಿ ಮುಂದಿಗೆರೆದರ್ಥಮು ನಾ ॥
ಮುಂದಾರಂ ಕೆಯ್ವಂದವೊ ।
ಲೆಂದಿತ್ತೊಸಗುವನೊ ನೃಪತಿ ಜನನೋತ್ಸವಮುಂ ॥ ೯೦ ॥

ಅಂಜನ ಮುಕ್ಷಿದ್ವಯದೊಳ್ ।
ರಂಜಿಸೆ ಸೊಡರ್ವಕ್ಕು ನೊಸಲೊಳೆಸೆದಿರೆ ಪದದಿಂ ॥
ಮುಂಜೇರಕರವ ಮೊಗೆಯೆ ಮು ।
ಗಂ ಜಗುಬಿಬಿತ್ತೆಂದೊ ತೊಟ್ಟಿಲಂ ಪಟ್ಟೊದೆವಂ ॥ ೯೧ ॥

ತನುಜ ನಖಿಳಾರ್ಥಕಲ್ಪ ।
ವನಿಜಂ ತಣಿಯುಂಡು ಬಳೆಪೊಡೀಪಿನಳುನ ॥
ಸ್ತನವೆ ಪಯೋಧರ[ವಾತ... ।
ಕ್ಕಿ]ನುರೋಜಳರಕ್ಕದೊಂದು ಪೆಸರೊಳ್ಪೊರೆಯೇ ॥ ೯೨ ॥

ಹಾರಕ್ಕದೊಂದೆ ನಾಳ್ಗುಕ ।
ವಾರಯಲೆಂದರಸ ನೀಕ್ಷಿಸುತ್ತುಂ ನಲಿಯಲ್ ॥
ದಾರಕನಂ ಘನತೇಜ ।
ಸ್ಸಾರನ ನಾನೆಂದು ನಲ್ಮೆಯಿಂ ದೆತ್ತುವೆನೋ ॥ ೯೩ ॥

ಓಲಗದೊಳ್ ಮುಗ ನವನೀ ।
ಪಾಳರ ಕೆಯ್ಗಯ್ಗೆ ವಂದು ಕೆಯ್ಗನ್ನಡಿಯಂ ॥
ತಾಲೋಕಿಸಿ ಮೊಗಮುಂ ಮಣಿ ।
ಮೌಳಿಯೊಳೆಂದಭಯವಿಾವವೊಲ್ ಕೆಯ್ಯಿಡುವಂ ॥ ೯೪ ॥

ಕೆಂದಾವರೆಗೆತ್ತಡಿಯೊಳ್ ।
ಸಂಧಿಸಿ ಕಳಭಂಗಳೆಳಸೆ ಕೆಯ್ಯಂ ಮುರಿಯಾ ॥
ಸ್ಯೇಂದುವ ನೀಕ್ಷಿಸಿ ಸಿಂಗದ ।
ಚಂದದಿ ನೆಂದಂಬೆಗಾಲೊಳೆಸೆವನೊ ಕಂದಂ ॥ ೯೫ ॥

ಅಂದುಗೆಯಲ ನೂಲ ಕಂಕಣ ।
ದಿಂ ದನಿ ವಿಗೆ ದೇವದೇವದೇವೆಂದೆರೆದಾ ॥
ನುಂ ದೇವನು ವೆನೆ ಕಂದಂ ।
ನಿಂದು ಬೆರಲ್ವಿಡಿದದೆಂದೊ ದಟ್ಟಡಿಯಿಡುವಂ ॥ ೯೬ ॥

ಉ॥ ಬಾಳೆಮರಾಳಮಂ ಬಳಸಿ ಬೆಂಬಲಿಗೊಂಡೆಡೆಯಾಡುತುಂ ಮೃಗೀ ।
ಬಾಳಕಜಾಳದೊಳ್ ನಲಿವಿನಿಂ ನಿಗೆದಾಡುತು ಮುಂತೆ ಹಸ್ತಿನೀ ॥
ಬಾಳಕಹಸ್ತಮಂ ಪಿಡಿದು ಪಿಂದಣ ಮೆಯ್ಯೊಳ್ಗಲೆದಾಡುತುಂ ದರೋ ।
ನ್ಮೀಲಿತ ಮೆನ್ನ ದಿಟ್ಟಿಯೆನೆ ತನ್ನೊಡನಾಡಿಪ ನೆಂದೊ ಬಾಳಕಂ ॥ ೯೬ ॥

ಚಂ॥ ಅರಮನೆವಾಗಿಲೊಳ್ ಚರಿಗೆಗೊಟ್ಟವರಂ ನಿಲಿಸಲ್ಕೆ ಪೋಪ ಭೂ ।
ಪರ ನೊಡವೋಗಿ ಮುಂಬರಿದು ಮೊಬಿಳ್ಗಿ ತದಂಘ್ರಿಯ ರೇಣುವಕ್ಕಜಂ ॥
ಬೊರಿಯುದ ರಕ್ಕೆವೊಟ್ಟಿನಿಸಿರಲ್ಕೆ ಣವೋದು ಣವೋದು ನಿಲ್ಲಿ ಮೆಂ ।
[1] ದೊರೆದು ಮುನೀಂದ್ರರಾನನದರಸ್ಮಿತಮುಂ ಮಗನೆಂದು ಮಾಬ್ಪಿನೋ ॥ ೯೭ ॥

ಕಂ॥ ಬಾಲಕನ ನಿರುಳ್ವಗಲುಪ ।
ಲಾಲಿಸುತುಂ ಮಜ್ಜನಾದಿಯಿಂ ದಲಸದ ಧಾ ॥
ತ್ರೀಲಲಿತಕೃತ್ಯಮುಂ ಕಂ ।
ಡೋಲಗಿಸುವೆನೆಂದೊ ವಸ್ತ್ರಭೂಷಾದಿಗಳಂ ॥ ೯೮ ॥

ವ॥ ಎಂದಿವುಮೊದಲಾಗೆ ಪಲವುಂ ಪುತ್ರದೌಹೃದಂಗಳಂ ಪಂಬಲಿಸುತ್ತು ಮಿರ್ದಳಲ್ಲದೆಯುಂ.

ಚಂ॥ ದಿವಸಕರೋದಯಂ ತಡೆದ ಪೂರ್ವದಿಶಾರಮೆ ಮರ್ವುಕೊರ್ವಿ ತೋ ।
ಱುವ ತೆಱದಿಂದೆ ಮುನ್ನೆ ತನುಕಾಂತಿ ಕಱಿಲ್ದುದು ಮತ್ತೆ ಭಾನು ಮೂ ॥
ಡುವ ಪದದೊಂದು ಮುಂಬಿನೊಳೆ ಬೆಳ್ಕರಿಪಂತಿರೆ ಕೂಡೆ ಪೞಂಡುರ ।
ಚ್ಛವಿಯೊಳಕೊಂಡುದೊಂದೆ ದಿನ ಮಿಂತುಟು ಚಿಂತೆ ನರೇಂದ್ರದೇವಿಯಾ ॥ ೧೦೦ ॥

ವ॥ ಎಂದಾದ್ಯಂತಂಬರಂ ಚದುರಿಕೆ ಬಿನ್ನಪಂಗೆಯುವ್ವುದು ಮರಸನದೆಲ್ಲಮಂ ಕೇಳ್ದು ನಸುಗು ತ್ತುಂ ಮಹಾದೇವಿಗಿಂತೆಂದಂ.

ಮು॥ಸ್ರ್ಯ॥ ಇದು ದೈವಾಯತ್ತ ಮಾಗಿರ್ಪುದು ಬಗೆವೊಡೆ ಚಿಂತಾಸಮುತ್ಪೇಕದಿಂ ದ ।
ಪ್ಪುದೆ ಪುತ್ರೋತ್ಪತ್ತಿ ಮುನ್ನಂ ನೆರಪಿದ ಸುಕೃತಂ ವಕ್ವಮಾದಲ್ಲದಂದಾ ॥
ವುದು ಮಿಥ್ಯಾವಾಪ್ತಿ ಯಿಲ್ಲಾನನುದಿನ ಮಿದೆ ದಲ್ ಚಿಂತೆಯೊಗಿರ್ದಪೆಂ ತೋ ।
ಱಿದೆ ಚೇತೋವೃತ್ತಿಯಂ ಕೊರಗುವೆಯರುಣಾಂ? ಭೋಜಪತ್ರಾಯತಾಕ್ಷೀ ॥೧೦೧॥

ಕಂ॥ ಸುತರಿಲ್ಲದ ಬಾೞ್ತ್ ನ್ಯಾಯೋ ।
ಚಿತವಿಲ್ಲದ ರಾಜ್ಯಸಂಪದಂ ಸದ್ದೃಷ್ಟಿ ॥
ಸ್ಥಿತಿಯಿಲ್ಲದ ಚರಿತ ವಿವಾ ।
ಯತಿಯೊಳತಿವ್ಯರ್ಥ ಮೆಂದು ನಿಶ್ಚಯಿಸಿರ್ಪೆಂ ॥ ೧೦೨ ॥

[1] ದಿರಿದು? [2] ಯನುತಂ.

ವ॥ ಅದಲ್ಲದಿಂದೆ ನಿನ್ನ ಚಿಂತಾಪರಿಹಾರಕ ಮಪ್ಪುದೊಂದುದಂತಮಂ ಕೇಳೆಂದಿಂತೆಂದಂ.

ಉ॥ ಅಪ್ಪಮಿ ಯಿಂದೆನಲ್ ಪುರದ ತೀರ್ಥದ ಚೈತ್ಯಗೃಹಕ್ಕೆ ಪೋಗಿ ತ ।
ದ್ವಿಷ್ಪಪನಾಥನಂ ನಮಿಸಿ ಪೂಜಿಸಿ ವಂದಿಸಿ ದೇವ ಮಾಬಿಪ್ಪೆದೆ ॥
ನ್ನಿಷ್ಟಮು ನೆಂದು ಬೇಡ್ಪಿ ಪದದೊಳ್ ಪದಪೀಠದ ನೂತುಳುಂಗ ಮೇಂ ।
ತುಷ್ಟಿಯ ನಿತ್ತುದೋ ಜಗುಟಿಶಿವಂದಿದಿರ್ಗೊಂಡು ಮನಕ್ಕಪೂರ್ವಮುಂ ॥ ೧೦೩ ॥

ಕಂ॥ ಆಗಳ್ ಪುರೋಹಿತಂ ವಿವಿ ।
ಧಾಗಮವಿದ ನಿದುವೆ ಭಾವಿ ಪುತ್ರಾವಾಪ್ತಿ ॥
ಶ್ರೇಗೆ ನಿಮಿತ್ತಂ ಪಿಡಿ ನೀಂ ।
ರಾಗದೊಳೆಂದೆನ್ನ ಕೆಯ್ಗೆ ಪರಸುತ್ತಿತ್ತಂ ॥ ೧೦೪ ॥

ವ॥ ಎಂದು ಪೇಬ್ದಿ.

ಕಂ॥ ಕೆಲದಡಪವಳ್ತಿಯಂ ನೋ ।
ಡಲವಳ್ ಗಂಧಾಕ್ಷತಪ್ರಸೂನಸುಧೂಪಂ ॥
ಕಲನೆ ಪೊಸಗಂಪುವೀಡಿುವ ।
ಫಲವಂ ತೆಗೆದೀಯೆ ಕೊಟ್ಟ ನರಸಿಯ ಕೆಯ್ಯೊಳ್ ॥ ೧೦೫ ॥

ವ॥ ಆ ಮಾತುಳುಂಗ ಫಲಮ [ನಾತ್ಮಜಫಲಮ] ನಾಂಪಂತಂಜಳಿಪುಟದಿ ನಾಂತು ಮನಂ ಗೊಂಡು.

ಮ॥ ಸುತಜನ್ಮೋತ್ಸವ ಮಾಗಳಾದ ತೆಱದಿಂ ರೋಮಾಂಚಮಂ ತಾಳ್ದಿ ಹ ।
ರ್ಷಿತೆ ಹರ್ಷಾಶ್ರುಜಲಾರ್ದ್ರನೇತ್ರೆ ಫಲಪೂರಂ ಜನ್ಮನಾಫಲ್ಯಸಂ ॥
ಸ್ಥಿತಿಯಂ ಮಾಡಿದುದೆಂದು ನೋಡಿದಳಲಂಪಿಂ ಸುತ್ತಿರಲ್ ಲೋಚನ ।
ದ್ಯುತಿ ಕೆಯ್ವೊಕ್ಕ ನಿಧಾನಮುಂ ಬಡವನಂದಾಚ್ಛಾದನಂ ಗೆಯ್ವವೋಲ್ ॥ ೧೦೬ ॥

ವ॥ ಅಂತು ನೀಡುಂ ನೋಡಿ ಸಂತತಸಂತೋಷಾಮೃತಾಂಬುನಿಧಿಯೊಳೋಲಾಡಿ ಮೂಡಿ ಮುಟಿಸ್ಕಾಡಿ ತದನಂತರಂ.

ಕಂ॥ ವಿಸ್ಮಯ ವೆಂತೆಂತೆಂದು ದ ।
ರಸ್ಮಿತೆ ಬಗೆಗೊಂಡು ಬೆಸಗೊಳಲ್ ಶಾಸನದೇ ॥
ವೀಸ್ಮೃತಿಯಿಂದಾಯ್ತುವರ್ಗೇಂ ।
ವಿಸ್ಮೃತಿಯೇ ನಿನ್ನ ಮಾಪ್ಪಿ ಬಹುಸತ್ಕಾರಂ ॥ ೧೦೭ ॥

ವ॥ ಎಂದದಸಂ ಯಥಾರ್ಹಪ್ರೇಮಚಾರುಚಾಟುವಚನಾವೃತವರ್ಷದಿಂ ದರಸಿಯ ಗಾತ್ರ ಕ್ಷೇತ್ರದೊಳ್ ರೋಹುಹರ್ಷಸಸ್ಯಸಮೃದ್ಧಿಯಂ ಮಾಡಿ ಮತ್ತಮಿಂತೆಂದಂ.

ಕಂ॥ ಧರ್ಮಮೆ ದೇಹಿಗ(ಮಿ)ಹಪರ ।
ಶರ್ಮಕ್ಕೆ ನಿದಾನ ಮುದನನೂನವಿಧಾನಂ ॥
ನರ್ಮದಿ ನೆನೆಗುತ್ಕಟಸ ।
ತ್ಕರ್ಮಂ ಪ್ರತ್ಯಹ್ಷಫಲಮು ನೀವುದು ಪುಸಿಯೇ ॥ ೧೦೪ ॥

ವ॥ ಎಂದು ಪದ್ಮರಾಜಂ ಧರ್ಮೋದ್ಯೋಗದೊಳ್ ನಿಯಾಮಿಸುವುದು ಮಾದಿನಂ ಮೊದಲ್ಗೊಂಡು ವನವಾಸಾವಸಹಾದೇವಿ ಪುತ್ರಕಾಮ್ಯದಿಂದ ಮೌಷಧಾನ್ನದಾನಾದಿಚತುರ್ವಿಧಧರ್ಮತತ್ಪರೆಯಾಗಿ.

ಕಂ॥ ಸುರಭಿಯು ತೊರೆದ ಕುಚಂಗಳ ।
ಬೆರಗಂ ಬೆರಲಿಳಿನೆ ಪರಮಹಸ್ತಪುಟಾಂ ॥
ತರದೊಳಮೃತ ಮೆನೆ ಕಱೆದಿದಾ ।
ವರವಧು ಪುತ್ರಾರ್ಥಿ ಪಾತ್ರಶೇಷಮು ನುಣ್ಪಳ್ ॥ ೧೦೫ ॥

ಚ॥ ನವವರರತ್ನಕಾಂಚನದೆ ನಿರ್ಮಿಸಿ ನಾಟ್ಯಪ್ರಭುವಂಶಮೇರು ಸಂ ।
ಭವಿಸುವಸಕ್ಕೆ ಮುಜ್ಜ್ವರಭೂಮಿಯೊಳೆಂದು ಸುಮೇರುವಂ ಮಹೋ ॥
ತ್ಸವದೆ ಜಿನೇಂದ್ರಜನ್ಮಸವನೋತ್ಸವಮಂ ಮಿಗೆ ಮಾಡಿ ತತ್ಪಯಃ ।
ಪ್ಲವದೊಳೆ ಮಿಂದು ವಂದಿಗೆ ತದದ್ರಿಯ ನೀವಳಿದೇನುದಾತ್ತೆಯೋ ॥ ೧೧೦ ॥

ಮುಂದಾಕ್ರಾಂತ:—ಸಂತಾನಶ್ರೀಪ್ರದ ಮಿದೆನಗಕ್ಕೆಂದು ರತ್ನಂಗಳಿಂದಂ ।
ಸಂತಾನೋರ್ವೀಜಮು ನೆಸಗಿ ತನ್ಮೂಲದೊಳ್ ಭವ್ಯವಿದ್ವ ॥
ತ್ಸಂತಾನಂ ಜೇಂಕರಿಸಿ ಜಿನಪೂಜೋತ್ಸವಂಮಾಡೆ ದಿಗ್ವಾ ।
ಸಂ ತಾನಾಯ್ತೆಂಬೆನೆ ಜಸವೊಲಿಲ್ದರ್ಥಿಗೀಯುತ್ತು ಮಿರ್ಪಳ್ ॥ ೧೧೧ ॥

ಕಂ॥ ವ್ರತಮೆನಿತೊಳವನಿತುಮು ಸಾ ।
ಸತಿ ಸತತಂ ನಿರತಿಚಾರದಿಂ ನೆಗಳ್ವಳ್ ವಿ ॥
ಶ್ರುತತೀರ್ಥಕೃತ್ಪುರಾಣಂ ।
ಶ್ರುತಿಪೂರ ಮೆನಲ್ ಕರಂ ಸುತಾರ್ಥಿನಿ ಕೇಳ್ವಳ್ ॥ ೧೧೨ ॥

ಪದೆದಷ್ಟಾಹ್ನಿಕದೊಳ್ ಪ ।
ರ್ವದಿನಂಗಳೊಳಖಿಳತೀರ್ಥಕೃತ್ಕಲ್ಯಾಣಾ ॥
ಭ್ಯುದಯದಿವಸಂಗಳೊಳ್ ತ ।
ಪ್ಪದುಪೊಪಿತೆ ಯಾಗಿ ದರ್ಭಶಯನದೊಳಿರ್ಪಳ್ ॥ ೧೧೩ ॥

ಕಂ॥ ಪದಿನಾಲ್ಕನೆಯಗ್ಗದ ಸ ।
ಗ್ಗದ ಸಾಧನವಿನಿಪ ಪುಣ್ಯಮುಂ ಪುತ್ರನಿಮಿ ॥
ತ್ತದಿ ನಾಚರಿಸಿದಳಾ ಸ ।
ಗ್ಗದೊಳಾರ್ ಗಳ ಪುತ್ರಸೌಖ್ಯಮುಂ ಪೆತ್ತವರ್ಗಳ್ ॥ ೧೧೪ ॥

ವ॥ ಇಂತು ನೆಗಜುತ್ತಿಗಂ ಪೊಗಟುತ್ತಿಗ ಮಳುಂಬವುವ್ಪ ಧರ್ಮತತ್ಪರತೆಯಿ ನಿನಿತುಪೊಯ್ತಿ ಪ್ಪೊಡಂ ತಪ್ಪದೆ ಕಾಲಂ ಸಲುತ್ತು ಮಿರಲೊಂದುದೆವಸಂ.

ಕಂ॥ ಮೂಡಿದ ವೊಡವಿ ಮುಗುಳ್ಕೊಗ ।
ವೀಡಿಜಿಂವುನ್ಮಂಜರೀಸ್ತನಂ ತೋಳ್ಕೊದಲೊಳ್ ॥
ತೀಡುವ ನಲಿಗಂಪೇಂ ಪಿಸು ।
ಣಾಡಿದುದೋ ಸತಿಗೆ ವುಷ್ಪಸಮಯೋದಯಮಂ ॥ ೧೧೫ ॥

ವ॥ ಆಗಳ್.

ಕಂ॥ ಕಳೆದುಂ ಮಣಿದೊಡವಂ ಪೊಂ ।
ಗಳ ತೊಡವಂ ತೊಟ್ಟು ತಳದು ನೆಳೆಯಂ ಪೋಲ್ತಳ್ ॥
ಕಳೆದುಡುಗಣಮುಂ ಕೆಮ್ಮುಗಿ ।
ಲೆಳಸಿದ ಪಿಜುತಿ ಪೊಳೆವ ಪೂರ್ವದಿಗ್ದೇವತೆಯಂ ॥ ೧೧೬ ॥

ವ॥ ಆಜತುರ್ಥದಿನದ ದಿನಕರೋದಯದೊಳ್.

ಚಂ॥ ಒದಗಿದ ಸೌಖ್ಯಮುಂ ಧರೆಗೆ ಬೀಜುವಪೂರ್ವಫಲೋದಯಕ್ಕೆ ತಾ ।
ನಿದೆ ಸೆಲೆ ಯೆಂದು ಕಲ್ಪಲತೆಗಚ್ಚರಿಯರ್ ಪೊರೆದೊಂದುದೇಸೆಯಿಂ ॥
ವೊದಲೊಳಲಂಪಿನಿಂ ಸುರಭಿಗೋಮಯಮುಂ ತಳಿವಂತೆ ಗಾಂಗತೋ ।
ಯದೆ ಸಖಿಯರ್ ನೃಪಾಂಗನೆಗೆ ಮಂಗಳಮಜ್ಜನಮಂ ನಿಮಿರ್ಚಿದರ್ ॥ ೧೧೭ ॥

ವ॥ ಅನಂತರಂ ಭಗವಜ್ಜಿನೇಂದ್ರಪೂಜಾವಿವಿಧಮಂಗಳಮು ನಾಚರಿಸಿ ಮಂಗಳಾಲಂಕಾರಾಲಂಕೃತೆಯಾಗಿ.

ಚಂ॥ ಮಲಯಜದಣ್ಪು ನೋರ್ಮುಡಿಯ ಮಲ್ಲಿಗೆ ಯುಟ್ಟದುಕೂಲಚೇಲ ಮು ।
ಜ್ಜ್ವಳಿಸುವ ಮುತ್ತಿನಾಭರಣ ವೊಪ್ಪುವ ಕಪ್ಪುರದೋಲೆ ಬಾಯ ಕೆಂ ॥
ಬೆಳಗಿನೊಳಣ್ಮೆಗೊಂಡ ಸುಲಿಪಲ್ ಪೊಸದೇಸೆಯ ನೀಯೆ ಕೂಡೆ ಕಂ ।
ಗೊಳಿಸಿದುದಂದು ಬೆಳ್ವಸದನಂ ಕುಮುದಾಯತಲೋಲ ನೇತ್ರೆಯಾ ॥ ೧೧೮ ॥

ವ॥ ಅಂತು ಕೆಯ್ಗೊಯ್ದುಂದಿನಿರುಳ್ ಮುನಃಪ್ರಿಯನ ಸೂಟಿರ್ಸಿ ವಂದು.

ಕಂ॥ ರತಿ ರಾಗಾಮೃತವಾರ್ಧಿಯೊ ।
ಳತನುಕ್ರೀಡಾನಿಮಗ್ನಿಯಾದಂತಾದಂ ॥
ಪತಿಗೆ ಮಿಗೆ ಮೂಡುತೆ ಮುಟಿಯುಂ ।
ಗುತೆ ಬೆಂಡೇಳ್ವಂತಿರಾಗೆ ಕಣ್ಗೆಯ್ದಾಗಳ್ ॥ ೧೧೯ ॥

ಪರಿಪೂರ್ಣಚಂದ್ರನಂ ತಿ ।
ಗ್ಮರೋಚಿಯಂ ಕಲ್ಪವೃಕ್ಷಮುಂ ಕ್ಷೀರಜಲಾ ॥
ಕರಮುಂ ದರವಿಕಸದ್ವಾ ।
ರಿರುಹಮು ನಾಕಾಂತೆ ನಿಶೆಯ ಕಡೆಯೊಳ್ ಕಂಡಳ್ ॥ ೧೨೦ ॥

ಉ॥ ಮುಂಗಳಗಾಯಿಕಾವಮಧುರಗಾನದಿ ನೆಟ್ಟಿಲಿನೆಯ್ದಿ ನಿತ್ಯಕೃ ।
ತ್ಯಂಗಳ ಮುಂಗಳಾಚರಣಮುಂ ನೆಗಟುತ್ತ ಜಿನೇಂದ್ರನಂ ಜಗ ॥
ನ್ಮಂಗಳವಸ್ತುವಿಂ ದಧಿಕಭಕ್ತಿಯಿ ನರ್ಚಿಸಿ ಕಾಂತನಲ್ಲಿಗೊ ।
ಲ್ದಂಗನೆ ಬಂದಳಂಗಜನ ಮುಂಗಳಲಹ್ಮೆ ಯಿನಲ್ ವಿಲಾಸದಿಂ ॥ ೧೨೧ ॥

ವ॥ ಬಂದು ಮುನೋವಲ್ಲಭನ ಸಿಂಹಾಸನಾರ್ಧಕ್ಕಲಂಕಾರವಾಗಿರ್ದು ತನ್ನ ಕಂಡ ಕನಸುಗಳ ನನುಕ್ರಮದಿಂ ಪೇಟಿಪ್ಪುದು ಮುರಸನಪರಿಮಿತಪರಿತೋಷಪೀಯೂಷಪಾರಾವಾರದೊಳೋಲಾಡಿ ಕೆಲ ದೊಳೆರ್ದ ಪುರೋಹಿತನ ಮೊಗಮಂ ನೋಟಿಪ್ಪುದು ಮಾತ ನಾಸ್ವಪ್ನವಿಶೇಷಫಲಂಗಳಂ ಜಲಕ್ಕನಾಗಿ ತಿಳಿದಿಂತೆಂದಂ.

ಮ॥ ವಿಧುವಿಂದಂ ವಿಬುಧೋತ್ಕರಪ್ರಿಯಕರಂ ತೀವ್ರಾಂಶುವಿಂದಂ ಪ್ರತಾ ।
ಪಥನಂ ಕಲ್ಪಮಹೀಜದಿಂ ದನವಧಿತ್ಯಾಗಪ್ರಭಾವಂ ಪಯೋ ॥
ನಿಧಿಯಿಂದಂ ನಿಖಿಳಾವನೀಶ್ವರಭಯಸ್ಥಾನಂ ದಳತ್ಪದ್ಮದಿಂ ।
ದಧಿಕಶ್ರೀನಿಳಯಂ ಸುಪುತ್ರ ನೊಗೆತರ್ಕುಂ ನಿಮ್ಮೊಳುರ್ವೀಶ್ವರಾ ॥ ೧೨೨ ॥

ವ॥ ಎಂದು ಪೇಟಿಪ್ಪುದುಂ ಪುರೋಹಿತನ ನನೂನಪ್ರೀತಿದಾನದಿಂ ಮನ್ನಿಸಿ.

ಕಂ॥ ಮುಂದಾನಿಳನಲೆಪದೆ ಮಾ ।
ಕಂದಂ ವಿಚಕಿಳಲತಾಸಮೇತ ಮುರಲ್ವಂ ॥
ತಂದು ಪುರೋಹಿತನಮೃತ ।
ಸ್ಯಂದಿವಚಸ್ಸ್ತುತಿಯಿ ನೊಸೆದು ದಾನೈಪ[1]ಚಿತ್ತ್ರಂ ॥ ೧೨೩ ॥

---

[1] ಪುತ್ರಂ ?

ವ॥ ಅಂತು ಸುಖಸಂಕಥಾವಿನೋದದಿಂ ದಿರುತ್ತುಂ ಕೆಲವಾನುಂ ದಿವಸಂಗಳ್ಗೆ.

ಕಂ॥ ಭವಭವದೊಳ್ ಕಟ್ಟಿದನೇ ।
ಕವಿಧಧ ದುಷ್ಕರ್ಮಮುಂ ಕಟಿಲ್ಚಲ್ ಪುಣ್ಯಾ ॥
ಸ್ರವದೊಳ್ ನೆರಿಯಲ್ ಭವ್ಯ ।
ರ್ಗಿವೆ ದಿವಸ ಮೆನಲ್ಕೆ ಬಂದ ನಂದೀಶ್ವರದೊಳ್ ॥ ೧೫೪ ॥

ಮ॥ಸ್ರ॥ ಪಿರಿದುಂ ದೇವೇಂದ್ರನೊಳ್ ಮುಚ್ಚರಮಿದೆನೆ ಚೈತ್ಯಾಲಯಂ ಮುಂ ।
ದರಚೈತ್ಯಾವಾಸ ಮೂಗಲ್ಕುಪವನಚತುರಾಶಾಸರೋಮಧ್ಯಕೇಳೀ ॥
ಧರಣೀಭೃಚ್ಚೈತ್ಯಗೇಹಾವಳಿ ನಿರುಪಮನಂದೀಶ್ವರದ್ವೀಪಚೈತ್ಯೋ ।
ತ್ಕರಮಾಗಲ್ ಪೆಂಪಿನಷ್ಟಾಹ್ನಿಕದ ಮಹಿಮೆಯುಂ ಮಾಡಿದಂ ಪದ್ಮರಾಜಂ ॥ ೧೫೫ ॥

ವ॥ ಅಂತು ನಿರ್ವರ್ತಿತನಂದೀಶ್ವರಪರ್ವಾಪೂರ್ವ ಮಹಾಮಹನಾಗಿ ಬಹಿರುದ್ಯಾನದಿಂ ಪುರಾ ಭಿಮುಖನಾದ ಸಮಯದೊಳ್ ಒರ್ವದೂತ ನತಿತ್ವರಿತಗತಿಯಿಂ ಬಂದು ಸರ್ವಾಂಗಾಲಿಂಗಿತಮಹೀ ತಳ ನಾಗಿಂತೆಂದಂ.

ಉ॥ ದೇವ ಭವದ್ವಿರೋಧಿನರಪಾಳರ ದೇಶದಶೇಷವಸ್ತುವಾ ।
ಹಾವಳಿ ಯೆಲ್ಲಮುಂ ನೆಱಿಸಿಯೆ ಸೂಱಿಸಿಯು ನೀಳ್ದುಳಿಗೊಂಡು ಚಂಪೆಯೊಳ್ ॥
ತೀವಿ ತದೀಶನಂ ಸೆಱಿಸಿಗೆದಂದಿಳೆಯಿಂದುದೆನಲ್ ಪುಳಿಂದರಿಂ ।
ವಿೂವಿಷಯಕ್ಕೆ ದಾಟಿಸಿಯಿಡಲುಜ್ಜುಗದಿಂದಿರೆ ಮಿಕ್ಕ ಸೊರ್ಕಿನಿಂ ॥ ೧೫೬ ॥

ಕಂ॥ ಚರರಱಿಪೆ ಚತುರ್ಬಲಮುಂ ।
ನೆರವುತ್ತುಂ ಭರದೆ ಸಿಂಹವರ್ಮಧರಾದೇ ॥
ವರ ಸೇನಾಪತಿ ಚಂಪಾ ।
ಪುರಮುಂ ಪರಿಯಿಟ್ಟು ಮುತ್ತಿದಂ ಮೂವಳಸಿಂ ॥ ೧೫೭ ॥

ವ॥ ಅಂತು ಗಾಳಿಗಂ ನುಸುಳಲ್ಬಾರದಂದದಿಂ ಸಂದಣಿಸಿ ಮುತ್ತಿ ಕೋಂಟೆಯುಂ ಪತ್ತಲವ್ವಳಿ ಪಗುರ್ವಿನ ದೋರ್ವಲದ ಪೆರ್ವಲಮುಂ ಕಂಡಡವಿಯೆಲ್ಲಮುಂ ಸುಟ್ಟುರೆಯ ಮಸಕದಿಂ ಸುಟ್ಟಿದು ಸುತ್ತಿ ಸುಡುವ ಬೆಟ್ಟವೇಸಗೆಯ ಬೇಗೆಗಿರ್ಚಿನ ಬಳೆಸಿಂಗೊಳಗಾದಸಿಂಗದ ಸಂಗಡದಂತೆಯುಂ ಕಾಡಾನೆಯ ಕಡುಪಿನಂತೆಯುಂ, ಪೆರ್ವುಲಿಯ ಪಿಂಡಿನಂತೆಯುಂ, ಕಾಡೆಮ್ಮೆವೋರಿಯ ಹಾರಿಯಂತೆಯುಂ, ಪಂದಿಯ ಗೊಂದಳದಂತೆಯುಂ, ಅವ್ಯಾವಿನ ತೋವೆಯಂತೆಯುಂ, ತೋಳೆದ ಗೂಳೆಯದಂತೆಯುಂ, ಎತ್ತಲುಂ ಮಿಡುಂಕಲ್ಪಡೆಯದೆ ಸಿಡಿಮಿಡಿಗೊಂಡು ಸಿಡಿದು ಸಿಡಿಲೇಱಿರ್ದಿಯೆರ್ದು ಪಲ್ಗಡಿದು ಮಾಮಸಕಂಮಸಗಿ ಮುನ್ನಾರ್ಗ ವೊಳಸೋರದಗ್ಗಲಿಸಿದ ಮದದಿಂ ಮೇಗುಂ ಮೆಯ್ಸರಿಯದೆ ತಪ್ಪೊಳ್ ಪರಿಚ್ಛೇದಿಸಿ.

ಮ॥ ರಸೆಯಂ ಪೊಕ್ಕುಟಿದಿರ್ದ ದಾನವಚಯಂ ದೇವೇಂದ್ರನೊಳ್ ಕಾದುವೇ ।
ರ್ವೆಸದಿಂ ದರ್ವಿಸಿ ಬಂದುದೋ ರವಿಯು ಮೇಲೆಟ್ಟಿಂದುದೋ ದುಸ್ತಮಃ ॥
ಪ್ರಸರಂ ತಾರ್ಕ್ಷ್ಯನ ನಿಕ್ಕಲುಕ್ಕಿದುದೊ ಕಾಳವ್ಯಾಳಜಾಳಂ ವಿಗು ।
ರ್ವಿಸಿತೆಂಬಂತೆ ಪುಳಿಂದಸೇನೆ ಪೊಲಿಮುಟ್ಟತ್ತಾ ಪುರದ್ವಾರದಿಂ ॥ ೧೨೪ ॥

ವ॥ ಅಂತು ಪೊಲಿಮುಟ್ಟು ಅಗುರ್ವು ಮದ್ಭುತಮು ಮಾಗೆ ತಾಗಿ ತಳ್ಪಿಱಿವಾಗಳ್.

ಮ॥ ಅದನೀವೇೞ್ದಿಪೆ ನೀಗಳಿತಾಸಮಯದೊಳ್ ವರ್ತ್ತಿರ್ದ ಸೇನಾಸಮು ।
ದ್ರದದಂದೇಶಮಹೌರ್ವದುಗ್ರಸುಭಟಜ್ವಾಲಾಳಿಯಸ್ತ್ರಸ್ಫುಲಿಂ ॥
ಗದ ಕೋಳ್ಗಿಟ್ಟಿದುದಿಲ್ಲ ತನ್ನಗರಕೋಟಾವೇದಿಕಾದ್ವಾರಮಾ ।
ರ್ಗದಿ ನುರ್ಬಿಂ ಪರಿದಾಂಪ ಲುಬ್ಧಕವಿಜೃಂಭದ್ವಾಹಿನೀಸಂಚಯಂ ॥ ೧೨೫ ॥

ಪ॥ ಆಂತು ಗಾಳಿಗಿದಿರ್ಚಿದ ಮೇಘಾಳಿಯಂತೆ ಬೇಡವಡೆಯಟ್ಟಾಡಿ ಪೋಗೆ ಜಂಪಾವುರಮುಂ ಪೊಕ್ಕು ತತ್ಪುರಾಧಿಪಂ ದೇವರ ದಿಗ್ವಿಜಯದಿಂತೊಟ್ಟು ಮೂವಿಡಿವಟ್ಟರ್ಪನಪ್ಪುದಱಿಂ ಸೆಱೆಯಿರಿಯುಂ ಬಿಳ್ವಟ್ಟಿಗೆಯಿ ನಿಲಿಸಿ ಕಿರಾತಕರ್ ತಂದೊಟ್ಟಿ ಬೆಟ್ಟದಂತಿರ್ದ ನಾರದ್ರವ್ಯಸಂಚಯಕ್ಕೆ ಭಂಡಿಯುಂ, ಕೊಟ್ಟಿಗೆಯುಂ, ವೊಟ್ಟಿಯುಂ, ಪೊಱಿರಿಯೂಳುಂ, ನೆಱಿರಿಯದೆ ಬಾತುರ್ಬಲದ ತಲೆಪೊರೆಯೊಳ್ ತಂದಿಂದೀಗಳ್ ನಿನ್ನ ಪಾದಪದ್ಮಮುಂ ಕಾಣಲ್‌ಬರುತಿರ್ದಪ ನೆಂದು ಮತ್ತಮಿಂತೆಂದಂ.

ಶಾ॥ ದೇವರ್ ದಿಗ್ವಿಜಯಂಗೆಯುತ್ತಖಿಳಧಾತ್ರೀನಾಥರೊಳ್ ಕೊಂಡ ನಾ ।
ನಾವಸ್ತ್ವಕ್ಕರದಿಂದನೇಕಗುಣ ಮಿಂತೀವಸ್ತು ವಂತಾದೊಡೇ ॥
ನೀವತ್ತರ್ಥಿಜನಕ್ಕಣಂ ತಣಿಯದಿರ್ಪೀ ನಿನ್ನ ಕೆಯ್ವೊಕ್ಕೊಡಾ ।
ದೇವಾದ್ರೀಂದ್ರ ಮಣಿಂಸವಾನ ಮೆನೆ ಪುತ್ತಿನ್ನಾವುದುಂ ದೊಡ್ಡಿತೇ ॥ ೧೩೦ ॥

ವ॥ ಎಂದು ಬಿನ್ನವಿಸಿ ಮಾಣ್ದ ದೂತನ ಮಾತಂ ಮನದೆಗೊಂಡು ತುಷ್ಟಿದಾನಂಗಳಿಂದವನಭೀಷ್ಟಮುಂ ತೀರ್ಚಿ ತದುದ್ಯಾನಬಾಹಿರವಾಹಳೀಪ್ರದೇಶಕ್ಕೆ ವಂದು ನಾಷ್ಟಾಂಗಪ್ರಣತಿಪೂರ್ವಕಂ ಕಾಣ್ಕೆಗೊಟ್ಟು ಪೊಡೆವಟ್ಟ ಸಿಂಹವರ್ಮನುತ್ತಮಾಂಗದೊಳ್ ವಪಮಿಟ್ಟು ತಂದು ಸಂದಳಿಸಿ ಗೊಂದಳೆಂಗೊಳಿಸಿದ ವಸ್ತುವಾಹನಾದಿಗಳಂ ಬೇಱಿಱಿವೇಱಿಱಿ ವಿವರಿಸಿ ನೋಟಿಪ್ಪಾಗಳ್‌ಸಂತೋಷಗೊಂಡು.

ಚಂ॥ ಎಣಿಸುವೊಡಂಹದೊಂದೆರಡುಮೂಱಱು ಲೆಕ್ಕಮೆ ಲಕ್ಷಕೋಟಿಯಿಂ ।
ಗಣಿಯಿಸುವಾನೆಯೊಟ್ಟೆಯ ತುರಂಗದ ವೇಸರಿಯೆಮ್ಮೆಯೂಕಳೊ ॥
ಳ್ಗಣಿಕೆಯರಸ್ತ್ರವಸ್ತ್ರಮಣಿಕಾಂಚನಭೂಷಣಪೂರ್ಣಪೇಟಿಕಾ ।
ಗಣ(ವರ)ಕುಪ್ಯನಾರಥನದೋಳಿ(ಗಳೆ)ಣ್ದೆಸೆಗೆಲ್ಲ ಕಣ್ಪೊಲಂ ॥ ೧೩೧ ॥

ವಿ॥ ಅಂತು ತೋರ್ಕೆಗಳುಂಬಮು ಮಾದನೇಕಥನಜೀವಥನಂಗಳುಮುಂ ತಂದ ಸೇನಾನಿಯು ನಾಹಸಮುಂ ವೈಶ್ಯವಣಿಾವಮಾತ್ಯನುಂ, ತಾನು ಮೋರೊರ್ವರೊಳ್ ಮಗುೞಿಮಗುೞಿ ನುಡಿಯುತ್ತುಂ ಮುಂಗಳಾನಕರವಂಗಳ್ ಮೊೞಿಗೆ ಪೊೞಿಲಂ ಪುಗುವಾಗಳ್.

ಚಂ॥ ಅತನುಗುಣೋನ್ನತಂ ವಿನತಶತ್ರುಕುಲಂ ಸುಕುಲಪ್ರಭೂತಿ ಸಂ ।
ಗತಮುಹಿಮೋತ್ತರಂ ವಿತರಣಪ್ರಥಿತಂ ಕಥಿತಪ್ರಭಾವನ ॥
ನ್ನುತಜಿನಮಾರ್ಗಧರ್ಮಚರಣಂ ಕರಣತ್ರಯಶುದ್ಧ ನೆಂದದೇಂ ।
ಸ್ತುತಿಯಿಸಿದತ್ತೊ ಸಂತಸದೆ ಪೌರಜನಂ ಪ್ರಭುವಂಶಮೇರುವಂ ॥ ೧೩೦ ॥

ಗದ್ಯ

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀ
ಚಾರುಚಂದ್ರಾಯಮಾಣಮಾನಿತಶ್ರೀ ಮದುಭಯಕವಿ ಕಮಳಗರ್ಭ್
ಮುನಿಚಂದ್ರಪಂಡಿತದೇವಸುವ್ಯಕ್ತಸೂಕ್ತಿಚಂದ್ರಿಕಾಪಾನಪರಿಪುಷ್ಟಮಾನಸಮರಾಳ

ಗುಣವರ್ಮನಿರ್ಮಿತಮಪ್ಪ

ಪುಷ್ಪದಂತ ಪುರಾಣದೊಳ್

ನಾಯಿಕಾಭ್ಯುದಯವರ್ಣನಂ

ನಾಮ

ತೃತೀಯಾಶ್ವಾಸಂ

ಕಂ॥ ಶ್ರೀಜಿನಪದನಖಮುಕುರಸ ।
ಮಾಜದೊಳೋರಂತೆ ನೋಡಿ ನಿಚ್ಚಂ ಕೆಯ್ಗೆ ॥
ಯ್ದಾ ಜಗದೊಳ್ ಸದ್ದೃಷ್ಟಿಗೆ ।
ರಾಜಿಸುವಂ ಪ್ರಭುಗುಣಾಬ್ಜವನಕಳಹಂಸಂ ॥ ೧ ॥

ವ॥ ಎಂದು ಪೊಗಟಿಪ್ಪುತ್ತು ಮಲ್ಲಕ್ಷಿ ನಿಂದು ನೋಪ್ಪಿ ಪುರಜನದ ಗೊಂದಣದಿ ನೊಂದಿ ಸೊಗ
ಯಿಸುವ ವಿಪಣಿವೀಥಿಯೊಳಗನೇಕಮಣಿತೋರಣಂಗಳಂ ನುಸುಳುತ್ತ ರಮನೆಗೆ ವಂದು ಚಂಪಾಪುರದ
ಸೂಱಿಶಿಯಿಂ ಬಂದ ಸಮಸ್ತವಸ್ತುವಾಹನವಧೂಸಮೂಹಮಂ ಗೃಹಮುಹತ್ತರಂಗೆ ಕೆಯ್ಕೊಳಲ್ವೇ
ಟ್ಪಿನಂತರಂ ಸಿಂಹವರ್ಮನ ನನೂನಸನಸ್ಮಾನದಾನದಿಂ ಸಂತೋಷಂಬಡಿಸಿ ಬೀಡಿಂಗೆ ಕಳಿಪಿ ಸುಖದಿ ನಿರೆ.

ಕಂ॥ ಪರಿಜನಕೆ ಹರ್ಷಗರ್ಭಂ ।
ಪರಭೂಮಿಗೆ ಭೀತಿಗರ್ಭ ವಧಿಪಜಯಶ್ರೀ ॥
ಗರಿಜೈತ್ರಕೇಳಿಗರ್ಭಂ ।
ನಿರುತಂ ನೆಲಸಲ್ಕೆ ನೆಲಸಿತರಸಿಯ ಗರ್ಭಂ ॥ ೨ ॥

ಕಿಡೆ ಮಧ್ಯದ ವಳಿರೇಖೆಗ ।
ಳೊಡರಿಸೆ ತೀರದ ಸಮೃದ್ಧಿ ಪುಟ್ಟೆ ಗುರುತ್ವಂ ॥
ಜಡಗತಿಗೆ ಗಾಳಿಯಲಸಿಂ ।
ಗೆಡೆಯಾಗಿರೆ ಬರ್ವ ತೊಱಿಶಿಯ ನಂಗನೆ ಪೋಲ್ತಳ್ ॥ ೩ ॥

ಚಂ॥ ಬಳಿಗೆ ಸಮಸ್ತಭೂಭೃದಧಿಕಂ ಪ್ರಬಳಂ ಮನುಜೇಂದ್ರಮಂದರಂ ।
ಬಳೆಯೆ ತಱಿಂಬಿ ಸಂಚಳಿಸದಿರ್ದಪುದೀನಡು ವೆಂಬ ಕೌತುಕಾ ॥
ಕುಳಿತರ ದುಷ್ಪದೃಷ್ಟಿವಿಷರಕ್ಷೆಗಿದಂಜನಲೇಖೆ ಯೆಂಬ ಬ ।
ಳ್ವಳಕೆಯ ನಾಳ್ದು ತಾಳ್ದಿದುದು ಕಾಂತೆಯ ಕರ್ಗಿದ ಬಾಸೆ ದೇಸೆಯಂ ॥ ೪ ॥

ವ॥ ಅದಲ್ಲದೆಯುಂ.

ಮ॥ ಉದರೋದ್ದೇಶದೊಳಿರ್ಪ ಮುಂಡಳಿಕಮಾರ್ತಂಡಂಗೆ ಮೆಯ್ದೋಱಿಲ ।
ಣ್ಮದೆ ಮುಟ್ಟಂ ಪೊಱಿಮುಟ್ಟು ನೆಟ್ಟನೆನಿದಿರ್ದೀನಾಭಿರಂಧ್ರಪ್ರದೇ ॥
ಶದೆ ನೋಡುತ್ತಿದೆ ನೋಡ ಚಿತ್ತದ ತಮಂ ವಕ್ಕೊೀಜದೊತ್ತಿಂಗೆನಲ್ ।
ಸುದತೀರಾಜಿತರೋಮರಾಜಿ ನಿಮಿರ್ದತ್ತುತ್ಕೋಮಳಶ್ಯಾಮಳಂ ॥ ೫ ॥

ಚಂ॥ ಒದವಿದ ಲೋಕಲೋಚನಸುಖಾಮೃತಮುಂ ಕಱಿಪೊಳ್ಮುಗಿಲ್ ಮುಸುಂ।
ಕಿದ ಶಿಖರಂಗಳೊಪ್ಪುತಿವೆ ಕಾಮನ ಕಾಂಚನಭೂಧರಪ್ರದೇ ॥
ಶದೊಳೆನೆ ಕಂಬುಕಂಧರೆಯ ಕರ್ಬೊಗರೇಱಿದ ಜೂಚಕಂಗಳೊ।
ಪ್ಪಿದುವು ಪೊವಟ್ಟಿ ನುಣ್ಪುಮರ್ದ ಕೊರ್ವಿದ ಪೀನಕುಚಪ್ರದೇಶದೊಳ್ ॥ ೬ ॥

ವ॥ ಮತ್ತಂ.

ಉ॥ ಭಾವೆ ನಿಜಾತ್ಮಜಂ ತೊಳಪ ಕೀರ್ತಿಯಿ ನಿನ್ನ ನದಿರ್ಪದಂತೆವೋಲ್।
ಕಾವುದು ದೇವಿ ನೀಂ ದಿಟಕೆನುತ್ತ ಮುನಾಗತಬಾಧೆಗಳ್ಕಿ ಬಂ ॥
ದಾವಿಧು ವೀವಧೂಮುಖದೊಳಿರ್ದವ ನೋಲಗಿಸುತ್ತು ಮೆಂಬಿನಂ।
ಭಾವಕರಂ ಮನಂಗೊಳಿಸಿದತ್ತು ಬೆಳರ್ತ ಮೊಗಂ ಮೃಗಾಕ್ಷಿಯಾ ॥ ೭ ॥

ವ॥ ಆಸಮಯದೊಳ್.

ಕಂ॥ ಸುರಕುಜದ ವನಮುಮಂ ಸಿ।
ದ್ಧರಸದ ಪರಿಕಾಲ ನಿಂದ್ರಧೇನುವ ಪಯಮುಂ ॥
ವರಿವಾರಜನಕೆ ಪದಪಿಂ।
ವಿರಚಿಸುವೀಬಯಕೆ ದೇವಿಗಾಯ್ತೆಳವಸಿಱಿಂದೊಳ್ ॥ ೮ ॥

ಧರಣಿಯ ಸೀಮೆಯು ನಾಲ್ಕುಂ।
ಪರಿಧಿಯ ನವಲೋಕಿಸಲ್ ತ್ರಿಷಷ್ಟಿಶಲಾಕಾ ॥
ಪುರುಷಪ್ರತತಿಯ ಕಥೆಯುಂ।
ಪರಿಭಾವಿಸಲಾಯ್ತು ದೌಹೃದಂ ನೃಪಸತಿಯೊಳ್ ॥ ೯ ॥

ವ॥ ಅಂತು.

ಮ॥ ಪ್ರಣುತೋದಾತ್ತನ ಗರ್ಭದರ್ಭಕನ ಸರ್ವೌದಾರ್ಯಶೌರ್ಯಾದಿಸ।
ದ್ಗುಣಮುಂ ಸೂಚಿಸಲಾದುವಂದರಸಿಯೊಳ್ ಭೂಕಂಟಕಧ್ವಂಸಕಾ ॥
ರಣಹಾಳಾಹಳ ಮುದ್ಗತಾರಿ[1]ಜಯವತ್ಕೋಳಾಹಳಂ ಲೋಕರ।
ಕ್ಷಣಕೇಳೀಜಯಕಾರಣೀಕೃತಮಹಾಕೌತೂಹಳಂ ದೌಹಳಂ ॥ ೧೦ ॥

ವ॥ ಅದಲ್ಲದೆಯುಂ.

ಕಂ॥ ತನಗೆ ಪತಿಯಪ್ಪ ಯತ್ನತೆ।
ಗನುನಯದಿಂ ದವನಿವನಿತೆ ಯಟ್ಟಿದ ರಕ್ಷಾಂ ॥
ಜನಗುಟಿಕೆಯ ನೊಳಪೊಯ್ದುಪ।
ಳೆನೆ ಮಾಡಿದಳರಸಿ ಸುರಭಿಮೃತ್ಸೇವನೆಯಂ ॥ ೧೧ ॥

[1] ಭಯ. --

ವ॥ ಅಂತಾಕಾಂತೆಯು ಗರ್ಭಚಿಹ್ನಂಗಳಿನಿಸುಂ ಪ್ರಸನ್ನಂಗಳಾಗೆ.

ಕಂ॥ ಪರಿವಾರದ ಕರ್ಣಪರಂ ।
ಪರೆಯಿಂ ವಲ್ಲಭೆಯ ಗರ್ಭವೃತ್ತಕಮು ನಿಳೇ ॥
ಶ್ವರ ನಲಿಮದು ಮಂತ್ರಿಮುಖ್ಯಂ ।
ಬೆರಸಂತಃಪುರಕೆ ಬಂದು ಸಂತಸದಿಂದಂ ॥ ೧೦ ॥

ಮ॥ಸ್ರ॥ ವಿವಿಧಾತೋದ್ಯಸ್ವನಂಗಳ್ ದೆಸೆಗೆಸೆವಿನಿಗಂ ಬಾಯಿನಂಗೊಟ್ಟು ನಾನಾ ।
ನವರತ್ನಸ್ವರ್ಣವಸ್ತ್ರಂಗಳಿ ನಖಿಳಜನಂ ಕೂಡೆ ಸಂಪನ್ನ ಮುಪ್ಪ ॥
ನ್ನ ವಿಳಾಚಕ್ರಂ ಮನಂಗೊಳ್ವಿನ ಮೆಸೆದು ಯಥಾಪ್ರಸ್ತುತೌಚಿತ್ಯದಿಂ ಪುಂ[1]ಸ
ನವನಾದ್ಯುತ್ಸಾಹಮುಂ ಮಾಡಿದ ನಭಿನುತಮುಂ ಪದ್ಮರಾಜಾಧಿರಾಜಂ ॥ ೧೩ ॥

ವ॥ ಅಂತುಮಮಾಡಿ.

ಕಂ॥ ವನಿತೆಯ ತನುರಕ್ಷೆಗೆ ತ ।
ಕ್ಕನುಚರಜನ ಕುಶಲಜನ ಸುಹೃಜ್ಜನ ಧಾತ್ರೀ ॥
ಜನ ಸೂತೀಜನ ಸಖಿಜನ ।
ಮೆನಿತನಿತುಮು ನವನಿಪತಿ ನಿಯೋಜಿಸಿ ತಳರ್ದಂ ॥ ೧೪ ॥

ವ॥ ಅಂತನಂತರಂ.

ಚಂ॥ ಅಲಸುವ ಮೆಯ್ಯು ಮಾಗುಳಿಸು ವಾನನಮುಂ ನಯದಿಂ ತೊಲ್ಲಿ ಕ ।
ಣ್ಮಲರು ಮನಾಕುಳಂ ತಳೆದ ತೆಳ್ವರಿಜುಂ ಚಿಗುರೇಱುತಿರ್ಪ ಮೇ ॥
ಖಳೆಯು ತೊಡರ್ವು ಕಣ್ಗೊಳಿಪ ಯಾನದ ಮೆಲ್ಪು ಮಪೂರ್ವಭಾವಮುಂ ।
ಲಲನೆಗೆ ತಂದು ವಂದನುದಿನಂ ಬಳೆಯುತ್ತಿರೆ ಗರ್ಭದರ್ಭಕಂ ॥ ೧೫ ॥

ಕಂ॥ ಕಿಡೆ ಕೃಶತೆ ಪೂರ್ಣಮಾಗಿಯು ।
ಹುಡುಪತಿಯಂತೆಱಗಿಸಿತ್ತು ಜಗಮಂ ದಿಟದಿಂ ॥
ಬಡತನದೊಳುಂತೆ ಸೊಗಯಿಪ ।
ನಡು ತನಗಭಿವೃದ್ಧಿ ಯಾಗೆ ಸೊಗಯಿಪು ದರಿದೇ ॥ ೧೬ ॥

ವ॥ ತತ್ಸಮಯದೊಳ್.

ಕಂ॥ ಸುದತಿ ಘನತೋದ್ಯದಳಿಗೀ ।
ತದ ವಾದ್ಯದ ಹೃದ್ಯದುಚಿತಪತ್ರದ ರಸಚಿ ॥
ತ್ರದ ಮಾಳಾಕರ್ಮದ ನ ।
ರ್ಮದ ಸಖಿಯರ ಬಿನದದಿಂದ ವಲಸಿಕೆಗಳೆವಳ್ ॥ ೧೭ ॥

---

[1] ನುತ್ಸಾಹಸಂದೋಹಮು ನಭಿನುತಮುಂ ಮಾಡಿದಂ ಪದ್ಮರಾಜ.

ವ॥ ಮತ್ತಂ.

ಚಂ॥ ಅರಗಿಳಿವೆಣ್ಣ ನೊಮ್ಮೆ ನಲಿದೋದಿಸಿ ಸೋಗೆಯ ನೊಮ್ಮೆ ನೃತ್ಯದೊಳ್ ।
ವಿರಚಿಸಿ ಹಂಸಗರ್ಭಿಣಿಯ ನೊಮ್ಮೆ ಗತಿಶ್ರಮ ಮೂಱಿಸಿ ಬೀಸಿ ಪೆ ॥
ಣ್ಬುರುಳಿಯ ನೊಮ್ಮೆ ಮೆಲ್ನುಡಿಯಿ ನಾಱಿಸಿ ಕಾಂತೆ ವಿನೋದದಿಂ ಗೃಹಾಂ ।
ತರದೊಳಗಿಂತು ಪೊಮ್ಮಿಗಳೆವಳ್ ಗುರುಗರ್ಭಭರಾಲಸತ್ವದಿಂ ॥ ೧೪ ॥

ಚಂ॥ ಬಲಿಕುಸುಮಂಗಳೊಳ್ ನಲಿವ ಭೃಂಗಮ ನಂಗನೆ ನೋಯೆ ಮೆಟ್ಟುಗುಂ ।
ತೊಲತೊಲಗೆಂದು ಚಪ್ಪರಿಸಿದಪ್ಪಳೊ ಪಾದಪಯೋಜಲಕ್ಷ್ಮೆ ಮೇಣ್ ॥
ನೆಲನ ನನಂಗ ನುಗ್ಗಡಿಸಿದಪ್ಪನೊ ಪೇೞಿರೆನೆ ನೂಪುರಂ ತಗು ।
ೞ್ದುಲಿಯೆ ಲತಾಂಗಿ ಗರ್ಭಭರದಿಂ ಸುಱಿವಳ್ ನವರತ್ನರಂಗದೊಳ್ ॥ ೧೫ ॥

ಚಂ॥ ಗುರುತರಗರ್ಭದೊಳ್ ತನು ತನುತ್ವಮ ನಾಂತೊಡೆ ರತ್ನರಂಜಿತಾ ।
ಭರಣಭರಕ್ಕೆ ಮೆಯ್ದೆಗೆದುಪಾರ್ಜಿಸಿದಳ್ ಸುಮನೋಲಸದ್ಗುಣಾ ॥
ಭರಣಮ ನಾತ್ಮಗರ್ಭದೊಳಗಿಪ್ಪ್ಪಸುತಂ ಸುಮನೋಲಸದ್ಗುಣಾ ।
ಭರಣ ನಿನಿಪ್ಪುದಂ ಕುಸುಮಕೋಮಳೆ ಭೂಮಿಗೆ ಸೂಚಿಪಂದದಿಂ ॥ ೧೦ ॥

ಕಂ॥ ಅಮೃತೋದ್ಭವ ಮೆನಿಪಾಹಾ ।
ರಮಿರಲ್ ನೇವಿಸುವರಾರೂ ಕನಕಮ ನೆನೆ ಹೇ ॥
ಮಮಯಗ್ರೈವೇಯಕಭಾ ।
ರಮ ನೊಲ್ಲದೆ ತಳೆದಳರಸಿ ಮುತ್ತಿನ ಸರಮಂ ॥ ೧೧ ॥

ವ॥ ಅಂತನೇಕವಿನೋದದೊಳ, ಮುಕೃತಪೂರ್ವರಸದೊಳಂ, ನಿರ್ಭರಪ್ರಾದುರ್ಭಾವದಿವಸಂಗಳಂ ಕಳಿವುತ್ತಿರ್ದು ಸಂಪ್ರಾಪ್ತಪ್ರಸವಸಮಯದೊಳ್ ನಿಖಿಳಶೋಭನವಾರಮಪ್ಪ ವಾರಮುಂ, ಮುಖಿಳಮಂಗಳಾಗ್ರೇಸರಮಪ್ಪ ವಾಸರಮುಂ, ಮುಶೇಷಕಲಲ್ಯಾಣಪಾತ್ರಮುಮಪ್ಪ ನಕ್ಷತ್ರಮುಂ, ನಿಃಶೇಷಮಾಂಗಲ್ಯಕರಣಮುಮಪ್ಪ ಕರಣಮುಂ, ಸಕಳಶ್ರೇಯೋನಿಧಿನಿಯೋಗಮಪ್ಪ ಯೋಗಮುಂ, ಮೊಂದಿಬರ್ಪುದುಂ ಗಣಕಸಂಕುಳಂ ಸಂಕುವಂ ಪೂಜಿಸಿ ಸಮಾಹಿತಚ್ಛಾಯರಾಗಿ ಪಾರ್ದಿರೆ.

ಮ॥ಸ್ರ॥ ವಿಳಸನ್ನಿತ್ಯೋದಯಾಳಂಕೃತ ನಸಮಹಯಪೌಢ ನಕ್ಷೋಣಲಕ್ಷ್ಮೀ ।
ನಿಳಯಂ ಸನ್ಮಂಡಳಾಗ್ರಸ್ಫುರಿತಕರಹತೋದ್ವೃತ್ತರಾಜಂ ಮಹೀಭೃ ॥
ತ್ಕುಳಮಸ್ತನ್ಯಸ್ತಪಾದಂ ಸಮುದಿತವಿನತಾನಂದನಂ ವೃತ್ತವೀತಾ ।
ಖಿಳದೋಷಂ ದ್ಯೋತಿತಾಶಾಂಬರಮುಖ ನೊಗೆದಂ ಭವ್ಯಲೋಕೈಕಮಿತ್ರಂ ॥ ೭೦ ॥

ವ॥ ಆಗಳ್.

ಕಂ॥ ಎಸಗಿದುದು ತೆಂಬೆಲರ್ ಘೂ ।
ರ್ಣಿಸಿದುದು ಪಲತೆಱೆದ ಮಂಗಳಾನಕನಿನದಂ ॥
ವಸುಧಾಜನದಿಂ ದಾದಂ ।
ಪಸರಿಸಿತೆತ್ತಂ ಪೊದಮ್ಪಿ ಜಯಜಯಘೋಷಂ ॥ ೭೩ ॥

ಮು॥ ನಿರವಾದಂ ನಮಗೊರ್ವ ನುರ್ವರೆಯು ನಾನಲ್ಕೀಗಳೆಂದಪ್ಪುದಿ ।
ಕ್ಕರಿಗಳ್ ರಾಗಿಸಿ ತತ್ಕುಮಾರಕನ ಜನ್ಮೋತ್ಸಾಹತೂರ್ಯಸ್ವನೋ ॥
ತ್ಕರಮುಂ ಭಾವಿಸಿ ಕೇಳಲಾಸಮಯದೊಳ್ ನಿಷ್ಕಂಪಕರ್ಣಂಗಳಾ ।
ಗಿರೆ ಗಂಡಸ್ಥಳದಾನಲೀನಮಧುಪಂ ತಾಳ್ದಿತ್ತು ಸೌಸ್ಥಿತ್ಯಮುಂ ॥ ೨೪ ॥

ವ॥ ಮತ್ತಂ.

ಚಂ॥ ಅವಿರಳ ವಾದುದಂತವುರದೊಳ್ ಕಡೆಯಿಕ್ಕುವ ತೋಱಿಮುತ್ತು ಸೂ ।
ಸುವ ಪಟವಾಸ ಮಾವರಿಪ ಪೂವಲಿ ಪೊಣ್ಮುವ ಮುಂಗಳೋಕ್ತಿ ಕ ॥
ಟ್ಟುವ ಗುಡಿ ಪೊಯ್ವು ಬದ್ದವಣ ಮೆತ್ತುವ ಬೆಳ್ಗೊಡೆ ಯೂರ್ವ ವಂದಿ ಪು ।
ಟ್ಟುವ ಜನಸಂಭ್ರಮಂ ಕುಣಿವ ಗೊಂದಣವೆಕ್ಕಣ ವೀವ ಬಾಗಿನಂ ॥ ೨೫ ॥

ವ॥ ಆಗಳೊರ್ವಳಂತಃಪುರವಿಲಾಸಿನಿ ತದುತ್ಸವಮು ನವನೀಪತಿಗಱಿಪಲುತ್ಸುಕೆ ಯಾಗಿ.

ಮು॥ ವಸನಂ ಮೇಖಳೆಯೊಳ್ ಸಹರ್ಷವಚನಂ ವಕ್ತ್ರಾಬ್ಜದೊಳ್ ವೇಗವಿ ।
ನ್ಯಸನಂ ಪಾದದೊ ಳುತ್ತರೀಯವಸನಂ ಜೋಲ್ದುರ್ವಿಯೊಳ್ ಸಾರ್ದ್ರನಿ ॥
ಶ್ವಸನಂ ನಾಸಿಕೆಯೊಳ್ ಮದೋಲ್ಲಸನ ಮಾಲೋಲಾಕ್ಷಿಯೊಳ್ ಕೂಡೆ ವ ।
ರ್ತಿಸುವನ್ನಂ ವರಿತಂದು ನಿಂದೆಱಗಿದಳ್ ಭೂಪಾಂಘ್ರಿಗಾಸ್ಥಾನದೊಳ್ ॥ ೨೬ ॥

ವ॥ ಅಂತೆಱಗಿ.

ಕಂ॥ ಬಿನ್ನಪ ಮವನೀವಲ್ಲಭ ।
ನಿನ್ನ ಮಹಾದೇವಿ ಸಕಳಭೂವಳಯದ ಭಾ ॥
ಗ್ಯೋನ್ನತಿಯಿಂದಂ ಪಡೆದಳ್ ।
ಸನ್ನುತಶುಭಲಕ್ಷಣಾಭಿನುತನಂ ಸುತನಂ ॥ ೨೭ ॥

ವ॥ ಎಂದು ಬಿನ್ನವಿಸಿ.

ಮು॥ ಒನೆದೀವಾರ್ತೆಗೆ ಪೂರ್ಣಪಾತ್ರ ಮಿದು ದೇವರ್ ಮುನ್ನಿಸಲ್‌ವೇಟ್ಕು ಮೆಂ ।
ದು ಸಮಂತೀಟಿಕ್ಕಳಿಗೊಂಡಳಾಕೆ ನೃಪಕಂರೋದ್ದೇಶದಿಂ ಶ್ರೀವಧೂ ॥
ಹಸನನಸ್ಫಾರಮು ನುಲ್ಲಸತ್ತರಳಿರತ್ನಾಧಾರಮುಂ ತಾರಕ ।
ಪ್ರಸರಾಕಾರಮು ನಂಶುಜಾಳಕಲಸನ್ನೀಹಾರಮುಂ ಹಾರಮುಂ ॥ ೨೮ ॥

ಮಣಿವಿಭೂಷಣವೃತ್ತಂ॥ ಅಂದೆ ವಿಶ್ವಭುವನಂ ತನಗುಂಡಿಗೆಸಾಧ್ಯ ಮಾ ।
ದಂದದಿಂ ಮನ ಮೆಟಿಲ್ಲೆ ಮಹೀಪತಿ ತೀವಿದಂ ॥
ತಂದು ತನ್ನ ವದನಕ್ಕೆ ವಿಕಾಸಮು ನಹ್ಪಿಗಾ ।
ನಂದಬಾಷ್ಪವು ಮೊಡಲ್ಗೆ ಬೃಹತ್ಪುಳಕಂಗಳಂ ॥ ೨೯ ॥

ವ|| ಅಂತನಂತಸಂತೋಷಶಿಖರಿಶೇಖರಾಧಿರೂಢನಾಗಿ ಪದ್ಮರಾಜಂ ತನ್ನಿಂ ದಧಿಕಸಮ್ಮದದ ಪರ
ಮಸುಖಕೋಟಿಯ ನೆಯ್ದುತ್ತು ಮಿರ್ದ ನಿಜಾವಾತ್ಯವೈಶ್ರವಣನ ಕೆಯ್ಯಂ ಪಿಡಿದಾಸ್ಥಾನಮಂಟಪದಿಂ
ತಳೆದರ್ ಪುತ್ರಮುಖಾವಳೋಕನಕುತೂಹಳತೆಯಿಂ ಬಪರ್ವಾಗಳ್.

ಮ|| ವಿಳಸದ್ಗೀತರವಂ ಮೃದಂಗನಿನದಂ ಶಂಖಸ್ವನಂ ಸೂತಮಂ ।
ಗಳಪಾಠಧ್ವನಿ ಕಾಹಳಾವಿರುತಿ ಯಾಶೀರ್ವಾದನಾದಂ ನಟ ॥
ಲ್ಲಲನಾನೂಪುರನಾದ ಮೆಂಬಿವು ಪೊದಟಿದ್ದಿಜ್ಜೃಂಭಿಸಲ್ ಚಂದ್ರಮಂ ।
ಡೆಲಲೀಲೋದಯವಾರ್ಧಿಯಂತೆ ರಭಸಂಬೆತ್ತತ್ತು ರಾಜಾಲಯಂ ॥ ೩೦ ॥

ಕಂ॥ ನೆಗೆದುವು ಮನೆಮನೆದಪ್ಪದೆ ।
ದುಗುಲದ ಕೌಸುಂಭಪಟದ ನೀಲದ ಗುಡಿಗಳ್ ॥
ಸೊಗಿಯಿಸಿ ಬೆಳ್ಮುಗಿಲಂ ಕೆ ।
ಮ್ಮುಗಿಲಂ ಕಾರ್ಮುಗಿಲ ನೆಸಗಲಾರ್ತುವು ನಭದೊಳ್ ॥ ೩೧ ॥

ಕೆದರಿದ ಪಿಷ್ಟಾತಕಚೂ ।
ರ್ಣದೊಳಂ ಪಟವಾಸಚೂರ್ಣದೊಳ ಮುಪ್ಪುದಿಶಾ ॥
ವದನಮುಮಾ ನಭಮುಂ ಪಡೆ ।
ದುದು ನಾನಾವರ್ಣರುಚಿರರಚ್ನಾಚ್ಛವಿಯಂ[1] ॥ ೩೨ ॥

ಮೃಗಮದದ ಯಕ್ಷಕರ್ದಮ ।
ದಗರುವ ಕುಂಕುಮದ ಕದಡುನೀರ್ದಳಿಪದಿ ನೋ ॥
ಲಗಿಸಿದುವು ಸುಟ್ಟಿವ ತಂಗಾ ।
ಳಿಗೆ ನೃಪಗೃಹವೀಥಿ ಬೆರಕೆಗಂಪಿನ ಸೊಂಪಂ[2] ॥ ೩೩ ॥

ತೊಳಗುವ ತಾರಾತತಿ ಮಾ ।
ರ್ಪೊಳೆಯೆ ಮನಂಸೊಳಿಪ ತಿಳಿಗೊಳಂಗಳ ತೆಱಿನಂ ॥
ತಳೆದುವು ಬಲಿಗೆದಱಿದ ವಿಚ ।
ಕಿಳದಲರಿಂ ನೀಲಮಣಿಮಯಪ್ರಘಣಂಗಳ್ ॥ ೩೪ ॥

ಒಸಗೆಮರುಳ್ಗೊಂಡಾಡುವ ।
ವಿಸರುಹವದನೆಯರ ನೂಪುರಂಗಳ ದನಿಯಿಂ ॥
ಕುಸುಮೋಪಹಾರದಳಿಗಳ ।
ರಸಿತಂ ದ್ವಿಗುಣಿಸಿತು ನೃಪಗೃಹಪ್ರಾಂಗಣದೊಳ್ ॥ ೩೫ ॥

---

[1] ನಮುಮುಂ ನಭಮುಂ.....ರಸನಾಚ್ಛಾಯಂ. [2] ನೋಚ್ಛಾಯಂ.

ಕಂ॥ ಹೃದಯಪ್ರಮೋದಮುದಿರಾ ।
ಮುದದಿಂ ಮೆಯ್ಮಱಿದು ಮೇಲುದಂ ಮುಱಿದಿರ್ದಾ ॥
ಡಿದುದು ಪಱಿತಿ ಮಾಣ್ದೊಡಂ ಮಾ ।
ಣದೆ ಮೆಚ್ಚಿದ ತೆಱಿದಿ ನಾಪ್ತವೃದ್ಧಕದಂಬಂ ॥ ೩೬ ॥

ಮ॥ ಎಳಮಿಂಚಂ ಮಣಿತೋರಣಾಂಶು ಮೊಲಿಗಂ ವಾದ್ಯಸ್ವನಂ ನೀರದೋ ।
ಪಳಮುಂ ಪೂವಲಿ ತಳ್ತ ಕಾರ್ಮುಗಿಲ ನುದ್ಯದ್ಧೂಪಧೂಮಂ ನಿರಾ ॥
ಕುಳದಿಂ ಪೋಲ್ತು ಖರಾಂಶು ಪೂಱಿತಿ ಪಟವಾಸಕ್ಷೋದದಿಂ ಕೇಕಿಸಂ ।
ಕುಳ ಮಾಡಿತ್ತು ನಟೀಕದಂಬ[1] ದೊಡವಂದಭ್ರಾಗಮಭ್ರಾಂತಿಯಿಂ ॥ ೩೭ ॥

ವ॥ ಅಂತು ನಿರ್ಭರಪ್ರಮೋದಪರವಶೀಭೂತಪೌರಜನಕ್ಷೋಭಶೋಭಾವಳಂಬಿಯಾದ ನಿಜ ಗೃಹಮುಹೋತ್ಸವಮ ನೀಕ್ಷಿಸುತ್ತು ಮೆಟ್ಟಿಂದು ನೈಮಿತ್ತಿಕನಿರೂಪಿತಶುಭಮುಹೂರ್ತದೊಳನೇಕ ರಕ್ಷಾಪರಿಗ್ರಹಪರೀತಮುಂ ಸಕಳಮಂಗಳಪರಂಪರಾಭಿಜಾತಮು ಮಪ್ಪಭಿನೂತಪ್ರಸೂತಿಕಾನಿಕೇತ ನಮಂ ವೈಶ್ರವಣದ್ವಿತೀಯನಾಗಿ ಪೊಕ್ಕು.

ಚಂ॥ ಎಳವೆಱಿಯಂತೆ ಮಾಣಿಕದ ತಣ್ಪೊಡರಂ ತುದಯಾದ್ರಿಯಿಂದೆ ಮಾ ।
ಗಳೆ ಪೊಱಿವಟ್ಟ ಪದ್ಮಸಖನಂತೆ ತಳತ್ತಳಿಪಂಗಕಾಂತಿಯಂ ॥
ತಳೆದೆನೆದಿರ್ಪ ಬಾಲಕನ ಮುಗ್ಧಮುಖೇಂದುವ ನಂದು ನೋಡಿ ಭೂ ।
ತಳಪತಿ ಮಾಡಿದಂ ಸ್ನಪನಮಂಗಳಮುಂ ನಿಜಹರ್ಷಬಾಷ್ಪದಿಂ ॥ ೩೮ ॥

ವ॥ ಅಂತು ಕಣ್ಣಾಱಿತಿ ನೋಡಿನೋಡಿ ತದಂಗಸಂಗತಶುಭಲಕ್ಷಣಂಗಳುಂ, ದುಂದುಭಿಗಭೀರ ಘೋಷಮುಂ ತನ್ನುಮ ನವಾತ್ಯನಂ ಮನಂಗೊಳಿಸೆ ತಮ್ಮೊಳೋರೊರ್ವರ್ಗೆ ತೋಱಿದ ನಿಧಿಗಂಡ ಬಡವನಂತೆ ಕಡೆಯಿಲ್ಲದುತ್ಸವಕ್ಕೆ ಪಕ್ಕಾಗಿ ತದನಂತರಂ.

ಉ॥ ಎನ್ನಯ ವಂಶ ವಿಸಾರಮಣಿಯಿಂ ಕುಳಸಿಂಧುವಿನಂತಿರವ್ಯವ ।
ಚ್ಛಿನ್ನಮು ಮುದ್ಧಗೋತ್ರಕುಭೃದಾಶ್ರಯಮುಂ ಸುಪವಿತ್ರಜೀವನೋ ॥
ತ್ಪನ್ನವಿಲಾಸಮುಂ ಸಕಲಸತ್ಕವಿಸೇವ್ಯಮು ಮಾದುದೆಂದು ಮು ।
ಯ್ವ ನ್ನಡೆ ನೋಡಿದಂ ಪ್ರಸವಪಾಂಡುರತನ್ವಿಯ ನೊಲ್ದು ನೋಡುತುಂ ॥ ೩೯ ॥

ವ॥ ಆಗಳರಸಿ ಲಜ್ಜಾರಸಮು ನವ್ವುಕೆಯ್ದಿರ್ದುದುಂ ಸಚಿವವಚನೋಪರೋಧದಿಂ ಪೊಱಿಮುಟ್ಟ ನೂನದಾನಸನ್ಮಾನದಿಂ ಪ್ರಸೂತಿಕಾಗೃಹನಿಹಿತನಿಖಿಳಜನಮುಮುಂ, ದೈವಜ್ಞಜನಮುಮುಂ ಮನಮೊ ನೆದು ಮನ್ನಿಸಿ.

ಉ॥ ಕ್ಷ್ಮೋಣಿಯೊಳಿನ್ನರಾರೆನೆ ಜನಂ ಪರಿವಾರಜನಕ್ಕೆ ಬಾಂಧವ ।
ಶ್ರೇಣಿಗೆ ವಂದಿಸಂತತಿಗೆ ವಸ್ತುಗಳಂ ತಣಿವನ್ನ ಮಿತ್ತು ಗೀ ॥
ರ್ವಾಣಕುಜಕ್ಕೆ ಲಕ್ಕೆ ಮಿಗಿಲಾಗಿ ಮಹೀಪತಿಜಾತಕರ್ಮಕ ।
ಲ್ಯಾಣವಿಭೂತಿಯಂ ಪೆಱಿತಿರ್ದ ನುಣ್ಮೆ ಮಹೋತ್ಸವತೂರ್ಯನಿಸ್ವನಂ ॥ ೪೦ ॥

[1] ದೊಡನಂದಭ್ರಾಗಮ.

ವ॥ ಅಂತು ಮೆಱೆದು.

ಮ॥ ಚಿರಸಂಬದ್ಧಚಮೂರುಸಿಂಹಚಯಮುಂ ಕಾಂತಾರಚಕ್ರಕ್ಕೆ ಪಂ ।
ಜರಪಾರಾವತಕೀರಸಾರಿಕೆಗಳಂ ಕೇಳೀವನಾಂತಕ್ಕೆ ಭೀ ॥
ಕರಕಾರಾಗೃಹನಿಷ್ಠಿತಾರಿನೃಪರಂ ಮುನ್ನಾಳ್ವ ದೇಶಕ್ಕೆ ಬಿ ।
ಟ್ಟರಸಂ ರಾಗರಸಂ ಮಿಗಲ್ ಕಱಿಪಿದಂ ಪುತ್ರೋದಯೋತ್ಸಾಹದೊಳ್ ॥ ೪೧ ॥

ವ॥ ತದನಂತರಂ ದೈವಜ್ಞವಿಜ್ಞಾಪಿತದಶಮದಿನದ ಶೋಭನಮುಹೂರ್ತದೊಳೊಸಗೆಯ ನಸದಳಂವಾಡಿ.

ಮ॥ ನಿರುತಂ ಶ್ರೀಗೆ ನಿವಾಸನಪ್ಪ ನಿಧಿರೂಪಂ ತಾನೆ ದೀನಾರ್ಥಿಗ ।
ಪ್ಪ ರಿಪುಪ್ರಾಣಸಮಾರಸಂಹರಣಕೇಳಿಶೀಳ ನಪ್ಪೀತನೊಳ್ ॥
ಕರಮನ್ವರ್ಥ ಮಿದಾದು ಹೆಂದು ವಿಬುಧರ್ ಮೆಚ್ಚಲ್ ಮಹಾಪದ್ಮ ನೆಂ ।
ದರಸಂ ಸೂನುಗೆ ನಾಮಕರ್ಮವ ನತಿಪ್ರಾಗಲ್ಭ್ಯಮುಂ ಮಾಡಿದಂ ॥ ೪೨ ॥

ವ॥ ಆ ಸಮಯದೊಳ್.

ಉ॥ ಅರ್ಥಿಗೆ ಮುನ್ನ ಮೇಂ ತಣಿಸಿದೇನುಮು ನಿತ್ತರೆ ಪೇೞ್ ‘‘ಪರೋಪಕಾ ।
ರಾರ್ಥಮಿದಂ ಶರೀರ’’ ಮೆನಿಪುನ್ನತಿಯಂ ನೆಗೞ್ದಾದ್ಯರಾರೊ ಮು ॥
ತ್ಪ್ರಾರ್ಥಿತಮೆಂದು ಕೌತುಕದಿ ನೀಧರೆ ಬಣ್ಣಿಸೆ ಸೂಱಿಸಿವಿಟ್ಟ ನ ।
ರ್ಥಾರ್ಥಿಗೆ ಪೊನ್ನ ಪುಟ್ಟಿಗೆಯ ರನ್ನದ ರಾಶಿಗಳಂ ಮಹೀಭುಜಂ ॥ ೪೩ ॥

ವ॥ ಅಂತು ಮಂಗಳೋಚಿತಕ್ರಿಯಾನಿವಹಮುಂ ನಿರ್ವರ್ತಿಸಿ ಸುಖದಿ ನಿರೆ.

ಮ॥ ಜನನೀಲೋಚನಕೈರವಕ್ಕತಿವಿಕಾಸಶ್ರೀಯ ನೀಯಲ್ ಸುಹೃ ।
ಜ್ಜನರಾಗಾಮೃತವಾರ್ಧಿಯಂ ಬಳೆಯಿಸಲ್‌ವಿದ್ವಿಣ್ಮುಖಾಬ್ಜಕ್ಕೆ ಕುಂ ॥
ದನೊಡರ್ಚಲ್ ನೆಲದೇೞ್ಗಿವಾಡಿವದ ಕಾಂತಿಸ್ನಿಗ್ಧಮುಗ್ದೇಂದು ವೆಂ ।
ಬಿನ ವಾಳ್ದಂ ಪ್ರತಿವಾಸರೋಪಚಯಮುಂ ಲಂಬಾಳಕಂ ಬಾಲಕಂ ॥ ೪೪ ॥

ಕಂ॥ ಪರಕಲಿಸಿದ ಕಾಡಿಗೆಯಿಂ ।
ತರುಣನ ನಗೆಮೊಗಮು ಮಳಿಗಳೆಱಿಗಿದಹೇವಾಂ ॥
ಬುರುಹದಲರಂತೆ ನೊಗಯಿಸೆ ।
ಪರಿಭವಿಸಿದ ನಂದು ಪೂರ್ಣಶಶಿಮಂಡಲಮಂ ॥ ೪೫ ॥

ಕನಕಾಂಬುಜಕುಟ್ಮಲಮಧು ।
ವ ನಲಂಪಿಂ ನಲಿದು ಪೀರ್ವ ನವಮಧುಕರನಂ ॥
ನೆನೆಯಿಸಿದ ನಂದು ಜನನೀ ।
ಸ್ತನರಸಸುಖವಾನಲೀನಲಂಪಟರಸನಂ ॥ ೪೬ ॥

ಕಂ॥ ಅವಿದೊಳಗೆ ಜಿನುಗು ವಳಿಗಳ ।
ರವಮುಂ ಗೆಡೆಗೊಂಡು ಗರ್ಭರಜಮುಂ ಪೊಱಸೂ ॥
ಸುವ ಕಮಳ ಮೆನಿನಿ ಮೊಗ ಮು ।
ತ್ಸವದ ತೊದಳ್ನುಡಿದು ಬೀಱ್ದಿದಂ ಬಿಱಿನಗೆಯುಂ ॥ ೪೩ ॥

ದರಹಾಸಲತೆಯ ಬೀಜೋ ।
ತ್ಕರ ಮೆನೆ ದರಹಾಸಲಹ್ಮಿ ತಾಳ್ದಿದ ಮುಕ್ತಾ ॥
ಭರಣ ಮೆನೆ ನಗೆಗಳೊಗೆದಿರೆ ।
ಸುರತರುವಿನ ಸಸಿ ಮುಗುಳ್ತು ದೆನಿಸಿದ ನೆನಸುಂ ॥ ೪೪ ॥

ರಕ್ಕೆವಣಿ ಪುಲಿಯುಗುರ್ ಪಸು ।
ವ್ರೊಕ್ಕುಳಿ ಪೊಂಗೆಜ್ಜೆ ಕಡೆಗ ಮುಡೆವಣಿ ಮಾಂಗಾಯ್ ॥
ಮೊಕ್ಕಳಗಾಡಿಗೆ ಜಡೆ ನೊಡೆ ।
ರ್ವಕ್ಕಿನ ಬೊಟ್ಟಿಂಬ ಬಾಳೆವಚ್ಚದಿ ನೆನೆದಂ ॥ ೪೫ ॥

ಚಂ॥ ತನಗಧಿನಾಥ ನೆಂಬ ಪದಪಿಂ ದೆರ್ದೆಯೊಳ್ ಮಹಿಕಾಂತೆ ನೆಟ್ಟನೀ ।
ತನ ನಿರಿಸಿಟ್ಟ ಳೆಂಬಿನಿಗ ಮಾತ್ಮತನುಪ್ರತಿಬಿಂಬಡಂಬರಂ ॥
ವಿನಿಹಿತರತ್ನ ಕುಟ್ಟಿಮದೊಳೊಪ್ಪೆ ತಳರ್ನಡೆದಾಡಿ ಚೆನ್ನಚೆ ।
ನ್ನನೆ ನಡೆತಪ್ಪ ದಾದಿಯರ್ಗೆ ಮಾಡಿದ ನಾತ ನತಿಪ್ರಮೋದಮುಂ ॥ ೪೦ ॥

ವ॥ ಅದಲ್ಲದೆಯುಂ.

ಚಂ॥ ಉಡೆವಣಿಗಟ್ಟುವಂದೆ ರಿಪುದಂತಿಘಟಂ ಮದವೆತ್ತಿ ಕಟ್ಟಿ ದ ।
ಟ್ಟಡಿಯಿಡುವಂದೆ ವೈರಿಧರೆ ಗೋಳಿಡೆ ತೊಟ್ಟಿಲ ನೇಱುವಂದೆ ಮಾ ॥
ರ್ದಡೆ ಗಿರಿದುರ್ಗಮೇಱಿ ತೊದಳಂ ನುಡಿವಂದೆ ವಿರೋಧಿ ಕಪ್ಪಮುಂ ।
ನುಡಿಯೆ ಜಗಕ್ಕೆ ಬಾಲ್ಯದೊಳೆ ಸೂಚಿಸಿದಂ ಶಿಶು ತೀವ್ರತೇಜಮುಂ ॥ ೪೧ ॥

ವ॥ ಅಂತೆನಿಸಿ ನೆಗಟ್ದಿ ಶತ್ರುಶಾಸನಂಗನ್ನ ಪಪ್ರಾಶನಮುಂ, ಬಂಧುಜನವರ್ಧನಂಗ ವರುಮವರ್ಧನಮುಂ, ಭುವನಚೂಡಾಭರಣಂಗೆ ಚೂಡಾಕರಣಮುಂ, ಮೊದಲಾದ ಸಮುಚಿತಕ್ರಿಯೆಗಳಂ ಯಥಾಕಾಲದೊಳ್ ಮಹೀಪಾಲಕಂ ಮಾಡಿಸಿ ತದನಂತರಂ ಕ್ರಮಕ್ರಮದಿ ನಂತಃಪುರಪ್ರಚಾರವಾಸೇವ್ಯ ವೃತ್ತಿ ಸಮನಿಸೆ.

ಕಂ॥ ಸಹಪಾಂಸುಖೇಳರೆನಿಸಿದ ।
ಬಹುನೃಪದಾರಕರ ನಡುವೆ [1] ದಾಸೇರಕರಿಂ ॥
ಪ್ರಹಿತಮಣಿಕನಕಮಂಡನ ।
ಸಹಿತಂ ಮಾರ್ಗಜಱಿ ನೂಂಕಿ ಪೊಕ್ಕುಪವನಮುಂ ॥ ೪೨ ॥

[1] ದಾಸೀಕರರೇಂಗೃಹಿತ ?

ಚಂ॥ ತಿಳಿಗೊಳನಂ ವಿರೋಧಿಜಲದುರ್ಗ ಮಿದೆಂದು ಕಲಂಕಿ ಪಂಕಜಂ।
ಗಳ ನವಿಧೇಯವೀರಶಿರ ಮೆಂದು ಕಿಮುಟಿಚ್ಚಿ ಮೃಣಾಳಿಮಂ ಖಳ॥
ರ್ಕಳ ಕರುಳೆಂದು ಕಿಟ್ಟು ಜಳಪಕ್ಷಿಯ ನನ್ಯಕುಟುಂಬ ಮೆಂದಸುಂ।
ಗೊಳೆ ನೆಱಿತಿಗೆಯ್ದು ಸೂಚಿಸಿದ ನೇರ್ವೆಸನಂ ಶಿಶು ಬಾಲಕೇಳಿಯೊಳ್ ॥ ೫೩ ॥

ವ॥ ಅಂತಗಣ್ಯತಾರುಣ್ಯಲಕ್ಷ್ಮ್ಮಿಯಂ ತಳೆದು ಗುರುಜನದ ಪರಿಜನದ ಮನಮೆಂಬ ನಿಮ್ನಗೆಯಿಂ ದತಿಬಹುಳವೋಹರಸಮು ನೋರಂತೆ ತೀವಿ ಕಱಿವ [1]ನೀರ್ವಂದ ನೀರಧರ ವೆನಿಸಿ ತತ್ಕುಮಾರ ನಿರ್ಪನ್ನೆಗಂ.

:

ಮ॥ ದ್ವಿರದಾರೋಹಣಯೋಗ್ಯವೀಥಿ ಹಯವೈಹಾಳಿಪ್ರದೇಶಂ ನಿರಂ।
ತರಶಸ್ತ್ರಶ್ರಮಭೂಮಿ ಶಾಸ್ತ್ರಸಮಿತಿವ್ಯಾಖ್ಯಾನಶಾಲಾಪರಂ॥
ಪರೆ ಸುತ್ತಿರ್ಪಿನೆಗಂ ನೃಪಂ ನಿಜಸುತಂಗಾನಂದದಿಂ ಮಾಡಿಸಲ್।
ಕರ ಮೊಪ್ಪಿತ್ತು ಸಲೀಲಕೇಳಿವನದೊಳ್ ವಿದ್ಯಾಮಹಾಮಂಡಪಂ ॥ ೫೪ ॥

ವ॥ ಆ ಮಹೀಮಂಡನಾಯಮಾನಮಂಟಪಕ್ಕೆ ಪದ್ಮರಾಜಂ ನಿಜತನೂಜ ನಪ್ಪ ಲೋಕೈಕಮಿತ್ರನಂ ವೈಶ್ರವಣಪುತ್ರ ನಪ್ಪ ಚಿತ್ರಭಾನುವೆರಸು ಮುಂಗಳಾನಕರಹಂಗಳೆಸೆಯೆ ಶುಭಮುಹೂರ್ತದೊಳೊಂದುದಿವಸಂ ಮುಂದಿಟ್ಟೊಡಗೊಂಡು ಬಂದು ಸಕಳವಿದ್ಯಾದೇವತಾಪೂಜೆಯು, ನಖಿಳವಿಘ್ನಾಚಾರ್ಯಪೂಜೆಯುಮುಂ ನಿರ್ವರ್ತಿಸಿ ವಿದ್ಯಾಪ್ರಾರಂಭದೊಳ್ ನಿಯೋಜಿಸಿ.

ಕಂ॥ ಮನ ಮೆಳಸಿದಾಗಳಲ್ಲಿಗೆ।
ವನಮಾಳಿಕೆವೆರಸು ವಿರಳಪರಿಜನವೃತ ನಿಂ ॥
ಬೆನೆ ಬಂದು ನಿಚ್ಚನಿಚ್ಚಂ।
ತನಯನುಖಾಲೋಕಸುಖಮು ನೆಯ್ದುತ್ತಿರ್ದಂ ॥ ೫೫ ॥

ವರಗುರು ತನ್ನಂ ಸುವ್ದಗೆ।
ವರೆಯಿಸೆ ಮೂಱನೆಯ ತಾಣದೆರಡಕ್ಕರಮುಂ ॥
ಸ್ವರದೊಳ ಮುಂತಸ್ದೆಯೊಳಂ।
ಬರೆಯನೆ ವಿತರಣವಿನೋದ ನದ ನೇಕಱಿವಂ ॥ ೫೬ ॥

ಗುರುಮುಖದೊ ಳಾಕುಮಾರಂ।
ಪರಿವಿಡಿಗೆಯ್ದುಪ ನತೀತಜನ್ಮಾಭ್ಯಾಸ ॥
ಸ್ಫುರದಖಿಳವಿದ್ಯೆಗಳ ನೆನೆ।
ಪರಿಣಮಿಸೆ ಕಳಾಕಳಾಪ ಮತಿಪಟು ವಾದಂ ॥ ೫೭ ।

[1] ನಿರ್ವಾದ.

ವ॥ ಆಗಿ.

ಕಂ॥ ಲಿಪಿ ಶಬ್ದಶಾಸ್ತ್ರ ಮಭಿಧಾ ।
ನಪರಂಪರೆ ನಾಟಕಪ್ರಯೋಗಂ ಕಾವ್ಯಂ ॥
ನೃಪನೀತಿ ಜೋಯಿಸಂ ರ ।
ತ್ನಪರೀಕ್ಷೆ ವಿಷಾಪಹರಣ ಮಾಯುರ್ವೇದಂ ॥ ೪೪ ॥

ಮ॥ ಬರೆಪಂ ಬಾಜನೆ ಗಂಡೆಯುಕ್ತಿ ಗಣಿತಂ ಗಂಧರ್ವ ಮಾಖ್ಯಾನಕಂ ।
ಭರತಾಭ್ಯಾಸ ಮಿಭೇಂದ್ರಶಿಕ್ಷೆ ಹಯಶಾಸ್ತ್ರಂ ಸೂಪಶಾಸ್ತ್ರಂ ನಪೀ ॥
ತರಣಂ ತಾವನ ಮಿಂದ್ರಜಾಲ ಮೆಱಿಕಂ ಲೆಪ್ಪಂ ಶಿಲಾಕರ್ಮ ಮು ।
ತ್ಕರಣಂ ಚಿತ್ರವಿನಕ್ಷೆ ವಾಸ್ತು ಶಕುನಜ್ಞಾನಂ ರಥಾರೋಹಣಂ ॥ ೪೯ ॥

ಕಂ। ಸ್ಮರಮಂತ್ರಂ ಬಹುಭಾಷಾ ।
ವರಿಚಿತಿ ಯಂತ್ರಪ್ರಯೋಗ ಮಖಿಲವ್ಯೂಹೋ ॥
ತ್ಕರ ಮೆಂಬಿನಿತಱಿಶೊಳಂ ಬ ।
ಲ್ಲರೆಲ್ಲರುಂ ಮೆಚ್ಚೆ ಪಡೆದ ನತಿಕೌಶಲಮುಂ ॥ ೫೦ ॥

ವ॥ ಅದಲ್ಲದೆಯುಂ.

ಕಂ॥ ಕರವಾಳ ಕಣೆಯು ಕಂಪನ ।
ಪರಶು ಶರಾಸನ ಮುಸುಂಡಿ ಮುಸಲ ಗದಾ ತೋ ॥
ಮರ ಶಂಕು ಶಕ್ತಿ ಚಕ್ರ ।
ಚ್ಛುರಿಕಾದ್ಯಾಯುಧದೊ ಳಧಿಗತಶ್ರಮ ನಾದಂ ॥ ೫೧ ॥

ವ॥ ಆಗಿ ಕೀರ್ತಿಪತಾಕ ನಗಣ್ಯಪುಣ್ಯಲಹ್ಮೀಸದನವಕ್ಷಸ್ಥಳವುರುಸಪುರುಷೋತ್ತಮ ಸರ
ಸ್ವತೀಕರ್ಣಪೂರ ಸತ್ಯರಾಧೇಯ ಗಂಭೀರನೀರಾಕರ ಕದನಕಂಠೀರವ ಪ್ರಭುಕುಲೈಕರೋಧೋ
ಮಣಿ ಯೆಂಬ ಗುಣನಾಮಂಗಳಂ ವಿವಿಧವಿದ್ಯೋಪಾಧ್ಯಾಯರ್ಕಳತ್ತಣಿಂ ಪೆತ್ತು ನೆಗಟ್ಟಿವಡೆದ
ಮಹಾಪದ್ಮನೊಡನೆ ಕೂಡಿ.

ಕಂ॥ ಪರಿಣತಿವಡೆದಂ ವಿದ್ಯಾ ।
ಪರಿಕರದೊಳ ಮಾತ್ಯಸುತನು ವಿದು ಚೋದ್ಯಮೆ ಪೇೞ್ ॥
ಧರೆಯೊಳ್ ಪದ್ಮಜ ನೊಡನನ ।
ವರತಕೃತಾಭ್ಯಾಸ ನಾದ ವಿಭು ವೆಂಬಿನಿಗಂ ॥ ೫೨ ॥

ವ॥ ಅಂತು ಪದ್ಮರಾಜಪುತ್ರಂಗೆ ಚಿತ್ರಭಾನು ಸಮವಿದ್ಯನಾದ ನಲ್ಲದೆಯುಂ.

ಕಂ॥ ಎಳವೆಯೊಳಂ ಭಕ್ತಿಯೊಳಂ ।
ಬಲುವಿಡದೆ ನೆಲೆಲ್ವೊಲಿರ್ಪ ಸಂಗತಿಯೊಳ ಮೊ ॥
ಳ್ಪಲುಬಯದೆ ಬಗೆಗೊಂಡಂ ಮನ ।
ದಳಿಪಿನ ಸಖನಾಗಿ ಭವ್ಯಚೂಡಾಮಣಿಯಂ ॥ ೬೩ ॥

ಕೌತುಕಮೆಂ ಕೇವಳಮೇ ।
ಪ್ರೀತಿ ಮಹಾಪದ್ಮಚಿತ್ರಭಾನುಗಳೊಳ್ ಶ್ರೀ ॥
ಹೇತು ವದು ಚಕ್ರವರ್ತಿವಿ ।
ಭೂತಿಗೆ ಮೊದಲದು ನಿರಸ್ತದೋಷ ಮುದೆಂತುಂ ॥ ೬೪ ॥

ವ॥ ಎಂಬಿನ ಮುಂತವರ್ಗಳಿರ್ವರುಂ ಸಕಳಕಳೆಯುಮುಂ ಕೆಳೆಯುಮು ನೊಡನೊಡನೆ ಬಳೆಯಿಸುತ್ತ ಮಿರ್ಪಲ್ಲಿ·—

ಉ॥ ಜೊನ್ನದ ರಾತ್ರಿ ನೇತ್ರಕುಮುದ ಕ್ಕಿನನಂಶು ಮುಖಾಂಬುಜಕ್ಕೆ ತೈ ।
ಲ ನ್ನವಕಾಂತಿದೀಪಿಕೆಗೆ ಕಾವ್ರ್ಯುಕದೇಟಿಸ್ಗಿ ಶಿರೋಜಕೇಕಿ ಗು ॥
ತ್ಪನ್ನವಸಂತ ಮುಂಗಲತೆ ಗುಗ್ರಮುದಂ ಭುಜದರ್ಪದಂತಿ ಗೆಂ ।
ಬನ್ನಿಗ ವಂದು ತಂದುದು ಕುಮಾರನ ಜವ್ವನ ದೇಟಿಸ್ಗಿ ಲೀಲೆಯಂ ॥ ೬೫ ॥

ಮ॥ ತರುಣೀಮೋಹನಮಂತ್ರಮುಂ ಮನಸಿಜಂ ಕಸ್ತೂರಿಕಾಪಂಕದಿಂ ।
ಬರೆದಂತಿರ್ದುವು ಬರ್ಪ ವಿಾಸೆ ವಿಜಯಶ್ರೀಯಂ ಬಹುಕ್ಷತ್ರವು ॥
ತ್ರರ ಸುತ್ತಿಂಗೊಳಗಾಗದಿರ್ದಱಿಕೆಯಿಂ ಸುತ್ತಲ್ಕೆ ನೀಟ್ಟಿಂತೆ ಬಿ ।
ತ್ತರದಿಂ ದೀರ್ಘತರಂಗಳಾದುವು ಭುಜಂ ಸೌಂದರ್ಯಕಂದರ್ಪನಾ ॥ ೬೬ ॥

ಮ॥ ವಿಳಸನ್ಮಜ್ಜನಪೀಠ ಮಾದುದು ಜಿನಂ ಗೆಂಬೊಳ್ಪಿನಿಂ ಪೆರ್ಮೆಯಂ ।
ತಳೆದತ್ತಲ್ಲದೊಡಂತದೆನ್ನೊ ಳಿಣೆಯೇ ಸನ್ಮಿತ್ರರಾಜಭ್ರಮಾ ॥
ಕಳಿತಂ ನಂದಿತಗೋತ್ರವೈರಿ ಯೆನುತುಂ ಹೇಮಾಚಳಶ್ರೀಶಿಲಾ ।
ತಳಮುಂ ಮೆಚ್ಚಿಯು ಮುಂದು ಮೆಚ್ಚದೆ ಬೃಹದ್ವಕ್ಷಂ ಮಹಾಪದ್ಮನಾ ॥ ೬೭ ॥

ವ॥ ಅಂತು.

ಮ॥ಸ್ರ॥ ಘನಕೇಶಂ ಪೂರ್ಣಭಾಳಂ ಕುವಲಯನಯನಂ ತುಂಗಘೋಣಂ ಗಭೀರ ।
ಧ್ವನಿ ಸೂಕ್ಷ್ಮಶ್ಯಾಮಶ್ಮ ಬಿಂಬಾಧರ ವಲಿಕರಿಣಸ್ಕಂಧ ವಕ್ಷೋಣವಕ್ಷಂ ॥
ತನುಮಧ್ಯಂ ದೀರ್ಘಬಾಹುದ್ವಯ ಮರುಣನಖಂ ರಮ್ಯರಂಭೋರು ವಂಭೋ ।
ಜನಿಭಕ್ತ್ಯೇಪಾದ ಮುಂತಂತೆಸೆಯೆ ನೃಪಸುತಂ ನೋಡೆ ಕಣ್ಗೆಡ್ಡ ಮಾದಂ ॥ ೬೮ ॥

ಚಂ॥ ಮನಮೊಸೆದಾ ಕುಮಾರನ ವಿಳಾಸಮು ನೊಯ್ಯನೆ ಕಂಡ ವಾರಿಜಾ ।
ನನೆಗೆ ಮುರಾಳೆಗಾಮಿನಿಗೆ ವಿಾನನಿಭಾಕ್ಷಿಗೆ ಸಾರಸೀಕಳ ॥
[1]ಸ್ವನೆಗೆ ರಥಾಂಗತುಂಗಕುಚೆ ಗುತ್ಪಲಗಂಧಿಗೆ ಸೀಮೆ ಯಾಯ್ತು ಜೀ ।
ವನದಭಿಲಾಷೆ ಕಂತುಪರಿತಾಪದೊಳಿಂತಿದು ಚಿತ್ರ ಮೆಂಬಿನಂ ॥ ೬೯ ॥

ಚಂ॥ ಪರನೃಪಮುಂಡಳಕ್ಕೆ ಭಯಮುಂ ರಮಣೀನಿವಹಕ್ಕೆ ಕಾಮುಕಾ ।
ತರತೆಯ ನಂಗಜಂಗೆ ಮದಮುಂ ಜನದೃಷ್ಟಿಗಪೂರ್ವ ತುಷ್ಟಿಯಂ ॥
ಸರಸಕವೀಂದ್ರಜಿಹ್ವೆ ಗಭಿವರ್ಣನಕಾಂಕ್ಷೆಯ ನಿತ್ತ ನಂದು ಬಿ ।
ತ್ತರಿಸೆ ಸನತ್ಕುಮಾರನಳಕೂಬರಕಂತುನಿಭಂ ನೃಪಾತ್ಮಜಂ ॥ ೭೦ ॥

ವ॥ ಅಂತು ವಿದ್ಯಾಲಕ್ಷ್ಮಿಯೊಡನೆ ತನಗೆಳಸಿದರ್ದ ನವಯೌವನಲಕ್ಷ್ಮಿಯು ಸಮಾಯೋಗ ದೊಳ್ ಸವಿಲಾಸರೂಪವಿಭ್ರಮನುಂ ಸಹಜಾತಸೌಭಾಗ್ಯನುಂ ಸಮಗ್ರತ್ವಾವಲಂಬನುಂ ಸಾಶ್ಚರ್ಯ ಶೌರ್ಯಾವಲೇಪನು ಮಾದ ಕುಮಾರನಂ ನೀತಿರತ್ನಾಕರಾವನೀಶ್ವರಾದೇಶದಿಂದ ವೊಂದುದಿವಸ ಮಖಿಲವಿದ್ಯಾಚಾರ್ಯರಾ ಮುಂದಿಟ್ಟೊಡೆಗೊಂಡು ಬರ್ಪುದುಂ ಪಂಜರವಿಮುಕ್ತ ಕುಂಜರಾರಾತಿ ಯಂತೆ ಮುಂಟಪದಿಂ ನೃಪನಿವಾಸಕ್ಕೆ ಬಂದು ಸಭಾಸದನಮುಂ ಪೊಕ್ಕು.

ಕಂ॥ ತನಗಹಮಿಕೆಯಿಂ ದಿರದೆಱ ।
ಪ ನೃಪಾಳರ ಮೌಳಿಮಾಳೆ ಕುಟ್ಟಿಮಸಂಘ ॥
ಟ್ಟನದಿ ನತಿಮುಖರ ಮಾಗಿ ।
ರ್ಪಿನಿಗಂ ನಾರ್ತಂದು ತಂದೆ ಗವನತ ನಾದಂ ॥ ೭೧ ॥

ವ॥ ಆಗಿ ದೌವಾರಿಕದತ್ತಕನಕವಿಷ್ಟರಮು ನಗಲೆ ನೂಂಕಿ.

ಮ॥ ವಿನಯಂಗುಂದದೆ ಪಾದಸೀರತಳದೊಳ್ ಕುಳ್ಳಿರ್ಪ ಲೋಕೈಕಮಿ ।
ತ್ರನ ನೊತ್ತಂಬದಿ ನೆತ್ತಿ ನೇತ್ರಯುಗದಿಂ ದಾನಂದಬಾಷ್ಪಾಂಬು ಝು ॥
ಮ್ಮನುಗಲ್ ನೀ ನೆಮಗಿನ್ನು ವಮ್ಮ ಪಸುಗೂಸೆಂದಪ್ಪಿ ಬಾಯ್ವಾಯೊಳಿಂ ।
ಬಿನೆ ತಾಂಬೂಲಮು ನಿಕ್ಕಿ ಪೊಣ್ಮೆ ಪುಲಿಕಂ ಮುಂಡಾಡಿದಂ ಭೂಭುಜಂ ॥ ೭೨ ॥

ವ॥ ತದನಂತರಂ ನಿಜಪಾದಪೀಠಘಟಿತೋತ್ತಮಾಂಗನಾದ ಚಿತ್ರಭಾನುವಂ ಪುತ್ರನಿರ್ವಿಶೇಷ ವೋಹದಿಂದ ಮಾದರಿಸಿ ತತ್ಸಮಯದೊ ಳವಮಾತ್ಯವೈಶ್ರವಣಂಗೆ ಪೊಡವಡಿಸೆ ಪೊಡವಟ್ಟು ತದಾಶೀ ರ್ವಾದಜನಿತಪ್ರಮೋದ ನಾಗಿ.

ಚಂ॥ ಅವಿಕಳರಾಜ್ಯಸಿಂಹದರಡುಂಕುಡುದಾಡೆವೊಲಿರ್ದ ಭೂಪಮೈ ।
ಶ್ರವಣತನೂಜರಿರ್ವರು ಮಖಂಡಿತವೃದ್ಧಿಯಿ ನಿರ್ವರುಂಕಳಾ ॥
ನಿವಹದಿ ನಿರ್ವರುಂ ಲಲಿತಯೌವನಲೀಲೆಯಿ ನಿರ್ವರುಂ ಗುಣ ।
ದ್ರವಿಣದಿ ನಿರ್ವರುಂ ವಿನಯದಿಂ ಸಭೆಗುತ್ಸವಮಂ ನಿಮಿರ್ಚಿದರ್ ॥ ೭೩ ॥

[1] ಧ್ವನಿಗೆ.

ವ॥ ಅನಂತರಂ ಜನತಾನುಮತದಿ ನಾರ್ಯಕುಳಪರಿಜನಪರೀತ ನಾಗಿ ಬಂದು ಮುನ್ನೆ ತನ್ನ ಬರವಿಂಗೆ ವಿರಚಿಸಿದ ಮಾಂಗಲ್ಯಪರಿಕರದಿ ನೊಪ್ಪುವಂತಃಪುರಮುಂ ಪುಗುವುದು ಮಾಸಮಯದೊಳ್ ವನಮಾಳಿಕಾಮಹಾದೇವಿ.

ಕಂ॥ ಎನ್ನಯ್ಯ ನೆನ್ನ ಮದಗಜ ।
ನೆನ್ನಾಳ್ದಂ ಬಂದ ನೆಂದು ಮುದದಿಂ ದಿದಿರ್ವಂ ॥
ದುನ್ನತನೃಪಾಂಗನಾವೃತೆ ।
ಮನ್ನಿಸಿ ತಳಿದಳ್ ಸುತಂಗೆ ಶೇಷಾಕ್ಷತೆಯಂ ॥ ೭೪ ॥

ವ॥ ಅಂತು ಸೇನೆಯಿಕ್ಕಿ ನಿಜಪಾದಾರವಿಂದದ್ವಂದ್ವಮುಂ ಚಳಾಳಕಮಧುವ್ರತಂಗಳಿ ನಳಂಕರಿಸಿರ್ದ ಚಿತ್ರಭಾನುಮಿತ್ರನಂ ಪರಮಪರಿತೋಷದಿಂ ಪರಸಿ.

ಕಂ॥ ನೆಲೆವೊಲೆಯಿಂ ಕ್ಷೀರಂ ಕ ।
ಣ್ಮರಿಂ ಬಾಷ್ಪಾಂಬು ಪೊಣ್ಮೆ ಪುಲಿಕಸ್ವೇದಾ ॥
ರ್ದ್ರಲತಾಂಗಿ ತನಯನಂ ನಲಿ ।
ನಲಿ ದಟ್ಟಿಲಿಶಿರೊ ಳಪ್ಪು ತಣಿದ ಳಿಲ್ಲಾಕ್ಷಣದೊಳ್ ॥ ೭೫ ॥

ವ॥ ಅಲ್ಲಂ ಬಲಿಕ್ಕ ಮಾತ್ಮಾಂಬಿಕಾದೇಶದಿಂದ ಮಖಿಳಜನನೀಜನಂಗಳ ನಿವಾಸಂಗಳ್ಗೆ ಪೋಗಿ ಪೊಡವಟ್ಟು ವರಕೆವೆರಸು ಸೇನೆಗೊಂಡಂತಃಪುರನಿಷ್ಕ್ರಾಂತ ನಾಗಿ ಸರಸ್ವತೀಕರ್ಣಪೂರಂ ಬಂದು.

ಮು॥ಸ್ರ್ಗ॥ ತನಗೆಂದುರ್ವೀಶ್ವರಂ ಮುನ್ನಮೆ ಸಮೆಯಿಸಿ ದುತ್ಕೃಷ್ಟಕೋಷ್ಠಾಂತರೋದ್ಯಾ ।
ಸಿ ನಿಶುಂಭಚ್ಚಂದ್ರಶಾಲಾಮಣಿಮಯವಿಲಸತ್ಪುತ್ರಿಕೋತ್ಸಂಭಿತಸ್ತಂ ॥
ಭನಿಕಾಯಂ ಚಿತ್ರಭಿತ್ತ್ಯಾಸ್ಥಿತಯುತ ಮಥಿಕೃತೊತ್ತೀರಣಾಭಂ ಕನತ್ಕಾಂ ।
ಚನಚೂಡಂ ಮಾಡ ಮೊಪ್ಪುತ್ತಿರೆ ಗೃಹಸಚಿವಪ್ರೇರಿತಂ ಪೊಕ್ಕ ನಾಗಳ್ ॥ ೭೬ ॥

ವ॥ ಪೊಕ್ಕು ತದನಂತರೋದ್ದೇಶನಿಹಿತಚಂಚದ್ರತ್ನಪರ್ಯಂಕಿಕಾಪ್ರದೇಶಮು ನಲಂಕರಿಸಿ ಭವನಪ್ರವೇಶಮಾಂಗಲ್ಯಶೇಷಾಕ್ಷತಂಗಳಂ ತಳಿದು ತದನಂತರಂ ಮಜ್ಜನಭೋಜನಾದಿದಿವಸವ್ಯಾಪಾರಂಗಳಂ ತೀರ್ಚಿಸಿ ನಿಜಪಿತೃಸಮರ್ಪಿತಸಮಗ್ರಕುಳರೂಪವಿಭವವಿದ್ಯಾವಿಳಾಸಚಾತುರ್ಯವರ್ಯರಪ್ಪ ನೃಪಕುಮಾರಕರೆ ಸತತಸನ್ನಿಹಿತಪರಿವಾರ ಮಾಗೆ.

ಮು॥ ಕವಿತಾಗೋಷ್ಠಿಯೊ ಳಾದಿರಾಜಕಥೆಯೊಳ್ ತತ್ತೋಕ್ತಿನಿರ್ಣೀತಿಯೊಳ್ ।
ನವಸಂಗೀತಕಸಂಗದೊಳ್ ವನಜಳವ್ಯಾಯಾಮದೊಳ್ ಮನ್ಮಥೋ ॥
ತ್ಸವದೊಳ್ ಕಂದುಕಕೇಳಿಯೊಳ್ ಮಹಿಷಮಲ್ಲದ್ವಂದ್ವಯುದ್ಧಾವಲೋ ।
ಕವಿನೋದಂಗಳೊ ಳೆಯ್ದಿ ಪೊಪ್ಪಿ್ತಗಳೆವುತ್ತಿರ್ದಂ ನರೇಂದ್ರಾತ್ಮಜಂ ॥ ೭೭ ॥

ವ॥ ಅಂತಿರ್ಪುದು ಮೊಂದುದಿವಸಂ ಪದ್ಮರಾಜಂ ತನೂಜಂಗೆ ಯುವರಾಜಪಟ್ಟಬಂಧಮುಂ ಮಾಡಲ್ ಮನಂದಂದು ಸಮಾಳೋಚಿತಸಚಿವಸಂದೋಹ ನಾಗಿ ಮಾಂಗಲ್ಯಮುಂಟಪಮುಂ ಗೃಹಮುಹ ತ್ತರಂಗೆ ಬೆಸಸಿ ಸಮೆಯಿಸುವುದುಂ.

ಉ॥ ಸುತ್ತಿದ ಚಿತ್ರಕಾಂಡಪಟ ಮಿಕ್ಕಿದ ಮಂಗಳವೇದಿ ಕಂಬದೊಳ್ ।
ಪತ್ತಿದ ಪೊನ್ನ ವುತ್ಥಳಿ ತೊಡರ್ಚಿದ ಮುತ್ತಿನ ಸೂಸಕಂ ತಗು ॥
ಳ್ದೆತ್ತಿದ ತೋರಣಂ ವುದಿದ ಪೂವಲಿ ತಳ್ತ ವಿತಾನವಿಸ್ತರಂ ।
ಚಿತ್ತದ ಜಾಗ ಮುಜ್ಜಳಿಪ ಕನ್ನಡಿ ತೀವಿ ಪೊದಟ್ಟಿ ಪೊಂಗೊಡಂ ॥ ೭೪ ॥

ಕಂ॥ ಒಸಗೆವಱಿ ಸರ್ವಧಾನ್ಯಂ ।
ಮೊಸರಣ್ಕೆ ಕಱುಂಕೆ ರಂಗವಲಿ ಭೃಂಗಾರಂ ॥
ಪಸೆ ರನ್ನಪ ನೊಡರೆಂಬಿವ ।
ಱಿಸಕಂ ಕಣ್ಗೊಳಿಸುತಿರ್ದು ವಾಮಂಟಪದೊಳ್ ॥ ೭೯ ॥

ವ॥ ತದನಂತರಂ ಮೌಹೂರ್ತಿಕೋಪದಿಷ್ಟಶುಭಮುಹೂರ್ತದೊ ಳನೇಕಶಂಖಕಹಳಾಮೃ ದಂಗಭೇರೀಕಾಂಸ್ಯತಾಳರವರಭಸಮು, ಮಾರ್ಯಜನಮುಖೋಚ್ಚಾರ್ಯಮಾಣಮುಂಗಳವಚೋ ನಿಚ ಯಮು, ಮತಿಋಹಳಕುಸುಮಫಳ ಹಸ್ತವಿಸ್ತಾರಿವಾರನಾರೀಸಮೂಹಮುಂ, ವಿಚಿತ್ರಪಾತ್ರನೃತ್ಯ ವರ್ತನಮು ಮೆಸೆಯೆ ಮಹಾಮಂತ್ರಿ ವೈಶ್ರವಣ ನೊಡಂಗೊಂಡು ತರ್ಪುದುಂ.

ಮ॥ ಜನಕಾದೇಶದೆ ಬಂದ ನಲ್ಲಿಗೆ ಕುಮಾರಂ ಪಕ್ವಬಿಂಬಾಧರಂ ।
ತನಿಗೆಂಪಿಂ ಕಿಸುಸಂಜೆಯುಂ ಕೆದಱಿ ಲಾವಣ್ಯಾಮೃತಂ ಲೋಕಲೋ ॥
ಚನಮುಂ ತೇಂಕಿನೆ ಮುತ್ತಿನೊಳ್ದೊಡವುಗಳ್ ಬೆಳ್ದಿಂಗಳಂ ಬೀಱಿ ಯೌ ।
ವನದರ್ಪಂ ಸ್ಮರನಂ ಮಗುಟಿಶ್ಚಿ ಘನತೇಜಂ ತಿಟ್ಟಿ ತಿಗ್ಮಾಂಶುವಂ ॥ ೮೦ ॥

ವ॥ ಆಗಳನೇಕಮೂರ್ಧಾಭಿಷಿಕ್ತಮಂಡಳಿಕಮಂಡಳೀಪರಿವೃತ ನಾಗಿ ಪದ್ಮರಾಜ ನಾರಾಜ ವಿದ್ಯಾವಿಳಾಸನಮಂಗಳಾನಕರವಂಗಳಿನೆಯೆ ಕಮನೀಯಕಲ್ಯಾಣಪೀಠನಿಷ್ಠಿತನಂ ಮಾಡಿ.

ಮ॥ ಸವಸವೌಷಧಿಸರ್ವರತ್ನಪರಿಮಿಶ್ರಾಶೇಷತೀರ್ಥಂಬು ಪೂ ।
ರ್ಣವ ನುತ್ಸಾಹದಿ ನೆತ್ತಿ ಪೊಂಗಳಸಮುಂ ಹರ್ಷಾಶ್ರುಗಳ್ಕೂಡೆ ಪೊ ॥
ಣ್ಮುವಿನಂ ಮಾಡಿದ ನಾತ್ಮಮಂತ್ರಿಜನಯುಕ್ತಂ ಯೌವರಾಜ್ಯಾಭಿಷೇ ।
ಕವ ನಾನಂದಿತಮಿತ್ರಲೋಕಮು ನತಿತ್ರಸ್ತಾಹಿತಾನೀಕಮುಂ ॥ ೮೧ ॥

ವ॥ ತದನಂತರಮಿಂಗಡಲ ತೆರೆಯ ದೊರೆಯ ದುಕೂಲದೊಳ ಮಾಗಳಾಗಳೆ ನಿಶಾಮುಖ ದೊಳ್ ನೆಗೆದ ತಾರಗೆಗಳೋರಗೆಗಳೆನಿಪ ಪೊಚ್ಚಪೊಸಮುತ್ತಿನ ಪಚ್ಚದೊಡವಿನೊಳಂಮನಕ್ಕೆ ಮಚ್ಚರಿಪ ಚೆಲ್ವಿಂ ಬಳ್ವಲಾದ ಮಲ್ಲಿಗೆಯ ಹುಗುಳ ತಗುಳದಿಂ ದೆಸೆವ ಬಾಸಿಗಂಗಳೊಳ ಮಳಂಕರಿಸೆ.

ಕಂ॥ ಅಭಿನವಸಂಗೋತ್ಸಂರೆಯಿ ।
ನಭಿವೀಕ್ಷಿಪ ಯೌವರಾಜ್ಯಲಕ್ಷ್ಮಿಯ ನಯನ ॥
ಪ್ರಭೆ ಪೆರ್ಚಿತೆನಿಸಿದತ್ತತಿ ।
ಶುಭದಂ ಪದ್ಮಜನ ಧವಳಮಂಗಳವೇಷಂ ॥ ೮೦ ॥

ವ॥ ಆಂತಲಂಕೃತನಾದ ಭವ್ಯರತ್ನಾಕರನಂ ಸಮುತ್ತುಂಗವಾಂಗಲ್ಯಮುಂಡವಮುಂಡನೀಭೂತ ಹೈಗರಾಜವಿಷ್ಟರದೊಳಿರಿಸಿ.

ಕಂ॥ ಯುವರಾಜಕಂಠಿಕಾಬಂ ।
ಧವ ನಖಿಲಜನಾನುಬಂಧವಂ ರಿಪುದರ್ಪಾ ॥
ರ್ಣವಸೇತುಬಂಧವಂ ಶಿ ।
ಷ್ಟವಿಪತ್ಪ್ರತತಿಬಂಧವಂ ನೃಪಂ ನಿರ್ಮಿಸಿದಂ ॥ ೮೩ ॥

ಹರಿಣಿ॥ ಭುವನನುತವಿಕ್ರಾಂತಂ ಪ್ರಾಣೇಶ್ವರಪ್ರಭವಂ ಕಳಾ ।
ಭವನ ನವನೀರಕ್ಷೀರಾತ್ಮ ನೆಂದು ಸಮಸ್ತರಾ ॥
ಜ್ಯವನೆ ತನಯಂಗೀಯಲ್ ವೇಡಿತ್ತೆನಲ್ ಯುವರಾಜಮೈ ।
ಭವಮು ನದನಾಭೂಪಂ ಕೂರ್ತೀವುದಾವುದು ಕೌತುಕಂ ॥ ೮೪ ॥

ವ॥ ಎನಿಸಿದ ನವಕಂಠೀರವಂಗೆ ಯುವರಾಜಕಂಠಿಕಾಬಂಧಮುಂ ಮಾಡಿ.

ಮ॥ ನೆಗಪಿಲ್ದಿನ್ಮತ್ತಗಜಂಗಳಂ ಪ್ರಬಳಜಾತ್ಯಶ್ವಂಗಳಂ ಸಾರವ ।
ಸ್ತ್ರುಗಳಂ ಸದ್ಗುಣವದ್ವಿಳಾಸಿನಿಯರಂ ಪ್ರೌಢಾಮಸಾಮಂತರಂ ॥
ಮಿಗಿಲಪ್ಪೂರ್ಗಳ ನನ್ವಯಾಗತಸಮಗ್ರಾಮಾತ್ಯರಂ ಕೊಟ್ಟು ನೆ ।
ಟ್ಟನೆ ಭೂಪಂ ಯುವರಾಜನಂ ವಿಭವದಿಂ ತನ್ನೊಳ್ ಸಮಂವಾಡಿದಂ ॥ ೮೫ ॥

ವ॥ ಆಗಳ್.

ಚಂ॥ ಹಿಮಕರನಿಂ ನೆಲಕ್ಕೆ ನಿಮಿರ್ವು ಜ್ವಳಚಂದ್ರಿಕೆಯಂತಧೀಶನಿಂ ।
ನಿಮಿರ್ದು ಕುಮಾರನತ್ತಲೆಳಸಿರ್ದ ಳಿಬಿನ್ನಪರಸ್ವರೂಪದಿಂ ॥
ಕುಮುದವನಾಭಿರಾಮೆ ಪರಚಕ್ರಭಯಂಕರಶೀಲೆ ವಾಹಿನೀ ।
ರಮಣನಸಮೃದ್ಧಿಸಲ್ಲಲಿತೆ ರಾಜ್ಯರವಾವಧು ವಂದು ಲೀಲೆಯಿಂ ॥ ೮೬ ॥

ವ॥ ಅಂತಾಮನುಜೇಂದ್ರಮಂದರಂ ತಂದೆ ಕೊಟ್ಟ ಯುವರಾಜಲಕ್ಷ್ಮಿಯ ನವಪ್ರಸಂಗದಿಂ ರಾಗರಸರಂಜಿತಾಂತಃಕರಣನಾಗಿ, ತದುತ್ಸವದೊಳಾರ್ಯಜನಮ ನರ್ಘಿಸಿಯುಂ, ಪೂಜ್ಯಜನಮಂ ಪೂಜಿಸಿಯುಂ, ಮಾನ್ಯಜನಮಂ ಮನ್ನಿಸಿಯುಂ, ಇಷ್ಟಜನಮಂ ತುಷ್ಟಿವಡಿಸಿಯುಂ, ಪರಿಜನಮಂ ಪರಿವರ್ಧಿಸಿಯುಂ, ಅಖಿಳಜನವಂದ್ಯ ನಾಗಿ ಪರಚಕ್ರಮ ನಾಕ್ರಮಿಸಲುಪಕ್ರಮಿಸುತ್ತಿರ್ಪನ್ನೆಗಂ.

ಮಃ॥ ಸಮುದಾರಾತಿಜಯೋತ್ಸುಕಂಗೆ ಯುವರಾಜಂ ಗೆತ್ತ ಲತ್ಯಂತದು ।
ರ್ಗಮು ಮಾದಥ್ವವ ನಿಂದೆ ನೇರ್ಪಡಿಪೆ ನೆಂಬಂತುರ್ವರಾಭಾಗದು ॥
ರ್ದಮಮಂ ಕರ್ದಮಮಂ ಕಟಿಲ್ಕ ಲತುಳೋದ್ಯತ್ಫೇನಮಂ ಸಿಂಧುಯೂ ।
ಥಮು ನೋರಂತಿರೆ ಮಾಡಲಾಮು ದೆನಸುಂ ನಿರ್ನೀರದಂ ಶಾರದಂ ॥ ೪೩ ॥

ಚಂ॥ ಸೊಗಯಿಪ ಕೇತಕೀವಿಭವ ವೇಟಿಶಿಲೆವಾಟಿಶಿಗೆ ನೀಪದೇಟಿಶ್ಗಿ ಪೊ ।
ನ್ನೆಗೆ ಕುಟಜೋಪಶೋಭೆ ಕುಮುದಕ್ಕೆ ಕದಂಬದ ಸೊಂಪು ನೆಯ್ದಿಲೊ ॥
ಳ್ಮುಗುಳ್ಗೆ ಮಯೂರದಭ್ಯುದಯ ವಂಜೆಗೆ ಚಾದಗೆ ಯುತ್ಸವಂ ಚಕೋ ।
ರಿಗೆ ತಳದೊಪ್ಪ ಲೊಪ್ಪಿದುದು ನೀರದಶಾರದನಿರ್ಗಮಾಗಮಂ ॥ ೪೪ ॥

ವ॥ ಮತ್ತಂ.

ಚಂ॥ ಕಲುಷತೆಯಂ ನಿಮಿರ್ಚಿ ತಿಳಿಪಲ್ಕಣ ಮೂಡಿದೆ ಮೇಘವಲ್ಲಭಂ ।
ತಳದೊಡೆ ಪೆರ್ಚೆ ತೀವ್ರತಪನಂ ಬಡಪಟ್ಟನುಕೂಲೆಯರ್ ನದೀ ॥
ಲಲನೆಯ ರಂದು ಕಂಠಗತಜೀವನವೃತ್ತಿಯ ನಾಳ್ದ(ರಿಂ) ಭೈಶೋ ।
ತ್ಕಳಿಕೆಯ ರಿಂತು ಸೈರಿಸುವರೋ ಸರಸಾತ್ಮನಿ ನಾವಗಲ್ಕೆಯಂ ॥ ೪೫ ॥

ಕಂ॥ ಶರದಂಗನೆ ನಿಜಮುಖಹಿಮ ।
ಕರಬಿಂಬಮು ನಡರೆ ನೋಡಲುಜ್ವಳಿಸಿದ ಭಾ ॥
ಸುರಚಂದ್ರಕಾಂತಮುಕುರೋ ।
ತ್ಕರ ಮೆನೆ ನೊಗಯಿಸಿದು ದಂದು ತಿಳಿದ ಕೊಳಂಗಳ್ ॥ ೪೦ ॥

ಚಂ॥ ಶರಥಿಯ ರತ್ನಮಂ ನೆಜಶಿಯೆ ಕಳ್ದು ಜಳಾಹರಣಕ್ಕೆ ಬರ್ವ ವಾ ।
ರ್ಧರಕುಳ ಮೊಯ್ದು ಕೊಟ್ಟೊಡವಲಿಂದ ಮಲಂಕೃತ ಮಾಪುದಕ್ಕು ಮುಂ ॥
ಬರತಳ ಮೆಂಬ ಶಂಕೆ ಸುರಚಾವದಿ ನಾದೊಡೆ ನೋಡಲಿಂಗಡಲ್ ।
ತೆರೆಗಳ ನಟ್ಟುದಂ ವರುಣನೆಂಬವೊಲೊಪ್ಪಿದು ವೆಟ್ಟಿ ಬೆಳ್ಮುಗಿಲ್ ॥ ೪೧ ॥

ಚಂ॥ ಶರದದ ಪೆರ್ವಿಸಿಲ್ಗಗಿದು ಬಾಂದೊಜಶಿಯೊಳ್ ಸಲಿಲಾವಗಾಹತ ।
ತ್ಪರತೆಯಿ ನಿರ್ದ ವಾಸವಗಜೇಂದ್ರದ ಪುಷ್ಕರರಂಧ್ರರುಂದ್ರಶೀ ॥
ಕರವೊ ಬೆಮರ್ಪ ಮೇಘಪಥಲಕ್ಷ್ಮಿಯ ನಿರ್ಮಲಘರ್ಮಬಿಂದುವೋ ।
ಸುರಿದವು ವೆಂಬಿನಂ ಸುರಿವ ಬೆಳ್ಸರಿಗಳ್ ಬಗೆಗೊಂಡು ವಾರುಮುಂ ॥ ೪೨ ॥

ಕಂ॥ ನವರಾಜಲಕ್ಷ್ಮಿಯಂ ಶರ ।
ದವನೀಶಂ ಪಡೆದು ಬರೆ ದಿಶಾಧೀಶ್ವರರು ॥
ತ್ಸವದಿಂ ಕಟ್ಟುದೊಡೆಮದೊರ್ ।
ವ್ವುವ ಮಣಿತೋರಣ ಮಿದೆನಿಸಿದುದು ಸುರಚಾಪಂ ॥ ೪೩ ॥

ಚಂ॥ ಬೆಳೆದು ಪೊದಟ್ಟಿದ ನೀಲ್ದರುಣಶಾಲಿಯ ಸತ್ಕ್ಷಣಿಶಾಳಿಯಂ ಶುಕಾ ।
ವಳಿ ನಡೆಗರ್ಚಿ ಪಾಱುವ ಬೆಡಂಗೆನಿಸಿರ್ದುದು ಚಂಡಭಾನುಮುಂ ॥
ಡಳಪರಿತಾಪ ವೆಯ್ದಿದ ಶರದ್ವಧುವಿಂಗೆ ಹರೀತದಂಡದಿಂ ।
ತೊಳಗುವ ಹೇಮಚಾಮರಮು ನಿಕ್ಕಿದಪರ್ ದೆಸೆವೆಣ್ಗಳೆಂಬಿನಂ ॥ ೯೪ ॥

ಮ॥ ಕಳಮುಕ್ಷೇತ್ರಸಮೂಹದೊಳ್ ಸುಟಿದು ನಾನಾಜಾತಿಸಪ್ತಚ್ಛದೋ ।
ತ್ಪಳಪುನ್ನಾಗಪಯೋಜಕುಂದಕುಸುಮಾಮೋದಂಗಳಂ ಪೇಱಿ ನಿ ॥
ರ್ಮಳಮೇಕಂ ಬಿಡೆತರ್ಪ ಬೆಳ್ಪರಿಗಳಿಂದಂ ನಾಂದಬೇಂ ಪಾಂಥಸಂ ।
ಕುಳಯೋನಶ್ರಮಹಾರಿ ಯಾದುದೊ ಶರತ್ಸಂಭೂತತೀತಾನಿಳಂ ॥ ೯೫ ॥

ವ॥ ಮತ್ತಂ ತತ್ಸಮಯಸಮುಚಿರಾಮುಸಂಧ್ಯಾಸಮಯದೊಳ್.

ಕಂ॥ ವಿಪುಲಜಳಧರಕಳಂಕಮು ।
ನಪಹರಿಸಿದ ಗಗನ ಮೆಂಬ ಮುಕುರಮು ನಾಳೊಳ್ ॥
ಕಿವ ಯುವರಾಜನ ಕೀರ್ತಿಯ ।
ಲಪನಪ್ರತಿಬಿಂಬ ವೆನಿಸಿದುದು ಶಶಿಬಿಂಬಂ ॥ ೯೬ ॥

ವ॥ ಅಂತು ಸಕಲಭುವನಪ್ರಸನ್ನಶೋಭಾವಭಾಸಿ ಯಾಗಿ.

ಚಂ॥ ಎನೆದಿರೆ ಮಿತ್ರಮುಂಡಳೆ ಮುದಗ್ರಕದಂಬ ಮುಡಂಗೆ ಕುಂದದೊ ।
ಳ್ಪಸದಳ ಮಾಗೆ ವಿಾಱುದಿರೆ ವಾಹಿನಿ ರಂಜಿಸೆ ರಾಜಲೀಲೆ ನ ॥
ರ್ತಿಸೆ ಕಮಲೋದಯಂ ಕುವಲಯಂ ಸುವಿಕಾಸಮು ನುಂಟುಮಾಡೆ ಪೋ ।
ಲ್ತೆನೆದುದು ಶಾರದೀವಿಭವಮುಂ ಸಲೆ ನಾಪ್ಪಿಭುವಂಶಮೇರುವಂ ॥ ೯೭ ॥

ಗದ್ಯ

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀಚಾರುಚಂದ್ರಾಯಮಾಣಮೂನಿತ
ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರ ಪಂಡಿತದೇವಸುವ್ಯಕ್ತ ಸೂಕ್ತಿ
ಚಂದ್ರಿಕಾಪಾನಪರಿಪುಷ್ಟಮಾನಸಮರಾಳ
ಗುಣವರ್ಮನಿರ್ಮಿತಮಪ್ಪ
ಪುಷ್ಪದಂತ ಪುರಾಣದೊಳ್
ಕುಮಾರೋದಯವರ್ಣನಂ
ನಾಮ
ಚತುರ್ಥಾಶ್ವಾಸಂ

ಪಂಚಮಾಶ್ವಾಸಂ

ಕಂ॥ ಶ್ರೀಗೆ ಜಯಲಕ್ಷ್ಮಿಯಂ ಸಮು ।
ಮಾಗಿಸ ಲುದ್ಯಮಿಸು ವೆನಗೆ ನಿರ ಮಾದುದಿದೆಂ ॥
ದಾಗಳೆರ್ದೆಗೊಂಡ ನಾಶರ ।
ದಾಗಮಮುಂ ಪ್ರಭುಗುಣಾಬ್ಜಿನೀಕಳಹಂಸಂ ॥ ೧ ॥

ವ॥ ಅಂತೆರ್ದೆಗೊಂಡು ತತ್ಸಮಯದೊಳೆ ತನ್ನ ಮನದ ಕಜ್ಜದುಜ್ಜುಗಮು ನಱಿಪಲೆಂದು ಚಿತ್ರಭಾನುದ್ವಿತೀಯನಾಗಿ ಬಂದಾಸ್ಥಾನಮಂಟಪದೊಳನೇಕಮಂಡಳಿಕಮಂಡನಾಥನಾಮಂತಮಂತ್ರಿ ಮುಂಡಳಪ್ರಮುಖಪರಿಜನಸಮೇತ ವೊಡ್ಡೋಲಗಂಗೊಟ್ಟರ್ದ ನಿಜಜನಕನಂಘ್ರಿವನಜಕ್ಕೆ ವಿನಯುವಿಂ ದೆಱಿಗಿ ಸಮುಚಿತಾಸನಪ್ರದೇಶಮು ನಲಂಕರಿಸಿ.

ಕಂ॥ ಕನಕಾದ್ರಿಯು ನೆಳಸುವ ನೂ ।
ತನಚಂದ್ರಿಕೆಯಂತಿರೆಳಸೆ ದಶನದ್ಯುತಿಗಳ್ ॥
ಜನಪತಿಯುಂ ನುಡಿದಂ ಮೆ ।
ಲ್ಲನೆ ಮುಕುಳಿತಕರಸರೋಜ ನಾಯುವರಾಜಂ ॥ ೨ ॥

ಮ॥ ಪೊಡವರ್ತ್ಯುದ್ಧತರಾಜವಂಶವನಮಂ ನಿರ್ಮೂಲಿಸಲ್ ಪೋಪೆ ನೆಂ ।
ಬೊಡದಂ ಮುನ್ನಮೆ ನಿಮ್ಮ ವಿಕ್ರಮದವಾಗ್ನಿಜ್ವಾಲೆ ತಳ್ತಿರ್ದುದಾ ॥
ಪಡೆವಾತಿರ್ಕೆ ಭವತ್ಪ್ರತಾಪಕಥೆಯಂ ಪ್ರತ್ಯಂತಭೂಚಕ್ರದೊಳ್ ।
ಬಿಡೆ ಕೇಳ್ವಾಗ್ರಹ ಮಾಯ್ತನಾಗ್ರಹಿಪು ದೆನ್ನಂ ದೇವ ಕಾರುಣ್ಯದಿಂ ॥ ೩ ॥

ಪ॥ ಎಂದು ವಿನಯೋಕ್ತಿಯನೆ ಮುಂದಿಟ್ಟು ನುಡಿದ ಚಾತುರ್ಯಚತುರಾನನ ನುಡಿಗೆ ಚತು ರ್ಮುಖಸಾಧನೋದ್ಯೋಗಗರ್ಭ ಮಪ್ಪ ಭಿಪ್ರಾಯಮುಂ ಜಲಕ್ಕ ನಱಿದು ಪದ್ಮರಾಜಂ ವಿಕೀರ್ಣದರ ಹಾಸ ನಿಂತೆಂದಂ.

ಉ॥ ನಿಮ್ಮ ಭುಜಪ್ರತಾಪವನವಹ್ನಿಗೆ ಮುನ್ನೊಳಗಾದ ವೈರಿವಂ ।
ಶ ಮ್ಮಗುಱಿದ್ದರ್ವಿ ಕೊರ್ವುಗು ಮದಂ ನಿಶಿತಾಸಿಕುಠಾರದಿಂ ಪೊಡ ॥
ರ್ಪ ಮ್ಮೆಱಿಸಿದಾಂ ಪಡೆಲ್ವಡಿಪೆ ನೆಂದು ಜಲಕ್ಕನೆ ಪೇಱಿಲೊಲ್ಲದೇ ।
ನಮ್ಮ ಯಥಾರ್ಥಮುಂ ಮಱಿಸಿ ಮುತ್ತಿನ ಸುತ್ತಿನ ಮಾತ ನಾಡುಮೈ ॥ ೪ ॥

ಮ॥ ವಿಹಿತಂ ಕ್ಷತ್ರಿಯನಂದನಂಗೆ ದಿಟ ವೆಂತುಂ ನೀತಿಯೊಳ್ ದುಷ್ಟನಿ ।
ಗ್ರಹಶಿಷ್ಟಪ್ರತಿಪಾಲನಂಗ ಳದಱಿಂ ನಿನ್ನುದ್ಯಮಂ ಮಾಣಿಪಾ ॥
ಗ್ರಹಮುಂ ಪುಟ್ಟಿಸುವಂತುಟಲ್ತು ವಿಜಯಂಗೆಯ್ದಪ್ಪುಗೆಯ್ ನೀಂ ಮಹಾ ।
ಮಹಿಪಶ್ರೀ ಗೆಡೆಯಾಗಿ ವಿಶ್ರುತಜಯಶ್ರೀಯಂ ಯಶಶ್ಶ್ರೀಯುಮಂ ॥ ೫ ॥

ವ॥ ಎಂದಿಂತು ನುಡಿದ ಬುದ್ಧಿಗೆ ವಿನಯಮುಂ, ಪ್ರಿಯಮು ಮಪ್ಪುದಱಿ ನಾಳೋಚಿತಮಂತ್ರಿ ಜನನಾಗಿ ತನ್ನೆಲದುದನೊಡೆಂಬಟ್ಟು ತದನಂತರಂ ವೈಶ್ರವಣಸಹಿತಂ ಬಹುಪ್ರಕಾರಕಥಿತನೃಪನೀತಿ ವಿಭೂತಿಯಿಂ ಮನೋದರ್ಪಣಮು ನುಜ್ಜ್ವಳಿಸಿದಾತ್ಮಜನಕನಂ ಬೀಟಿಸಿಕ್ಕೊಂಡು ಪರಮಪರಿತೋಷದಿಂದ ಮಾಸ್ಥಾನಭವನಮಂ ಪೊಱಮಟ್ಟಂತಃಪುರಕ್ಕೆ ವಂದು ವನಮಾಳಿಕಾಮುಹಾದೇವಿ ಗವನತೋತ್ತ ಮಾಂಗನುಂ, ನಿವೇದಿತನಿಜಪ್ರಯಾಣಾಭಿಪ್ರಾಯನುಂ ಮಾಗಿ ತದಾಶೀರ್ವಾದನಿರ್ಘೋಷಶೇಷಾಕ್ಷ ತಂಗಳಂ ತಳೆದಲ್ಲಿಂದ ಮಾತ್ಮಭವನಕ್ಕೆ ಬಿಜಯಂಗೆಯ್ದು ಶುಭಮುಹೂರ್ತದೊಳ್.

ಕಂ॥ ಸೆರಪಲ್ ವೇೞ್ದಿಂ ಕೃತರಿಪು ।
ನರೇಂದ್ರಭಂಗಮು ನುದಗ್ರಜಯತುಂಗಮು ನು ॥
ದ್ಧುರಸುಭಟಸಂಗಮಂ ಚಾ ।
ತುರಂಗಮಂ ನಿಜಬಳಾಧಿಪತಿಗೆ ಕುಮಾರಂ ॥ ೬ ॥

ವ॥ ಆ ಪ್ರಸ್ತಾವದೊಳ್.

ಮ॥ ಪರವಾಚಾಳನೃಪಾಳಜಾಳಕುಳನಾಶೋತ್ಪಾತನಿರ್ಘಾತವಾ ।
ತರವಂ ವಿಕ್ರಮನಾಟಕಾಭಿನಯನಾಂದೀಮುಂಗಳಾತೋದ್ಯಹೃ ॥
ದ್ಯರವಂ ತಾ ನೆನೆ ಘೂರ್ಣಿಸಿತ್ತು ವಿಲಸತ್ಸೌವರ್ಣಕೋಣಾಹತಿ ।
ಸ್ಫುರಿತಂ ಶ್ರೀ ಯುವರಾಜದೇವವಿಜಯಪ್ರಸ್ಥಾನಭೇರೀರವಂ ॥ ೭ ॥

ಚಂ॥ ಬೆದಱಿದು ದಭ್ರಮೂರಮಣ ನೊಟ್ಟಬೆಗೆಟ್ಟುದು ಪುಂಡರೀಕ ಮು ।
ಟ್ಟಿದ್ದುದು ಕುಮುದಂ ತಡೆಂಗೆಡದು ದಂಜನ ಮುರ್ಕುಡಿಗಿತ್ತು ವಾಮನಂ ॥
ಬಿದಿರ್ದುದು ಪುಷ್ಪದಂತ ಮತಿವಿಹ್ವಲ ಮಾದುದು ಸಾರ್ವಭೌಮ ಮುಂ ।
ದದಿರ್ದುದು ಸುಪ್ರತೀಕ ವಿರದಾಳಿಸಿ ತತ್ಪಟಹಪ್ರಣಾದಮುಂ ॥ ೮ ॥

ವ॥ ಎನಿಸಿ ಗಗನದಿಗವನೀವ್ಯಾಪ್ತಮಾದ ವಿಜಯಪ್ರಯಾಣದುಂದುಭಿಧ್ವಾನ ಮೆಸೆಯಲೊಡಂ.

ಮಾಸ್ರ॥ ಮುದಧಾರಾವೃಷ್ಟಿ(ಪಂಕಂ)ಮುಸಗಿಸೆ ನೆಲನಂ ಘೂೀಷಘಂಟಾರವಂ ದಿ ।
ಗ್ರದನೀಶೋತ್ರಕ್ಕೆ ಸಂಪಾದಿಸೆ ಬಹಿರತೆಯುಂ ಪುಷ್ಪಕಾನದ್ಧನಾನಾ ॥
ಕದಳೀಜಾಳಾಂಬರಂ ಚುಂಬಿಸೆ ಘನಪಥಮಂ ಬಂದುದಂದನ್ಯಚಕ್ರ ।
ಕ್ಕಿದು ಕಳ್ವಾಂತಾಭ್ರ ಮುಂಬಂತುದಿತರಿಪುಮನೋದೈನ್ಯ ಮುಗ್ರೇಭಸೈನ್ಯಂ ॥ ೯ ॥

ಮಾಸ್ರ॥ ಜವದಿಂ ಸೌಪರ್ಣನಂ ಮಾರುತಸುತನ ನನೂನಾನ್ವಯಶ್ರೀಯಿ ನುಚ್ಚೈ ।
ಶ್ರವಮುಂ ಸೂಡ್ಯಾಶ್ವಮುಂ ವರ್ಣದಿ ನಮರರಥನುದ್ಯೋತಿಯುಂ ಪಂಚರತ್ನ ॥
ಚ್ಛವಿಯಿಂ ಕಿಟಿಸ್ಥಾಪ್ತಿ ಸಲ್ಲಕ್ಷಣಗುಣನಿಧಿಗಳ್ ಪಲ್ಲಣಂಗಟ್ಟಿ ಬಂದಿ ।
ರ್ದುವು ಹೇಷಾಘೂೀಷವಿದ್ರಾವಿತರಿಪುಮಹಿಭೃಚ್ಚಾತುರಂಗಂ ತುರಂಗಂ ॥ ೧೦ ॥

ಮ॥ಸ್ರ॥ ಪರಚಕ್ರಕ್ಕೀಗ ಳೀಪಲ್ಮೊರೆದನೆ ಜವ ನೆಂಬಂತತಿಸ್ಫಾರಚೇತ್ಕಾ ।
ರರವಂ ದಿಕ್ಪಾಲರಂ ಕೇಳಿಸೆ ವಿನಿಹಿತಸೂತಂ ಪ್ರಪೂರ್ಣಾಸ್ತ್ರಜಾತಂ ॥
ಗುರುಚಕ್ರಕ್ಷುಣ್ಣಮಾರ್ಗಂ ಸಮಧಿಕರಥಿಸಂಸರ್ಗ ಮುದ್ಯತ್ಪತಾಕಾಂ ।
ಬರ ಮುಗ್ರಾಡಂಬರಂ ಬಂದುದು ವಿಧೃತಮಹಾವಾಜಿಯೂಥಂ ವರೂಥಂ ॥ ೧೧ ॥

ಚಂ॥ ಮಣಿಯುದೆ ಬಂದು ಸೊಂದಣಿಸಿ ದಡ್ಡಣದೊಡ್ಡಣದುರ್ಬು ಬಿಲ್ಲ ಬ ।
ಲ್ಲಣಿಯು ತೆರಳ್ಕೆ ಭಾರ್ಗವರ ಮೊಗ್ಗರದೊಬ್ಬುಳಿ ಕುಂತದಾಳ ತಿಂ ॥
ತಿಣಿ ನೆಱಿಸಿ ತಮ್ಮತಮ್ಮ ಬಿರುದಂ ವಱಿಸಿಯುಂ ಕಹಳಾರವಂಗಳುಂ ।
ಪ್ರಣಿಹಿತಕೇತುಚಿಹ್ನಮು ಮಿಳಾವಳಯಕ್ಕಱಿಪುತ್ತು ಮಿರ್ದಿನಂ ॥ ೧೨ ॥

ವ। ಅಂತತಿಪ್ರಬಳ ಮಾಗಿ ನೆಱಿಸಿದು.

ಮ॥ ಗಣನಾತೀತ ಮದೀ ನದೀ ನಿಸೆಮದೋ ಪಾದಾಭಿಘಾತಸ್ಫುರ ।
ತ್ಫಣಿರಾಜಸ್ಫಟಿಗಳ್ ಮದೀಭಘಟೆಗಳ್ ಜೈತ್ರಾಜಿಗಳ್ ವಾಜಿಗಳ್ ॥
ರಣಕೇಳೀರಸರಕ್ತಸೂತರಥಿಯೂಥಂಗಳ್ ವರೂಥಂಗ ಳು ।
ಲ್ಬಣಶಸ್ತ್ರಾಸ್ತ್ರಗಭಸ್ತಿವಿಸ್ತೃತವಿಯದ್ದಿಗ್ಭಿತ್ತಿಗಳ್ ಪತ್ತಿಗಳ್ ॥ ೧೩ ॥

ವ॥ ಆಗಳಾಚತುರಂಗಬಲಜಲಧಿಯೊಳಗೆ ನೆಗೆದ ತೆರೆದುಱುಗಳಂತೆ ಮಿಱುವ ಬೆಳ್ಗೊಡೆಯ ಬಳಗವುಂ, ಮಿಳಿರ್ದು ಪೊಳೆವ ಸಪ್ತರ್ಷಿಸಮಾಜದಂತೆ ಸಂಚರಿಸಿ ಮಿಂಚುವಲಗುಗಳಿ ನಿಸೆವ ಪೆಸರ ಕೆಯ್ದುಗಳುಂ, ಉಜ್ಜ್ವಳಿಪವಿದ್ರುಮಲತಾಂಕುರದಂತೆ ಕೆಂದಳಿರ ತೊಂಗಲಂತೆ ಪಸರಿಸುವ ಪದ್ಮರಾಗ ಮುಕುಟಮುಂ, ಪ್ರಬಲಪವಮಾನಸಮುದೀರ್ಣಘೂರ್ಣನಧ್ವಾನದಂತೆ ನೆಗಟ್ವಿ ವಿವಿಧವದಿಱಿ ವಱಿಸಿ ಗಳಬ್ಬರಮು ಮಾತ್ಮೀಯರಾಜಲೀಲೆಯಂ ನೆಱಿಸಿಯೆ ಮೆಱಿಸಿಯೆ ಬಂದು ಬಾಗಿಲ್ವಾಡೆದೊಳ್ ತಂತಮ್ಮ ವಾಹನಂಗಳಿ ನಿಟ್ಟಿದು.

ಕಂ॥ ಯುವರಾಜಂ ಬಿಜಯಂಗೆ ।
ಯ್ವ ವಸರಮನೆ ಪಾರ್ದು ಪೊಱಿಗೆ ಪೊಡವಡು ವಳಿಪಂ ॥
ತವತವಗೆ ಮುಂಚಲಿರ್ದರ್ ।
ವಿವಿಧನೃಪೋತ್ತುಂಗ ರುಚಿತಕವಚಭೃತಾಂಗರ್ ॥ ೧೪ ॥

ವ॥ ಅನ್ನೆಗ ಮಿತ್ತಲರ್ಚಿತಜಿನೇಂದ್ರಚರಣಾರವಿಂದದ್ವಂದ್ವನುಂ, ವಂದಿತಾರ್ಯಜನಸಮಾಜ ನುಂ, ಪ್ರವರ್ತಿತಪಾತ್ರದಾನವಿಧಾನನುಂ, ನಿರ್ವರ್ತಿತಗಜವಾಜಿನೀರಾಜನನುಂ, ಅಂಗೀಕೃತಶೃಂಗಾರ ಮಾಂಗಲ್ಯವೇಷನುಮಾಗಿ ಗಣಕಗಣಗಣಿತಪ್ರಶಸ್ತಲಗ್ನದೊಳ್ ನಿಜೋತ್ತುಂಗಸಿಂಹಾಸನದೊಳಿರ್ದು ಪರಸುವರಸುಗುಲದಾರ್ಯಕುಲದ ಬಯ ಜೀವ ನಂದ ರಭಸಂಗಳುಂ, ಪಱಿಯಿಸುವ ಚಾರಣಮುಂ ಗಳೋಚ್ಚಾರಣಂಗಳುಂ, ಸೇನೆಯಿಕ್ಕುವುನ್ಮದವಿಳಾಸಿನೀಜನದ ಮಣಿಕಂಕಣಕ್ವಣಿತಂಗಳುಂ, ನೆಲನ ನುಗ್ಗಡಿಪ ಪಡಿಯಱಿರ ಸಡಗರಂಗಳುಂ, ಪೂರಯಿಸುವ ಧವಳಶಂಖಭಾಂಕಾರರುತಿಗಳುಂ, ಬಾಜಿ ಸುವ ವಿವಿಧಪ್ರಯಾಣಪಟಹಂಗಳಿತ್ಸನಧ್ವನಿಗಳು, ಮೊತ್ತುವ ಪೊನ್ನ ಸನ್ನಿಗಾಳಿಗಳ ಕೋಳಾಹ ಳಂಗಳು ಮಳುಂಬ ಮಾಗೆ ಚಿತ್ರಭಾನುವಿತ್ತಹಸಿತ್ರವಳಂಬ ನಾಗಿ ಕತಿಪಯಪದಂಗಳಂ ತಳರ್ದು ನಿಜಪಾರ್ಶ್ವನಾದವುರೋಭಾಗದೊಳ್.

ಮ॥ ವಿಲಸತ್ಪುಷ್ಕರಶೀಕರಪ್ರಸರದಿಂ ಸೇಸಿಕ್ಕುತಿರ್ಪಂತೆ ಮುಂ ।
ಜುಳಝಂಟೂರವದಿಂದ ಮೊಲ್ದು ಪರಸುತ್ತಿರ್ಪಂತೆ ದಾನಭ್ರಮ ॥
ತ್ಕಳಿಬೃಂಗೀರವದಿಂದೆ ಗಾವರಿಸುತಿರ್ಪಂತುದ್ಧವೂಂಗಲ್ಯಮುಂ ।
ತಳೆದೊರ್ಪಿರ್ದುದ ನೇಱಿದಂ ದ್ವಿರದಮುಂ ವ್ಯಾಳೇಭವಜ್ರಾಂಕುಶಂ ॥ ೧೫ ॥

ವ॥ ಆಗಳ್.

ಚಂ॥ ಅಮಳಮುಖೇಂದುಗಲ್ಕಿ ನಭಮುಂ ಪುಗೆ ಕೀರ್ತಿಯ ನಟ್ಟಿ ಮುತ್ತಮಾ ।
ಕ್ರಮಿಸುವ ನೀತ ನಲ್ಲಿ ಪಗೆ ಪೊಲ್ಲದು ಕಾಣ್ಬುದು ಕಜ್ಜಮೆಂದು ಬಂ ॥
ದವ್ಯತೆಮರೀಚಿ ಕಂಡು ನಡೆದರ್ವನೆನಲ್ ಮನುಜೇಂದ್ರಮಂದರಂ ।
ಗಮರ್ದೆಸೆದಿರ್ದುದಾದಲೆಯೊ ಳೆತ್ತಿದ [ಮುತ್ತಿನ] ಮೇಳುಡಂಬರಂ ॥ ೧೬ ॥

ಕಂ॥ ನವರಾಜ್ಯನಳಿನವನದೊಳ ।
ಗವಯವಪಂ ನಲಿದು ನರ್ತಿಪಂಚೆಗಳೆನೆ ಬೀ ॥
ಸುವ ಧವಳಚಾಮರಂಗಳ್ ।
ಯುವರಾಜನ ಕೆಲದೊಳೆಸೆದು ವತಿಲಲಿತಂಗಳ್ ॥ ೧೭ ॥

ವ॥ ತದನಂತರ ಮುಖಂಡನಾಯೋಗಮಂಡಿತಂಗಳು, ಮಾರೂಢಮಹಾಮಾತ್ರವಿಚಿತ್ರಾಂಕುಶ ವ್ಯಾಪಾರಣಮು ಮುಪ್ಪ ವಲ್ಲಭಗಜವ್ರಜಂಗಳುಂ; ಖಣಖಣಾಯಿತಖಲೀನಕಷಣಗಳಿತಲಪನಲಾಲಾಂಬು ಫೇನಪಲ್ಲವಸ್ತಬಕಿತಮುಖಂಗಳುಂ, ನಿಬದ್ಧಮಣಿಮಯಾಭರಣಕಿರಣಕಿಮ್ಮೀರಕಾಯಕಮನೀಯಾ ಕಾರಮು ಮುಪ್ಪ ಪಟ್ಟಸಾಹಣಪಯಚಯಂಗಳುಂ; ಬಳಸಿ ಗೊಂದಣಿಸೆ ರಾಜಗೇಹಮುಂ ಪೊಱಿ ಮುಟ್ಟು ಪೊಱಿಗೆ ತಮತಮಗೆ ವಿನಯವಿನಮಿತೋತ್ತಮಾಂಗ ರಾವರಸುನುಕ್ಕಳಂ ಸದಯಾವಳೋ ಕನದಿಂ ಪರಸಿ ನಿಜನಿಜವಾಹನಂಗಳ ಮೇಱಿ ಮೆಂದು ಬೆಸಸಿ,

ಮ॥ ವಿಲಸದ್ಭೂಭುಜಕೋಟಿ ಮುಂದೆ ವರೆ ವಾರಸ್ತ್ರೀಜನಂ ಪಿಂದೆ ದೋ ।
ರ್ವಳಿವೃತ್ತಂ ತಳತಂತ್ರ ವಿರ್ಕ್ಕೆಲವೊಳಿಂಬಾಗಿರ್ಪಿನಂ ಲೀಲೆಯಿಂ ॥
ತಳರ್ದಂ ಕೆಮ್ಮುಗಿಲಂ ಮುಸುಂಕು ವೆಳಮಿಂಚೆಂಬಂತೆ ಸುತ್ತುತ್ತಿರಲ್ ।
ಪೊಳೆಯಿಪ್ಪಂಕುಶಕಾಂತಿದಾನಗಜಮುಂ ವ್ಯಾಳೇಭವಜ್ರಾಂಕುಶಂ ॥ ೧೮ ॥

ಮ॥ ಪಿಡಿ ಪೇರಾನೆ ಸುಖಾಸನಂ ಸಿವಿಗೆ ಲೀಲಾವಾಜಿ ರಾರಾಜಿಸಲ್ ।
ಕೊಡೆ ಕುಂಚಂ ತಡಿಸಿ ಚಾಮರಂ ಕುರುಳಕೊಂತಂ ತಳ್ತಿರಲ್ ತಂಡದಿಂ ॥
ದೊಡನೆಲ್ತಿಂದುದು ಪೆಂಡವಾಸದಬಲಾನೀಕಂ ಜನಾಲೋಕಮುಂ ।
ಕಡುಚೆಲ್ವಿಂ ತಣಿವುತ್ತುಮಂಗಜನ ಬಲ್ದಂಡೆತ್ತಿ ಬರ್ಪಂದದಿಂ ॥ ೧೯ ॥

ವ॥ ಮತ್ತಂ.

ಕಂ॥ ಬಾಸಣಿಸಿದ ಮದನನ ಬಾ ।
ಣಾಸನದವೊಲೆಸೆವ ಚಾರುರುಂಪಾಣದೊಳು ॥
ದ್ಭಾಸಿನಿಯರ್ ನೃಪಸುತನ ವಿ ।
ಳಾಸಿನಿಯರ್ ಬಂದರೇಱಿ ಪೊನ್ನಂದಣಮಂ ॥ ೦೦ ॥

ಚಂ॥ ಪ್ರಕಟಿಸಿದತ್ತು ಪದ್ಮಜನ ಪಕ್ಕದೊಳೆಟ್ಟಿರ ಹಾತ್ಮಲೀಲೆಯಿಂ ।
ಸುಕವಿಕದಂಬಕಂ ಕಥಕಸಂಹತಿ ವಾಚಕಕೋಟಿ ಪುಣ್ಯಪಾ ॥
ಠಕತತಿ ಗಾಯಕಪ್ರತತಿ ವಾದಕಮಂಡಳಿ ನರ್ತಕಾಳಿ ವಾಂ ।
ಶಿಕಕುಳ ಮಿಂದ್ರಜಾಲಿಕಗಣಂ ಗಣಕಾವಳಿ ಚಿತ್ರಕವ್ರಜಂ ॥ ೦೧ ॥

ವ॥ ತದನಂತರಂ ನೂತ್ನರತ್ನಾಕರಪ್ರದೇಶದೊಳೆ ನಡೆವ ವರುಣನಂತೆ ಧರಣೀಶನಂದನಂ ಚಂಚತ್ಪಂಚರತ್ನತೋರಣವಿರಾಜಮಾನ ಮುಪ್ಪ ರಾಜಮಾರ್ಗದೊಳೆ ಬರ್ಪ ಸಮಯದೊಳ್.

ಕಂ॥ ತೊಡುವುಡುವ ತುಡುವ ಪೂಮುಡಿ ।
ವಡಿವೊಡುವ ನೆತ್ತವಾಡು ವೋಪರೊಳೊಲವಿಂ ॥
ದೊಡಗೂಡುವ ದಂಹುಗ ಮಿರೆ ।
ನಡೆತಂದರ್ ಸೋಲ್ಪಿ ತವಕದಿಂ ದೊಳ್ವೆಂಡಿರ್ ॥ ೦೨ ॥

ವ॥ ಅಂತು ನಿಜವ್ಯಾಪಾರಪರಂಪರೆಯ ನುಬಿಡು ಕೆಲರ್ ಬಣ್ಣವಿಟ್ಟ ಲೆಪ್ಪದ ತಿಣ್ಣ ರೂವುಗಳಂತೆ ಸೌಧಶಿಖರಂಗಳ ನಲಂಕರಿಸಿಯುಂ, ಕೆಲಬರ್ ತೆತ್ತಿಸಿದ ಪುತ್ತಳಿಗಳಂತೆ ಪೊನ್ನಮಾಡದ ನೆಲೆಗಳೊಳ್ ನಿಲಸಿಯುಂ, ಕೆಲರ್ ಜಿನಶಾಸನದೇವತೆಯರಂತೆ ಚೈತ್ಯಕೂಟಂಗಳೊಳ್ ಮನಂಗೊಳಿಸಿಯುಂ, ಕೆಲರ್ ವಸಂತಕಾಂತೆಯರಂತೆ ಭವನವನತರುಸ್ಕಂಧದೊಳ್ ನಿಂದುಂ, ಕೆಲರ್ ಗಗನಚರಿಯರಂತೆ ಮುಗಿಲಟ್ಟಳೆಗಳೊಳ್ ಸೊಗಯಿಸಿರ್ದುಂ, ಕೆಲಬರ್ ಪುರಮುಖಶ್ರೀಕಳೆಗಳಂತೆ ಗೋಪುರಾಗ್ರಂಗಳೊಳ್ ಸಂಗತೆಯರಾಗಿಯುಂ, ಮನದೆ ಗೊಂಡು ಸಂದಣಿಸಿ ನೋಡುವಲ್ಲಿ.

ಕಂ॥ ಎಳಮಿಂಚಿನ ನನೆ ಯಂಬಿನ ।
ಜಳಜದ ಕರ್ನೆಯ್ದಿಲೆಸಳ ಬೆಳ್ದಿಂಗಳೆ ವಿಾಂ ॥
ಗಳ ಚೆಲ್ವ ನುಗುಳ್ದು ವಾಕೋ ।
ಮಳೆಯರ ತಳತಳಿಸಿ ಪೊಳೆವ ತುಱುಗೆವೆಗಣ್ಗಳ್ ॥ ೦೩ ॥

ಚಂ॥ ಬೆಳತಿಗೆಗಣ್ಣ ಬೆಳ್ಪು ನಗೆಗಣ್ಣ ಮುಗುಳ್ನೆಗೆ ಚೆಲ್ಲಗಣ್ಣ ಚಾ ।
ಪಳೆ ಮಲರ್ಗಣ್ಣ ಬಳ್ವಳಿಕೆ ವಿಾಂಬೊಣರ್ಗಣ್ಣ ನಿಮಿರ್ಕೆ ನೊಕ್ಕುರ್ಗ ॥
ಣ್ಣಳಸತೆ ಪುಲ್ಲೆಗಣ್ಣೆಳತೆ ತಳ್ತೆವೆಗಣ್ಣ ತೆಗುಳ್ಪು ತೋಱಿಗ ।
ಣ್ಬೆಳಸಿನ ಸುಗ್ಗಿಗಾಣ ಲಣಹಾಯ್ತು ಪುರಪ್ರಮದಾಜನಂಗಳೊಳ್ ॥ ೦೪ ॥

ಚಂ॥ ತಿಳಿಗೊಳದಂತೆ ರಮ್ಯವನದಂತೆ ರವಿದ್ಯುತಿಯಂತೆ ಜೊನ್ನದಂ ।
ತೆಳಸಿರಿಸಿತ್ತವಲ್ದಿರ ಲಸಜ್ಜಘನೇತ್ರವು ನೇಣನೇತ್ರಮುಂ ॥
ಜಲರುಹನೇತ್ರಮುಂ ಕುವುದನೇತ್ರವು ನಾಯುವರಾಜಯವ್ವನೋ ।
ಜ್ವ್ವಳತನು ವೆಲ್ಲಿ ನಾಧಿಸಿದುದೋ ಬಹುರೂಪಿಣಿ ಯೆಂಬ ವಿದ್ಯೆಯುಂ ॥ ೨೫ ॥

ವ॥ ಆಗಳೊರ್ವಳ್.

ಮ॥ ವಿಸರನ್ಮೌಕ್ತಿಕಮಂಡನಪ್ರಭೆ ನಿಜಾಂಗಕ್ಕೀಯೆ ಬೆಳ್ಪಂ ಮುದಾ ।
ಲಸಕಾಂತಾಜನಲೋಚನಂ ತನುಲತಾಲಾವಣ್ಯದೊಳ್ ತೀವಿ ಬಿಂ ॥
ಬಿಸೆ ತತ್ಪದ್ಮನರೇಂದ್ರನಂದನನ ನಂದೈರಾವತಾರೂಢ ನಾ ।
ದ ಸಹಸ್ರಾಕ್ಷನೆಗೆತ್ತು ಮಾನಿನಿ ಮನೋವಿಭ್ರಾಂತಿಯಿಂ ನೋಡಿದಳ್ ॥ ೨೬ ॥

ವ॥ ಮತ್ತಮೊರ್ವ ಳಭಿನವಮದೋನ್ಮತ್ತೆ ಯೆನಿಸಿ.

ಮ॥ ಉಗಿಯಲ್ಕುಂಕುಶದಿಂ ತೊಡಂಕಿ ಪಱಿದೆತ್ತಂ ಸೋರ್ವ ನಕ್ಷತ್ರಮಾ ।
ಲೆಗಡಪರ್ವಾದ ಮನೋಜನಾಮಜಲಸತ್ಕುಂಭಂಗಳೆಂಬಂತೆ ಹಾ ॥
ರಗಳನ್ಮೌಕ್ತಿಕದಿಂ ನಖಕ್ಷತಯುತಂ ವಕ್ಷೋಜಯುಗ್ಮಂ ಮನಂ ।
ಬುಗೆ ರಾಗಂ ಮಿಗೆ ಮೇಲುದಂ ಪೆಱಿದಿಸು ನೋಟ್ಪಿಬ್ಬಾಜ್ಞೆ ಕಣ್ಗೊಪ್ಪಿದಳ್ ॥ ೨೭ ॥

ವ॥ ಮತ್ತಮೊಂದು ರಮ್ಯಹರ್ಮ್ಯತಳದೊಳಗಣಿಂ ದೆಱಿಗಿ ನೋಡಲ್‌ಪೊಱಮಟ್ಟು.

ಮಾಸ್ರ॥ ಕೃತಸದ್ಯಃಕಾಮಕೇಳೀಭರವಿರಮಣಮಂ ಮಂದನಿಶ್ವಾಸ ಮಾಕಂ ।
ಪಿತಗಾತ್ರಂ ರಕ್ತನೇತ್ರಂ ನವನಖಲಿಖಿತಕ್ಷುಣ್ಣವಕ್ಷಸ್ಥಳಂ ವಿ ॥
ಸ್ತ್ರುತಕೇಶಂ ಕೀರ್ಣನೀಲಾಳಕ ಮುದಿತಮುಖಸ್ವೇದ ಮುತ್ಪ್ಲಿವ್ತಕಾಂಚೀ ।
ಲತೆ ಸಂದಷ್ಟಾಧರಂ ಸೂಚಿಸೆ ನೃಪಸುತನಂ ನೋಡಲೆಯ್ತಂದಳೊರ್ವಳ್ ॥ ೨೮ ॥

ವ॥ ಮತ್ತಮೊರ್ವಳಾಕುಮಾರಕನ ಗಾಡಿಯಂ ನಡೆ ನೋಡಿ ತಣಿಯದೆ ಬೆಂಬಿಡಿದು ಪರಿವ ಮುಗ್ಧನಿತಂಬಿನಿಯ ಕೆಯ್ಯಂ ಪಿಡಿದು.

ಉ॥ ಸಾಲದೆ ನೋಟದಿಂ ಪರಿದು ನೋಟಿಪ್ಪೊಡೆ ನಿನ್ನ ನಿತಂಬಭೂರಿಭಾ ।
ರಾಲಸಯಾನ ಮೆಯ್ದಿಸದದಲ್ಲದೆಯುಂ ಮಗುಟಿದ್ದೀಸಡಿಲ್ವ ಕಾಂ ॥
ಚೀಲತೆ ಬೇಱಿಸಿ ತಳ್ತು ತೊಡೆಸಂಕಲೆಯಾದಪು ದೆಂತು ಪೋಪೆ ನಿಲ್ ।
ಬಾಲಿಕೆ ಪದ್ಮಜಂ ಮಗುಟಿಸಿ ಬಂದಪ ನಿಲ್ಲಯೆ ನಿಂದು ನೋಡುವಂ ॥ ೨೯ ॥

ಕಂ॥ ಗಾಡಿ ಕಡೆಗಣ್ಮೆ ಪೊಸಪೊಂ ।
ಮಾಡದ ಮೇಗಿರ್ದ ನೋಟ್ಪಿ ಸತಿಯ ಮೊಗಂ ಕೀ ॥
ಬಿಮ್ಮಾಡಿದುದು ಮಂದರಾಚಲ ।
ಚೂಡಾಸನ್ನಿಧಿಯೊಳಿರ್ದ ಶಶಿಮಂಡಲಮುಂ ॥ ೩೦ ॥

ವ॥ ಮತ್ತಮೊಂದೆಡೆಯೊಳ್.

ಕಂ॥ ಮುಡಿ ಬಿಟ್ಟು ಪಿಂದೆ ಸಸಿನಂ ।
ಮಡಗಾಲ್ಗಿಟ್ಟಿರಿ ಮೃಗಾಕ್ಷಿ ನಿಂದೀಕ್ಷಿಸುತಿ ॥
ರ್ಪೆಡೆಯೊಳ್ ಪೋಲ್ತಳ್ ನೀಲದ ।
ನಿಡುಗಂಬದೊ ಳಮರ್ದ ಪೊನ್ನ ಪೊಸವುತ್ಥಳಿಯಂ ॥ ೩೧ ॥

ವ॥ ಆಕರ್ಣಿಕಾರವರ್ಣಿಯ ಪಕ್ಕದೊಳ್.

ಮ॥ ಕಳಶಂ ಪೆರ್ಮೊಲೆ ರನ್ನಗನ್ನಡಿ ಲಲಾಟಂ ಲಾಜೆ ದಂತಾಂಶು ಕೆಂ ।
ದಳಿರ್ಗಳ್ ಕೆಂದಳ ಮುಂಚಳಂ ಗುಡಿ ಕಟಾಕ್ಷಶ್ರೇಣಿ ಪೂಮಾಲೆ ನಿ ॥
ರ್ಮಲಹಾರಂ ಮಣಿತೋರಣಂ ಸುಲಲಿತಭ್ರೂ ದೂರ್ವೆ ಯಾಗಲ್ಕೆ ಕೋ ।
ಮಳೆ ಯೊರ್ವಳ್ ನೃಪನಂದನಂಗೆ ಮೆಱೆಸಿದಳ್ ಮೆಯ್ವೆತ್ತ ಮಾಂಗಲ್ಯಮುಂ ॥ ೩೨ ॥

ವ॥ ಮತ್ತಮೊರ್ವಳ್ ವಿನಯಪ್ರಾಕಾರ ನಾಕಾರಮುಂ ಕಂಡು ಕಣ್ಪೊಲ್ತು ಕಾಮುಪರವಶ ತೆಯಿಂ ಸಂಕಲ್ಪಸಂಭೋಗಕ್ರೀಡೆಗೆ ಮೆಯ್ದಂದು ಬಹಳಜನನಿರ್ದಯಪ್ರಮರ್ದದೊಳ್ ನಿಷ್ಫಲಾ ರಂಭಸುಭಗೆ ಯಾಗುತ್ತಿರ್ದೊಡವಳ ಕೆಳದಿ ಯಿಂತೆಂದಳ್.

ಚಂ॥ ನನೆಗಣೆ ನಾಂಟೆ ನಾಣಟಿಸಿದು ನೋಟದ ದಂದುಗಮುಂ ಬಿಸುಟ್ಟು ನೀಂ ।
ನೆನಪದೊಳೀ ಕುವಾರನೊಡಗೂಡಲಪೇಕ್ಷಿಸಿ ಮುಚ್ಚಿ ಕಣ್ಗಳಂ ॥
ಮನದೊಳಿದೇಕೆ ಜಾನಿಸುವೆ ಮುಂದಿಯೊಳಾಗದು ಚಿತ್ತಶುದ್ಧಿ ಮು ।
ನ್ನನುಭವಿಸಕ್ಕ ಕಣ್ದೆಱಿಸಿದು ದರ್ಶನಸೌಖ್ಯಮು ನೀಗಳನ್ನೆಗಂ ॥ ೩೩ ॥

ವ॥ ಎಂದು ಬಾರಿಸಿದ ಳೆತ್ತ ಮುಂದಿಯೊಳಿದ್ದುರ್ದ ನೋಲ್ಪಿ ಕುಲವಧೂಕದಂಬದೊಳ್.

ಚಂ॥ ಚಕಿತಮೃಗಾಕ್ಷಿ ನೀನೆಳಸಿ ಕೆಮ್ಮನೆ ಜೊಮ್ಮನೆವೋಗಿ ಭಾವದಿಂ ।
ಪ್ರಕಟಿಸಲೇಕೆ ಪಾಱಿಮತನಮುಂ ನಿನಗೀಗುಣತುಂಗನಲ್ಲಿ ವ ॥
ರ್ತಕ ಮಿದು ಸಲ್ಲದೆಲ್ಲೆಡೆಯೊಳಂ ಸಲುತಿರ್ಪವೊ ಲೀಗಳೆಂದು ಭಾ ।
ವಕಸಖಿ ಸೋಲ್ತ ಕಣ್ಣಱಿಸಿದು ವುಂಶ್ಚಲಿಯಂ ಜಡಿದಳ್ ರಹಸ್ಯದೊಳ್ ॥ ೩೪ ॥

ವ॥ ಅಂತು ಸಂಭ್ರಮಸಲೀಲಸಪ್ರೇಮಸವಿಸ್ಮಯಸಹರ್ಷಪ್ರಕರ್ಷದರ್ಶನಭ್ರಾಂತ ವಾದ ನಗರನಾರೀಕದಂಬದ ಸೋರ್ಮುಡಿಯ ಸೊಂಪು ಕಾರ್ಮುಗಿಲ ತಗುಳ್ಪುಮಂ ನಿಗಱಿಶ್ಚಿಯುಂ, ಕಡೆ ಗಣ್ಣ ಕುಡುಮಿಂಚು ಸಂಚಳಿಸಿ ಮಿಳಿರೆಯುಂ, ಕಳಕಾಂಚಿಯಿಂಚರದ ಸಡಿಗರಂ ಪೊಱಿಗನಳವಡಿ ಸೆಯುಂ, ನಗೆವೊಗದ ಮಂದಹಾಸರಸವೃಷ್ಟಿ ಬಿಸಿಲ ಬಿಸುಪ ನುಡುಗಿಸಿಸೆಯುಂ, ಆಭರಣಕಿರಣ ಮಮರಚಾಪಮಂ ನಿಮಿರ್ಚಿಯುಂ, ಲಾವಣ್ಯರಸದ ಪೊನಲ್ ಜನಲೋಚನಪಾತೀನಮಂ ತೇಂಕಿ ಸೆಯುಂ, ಉಜ್ಜಳಿಪ ಪೊಚ್ಚ ಪೊಸಮುತ್ತಿನಚ್ಚನೇಸೆ ಸೂಸುವಾಲಿವರಲ ನಭಿನಯಿಸೆಯುಂ, ಮನಂ ಗೊಳಿಸುತ್ತಿರ್ದ ವುರದ ಪರಿಶೋಭೆಯೆಂಬ ಪೊಸಗಾರ ಪಸರಮಂ ಪೆಱಿಗುವಮಾಡಿ ಪೊಱಿಮಟ್ಟು ಮನುಜೇಂದ್ರಮಂದರಂ ವುರಂದರದಿಶಾಭಿಮುಖ ನಾಗಿ ನಡೆಯೆ.

ಮಾಸ್ರ॥ ಧರೆಯೆಲ್ಲಂ ಸ್ಯಂದನಾಶ್ವದ್ವಿಪಭಟಬಳದಿಂ ವ್ಯೋಮಮೆಲ್ಲಂ ಚಳಚ್ಚಾ।
ಮರಕೇತುಚ್ಛತ್ರಶಸ್ತ್ರಪ್ರಕರದಿ ನಖಿಲಾಶಾಂತಮೆಲ್ಲಂ ಹಯೇಭೋ ॥
ತ್ಕರಹೇಷಾಬೃಂಹಿತೋನ್ಮಿಶ್ರಿತಬಹುಕಹಳಾಶಂಖಭೇರೀಮೃದಂಗ।
ಸ್ವರದಿಂ ದೋರಂತೆ ತೀವಲ್ ನಡೆದುದು ಕಟಕಂ ಕಂಪಿತಕ್ಷ್ಮೋಣಿಭಾಗಂ ॥ ೩೫ ॥

ವ॥ ಆಗಳ್.

ಚಂ॥ ಬಲಭರದಿಂ ನೆಲಂ ಕುಸಿಯೆ ಶೇಷನ ಪೆರ್ಮೆಡೆ ತಗ್ಗಿ ಕಂಠಕಂ[1]।
ಧರಧೊಳಗಟ್ಟಿಡಂಗಿದುದು ಕೂರ್ಮನ ಖರ್ಪರ ದೆಲ್ವು ನುಗ್ಗಿ ಬೆಂ ॥
ನೊಳೆ ಗುಟಿಲಿದತ್ತು ಬೆಟ್ಟುಗಳ ಮೂಲಶಿಖಾತಳಸಂಧಿ ಬಿಟ್ಟು ವಾ।
ಕುಳತೆಯ ನಾಳ್ದು ಕಿಟ್ಟುಲೆಕಿಟಿಂದಲೆ ಯಾದುದು ತಗ್ಗಿ ದಿಗ್ಗಜಂ ॥ ೩೬ ॥

ಚಂ॥ ಭರದಿಂ ಭೋಂಕನೆ ತಗ್ಗೆ ಭೂಮಿ ಫಣರತ್ನಂ ನೆತ್ತಿಯೊಳ್ ಬೆಟ್ಟದಂ।
ತಿರೆ ನಟ್ಟರ್ದೂಡೆ ಮುಚ್ಚೆವೋಗಿ ಫಣಿಪಂ ಪಾತಾಳದೊಳ್ ಕೂರ್ಮಖ ॥
ರ್ಪರಮುಂ ನೆಮ್ಮಿ ತದೀಯನಿಶ್ವಸಿತದಿಂ ಮೂರ್ಛಾಭರಂ ಪಿಂಗೆ ಮ।
ತ್ತಿರದಿಟ್ಟಿಂದಂತ ನುದಾತ್ತನೇಂ ಬಿಡುವನೇ ಕೆನ್ನಂ ಮಹಾಸತ್ವಮಂ ॥ ೩೭ ॥

ಕಂ॥ ಪಡೆ ನಡೆವಲ್ಲಿಯೆ ಪಲವುಂ।
ಪೆಡೆಗಳ ನಾನುತ್ತೆ ಕಮಠ ನನುಮತದಿಂದಂ ॥
ನಡೆದ ನೊಡನೊಡನೆ ನೆಲನೋ।
ಗುರ್ಡಿಸುಗು ವೆಂದುರಗಪತಿ ರಸಾತಳತಟದೊಳ್ ॥ ೩೮ ॥

ವ॥ ಆಗಳಲ್ಲಿಯುಂ.

ಮಾ॥ ಭರದಿಂ ಶೇಷನ ನೆತ್ತಿ ಪೊತ್ತಿ ಪೊಗೆಯಲ್ಕುಚ್ಛ್ವಾಸದಿಂ ದುಣ್ಮುವು।
ದ್ಧುರಧೂಮೌಘವೊ ಮೋಣ್ ನಿಜಪ್ರಿಯತಮುಂ ಸೌಂದರ್ಯಕಂದರ್ಪ ನೆ ॥
ಟ್ಟಿರೆ ಭೂವಲ್ಲಭೆ ಬೆನ್ನೊಳೆಟ್ಟಿದ್ದ ಪದಪಿಂ ಬರ್ಪ್ಪಂದವೋ ಪೇಟಿಳಿ ಮೆಂ।
ಬರ ಮಾತೊಪ್ಪೆ ಪೊದಟ್ಟಿದ್ದ ದಂದು ಬಲಪಾದೋತ್ಥಂ ರಜೋಮಂಡಳಂ ॥ ೩೯ ॥

ಕಂ॥ ಪಸರಿಸುವ ಪಾಂಸುಪಟಲಂ।
ಮಸುಳಿಸೆ ಮಸಮಸನೆ ತೋಱಿಪುವ ವಸರದೊಳ್ ಪೋ ॥
ಲ್ತೆನೆದುದು ಧರಿತ್ರಿ ಪೊಗೆ ಪುಗೆ ॥
ನಸುವಾಸಿದ ಪೊಗೆಯ ಚಿತ್ರಭಿತ್ತಿಯ ತೆಱದಿಂ ॥ ೪೦ ॥

[1] ಕಂಧರ ವೆಂಬ ಶಬ್ದವನ್ನು ಕಂದಳ ಎಂಬ ಶಬ್ದದ ರೂಪಾಂತರವಾಗಿ ಕವಿಯು ಪ್ರಯೋಗಿಸಿರುವಂತೆ ಕಾಣುವುದು. (ಲ. ರಪಾನು).

ವ॥ ಮತ್ತಂ.

ಕಂ॥ ಲೋಕೈಕಮಿತ್ರ ನಿರೆ ಪೆರ ।
ಗರ್ಕೆಯೊ ಪೃಥುತೇಜ ಮೆಂದು ಸೈರಿಸದಹೊಲ ॥
ತ್ಯಾಕೀರ್ಣಂ ಮಸುಳಿಸಿತು ದಿ ।
ವಾಕರಕಿರಣವು ನುದಗ್ರಧೂಳೀಪಟಲಂ ॥ ೪೧ ॥

ಮ॥ ಪಿರಿದುಂ ಮುನ್ನ ಮನೇಕಪಾಪಹಿತ ಮಪ್ಪುದ್ಯನ್ಮದೋದ್ರೇಕದೊಳ್ ।
ಪೊರೆಯುತ್ತಿರ್ದ ಮಳೀಮಸಾಕೃತಿ ಕುಜಾತಂ ಧೂಳಿಜಾಳಂ ದಿಗಂ ॥
ಬರಸಾಂಗತ್ಯವು ನಪ್ಪುಗೆಯ್ದು ಬಪಿಂಕಂ ಸದ್ವರ್ತನಂಬೆತ್ತುದೆ ।
ನ್ನರುವುಂ ಪೊರ್ದಿಸದೀ ದಿಗಂಬರಸಮಾಯೋಗಂ ಸದಾಚಾರಮುಂ ॥ ೪೨ ॥

ವ॥ ಅಂತು ಮಲ್ಲದೆಯುಂ.

ಕಂ॥ ಎಡೆ ನೆಱಿಶಿಯದೀಬಲಕ್ಕಾ ।
ನೆಡೆವಾಡುವೆ ನೆಂದು ನೆಲನ ನೊದವಿವ ತೆಱಿವಿಂ ॥
ಕಡಲಂ ಪೀರ್ದುದು ರಜ ಮೆಂ ।
ಪಡೆದುದೊ ಯುವರಾಜನಲ್ಲಿ ಪಡೆವಳವೆಸರಂ ॥ ೪೩ ॥

ವ॥ ತದನಂತರಂ.

ಕಂ॥ ಕರಗಿಸಿದುದು ರಜಮುಂ ಚಾ ।
ಮರಪವನಂ ವಾಜಿವದನವಾಯು ಪತಾಕಾಂ ॥
ಬರಮಾತರಿಶ್ವ ನನುಗತ ।
ಮರುತಂ ಮತ್ತೇಭಕರ್ಣತಾಳಸವಿಸಾರಂ ॥ ೪೪ ॥

ವ॥ ಮತ್ತಂ.

ಮ॥ ಹಯಲಾಳಾಜಳಮುಂ ಮದೇಭಮದಮೂತ್ರಾನಾರಮುಂ ರೇಣುಸಂ ।
ಚಯಮುಂ ಮೊಱಿಸ್ಸಿಸಿ [1] ಮುಂದುಗಾಣಿಸಿತ ನಧ್ವಾಲೋಕ ಮಾಗಿರ್ದ ನೇ ॥
ನೆಯ ನಧ್ವಾನದೊಳಂ ತದೇನನಿತಱಿಂ ಮಾಣ್ದಿರ್ದುದೇ ಯಾನಲೀ ।
ಲೆಯುಮಂ ನೋಱಿಪ್ಪ ವಿಯಚ್ಚರರ್ಗೆ ತೆಱಿಪಂ ಮಾಡಿತ್ತು ಕರ್ಣ್ಣಾರ್ವಿನಂ ॥ ೪೫ ॥

ವ॥ ತದನಂತರಂ.

ಚಂ॥ ಬಳೆದುದೊ ಭೂತಳಂ ಸುರಿದುದೋ ನಭ ವಿಾಂದುದೊ ದಿಕ್ತಟಂ ಬಳಂ ।
ಗಳ ನೆನೆ ಪರ್ವಿದಾಪಡೆಯ ತೊಱಿತ್ತಿಱಿಯಿಂ ಗಿಡುಬಳ್ಳಿ ಭೂರುಹಾ ॥
ವಳಿ ಪೊದಱಿಳ್ಳ ಬಲ್ಲಡವಿ ಪೆರ್ವಯಲಾಯ್ತು ನದೀನದೌಘ ಮಾ ।
ಗಳೆ ಬಱಿಗಂಪಲಾಯ್ತು ಕುಱಿಯುಂ ತೆವರುಂ ಸಮನಾಯ್ತುದೆತ್ತಲುಂ ॥ ೪೬ ॥

[1] ತರ್ಗಿಸಿ.

ವ॥ ಎನಿಸಿ ನಡೆವಲ್ಲಿ.

ಉ॥ ಆಗುಣತುಂಗದೇವನ ಮಹಾಕಟಕಂ ನಡೆವುತ್ಸವಕ್ಕೆ ಪ ।
ಕ್ಕಾಗಿ ಜಗಕ್ಕೆ ಬೀಱಿದುವು ಪೆಂಪ ನನೇಕನಗೋವಕಂರಭೂ ॥
ಭಾಗ ಮನೇಕರವ್ಯತರುಷಂಡ ಮನೇಕನದೀನದಾಂತಿಕಾ ।
ಭೋಗ ಮನೇಕದಿವ್ಯಜನತೀರ್ಥನಿವಾಸ ಮನೇಕನಂದನಂ ॥ ೪೭ ॥

ವ॥ ಅಂತುವಿವಿಧರವ್ಯಪ್ರದೇಶವಿಶ್ರಾಂತಶಿಬಿರನಾಗುತ್ತ ಲೆತ್ತಿಬರ್ಪ ವಿಕ್ರಮವಿನೋದನೆಟ್ಟಿರವ ನಾಪ್ತಗುಪ್ತಚರರಿಂದ ಮಱಿದು ಕೆಲದ ನೆಲದ ಮಂಡಳಿಕವರ್ಗಮೆಲ್ಲಂ ತಲ್ಲಣಿಸಿ ಸುವಿಟಜನದಂತೆ ವಿದಿತಭೀರುಭಾವಮುಂ, ವಾದಕನಿಕಾಯದಂತೆ ಘನಕಂಪಮುಂ, ಕ್ಷೀಣಶಶಿಯಂತೆ ವಿಕಳಾತ್ಮಮುಂ, ನಿದಾಘದಂತೆ ಶೋಷಿತಜಲಾಶಯಮುಂ, ಸ್ನಪನಜಲದಂತೆ ಗಳಿತಾವಲೇಪಮುಂ, ಶುಷ್ಕಕುಸುಮದಂತಪರಾಗರಸಮುಂ, ಆರ್ಕರಿಪುವಿನಂತೆ ನಿರ್ಮುಕ್ತಭೋಗಮುಂ, ಮೃಗಯಾವಿನೋದದಂತೆ ಧೃತರಾತ್ರಿಜಾಗರಮುಂ, ಉತ್ಖಾಖಟ್ಟಿದಂತೆ ಶೂನ್ಯೀಕೃತಕೋಶಮುಂ, ಯೋಗಿಗಣದಂತೆ ವಿಷಯತ್ಯಾಗನಿರತಮುಂ, ಖೇಡದಂತೆ ಗೋತ್ರವಾಹಿನೀವಳಯಿತಮುಂ, ಅಸಿತಕಂರಚರಿತ್ರದಂತೆ ದುರ್ಗೋಪಗತಮುಂ, ಇಂದ್ರತನುವಿನಂತೆ ಧೃತಮಹಾಲೋಚನಸಹಸ್ರಮು ಮಾಗುತ್ತು ಮಿರಲಲ್ಲಿ ಕೆಲಬರ್ ಮುನ್ನ ಪದ್ಮರಾಜದಿಗ್ವಿಜಯದೊಳ್ ತಾಗಿ ಬಾಗಿದನುಭೂತ [1]ವರಿಪ್ಲವರ್.

ಚಂ॥ ಬಗೆಯದಿದಿರ್ಚಿ ನಾವುದು ಮರುಳ್ತನ ಮುಳ್ಳಿಂದ ನಿತ್ತು ತೆತ್ತು ಕೆ ।
ಯ್ಮುಗಿದು ಬರ್ದುಂಕುವಂ "ಹರಣಮುಳ್ಳೊಡೆ ಹಾಡಿ ಯುಣಲ್ಕೆ ಬರ್ಪುದೊ ॥
ಮ್ಮೆಗೆ" "ತಲೆಸುತ್ತುವೋಗಿ ತಲೆ ಯಿರ್ದೊಡೆ ನಾಲ್ವುದು" ಕಾದಿ ಸತ್ತೊಡೆ ।
ತ್ತುಗುಮೆ ಸಮಸ್ತವಸ್ತುತತಿ ನಾವುದಱಿಂ ಸಿರಿಭೋಗಲಾಗದೇ ॥ ೪೮ ॥

ಚಂ॥ ನಯಮಿದು ನಮ್ಮ ನಾಡ ಗಡಿಯಂ ಪುಗದಲ್ಲಿಯೆ ಬಂದು ಮುತ್ತದ ।
ಲ್ಲಿಯೆ ಬೆದಱಿಟ್ಟ ಸಂಹರಿಸದಲ್ಲಿಯೆ ರಾಜ್ಯಮು ನೀಟಿದ್ದಿಕೊಳ್ಳದ ॥
ಲ್ಲಿಯೆ ಬೆಸಕೆಯ್ವ ಮೆಂದು ನಿಜಸಾರಥನಂಗಳ ನಟ್ಟ ಮುಂದೆ ಭೀ ।
ತಿಯಿ ನಿದಿರ್ವಂದು ಕಂಡ ರಸುವಿಟ್ಟವರೇ ನುಚಿತಪ್ರವೀಣರೋ ॥ ೪೯ ॥

ವ॥ ಅಂತು ಕಂಡ ಪರವುರಾಧಿಪರ ವಿವಿಧವಸ್ತುಸಥಾಭ್ಯವಮುಂ ಕೆಯ್ಕೊಂಡು ತದೀಯಮುಂಡಳಿಂಗಳ ನುಟಿಸಿದುಟಿಸಿದ ರಿವುಮುಂಡಳಕ್ಕೆ ನಡೆದು.

ಮ॥ ಅನತಕ್ಷತ್ರಿಯರೊತ್ತುಗೊಂಡ ಗಿರಿದುರ್ಗ ಕ್ಕುಗ್ರವಜ್ರಾಗ್ನಿ ಕಾ ।
ನನದುರ್ಗಕ್ಕೆ ಮಹಾದವಾಗ್ನಿ ಜಲದುರ್ಗಕ್ಕುರ್ವಿದಾವಾರ್ವಾಗ್ನಿ ಧಾ ॥
ನ್ವನದುರ್ಗಕ್ಕೆ ಬೃಹಲ್ಲಯಾಗ್ನಿ ಯೆನೆ ತನ್ನುದ್ಯತ್ಪ್ರತಾಪಾಗ್ನಿ ನೀ ।
ಟಿಶ್ಚಿನಸುಂ ಪರ್ವಿ ವಿಗುರ್ವಿಸಲ್ ನೃಪಸುತಂ ವಿಕ್ರಾಂತಮಂ ತೋಱಿದಂ ॥ ೫೦ ॥

[1] ಪರಿಪಟಿಷ್ಮರ್.

ಮ॥ ಉಲಿದುದ್ವೃತ್ತರ ಮೊತ್ತಮುಂ ತಲೆದೂಗಿ ಸೆಲ್ಲಂಗೊಂಡು ವೃಂದಂಗಳಂ ।
ನೆಲೆಸಿಗೊಂಡುಟ್ಟುದ ನೀಟಿದ್ದು ಕೊಂಡು ಬಳವಮಂ ಬೆಂಗೊಂಡು ದುರ್ಗಂಗಳಂ ॥
ಕುಲಿಪಿಂದಂ ಪರಿಮುತ್ತುಗೊಂಡು ಪುರಮುಂ ಕೆಯ್ಕೊಂಡು ನಾನಾರ್ಥಮುಂ ।
ನೆಲೆಸಿಗೊಂಡಾಯ್ಕುಳಿಗೊಂಡ ನುರ್ವ್ಯಯಶಮುಂ ವಿಶ್ರಾಂತಕಾಳಾನಳಂ ॥ ೪೧ ॥

ವ॥ ಮತ್ತಮಾಳ್ವಲದ ತೋಳ್ವಲದ ಬಾಳ್ವಲದ ಗರ್ವದಿಂದುರ್ವಿ ಮಲೆದ ಗರ್ವಿತೋರ್ವೀಶ ಬಳಮ ನೆಬ್ಬಿಟ್ಟ.

ಮ॥ ಅನಲಂ ಕಾನನಮಂ ಕಲಿತ್ತಡಗಿಡೆಲ್ ಸುಟ್ಟುಂ ಬಟಿಕ್ಕಲ್ಲಿ ನೂ ।
ತನಬೀಜಾಂಕುರವೃದ್ಧಿಯಂ ನೆಗಟಿಪಂ ತುದ್ವೃತ್ತ ಭೂಪಾಲರಂ ॥
ಮುನಿಸಿಂ ಕೊಂದು ಬಟಿಕ್ಕೆ ತತ್ಪದವಿಯೊಳ್ ತದ್ವಂಶಮುಂ ಧಾತ್ರಿ ಜೀ ।
ಯೆನೆ ಸಂಸ್ಥಾಪಿಸಿ ಪದ್ಮಸೂನು ಮೆಱಿಸಿದಂ ಕೋಪಪ್ರಸಾದಂಗಳಂ ॥ ೪೨ ॥

ಉ॥ ಅನತರಾಗಿ ಜೀವಿಸದೆ ದುಷ್ಟನೃಪರ್ ಕೆಲರೋಡಿ ಪೋಗೆ ಪಾ ।
ಥೋನಿಧಿಯಲ್ಲಿ ಪೊಕ್ಕೊಡವರಂ ತವಿಸಲ್ ಬಟಿಸಂದು ನಿಂದುವಂ ॥
ದಾನೃಪಸೂನುವಿಕ್ರಮಕೃಶಾನು ವದಲ್ಲದೊಡಲ್ಲಿ ಬೇಱಿಸಿ ನೀ !
ವರ್ಗಾನಿಸರಿಂಬ ರಾರೊ ಬಡವಾನಳ ನೆಂಬುದದೇನೊ ತೋಱಿರೇ ॥ ೪೩ ॥

ವ॥ ಮತ್ತಮಲ್ಲಿ ಕೆಲರ್ ವಿದೇಶಗಮನಕ್ಕೆ ಸಲ್ಲದೆಯು ಮನುಪ್ರವೇಶಗಮನಕ್ಲೇಶದಿಂ ನೆಗಟ್ಟಿದ.

ಕಂ॥ ಅನುನಯದಿಂ ಭೂಮ್ಯುಪನತ ।
ಜನಪರ್ ಕೋಶೋಪನತಮಹೀಶರ್ ದೇಶೋ ॥
ಪನತಕ್ಷಿತಿಪರ್ ಸರ್ವೋ ।
ಪನತನೃಪರ್ ತನ್ಮಹೀಶದಯೆಗೆಡೆಯಾದರ್ ॥ ೪೪ ॥

ಚಂ॥ ಬೆದಱಿದ ರಾಜಧಾನಿ ಬೆಸಕೆಯ್ಯದ ಬಲ್ಲಿದ ರೊಡ್ಡಿ ಕಾದಿ ಸಾ ।
ಯದ ಸಮರೋದ್ಧತರ್ ಕಿಡದ ಕಂಟಕ ರೋಡದ ಬೇಡವಟ್ಟು ಪೋ ॥
ಗದ ಕಲಿಗೋಂಟಿ ಸಿಲ್ಕದ ವಿರೋಧಿಕುಟುಂಬ ಮಿಱಿಂಬುಗೊಂಡಡಂ ।
ಗದ ಖಳರನ್ಯಮಂಡಳದೊಳಿಲ್ಲ ಕುಮಾರ ನೀದೇನುದಗ್ರನೋ ॥ ೪೫ ॥

ಮ॥ ನೆಗಟ್ಟಿದ್ದಂಡತೆ ಕಂಟಕಸ್ಥಿತಿ ಸರೋಜವ್ರಾತದೊಳ್ ರಾಜಲೀ ।
ಲೆ ಗುರುಸ್ಫೂರ್ತಿ ನಭೋಗ್ರದೊಳ್ ಚಪಲತಾಸಂಗಂ ವಿಪತ್ಪಕ್ಷ ಮು ॥
ದ್ರಿಗಳೊಳ್ ಕೋಶವಿಭೂತಿ ವಿಕ್ರಮದ ಸೊಂಪು ದ್ಯಾನದೊಳ್ ಪೀನ ಮೊ ।
ಪ್ಪುಗು ಮುರ್ವೀಶರೊ ಳೊಪ್ಪ ದಿಂದೆನಿಸಿದಂ ತನ್ನೀಟಿಶ್ಲಿಯಿಂ ಪದ್ಮಜಂ ॥ ೪೬ ॥

ಮು॥ ಜಗತೀಪಾಲರ ನೊತ್ತಿ ಕೊಂಡು ಪಿತೃಗಟ್ಟುತ್ತುಂ ಬಹುಶ್ಲಾಘ್ಯನ ।
ಸ್ತುಗಳಂ ಬಿಣ್ಣಿದುವಾಗಿ ಬಾವಿಸದೆ ಪುಣ್ಯಕ್ಷೇತ್ರದೊಳ್ ಚೈತ್ಯಕೋ ॥
ಟಿಗಳಂ ಮಾಡಿಸಿ ಸಿದ್ಧಸೇನೆಗಳ ನಟ್ಟುತ್ತುಂ ತ್ರಿಲೋಕೀವಿಭೂ ।
ತಿಗವಂ ಮೆಯ್ಸಿರಿಯಾಗಿ ಭಾವಿಸಿದ ನೇಂ ಪದ್ಮೋದ್ಭವಂ ಭವ್ಯನೋ ॥ ೫೩ ॥

ವ॥ ಅಂತು ಮೂಡಣಿಂ ಮೊದಲ್ಗೊಂಡು ಪುಷ್ಕಲಾವತೀವಿಷಯದೊಳಗಣರವಿಂದಪುರದ, ಮಾಳಿನೀಪುರದ, ವಸುಮತೀಪುರದ, ಮೇಖಳಾಪುರದ ಪುರಂದರಪುರದ, ಮಣಿಪುರದ, ಸೀಮಂತ ಪುರದ, ಪಾಂಚಾಲಪುರದ, ಮಂದರಾಪುರದ, ಮಳಯಪುರದ, ಸಿಂಹಪುರದ, ಪಾಟಳಾವತೀಪುರದ, ಭದ್ರಾಂಗಪುರದ, ರತ್ನಖೇಟಪುರದ, ಛತ್ರಾಕಪುರದ, ಕನಕಪುರದರಸುಗಳ ನಾಕ್ರಮಿಸುತ್ತಂ.

ಕಂ॥ ಪಾಳಿಸುತುಂ ಧರ್ಮಮು ನು ।
ನ್ಮೂಳಿಸುತುಂ ದ್ರೋಹರಂ ಯಶೋರಸದಿಂ ಪ್ರ ॥
ಕ್ಷಾಳಿಸುತುಂ ದಿಙ್ಮುಖಮಂ ।
ಮೇಳಿಸುತುಂ ಚಂಡವಿಕ್ರಮಾಡಂಬರಮುಂ ॥ ೫೪ ॥

ವಂದಿಸುತುಂ ವಂದ್ಯರ ನಭಿ ।
ವಂದಿಸುತುಂ ಬುಧರ ನಜಿತಕೆದಾಣದೊ ಳೆನೆವಂ ॥
ತೊಂದಿಸುತುಂ ವಿಜಯಧ್ವಜ ।
ವೃಂದಮ ನುತ್ತರದಿಗಂತಮಂ ನಾರ್ತಂದಂ ॥ ೫೫ ॥

ವ॥ ಅಂತು ವಸಂತಕಾಲಾದಿತ್ಯ ನಂತೆ ಲೋಕೈಕಮಿತ್ರ ನುತ್ತರಾಯಣಪ್ರವೃತ್ತ ನಾಗಿ ತದ್ದಿಶಾದೇಶಂಗಳ [ರಸುಗಳನ]ವನತವರ್ಮಾಡುತ್ತಿಳಾವಿಳಾಸಿನಿಯ ಶಿಖಂಡಮಂಡನದಂತಿರ್ದ ಶಿಖಂಡಮೆಂಬ ಮಂಡಳದೊಳಗೆ ಬರೆವರೆ.

ಉ॥ ಭಾಸುರನಾಗಪೂಗ ಮವಳೆಂಬಿತವಾಜಿಸವಾಜ ಮಾತ್ತಬಾ ।
ಣಾಸನಖಡ್ಗಧೇನುಬಹುಭಲ್ಲಚಯಂ ವಿಜಯಾಭಿರಾಮ ಮು ॥
ಧ್ಯಾಸಿತವೃದ್ಧಕಂಚುಕಿಕುಳಂ ವಿವಿಧಕ್ಷಿತಿಭೃದ್ವಿಳಾಸಿ ಸಂ ।
ತ್ರಾಸಕ ಮೆಂಬರಣ್ಯ ಮೆನಿದತ್ತು ಕುಮಾರನ ಸೈನ್ಯದಂದದಿಂ ॥ ೬೦ ॥

ವ॥ ಆಗಳಾವಿವುಳವಿಪಿನದೊಳ್ ಬಹುವಿಧಶ್ವಾಪದೋಪಪ್ಲವಕ್ಕೆ ಪಕ್ಕಾಗದಂತು ಸುಭಟ ಸಂರಕ್ಷಿತಮಾಗಿ ಕಟಕಮಂ ಸೇನಾನಿ ನಡೆಯಿಸೆ ರಥಾಧಿರೂಢ ನಾಗಿ ಬರ್ಪ ಚಿತ್ರಭಾನುಮಿತ್ರಂಗೆ ಚಿತ್ರಸೇನ ನೆಂಬ ಸಾರಥಿ ಯಿಂತೆಂದಂ.

ಮು॥ ಇದು ಸಂತ್ರಾಸಕ ಮೆಂಬರಣ್ಯ ಮಿದಱೊಳ್ ತಾ ನುರ್ವಿ ಕಾರಂಗನೆಂ ।
ಬದಟಂ ಲುಬ್ಧಕರಾಜ ನುಗ್ರಬಲಸಂಪನ್ನಂ ತಗುಲ್ದೀಪ್ರದೇ ॥
ಶದ ನಾಡೆಲ್ಲಮು ನೊತ್ತಿ ಪೀಡಿಸುತು ಪುನ್ಯಾಸಾಧ್ಯನಾಗಿರ್ದು ಪೊ ।
ರ್ದಿದ ನುರ್ಕಿಂ ನಿಜತಾತವಿಗ್ವಿಜಯದೊಳ್ ನಿಂದಾಂತು ಕಾಲಾಂತಮಂ ॥ ೬೧ ॥

ವ॥ ಅದಱಿಂದೆ.

ಚಂ॥ ಅದಟಿನೊಳೆಂದು ನಿನ್ನ ಪಿತೃಗೊಡ್ಡಿಸಿ ಸತ್ತರ ನೆತ್ತರೆತ್ತಲುಂ ।
ವುದಿ ದಭಿವರ್ದಿಸಲ್ ಬೆಳೆಗು ವೆಂಬಿನ ಮಿಲ್ಲಿ ತಳರ್ತಶೋಕೆ ವೂ ॥
ವೊದವಿದ ದಾಸವರ್ಣ ಮಲರೇಱಿದ ಪಾದರಿ ಪಣ್ತು ತೊಂಡೆ ಕೊ ।
ರ್ವಿದ ಕಿಸುಚಂದನಂ ಬೆಳೆದ ಬಂದುಗೆ ಯೆಂಬಿ ವಳುಂಬ ವಾಗಳುಂ ॥ ೬೦ ॥

ವ॥ ಅದಲ್ಲದೆಯುಂ.

ಕಂ॥ ವುದಿದೆನೆದುವು ನಿಜಪಿತೃ ವಂ ।
ಕದ ಕರಿಗಳ ಮದದ ನೊವಡು ಮುನ್ನಿನ ಸಪ್ತ ॥
ಚ್ಛದಗಂಧದಿ ನೀಳಾಗಂ ।
ಧದಿ ನೆನೆವುದು ದೇವ ಭಾವಿಸೀಕಾನನಮುಂ ॥ ೬೧ ॥

ವ॥ ಎಂದು ತದ್ಗಹನಮುಹಿವಮೂಭಿವರ್ಣನವ್ಯಾಜದಿಂ ಪದ್ಮರಾಜದಿಗ್ವಿಜಯವಿಜಯವೃತ್ತಾಂತ ಮುಂ ನೂತನವಚನದಿಂ ನಿಜಗುರುವರಾಕ್ರಮಾಕೀರ್ಣನೋದೀರ್ಣಪುಳಕಾವತಂಸಕರ್ಣ ನಾದ ಲೋ ಕೈಕಮಿತ್ರಂಗೆ ಚಿತ್ರಭಾನು ವಭಿಮುಖ ನಾಗಿ.

ಕಂ॥ ತಾಳಪ್ರಪಂಚದಿಂದೆ ಮು ।
ದೇಳಾಜಾತಿಗಳಿ ನೆನೆದು ಸರಸನಟಕ್ರೀ ॥
ಗಾಳಂಬವಮಾಗಿ ಭರತದ ।
ಲೀಲೆಯು ನಾಳ್ದವುದರಣ್ಯಸಂತತಿ ವಿಪಿನಂ ॥ ೬೪ ॥

ಅಮೃತಾಶ್ರಯ ಮಿಂದಾಶ್ರಣೀ ।
ಸಮೇತ ಮುಮುರೀವಿಳಾಸಿ ರಂಭಾರಮ್ಯಂ ॥
ಸುಮನೋನಿಳಯಂ ವಜ್ರ ।
ಪ್ರಮುಖ ಮಿದಿಳೆಗಿಱಿದ ಸಗ್ಗ ವೆನಿವುದು ದುರ್ಗಂ ॥ ೬೫ ॥

ವ॥ ಮತ್ತಂ.

ಕಂ॥ ಕಮಳಾಶ್ರಯ ಮಿದು ನಿನ್ನಂ ।
ದ್ಯುಮಣಿಯು ನತಿಲಲಿತತಿಳಕ ಮಿದು ನಿನ್ನಂ ದ್ವಿಜೋ ॥
ತ್ತಮನಂ ಭುವನಾದ್ಭುತ ವಿ ।
ಭ್ರಮ ಮಿದು ನಿನ್ನಂ ಪಯೋಧಿಯಂ ಪೋಲ್ತಿರ್ಕುಂ ॥ ೬೬ ॥

ಪುನ್ನಾಗವಿರಾಜಿತ ಮಿದು ।
ಪನ್ನಗವಧುವಂ ಕರೇಣುವಂ ಕೇಸರಸಂ ॥
ಪನ್ನಮಿದು ಹರಿಯ ನಂಬುಜ ।
ಮು ನ್ನಿನಿಯಿವುದಖಿಳವೃಗಶರಣ್ಯಮರಣ್ಯಂ ॥ ೬೭ ॥

ಮ॥ ಇದು [1]ದೀಹಾರದ ಗೇಹದಂತೆ ಹರಿಣೀರವ್ಯಂ ಗ್ರಹಗ್ರಾಮದಂ ।
ತುದಿತಕ್ರೋಡವಿಭಾಸಿ ಕೋಶಗೃಹದಂತಷ್ಟಾವದಾಧಿಷ್ಠಿತಂ ॥
ಕದನೋರ್ವೀತಳದಂತೆ ದಾರುಣಚಮೂರಾವಸ್ಥಿತಕ್ಷ್ಮೋಭಿತಂ ।
ಮದವತ್ಕುಂಜರಗಾತ್ರದಂತೆ ವಿಳಸದ್ಭೂಪ್ರಭಾವಿಭ್ರವುಂ ॥ ೬೪ ॥

ವ॥ ಅದಲ್ಲದೆಯುಂ ಮಾತಂಗಸಂಗಿಯಾಗಿಯುಂ ಸದ್ವಂಶವಿರಹಿತಮಲ್ತು, ಬಂಧುಜೀವಹಾರಿಯಾಗಿಯು, ವಧೀಕೃತಗೋತ್ರಮಲ್ತು, ಮದನವಿಜಯಾಭಿವೃದ್ಧಿಕರಮಾಗಿಯುಂ ವಿರಾಗದೂರಮಲ್ತು, ವಿವಿಧಶಬ್ದರಚಿತಮಾಗಿಯುಂ ಶಬ್ದಾವಕಾಶಮಲ್ತೆನಿಪ ವಿರುದ್ಧಗುಣಮು ನವಲಂಬಿಸಿತ್ತು, ಮತ್ತಂ. :

ಮ॥ಸ್ರ॥ ಮರಿಚವ್ಯಾಕೀರ್ಣಪರ್ಣಂ ಕುರರತನುವ(ನಾ)ಗ್ರಂಥಿಪರ್ಣಚ್ಛದಂ ಕ ।
ತ್ತುರಿವೆಕ್ಕಂ ಸಲ್ಲಕೀವಲ್ಲವ ವಿಭಶಿಶುವಂ ಶ್ರೀಫಳೋದ್ಯತ್ಫಳಂ ಬಂ ॥
ಧುರಗೋಲಾಂಗೂಲಮುಂ ಕೊರ್ವಿಸೆ ಸೊಗಯಿಪುದೀಕಾನನೋದ್ದೇಶ ಮೋರಂ ।
ತಿರೆ ನಾನಾಭಿಲ್ಲಪಲ್ಲೀಖಗಮೃಗಲತಿಕಾವೃಕ್ಷಗುಲ್ಮಾವಕಾಶಂ ॥ ೬೫ ॥

ವ॥ ಎಂದಿಂತು ವಿವಿಧವಚನಮುಂ ಪೆಱೆಪಿಡಿದು ಮುಚ್ಚಿಸುತ್ತುಂ ಬರ್ಪಲ್ಲಿ.

ಶಾ॥ ರಂಗತ್ಪಿಂಗಳಲೋಚನಂ ಘುಳುಘುಳುಪ್ರಧ್ವಾನರೌದ್ರಾನನಂ ।
ಲಾಂಗೂಲಾಹತಭೂತಳಂ ರುಚಿರದಂಷ್ಟ್ರಾಯುಗ್ಮತಿಗ್ಮಂ ಕುರಂ ॥
ಗಾಂಗೋಜ್ಜೃಂಭಿತರಕ್ತಸಿಕ್ತನಖರಂ ವ್ಯಾಕೀರ್ಣಕರ್ಣಂ ಕುಮಾ ।
ರಂಗಾಶ್ಚರ್ಯಮು ಮಾರ್ಗ ಮಾದುದು ಭಯಂ ಶಾರ್ದೂಲವಿಕ್ರೀಡಿತಂ ॥ ೬೦ ॥

ವ॥ ಅದಲ್ಲದೆಯುಂ.

ಮ॥ ವದನೋಗ್ರಸ್ವನದಿಂದ ಮೊಂದೆರಡು ವಾಳೋದ್ಘಾತದಿಂ ಮೂಜಿಜುನಾ ।
ಲ್ಕುದಿತಕ್ರೂರನಖಪ್ರಹಾರಭರದಿಂ ದೈದಾಜು ದಂಷ್ಟ್ರಾಗ್ರಪಾ ॥
ತದಿ ನೇಲಿಶಿಂಟು ಸುರುಳ್ದುರುಳ್ವಿನೆಗ ವೇಣಶ್ರೇಣಿಯಂ ಪಾಯ್ದು ಕೊಂ ।
ದುದ ನೇವೇಟಿವ್ವಿದೊ ಶತ್ರುಸಂಹರಣಕೇಳೀಶೇಷ್ಮುಮಂ ವ್ಯಾಘ್ರಮುಂ ॥ ೬೧ ॥

ಉ॥ ಆಳಿ ನಿಜಾಸ್ಯದಿಂ ನಿಮಿರೆ ಪುತ್ತಿನ ಬಾಯ್ದುಲೆಯೊಳ್ ಪಿಸೀಲಿಕಾ ।
ಮಾಳಿಗೆ ಪಾಸಿ ನಾಲಗೆಯ ನೊಂದು ಭಯಂಕರಭೆಲ್ಲ ಮುಲ್ಲಸ ॥
ದ್ಬಾಳಿತವಾಳಗುಲ್ಮದೊಳಗಿರ್ದುದು ವಾಸೊವಡಿಂಗೆ ಕಾಯ್ವಿನಿಂ ।
ಕಾಳಿಗನಾಗ ನಿರ್ದಪುದಿದೊಂದು ತವಾಳದ ಬಳ್ಳಿ ಯೆಂಬಿನಂ ॥ ೬೨ ॥

ವ॥ ಮತೊ್ಮಂದುಪೆರ್ಮೆಳೆಯ ಸುತ್ತುಮುತ್ತಿನೊಳ್.

[1] ದೇಹಾರ (ದೇವಾರ ಎಂದಿರಬಹುದು).

ಚಂ॥ ಮುನಿದಿನೆ ಪಂದಿ ನೊಂದೊಳಱಿ ಕಾಯ್ಪಿನೊಳಳ್ಕುಱಿ ದಾಡೆಗುಟ್ಟೆ ತೊ ।
ಟ್ಟನೆ ಪಂತಂದು ಮುಟ್ಟಿದೊಡಿಸಲ್ ತೆಱಿಪಿಲ್ಲದೆ ಬಿಲ್ಲ ನಿಕ್ಕಿ ಡೊ ॥
ಕ್ಕನೆ ನಡೆ ಪಾಯ್ದು ಮೆಯ್ವೊಣರ್ದು ಕಣೆಪ್ಪೊಱಿಪಾಯ್ವಿನ ವೊತ್ತಿ ಗಂಟಲಂ ।
ವನಚರ ನಾರ್ದು ಕೊಂದು ಮೆಱಿಸಿದಂ ಭುಜವೀರ್ಯಮು ನುಗ್ರಶೌರ್ಯಮಂ ॥ ೩೩ ॥

ಮ॥ ಭರದಿಂದುರ್ವಿದ ನಾಯ್ಕಳವ್ವಳಿನೆ ಭಿಲ್ಲಂ ಬಿಲ್ಲ ನಾಕೃಷ್ಟಿಗೆ ।
ಯ್ದಿರೆ ಕಂಡಟ್ಟಿ ಕುನುಂಗಿ ಪೊಂಗಿ ಮೆಟಿಸಿಯಂ ಸಂರಂಭದಿಂ ಱಿಸಿಪ್ಪುಗೊಂ ॥
ಡಿರುತಂ ಗರ್ಜಿಸಿ ದಾಡೆಗುಟ್ಟಿದುದು ಧಾತ್ರೀಭೀಕರಂ ವಿಕ್ರಮಾ ।
ಕರ ಮವ್ಯಾಕುಳಕೇಕರಂ ಪೃಥುಕಲಾಲಾಶೀಕರಂ ಸೂಕರಂ ॥ ೩೪ ॥

ವ॥ ಅದಂ ನೋಡುತ್ತುಂ ಬರೆ ಮುಂದೊಂದೆಡೆಯೊಳ್.

ಮ॥ಸ್ರ॥ ಅಮಿತೋದ್ಯದ್ಭುಲ್ಮವಲ್ಮೀಕಮು ನುಡಿದಿಱಿಯುತ್ತುಂ ಜರತ್ಕಂಟಕೋಗ್ರ ।
ದ್ರುಮದಿಂದಂ ತನ್ನ ತೀನೆರ್ದೆಡೆಯ ನೊರಸುತಂ ಪ್ರೌದ್ವಿಷಾಣಂ ಸ್ಫುರದ್ಭಾ ॥
ಣ ಮುತುಚ್ಚಂ ಲೋಲವೃಚ್ಚಂ ಭೃಕುಟಿಕುಟಿಲಭಾಳಂ ಸರಕ್ತಾಹಿಲೀಳಂ ।
ಯಮವೇಷಂ ಘೋರಘೋಷಂ ನಡೆದುದು ಬಳವತ್ಕಾಳಕಾಯಂ ಲುಲಾಯಂ ॥ ೩೫ ॥

ವ॥ ಮತ್ತೊಂದು ಜಲಾರ್ದ್ರಕರ್ದಮೋದ್ದೇಶದೊಳ್.

ಕಂ॥ ಕಱಿಕೊರ್ವಿ ಪಂದಿಗಡ್ಡಿಯ ।
ಮುಱಿಗೊಂಡಿರದೆತ್ತುತಿರ್ದ ಸೂಕರನಂ ಕೆ ॥
ಯ್ಪಱಿದ ಕರಿಕಳಭ ಮೆಂದ ।
ಳ್ಕುಱಿಸಿ ಪಾಯಲ್ ಬಗೆದುದೊಂದು ಸಿಂಹಕಿಶೋರಂ ॥ ೩೬ ॥

ವ॥ ಅದಕ್ಕನತಿದೂರದೊಳ್.

ಉ॥ ಪಾಯ್ದೊಡೆ ಕೋಡ ನೂಱಿಸಿ ನಡೆ ಬಿಟ್ಟಿ ಮದೇಭದ ದಂತದಿಂ ಭರಂ ।
ಗೆಯ್ದೊಡೆಯುಳ್ತು ಕಾಡ ನರುಣಾಂಬುಗಳಿಂ ಬೆದೆಗೂಡಿ ತಾಯ್ನಲ ॥
ಕ್ಕೆಯ್ದಿರಲೆಂದು ಬಿತ್ತಿದುದದೊಂದು ಮೃಗಾರಿ ತದುತ್ತಮಾಂಗದಿಂ ।
ಸಯ್ದನೆ ನೋರ್ವ ಮುತ್ತುಗಳೆ ಬಿತ್ತುಗಳಾಗಿರೆ ತನ್ನ ಬೀರಮಂ ॥ ೩೭ ॥

ವ॥ ಆ ವಿಕ್ರಮಾರಂಭನಿವುಣಕಂಠೀರವ ಮಲ್ಲದೆಯಂ.

ಚಂ॥ ಶರಭ ಮಿದಿರ್ಚೆ ಸಾರ್ಚಿ ಗೆಲಲುಂ ಕೊಲಲುಂ ನೆರ ವಿಲ್ಲದಿರ್ದೊಡೆಂ ।
ಹರಿ ಮೃಗರಾಜನಾಮು ವಟಿಗುಂ ಪಟಿಗುಂ ಜಗ ವೋಡಿ ಬಿಟ್ಟಿಡ್ಡೆಂ ॥
ದಿರದಿದಿರಾಗಿ ಸತ್ತು ಜಸಮಂ ಗೆಡೆಗೊಂಡು ದದಂತೆ ಲೋಕದೊಳ್ ।
ಧರೆ ಪೊಗಟ್ವಂತು ಸತ್ತ ಕಲಿಯುನ್ನತಿ ಗೆಲ್ಲದಿ ನಗ್ಗವಲ್ಲವೇ ॥ ೩೮ ॥

ವ॥ ಮತ್ತಮೊಂದು ಸರಳಸಲ್ಲಕೀತಮಾಳಲವಂಗಸಂಗತಪ್ರದೇಶದೊಳ್.

ಮ॥ ಪರಿವಚ್ಛಾಂಬುವ ನೂಡಿ ಪೂಗವನಮುಂ ಕಿಬ್ಬಿಕ್ಕಿ ಕರ್ಪೂರಭೂ ।
ಜರಜೋರಾಜಿತಮಾಗಿ ಕೋಡ ಹೊಗೆ ಕಾಡಂ ಸುತ್ತೆ ಮಾಳಿಜಾನಿಯೊಳ್ ॥
ಭರದಿಂದಂ ಮೊಗವಿಕ್ಕಿ ಪೋರ್ದು ಶಬರೀಗೇಯಂಗಳಂ ಸೋಲದಿಂ ।
ಮುರವಟ್ಟಾಲಿಸಿ ಲೀಲೆಯಂ ಮೆಱೆಪಿದು ದುರ್ವಿೀಬಂಧುರಂ ಸಿಂಧುರಂ ॥ ೭೯ ॥

ವ॥ ಅದಲ್ಲದೆಯುಂ.

ಚಂ॥ ವನನೃಗಕೋಟಿ ನೋಟ್ಪಿ ಜನ ಮಾಗೆ ಮುದಂ ತಿಮಿರಾಗೆ ಕೋಡು ಕೂ ।
ರ್ಮೊನೆಯಲಗಾಗೆ ಕಾಡು ಕಳ ನಾಗೆ ಮದಭ್ರಮರಾಳಿ ರಕ್ಕೆಗಂ ॥
ಟಿನ ಮಣಿಯಾಗೆ ತಕ್ಕಲಿಯದಿಕ್ಕತುಳಂ ಪೊಣರ್ದಂಕದಂತೆ ಬ ।
ಲ್ಮನಿಸಿನಿಸೊಳೊಂದನೊಂದಿಱಿಯಲಿರ್ದುವು ತಳ್ತೆರಡುಗ್ರದಂತಿಗಳ್ ॥ ೮೦ ॥

ವ॥ ಮತ್ತಮೊಂದೆಡೆಯೊಳ್.

ಚಂ॥ ಉಡಿದರೆಪೆಲ್ದು ಪೆಲ್ದಳಿರ ನಿಕ್ಕುವ ಬಲ್ದಳಿಗೊರ್ಮೆಂಬ ನಿಂಬಿನಿಂ ।
ಕೊಡೆವಿಡಿ ವಗ್ರಹಸ್ತಜಳಮಂ ನಸುವಿಂಡುವ ಕೋಡೆ ನಿಟ್ಟು ತೀಂ ॥
ಗಿಡಿವುವ ಕರ್ಣತಾಳದೆಲರಿಂ ಬೆಮರಾಱಿಪ ಕೆಯ್ತ ಮೊಪ್ಪೆ ಬ ।
ಲ್ಪಿಡಿಪಿಡಿದಿರ್ದುದಂಗಜನ ಕಯ್ಪಿಡಿಯಂ ಪಿಡಿಯಂ ಮತಂಗಜಂ ॥ ೮೧ ॥

ವ॥ ಮತ್ತಮೊಂದೆಡೆಯೊಳ್

ಉ॥ ಬೇನೆಯಿ ನಹ್ನಿಗಳ್ ನಸು ಮುಗುಳ್ಕಿರೆ ಪಿಂತು ಕುನುಂಗಿ ಜೋಲೆ ಪೇ ।
ರಾನೆಯು ಕರ್ಣವಾಯು ಬೆಮರಾಱಿಸೆ ತಾಯ್ವಿಡಿ ನೀಡೆ ಹಸ್ತದಿಂ ॥
ತಾ ನವಳಂಬಿಸಿರ್ದು ತಟಭೂಜದೂಳೊಂದುಕರೇಣು ಸೂಲಿಸು ।
ತ್ತೇನಣ ವಲ್ಲಿ ಮಾಡಿದುದೊ ಬೇಡರೊಳಂ ಕರುಣಾನುಭಾವಮುಂ ॥ ೮೨ ॥

ವ॥ ಅದಲ್ಲದೆಯುಂ.

ಕ॥ ಪರಿಕಲಿತಗಂಡಶೈಲೋ ।
ತ್ಕರಮಧ್ಯದೊಳಮರ್ದು ರಂಜಿಪಂಜನಗಿರಿಯಂ ॥
ಕರಿ ಪೋಲ್ತಿರಲೆನೆದುದು ಬಳ ।
ಸಿರೆ ಪೋತಕಲಾಪ ವಲ್ಲಿ ಯೂಥನನಾಥಂ ॥ ೮೩ ॥

ವ॥ ಮತ್ತೊಂದು ಸಪ್ತಶಾಲ್ಮಲೀಷಂಡದೊಳ್.

ಕಂ॥ ಎಲೆವೆಱಿಸು ಗಾಳಿಯಿಂ ಪಱಿ ।
ದೆಲವದ ಪಸುಗರ್ಗಯ್ಗಳುರುಳೆ ಮೂಗೂಱಿ ಶುಕಾ ॥
ವಳಿ ಬಿಟ್ಟಿದ್ದ ವೆಂದು ಬಿಡೆ ನುಂ ।
ಗಲೊಡಜರ್ದುವವದಱಿ ಪೊದಱಿ ಬಾಳಬಿಡಾಳಂ ॥ ೮೪ ॥

ಕಂ॥ ತುಱುಗಿದ ತೂಱಿಲ್ಗೊಂಬಿನ ।
ತೆಱಿವುಗಳೊಳ್ ಕೂಡಿ ನುಸುಳಲಾಱಿದೆ ಸಿಲ್ಕಿಂ ॥
ಪಱಿದಿರ್ದ ಬೆಳ್ಮುಗಿಲ್ಗಳ ।
ಮುಱಿಗಳಿವೆನಿಸಿದುವು ಶಾಲ್ಮಳೀಫಳತೂಳಂ ॥ ೪೫ ॥

ವ॥ ಮತ್ತಮೊಂದಡೆಯೊಳ್.

ಕಂ॥ ಮರಗೊಂಬಿಂದಂ ನೇಲ್ದೆಲೆ ।
ಯುರಗನ ವಜ್ಜಳಿಪ ಪೆತೆಯ ಮಾಣಿಕವೆಳಗೇಂ ॥
ಕರ ಮೆನೆದುದೊ ವನದೇವತೆ ।
ಯರಮನೆಯೊಳ್ ನೇಲಿದೆಲೆಯ ನೊಡರೆಂಬಿನಗಂ ॥ ೪೬ ॥

ವ॥ ಅದಲ್ಲದೆಯುಂ.

ಚಂ॥ ಬಿರಿಕಿನೊ ಳೊಯ್ಯನೊಯ್ಯ ನರೆದೋಱುವ ಬಿತ್ತುಗಳಿಂ ವಿಳಾಸ ಮಾ ।
ವರಿಸಿದ ದಾಡಿವಿಾಫಳೆವು ನೊಯ್ಯನೆ ಚುಂಬಿಸಿ ಬರ್ಪ ಕಾಂತನಂ ॥
ತರುಚರಕಾಂತೆ ಕಂಡು ವುರುಡಿಂ ಬಡಿಯಲ್ ಪಡಿಗೊಂಡುದೀಟ್ಟಿ ಬ ।
ಲ್ಪರಿದು ಬಲೀಮುಖೀಮುಖವು ನಿಂಬೆನೆ ಚುಂಬಿಸೆ ತೇಂಕಿ ಕೋಪಮಂ ॥ ೪೭ ॥

ವ॥ ಮತ್ತಮನೇಕಪನಸಜಂಬೀರನಾರಿಕೇಳಸಹಕಾರಕದಳೀಪ್ರಮುಖಫಲಿತಭೂಜರಾಜಿಗಳ್.

ಕಂ॥ ಅನುಭವಿಸುವ ಜನಮುಂ ನೆ ।
ಟ್ಟನೆ ಪಡೆಯದೆ ಬಱಿದೆ ಕಿಡುವ ವಿವಿಧಫಲಂಗಳ್ ॥
ನೆನೆಯಿಸಿದು ವಲ್ಲಿ ದುರ್ಭಗ ।
ವನಿತೆಯ ರಮಣೀಯರೂಪಯೌವನದೊದವಂ ॥ ೪೮ ॥

ವ॥ ಅಂತವಂ ನೋಡುತ್ತುಂ ಬರೆವರೆ ಮುಂದೊಂದುಶಬರಶಿಬಿರದೊಳ್.

ಚಂ॥ ಬಿದಿರಿದ ಮುತ್ತುವಲ್ಲ ಮುಱಿಮುಗಿನ ಬೊಂದಿಗೆವಾಯ ಪೊಂಗುಗ ।
ಗಲ್ಲದ ಪಸುರ್ಗಣ್ಣ ಕೆಂದಲೆಯ ಕಾಳಿಗವರ್ಣದ ಬೀಡೆಗಾಲ ಜೋ ॥
[ಲ್ದುದರದ ಕಂ]ಬಿಗೆಯ್ಯ ಸಿರಿಮೆಯ್ಯ ಟಿಗಡ್ತೆದ ಕೂನಬೆನ್ನ ನು ।
ರ್ಗಿದ ಕೊರಲಱ್ದಿ ಪೇರುರದ ಲುಬ್ಧಕ ರಿರ್ದರಲಬ್ಧವಾರ್ದವರ್ ॥ ೪೯ ॥

ವ॥ ಅವರೊಳಗೆ.

ಚಂ॥ ಸುಡುರ್ದಲೆ ಸಣ್ಣವುರ್ವೊಳುಮೊಗಂ ಬೆಳೆವರ್ಗಿಯ್ ಮಿಳಿರ್ವೊಳ್ಗುರುಳ್ ತೊದ ।
ಳ್ನುಡಿ ನಿಡುಗಣ್ ತೊಳಪ್ಪ ಕದವುದ್ದನೊಸಲ್ ಸುಲಿಪಲ್ ಘನಸ್ತನಂ ॥
ಬಡನಡು ನೀಟ್ಟಿ ತೋಳ್ ಪೊಳೆವ ನುಣ್ಪೊಡೆ ಮೆಲ್ಲಡಿ ಕೊಳ್ಗಿನೋಟ ಮು ।
ಗ್ಗಡದ ಸುವರ್ಣ ಮೆಂಬಿವಱಿ ನೊಪ್ಪಿದುದಿರ್ದ ವನೇಚರೀಜನಂ ॥ ೫೦ ॥

ವ॥ ಆಗಳ್ಕಿರಾತರ ದುರ್ದರ್ಶನೀಯತೆಯುಮು ನಾಕಿರಾತೆಯರ ಸಹಜಾಮಳಾಂಗರಮು ಣೀಯತೆಯುಮುಂ ಚಾತುರ್ಯಚತುರಾನನಂ ಕಂಡು ಚಿತ್ರಭಾನುಗಿಂತೆಂದಂ.

ಕಂ॥ ಈಚಾರುರೂಪಲಲಿತವ ।
ನೀಚರಿಯರ ನೀಕುರೂವರೊಳ್ ಕೂಡಿ ನಿರಾ ॥
ಲೋಚಕ ನಾಬಿದಿ ವೇದಜ ।
ಡೋಚಿತವೃತ್ತಿಯ ನದಿಂತು ಕನ್ನಡಿಸುವನೇ ॥ ೯೦ ॥

ವ॥ ಎಂದು ನುಡಿಯುತ್ತುಂ ಬರ್ವನ್ನೆಗ ಮೊಂದುವಕ್ಕಣಪರ್ಯಂತದೊಳ್ ಮಿಸುಪ ಕಿಸುಚಂದನ ದೊರಲ್ ಸ್ವರ್ಣ್ಣವರ್ಣ್ಣದಿಂದ ಮುಜ್ಜಳಿಸೆ.

ಚಂ॥ ಮದಗಜದಂತಕಾಂತಮುಸಳಂಬಿಡಿದೆತ್ತುವ ತೋಳ ನುಣ್ಬೊಗರ್ ।
ಮದನನ ಬಾಳೆ ನುಣ್ಬೊಗರ ನೀಟಿಸೆ ಗಾವರದಿಂಪು ವಲ್ಲಕೀ ॥
ಮೃದುರವ ದಿಂಪ ನೀಯೆ ಬಿದಿರಕ್ಕಿಗಳಂ ಚಳಿಸುತ್ತೆ ಪಾಡಿದರ್ ।
ಮದವತಿಯರ್ ಕಿರಾತಸತಿಯರ್ ಪ್ರಭುವೇರುವ ಲೀಲೆಯೇಟಿಕ್ಕಿಯಂ ॥ ೯೦ ॥

ವ॥ ಮತ್ತಮೊರ್ವಳ್.

ಚಂ॥ ಬನಕೆ ಕೊನರ್ತು ವಲ್ಲವಿಸಿದಪ್ಪು ದೊರಲ್ ನಸುದೇಂಕಿದಪ್ಪು ದಂ ।
ಬನಿತುವರಂ ಪೊದಟ್ಟಿ ಕಳಗೀತರಸಂ ಕವಿತಂದಡರ್ದವೋಲ್ ॥
ವನಮೃಗವೆತ್ತಲುಂ ತಳರಲಾಱಿದೆಱಿದ್ದಿರೆ ವೇಣುಬೀಜಮುಂ ।
ವನಚರಿ ಕುಟ್ಟುತುಂ ಪದೆದು ಪಾಡಿದಳಾಪ್ರಭುವಂಶವೇರುವಂ ॥ ೯೨ ॥

ವ॥ ಅದಲ್ಲದೆಯುಂ.

ಚಂ॥ ಮೃದುತಳತಾಳಕೀಪ್ರಹತಿ ಕಂಕಣರುಂಕೃತಿ ಯಕ್ಕುತಪ್ಪದೀ ।
ವದನವಿಳಾಸಮಂ ಶಬರಿ ತೋರ್ಪೆಡೆಯೊಳ್ ಮುಱಿದೇಱಿನೋಱಿಪ್ಪುದುಂ ॥
ಪುದಿದ ಕಟಾಕ್ಷಕಾಂತಿಗಳಿ ನೇನಮರ್ದಿರ್ದನೊ ಚಂದ್ರಕಾಂತಿಗೋ ।
ಡದೆ ಮುಳಿದಿರ್ದ ಕಟ್ಟಿಲೆಯ ಮೊತ್ತ ಮಿದೆಂಬಿನ ಮೊರ್ವಲುಬ್ಧಕಂ ॥ ೯೪ ॥

ವ॥ ಮತ್ತಮೊಂದೆಡೆಯೊಳ್ ಅನೇಕಮುಂಡನಮುಂಡಿತೆಯರ್ ನೆರೆದಿರ್ದಲ್ಲಿ.

ಚಂ॥ ವನಚರರೆಚ್ಚು ಕೊಂದಿಭದ ಮುತ್ತಿನ ಹಾರಮು ನಾಳ್ದ ತತ್ಪ್ರಿಯಾಂ ।
ಗನಿಯರ ಯೌವನೋನ್ಮದವ ನೊರ್ವಳೆ ಯವ್ವನಗರ್ವಮೆಂದು ತ ॥
ನ್ನನುಭವದಿಂದೆ ಹೀನಬಳನಾದ ವನೇಚರ ನಾಯ್ದು ತಂದು ಕೊ ।
ಟ್ಟೆನುಪಮಮೌಕ್ತಿಕಾಭರಣಕಾಂತಿ ಯದೇಂ ನಗುವಂತುಟಾದುದೋ ॥ ೯೫ ॥

ವ॥ ಅದಲ್ಲದೆಯುಂ.

ಕಂ॥ ಪಗೆಯ ನುಬ್ಬಿದಪ್ಪಿದುದು ಕಾ ।
ಳಿಗನಾಗನ ನೊಂದು ಸೋಗೆನವಿಲೆನೆ ಕಣ್ಪೀ ॥
ಲಿಗಳ ಪಸದನದೆ ಕೋಮಳೆ ।
ನೊಗಯಿಸಿದಳ್ ಶಬರಿ ಕಬರಿ ಬೆಂಬಿಡದೆನೆಯಲ್ ॥ ೯೬ ॥

ಚಂ॥ ನಿಯಮದಿ ನಾಗಳುಂ ವನದೊಳಿರ್ಪ್ಪವಳೀಕ್ಷಿಸಿ ಕಲ್ತಳಕ್ಕು ವಿ।
ಕ್ರಿಯೆಗಳ ನೆಂಬಿನಂ ಶಬರಿ ತಾಳ್ದಿದ ಪುಲ್ಗೆಯು ಕೊಳ್ಗನೋಚ ಮಂ ॥
ಚೆಯ ನಿಮಿರ್ದಿಂಚರಂ ಗಿಳಿಯ ಚುಂಬನ ವಾನೆಯ ಸೋಂಕು ವಾನರ ।
ಕ್ರಿಯೆ ಯವುರ್ದವ್ವು ನೋಟದೊಳೊಜಿಲ್ಚಿತು ಕೂಪದೊಳೊರ್ವ ಭಿಲ್ಲನಂ ॥ ೯೭ ॥

ವ॥ ಬೇಱೊಂದುಮಧುಪಾನಗೋಷ್ಠಿಯೊ ಳನೇಕಶಬರೀಜನಂಗಳಿರ್ದಲ್ಲಿ.

ಕಂ॥ ಓರಂತೆ ತಾಳ [1]ತೆಂಗಿನ ।
ಸೀರೆಯ ಕಳ್ಗಳ್ ಕಳರ್ಚಿ ನಿತ್ಯಗ್ರಹಮುಂ ॥
ಪಾರಯ್ಸಿ ಕುಣಿದರರಿಬರ್ ।
ಭೋರೆನೆ ಕೆಯ್ಪಱಿಯೆ ರಂಜಿವಱಿಯೆ ಯೆನೆ ವನದೊಳ್ ॥ ೯೮ ॥

ವ॥ ಅದಲ್ಲದೆಯುಂ.

ಉ॥ ಕಾಸಿನ ಕಂಬಿ ಜಾಳವಲೆ ಗಾಳದ ಕಟ್ಟಗೆ ಸೊಕ್ಕುಬೆಂಡು ಬಿಲ್ ।
ಹಾಸದ ಕುನ್ನಿ ದೀವದ ಮೃಗಂ ಬಲೆ ಪೆರ್ವಡಿ [2]ಗೋರಿ ಗಾಣ ವೆಂ ॥
ಬೀಸಮಕಟ್ಟು ಪಾಪದೆಱಿವೆಟ್ಟು ಜಳಸ್ಥಳಪಾಱಿದಿಂ ಕ್ರಿಯೋ ।
ಲ್ಲಾಸಮು ನುಂಟುಮಾಡಿ ಪೊಱಿಮಟ್ಟುದು ಬೇಂಟೆಗೆ ಲುಬ್ಧಕವ್ರಜಂ ॥ ೯೯ ॥

ವ॥ ಮತ್ತಮೊಂದುವುಳಿಂದಮುಂದಿರದ ಮುಂದೆ ಚಮೂರಚರ್ಮ ಚಮರವಾಳ ಗಜದಂತಾಳಿಗಳ ನೊಟ್ಟಿದ ದುಷ್ಕೃತಕದ ಬೆಟ್ಟ ಮೆನಿಪಟ್ಟದಿಂದಂ.

ಉ॥ ತೊಟ್ಟನೆ ಬೀಱಿ ಮೇಲೆ ಪುಲಿದೋಲ್ ನಿಜದೀವದ ಪುಲ್ಲೆ ಬೆರ್ಚಿ ಧಿಂ ।
ಕಿಟ್ಟು ಚಮೂರ ವೆಂದು ಬಿಱಿತೋಡೆ ಬಹಿರ್ಮೃಗಿ ಯೆಂದದಂ ತಗು ॥
ಳ್ದಟ್ಟುವ ವಿಶ್ವಕದ್ರುವ ನಭೀಕ್ಷಿಸಿ ಸಿಂಹಕಿಶೋರ ಮೆಂದು ಬೆಂ ।
ಗೊಟ್ಟು ವಿಭಂಗಳೀನದು ನಿಮಿರ್ಚಿತೊ ಬೆರ್ಚಿನ ಬಳ್ಳವಳ್ಳಿಯಂ ॥ ೧೦೦ ॥

ವ॥ ಅಂತವಂ ನೋಡುತ್ತು ವೆಯ್ದಿ ಬರ್ವುದುಂ ತತ್ಸಮಯದೊಳ್ ಸೇನಾಪತಿಪ್ರೇಷಿತ ಪ್ರೇಷ್ಯ ಜನದೆ ಬಱಿಸಂದು.

[1] ತೇಂಕಿನ. [2] ಗೋಲಿ.

ಮಃಸ್ರ॥ ಪಣೆಕಟ್ಟಿಲ್ವೀಲಿಯಿಂ ದುಟ್ಟುದು ಪೊಸದಳಿರಿಂ ಹಾರ ಮುಗ್ರೇಭಮುಕ್ತಾ ।
ಗಣದಿಂ ಕರ್ಣಾವತಂಸಂ ಫಣಿಫಣಮಣಿಯಿಂ ಸ್ವಾಸಕಂ ದಂತಿದಾನೋ ॥
ಕ್ಷಣದಿಂ ಮೆಯ್ವೆತ್ತಿರಲ್ ಬಂದೆಱಗಿದ ನಧಿಕಪ್ರೀತಿಭೀತಾಂತರಂಗಂ ।
ಗುಣತುಂಗಶ್ರೀಪದಕ್ಕಾಗಹನದ ಶಬರಾಧೀಶ್ವರಂ ಶಂಬ ನೆಂಬಂ ॥ ೧೦೧ ॥

ವ॥ ಎಱಗಿ.

ಮಃ॥ ಕರಿದಂತಂ ಚಮರೀರುಹಂ ಪುಲಿದೊವಲ್ ಹಂಸಚ್ಛದಂ ಪೀಲಿ ಕ ।
ತ್ತೂರಿ ಕಾಲಾಗುರು ಚಂದನಂ ಹಿಮಕರಂ ಜಾತೀಫಳಂ ಪೂತಿ ಸೂ ॥
ಕರಮುಕ್ತಾಮಣಿ ಯಬ್ಜಪತ್ರಮಣಿ ಚೂಡಾರತ್ನ ಮೆಂಬೀವನಾಂ ।
ತರಸಂಜಾತಮು ನಾತ ನೋಲಗಿಸಿದಂ ಸದ್ವಸ್ತುಸಂಘಾತಮುಂ ॥ ೧೦೨ ॥

ವ॥ ಅಂತೋಲಗಿಸಿ ನಿಟಿಲತಟಘಟಿತಕರಯುಗಳ ನಾಗಿ.

ಕಂ॥ ಕಾಡ ಮೃಗದೊಡನೆ ಮೃಗದವೊ ।
ಲಾಡುವ ಜಡಮತಿಯೊ ಳೆನ್ನೊ ಳಾವುದ [1]ಮೂಣಂ ॥
ನೋಡದಿನಿಸೊನೆದು ದೇವರ್ ।
ನೋಡುಗೆ ಭಯಭಕ್ತಿಗಿರದೆ ನಡೆವಾಳ್ವೆಸನಂ ॥ ೧೦೩ ॥

ವ॥ ಎಂದು ಬಿನ್ನಪಂಗೆಯ್ಯಲ್ ಕೇವಳಭೃತ್ಯಭಾವಾವಳಂಬನಂ ಶಂಬನಂ ಸಮುಚಿತಪ್ರಸಾದದಿಂ ಮನ್ನಿಸಿ ನಡೆವ ಯುವರಾಜಂಗೆ ಮುಂದೊಂದೆಡೆಯೊಳ್.

ಮಃಸ್ರ॥ ಅಥಟಂ ಲೋಕೈಕಮಿತ್ರಂ ಬರೆ ಪುಗಲೆಡೆಯಂ ಕಾಣದುಳ್ಳಳ್ಳಿ ಬಂದ ।
ಪ್ಪುದು ಕಾಣ್ಬುದ್ಯೋಗದಿಂದೀಗಹನದ ಬಹಳಧ್ವಾಂತ ಮೆಂಬಂತೆ ತಾತ್ಪ ॥
ರ್ಯದಿ ನಾದಾಶ್ಚರ್ಯಗಂಧಕ್ಕೆಳಸಿ ಯಳಿಕುಳಂ ಕೂಡೆ ಮುಂದೈಸಿ ತನ್ನೊಳ್ ।
ಪುದಿದೆತ್ತಂ ಬರ್ಪಿನಂ ಬಂದುದು ವನದಿ ನದೊಂದದ್ಭುತಂ ವ್ಯಾತರಿಶ್ವಂ ॥ ೧೦೪ ॥

ವ॥ ಆಗಳಾಸವಿಮಾರಸೌರಭಂ ತನಗನಾಘ್ರಾತಪೂರ್ವಮು ಮತಿಮನೋಹರಮು ಮಪ್ಪುದಱಿಂ ತದ್ಗತಚಿತ್ತನುಂ, ನಿಮಿಲಿತಲೋಚನನು ಮಾಗಿ ಕಿಱಿದುಬೇಗ ಮಾಗಾಳಿವೆಱಗಿನೊಳೆ ರಥಮುಂ ನಿಲಿಸಿ ವಿಸ್ಮಯಂಬಡುತ್ತೆ ನಿಂದಿರ್ದ ಯುವರಾಜನಾದೇಶದಿಂ ವಾಸ್ತವ್ಯನಪ್ಪ ಪುಳಿಂದಂ ಮಿಳಿಂದನಂತೆ (ಪ)ವನಾನೀತಕುಸುಮಗಂಧಮು ನಾರಯುದ್ದು ಎಡೆವಾಡಿ ಬಂದು ಬಿನ್ನವಿಸಿ ಕುತೂಹಳಂ ಬೆರಸು ತತ್ಪ್ರದೇಶಕ್ಕೊಡಗೊಂಡೊಯ್ದು ತೋರ್ಪುದುಂ.

ಕ॥ ಸ್ವೀಕೃತಶುಭಲಕ್ಷಣ ನಂ ।
ಗೀಕೃತರಮಣೀಯರೂಪಯವ್ವನಮುತ್ತಂ ॥
ಸ್ವೀಕೃತನಮೇರುಚಾರುಲ ।
ತಾಕುಸುಮಂ ಖಚರನೊರ್ವ ನಪಗತಗರ್ವಂ ॥ ೧೦೫ ॥

[1] ಳಾವುದು ಮನಣಂ.

ಚಂ॥ ಪೊನಸಿರಿಖಂಡವಿಂದ ಮೆಸೆವಣ್ಪಿನ ಕಂಪಿನಲಂಪೊಳೆಕ್ಕೆಯಿಂ ।
ಮುಸುಱಿದು ವೀತನಂ ಫಣಿಗಳೆಂಬಿನ ಮೊಂದಿದ ನಾಗಪಾಶದಿಂ ॥
ಮಿಸುಕದೆ ಕಟ್ಟುಪಟ್ಟು ಮಣಿಭೂಷಣಕಾಂತಿ ಕುಜಾತಕುಂಜತಾ ।
ಮಸಮ ನಗಲ್ಕೆ ದೀನಮುಖ ನಿರ್ದ ನದೊಂದು ಮಹಾಹ್ಲವೃಹ್ಲದೊಳ್ ॥ ೧೦೬ ॥

ವ॥ ಅಂತಿರ್ದ ವಿಯಚ್ಚರನ ನಚ್ಚರಿವಟ್ಟು ನೋಡೆಂವಲ್ಲಿ.

ಚಂ॥ ಇದು ವಿಪರೀತ ವಿಾದೊರೆತ ನಾಳ್ದುದು ಬಂಧುರಗಂಧಮುಂ ತವೂ ।
ಳೆದ ತಳಿರ್ಗೊಂಚಲೆಂಬ ಮತಿಮೋಹಮು ನೀಕ್ಷಿಪ ವಜ್ರಸೂನುಗಿ ॥
ತ್ತುದು ತನಿಗರ್ವುವೋಲ್ ಮುಸುಱಿ ನಿಂದೆಳೆದುಂಬಿಯ ಬಂಬಲಿಂ ಕಱಿಂ ।
ಗಿದ ನವಪಾರಿಜಾತದಲದೊಂಗಲ ಕರ್ಣಿಕೆ ತತ್ಕಪೋಲದೊಳ್ ॥ ೧೦೭ ॥

ವ॥ ಆಗಳ್.

ಮಾಲಿನೀ॥ ಬಱಿಯ ನುಱಿಯ ದುನ್ಮತ್ತಾಳಿ ತಣ್ಗಾಳಿಯೊಳ್ ನೈ ।
[1]ತಱಿಪಿ ಬರೆ ತೆರಳ್ದೆಯ್ದಿ[ಯ್ದಿ]ನೌಗಂಧ್ಯ [2]ವಿಾಚೆ ॥
ಲ್ವಱಿಯದೆಸೆವ ಕರ್ಣೋತ್ತಂಸದಿಂ ಬಂದುದೆಂ[ದಂ] ।
ದುಱಿದ ನಿರದೆ ಚಿತ್ತಭ್ರಾಂತಿಯಂ ರಾಜಪುತ್ರಂ ॥ ೧೦೮ ॥

ವ॥ ತದನಂತರಂ ದೃಢಪ್ರಣದ್ಧನಾಗಪಾಶಮು ನಿವಂಗಿದು ವಿರೋಧಿಕೃತ ವೆಂದಿಂಗಿತದಿ ನಱಿದು ಚಾತುರ್ಯಚತುರಾನನಂ ತನ್ನ ಮನ ವಾತನ ಶರೀರಸಹಜಸೌಕುಮಾರ್ಯಮುಂ ತತ್ಪುರುಷೋಪಲಕ್ಷಿತಾಕಾರಮುಮು ನಱಿದು ಆಗ್ರಹಂಗೆಯ್ಯೆ.

ಚಂ॥ ತನಗೆ ಭವಾಂತರಪ್ರಿಯತೆಯಿಂದೆ ಬಳಾಹಕನೆಂಬ ಖೇಚರಂ ।
ಮನವೊನೆದೀಯೆ ಮುಂ ಪಡೆದು ಬಂದ ವಿಮೋಚನಿ ಯೆಂಬ ವಿದ್ಯೆಯಂ ॥
ನೆನೆದು ಪಿನದ್ಧನಂ ಬಿಡಿಸಿದಂ ಖಗವಂಶನ ನಪ್ಪುದಲ್ತೆ ಭೂ ।
ವಿನುತಪರೋಪಕಾರಗುಣ ರೆಂತು ಮುಪೇಕ್ಷಿಪರೇ ವಿಷಣ್ಣರಂ ॥ ೧೦೯ ॥

ವ॥ ಆಗಳ್ ಮುಕ್ತನಾಗಪಾಶನು ಮುದ್ಗತಾಹ್ಲವೃಹ್ಲನು ಮಾಗಿ.

ಕಂ॥ ಸ್ಫುರಿತಮುಖಾಲೋಕಂ ಸ್ನೇ ।
ಹರಸಾರ್ದ್ರತೆ ಪಾತ್ರವೃತ್ತಿ ಯೆಂಬಿವು ತನಗೊ ॥
ಪ್ಪಿರೆ ದೀಪವರ್ತಿಯಂತಿರೆ ।
ಪರಹಿತನಿಧಿಗೆಱಿಗಿ ನುಡಿದ ನಾಖಚರೇಂದ್ರಂ ॥ ೧೧೦ ॥

[1] ತೆಳಸಿ. [2] ವಿಾಸಲ್ವಱಿಯಲೆ, ವಿರ್ಚಲ್ವ.

ಉ॥ ಆರೊಳರೀಮಹಾಟವಿಯೊಳಿಲ್ಲಿಗೆ ಮತ್ಕೃತಪುಣ್ಯದೇವತಾ ।
ಕಾರದೆ ಬಂದು ಬಂಧವು ನಗಲ್ಚಿದೆ ನಿನ್ನ ಹನಾದದಿಂದ ವೂ ॥
ವೈರಿಯ ನಿಂದೆ ಪೋಗಿ ಮಡಿಪಲ್‌ವಡೆದೆಂ ಪಡೆವೂತದೇನೊ ನಿ ।
ಷ್ಕಾರಣ(ದಿಂದೆ) ನೀನೆನಗೆ ಗೆಯ್ದುವಕಾರವು ನೆಂತು ನೀಗುವೆಂ ॥ ೧೧೧ ॥

ವ॥ ಎಂದು ನುಡಿದತಿವಿನತನ ನಾತನಂ ನೋಡಿ ಹರುಷದಿಂ.

ಕಂ॥ ನೀನಾರ್ಗೆ ನಿನ್ನ ನಾವು ವ ।
ದೇ ನಿಲ್ಲಿಗದೇಕೆ ಬಂದೆ ನಿನಗಿಂತೆಂತಾ ॥
ಯಿನ್ತಾನಾಗಪಾಶಬಂಧವಿ ।
ಧಾನದ ಬಲುಸಿಲ್ಕು ವೈರಿ ಯೆಂಬವ ನಾವಂ ॥ ೧೧೨ ॥

ವ॥ ಎಂದು ಬೆಸಗೊಳ್ವುದುಂ.

ಮ॥ ಅಮೃತಸ್ಯಂದವು ನಬ್ಜಕಂದವು ನುದಂಚತ್ಕುಂಚವುಂ ಸಂದ ಕುಂ ।
ದವು ನಿಂದುದ್ಯುತಿವೈಂವವುಂ ನಿಜಯಶಃಶ್ರೀಕಾಂತಿಸಂತಾನ ವೂ ॥
ಕ್ರಮಿಸಲ್ ಸದ್ಗುಣಧಾಮ ನಾದ ವಿನಯಾಲಂಕಾರನಂ ಸತ್ಯಸಂ ।
ಯಮನಂ ನಾರಪರೋವಕಾರಧನನಂ ಸೌಂದರ್ಯಕಂದರ್ಪನಂ ॥ ೧೧೩ ॥

ಉ॥ ಭೂಪಶಿಖಂಡಿಖೇಚರನ ನಾಹವದೋಹಳನಂ ಜಿನೇಶ್ವರ ।
ಶ್ರೀಪದಹೇಮತಾಮರಸಮಂಡಿತಮಾನಸನಂ ವಿವೇಕವಿ ॥
ದ್ಯಾಪತಿಯುಂ ಖಗಾಧಿಪತಿ ಕೇಳಿಸಲುದ್ಯತನಾದ ನಿಂತು ಸಂ ।
ಕ್ಷೇಪದಿ ನಾತ್ಮವೃತ್ತಕವು ನಂದೊಲವಿಂ ಪ್ರಭುವಂಶಮೆೀರುವಂ ॥ ೧೧೪ ॥

(ಇದು ಯುಗ್ಮಂ)

ಗದ್ಯ

ಇದು ಸಕಳಭುವನಸಂಸ್ತುತಜಿನಾಗಮಸುಕುಮುದ್ವತೀಚಾರುಚಂದ್ರಾಯಮಾಣಮಾನಿತ
ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರ ಪಂಡಿತದೇವಸುವ್ಯಕ್ತ ಸೂಕ್ತಿ
ಚಂದ್ರಿಕಾಪಾನವರಿಪುಷ್ಪವಾನಸವುರಾಳ
ಗುಣವರ್ಮನಿರ್ಮಿತವು ಪ್ಪ
ಪುಷ್ಪದಂತ ಪುರಾಣದೊಳ್
ಯುವರಾಜದಿಗ್ವಿಜಯವರ್ಣನಂ
ಪಂಚಮಾಶ್ವಾಸಂ

ಪುಷ್ಪದಂತಪುರಾಣಂ

ಪಷ್ಠಾಶ್ವಾಸಂ

ಶ್ರೀಮತ್ಪಂಚಗುರುಭ್ಯೋನಮಃ

ಕಂ॥ ಶ್ರೀವಿದ್ಯಾಧರಪತಿಯ ಕ ।
ಥಾವಿತತಕ್ಷೀರಮಂ ನಿಜಶ್ರುತಿಮುಖದಿಂ ॥
ಸೇವಿಸಿದಂ ಲುಪ್ತರಿಪು ।
ಶ್ರೀವನಜಂ ವ್ರಭುಗುಣಾಬ್ಧಿನೀಕಳಹಂಸಂ ॥ ೧ ॥

ವ॥ ಆದೆಂತೆಂದೊಡೆ.

ಮ॥ ಇದ ನೇವೇೞ್ವೆನೊ ದೇವ ಭಾವಿಸೆ ಕರಂ ಲಜ್ಜಾವಹಂ ಹೇಮಕೂ ।
ಟದ ವಿದ್ಯಾಧರರಾಜನೆಂ ಪೆಸರೊಳಂ ಚಿತ್ರಾಂಗ ನೆಂಬೆಂ ಮನೋ ॥
ಮುದದಿಂ ಮುಂದರಕಂದರಕ್ಕೆ ಪುರದಿಂ ಬಂದಾನು ವೆನ್ನೋವಳುಂ ।
ಪದುಳಂ ಕ್ರೀಡಿಸುತಿರ್ದ ವಲ್ಲದು ವಿಲಸತ್ಕಲ್ಪದ್ರುವೋದ್ಯಾನದೊಳ್ ॥ ೨ ॥

ವ॥ ಅಂತು ಯೌವನೋಚಿತಕ್ರೀಡಾವಿನೋದದಿಂದ ವಿರ್ದು ಪರಿಶ್ರಾಂತನಂ ಬಾಳುಂಬೇಳು ವೂಡಿ.

ಮ॥ಸ್ರ॥ ತೆಱಪಂ ಪಾಱುತ್ತು ಮಿರ್ದಿನ್ನಯ ರಿವುವ ನುಪಾಯಜ್ಞನಂ ಸ್ತೈರ್ಯಣದಿಂ ।
ಮುನ್ನುೞಿತಿ ಬನ್ನಂಬೆತ್ತನಂ ಪುಷ್ಕಲಪುರದ ಹಯಗ್ರೀವನಂ ಕರ್ಮದಿಂದಂ ॥
ಮುೞಿದಾಂ ವೆಯ್ವುಟ್ಟು ನಿದ್ರಾಸುಖದಿ ನಟಿಲೆ ಬಂದೆನ್ನ ನೀವಿದ್ಯೆಯಿಂದ ।
ಳ್ಕುೞಿತಿ ಕಟ್ಟಟ್ಟಿಲ್ಲಿಗೀಡಾಡಿಸಿ ಖಳನವ ನೆನ್ನೋವಳಂ ಕೊಂಡು ಪೋದಂ ॥ ೩ ॥

ಕಂ॥ ಕುತ್ತದ ಬಿತ್ತು ವಿವೋಹದ ।
ಪುತ್ತು ವಿವೇಕದ ವಿನಾಶ ವೆನಿಸುವ ನಿದ್ರಾ ॥
ವೃತ್ತಿಯಿ ನೀಪರಿಭವ ವೂ ।
ದತ್ತಲ್ಲದೊಡವನ ದೊರೆಯ ರೆನಗಣ್ಮವರೇ ॥ ೪ ॥

ವ॥ ಆದೊಡಂ.

ಕಂ॥ ಅವನೆನಗಪಕಾರಂಗೆ ।
ಯ್ದುವ ನಲ್ತುಪಕಾರಿಯಾದ ನೆಂತೆನೆ ಗುಣಗೌ ॥
ರವನಿಧಿಯೆ ನಿನ್ನ ದರ್ಶನ ।
ಮವನಯೆ ಕಾರಣದಿ ನೆನಗೆ ದೊರೆಕೊಂಡುದಱಿಂ ॥ ೫ ॥

ವ॥ ಅಂತು ನಿಜಪ್ರಪಂಚಮುಂ ಪೇೞಿ ಶೌರ್ಯಸನ್ನಾಹ ನಾದಂ ಹಯಗ್ರೀವನ ದುರಾತ್ಮವೃತ್ತಿಗೆ ಕುಪಿತಹೃದಯನಾಗಿ ತನಗೆ ಚಕ್ರವಾಲಪುರದ ವಿದ್ಯಾಧರಾಧಿಪತಿಯಪ್ಪ ಬಳಾಹಕಂ ಪರಮಪ್ರೀತನಪ್ಪುದಱಿಂ ಚಿತ್ರಾಂಗಂಗಿಂತೆಂದಂ.

ಕಂ॥ ನಿನಗೊರ್ವ ಖಚರಪತಿಯಂ ।
ಮೊನೆಗೆ ನಿರಂಬೇಟಿಶ್ವಿ ನೆಯ್ದಿ ತತ್ಪಳನಂ ನೀಂ ॥
ಮುನಿಸಾಟಿಶಿ ಕೊಂದು ವಿಜಯೂಂ ।
ಗನೆಯಂ ನಿಜವಧುಗೆ ಸವತಿಯಾಗಿಸು ರಣದೊಳ್ ॥ ೬ ॥

ಉ॥ ದೇವ ನಿಜಪ್ರಸಾದಮೆ ನೆರಂ ನೆರಮೆಂಬುದ ನೊಲ್ಲೆ ನಿಶ್ಲಿಗಾ ।
ನಾವುದುಮಂ ಮದುದ್ಧತಬಳಂ ಬೆರಸೀಗಳೆ ಪೋಗಿ ಬೇಗ ಮಾರ್ ॥
ಕಾವೊಡೆ ಮಿಕ್ಕಿ ಪುಷ್ಕರವುರಾಧಿಪನಂ ಮಗುಟಿಬ್ದಾನು ವೆನ್ನ ಮಾ ।
ದೇವಿಯು ಮೆಯ್ದಿ ನೀಂ ಕಳಿಬದಿಂ ಬಟಿಕೆನ್ನ ಪೊಟಿಲ್ಗೆ ಪೋದಪೆಂ ॥ ೭ ॥

ವ॥ ಎಂದು ಮತ್ತಮನೇಕವಿದ್ಯಾಬಲದೊಳಂ ಭುಜಬಲದೊಳಂ ಸುಭಟಬಲದೊಳಂ ಗೆಲ ಲಾರ್ಪ ನಂಬುಗೆನುಡಿದು ಬೀಟಿಕ್ಕೊಂಡು ಚಿತಾಂಗ ನತ್ತ ಪೋವುದು ಮಿತ್ತ ಲಾಕಾಂತಾರಮುಂ ದಾಂಟಿ ಬರ್ದಲ್ಲಿ.

ಉ॥ ಸಾಮಜಸಂಕುಲಂ ಪೆಡೆ ಚಮೂಪತಿ ನೆತ್ತಿಯ ಮಾಣಿಕಂ ಹಯ ।
ಸ್ತೋಮ ಮುದಗ್ರಜಿಹ್ವೆ ಸುಭಟಾವಳಿ ನಂಜಿನ ದಾಡೆ ಯೆಂಬಿನಂ ॥
ಭೀಮವುರಕ್ಕೆ ಕೋಟ್ಮಿಸಗಿ ನೀಟಿಶ್ದಿರಿಗೊಂಡುದು ವಜ್ಮವುತ್ರಸೇ ।
ನಾಮುಖ ಮೆಂಬ ಭೀಮಭುಜಗಂ ಮಲೆದಿರ್ದ ಮತಂಗರಾಜನಂ ॥ ೮ ॥

ವ॥ ಅಂತು ಮಂಗಳನಾಯಕವ್ರಜಮೇ ನಿಜಭುಜಕ್ಕೆ ಮತಂಗನನಾಪತಂಗಮುಂ ಮಾಡಿ ತತ್ಪು ರಮುಂ ಕೈಕೊಂಡಿರ್ದುದು ಮಲ್ಲಿಗೆಯ್ದಿವಂದು ಸೌಂದರ್ಯಕಂದರ್ಪಂಗಾಸನ್ನಮಾಗಿ.

ಚಂ॥ ತರುಣತಮಾಳಕಾಳಿಮವರಚ್ಛವಿವೆತ್ತುವಕಂಠದೊತ್ತ ನಾ ।
ವರಿಸಿ ಶಿಖಂಡಿಮಂಡಲದೊಳೊಂದಿ ಲಸದ್ಘನವುಪ್ಪದಿಂ ದಲಂ ॥
ಕರಿಸಿ ಸಲೀಲಭಂಗಮು ನುಪಾರ್ಜಿಸಿ ಭಂಗುರವೇಣಿ ಯೆಂಬ ಬಂ ।
ಧುರನದಿ ರಂಜಿಸಿತ್ತು ಮಹಿಕಾಂತೆಯ ಭಂಗುರವೇಣಿ ಯೆಂಬಿನಂ ॥ ೯ ॥

ಮ॥ ಕಳಹಂಸೀರವದಿಂದ ಮಾದರಿಸಿ ವೀಚೀಬಾಹುವಿಂ ಕಾಲ್ಗಳಂ ।
ತೊಳೆದಂಭಃಕಣಸೇನೆಯಿಂ ನರಸಿಜಶ್ರೀಗಂಧದಿಂ ಪೇನನಿ ॥
ರ್ಮಳವಸ್ತ್ರಂಗಳಿ ನರ್ಘ್ಯಮಂಗಳಮು ನಿಂಬಿಂ ಮಾಡಲುತ್ಕಂರೆ ಯಾ ।
ದಳಿಳಾನಾಥಸುತಂಗೆ ಸಿಂಧುನದಿ ಯಂತಭ್ಯಾಗತಪ್ರೀತಿಯೊಳ್ ॥ ೧೦ ॥

ಕಂ॥ ಎನಸುಂ ನೀರ್ಪೀರಲ್ಬಂ ।
ದ ನವಾಭ್ರದಿ ನಿನೆವ ವನಧಿವೇಳೆಯ ತೆಱಿನಂ ॥
ನೆನೆಯಿಸಿದತ್ತಾನದಿ ಮು ।
ಜ್ಜನಕೇಳಿಯೊಳಿರ್ದ ಕಟಕದಾನೆಗಳಿಂದಂ ॥ ೧೧ ॥

ಕಂ॥ ಕರಿಗಳವಗಾಹಮಿರೆ ಸಿಂ ।
ಧುರದ ರಜಂಬೊರೆದು ರಂಜಿಸಿತ್ತು ಕರಂ ಸೌಂ ॥
ದರಿಯ ತನು ಸತ್ಯಾಕರ ನೆ ।
ಟ್ಟಿರುತಿರೆ ತಾಂ ಕೂಡೆ ರಾಗವೇಱಿದ ತೆಱುದಿಂ ॥ ೧೦ ॥

ಅಟಿಪಿಂದ ವರುಣವಸ್ತ್ರದ ।
ಪಟಿಯಿಗೆಗಳ ನೆಟಿಲ ನೆರೆಗ ಳೆಂದೆಳಮಿಾಂಗಳ್ ॥
ಘಳಿಲನೆ ಪಾಯ್ದುಡಿಗಡಿಗಳ ।
ವಟಿಯೆ ಬಟಿಲ್ದಟಿಲುತಿರ್ದು ವೋರೊಂದೆಡೆಯೊಳ್ ॥ ೧೩ ॥

ಚಂ॥ ಅಮರೆ ಮಡಲ್ತು ಪರ್ವಿದ ತವಾಳವನಂ ಜಳಬುದ್ಬುದಪ್ರಘೋ ।
ಷಮು ನೊಳಕೊಂಡು ಕಟ್ಟಿಲಿನೆ ಕಂಡು ಘನಾಗಮು ಮಾದುದೆಂದು ಸಂ ॥
ಭ್ರಮಿಸಿ ಪಿಕಾಳಿ ಮೂಗುವಡೆ ಚಾದಗೆ ರಾಗಿನೆ ಕೇಕಿತಾಂಡವಂ ।
ನಿಮಿರೆ ಮುರಾಳ ಮಳ್ಕೆ ತಟನೀತಟ ರಂಜಿಸಿದತ್ತು ಸುತ್ತಲುಂ ॥ ೧೪ ॥

ವ॥ ಮುತ್ತಂ.

ಚಂ॥ ಒದವಿಸಲಾರ್ತುದಲ್ಲಿ ಜಳಕೇಳಿಯೊಳಿರ್ದ ನಿತಂಬಿನೀಕದಂ ।
ಬದ ಮುಖ ವಬ್ಜಮುಂ ನಯನ ಮುತ್ಪಲಮುಂ ಮೊಲೆ ಚಕ್ರವಾಕಮುಂ ॥
ಸದಮಲಹಾರಯುಷ್ಮಿ ಜಳಶೀಕರಮುಂ ನಳಿತೋಳ್ ತರಂಗಮುಂ ।
ಮೃದುನಿನದಂ ವಿಹಂಗರವಮುಂ ದಶನಾವಳಿ ಫೇನಪಿಂಡಮುಂ ॥ ೧೫ ॥

ವ॥ ಆಗಳಾತರಂಗಿಣೀತಟದೊಳವನೀಶನಂದನಂಗೆ ವೃಷಸೇನನೆಂಬ ವೃದ್ಧಪುರೋಹಿತಂ.

ಮ॥ ನಿರುತಂ ತ್ವತ್ಪಿತೃ ಮುನ್ನ ಮಿಲ್ಲವರ ಮಾಜ್ಞಾನಮ್ರರಂ ಮಾಡಿ ಭೂ ।
ಪರ ನೀಸಿಂಧುವ ತೀರದೊಳ್ ನಿಱಿಸಿ ಕೀರ್ತಿಸ್ತಂಭಮಂ ಲೀಲೆಯಿಂ ॥
ಚರಿತಾರ್ಥಂ ಮಗುಟ್ಪಿಂ ಪುರಕ್ಕೆ ವಿಜಯಶ್ರೀಕಾಂತ ನೀಮುಂ ಮನೋ ।
ಹರ ಮಪ್ಪಿಲ್ಲಿಯೆ ಬೀಡುವಿಟ್ಟು ನಿಱಿಸಲ್ವೇಟಿಪ್ಪುಂ ಯಶಸ್ತಂಭಮಂ ॥ ೧೬ ॥

ಕಂ॥ ಅಟವೀಸವಿಾಪ ಮತ್ಯು ।
ತ್ಕಟತೃಣಜಳಬಹಳ ವಿಾಪ್ರದೇಶಂ ದಿಕ್ಪ ॥
ರ್ಯಟನಶ್ರಮು ಮಾಱುವಿನಂ ।
ಕಟಕಂ ವಿಶ್ರಮಿಸುಗಿಲ್ಲಿ ಕತಿಪಯದಿವಸಂ ॥ ೧೭ ॥

ವ॥ ಅದಲ್ಲದೆಯುಂ ಬೇಱೊಂದು ಸಕಲಸೌಖ್ಯಹೇತು ವಪ್ಪ ಮುಖ್ಯಪ್ರಯೋಜನ ಮುಂಟ ದಾವುದೆಂದೊಡೆ ಮಹಾವುಣ್ಯಸಿಂಧುಗಾತ್ಮಗಂಭೀರನಾಭಿಮಂಡಳೆಮುಂ, ಜನ್ಮಸ್ಥಾನಮು ಮಾಗೆ ರಂ ಜಿಪ ಸುಪಾರ್ಶ್ವ ಪರಮೇಶ್ವರರಿಂ ದಲಂಕರಿಸಿ ನೆಟ್ಟನಿಲ್ಲಿಗೇಕಗವ್ಯೂತಿಪ್ರಮಾಣಾಂತರದೊಳ್.

ಮು॥ ಸುರವಿದ್ಯಾಧರಮಾನವೋರಗಜನಾರಾಧ್ಯಂ ವಿನಿರ್ಮಿತದು ।
ರ್ಧರಪಾಪಪ್ರಸರಂ ಜಗತ್ರಯಮಹಾತಾಪತ್ರಯೋದ್ರೇಕಸಂ ॥
ಹರ ಮಿತೋಜ್ಜುವ ಚಿತ್ರಕೂಟಗಿರಿಯೊಳ್ ಚೈರಂತನಂ ಸಿದ್ಧಶೇ ।
ಖರ ಮೆಂಬುನ್ನತತೀರ್ಥ ಮೊಂದೆನೆಯು ತಿಕ್ಕುಂ ತ್ರೈಜಗತ್ಪಾವನಂ ॥ ೧೪ ॥

ವ॥ ಅಲ್ಲಿ.

ಕಂ॥ ಬರಿಸಕ್ಕುಂ ಭವ್ಯೋತ್ಸವ ।
ಕರ ಮೆನಿಸಲ್ ಬರ್ವ ಸರ್ವಫಲ್ಗುಣನಂದೀ ॥
ಶ್ವರಪೂಜೆಗ ಖೇಚರಭೂ ।
ಚರರ ಮಹಾಯಾತ್ರೆ ನೆರೆವುದ ಷ್ಟಾಹ್ನಿಕದೊಳ್ ॥ ೧೫ ॥

ಆದಿವಸಕ್ಕಲ್ಲಿಗೆ ಪು ।
ಣ್ಯೋದಯ ನೀಂ ಪೋಗಿ ಜಿನಮಹಾಮಹಿಮೆಯ ನಾ ॥
ಹ್ಲಾದದೆ ಮಾಡಿಸಿ ಬರೆ ನಿ ।
ನ್ನೋದಿಗ್ವಿಜಯಾಗಮಕ್ಕೆ ಸಫಲತೆ ನಾಗರ್ಮಂ ॥ ೧೦ ॥

ವ॥ ಎಂದು ಬಿನ್ನಪಂಗೆಯ್ದು ಪುರೋಹಿತವಚನಮು ನೊಡಂಬಟ್ಟು ಗುಣತುಂಗನಾದೇಶದಿಂ ಭಂ
ಗುರವೇಣೀತರಂಗಿಣಿಯ ಬಡಗಣ ತಡಿಯೊಳ್ ವಡೆವಳರ್ ಬೀಡುವಿಡಿಸೆ.

ಮು॥ ಕರಿಣೀಕುಂಜರವಾಜಿವೇಸರರಥಾಂದೋಳಾದಿಯಾನಂಗಳು ।
ಬ್ಬರಮುಂ ರಾಸಭಸೈರಿಭೋಷ್ಟ್ರಕರಭವ್ರಾತಂಗಳೊತ್ತೊತ್ತೆಯುಂ ॥
ನರನಾರೀಜನದೊಂದುಗೊಂದಣಮು ಮಂದತ್ತಂ ಚತುರ್ಯೋಜನಾಂ ।
ತರದೊಳ್ ತೀವಿರೆ ಬಿಟ್ಟುದಲ್ಲಿ ಕಟಕಂ ವ್ಯಾಲೋಲಕೋಲಾಹಲಂ ॥ ೧೧ ॥

ಶಾ॥ ಆಗಳ್ ನೆಜ್ಜಗೆ ಮಜ್ಜನಕ್ಕೆ ಪಚನಕ್ಕೊಡ್ಡೋಲಗಕ್ಕಾಯುಧಾ ।
ಭೋಗಕ್ಕಶ್ವಗಣಕ್ಕಿಭಾವಳಿಗೆ ಭಂಡಾರಕ್ಕೆ ಮಂತ್ರಕ್ಕೆ ಕೋ ।
ಟ್ಯಾಗಾರಕ್ಕನುಮಂಡನಕ್ರಿಯೆಗೆ ಕೀಲಾರಕ್ಕೆ ದೇವಾರ್ಚನೋ ।
ದ್ಯೋಗಕ್ಕೆಂದಳವಟ್ಟ ಮಂಡವಿಗೆ ಗೂಡಾರಂ ಕುಟೀಮಂಡಳಂ ॥ ೧೨ ॥

ಕಂ॥ ವರವೇಲಿ ತಟ್ಟೆ ತಳೆ ಗೋ ।
ಪುರ ವಾಳ್ವೆಜ್ಜಿಪಡಿ ತವಂಗ ವಂಕದ ಕಳ ನೋ ॥
ವರಿ ಸೀಯಬಾರ ವಂತಃ ।
ಪುರ ಮುಯ್ಯಲ್ ಕೃತಕಶಿಖರಿ ಯುದ್ಯಾನವನಂ ॥ ೧೩ ॥

ಎಂಬಿವು ಮೊದಲಾಗಿರೆ ಮು ।
ತ್ತಂ ಬಹುವಿಧಪರಿಕರಂಗಳೊರ್ಮೆಯೆ ನೆರೆದಾ ॥
ಡಂಬರದಿಂ ತುಱಿಗಿರೆ ಬಂ ।
ದಿಂಬಿಂ ದರಮನೆಯೊಳವನಿಪತಿ ನೆಲಸಿರ್ದಂ ॥ ೧೪ ॥

ವ॥ ಅನ್ನೆಗಮಿತ್ತಲ್.

ಮ॥ ವನದೊಳ್ ನಿಟ್ಟನಿ ಕಟ್ಟುಪಟ್ಟ ನೆಱಿಯುಂ ಕೋಟಿಶ್ವಿತ್ತ ತನ್ನೀವ ಮಿಂ।
ಧನಮುಂ ಗಾಳಿಯು ಮಾಗಿ ಪೆರ್ಚಿನೆ ನಿಜಕ್ರೋಧಾಗ್ನಿಯುಂ ತಂತ್ರಮುಂ ॥
ಮನದಿಂ ಮುಂ ಬರವೇೞ್ದು ಪುಷ್ಕರಪುರಕ್ಕೊಟ್ಟೈಸಿ ಧಾಳಿಟ್ಟು ಕಾ।
ಪಿನ ಬಲ್ಲಾಳ್ಗಳ ನಿಕ್ಕಿ ಪೊಕ್ಕಿಱಿದು ಚಿತ್ರಾಂಗಂ ಹಯಗ್ರೀವನಂ ॥ ೞ೫ ॥

ಚಂ॥ ತೊಲತೊಲಗೊಪ್ಪಿನೊಪ್ಪಿಸು ಲತಾಂಗಿಯ ನೊಪ್ಪಿಸದಣ್ಮೆ ನೀಗುವೆಂ।
ಲಲನೆಯ ದೂಸಱಿಂ ಪಡೆದ ಮುನ್ನಿನ ಬನ್ನಮ ನೆಂಬೆ ಯಪ್ಪೊಡಿ ॥
ನ್ನಿಲೆಯೆಲೆ ಯಿತ್ತಲಿತ್ತಲಿದಿರಾಗಿದಿರಾಗೆನಗೆಂದು ಮುಟ್ಟಿ ಮೂ।
ದಲಿಸುತ ವಾಂತ ನಾಂಪ ತೆಱದಿಂ ಶರಭಂ ಸಮುದೇಭವೈರಿಯುಂ ॥ ೞ೬ ॥

ವ॥ ಅಂತಾಂತು.

ಮ॥ ಬಹುವಿದ್ಯಾಬಲದಿಂದ ಮಿರ್ವರು ಮಗುರ್ವುರ್ವೆರ್ದೀಶ್ವಿನಂ ಕಾದುವ।
ಲ್ಲಿ ಹಿತಂಗೆಯ್ಯದೆ ಪುಣ್ಯಹಾನಿಯೊಳೆ ವಿದ್ಯಾದೇವತಾಶ್ರೇಣಿ ಪೋ ॥
ಗೆ ಹಯಗ್ರೀವ ನಧಃಪ್ರಭಾವ ನೆರ್ದಿಗೆಟ್ಟೆರ್ದೋಡಿದಂ ವಿಸ್ಮಯಾ।
ವಹಮು[ಲ್ತ]ನ್ಯಕಳತ್ರಕಾತರಮನಂಗಾರುಂ ಹಿತಂಗೆಯ್ವರೇ ॥ ೞ೭ ॥

ವ॥ ಅನಂತರಮವನ ಕುಲಧನಮುಂ ಸೂಱಿಗೊಂಡು ನಿಜಪ್ರಿಯೆಯು ನೊಡಗೊಂಡು ವಿಮಾನಾಧಿರೂಢನಾಗಿ ಪುಷ್ಕರಪುರಪ್ರದೇಶದಿಂ ತಳರ್ದು ಹಿಮಕೂಟಕ್ಕೆ ಪೋಗದೆ ಸಕಲನಾಮಗ್ರಿವೆರಸು ಯುವರಾಜಸಿಬಿರನಿವೇಶಪ್ರದೇಶಮುಂ ಗಗನಗಮನದಿಂ ದೆಯ್ದೆವರ್ದುದುಂ.

ಕಂ॥ ಅಂಬರತಳದರ್ಪಣದೊಳ್।
ಬಿಂಬಿಪ ಗುಣತುಂಗನೃಪನ ಪಡೆಯ ನೆಸಲ್ ತಾ ॥
ನಿಂಬಿನ ಮೊರ್ವೆಯೆ ತೋರ್ಪ ತ।
ದಂಬರಚರಸೈನ್ಯ ಮಿತ್ತುದತಿವಿಸ್ಮಯಮುಂ ॥ ೞ೮ ॥

ವ॥ ಆಗಳ್ದಂ ಕಂಡೊಡಾವನಾನು ಮೊರ್ವ ಗರ್ವಿತವಿಯಚ್ಚರೇಂದ್ರಂ ಕಾಳೆಗಕ್ಕೆ ಮೇಲೆತ್ತಿ ಬಂದನಕ್ಕುಮೆಂದು ಪಟಿಯಿಗೆಯ ಪದಿರ ಪಱಿತೆಯ ಕಹಳೆಯ ಕುಱಿಪ ನೆಱಿಯಿಡೆ ಕಟಕದ ಜನಮುದಿಲ್ಲಿ ಯುದ್ಧಸನ್ನದ್ಧ ಮಾಗುತ್ತಿರೆ.

ಚಂ॥ ಪೆಸರ ಗಜಂಗಳಂ ಬಿಸುಗೆವೇಱಿಸವೇೞಿನೆ ಯುದ್ಧಮುಖ್ಯರಂ।
ಬೆಸಸನೆ ಸಿಂಹವಿಷ್ಟರದಿ ನೇೞಿನೆ ಚಾರುಕಳಾಕಳಾಪಮಂ ॥
ಬಿಸುಡನೆ ಹಸ್ತಮಸ್ತ್ರನಿಬಿಡಗ್ರಹಣಕ್ಕನುವಲ್ತು ಮುದ್ರಿಕಾ।
ಪ್ರಸರಮ ನೊಯ್ಯನುರ್ಚ್ಚಿ ಕಳೆದಂ ಗುಣತುಂಗ ನದೇನುದಾತ್ತನೋ ॥ ೞ೯ ॥

ವ॥ ಆ ಸಮಯದೊಳ್ ತನ್ನ ಬರವ ನರಸಂಗೆ ಮುಂದಲಿಪಲಟ್ಟ ಗಗನತಳದಿ ನವನೀತಳಕ್ಕ ವತರಿಸಿ ಸಮುಚಿತಪರಿಗ್ರಹಂಬೆರಸು ದ್ವಾವಾರಿಕನಿವೇದಿತನಾಗಿ.

ಕಂ॥ ಚಿತ್ರಾಂಗಂ ಮಣಿಭೂಷಣ ।
ಚಿತ್ರಾಂಗಂ ಪ್ರಬಳಶಬಳರುಗ್ಮಂಜರಿಗಳ್ ॥
ಚಿತ್ರಿಸೆ ಸಭೆಯಂ ಪೊಕ್ಕು ಧ ।
ರಿತ್ರೀನಾಥಂಗೆ ವಿನತಮಸ್ತಕನಾದಂ ॥ ೩೦ ॥

ಮ॥ ಇದಿರೆದ್ದಿಟ್ಟಿಜಿಸೊಳಪ್ಪಿಕೊಂಡುಚಿತಬಂಧುಪ್ರೀತಿಯಿಂ ದೇಜಿಲಿ ।
ಕ್ಕಿದ ಸಿಂಹಾಸನದೇಶದೊಳ್ ವಿನಯದಿಂ ಕುಳ್ಳಿರ್ದು ಸಂಭಾಷಿತಂ ॥
ಕದನಕ್ರೀಡೆಯೊಳಾತ್ಮಕಾಂತೆಯ ನಗುರ್ವಿಂ ತಂದ ವೃತ್ತಾಂತಮಂ ।
ಮೊದಲಿಂದೆಯ್ದೆ ನೃಪಂಗೆ ಸೂಚಿಸಿ ಮನಃಸಂತೋಷಮಂ ಮಾಡಿದಂ ॥ ೩೧ ॥

ವ॥ ಮಾಡಿ ತನ್ನ ನಚ್ಚಿನ ಕುಲಧನಂಗಳವ್ವುಪಾಯನಂಗಳಂ ತರಿಸಿ ನೃಪನ ಮುಂದೊಟ್ಟಿಸಿ ಮುಕುಳಿತಕರಸರೋಜನಾಗಿ.

ಕಂ॥ ಜಿತಮದನ ಸಕಳಲೋಕ ।
ಸ್ತುತ ನಿರ್ಮಲಬೋಧ ನಿರಘ ನೀನಿನಗರ್ಹ ॥
ತ್ಪತಿಯಂತೆ ಮೋಕ್ಷಮಂ ಮಾ ।
ಡಿತ ನಕ್ಷಯಪದದೊಳಿರ್ದು ವಾಂ ಮಜಿರಿದಪೆನೇ ॥ ೩೨ ॥

ವ॥ ಅದಱಿಂದಂ.

ಉ॥ ಪ್ರತ್ಯುಪಕಾರಮಂ ನಿನಗೆ ಮಾಡುವ ಸೈಪೆನಗಿಲ್ಲ ಭಕ್ತಿಗಾ ।
ಚಿತ್ಯ ಮಿದೊವ್ವುಗೊಳ್ವುದು ಮದನ್ವಯಸಂಚಿತಸಾರವಸ್ತು ವೀ ॥
ಸ್ತುತ್ಯಕೃಪಾಣ ವಿಮಾ[1]ಲಸ[ದುರ]ಚ್ಛದ ವಿಮಾನುತಚಾಪ ವಿಮಾಜಯ ।
ಪ್ರತ್ಯಯಬಾಣ ವಿಮಾತರಳಹಾರಕ ವಿಮಾಕಳವೀಣೆ ಭೂಪತೀ ॥ ೩೩ ॥

ಉ॥ ಎಂದು ನೃಪಂಗೆ ಪೇಜಿ್ದ ಖಚರೋತ್ತಮನಿತ್ತ ನವಂಧ್ಯಕೋಪ ವೆಂ ।
ಬೊಂದುಕೃಪಾಣಮಂ ಸಮರಸಾಧಕ ವೆಂಬ ತನುತ್ರಮಂ ಜಯಾ ॥
ನಂದಕ ವೆಂಬ ಕಾರ್ಮುಕಮ ನಾಹವದೋಹಳ ವೆಂಬ ಬಾಣಮಂ ।
ನಂದಿನಿ ಯೆಂಬ ಹಾರಲತೆಯಂ ಕಳಭಾಷಿಣಿ ಯೆಂಬ ವೀಣೆಯಂ ॥ ೩೪ ॥

[1] ಲಸತನುಚ್ಛದ.

ವ॥ ಇತ್ತು ಮತ್ತಂ ಪರವಿದ್ಯಾಚ್ಛೇದಿನಿಯುಂ, ಮೋಹಿನಿಯುಂ, ಬಹುರೂಪಿಣಿಯ ಮೆಂಬ ಮೂಱಿಯುಂವಿದ್ಯೆಗಳುಮಂ ತನ್ನುಮ ನುಚಿತಪ್ರಯೋಜನಕ್ಕೆ ನೆನೆದು ಬರಿಸುವಂತೊಡೆಂಬಡಿಸಿ ತನಗೆ ಮಾಡಿದಭ್ಯಾಗತ ಪ್ರತಿಪತ್ತಿಯೊಳ ಮನೂನದಾನಸನ್ಮಾನದಿಂ ಹೃಷ್ಟನಾಗಿ ಬೀಱಿಕ್ಕೊಂಡು ನಿಜ ಪುರಕ್ಕೆ ಚಿತ್ರಾಂಗದಂ ಪೋವುದುಂ, ಇತ್ತ ಚಿತ್ರಭಾನುಮಿತ್ರ ನಾತ ನಿತ್ತ ತರವಾರಿ ಸೇವ್ಯತರವಾರಿ ಯಂತೆಯುಂ, ಕವಚಂ ಸತ್ಕವಿಕದಂಬಕವಚನದಂತೆಯು, ಮಾಚಾಪಲತೆ ಕೂರ್ವ ಕೋಮಳೆಯ ಚಾಪಲತೆಯಂತೆಯು, ಮಾಬಾಣಮುಳ್ಳಲರ್ದಲರ ಬಾಣದಂತೆಯು, ಮಾವೀಣೆ ಸುರತಪ್ರವೀಣೆ ಯಂತೆಯು, ಮನುದಿನಂ ಮನಂಗೊಳಿಸೆ ವಿನೋದಿಸುತ್ತು ಮಿರ್ಪನ್ನೆಗಂ.

ಚಂ॥ ಶರದದೊಳಾದ ಖೇದಮು ನಿಳೇಶನ ಸೈನ್ಯಜನಕ್ಕೆ ಮಾಣಿಪಂ ।
ತಿರೆ ಹಿಮು ವಂದು ಬಂದು ದೆಳನೆಯಿದ್ದಿಲ ಮೆಯ್ದೆಗೆದುರ್ವಗಲ್ದ ನ ॥
ಲ್ಲರ ನರಸುಕ್ಕು ಕೋಟ್ಮಗದ ಕೋಟಲೆ ಕಂಜದ ಬಂಜೆವರ್ದು ಪಾಂ ।
ಥರ ಪಗೆ ಕೋಕಿಳಾಕುಳಕೆ ನೇಸಱಿ ನಿಗ್ರಹ ಮೈಕಿಲಾಕರಂ ॥ ೩೫ ॥

ವ॥ ಆಸಮಯದೊಳ್.

ಮಾಸ್ರ॥ ಕರಿಯೂಥಂ ಭೂರಿಭೂಭೃದ್ವಿಕಟನಿಕಟಮಂ ಭಿಲ್ಲಪಲ್ಲೀಗಣಂ ಭೂ ।
ಧರಕುಂಜಾಭ್ಯರ್ಣಮಂ ಶ್ವಾಪದಸಮಿತಿ ದರೀದೇಶಮಂ ಪಕ್ಷಿವೃಂದಂ ॥
ತರುನೀಡಕ್ರೋಡಮಂ ಪನ್ನಗವಿತತಿ ರಸಾರಂಧ್ರಮಂ ಪಾಂಥವರ್ಗಂ ।
ವರಕಾಂತಾಶ್ಲೇಷಮಂ ಕೆಯ್ಕೊಳ ಲಲೆದುದುದೀಚೀಭವಂ ಶೀತವಾತಂ ॥ ೩೬ ॥

ಕಂ॥ ಮಸುಮಸುಳಿಸಾಯ್ತು ಚಂದ್ರಿಕೆ ।
ಬಿಸುವಱಿದುದು ಬಿಸಿಲಶೇಷಭುವನದ ಘರ್ಮ ॥
ಪ್ರಸರ ಮುಡುಗಿದುದು ಹಿಮಸಮ ।
ಯಸವಿಸಾರಂ ಪಾಱಿ ಬೀಸಿ ತೂಱಿದತೆಱಿದಿಂ ॥ ೩೭ ॥

ಚಂ॥ ಇದು ತಳರ್ದೆತ್ತಿ ಬರ್ಪ ಹಿಮಕಾಲನೃಪಾಲನ ಸೈನ್ಯಚಕ್ರಘಾ ।
ತದ ಭರದಿಂ ಹಿಮಾದ್ರಿಪಥದೊಳ್ ನೆಗೆದುರ್ವಿದ ಧೂಳಿಜಾಳ ಮು ॥
ಚ್ಚಿದು ತಗುಳ್ದೈಕಿಲಾಕ್ರಮಿಸೆ ಲೋಕಮು ನೆಯ್ದೆ ಸರೋಜಸಂಭವಂ ।
ಪೊದಿಸಿದ ಪಾಂಡುಕಂಬಳ ಮಿದೆಂಬವೊಲಾದುದು ಮುಂಜಿನುರ್ವರಂ ॥ ೩೮ ॥

ಚಂ॥ ಬಳಸಿದ ಮುಂಜು ಚಂದ್ರಿಕೆ ರಥಾಶ್ವದ ಮೆಯ್ವಸುರೇಣುಲಹ್ಮ ಮು ।
ರ್ಕಳವಳಿದರ್ಕಬಿಂಬ ಮಮೃತಾಂಶು ವೆನಲ್ಕಿರುಳಂದ ಮಾಗೆ ಪ ॥
ಚ್ಚಳಿಪ ನೆಗಟ್ಟಿ ಗೆಟ್ಟು ಪಗಲಬ್ಜಿನಿ ಕಾಮುಕಿಳೀಮುಖಕ್ಕೆ ಕೋ ।
ಮಳೆ ಸುಗಿದಿರ್ದಳೋಪನ ತೆಱಿಂ ಪೆಱಿತಾದೊಡೆ ಮುಗ್ಧೆ ನಿಲ್ವಳೇ ॥ ೩೯ ॥

ಮು॥ ಪಗೆ ನೆಯ್ದಿಲ್ ನಗುವಂತು ದೀನತೆ ದಿನಕ್ಕಪ್ಪಂತು ಕೂರ್ಪಂಬುಜಂ ।
ಸುಗಿವಂತಾಯ್ತು ಸಖಂಗೆ ಕಾಲವಶದಿಂ ತೇಜಃಕ್ಷಯಂ ಭಾನುಗೆಂ ॥
ದಗಿದಾರ್ತಂಬಡುವಂತೆ ಕೋಡಿ ಹಿಮದಿಂ ಚಕ್ರಾಂಕ ಮುಳ್ಕಿರ್ದು ವೀ।
ಜಗದೊಳ್ ಮಿತ್ರವಿಪತ್ತಿ ಗಾರ ಬಗೆಯುಂ ದುಃಖಕ್ಕೆ ಪಕ್ಕಾಗದೇ ॥ ೪೦॥

ಕಂ॥ ಪೊಸತಲರ್ದ ಸಿಂಧುವಾರದ ।
ಕುಸುಮಸ್ತಬಕಂಗಳೆಂದು ನೀಲದ ಪರಲಿಂ ॥
ಮಿನುಗುವ ವನದೇವತೆಯರ ।
ಪೊಸಮುತ್ತಿನ ದಂಡೆ ಯೆನಿಸಿ ರಂಜಿಸಿ ತೋರ್ಕುಂ ॥ ೪೧॥

ಕಳಿಕೆ ನನೆ ಮೊಗ್ಗೆ ಬಿರಿಮುಗು ।
ಳಲರೆಂಬಯ್ದುಂ ಮನೋಜನಯ್ದುಂ ಸರಲ್ಗಂ ॥
ತೊಳಗುವಲಗಾಗೆ ವಿರಹಿಯ ।
ನಳಱಿಸಿದುದು ಮುದಿತಮಧುಪವೃಂದಂ ಕುಂದಂ ॥ ೪೨॥

ವನದೇವತೆ ಹಿಮಸಮಯ ।
ಕ್ಕನುನಯದಿಂ ಸೇಸೆದಳಿದ ಕಳಮಾಕ್ಷತಮುಂ ॥
ನೆನೆಯಿಸಿದುವು ನೀಲ್ಪಿನ ಬೆ ।
ಲ್ಪಿನ ಜಾದಿಯ ನನೆಗಳಳಿಕುಲೋಚ್ಚಲಿತಂಗಳ್ ॥ ೪೩॥

ಹಿಮಸಮಯಪತಿಯ ರೂಪಂ ।
ಕುಮುದಿನಿ ನೋಡಲ್ಕೆ ಪಲವು ಕಣ್ಬಡೆದಂತೇಂ ॥
ರಮಣೀಯಮಾಯ್ತೊ ವಿದಳಿತ ।
ಕುಮುದಂಗಳ ಮಿಸುಗುವೆಸಳ ಮುಸಕಂ ಕೊಳದೊಳ್ ॥ ೪೪॥

ಚಂ॥ ತರಳಕಟಾಕ್ಷಚಂದ್ರಿಕೆ ಮುಖಾಂಬುರುಹಂ ನಯನೋತ್ಪಳಂ ಪಯೋ ।
ಧರ ಮಮೃತಾಧರಂ ಚರಣಪಲ್ಲವ ಮೆಂಬತಿಶೀತಳಸ್ಥಳಾಂ ॥
ತರದನುಬಂಧದಿಂ ಕುಸುಮಕೋಮಳೆಯರ್ಕಳೊಳೊಂದಿ ತಣ್ಣಗಿ ।
[1]ರ್ದರ ನಿರೆ ಬಿಟ್ಟು ಚೋದ್ಯ ಮೆನೆ ಪೀಡಿಸಿತೈಕಿಲನಂಗ[2]ತಾಪರಂ ॥ ೪೫॥

ಕಂ॥ ಹಿಮಮೆಂಬ ಸುರತಸುಖಸಂ ।
ಭ್ರಮದೊಳ್ ಜನಮಪ್ಪುಕೆಯ್ದುದುದ್ಗತರೋಮೋ ॥
ದ್ಗಮಮನುಪಜಾತಸೀತ್ಕಾ ।
ರಮನುತ್ಕಂಪನಮ [3]ನುದ್ಯದಧರವ್ರಣಮಂ ॥ ೪೬॥

[1] ರ್ದರೆಱರ್. [2] ತಪ್ತರಂ. [3] ನುದ್ಯದರತಭ್ರಮಮಂ.

ಉ॥ ಓತೊಡನಿರ್ಪ ನಲ್ಲರ ಮುಖಾಂಬುರುಹಂ ಪೊಱಿಗಾಗಿ ಮಿಕ್ಕ ಕಂ ।
ಜಾತ ಮಿದಾವ ಲೆಕ್ಕ ಮಸುರಾರಿಯ ಪೊಕ್ಕುಱಿ ಪದ್ಮಮಂ ಖರ ॥
ದ್ಯೋತಿಯ ಕೆಯ್ಯ ಕಂಜಮು ನಿದೆಯ್ದೆ ಸುರುಳ್ಚುಗು ಮೆಂಬಿನಂ ಜಗ ।
ತ್ಕಾತುಕ ಮಾಯ್ತ್ತನುಪ್ಪಣಮಹಿಮಂ ಜನಿತೋತ್ಪಲಬಂಹಿಮಂ ಹಿಮಂ ॥ ೪೭ ॥

ವ॥ ಎನಿಸಿ.

ಚಂ॥ "ಇರೆಯಿರೆ ಪಾವೆ ಕಾಲಗತಿಯಿಂ ನೆಲಮುಕ್ಕೆ" ನಿಪಂದದಿಂ ಹಿಮಂ ।
ಬರೆಬರೆ ಬೆರ್ಚಿನಿಂ ಶಿಶಿರಮಾಗಿ ನಿಮಿರ್ಚಿದುದಾನೆಯಂಕದಂ ॥
ತಿರೆ ನರಸುರ್ಕ್ಕ ನುತ್ಕಳಿಕೆಯಂತಿರೆ ಮೆಯ್ಗೆ ವಿಪಕ್ಷಾಂಡುವೃತ್ತಿಯಂ ।
ಪರಮಸುಖಾಪ್ತಿಯಂತಿರೆ ಜನಕ್ಕೆನಸುಂ ಪುಳಕೋದ್ಗಮಂಗಳಂ ॥ ೪೮ ॥

ಮ॥ ರಥಮುಂ ವಾರ್ಥ್ಯುಪಕಂಠದೊಳ್ ತರುತುಮ್ಮೆಕಿಲ್ದೋಡೆ ನೇಡಿಂದೆ ನಾ ।
ರಥಿ ಕಾಲ್ಗೆಟ್ಟುರೆ ಕಂಡು ಸುರ್ಕುಗಿಡೆ ಕಿಚ್ಚಂ ಕಾಸಿ ತಿರ್ದಲ್ [1]ತವೋ ॥
ರಥಮುಂ ನಾರ್ದಪ ನಾತ್ಮಕಾದಮುಮು ನಾದಂ ನೀಡಲಂಜುತ್ತಿನಂ ।
ಪೃಥುನೀಹಾರ[2]ನಿರುದ್ಧಭಾನು ವೊಗೆವಂ ನಾರ್ದಗ್ನಿದಿಗ್ಭಾಗಮಂ ॥ ೪೯ ॥

ಚಂ॥ ಕಡಲೊಳಗಿರ್ಪ ವಿಪ್ಪಿನ ವನಿಶಂ ಬಡಬಾಗ್ನಿಯು ಪೆರ್ಜು ಮಿಲ್ಲದಿ ।
ರ್ದೊಡೆ ಸುರಸಿಂಧುವಂ ತಳೆದ ಶಂಭು ನಿಜಾಹ್ವೆಯ ಬೆಂಕೆ ಸೋಂಕದಿ ॥
ರ್ದೊಡೆ ಪವನಾಧ್ವದೊಳ್ ಸುಟಿವಿವ ಭಾನು ಕೃಶಾನುವಿನಾಶೆಯಂ ಪಗಲ್ ।
ನಡೆಯದೊಡೆಂತು ನಿತ್ತುಱುವರೆಂಬನಿತಾದುದು ಮಾಳ್ಕುಡಂಬರಂ ॥ ೫೦ ॥

ಕಂ॥ ಬಿತ್ತರಿಪ ಶಿಶಿರದೊಳ್ ಜನ ।
ಚಿತ್ತಮ ನಟಿಪ್ಪಿದೊಡೆ ಪೊಕ್ಕು ನೆಲಸಿರ್ದುದಱಿಂ ॥
ಚಿತ್ತಶಯನಾಮಮುಂ ಪುರು ।
ಪೋತ್ತಮಸುತ ನಾಳ್ದ ನೆನಿಸಿತದ ನೇವೊಗಟಿಲ್ವಿಂ ॥ ೫೧ ॥

ಪಸರಿನೆ ಜಾದಿಯ ಜೊಂಪಂ ।
ಮಿಸುಪಲ್ ಪಱಿಶಿಗುಟ್ಟ, ಕೊರಳ್ ನರಮುಂ ಕುಕಿಲೆಂ ॥
ದೆಸಗೆ ಕೊಳರ್ವಕ್ಕಿ ಶಿಶಿರಂ ।
ಪಸದನವಾಡಿದುದು ಕುಂದದುತ್ಸವ ಮದಱಿಶಿಖರ್[4] ॥ ೫೨ ॥

ಸೆಗಳಿಗೆ ಪೆಂಡಿರ ಮೊಲೆ ಕಿ ।
ಚ್ಚಗರುವ ಪೊಗೆ ಕುಂಕುವಮಾಂಕ ಮೋವರಿ ನೆಲವಾ ॥
ಳಿಗೆ ದಡ್ಡಿ ಯೆಂಬಿವಮರ್ದರ ।
ನಗಲ್ದುದು ಪೊಲೆಯಾಳತೆಱಿದೆ ಮುಟ್ಟದೆ ಶಿಶಿರಂ ॥ ೫೩ ॥

---

[1] ತವೋನ್ಮಥನಂ. [2] ತ್ತೆನಲ್. [3] ನಿರುದ್ಧಶಾಣನೊ [4] ಮಾಗಲ್.

ಚಂ॥ ಕರಮೆಸೆದಿರ್ದರಂದು ಸಮಯೋಚಿತದರ್ಪಣಿನ ಕುಂಕುಮಾಂಕ ವೊ ।
ಪ್ಪಿರೆ ನವಸಿಂಧುವಾರದಲದೊಂಗಲ ಕೋಮಲಕರ್ಣಪೂರ ವೊ ॥
ಪ್ಪಿರೆ ನವಮಾಳಿಕಾಕುಸುಮಶೇಖರ ವೊಪ್ಪಿರೆ ಲೋಧ್ರಪುಷ್ಪವಿ ।
ಸ್ಫುರಿತಪರಾಗಚಂದ್ರಕಬಳಚ್ಛಟೆ ಯೊಪ್ಪಿರೆ ಪೌರನಾರಿಯರ್ ॥ ೫೪ ॥

ಮ॥ ಪರಿತಾಪಚ್ಯುತಿ ವಾಸರಕ್ಕೆ ಸುಮನಃಶ್ರೀಸಂಪದಂ ಕುಂದವ ।
ಲ್ಲರಿ ಗತ್ಯುರ್ಜಿತಬೋಧ ಮುತ್ಪಳಿನಿ ಗುದ್ಯದ್ವೀತರಾಗತ್ವ ಮುಂ ॥
ಬುರುಹಶ್ರೇಣಿ ಗುದಾತ್ತವೋಕ್ಷಗತಿ ಪೌಷ್ಯಕ್ಕಾದುದಾದಂ ದಿಗಂ ।
ಬರಸಾಂಗತ್ಯತಪಃಪ್ರಭಾವ ಮೆನಸುಂ ಮೆಯ್ವೆತ್ತೊಡೇನಾಗದೋ ॥ ೫೫ ॥

ವ॥ ಅಂತೆನಿಸಿದ ಶಿಶಿರಸಮಯಕ್ಕಲಂಕಾರವಾದ ಫಾಲ್ಗುಣವ ಶುಕ್ಲಾಷ್ಟಮಿಯಂದು ನಂದೀ ಶ್ವರಪೂಜೆಗೆಂದು ಸಿದ್ಧಶೇಖರಜಿನಾಲಯಕ್ಕೆ ಮನುಜೇಂದ್ರಮುಂದರಂ ಪುರಂದರಗಜೇಂದ್ರರುಂದ್ರ ಲೀಲೆಯಂ ತಳೆದ ನಿಜಗಜೇಂದ್ರಾರೂಢಂ ಸಮಸ್ತಪುಂಡಳಿಕದಂಡನಾಥಸಾಮಂತಮಂತ್ರಿಪುರೋ ಹಿತಾದ್ಯನೇಕಪರಿವಾರಜನಪರೀತನಾಗಿ ಪೋಗಿ.

ಚಂ॥ ನಿಜಗಜರಾಜದಿಂದಿಟಿದು ಭಕ್ತಿಭರಾನತವುಸ್ತಕನಾಗಿ ದಿ ।
ಗ್ವಿಜಯಜಯಾಗ್ರಗಣ್ಯ ನಧಿಕೋತ್ಸವದಿಂ ಬಲಗೊಂಡು ಮೂಱುಸೂಟಿ ॥
ತ್ರಿಜಗದಧೀಶಚೈತ್ಯಗೃಹಮಂ ತ್ರಿಜಗಜ್ಜನತಾರ್ಚಿತಾಂಘ್ರಿಪಂ ।
ಕಜನ ಪದಾಂಬುಜಕ್ಕೆಱಗಿ ಬಂದಿಸಿದಂ ಗುಣರತ್ನಭೂಷಣಂ ॥ ೫೬ ॥

ಗದ್ಯ

ಇದು ಸಮಸ್ತ ಭುವನಜನಸಂಸ್ತುತಜಿನಾಗಮಕುಮುದ್ವತೀಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿ ಕಮಳೆಗರ್ಭ ಮುನಿಚೆಂದ್ರ ಪಂಡಿತ ದೇವಸುವ್ಯಕ್ತಸೂಕ್ತಿ ಚಂದ್ರಿಕಾ ಪಾನಪರಿಪುಷ್ಟಮಾನಸಮರಾಳೆ

ಗುಣವರ್ಮನಿರ್ಮಿತಮಪ್ಪ

ಪುಷ್ಪದಂತ ಪುರಾಣದೊಳ್

ಶಿಶಿರಸಮಯವರ್ಣನಂ

ಪಷ್ಠಾಶ್ವಾಸಂ

ಪುಷ್ಪದಂತ ಪುರಾಣಂ

ಸಪ್ತಮಾಶ್ವಾಸಂ

ಕಂ॥ ಶ್ರೀಜಿನಪತಿಗೆ ನತಾಮರ ।
ಭೂಜನಪತಿಗಾತ್ಮನಿಟಿಲದೊಳ್ ಕರಕಮಳಂ ॥
ರಾಜಿಸಲೆಱಗಿದ ನರ್ಥಿಸ ।
ರೋಜಾರ್ಕಂ ಪ್ರಭುಗುಣಾಬ್ಧಿನೀಕಳಹಂಸಂ ॥ ೧ ॥

ವ॥ ಆಗಳ್.

ಮ॥ಸ್ರ॥ ಘನಝಂಟಾಜಾಳನಾದಪ್ರಸರ ಮೆಸೆಯೆ ನಾನಾನಾಲಸದ್ವಾದ್ಯಶುಂಭ ।
ದ್ಧ್ವನಿ ಯೆತ್ತಂ ಪೊಣ್ಮೆ ಶಂಖಪ್ರಕರವಿರುತಿ ತಳ್ತ್ತೊಣ್ಮೆ ಗಂಭೀರಭೇರೀ ॥
ನಿನದಂ ಮೆಯ್ವೆರ್ಚೆ ಶಕ್ರಾರ್ಚಿತಜಿನಪತಿಗತ್ಯುತ್ಸವೋದಾತ್ತಚಿತ್ತಂ ।
ವಿನಯಪ್ರಾಕಾರಭೂವಿಶ್ವರ ನಭಿಷವಮಂ ಮಾಡಲುದ್ಯುಕ್ತ ನಾದಂ ॥ ೨ ॥

ವ॥ ಆಗಿ.

ಮ॥ ಮೊದಲೊಳ್ ತೀರ್ಥಕರಂಗೆ ತೀರ್ಥಜಲದಿಂ ಸ್ನಾನಕ್ರಿಯಾರಂಭಸಂ ।
ಪದಮುಂ ಪಾರ್ಥಿವತುಂಗನರ್ಥಿಜನತಾದೇಯಾರ್ಥ ನಾದಂ ಮುನೋ ॥
ಮುದದಿಂ ದಪ್ಪವಿಧಾರ್ಚನಾವಿಧಿಗಳಿಂ ದಭ್ಯರ್ಚನಂಮಾಡಿ ನೋ ।
ಡಿದ ನತ್ಯುರ್ಜಿತ ನತ್ಯನೂನಚರಿತಂ ಶ್ರೀರಾಜವಿದ್ಯಾಧರಂ ॥ ೩ ॥

ಮ॥ಸ್ರ॥ ಕಳಧೌತೋದ್ದಾಮಕುಂಭಪ್ರತತಿ ಮಣಿಗಣಾಕೀರ್ಣಸೌವರ್ಣಕುಂಭಾ ।
ವಳಿ ಚಂಚಚ್ಚಾರುಚಂದ್ರೋಪಳವಿವುಳಹಟತ್ಕುಂಭಸಂದೋಹದೊಳ್ ಭೂ ॥
ತಳನಾಥಂ ರಾಗದಿಂದಂ ಘೃತಮುಮೃತದಧಿಸ್ತೋಮಮಂ ತೀವಿನಿತ್ಯೋ ॥
ಜ್ವಳತೇಜಂ ದೇವದೇವಂಗಭಿಷವವಿಧಿಯಂ ಮಾಡಿ ಸಂತುಷ್ಟನಾದಂ ॥ ೪ ॥

ಮ॥ ಘನಸಾರದ್ರವಮಿಶ್ರಿತಾರ್ದ್ರ ಘೃ[ಸೃಣ]ಪ್ರೋನ್ಮಿಶ್ರಸಂಸೇವ್ಯಚಂ ।
ದನದಿಂ ತ್ರೈಭುವನೋನ್ನತೈಕತಿಲಕಂಗಷ್ಟಾರ್ಥಘಾತಿಕ್ಷಯಂ ॥
ಗನುಲೇಪಕ್ರಿಯೆಯಂ ವಿನಿರ್ಮಿಸಿ ಬಳಿಕ್ಕಚ್ಚಾಂಬುವಿಂ ಮಾಡಿದಂ ।
ಜನನಾಥಂ ನೃಪನೀತಿಶಾಸ್ತ್ರನಿಪುಣಂ ಗಂಧೋದಕಸ್ನಾನಮಂ ॥ ೫ ॥

ಕಂ॥ ಅಷ್ಟವಿಧಕರ್ಮರಿಪುವಿಂ ।
ಗಷ್ಟೋತ್ತರಶತಸಹಸ್ರಲಕ್ಷಣಗಾತ್ರಂ ॥
ಗಷ್ಟವಿಧಾರ್ಚನೆ ನೆಗಟ್ಪಿದ ।
ಲಷ್ಟಾಹ್ನಿಕಪೂಜೆಯಂ ನೃಪಂ ನಿರ್ಮಿಸಿದಂ ॥ ೬ ॥

ಕಂ॥ ನಿರ್ಮಿಸಿದನಂತರಂ ಘನ ।
ಘರ್ಮಚ್ಛೇದಕ ಮಿದೆಂದು ಗಂಧೋದಕಮುಂ ॥
ಧರ್ಮ ಪ್ರತಿಪಾದನಪಟು ।
ನಿರ್ಮಲಗುಣರತ್ನರಾಶಿ ಕೊಂಡುತ್ಸವದಿಂ ॥ ೬ ॥

ಮಾಸ್ರ॥ ಪರಮಶ್ರೀತೀರ್ಥನಾಥನ್ನ ಪನಸಲಿಲದಿಂ ದೆನ್ನ ಗಾತ್ರಂ ಪವಿತ್ರೀ ।
ಕರ ಮುಕ್ಕೆಂದಟ್ಟಿರಿಂದಂ ಜನಪತಿ ನಯನದ್ವಂದ್ವದೊಳ್ ವಕ್ತ್ರದೊಳ್ ಬಂ ॥
ಧುರಜೂಡಾಪಟ್ಟದೊಳ್ ವಕ್ಷದೊಳೆವಯವದೊಳ್ ಕೂಡೆ ಗಂಧೋದಕಪ್ರೋ ।
ತ್ಕರಮಿಂ ಹರ್ಷಾಶ್ರು ಪೊಣ್ಮುತ್ತಿರೆ ತಳಿದುಕೊಳುತ್ತಿರ್ದ ನಾನಂದದಿಂದಂ ॥ ೮ ॥

ವ॥ ಅಂತನಂತಸಂತೋಷದಿಂ ಮುಕ್ತಿಕಾಂತಾಕಾಂತನ ಕಾಂತಚೈತ್ಯಾಲಯಮುಂ ತ್ರಿಪ್ರದಕ್ಷಿಣಂಗೆಯ್ದು ತ್ರಿಲೋಕೈಕನಾಥಾಭಿಮುಖ ನಾಗಿ ಕರಕಮಳವುಂ ಮುಗಿದು.

ಉ॥ ಶ್ರೀವಧುಗಿತ್ತು ದಾತ್ತಪದಮುಂ ವರಮುಕ್ತಿಗೆ ಕೊಟ್ಟು ವಸ್ತ್ರಭೂ ।
ಷಾವಳಿಯುಂ ಸರಸ್ವತಿಗೆ ನಾರ್ಚಿ ಪದಾರ್ಥಮು ನೊಲ್ದು ಕೂಡಿಯುಂ ॥
ದೇವ ನಿರಸ್ತರಾಗ ನೆನಿಪೈ ಜಿನ ನಿನ್ನ ವಿರುದ್ಧಮಾರ್ಗಿ ಯೆಂ ।
ದಾವ ಸುಬೋಧರುಂ ಪೊಗಟ್ವಿರೇಕೆಯೊ ಚಿತ್ರ ಮಿದಿಂದ್ರವಂದಿತಾ ॥ ೯ ॥

ಚಂ॥ ಜನಿಯಿನೆ ನೀಂ ಪೊದಟಿಶ್ಶಿದ್ದಸಗೆಗಾಗಳೆ ಮಜ್ಜನಪೀಠ ಮಾಗೆ ಮು ।
ಜ್ಜನವಳ ನಾಗೆ ಮಜ್ಜನಪಯೋರಸದಾಯಕ ವಾಗೆ ಪೆಂಪುವೆ ॥
ತ್ತನಿಮಿಷಶೈಲದೊಳ್ಪನಿಮಿಷಾಧಿಪನೊಳ್ಪನಿಮೇಷವತ್ಪಯೋ ।
ವನನಿಧಿಯೊಳ್ಪು ಪೇಟಿವೆ ನಿಜೋನ್ನತಿಯುಂ ಧರೆಗಿಂದ್ರವಂದಿತಾ ॥ ೧೦ ॥

ಚಂ॥ ಒದವಿದ ಘೋರಸಂಸೃತಿಯ ಬಾಧೆಗೆ ತಲ್ಲಣ ದಿಂದ ಮನ್ಯತ ।
ತ್ವದ ಮುಖಿವೊಕ್ಕ ಮೂಢ ಜನದಾಚರಣಂ ''ಪುಲಿಗಂಜಿ ವುತ್ತ ನೇ ॥
ಱಿದೊಡರವಾವುಕೊಂಡು''ದೆನೆ ಬೇವಸವುಂ ಬಿಡದೀವುದೊಲ್ಲೆ ನಾ ।
ನದ ನೆಟಿಸಲ್ಕೆ ರಕ್ಷಿಸು ಭವಚ್ಚರಣಂ ಶರಣೆಂದ್ರವಂದಿತಾ ॥ ೧೧ ॥

ಉ॥ ಆರು ಮನುಷ್ಯದೊಳ್ ಕಳವಿನೊಳ್ ಕೊಲೆಯೊಳ್ ಧನ[ಲೋಭ] ದೊಳ್ ಪರ ।
ಸ್ತ್ರೀರತಿಯೊಳ್ ತೊಡಂಕದಿರವೆಂಬುದು ನಿನ್ನ ಮತಂ ಕುತತ್ವಸಂ ॥
ಸ್ಕಾರಜನಕ್ಕೆ ದುಸ್ಸಹ ಮದಂತುಟಿ ಭಾವಿಸೆ ಪಿತ್ತದೋಷದು ।
ರ್ವಾರನ ಬಾಯ್ಗೆ ದುಗ್ಧ ವಿನಿದಪ್ಪುದೆ ನೇವಿಪೊಡಿಂದ್ರವಂದಿತಾ ॥ ೧೨ ॥

ಉ॥ ರೋಗಿಗೆ ದೇವ ನಿಮ್ಮ ಚರಣಸ್ಮರಣಂ ಪರಮೌಷಧಂ ವಿಷಾ ।
ವೇಗಿಗೆ ದೇವ ನಿಮ್ಮ ಪದದಕ್ಕರವಾಲೆ ವಿಷಾಪಹಾರ ಮು ॥
ದ್ವೇಗಿಗೆ ದೇವ ನಿನ್ನಖಿಳರೂಪಗುಣಸ್ತುತಿ ಹರ್ಷಹೇತು ವೆಂ ।
ದಾಗಳು ವೆನ್ನ ನಂಬುಗೆ ಮನಂಬುಗೆ ಭಾವಿಪೆ ನಿಂದ್ರವಂದಿತಾ ॥ ೧೩ ॥

ಚಂ॥ ಮುಳಿಯದೆಯುಂ ಮುನೋಭವನ ನಿಕ್ಕಿದ ಕೂರದೆಯುಂ ವಿನೇಯಮಂ ।
ಡಳಿಗಭಿವೃದ್ಧಿಯಂ ಕುಡುವೆ ರಾಗದೊಳೊಂದದೆಯುಂ ವಿಮುಕ್ತಿಕೋ ॥
ಮುಳಿಗೆಳಸಿರ್ಪ ಮೋಹವಶ ಸಲ್ಲದೆಯುಂ ತ್ರಿಜಗತ್ಪತಿತ್ವದ ।
ಗ್ಗಳಿಕೆಯ ನವ್ವುಕೆಯ್ದೆ ಬಿಡೆ ನಿನ್ನೆಸಕಂ ಪೊಸತೆಂದ್ರವಂದಿತಾ ॥ ೧೪ ॥

ಚಂ॥ ಮುಳಿವೊನೆವನ್ಯರೋಜೆ ನಿನಗಿಲ್ಲದೆಯುಂ ಹಗೆ ಹಾಱಿ ತೂಱುಗುಂ ।
ಕೆಳೆ ದಳವೇಱುಗುಂ ಬಗೆದು ಭಾವಿನೆ ಧಾತ್ರಿಗೆ ಚಿತ್ರ ಮುಲ್ತೆ ತಿಂ ॥
ಗಳ ಬೆಳಗಂತೆ ರಂಜಿನೆ ರಜೋಧಿಕ ಮುಂಬುರುಹಂ ಸುರುಳ್ಗು ಮು ।
ತ್ಪಳೆಮುಲಗರ್ಗುಂ ನಿಸರ್ಗ ವಿದು ನಿನ್ನ ಮಹೋನ್ನತಿಗಿಂದ್ರವಂದಿತಾ ॥ ೧೫ ॥

ಚಂ॥ ಸದಮಳಬೋಧಭಾನುವಿನ ಬಂಧುರಬಂಧು ಸುಧರ್ಮಸೂತ್ರಕಾಂ ।
ಡದ ಕಣಿ ಪುಣ್ಯಲಕ್ಷ್ಮಿಯ ತವರ್ಮನೆ ಭವ್ಯಜನಾಂತರಂಗಭೃಂ ॥
ಗದ ನೆಲೆ ತತ್ವವಾಸನೆಯು ಗೊತ್ತು ದಯಾರಸದಾಗರಂ ಭವ ।
ತ್ಪದಶತಪತ್ರ ಮಾಱಿಸುಗೆ ಮದ್ಭವತಾಪಮ ನಿಂದ್ರವಂದಿತಾ ॥ ೧೬ ॥

ವ॥ ಎಂದನೇಕಸ್ತುತಿಗಳಿಂ ತ್ರಿಭುವನಸ್ಯೋತ್ಸನಂ ಸ್ತುತಿಯಿಸಿ ಭಕ್ತಿಯಿಂದೆಱಗಿ ಪೊಡೆವಟ್ಟು ಸಿದ್ಧಶೇಷೆಯಂ ಕೊಂಡು ಬೀೞ್ಕೊಂಡನಂತರಂ.

ಕಂ॥ ಸಕಳಪ್ರಾಣಿದಯಾಪರ ।
ರಕಳಂಕರನಂತಬೋಧರೆನಿಸಿದ ಮುರಿತ ॥
ಕ್ರಕಚಮುನಿವರರ್ಗೆ ಬುಧಜನ ।
ನಿಕರಸ್ತುತ ನೆಱಗಿ ಭಕ್ತಿಯಿಂ ವಂದಿಸಿದಂ ॥ ೧೭ ॥

ವ॥ ಅನಂತರಂ.

ಮಾಸ್ಯ॥ ಪರಮಾಶೀರ್ವಾದನಾದಂ ಜನಿಯಿಸೆ ಪರಮೋತ್ಸಾಹಮಾಂಗಲ್ಯತೂರ್ಯೋ ।
ತ್ಕರನಾದಂ ಪೊಣ್ಮೆ ರಾರಾಜಿಸೆ ಸುರಗಜಮಂ ಲೀಲೆಯಿಂ ಪೋಲ್ವುದೆಂಬಂ ॥
ತಿರೆ ಪೆಂಪಂ ತಾಳ್ದ ಮತ್ತದ್ವಿರದಮು ನಧಿಕಪ್ರೀತಿಯಿಂ ದೇಱಿ ಧಾತ್ರೀ ।
ಶ್ವರಮಸ್ತನ್ಯಸ್ತ ಪಾದಂ ತಳೆದರ್ದಪ ನರಸಂ ರಾಜವಿದ್ಯಾಲಲಾಮಂ ॥ ೧೮ ॥

ಮಾಸ॥ ಲಲಿತಶ್ವೇತಾತಪತ್ರಂ ಚಮರರಸಮಿತಿ ಕೇತುವ್ರಜಂ ತೂರ್ಯಮಾಲಾ ।
ವಳಿ ಹಸ್ತಿನ್ಯೋತ್ಸವ ವುಪ್ಪುಪ್ರತತಿ ತುರಗವೃಂದಂ ಪದಾತ್ಯಾಳಿ ಸನ್ಮಂ ॥
ಗಲಭೇರೀಸಂಕುಲಂ ರಾಜಿನೆ ಚಟುಲರಿವುವ್ರಾತಜೈತ್ರಧ್ವಜಂ ನಿ ।
ಶ್ಚಳತೇಜಂ ಬಂದು ಪೊಕ್ಕಂ ಕಟಕಮು ನವನೀನಾಥ ನಾನಂದದಿಂದಂ ॥ ೧೯ ॥

ವ॥ ಅಂತು ಪೊಕ್ಕು ನಿಜರಾಜಮಂದಿರದ ಬಾಗಿಲ್ವಾಡದೊಳ್ ಬಂದು ಮದಾಂಧಬಂಧುರ ಸಿಂಧುರಸ್ಕಂಧದಿಂ ವಸುಂಧರಾಧಿಪ ನಿಟ್ಟಿದು.

ಮ॥ ಪ್ರಣತಕ್ಷತ್ರಿಯಪುತ್ರರಂ ಸಚಿವರಂ ಸಾಮಂತರಂ ಶೌರ್ಯಭೂ ।
ಷಣರಂ ಸಾಹಸತುಂಗರಂ ಸುಭಟರಂ ತಾಬೂಲದಾನಾದಿಯಿಂ ॥
ಗುಣತುಂಗಕ್ಷಿತಿಪಾಳ ನೂರ್ಜಿತಯಶಂ ಸಂತುಷ್ಟರಂ ಮಾಡಿ ಧಾ ।
ರಿಣಿ ಸಂವರ್ಣಿಸೆ ರಾಗದಿಂ ಕಳಿಪಿದಂ ಶ್ರೀರಾಜಕಂಠೀರವಂ ॥ ೨೦ ॥

ವ॥ ತದನಂತರಂ ಚಿತ್ರಭಾನುದತ್ತಹಸ್ತಾವಳಂಬ ನಾಸ್ಥಾನಮಂಟಪಕ್ಕೆ ಬಿಜಯಂಗೆಯ್ದು ಸಿಂಹಾಸನಾಸೀನನಾಗಿ ಜಿನರಾಜಪೂಜಾಸಮಾಜಸಂಜಾತಹರ್ಷೋತ್ಕರಚಿತ್ತ ನಿರ್ವುದು ಮಾಸಮು ಯದೊಳ್.

ಮ॥ ಘನಬಾಹಾಬಲದಿಂದಿದಿರ್ಚಿದಸುಹೃದ್ಭೂಪಾಳರಂ ಘಾಣ್ಮಿಘ ।
ಣ್ಮೈನಿ ಕೊಂದಿಕ್ಕಿ ಸಮಸ್ತರಾಜ್ಯಪದಮುಂ ವಿಕ್ರಾಂತದಿಂ ತಂದು ನ ।
ಚ್ಚಿನ ಸೇನಾಪತಿ ಕೀರ್ತಿವರ್ಮ ನಮಲಶ್ರೀಕೀರ್ತಿಗಾಣ್ಮಂ ಜಗ ।
ಜ್ಜನರಕ್ಷಾಮಣಿ ಗಾಗಳೋಲಗಿಸಿದಂ ದಂಡೇಶದಿಕ್ಕುಂಜರಂ ॥ ೨೧ ॥

ವ॥ ಅಂತೋಲಗಿಸಿ ನಿಜೋಚಿತಾಸನದೊಳ್‌ಕುಳ್ಳಿರ್ದುದುಂ ವಿಜಯಸೇನನೆಂಬ ಹಿತವುರೋ ಹಿತ ನಿಂತೆಂದಂ.

ಉ॥ ದೇವ ಭವತ್ಪ್ರತಾಪನಿಶಿತಾಸ್ತ್ರದಿ ನುದ್ಧತವೀರವೈರಿ ಸೃ ।
ಥ್ವೀವರರಂ ಕಜಿುತ್ತಿಜಿಸದು ಪಂದಲೆಯಂ ಗಗನಕ್ಕಡುರ್ತು ಕೊಂ ॥
ಡೋವದೆ ಸೆಂಡನಾಡಿ ಜಯಮುಂ ಗೆಡೆಗೊಂಡು ಸಮಸ್ತವಸ್ತುಸ ।
ದ್ಭಾವಮು ನೀಟಿದ್ದಿಕೊಂಡು ಮೆಜಿಸಿದಂ ನಿಜಶೌರ್ಯಮು ನಾಜಿರಂಗದೊಳ್ ॥ ೨೨ ॥

ವ॥ ಎಂದು ಬಿನ್ನಪಂಗೆಯ್ದ ಪುರೋಹಿತನ ವಚನರಚನಾಪ್ರಪಂಚಮು ನವಧಾರಿಸಿ ಸೇನಾಧಿ ನಾಥ ಕೀರ್ತಿವರ್ಮನಂ ಸಮಸ್ತಸಾರವಸ್ತುಗಳಿಂ ತಣಿಪಿ ಬೀಡಿಂಗೆ ಕಳಿಪಿ.

ಮಾಸ್ರ॥ ಘನಗಂಭೀರಸ್ವನಂ ಮುಂಗಳಪಟಹರವಂ ಗಾಯಿನೀಗೇಯಮುಂದ್ರ ।
ಧ್ವನಿ ಜೈತ್ರೋತ್ಸಾಹಭೇರೀವಿರುತಿ ವಿವಿಧತೂರ್ಯೋತ್ಕರಧ್ವಾನ ಮುರ್ವೀ ॥
ಜನತಾನಂದ ಪ್ರಭೋಷಂ ನೆಗಟಿಶ್ವಿಸೆಯೆ ಜಯಶ್ರೀವಧೂವಲ್ಲಭಂ ಭೂ ।
ಜನನೇತ್ರೇಂದೀವರೋನ್ಮೀಳನಕರವಿಳಸಚ್ಚಾರುಚಂದ್ರಂ ನರೇಂದ್ರಂ ॥ ೨೩ ॥

ಮಾಸ್ರ॥ ಪ್ರತಿಪಕ್ಷೋರ್ವೀಶವಂಶಕ್ಷಿತಿರುಹತತಿಯಂ ಕಿಟ್ಟಿ ಬೇರಿಂದೆ ಭೀತ್ಯಾ ।
ನತಧಾತ್ರೀನಾಥರಂ ಮನ್ನಿಸಿ ನಿಜನಿಜರಾಜ್ಯಸ್ಥರಂ ಮಾಡಿ ನಿತ್ಯೋ ॥
ರ್ಜಿತತೇಜಂ ಧಾತ್ರಿ ಜೀ ಯೆಂಬಿನ ಮುದಿತಯಶಸ್ತಂಭಮಂ ವಂದಿವೃಂದ ।
ಸ್ತುತ ನತ್ಯಾನಂದದಿಂದಂ ನಿಟಿಸಿದ ನಧಿಕಂ ರಾಜವಿದ್ಯಾಲಲಾಮಂ ॥ ೨೪ ॥

ವ॥ ಅಂತು ಶುಂಭಜ್ಜಯಸ್ತಂಭಮು ನುತ್ತಂಭಿತಂಮಾಡಿ ಮುತ್ತವೊಂದು ದೆವಸಂ.

ಉ॥ ಸಂತತಪೋಲಗಿಪ್ಪ ಖಿಳಮಂತ್ರಿವುರೋಹಿತದಂಡನಾಥಸಾ ।
ಮಂತನಿಯೋಗಿವರ್ಗ ಬುಧಗಾಯಕವಾದಕರೊಪ್ಪೆ ಸುತ್ತಿ ಶು ॥
ದ್ಧಾಂತವಿಳಾಸಿನೀಜನಸಮೇತ ನಿಳಾಪತಿ ರಂಜಿಸಿರ್ದ ನ ।
ತ್ಯಂತವಿಚಿತ್ರಶೋಭೆವಡೆದೋಲಗಶಾಲೆಯೊಳಿಂದ್ರಲೀಲೆಯಿಂ ॥ ೬೫ ॥

ಕಂ॥ ವಿಕ್ರಮಮುತ್ಸರದಿಂದುಱಿ ।
ದಾಕ್ರಮಿಸಿದೊಡೆಗಿದು ಸುಗಿದು ಬಂದಡಿವೊದಲೊಳ್ ॥
ವಕ್ರತೆಗೆಟ್ಟಿರ್ದಿಭರಿವು ।
ಚಕ್ರ ಮಿದೆನಿಸಿದುದು ನೃಪನ ಕೇಸರಿಪೀಠಂ ॥ ೬೬ ॥

ಇಂಗಡಲೊಳ(ಗ)ಮರ್ದುವು ನೊರೆ ।
ದೊಂಗಲ್ ಮಂದರಮು ನೆನೆ ಮನಂಗೊಂಡುವು ತ ॥
ನ್ವಂಗಿಯ ರಿಕ್ಕುವ ಚಮರೀ ।
ಜಂಗಳ್ ಮನುಜೇಂದ್ರಮಂದರಂಗೋಲಗದೊಳ್ ॥ ೬೭ ॥

ಪಾಣಿತಳಪ್ರಭೆ ಪಸರಿಸೆ ।
ಶೋಣಿತಚಮರೀಜ ಮೆನಿಸಿದುವು ಸಿತಚಮರ ॥
ಶ್ರೇಣಿಗಳದಂತೆ ಪೊರ್ದಿದೊ ।
ಡೇಣಾಕ್ಷಿಯರಂ ಸರಾಗಮಾಗದುದುಂಟೇ ॥ ೬೮ ॥

ವ॥ ಮತ್ತಂ.

ಮಾಸ್ಯ॥ ನಳಿದೋಳ್ಗಳ್ ಶಾಖೆಯಂ ಕೆಂದಳ ವೆಳದಳಿರಂ ಭ್ರೂಲತಾಭಂಗಿ ಭಂಗಂ ।
ಗಳ ನಾಲೋಳಾಕ್ಷಿಗಳ್ ನೀಳ್ದಲರ್ಗಳ ನಳಕಂ ತುಂಬಿವಿಂಡಂ ಕುಚಂಗಳ್ ॥
ಫಲಮುಂ ಸುಯ್ಗಂವು ಕಂಪಂ ಮಿಗೆ ಸೊಗಯಿಸಿತಂಗೊದ್ಭವಶ್ರೀಜಗನ್ಮಂ ।
ಗಳಶೃಂಗಾರಾಬ್ಧಿವೀಳಾವನಲತೆ ಯೆನಿ ಶುದ್ಧಾಂತಕಾಂತಾಕದಂಬಂ ॥ ೬೯ ॥

ಉ॥ ತೋಳ ಮೊದಲ್ ಮೊದಲ್ಗಿಡಿಸೆ ಸೋರ್ಮುಡಿ ಸುತ್ತಿ ಕುಚೋರುಮೂಳ ಮು ।
ನ್ಮೀಲಿಸೆ ನಾಭಿ ನಾಣ್ಗಿಡಿಸೆ ಬಾಯ್ದೆಱಿಸಿ ಬಲ್ಸೆಱಿಸಿಗೆಯ್ಯೆ ಚೆಲ್ವಗಣ್ ॥
ಬಾಳಿಸೆ ಭಂಗಿ ಭಂಗಿನಿ ಜನಂಗಳಚಿತ್ತಮು ನಿರ್ದರೊಪ್ಪೆ ಭೂ ।
ಪಾಲನ ಪಕ್ಕದೊಳ್ ಪಲರು ಪೋಲಗಕಾರ್ತಿಯ ರಿಚ್ಛೆಕಾರ್ತಿಯರ್ ॥ ೭೦ ॥

ಕಂ॥ ತರುಣಿಯರ ಮುಡಿಯ ಪುಡಿಗ ।
ತ್ತುರಿ ಸೂಡಿದ ಮಾಲೆ ಘುಸೃಣಲೇಪಂ ನಱಿಸುಯ್ ॥
ಪರಿದ ಹಿಮರಜ ಮವಿಂತೈ ।
ವೆರಕೆಯ ಕಂಪಿಂ ಮದಾಳಿಗಿತ್ತುವು ಮದಮಂ ॥ ೭೧ ॥

ಕಂ॥ ರಾಣೀವಾಸದ ತುಡುಗೆಯ ।
ಮಾಣಿಕದೆಳವಿಸಿಲು ಮೆಸೆವ ಧವಳಕಟಾಕ್ಷ ॥
ಶ್ರೇಣಿಯ ಬೆಳ್ದಿಂಗಳು ಮು ।
ಕ್ಷೂಣ ಮವೊಂದೊಂದನೊತ್ತ ಲಾಱಿವೆ ಸಭೆಯೊಳ್ ॥ ೩೦ ॥

ಚಂ॥ ಅಣಕಮಿದೇನೊ ಪೀಲಿದಱಿ ರನ್ನದ ಸತ್ತಿಗೆ ತಳ್ತು ವೀಸಭಾಂ ।
ಗಣದೊಳೆನಲ್ಕೆ ಶೇಖರದ ಮಾಳಿಗೆ ಸಾರ್ವಳಿವಾಲೆ ಮೇಲೆ ಸಂ ॥
ದಣಿಸಿದ ಲೀಲೆಯಂ ಮಕುಟದುನ್ಮುಖರತ್ನಮರೀಚಿಮಾಲೆಗಳ್ ।
ಪೆಣೆದಡರ್ದೇಱಿ ವಿಭ್ರಮವು ಮೊಪ್ಪಿತು ಸುತ್ತಿದ ರಾಜಲೋಕದೊಳ್ ॥ ೩೩ ॥

ಮ॥ ನೆಱಿ ಕರ್ಣಾಮೃತವೃಷ್ಟಿ ಯಪ್ಪ ರಸರಾಗೋಪೇತಮುಂ ಗೀತಮುಂ ।
ಮೆಱಿಸಿಯಲ್ಕುಂಗಜವಾರ್ಧಿಘೋಷ ಮೆನಿಪುರ್ವಿಹೃದ್ಯಮುಂ ವಾದ್ಯಮುಂ ॥
ಮೆಱಿಸಿಯಲಾ೯ಂಗಿಕವಾಚಿಕಾಭಿನಯಭಾವಸ್ತುತ್ಯಮುಂ ನೃತ್ಯಮುಂ ।
ಮೆಱಿಸಿಯಲ್ಕಿರ್ದುದು ಬಂದು ಭಾರತಿಕವೃಂದಂ ಭೂಪನಾಸ್ಥಾನದೊಳ್ ॥ ೩೪ ॥

ಉ॥ ಬಾರಿಪ ನಿಮ್ಮ ತರ್ಜನದಿ ನೀಜನದೊಂದುಲಿ ಮಾಣ್ಗೆ ಮಾಣೆ ವಾ ।
ವಾರೆಮಗಿಲ್ಲ ವಾರಕರಿನುತ್ತುವೆ ಮಾರ್ಜಡಿವಂದದಿಂ ಪ್ರತೀ ॥
ಹಾರಿಯರಂ ಪೊದಱಿಪ್ಪ ವೆಳವೆಂಡಿರ ನೂಪುರದಿಂಚರಂ ಮುಖಾಂ ।
ಭೋರುಹಭೃಂಗನಾದ ಮುಡಿನೂಲ ಕಳಧ್ವನಿ ಕಂಕಣಸ್ವನಂ ॥ ೩೫ ॥

ವ॥ ಅಂತೋಲಗಂಗೊಟ್ಟ ಸೌಂದರ್ಯಕಂದರ್ಪನಿರ್ಪುದು ಮನಂತಮಹಿಮಾವಲಂಬಿ ಯಾಗಿ.

ಮ॥ ಕಮನೀಯಂ ಸಭೆ ಶೋಭಿಸಿತ್ತು ರಮಣೀಲಾವಣ್ಯಲಹ್ಮೀಮಯಂ ।
ಸಮದಾಪಾಂಗಮಯಂ ವಿಭೂಷಣಮಯಂ ಜ್ಯೋತಿರ್ಮಯಂ ಚಾರುಗಂ ॥
ಥಮಯಂ ಕಂಕಣಕಿಂಕಿಣೀರವಮಯಂ ಕರ್ಪೂರಧೂಳೀಮಯಂ ।
ಭ್ರಮರೀಗೇಯಮಯಂ ಸ್ಮರೋತ್ಸವಮಯಂ ತೇಜೋಮಯಂ ಶ್ರೀಮಯಂ ॥ ೩೬ ॥

ವ॥ ಆಪ್ರಸಸ್ತಾವದೊಳ್ ವಿಚಿತ್ರವೇತ್ರಹಸ್ತನು ಮಾರ್ಯವೇಷಪ್ರಶಸ್ತನು ಮಪ್ಪ ಪ್ರತೀಹಾರ ನೊರ್ವ ನುರ್ವೀಶ್ವರಂಗೆ ಪೊಡೆವಟ್ಟು ಕುಟ್ಮಲಿತಕರಸರೋಜನಾಗಿ.

ಮ॥ ಧರಣೀವಲ್ಲಭ ಬಿನ್ನಪಂ ಕುರುಕುಳಪ್ರೋದ್ಭಾಸಿ ಭದ್ರಾವತೀ ।
ಪುರನಾಥಂ ಭವದೀಯತಾತಸಹಜಂ ಶ್ರೀಚಂದ್ರಿಕಾರಾಗನಾ ॥
ಗರಚಂದ್ರಂ ನೃಪನೀತಿಶಾಲಿ ಜಯವರ್ಮಂ ಸಾರಸದ್ಧರ್ಮ ನಾ ।
ಧರದಿಂ ದಟ್ಟಿದ ರಾಯಭಾರಿ ದಮನಂ ಬಂಧಿರ್ದಪಂ ಬಾಗಿಲೊಳ್ ॥ ೩೭ ॥

ವ॥ ಎಂದು ಬಿನ್ನಪಂಗೆಯ್ದು ಮಹೀಶಲಬ್ಧಾದೇಶನಾಗಿ ಪೋಗಿ ತಂದು ಕಾಣಿಸುವುದುಂ ದಮನ ನತಿಸುಮನಸ ನಾಸ್ಥಾನಕುಟ್ಟಿಮಪ್ರಳುಟ್ಟಿತೋತ್ತವಾಂಗನಾಗಿ ಪೊಡೆವಟ್ಟು ನಿಜೋಚಿತಾಸನದೊಳಿರೆ ನರೇಂದ್ರ ನಾನರೇಂದ್ರ ನಟ್ಟಿದ ದೂತನ ನತಿಪ್ರಸಾದದೃಷ್ಟಿಯಿಂ ನೋಡಿ.

ಚಂ॥ ಕುಶಳಮೆ ಮಾತುಳಂಗೆ ಜಯವರ್ಮನೃಪಂಗೆ ಪರಿಗ್ರಹಪ್ರಜಾ ।
ಕುಶಲವಿಧಾಯಿಗೆಂದು ಬೆಸಗೊಂಡೊಡವಂ ಪ್ರಭುಗೆಂದ ನಿನ್ನೆಗಂ ॥
ಕುಶಲಮೆ ದೇವ ನಿಮ್ಮ ಬಲವರ್ಗದಿ ನೀಗಳದೊಂದು ಕಾರ್ಯಕ ।
ರ್ಕಶಭರ ಮಾಗೆ ಬೇಗ ಮಱುಪಲ್ ನಿಜಸನ್ನಿಧಿಗನ್ನ ನಟ್ಟಿದಂ ॥ ೩೮ ॥

ವ॥ ಅದಾವುದೆನೆ, ದೇವ ಭವದೀಯಜನಕನನುಜಾತೆಯಪ್ಪ ಸೌಂದರ್ಯಶೀಲಗುಣರುಂದ್ರಚಂದ್ರಿಕಾದೇವಿಗಂ ಸಕಲರಾಜಗುಣಭದ್ರ (ನಪ್ಪ) ಭದ್ರಾವತೀಪುರನಾಥ ನಪ್ಪ ಜಯವರ್ಮನೃಪತಿಗಂ ಪುಟ್ಟಿ.

ಕಂ॥ ಅಮಳಕುಳವಾಹಿನೀಸತಿ ।
ಗೆ ಮಹಾಬ್ಧಿಗೆ ಪುಟ್ಟಿದಬ್ಜವಾಸಿನಿಯ ವಿಳಾ ॥
ಸಮ ನಾಳ್ದು ನೆಗಟ್ಟಿಳತಿವಿ ।
ಭ್ರಮವತಿ ಭಾನುಮತಿ ಯೆಂಬ ಕನ್ಯಾರತ್ನಂ ॥ ೩೯ ॥

ಮ॥ ನಿನಗೇವೇಟಿಶ್ವಿ ನಭೂತಪೂರ್ವಮ ನಿಳಾಲಂಕಾರಮಂ ನೀರಜಾ ।
ಸನನಿಷ್ಪಾದಿತ ವಸ್ತುಸಾರಮ ನನಂಗಪಾಜ್ಯರಾಜ್ಯಾಭಿವ ॥
ರ್ಧನಮಂ ಮಂಗಳಲಕ್ಷ್ಮಣೈಕನಿಧಿಯಂ ಸಂಸಾರಸಾಫಲ್ಯಸಾ ।
ಧನಮಂ ಲೋಚನಲೋಚನೀಯರುಚಿಯಂ ತತ್ಕನ್ಯಕಾರೂಪಮಂ ॥ ೪೦ ॥

ಕಂ॥ ಲಪನೇಂದುರುಚಿಗೆ ಮಱುಶಿಗೆ ।
ಯ್ದುಪಕರಿಸಿದ ಘನಪಯೋಧರಂಗಳೆ ನೊಸೆದೀ ॥
ಹ್ಮಿಪ ಪದಪಯೋಜಲಹ್ಮಿಯ ।
ಚಪಳಾಹ್ಮಿಗಳೆನಿವು ವವಳೆ ಚರಣನಖಂಗಳ್ ॥ ೪೧ ॥

ಆಕನ್ನಿಕೆಯಂ ಬೇಡಲ್ ।
ಸಾಕಾಂಕ್ಷಂ ಕನಕವುರದ ಗಜಕರ್ಣಂ ವು ॥
ದ್ಭಾಕಾಂತನಲ್ಲಿಗಟ್ಟಿ ವಿ ।
ವೇಕಿ ನಿಸೃಷ್ಟಾರ್ಥ ನೆನಿಪ ದೂತಂ ಖ್ಯಾತಂ ॥ ೪೨ ॥

ಬಂದು ನೃಪದರ್ಶನಂ ತನ ।
ಗಂದಾಗಿರೆ ತಂದ ಪಾಗುಡೆಂಗಳೆ ನಿಂಬಿಂ ॥
ಮುಂದಿಟ್ಟು ವಿನಯನತ ನಾ ।
ನಂದಮು ನಾದರದೊಳೆಯ್ದೆ ಬಱಿಕಂ ನುಡಿದಂ ॥ ೪೩ ॥

ಮಾಸ್ರ॥ ಹರಿವಂಶೋತ್ತಂಸಹಂಸಂ ಕನಕಪುರವರಾಧೀಶ ನುದ್ದಾಮತೇಜಂ ।
ಪರಭೂಪಶ್ರೀಸಮಾಕರ್ಷಣಪಟು ಗಜಕರ್ಣಂ ನಯಾಕೀರ್ಣ ನೊಲ್ದೆ ॥
ಮ್ಮರಸಂ ತತ್ಕನ್ಯೆಯಂ ಭಾನುಮತಿಯ ನೆರೆದಿಂದಟ್ಟಿದಂ ಕೊಟ್ಟು ಸಯ್ಪಂ ।
ಪರಮುಪ್ರೀವಾನುಬಂಧಕ್ಕೆಡಗುಡುವುದು ನೀಂ ದೇವ ಸೌಜನ್ಯಶಾಳೀ ॥ ೪೪ ॥

ಕಂ॥ ಮಾದೇವಿಪಟ್ಟಮಂ ನೃಪ ।
ನಾದರದಿಂ ಕುಡೆ ನಿಜಾತ್ಮಜಾತೆಗೆ ನೆಗಟ್ಟಿ ॥
ರ್ದಾದಿವ್ಯಮಾಲೆ ಶೇಖರ ।
ಮಾದಪ್ಪು ದನೀಕನೃಪರ್ಗದೀಂ ಕೇವಳಮೇ ॥ ೪೫ ॥

ಆದೊರೆಯ ವಲ್ಲಭಂ ತನ ।
ಗಾದೊಡೆ ನಿಜಕನ್ನಿಗನ್ನಿಯೆಂಬಿನಿತಲ್ಲೇ ॥
ನಾದೊರೆಯಳಿಯಂ ನೃಪ ನಿನ ।
ಗಾದೊಡೆ ಭುವನದೊಳಸಾಧ್ಯ ಮಾವುದು ಮುಂಟೇ ॥ ೪೬ ॥

ಎಱಿಗುಗು ಮೆಮ್ಮರಸಂ ಮನ ।
ದೆಱಿಕದಿ ನೀಭಾನುಮತಿಗ ಮೆಂಬಿನಿತೆಂ ನಿನ ॥
ಗೆಱಿಗಿಸುಗು ಮೆಱಿಗದಹಿತರ ।
ನೆಱಿಗಿಸದೊಡೆಱಿಗಿಸುಗು ಮುಮರಿಯರ್ಕಳ ನವರ್ಗಂ ॥ ೪೭ ॥

ಮ॥ ಅನತೋರ್ವೀಶರ ದಂತಿದಂತವಳಯಾಳಿಂಕಾರದಿಂ ವೀರವೈ ।
ರಿನೃಪಾಲದ್ವಿಪಮೌಕ್ತಿಕಾವಳಿಗಳಿಂ ಕೆಯ್ಗೊಯ್ಸುಗುಂ ನಿನ್ನ ನಂ ॥
ದನಿಯಂ ಪೇಱ್ದ್ ಪೆಱಿರಂತೆ ಮಿಕ್ಕ ಬಳೆಯಿಂದಂ ಮಿಕ್ಕ ಮುತ್ತಿಂದ ವಂ ।
ಗನಿಯರ್ಗಾಹವಧೀರ ನಾನೃಪವರಂ ನೀಪಥ್ಯಮುಂ ಮಾಟ್ಪಿನೇ ॥ ೪೮ ॥

ವ॥ ಎಂದು ಬಿನ್ನಪಂಗೆಯ್ದ ದೂತನ ನಿಜೇಶವಿಕ್ರಮುಪ್ರಕಾಶಕರ ಮುಪ್ಪ ಬಂಧುಕೃತ್ಯಸಂಬಂಧ ಬಂಧುರಾಳಾಪಂಗಳಂ ಕೇಳ್ದು ಪರಿತೋಷದರಹಸಿತಲಸಿತವದನಾರವಿಂದನಾಗಿ.

ಕಂ॥ ತನ್ನನ್ನನ ಗುಣವೃದ್ಧನ ।
ನನ್ನುತನ ಕುಲೀನನೊಂದುಸೌಹೃದ ಮಿಟ್ಟಿದೆಂ ॥
ಬನ್ನನೆ ಕನ್ನಿಗೆ ಯೋಗ್ಯನೆ ।
ನಿನ್ನಿಂದುದೆ ಯೋಗ್ಯ ಮಲ್ಲದಿದು ಕರಣೀಯಂ ॥ ೪೯ ॥

ವ॥ ಎಂದು ಭಂಗಿಭಾಷಿತದಿ ನಾತನಂ ಪ್ರೀತನಂ ಮಾಡಿ ಬೀಡಿಂಗೆ ಕಳಿಪಿ ವಿಸರ್ಜಿತಾಸ್ಥಾನ [ನಾಸನ] ದಿಂದ ಮೆಟ್ಟಿದ.

ಕಂ॥ ಕೃತಮತಿಗಳನ್ವಯಾಗತ ।
ರತಿಮೋಹಿತರಖಿಳನೀತಿಶಾಸ್ತ್ರಕಳಾಪಂ ॥
ಡಿತರೆನಿಪ ನಚಿವರೊಡವರೆ ।
ಪತಿ ಮುಂತಾಲಯಕೆ ಬಂದು ಮುಂತಣ ವಿರ್ದಂ ॥ ೫೦ ॥

ವ॥ ಇರ್ದು ಶಕ್ರಗುರು ಶುಕ್ರಕಾಮಂದಕಾದಿ ನಯವೈದ್ಧರಿಂ ನಿಬದ್ಧಮಾದ ನೀತಿಶಾಸ್ತ್ರಪಟುಗ
ಳೊಳಾಳೋಚನಂಗೆಯ್ದಲ್ಲಿ.

ಕಂ॥ ಕನಕಪುರಸ್ಥನ ಹರಿವಂ ।
ಶನ ಗಜಕರ್ಣನ ನಿಸರ್ಗದುರ್ಮಂತ್ರತೆ[1] ಯಾ ॥
ರ್ಪಿನ ವಿಕೃತಿ ತರಳಭಾವಂ ।
ಮನದೊಳಿರಲ್ಕೇವ ನುಡಿನೆ ಕೊಳುಕೊಡೆಗೆ ನೃಪಂ ॥ ೫೧ ॥

ವ॥ ಅಂತುಱಿದೆ.

ಚಂ॥ ನಿನಗನುರೂಪೆ ಯೆಂಬುದನೆ ಕಂಡೊಡೆಯಂ ವಧುಗೆಂತು ಮೆಂಬುದಂ ।
ನೆನೆದು ಕುಮಾರಿ ಭಾನುಮತಿಯಂ ಕುಡಲೊಲ್ಲದ ನಾದ ನಾಜಡಾ ॥
ತ್ಮ ನುಚಿತಮಲ್ತು ಮನ್ಮಥ ನಿರಲ್ ರತಿ ವಿಪ್ಪುವಿರಲ್ ಸರೋಜವಾ ।
ಸಿನಿ ದಿವಿಜಾಧಿನಾಯಕ ನಿರಲ್[ಶಚಿ]ಪೇಟಿಂ ಪೆಱಿಗರ್ಗೊಲ್ಲು ನಾರ್ಗುಮೆ ॥ ೫೨ ॥

ವ॥ ಅಂತು ಮುಂತ್ರಿಗಳ್ವೆರಸು ನಿರ್ನಿಕ್ತಕಾರ್ಯನಾಗಿ ಮಱಿದಿವಸ ಮವಸರಂಗೊಟ್ಟು ಗಜ
ಕರ್ಣದೂತನ ಮುಖಾವಲೋಕನಂಮಾಡಿ.

ಕಂ॥ ಶ್ರೀಪತಿ ಜನಪತಿ ಮದ್ಭಗಿ ।
ನೀಪುತ್ರಂ ಪುಂಡರೀಕಿಣೀಶ್ವರ ನಖಿಲ ॥
ದ್ವೀಪಾಂತವರ್ತಿ ಕೀರ್ತಿ ಮು ।
ಹಾಪದ್ಮಂ ಭಾನುಮತಿಗೆ ವರ ನೇತೆಱಿದಿಂ ॥ ೫೩ ॥

ವ॥ ಅದಱಿಂದಮಲಭ್ಯಮಾನ ಮಪ್ಪ ಕನ್ಯಕಾವೃತ್ತಕಂ ಮಾಣ್ಗೆ ಮತ್ತಮೊಂದುಪಕ್ಷಮುಂಟ
ದಾವುದೆಂದೊಡೆ.

ಚಂ॥ ಬಳೆವನುರಾಗಮುಂ ಬಯಸಿ ಕೊಳ್ಕೊಡೆಗಟ್ಟಿದ ತನ್ನವಾತ ನಾ ।
ಮಿಳಿವುದು ಪೆರ್ಮೆಯಲ್ಲದೆರ್ದವತ್ತುಗೆತೆತ್ತುಗೆವೆತ್ತ ಮುಕ್ಕಳೊಳ್ ॥
ಗೆಳೆಯಳ ನಾಕೆಯುಂ ಕಿಱಿಯಳಂ ಮದಲೇಖೆಯ ನುನ್ಮಯೂಖೆಯುಂ ।
ವಿಳಸಿತಕಾಮಕಲ್ಪತರುಶಾಖೆಯ ನಾವಿಭುಗೀವೆ ವಲ್ಕಿಱಿಂ ॥ ೫೪ ॥

ವ॥ ಎಂದು ನಿಜಪುತ್ರಿಯುಂ ಧಾತ್ರೀತನೂಜೆಯಪ್ಪ ಮದಲೇಖೆಯುಂ ತೋಱಿ.

[1] ನಿಸರ್ಗದುನ್ಮತ್ತತೆ.

ಕಂ॥ ಈಕೆ ಮದಲೇಖೆ ತಾ ನವ ।
ಳೋಕಿನಿ ಗಜಕರ್ಣ ನಿದಱಿಂ ನೀಯನುಬಂಧಂ ॥
ಲೋಕದೊಳನುಕ್ತಸಿದ್ಧ ಮು ।
ದೇಕೆಡೆಗಟ್ಟಲ್ತು ತಣಿವುಗಾಪ್ತಾಳಿಗಳಂ ॥ ೫೫ ॥

ವ॥ ಎಂಬುದುಂ ದೂತಂ ವೀತಾಕೂತನಾಗಿ ಮನವೊಲ್ದು.

ಕಂ॥ ದೇವಭವತ್ಪಟ್ಟಮಹಾ ।
ದೇವಿಯ ಸುತೆ ಭಾನುಮತಿ ಯಧೀಶನ ಹೃದಯೇಂ ॥
ದೀವರಮು ನಲರ್ಚುಗು ಮಿವ ।
ಳೇವಳೊ ನೀರಡಸಿದಂಗೆ ತುಪ್ಪಂ ಮರ್ದೀ ॥ ೫೬ ॥

ಚಂ॥ ಲಳಿತವಿಳಾಸವಿಭ್ರಮಕಳಾವತಿಯರ್ ತನಗಿಲ್ಲದೆಮ್ಮ ಭೂ ।
ತಳಪತಿ ಬೇಡಿ ಯಟ್ಟಿದನಿ ಕೂಸ ನನೇಕನೃಪಾಲರಂ ಭುಜಾ ॥
ಬಳದಿ ನದಿರ್ಪ ತತ್ಕುಲಧನಂಬೆರಸೀಬ್ಬುಳಿಗೊಂಡೆ ಕನ್ಯಕಾ ।
ಕುಳದೊಳಗಾರ ಪೋಲ್ವೆಯವಳೀಕೆಯ ನೇಕೆಯೊ ಪಾಟದೋಱಿವಿರ್ ॥ ೫೭ ॥

ಕಂ॥ ಮುತ್ತಿನ ಬಿಜ್ಜಿನುಡಿಗಳ ಹುಸಿ ।
ಸುತ್ತಿನೊಳೇ ನವಳ ನೀವೊಡೀವುದು ಕುಡೆ ವೆಂ ॥
ಬುತ್ತರಮನೆ ಕುಡುವುದು ಮೇ ।
ಣುತ್ತರದೊಳ್ ಕಾಣಲಕ್ಕು ಮಲ್ಲಿಯ ಫಳಮಂ ॥ ೫೮ ॥

ಎಳಸಿ ಮನವೊಲ್ದ ನಪ್ಪೊಡೆ ।
ಬಳವದ್ಭೂಭುಜರ ವಸ್ತ್ರವಾಹನಕನ್ಯಾ ॥
ಕುಳ ಮೆಮ್ಮರಸನ ನಡುಮನೆ ।
ಯೊಳಗಿರ್ದಪು ವೆಂದೆ ಬಗೆಯಿ ವೊಲ್ಲದೊಡಱಿಯಿಂ ॥ ೫೯ ॥

ಮು॥ ಇದನಿಂನೊಂದನೆ ನಂಬು ಕನ್ನಿಕೆಯ ನೆನ್ನಾಳ್ದಂಗೆ ನೀನೀಯಲೊ ।
ಲ್ಲದೆ ಪೇಱಿಸ್ದಿಶ್ವ ನೃಪ ನೀಂ ಕುಮಂತ್ರಿಗಳ ಮಾತಂ ಕೇಳ್ದು ಬೇಳಾಗಿ ನಾ ॥
ಳೆ ದುರಂತಾಂತಕಕೋಪ ನೆತ್ತಿ ಗಜಕರ್ಣಂ ಬಂದೊಡಾಂತಿಲ್ಲಿ ದ ।
ರ್ಪದಿ ನಡ್ಡೈಸುವ ಕೆಯ್ದುಗೆಯ್ವ ಕಡುಕೆಯ್ದೊಟ್ಟಯ್ವ ಕಟ್ಟಾಳ್ಗಳಾರ್ ॥ ೬೦ ॥

ಕಂ॥ ಇನ್ನೊಲ್ದ ಕನ್ನೆಯೊರ್ವಳ ।
ನೆನ್ನಾಳ್ದಂ ಕೊಳ್ವ ನಲ್ತು ನಿನ್ನೀಪೊಯಿಲಂ ॥
ನಿನ್ನೀರಾಜ್ಯದ ಸಿರಿಯಂ ।
ನಿನ್ನೀಕುಲಧನಮು ನೊಡನೆ ಬಱಿವಱಿಗೊಳ್ವಂ ॥ ೬೧ ॥

ವ॥ ಎಂದತಿಕ್ರಮಿಸಿ ವಿಕ್ರಮದಿ ನಡರೆ ನುಡಿದ ದೂತನ ದುರುಕ್ತಿಗೆ ಮಹೀಶನೀಷದುದ್ಗತ ಭೃಕುಟಿಯುಂ ಕಿಂಚಿದಾರಕ್ತಮುಕ್ತನೇತ್ರನುಂ ಸ್ವಲ್ಪನಿಷ್ಪಂದಿತಾಧರನು ಮಾಗಿ ನುಡಿಯಲೊಡರಿಸುವುದುಂ ಅದಂ ಕಂಡು ಮನಮುಱಿದು ಮಂತ್ರಿಗಳ್ ಮಾರ್ಕೊಂಡು.

ಕಂ॥ ಏಂ ಗಳ ಬಾಯುಂಟೆಂದು ಕ ।
ರಂ ಗಳವುವೆ ಬಱಿದೆ ನಿನ್ನ ಪವಣಱಿಯದೆ ವೈ ॥
ದ್ಧಂಗೆ ಖಳಂಗೀವುದೆ ಲಲಿ ।
ತಾಂಗಿಯ ನೀವಂತೆ ರಾಹುವಿಂಗೆಳವೆಱಿಯಂ ॥ ೬೨ ॥

ತಾವರೆ ಯಲ್ಲದೆ ಸಿರಿಗಂ ।
ತಾವಲೆ[1] ನೆಲೆ ಯಕ್ಕುಮೇ ಮಹಾಪದ್ಮನೆ ಲೀ ॥
ಲಾವತಿಗೆ ಭಾನುಮತಿಗೆ ಮ ।
ನೋವಲ್ಲಭ ನಕ್ಕು ಮಕ್ಕುಮೇ ನಿನ್ನರಸಂ ॥ ೬೩ ॥

ಹೃದ್ಯಗುಣನಿಳಯ ನಾವಿಭು ।
ಸದ್ಯಶ ನಿರೆ ಕನ್ನಿ ನಿನ್ನ ಪತಿಗೆಳಸುವಳೇ ॥
ಪ್ರದ್ಯೋತದ್ಯುತಿ ಗಲ್ಲದೆ ।
ಖದ್ಯೋತದ್ಯುತಿಗೆ ನಳಿನಿ ಮೊಗಮಿತ್ತಪಳೇ ॥ ೬೪ ॥

ವ॥ ಮತ್ತವಿಾಭಾನುಮತಿಯ ನಾತವೋಮೂರ್ತಿಯನುವರ್ತನಕ್ಕ, ವಿಾ ಹರಿಣಲೋಚನೆಯ ನಾಚಮೂರಾತಿರೌದ್ರಮದನಮದೋತ್ಸವಕ್ಕ, ವಿಾಕುಮುದಗಂಧಿನಿಯ ನಾಖರದಂಡಸಖನ ಸುಖಸಂಗಮಕ್ಕ, ವಿಾಚಂಪಕವಿಕಾಸನಾಸಿಕೆಯ ನಾಮಧುವವೃತ್ತಮನೋವೃತ್ತಿಗ, ವಿಾಮಯೂರ ಕಚಭಾರವತಿಯ ನಾದ್ವಿಜಿಹ್ವವಲ್ಲಭನ ನಲ್ಲಳುತನಕ್ಕ, ವಿಾಮರಾಳ ಗಾಮಿನಿಯುಮ ನಾಳನ ವಿಳಾಸನಭಿಲಾಷಾಪೋಷಣಕ್ಕ, ವಿಾಮದನಚಾಪಲತೆಯ ನಾವಿರೂಪಾಕ್ಷನೀಕ್ಷಣಕ್ಕ, ವಿಾರಾಜ ಕಂಠೀರವಾರ್ಹ ಕೇಸರಿಣಿಯ ನಾಗಜಕರ್ಣನಭ್ಯರ್ಣ ಕೇಳಿಗಂ ಪೇಳಿಸುವದಳವಮಾನ ಮನ್ಯೋನ್ಯ ವಿರುದ್ಧ ಮೆಂಬುದ ನಱಿಯದಾಗ್ರಹಿವ ನಿನ್ನ ನಿರ್ಬುದ್ಧಿತನವೇ ನಿನ್ನರಸನ ವಿವೇಕವಿಕಳತೆಯ ನಱಿಪಿದಪ್ಪುದೆಂಬಂತೆ.

ಕಂ॥ ನಿಜದಿಂ ಮದವಳಿನಂ ಧೃತ ।
ರಜ ನುರುಮಾತಂಗಧರ್ಮ ನಾಱಿಡಿದಾಣಂ ॥
ಸಜಡಾತ್ಮಚರಿತ ನೆನಿಸುವ ।
ಗಜಕರ್ಣಂ ಹಸ್ತಿಮೂರ್ಖ ನೇನೆತ್ತಱಿವಂ ॥ ೬೫ ॥

ವ॥ ಅದಲ್ಲದೆಯುಂ.

[1] ತಾವರೆ (ಈ ಪಾಠದಲ್ಲಿ "ರಲ ಯೋರಭೇದಃ" ಎಂಬ ನಿಯಮನವನ್ನಂಗೀಕರಿಸಬೇಕು.)

ಮ॥ ಪಿರಿದುಂ ಬೀರಮನಾಡಿ ಗರ್ಜಿಸುವ ನಿನ್ನೀಗಂಡ[1]ವಾತಿಂಗೆ ಕಾ ।
ತರನುಂ ಬೆರ್ಚುಗು ಬೆರ್ಚ ನವ್ರತಿಮಶೌರ್ಯಾಟೋಪ ನೀಭೂಪ ನೇಂ ॥
ಭರದಿಂದಂ ಬಿಱುಗಾಳಿ ಬೀಸೆ ಮುರನಂ ತಳ್ಳಾಡುಗುಂ ಮೇರುಭೂ ।
ಧರ ಮಳ್ಳಾಡುಗುಮೇ ಮಹಾಪ್ರಳಯವಾತಾಘಾತನಿಷ್ಕಂಪಿತಂ ॥ ೬೬ ॥

ಉ॥ ಬಂದವ ನೆತ್ತಿ ವಿಕ್ರಮದಿ ನೀಟಿಲ್ಕಿಳಿಗೊಂಡವ ನಂತೆ ಕೂಸ ನಿ ।
ನ್ನಿಂದೆವು ಗೊಳ್ಳೆಯಂ ಬಿಡುವೆ ಪೇಟಿಲ್ ತನಗಿಕ್ಕಿದ ಕೋಂಟಿ ತಾಂ ಚಡಂ ॥
ಬಂದು ನಿಜೇಶ ನಾತಕೊಱಿಸಿಯಂತಿಱಿವಂ ಗಳಪಲ್ಕೆ ಬೇಡ ಪೋ ।
ಗೆಂದುಱಿದೊತ್ತಿ ಚಪ್ಪರಿಸೆ ಪೋದನವಂ ಪಗೆಸಾರಿ ಕೋವಡಿಂ ॥ ೬೭ ॥

ವ॥ ಅಂತು ಪೋಗಿ ತತ್ಪ್ರಪಂಚಮೆಲ್ಲಮಂ ಗಜಕರ್ಣಂಗೆ ಕರ್ಣಗೋಚರಂಮಾಡಿಪ್ಪುದು ಮು ದೀರ್ಣಕೋಪಾಟೋಪನಾಗಿ.

ಉ॥ ಮನ್ನಿಸದೆನ್ನ ಬಾಹುಬಲಮುಂ ಕುಲಮುಂ ಚಲಮುಂ ಸಗರ್ವದಿಂ।
ಕನ್ನೆಯ ನೀಯದಿರ್ದ ನೃಪನಂ ಲಪನಂ ಗ್ನಪನಂ ಕೊಳಲ್ಕೆ ತೂ ।
ಳ್ದೆನ್ನ ತೊಡರ್ಪುದೋರದಿನಿಸಂ ಮುನಿಸಂ ಮುನಿಸಾಂಪದಂತೆ ಬಿ ।
ಟ್ಟನ್ನಿರೆ ಕೀರ್ತಿಲಕ್ಷ್ಮಿ ಬಿಡುಗುಂ ಕಿಡುಗುಂ ಕಡುಪೆಂಪಿನೆಟ್ಟಿರಂ ॥ ೬೮ ॥

ವ॥ ಎಂದಾಡಿ ಸಮಗ್ರಸಾಮಗ್ರಿವೆರಸು ತಳರ್ದು.

ಮ॥ ಕರಿವೃಂದಂ ಗಿರಿವೃಂದ ಮಾಗಿರೆ ತುರಂಗಂಗಳ್ ತರಂಗಂಗಳಾ ।
[2]ಗಿರೆ ನಕ್ರಾ[ಳಿ ರಥಾಳಿಯಾ]ಗಿರೆ ಪಯೋಮತ್ಸ್ಯಾಳಿ ಭೃತ್ಯಾಳಿ ಯಾ ॥
ಗಿರೆ ತಾಂ ವಾರಿಧಿ ಮೇರೆದಪ್ಪಿ ಕವಿವಂತೆಟ್ಟಿಂದು ಭದ್ರಾವತೀ ।
ಪುರಮುಂ ಮುತ್ತಿದ ನತ್ಯುದಗ್ರಚತುರಂಗಾಭೀಳಕೋಳಾಹಳಂ ॥ ೬೯ ॥

ವ॥ ಅನ್ನೆಗಂ ತನ್ನ ಬರವನಱಿದು ಮುನ್ನವೆ ಜಳಖಾತಿಕಾವಳಯಮು ನಳುಂಬವೂಗೆ ತಿಂಬಿಸಿಯುಂ, ಮತಿಸ್ಥೂಳತರಜಾಳಂಗಳಿಂ ಮೇಳೆಯಮು ನೋಳಿಗೊಳಿಸಿಯುಂ, ವಿಷಮವಿಷವಿಟಂಕ ದಂಷ್ಟ್ರಾಂಕುರದಂತಗುರ್ವಿಸುವ ವಿಷಲತಾಗುಲ್ಮಕಂಟಕಂಗಳಂ ಗಾಡಿಯಿ ನಳವಡಿಸಿಯುಂ, ಪರಪ ತಾಕಿನೀಸುಭಟಜನಜಾನುಭಂಜನಂಗಳಾಗೆ ದಸಿಗಳಂ ಬಸಿದು ನೆಡಿಸಿಯುಂ, ಚರಣಸಂಚರಣವರ್ಜನೀ ಯಂಗಳಾಗೆ ವಜ್ರಸೂಜಿಗಳ ನುಜ್ಜ್ವಲಂಭಿತಂಗಳಾಗಿಸಿಯುಂ, ಮದಮತಂಗಜಾಂಘ್ರಿತಳವು ನಳಱಿಸು ಸುವ ಶೃಂಗಾಟಕಂಗಳಂ ಸಂಗಳಿಸಿಯುಂ, ಪ್ರಳಯಶಿಖಿಯ ದಳ್ಳುರಿಯ ಬಳ್ಳಿಯಂತೆ ಮಿಳ್ಳಿಸುವ ಮನಕ ದುರಿಯೆಣ್ಣೆಯಂ ಪಣ್ಣಿಸಿಯುಂ, ಅರಿಬಳಪ್ರಹರಣನಿವಾರಂಗಳಪ್ಪಾಳ್ವಱಿಯ ತುಱುಗಲಂ

[1] ವಾತಿಂದೆ ಕಾತರನಂ ಬೆರ್ಚಿಸು [2] ಗಿರೆ ನಕ್ರಂ ರಥಚಕ್ರವಾಗಿರೆ.

ತುಱುಂಬುಗೊಳಿಸಿಯುಂ, ಲಗ್ಗಿಯೊಳ್ ಮೊಗ್ಗರದ ಗಿಗ್ಗಿರಿಗೆ ನಡೆವಂದರೆಂಬಿನವನಿರುಂಕೆ ತೆಗವಂಕು ಶಂಗಳನಳಂಕೆಗೊಳಿಸಿಯುಂ, ಬೆಂಗುಂಡುಗೊಂಡ ಗಂಡಗತ್ತರಿಯ ಸಂಸರ್ಗದರ್ಗಳಮನಮರೆ ಸಾರ್ಚಿಯುಂ, ಕುಳಿಸಿವಿಳಸಿತತಾಂಭೋದಮುಂ ದುರ್ಗಮುಂ ದುರ್ಘಾಟಮಪ್ಪಂತುಗೋಪುರಾವ ಘಾಟನಮುಂ ಮಾಡಿಸಿಯುಂ, ಪರಬಳದ ಪಿರಿಯ ಸಿರಿಯ ನಱಿದಳವಿಗಳಿಯೆ ಕಟ್ಟನಿಟ್ಟಳಂಮಾಡಿ ಸಿಯುಂ, ಅಲ್ಲಲ್ಲಿ ಜಾವಮುಕ್ಕಡೆ(ಗ)ರವಟಗೆತಳವ(ಱಿ ಕೆ)ಯ(ಮೆ)ಕ್ಕೆಕ್ಕೆಯೊಳಂ ಠಾಣಾಂತರಮುಂ ನಿರವಿಸಿಯುಂ, ಅಂತು ಕೆಯ್ಗೞ್ದಿಸಿದಾಗಳ್.

ಕಂ॥ ವಿಳಸಿತವಿಯತ್ತಳಂ ಕೊ ।
ತ್ತಳ ಮಥಟರ ಗಂಡಗುಂಡಕಟ್ಟಳೆ ಮುಗಿಲ ॥
ಟ್ಟಳೆ ಪಗೆವರಾಳ್ವರೆ? ಬೀ ।
ಳ್ವಳೆ ಬಗೆದಾಳ್ವಱಿಸಿ ಮೆಱಿಸಿದುವರಿವಿಟಂಕಂ ವಂಕಂ ॥ ೭೦ ॥

ವ॥ ಅದಲ್ಲದೆಯುಂ.

ಕಂ॥ ಕೂಡೆ ವಿಗುರ್ವಿಸಿದುವು ನಿಮಿ ।
ರ್ದಾಡುವ ಪಟಿಯಿಗೆಗಳಹಿತಬಲಮುಂ ನುಂಗ ॥
ಲ್ವೋಡಿ ಪೊಟಿಲೆಂಬ ರಕ್ಕಸಿ ।
ನೀಡುವ ನಾಲಗೆಗಳೆನಿಸಿ ಲೋಹಿತರುಚಿಗಳ್ ॥ ೭೧ ॥

ವ॥ ಅಂತು.

ನಲಿದಾಡುವ ಇದ ನಾಟ್ಯದಪ ನಿರ್ದುರ್ಮದಪ್ರತಿಭಟರನ್ನ ಪ್ರತಿಸುವ ಚಿತ್ತಂ ಪೊತ್ತುಗುಂ ಮಾತಿ ನಾ ।
ಡಿದ ಬಾಯ್ ಬತ್ತುಗು ಮೇಱಿಸಿ ನೋಡಿದೆವೆ ಸೀಗುಂ ಸಾರ್ದ ಮೆಯ್ ಬೇಗು ಮೆಂ ॥
ಬುದ ನೆಂಬೂಷ್ಮೆಯ ನಾಳ್ದಗುರ್ವಿಸುವ ಕೋಟಾಚಕ್ರದೊಳ್ ನಿಂದ ನೋ ।
ವದೆ ಕಾದಲ್ ನೃಪ ನಿನ್ನ ಮುಚ್ಚಿನ ಮನಃಪ್ರೇಮಾತುಳಂ ಮಾತುಳಂ ॥ ೭೨ ॥

ಕಂ॥ ನಿಂದೊಡೆ ಕರಿಗೊಳ್ಗುಂ ರಣ ।
ಮಿಂದೀಗಳೆ ಕೊಳ್ವ ಮೆಂದು ಬೊಬ್ಬಿರಿದಾರ್ದ ॥
ಯ್ತಂದು ಬಳಸಿದುದು ಕೋಂಟೆಯ ।
ನಂದರಿಬಳ ಮೊಡನೆ ಮೊಲಿಗೆ ಲಗ್ಗೆಯ ಪಱಿಗಳ್ ॥ ೭೩ ॥

ವ॥ ಆಗಳೊಳಗಣಿಂದಂ.

ಚಂ॥ ಕವಿದಿಸುವಂಬು ಪಾರ್ದಿಸುವ ಕಕ್ಕಡೆ ಕುತ್ತುವ ಕೊಂತ ವಿಕ್ಕುವೊ ।
ಳ್ಗವಣೆಯ ಗುಂಡು ತೂಳ್ದಿಡುವ ಡೆಂಕಣಿ ಪೊಯ್ವುರಿಯೆಣ್ಣೆ ಕಾಸಿ ಸೂ ॥
ಸುವ ಮಟಿಲೆಂಬಿವೆತ್ತಲು ಮಗುರ್ವಿಸೆ ಪೋಗದೆ ಪತ್ತಿ ಲಗ್ಗೆಮಾ ।
ಡುವ ಭಟಕೋಟಿ ಕೋಟಲೆಯ ನಾಳ್ದರಿ ನೀಳ್ದುದು ಕೋಂಟಿಗಾಳಗಂ ॥ ೭೪ ॥

ಚಂ॥ ಪೆಣದ ಬಣಂಬೆ ಕೊತ್ತಳದೊಳತ್ತಳಗಂ ತನಿಗಂಡೆದಿಂಡೆ ಸು ।
ತ್ತಣ ಪೊಱಿಕೋಂಟಿ ಯಟ್ಟಳೆಯೊಳಿಟ್ಟಳ ಮಾಡುವ ಬೀರರಟ್ಟಿ ಸಂ ॥
ದಣಿಸಿದ ವಂಕದಾರದೊಳಪಾರ ಮುಸೃಗ್ಜಲದುಗ್ರಪೂರವೂ ।
ರಣ ಮುಗಪಿಂತರಾಳದೊಳಗುರ್ವೆನೆ ಸತ್ತುದು ಶತ್ರುಸಾಧನಂ ॥ ೭೫ ॥

ಕಂ॥ ಅವಲವಲೆನೆ ಮುಗ್ಗುವ ತ ।
ಗ್ಗುರ್ವ[ನೆಗ್ಗುರ್ವ]ನುಗ್ಗುವಾತ್ಮತಂತ್ರದ ಕೇಡಿಂ ॥
ಗವನಳ್ಕದೆ ಕಾದುತಿರೆ ಬ ।
ಲವಟಿಕ್ಕದುದು ಹಗಲುಮಿರುಳು ಮೆರಡುಂ ತಂತ್ರಂ ॥ ೭೬ ॥

ವ॥ ಅಂತು ನಿಚ್ಚಗಾಳೆಗದೊಳುಬ್ಬೆಗಂಬಟ್ಟು ಸುರ್ವಿಯಬಿವ ಪರಿಜನಂಗಳುಂ, ಸರ್ವನಿರೋಧದಿಂ ದುಬ್ಬೆಗಂಬಡುವ ಪುರಜನಂಗಳುಂ ತಂನ ಮನಮನನನುವಿಸೆ.

ಚಂ॥ ಪಶುಶಿಶುನಾಮಜಾಶ್ವವನಿತಾದಿಗಳುಮ್ಮಳಿಪಂತು ಕೋಂಟಿಯೊಳ್ ।
ಪ್ರಶಮಿತಶೌರ್ಯ ನಾಗಿ ಮುಱಿಸಿಗೊಂಡುಱಿದಿರ್ವುದು ಕಷ್ಟ ಮಾಮಹಾ ॥
ವಿಶನನಕೇಳಿಯಂ ಮೆಱಿಸಿದು ತೊಳ್ದುವೆ ನೆಂದು ಪೊದಱಿದ್ದ ಪೂಣ್ದು ಕ ।
ರ್ಕಶಭುಜವಿಕ್ರಮಂ ಪೊಱಿಮುಡಲ್ ಬಗೆದಂ ಜಯವರ್ಮಭೂಭುಜಂ ॥ ೭೭ ॥

ವ॥ ಆಗಳಾಮಂತ್ರಿಗಳ್ ಕಂಡು ಮಾರ್ಕೊಂಡು.

ಮ॥ ಅಸಮಾನೋಗ್ರಸಮಗ್ರಸೈನ್ಯಬಳ ನಪ್ಪೀತಂಗೆ ನಾಮೋಡಿ ಘ ।
ರ್ಜಿಸೆ ಮೇಲ್ವಾಯಲೊಡರ್ಚು[1]ವೀಶರಭಶೌರ್ಯಾನ್ವಯಶ್ರೇಯ ಮು ॥
ಬ್ಬಸವಾಯ್ತಿನ್ನವನಂ ಕಳಲ್ಚು ನಡೆ ನೀಂ ಪೇೞ್ದಿಟ್ಟು ಬಂದಪ್ಪ ನು ।
ಬ್ಬಸದಿಂ ನಿನ್ನಳಿಯಂ ಪ್ರತಾಪನಿಳಯಂ ಶ್ರೀರಾಜಕಂಠೀರವಂ ॥ ೭೮ ॥

ಮ॥ ಮದವತ್ಸಿಂಹದಿ ನಪ್ಪ ತನ್ನ ಕಡುಗೇಡಂ ಕಾಡ ಸೊಕ್ಕ್ಯಾನೆ ನೋ ।
ಡದೆ ತದ್ಘೋಚರಮಪ್ಪರಣ್ಯನಳಿನೀಕಾಸಾರಮಂ ಸಾರ್ವಪೋಲ್ ॥
ಕದಡಲ್ ಸಾರ್ದವನಿಂತುಟೀತನಳವೀದರ್ಪಕ್ಕೆ ತಕ್ಕಂತುಟಂ ।
ಕದನಕ್ಷೋಣಿಯೊಳೆಯ್ದು ಗಾನೃಪಭುಜಪ್ರೋತ್ಖಾತಶಾತಾಸಿಯಿಂ ॥ ೭೯ ॥

ವ॥ ಎಂದುಬಗೆಗೆವರೆ ನುಡಿವುದು ಮದನೊಡಂಬಟ್ಟ್ಯ.

[1] ವೀವಿಷಮಶೌರ್ಯ್ಯ.

ಕಿಱರಿಣೀ॥ ಬಲಂಗೊಂಡಂ ತೊಂಡಂ ಬಿಡದೆ ಗಜಕರ್ಣಾವನಿಭುಜಂ ।
ಬಲಂ ಪೊೞಂ ಬೇಗಂ ಬಗೆವೊಡೆಮಗಿನ್ನಾರೊ ಶರಣಿಂ ॥
ಬಲೋದ್ವೃತ್ತಂ ಪುತ್ರಂಗೆಸಗುಗೆ ಮಹಾಪದ್ಮನೃಪನುಂ ।
ಬಲಶ್ರೀವಮುಂ ವಾಮುಂ ನಿಮಗೆ ಮೊಱಿವೇೞ್ದಿಟ್ಟಿದ[ನಿದ]ಂ ॥ ೮೦ ॥

ಕಂ॥ ಆಸತಿವಸನಾಧರೆಗೊಸೆ[1] ।
ದೀಸಮಯದೊಳೆಮ್ಮ ನಧಿಪ ಕಾವುದು ಶೌರ್ಯೋ ॥
ದ್ಭಾಸಿಗಳ ನಿಮ್ಮ ದೊರೆಯರ ।
ಮೈಸಿರಿ ಪರಹಿತಚರಿತ್ರಸೂತ್ರಿತ ಮಲ್ತೇ ॥ ೮೧ ॥

ಉ॥ ಎಂದು ಸಮಸ್ತಕಾರ್ಯಭರಮಂ ದಮನಂ ಸುಮನಂ ಜಗಜ್ಜನಾ ।
ನಂದಕನಂ ಪ್ರಶಸ್ತಯಶನಂ ರಿಪುವಂಶವಿನಾಶನಂ ದಯಾ ॥
ನಂದಕಶಸ್ತ್ರಭೂಷಿತವಿಶೇಷಕರಾಳಕರಾಗ್ರನಂ ನರೇಂ ।
ದ್ರೇಂದುವ ನೆಯ್ದಿ ಕೇಳಿಸಿದಪಂ ಮಿಗೆ ನಾಪ್ಪಿಭುವಂಶಮೇರುವಂ ॥ ೮೨ ॥

ಗದ್ಯಂ

ಇದು ಸಮಸ್ತಭುವನಜನಸಂಸ್ತುತಜಿನಾಗಮಮುಕುಮುದ್ವತೀ
ಚಾರುಚಂದ್ರಾಯಮಾಣಮಾನಿತ ಶ್ರೀ ಮದುಭಯಕವಿ ಕಮಳಗರ್ಭ
ಮುನಿಚಂದ್ರಪಂಡಿತದೇವ
ಸುವ್ಯಕ್ತಸೂಕ್ತಿ ಚಂದ್ರಿಕಾಪಾನಪರಿಪುಷ್ಟವಾನಸಮರಾಳಂ
ಗುಣವರ್ಮನಿರ್ಮಿತಮುಪ್ಪ
ಪುಷ್ಪದಂತ ಪುರಾಣದೊಳ್
ದೂತವರ್ಣನಂ
ಸಪ್ತಮಾಶ್ವಾಸಂ

[1] ಆಸತಿಗರುಣಾಧರೆ ?

ಅಷ್ಟಮಾಶ್ವಾಸಂ.

ಕಂ॥ ಶ್ರೀಜಯಲಕ್ಷ್ಮೀವದನನ ।
ರೋಜಾರ್ಕಂ ದೂತವಚನ ಮೆರ್ದೆವುಗೆ ನುಡಿದಂ ॥
ರಾಜಶಿಖಾಮಣಿ ವಿಬುಧನ ।
ಮಾಜನುತಂ ಪ್ರಭುಗುಣಾಬ್ಜಿನೀಕಳಹಂಸಂ ॥ ೧ ॥

ಅಮರ್ದಿನ ಮಟಿಸಿಯುಂ ಸಿಡಿಲುಂ ।
ನಿಮಿರ್ದುದು ಪೆಡೆವರಲ ಬೆಳಗು ಮುರಗನ ವಿಷಮುಂ ॥
ನಿಮಿರ್ದುದೆನೆ ರಾಗಖೇದಮ ।
ನೆಮಗಿತ್ತುದು ನಿನ್ನ ನುಡಿಯ ಮೊದಲುಂ ತುದಿಯುಂ ॥ ೨ ॥

ವ॥ ಆದೊಡೇನಾದುದು.

ಚಂ॥ ಪಲರ ನದಿರ್ಪಿದುರ್ಕುರ್ ಮೆನೆಗುಂ ತನಗೀಯದೆ ಯೆಂದು ಬಂದು ದೋ ।
ರ್ಬಲದಿ ನವುಂಕಿ ಬಿಟ್ಟ ಗಜಕರ್ಣನ[ನೀಂ ಗ]ಜಕರ್ಣದಂತೆ ಸಂ॥
ಚಳತೆಯೊಳೊಂದೆ ತೂಳ್ದಿ ಜಯವರ್ಮನೃಪಂಗೆ ಜಯಪ್ರಮೋದಮಂ ।
ಚಲಮುಮು ನುಂಟುವಾಡದೊಡೆ ಮತ್ಕುಲಕೀರ್ತಿ ಕಲುಂಬುಗೊಳ್ಗದೇ ॥ ೩ ॥

ಶರಣಾಯಾತರ್ಕಳಂ ಕಾವುದು ಮೆರೆದವರ್ಗಾರ್ತಿರ್ವುದುಂ ಕ್ಷತ್ರಧರ್ಮಂ ।
ನರಪಂಗೆಂತೆಂದೊಡಂ ಲೋಗನೆ ಗಡೆ ಜನನೀಭ್ರಾತೃ ವಾಭೂಪ ನೀಗಳ್ ॥
ಪರಭೂಪಂ ಮುತ್ತೆ ಪೇಟ್ದಿಟ್ಟಿದ ನೆನಗೆನೆ ಮುಳ್ಗೀಳಲಾಳೋಚಿಸುತ್ತಾ ।
ನಿರಲುಂಟೇಂ ಪಂಥ ವಿನ್ನಾರದೊ ಪರಿಭವ ವೇಕಿರ್ಪೆ ನಾನಿಂದೆ ಬರ್ಪೆಂ ॥ ೪ ॥

ವ॥ ಇಂತೆಂದು ತಱಿಸಂದು ಪೂಣ್ದು ತತ್ಸಮಯದೊಳ್ ಜಯಪ್ರಯಾಣಮಂ ಪಡೆಗೆ ಪಡೆವಳನಿಂ ಸಾರಿಸಿ (ವಿಸ)ರ್ಜಿತರಾಜಲೋಕ ನಾನಸ್ಥಾನಮಂಟಪದಿ ನಿಲ್ದು ಮಜ್ಜನಭೋಜನಾದ್ಯುಚಿತದಿಂದಂ.

ಕಂ॥ ದಮನನ ನಧ್ವಶ್ರಮನಂ ।
ಕ್ರಮನನ ನಾತ್ಮೀಯಮಾತುಳಾದೇಶಕೃತಾ ॥
ಗಮನನ ನಾಹಿತಚಿಂತಾ ।
ಸುಮನನ ನಾಲೀಸಿದ ನರಸ ನಂದಿನ ದಿನದೊಳ್ ॥ ೫ ॥

ವ॥ ಅನ್ನೆಗಂ.

ಚಂ॥ ಅಗಲೆ ನಿಜೇಷ್ಟಚಕ್ರ ಮೆಸಕಂಗಿಡೆ ಮುಂಡಲದೇಟಿಶ್ಲಿ ಚಂಡಹೇ ।
ತಿಗಳ್ ಪೊಡವ್ದು ಕುಂದೆ ಕಮಲಂ ಕಿಡಲಂಬರಮಂ ಬಿಸುಟ್ಟು ಶ ॥
ತ್ರುಗಳೆದಿರ್ದೋಡುಗುಂ ನೃಪತಿ ಯಿತ್ತಿದೊಡೀತೆಱಿದಿಂದ ಮೆಂದು ಧಾ ।
ತ್ರಿಗೆ ಹರಿ ಮುನ್ನುದಾಹರಿಸಿ ತೋರ್ಪವೊಲೆಯ್ದಿದ ನಸ್ತಶೈಲಮಂ ॥ ೬ ॥

ವ॥ ಅಂತು ನೇಸರ್ವಡೆಲೊಡಂ.

ಚಂ॥ ನೆಗಟಿಶಿ ದಿನಾವಸಾನಪಟಹಧ್ವನಿ ರಂಜಿಸೆ ಸಂಜೆಗೆಂಪು ಸ ।
ಯ್ತ್ರಗಲೆ ರಥಾಂಗಯುಗ್ಮತತಿ ಪಬಿಶ್ಕಿಗೆ ಸಾರೆ ವಿಹಂಗಜಾತಿ ಕಾ ॥
ಡಿಗೆವೊಗರೇಟಿಶಿ ಮೂಡೆದೆಸೆ ಪುಟ್ಟಿ ವಿಟೇವಿಟಸಂಧಿವಿಗ್ರಹಂ ।
ಮುಗಿಯೆ ಸರೋಜರಾಜಿ ದಳವೇಟಿಶಿ ಖಳರ್ ಮೊಗಸಿತ್ತು ಮುನ್ನಿರುಳ್ ॥ ೭ ॥

ವ॥ ಆಸಮಯದೊಳ್.

ಉ॥ ಮುಂಗಳತೂರ್ಯನಾದ ವಭಿರಂಜಿಸೆ ಮುಂಗಳದೀಪಪಾತ್ರಹ ।
ಸ್ತಂಗಳೆ ಕಾಮಿನೀತತಿ ನಿವಾಳಿಸೆ ಮುಂಗಳಪಾರಕೋಕ್ತಿ ಚ ॥
ತ್ತಂಗೊಳೆ ಮುಂಗಳಾರ್ಹದಿನದಂದಪರಾಹ್ಣಿಕ[ಸಂತತ]ಕ್ರಿಯಾ ।
ಮುಂಗಳವಾಗೆ ಮುಂಗಳಪರಂಪರೆವೆತ್ತೆಸೆದಂ ಮಹೀಭುಜಂ ॥ ೮ ॥

ವ॥ ತದನಂತರಂ.

ಮಾಸ್ರ॥ ಗಿರಿಗಳ್ ನೀಳಾದ್ರಿ ಯೆಂಬಂತಿರೆ ನಿಖಿಳನದೀರಾಜಿ ಕಾಳಿಂದಿ ಯೆಂಬಂ ।
ತಿರೆ ವೃಕ್ಷಂಗಳ್ ತವಾಳಾಕೃತಿಯಿ ನಿರೆ ಮೃಗಶ್ರೇಣಿ ಋಕ್ಷಂಗಳೆಂಬಂ ॥
ತಿರೆ ನಾನಾಪಕ್ಷಿಗಳ್ ಕೋಗಿಲೆವೊಲಿರೆ ನಭಂ ಕಾರ್ಮುಗಿಲ್ ಮುಚ್ಚಿದಂತಾ ।
ಗಿರೆ ಭೂ ನೀಳಸ್ಥಳೀಕುಟ್ಟಿಮ ಮೆನಿಸಿರೆ ಪರ್ವಿತ್ತು ಘೋರಾಂಧಕಾರಂ ॥ ೯ ॥

ವ॥ ಆಗಳ್.

ಕಂ॥ ಜನಪನ ಜಯಪ್ರಶಸ್ತಿಯ ।
ನನಿಮಿಷಪಥ ಮೆಂಬ ನೀಳಪಟದೊಳ್ ರಾತ್ರ್ಯಂ ॥
ಗನೆ ಬರೆದ ಬರೆಪದಕ್ಕರ ।
ಮೆನೆ ತೊಳಗಿದುದು ವಿದಿತತಾರಾನಿಕರಂ ॥ ೧೦ ॥

ವ॥ ಮತ್ತಂ.

ಕಂ॥ ಸಂಕಳಿತಬಹುಳತಾರಾ ।
ಸಂಕುಳದಿಂ ಪೋಲ್ತುದಭ್ರ ಮಾವೃತತಿಮಿರಂ ॥
ತೇಂಕುವ ಮುಕ್ಲೀಮುಕುಳದ ।
ಸಂಕುಳಮಂ ತಳೆದು ನಿಂದ ಜಗುನೆಯ ಮಡುವಂ ॥ ೧೧ ॥

ವ॥ ಅವಱಿರೊಡನೆ ಬೆಳಗನೊಳಕೊಂಡು ಮನೆಮನೆ ದಪ್ಪದೊಪ್ಪಿ.

ಕಂ॥ ಮುನಿದು ತವೆ ನುಂಗಿ ತಿಮಿರವು ।
ನಿನಿತಬಿಸ್ಕಿಸಲಾಱಿದಡರೆ ಕಾಱಿದವು ವಿವೆಂ ॥
ಬಿನ ಮೆನೆದುವು ನೊಡರ್ಗಳ್ ಜಲ ।
ಕೆನೆ ನಿಜಚೂಳಿಕೆಯಿ ನೊಗೆವ ಕಾಳಿಕೆಯಿಂದಂ ॥ ೧೦ ॥

ವ॥ ಅನಂತರ ಮುದಯಸಮಯಪರುಣಕಿರಣಪ್ರವಾಳದಿಂದ ಮಿಂದ್ರದಿಗ್ವಧೂಶಿಖಂಡಮಂಡನವಿಳಾಸನಮುಂ ತಳೆದು.

ಶಿಖರಿಣೀ॥ ಕಳಾರುಂದ್ರಂ ಚಂದ್ರಂ ಬೆಳಗಿ ನಭಮುಂ ಕಾಂತಿವಿಸರಂ ।
ಗಳಿಂ ನೆಯ್ದಿಲ್ಗೆಯ್ದಲ್ ಮೊಗಸಿ ನಳಿನೀವೃಂದದಳಿನೀ ॥
ಕುಳಂ ಕೋಕಂ ಶೋಕಂಬಡೆಯೆ ಮನದೊಳ್ ಪುಟ್ಟಿ ಜಗದೊಳ್ ।
ಬಳೋತ್ಕಾರಂ ಮಾರಂಗಥಟಿನ ತಿರುಳ್ ರಂಜಿಸಿತಿರುಳ್ ॥ ೧೩ ॥

ವ॥ ಅಂತು.

ಕಂ॥ ತೊಳಗುವ ನಕ್ಷತ್ರಂಗಳ ।
ಬೆಳಗಿಂ ಸುರಲೋಕಚಂದ್ರ ನೊಪ್ಪಿದ ನತ್ತಲ್ ॥
ಬೆಳಗುವ ಕೈದೀವಿಗೆಗಳ ।
ಬೆಳಗಿಂ ನರಲೋಕಚಂದ್ರ ನೊಪ್ಪಿದ ನಿತ್ತಲ್ ॥ ೧೪ ॥

ವಿಳಸಿತಚಂದ್ರಾಲೋಕದಿ ।
ನಲರ್ದುವು ಕುಮುದಂಗಳೆತ್ತ ಮಿತ್ತಲ್ ನೈವನ ॥
ಗ್ಗಳಿಪ ಸದಯಾವಲೋಕದಿ ।
ನಲರ್ದುವು ಸೇವಕರ ನಯನಹೃತ್ಕಮುದಂಗಳ್ ॥ ೧೫ ॥

ವ॥ ಅಂತು ಪಳಚ್ಚನಾದಚ್ಚವೆಳ್ದಿಂಗಳೊಳ್ ವಸ್ತುಕಕವಿಗಳ ಕಾವ್ಯಗೋಷ್ಠಿಯುಂ, ವರ್ಣಕಕವಿಗಳ ಗೀತಗೋಷ್ಠಿಯುಂ ಮನಂಗೊಳಿಸೆ ಯಾಮಿನೀಪ್ರಥಮಯಾಮಮುಂ ಕಳಿಪಿ ಬಳಿಕ್ಕ ವೋಲಗವಂ ವಿಸರ್ಜಿಸಿ ನೆಜ್ಜಿವನೆಗೆ ಬಿಜಯಂಗೆಯ್ದು.

ಕಂ॥ ಅಮೃತಾರ್ಣವದೊಳ್ ಸಿರಿವೆರ ।
ಸು ಮುಕುಂದಂ ಪವಡಿಪಂದದಿಂ ಪವಡಿಸಿದಂ ॥
ಹಿಮಧವಳಿಧಾಮಶಯನದೊ ।
ಳಮರ್ದಿರೆ ಸೂಪಿರಸಿ ವೆರಸು ರಾಜಮನೋಜಂ ॥ ೧೬ ॥

ವ॥ ಅಂತು ಸುಖಸುಪ್ತ ನಾಗಿರೆ ನಿಶಾವಸಾನಸಮಯದೊಳ್.

ಕಂ॥ ಸೊಡರ್ಗಳಿರುಳೆಣ್ಣೆಯಂ ನಿಲೆ ।
ಕುಡಿದಪ್ಪಿಕೆವಟ್ಟು ವೆನಿಸಿ ನವೆದುವು ತನುಗಳ್ ॥
ಜಡತೆಯಿ ನದಂತೆ ಪೊಡರಲ್ ।
ಕುಡುಗುವೆ ದೋಷಾತಿರೇಕ ಮರುಚಿನಿಮಿತ್ತಂ ॥ ೧೭ ॥

ಇದು ತಳರ್ವ ನಿಶಾಸುದತಿಯ ।
ಮೃದುಪದನೂಪುರದ ನೂಲ ತೊಂಗಲ ದನಿಯೆಂ ॥
ಬುದ ನೆನಿಸಿ ಪೊಣ್ಮಿದುದು ನಿ ।
ದ್ದೆದಿಳಿದು ನಲಿದುಲಿವುತಿರ್ವ ವಿಹಗರವಂಗಳ್ ॥ ೧೮ ॥

ಉತ್ಸಾಹಂ॥ ಎತ್ತಿ ನಡೆಯ ಲೊಡರಿಪೀತ ನೆನ್ನುಮಂ ಸದೋಷನು ।
ದ್ಧೃತ್ತ ನೆಂದು ಮುಳಿದು ಕಿಡುಗು ಮೆಂಬ ಶಂಕೆಗುಮ್ಮಳಂ ॥
ಬಿತ್ತನೆನಿಸಿ ಮಸುಳ್ದು ನಿಂದು ತನ್ನ ಹೃದಯದೊಳ್ ಭಯಾ ।
ಯತ್ತನೆರಳೆವುಳ್ಳೆ.....ಜಡೆ ನತಿಪ್ರತಾಪಧೀರನೇ ॥ ೧೯ ॥

ವ॥ ಮತ್ತಮುತ್ತುಂಗಚೈತ್ಯಭವನಂಗಳೊಳಗೆ ಮೊಲಿಗುವ ವಿಭಾತಪೂಜಾವಂಚಮಹಾಶಬ್ದ ಘೋಷಮಂ ಸಂವೇದಿಸಿಯುಂ, ಮತಿರಮ್ಯಹರ್ಮ್ಯನಿವಹನೀಡದೊಳ್ ನಿದ್ದೆಗೆಯ್ದ ಪಾರಾವತಂಗಳ ನೆಟ್ಟಿಱಿಸಿಯುಂ, ಪಕ್ಕದಲೆಯ ನೆಕ್ಕಯಿಂದಮುರ್ದ್ದೆಱಿಂಕೆವಿದಿರ್ದೆಟ್ಟಿರ್ದ ಕೂಗುತಿರ್ಪ ಕುಕ್ಕುಟಕುಳಂಗಳ ಸರಂಗಳಂ ಸಂಗಳಿಸಿಯುಂ, ಕುಳಿರ್ವ ಬೆಳ್ಪಿಂಗಳಂ ಬಿಡದಡರೆಕುಡಿದು ಸೊಕ್ಕಿ ಜೋಂಪಿಸುವಲಂಪಿನ ಚಕೋರಂಗಳನೆಳಸಿರ್ದುನಸುನಿದ್ರೆಗೆಯ್ಸಿಯುಂ, ಮೇಳಿಸಿದ ನೆಜ್ಜರದಿನೇಱಲುಜ್ಜುಗಂಗೆಯ್ವ ವಿಜಯಕುಂಜರದ ಮುಂಜೀರಸಿಂಜಿತಕ್ಕೆ ಪಕ್ಕಾಗಿಯುಂ, ಸಪ್ರಭವಸುಪ್ರಭಾತಮುಂಗಳವೋದುತಿರ್ಪ ವರಗಾಯನಿಯರನಪ್ಪುಗೆಯ್ದುಂ, ವಿನೋದಕಲಹದಿಂದೆ ವಿನತರಾದಿನಿಯರ ನಯಕ್ಕೆ ತಿಳಿಯುದಿರ್ದ ಬರ್ದ್ದಿಯರ ಮುದ್ದುತನದ ಮುಳಿಸಂ ಬಳಿಕ್ಕೆ ಬಱಿದೆ ನೆಱಿಸಿವುಗಿಡಿಸಿಯುಂ, ಸುಸಿಲ ಮುಸಕದಿಂಬಸವಱಿದು ನಸುನಿದ್ದೆಗೆಯ್ದು ದಂಪತಿಗಳ ಪೀನಕದಂಬವಂ ತುಱಿಯಿಂಬಿಯುಂ, ಗೃಹೋಪವನದ ತಿಳಿಗೊಳದ ನಳಿನೀದಳದ ಸಂಪುಟಪುಟೀಕೋಟರದೊಳೆಱಿಗಿಪ ಮಱಿದುಂಬಿವಿಂಡ ನೆಟ್ಟಿಱಿಸಿಯುಂ, ಸಂಪ್ರಾಪ್ತಸುಪ್ತಿಜಾತಜಾಡ್ಯಮೂಢರಾಗಿರ್ದ ಸುಕವಿಗಳ ಮತಿಯ ನತಿಸೀತಮಾಗಿಸಿಯುಂ ಮದಗಜಗಮನನದಿ ನೆಯ್ತಂದು.

ಕಂ॥ ಶಯ್ಯಾಸದನಗವಾಕ್ಷವು ।
ನೊಯ್ಯನೆ ಪೊಕ್ಕುಲಿದು ನೃಪನ ಸುಖನಿದ್ರೆಯ ॥
ಕೆಯ್ಯಂ ತೊಲಗಿಸಿತು ಮಿಗೆ ಪಳ ।
ವೆಯ್ಯ ಪನಾಯಿತರವೋಲ್ ಪ್ರಭಾತಸಮೀರಂ ॥ ೨೦ ॥

ವ॥ ಅನ್ನೆಗಂ.

ಕಂ॥ ಆದವುದು ಯಾನದೊಳ್ ವಿ ।
ತ್ರೋದಯ ವಿಾತೆಱಿತೆ ಭುವನವಿತ್ರಂಗೆಂದಾ ॥
ವೇದಿಸುವಂತಾವುದು ವಿ ।
ತ್ರೋದಯ ವುಗ್ಗಳಿಸೆ ರಾಗ ವುದಯಿಸೆ ತೇಜಂ ॥ ೦೧ ॥

ವ॥ ಅಂತು.

ಕಂ॥ ಚಂಡಕರಂ ಪಶ್ಚಿಕ್ಕೈಲಶಿ ।
ಖಂಡವು ನೀಱಿಂದೊಡಖಂಡವುಂಡಳೆ ವುವುರ್ದಾ ॥
ಖಂಡಳದಿಗಂಗನಾವುಣಿ ।
ಕುಂಡಳೆ ವೆನಿಸಿರ್ದುದರುಣಕಿರಣಚ್ಛವಿಯಿಂ ॥ ೦೦ ॥

ವು॥ ವುಸಕಂಗುಂದೆ ನಿಶಾಟಕೋಟಿ ಕಿಡೆ ಶುಕ್ರಾಳೋಕಸಂಪತ್ತಿ ವು ।
ಟ್ಟಿ ಸುರೇಂದ್ರಾಶೆಗೆ ರಾಗ ವುಂದು ಹರಿ ವದ್ಮಾನಂದಿ ಪೀತಾಂಬರೋ ॥
ಲ್ಲಸಿತಂ ಚಕ್ರಸಹಾಯ ನಾಕ್ರಮಿಸಿದಂ ಭೂಚಕ್ರವುಂ ಪಾವದಿಂ ।
ರಸೆಗಾಗಳ್ ಬಲಿದುಸ್ತವುಂ ತಳರ್ವಿನಂ ದಾನವ್ರಬದ್ಧಾಕುಳಿಂ ॥ ೦೨ ॥

ಕಂ॥ ವೂಗಧವುಂಗಳಗೀತಾ ।
ಭೋಗದಿ ನುನ್ನಿದ್ರನಾಗಿ ಸ(ಲ್ಲಲಿ)ತವುನೋ ॥
ರಾಗಂ ನೃಪನೊಡರಿಸಿದಂ ।
ಬೇಗಂ ಪ್ರತ್ಯೂಷಕೃತ್ಯವುಂಗಳವಿಧಿಯಂ ॥ ೦೪ ॥

ವ॥ ಆಪ್ರಸ್ತಾವದೊಳ್.

ಮು॥ ದೆಸೆಯೊಳ್ ದಿಗ್ಗಜಬೃಂಹಿತಂ ಗಗನದೊಳ್ ಸೂರ್ಯಾಶ್ವಹೇಷಾರವಂ ।
ವಸುಧಾಭೃತ್ಕುಳದೊಳ್ ವಿನಿರ್ಜರರವಂ ವಾರಾಸಿಯೊಳ್ ಘೂರ್ಣನ ॥
ಪ್ರಸರಂ ಕಾನನದೊಳ್ ವೃಗೇಂದ್ರರುತಿ ವೆಯ್ವೆರ್ಚಲ್ಕತಿವ್ಯಾಪ್ತಿ ಯಾ ।
ಯ್ತು ಸುಹೃಚ್ಚಕ್ರವುಯಂ ಕರಂ ನೃಪಜಯಪ್ರಸ್ಥಾನಭೇರೀರವಂ ॥ ೦೫ ॥

ವ॥ ಆಗಳಾಘೋಷದ ವುಸಕವುಂ ಕೇಳಲೊಡನೆ ವುಂದರಾದ್ರಿವುಥನಸವುಯಸವುಯುದ್ಗೀರ್ಣ ಗುಣಾರ್ಣವಕ್ಷೋಭರಭಸವುಂ ತಳೆದು ಬಳೆದ ಚತುರಂಗಬಳದ ಕಳಕಳ ವುಳುಂಬವುಾಗೆ.

ಮು॥ ಲಲಿತಾಂತಃಪುರಕೋಟ್ಟಿ ಪಿಂದೆ ತಳತಂತ್ರಂ ವುುಂದೆ ಸಾವುಂತಸಂ ।
ಕುಳೆ ವಿರ್ವಕ್ಕದೊಳಂತೆ ಪತ್ತಿ ಬರೆ ನಾನಾನೂನಯಾನಂಗಳಿಂ ॥
ತಳೆರ್ದಂ ಕಾವುರ್ಮುಗಿಲಂ ವುಸುಂಕುವೆಳವಿುಂಚೆಂಬುಂತೆ ತಂದಾನೆಯಂ ।
ಪೊಳೆಯಿಪ್ಪಂಕುಶಕಾಂತಿಗಳ್ ವುದುವಿನಂ ಸದ್ಭವ್ಯಸಂಕ್ರಂದನಂ ॥ ೦೬ ॥

ಕಂ॥ ಅತಿಸೌಮ್ಯಸಿತಾಸಿತಲೋ ।
ಹಿತಚಿತ್ರಾಂಕುಶದಿ ನೆಸೆವ ಕೇತುಗಳಿಂ ಮಾ ॥
ರುತವೀಥಿಯಂತೆ ನೃಪವೀ ।
ಥಿ ತೋಱಿಸಿ ನರಲೋಕಚಂದ್ರ ನೆಯ್ದಿದ ನದಱಿಕೊಳ್ ॥ ೭೭ ॥

ವ॥ ಅಂತು ವಿವಿಧಧ್ವಜರಾಜಿವಿರಾಜಮಾನಮಾದ ರಾಜಮಾರ್ಗದೊಳಗಣ ವಿಚಿತ್ರಾಂಶುಕ ನಿಚಯರಚಿತಂಗಳುಂ, ಸಲ್ಲಲಿತಪಲ್ಲವೋಲ್ಲಲಿತಂಗಳುಂ, ಚಂಚತ್ಪಂಚರತ್ನಾಂಚಿತಮುಂ ಮುಪ್ಪ ವಿವಿಧ ತೋರಣಂಗಳಂ ನುಸುಳುತ್ತುಂ ಬಂದು.

ಕಂ॥ ನಾನಾವಸ್ತ್ರವಿತಾನದೆ ।
ನಾನಾನೃಪಕುಳಜಯೋಂಗನಾಪರಿಣಯನಾ ॥
ಸ್ಥಾನಮೆನಿಸಿದ ಜಯಪ್ರ ।
ಸ್ಥಾನಶ್ರೇಶಿಬಿರಮುಂ ಮಹೀಪತಿ ಪೊಕ್ಕಂ ॥ ೭೮ ॥

ವ॥ ಪೊಕ್ಕಂದಿನ ದಿವಸ ಮಲ್ಲಲ್ಲಿ ವಲ್ಲಭತುಂಗವಿಜಯಗಜಸಂಚಯಕ್ಕೆ ತಕ್ಕ ಪಲ್ಲಣದ ಬಿಸುಗೆಯ ಮೊಗವಡೆದ ಗುಬಿನ ದಳೆವಡಿಕೆಯುಂ ತೋರ್ಪ ನಾಹಣವೆಗ್ಗಡೆಗಳ ಸಂಸರ್ಗದೊಳಂ, ಅಸಿ ಮುಸಲ ಕಣಯ ಕಂಪಣ ಗದಾ ದಂಡ ಕೋದಂಡ ತೋಮರಾದ್ಯಾಮುಕ್ತಾಮುಕ್ತ ಪಾಣಿಮುಕ್ತ ಯಂತ್ರಮುಕ್ತಂಗಳಪ್ಪ ನಿಜನಿಶಿತ ನಿಖಿಳಾಯುಧಂಗಳಂ ವಿಳೋಕಿಪಕುತೂಹಳದೊಳಂ ಹರಿಕರಿಕರೇಣು ವೇಸರಾಂದೋಳಶಿಬಿಕಾದಿಯಾನಸ್ಥಂತಾನಮಂ ತಾನೆ ನಿರವಿಸಿ ನಿಜಾವಾಸಪುರವಿಳಾಸಿನೀಜನಕ್ಕಂ ಪಸಾಯಿತವರ್ಗಕ್ಕಂ ಎಸೆವ [illegible]ಪ್ರಸಾದರಸವಿನೋದದೊಳ ಮಿರ್ದು ಮಱುದಿವಸಂ ಮಾರ್ತಂಡ ಮಂಡಲೋದಯದೊಳ್ ವಿಚಿತ್ರಕ್ರಿಯಾನಿಯಾಮನಿರ್ವರ್ತನಾನಂತರಂ ಪ್ರಯಾಣೋತ್ಸುಕ ನಾಗಿ.

ಚಂ॥ ಕೃತಯುಗಚಕ್ರವರ್ತಿ ಭರತೇಶ್ವರನಂ ತನುಬದ್ಧವಾಜಿ ರಾ ।
ಜಿತಫಳಭೂಜದಂತೆ ಧೃತಭಾಸುರಹೇತಿಸಹಸ್ರ ಮರ್ಕನಂ ॥
ತತಿಧೃತರಶ್ಮಿ ರತ್ನಗಣದಂ ತಸಮುಶ್ರಿತಸೂನ ವಿಾಶನಂ ।
ತತಿಶಯಕೇತುಶೋಭಿ ನಭದಂತೆನೆ ರಂಜಿಪ ತೇರ ನೇಱಿದಂ ॥ ೭೯ ॥

ವ॥ ಅಂತು ಜಯಮನೋರಥಾರೂಢಂ ರಥಾರೂಢನಾಗಿ ಸಹಾಯರಾಜನ್ಯರಾಜಿವೆರಸು ಅಪಾರಪರಿವಾರಪರಿವೃತಂ ಪ್ರಸ್ಥಾನಶಿಬಿರನಿಳಯದಿಂ ತಳರ್ವುದುಂ.

ಉ॥ ಆಂಕೆಯ ಗಂಡ ನಾವ ನುಱಿದೀನಡೆತಂದನೆ ವೀರವೈರಿವ ।
ಜ್ರಾಂಕುಶ ನಿತ್ತು ತೆತ್ತು ಬೆಸಕೆಯ್ದು ಬರ್ದುಂಕಿ ಮುರಾತಿಗಳ್ ಭಯಾ ॥
ತಂಕದಿ ನೆಂದು ಸಾಱಿವವೊಲಾಯ್ತು ಘನಧ್ವನಿತಾಭಿರಾಮನಾ !
ಮಾಂಕಿತಕಾಹಳಂ ವಿಜಯದೋಹಳ ಮಾತ್ತಜಗತ್ಕುತೂಹಳಂ ॥ ೩೦ ॥

ವ॥ ಆಗಳಾನಿನಾದಮುಂ ಕೇಳಲೊಡಂ.

ಕಂ॥ ಸಮುದೀರ್ಣ ಘೂರ್ಣಿತಾರ್ಣವ ।
ಸಮ ಮಾದು ದನೂನಯಾನನರಭಸಜನಸಂ ॥
ಭ್ರಮುಕಳಕಳದಿಂ ನೃಪವಿ ।
ಕ್ರಮುಲಹ್ಮೀರತ್ನಹಸ್ತಕಟಕಂ ಕಟಕಂ ॥ ೩೧ ॥

ವ॥ ಅಂತೆತ್ತಿ ತಳರ್ವುದುಂ.

ಮ॥ ಹರಿಹೇಷಾಧ್ವನಿ ಗಂಧಸಿಂಧುರಘಟಾಘಂಟಾಸ್ವನಂ ಸ್ಯಂದನೋ ।
ತ್ಕರಚೀತ್ಕಾರರವಂ ಭಟೋದ್ಭಟರಟತ್ಕೋಳಾಹಳಂ ಶಂಖಧ್ವ ॥
ಪ್ಕರಭೇರೀ ಕಹಳಾಮೃದಂಗಬಹಳಪ್ರಧ್ವಾನ ಮಾಘೂರ್ಣಿ ದಿ ।
ಕ್ಕರಿಕರ್ಣಾಂತರ ಮಾಗೆ ನೀಳ್ದುದು ನೃಪಶ್ರೀಜೈತ್ರಯಾತೋತ್ಸವಂ ॥ ೩೨ ॥

ಚಂ॥ ಬಳೆದುದೊ ಭೂತಳಂ ಬೆಸಲೆಯಾಯ್ತೊ ದಿಶಾವಳಿ ಮೇರೆದಪ್ಪಿತೋ ।
ಜಳಮಯಮಾಗಿ ವಾರ್ಧಿ ಭುವನತ್ರಯವಾಸಿಗಳೆಲ್ಲ ಮಿಲ್ಲಿಗೀ ॥
ಗಳೆ ನೆರನಾಗಿ ಬಂದು ನಡೆವಂದವೊ ಪೇಟಿಸಿ ಪೆನಲ್ಕುಗುರ್ವ ನಾ ।
ಲ್ದಳವಿಗಳುಂಬ ಮಾದುದು ಬಳಪ್ರಚಳಂ ಜಯತುಂಗದೇವನಾ ॥ ೩೩ ॥

ವ॥ ಇಂತು ಸಕಳಕ್ಷೋಣೀತಳಕ್ಷೋಭಕಾರಿ ಯಾಗಿ ನಡೆವಲ್ಲಿ.

ಮ॥ ಭರದಿಂ ಶೇಷನ ನೆತ್ತಿ ಪೊತ್ತಿ ಪೊಗೆಯಲ್ಕುಚ್ಛ್ವಾಸದಿಂ ದುರ್ವಿಗು ।
ಬ್ಬರಿವುದ್ವಾಮನಿಕಾಮಧೂಮಚಯ ಮೆಂಬಂತಾಗಿ ಮಾಣ್ದಿರ್ದುದೇ ॥
ಪರತೇಜಸ್ವಿಯ ನೇಕೆ ಸೈರಿವು ದಿದೆಂಬಂತುಷ್ಣರುಗ್ಬಿಂಬಡಂ ।
ಬರಮಂ ಪೊಟ್ಟಿದ್ದುದು ತದ್ಭಟಪ್ರಬಳಪಾದೋದ್ಧೂತಧೂಳೀಚಯಂ ॥ ೩೪ ॥

ವ॥ ಮತ್ತಂ.

ಮ॥ ಅದು ಸನ್ಮಾರ್ಗವಿಶುದ್ಧಿಯಂ ಕೆಡಿಸಿತಾಶಾಂತಸ್ಫುಟಸ್ವಚ್ಛಭಾ ।
ವದ ಪೆಂಪಂ ಪೆಱಿಗಾಗಿಸಿತ್ತು ಜನಸವ್ಯಗ್ದರ್ಶನಜ್ಞಾನಸಂ ॥
ಪದಮಂ ಕೀಲ್ಪಿಡಿಸಿತ್ತು ತಾಂ ಜಡಧಿಗಳ್ಗಂತಸ್ಥ ಮಾಗಿರ್ದುದೆಂ ।
ಬಿದು ಯುಕ್ತೋಕ್ತಿ ಕುಮಾರ್ಗನಿರ್ಗತರಜೋಜಾಳಕ್ಕಿದಾಶ್ಚರ್ಯ ಮೇಂ ॥ ೩೫ ॥

ಚಂ॥ ಪೆಸರ ನರೇಂದ್ರನಂದನರ ಚಾಮರವಾಯು ಕಳಲ್ಚೆ ಸಾಮಜ ।
ಪ್ರಸರದ ಕರ್ಣತಾಳಮರುತಂ ಮರಳೊತ್ತೆ ಮದಾಂಬುಶೀಕರಂ ॥
ಪಸರಿಸಿ ಪೀರೆ ವಾಜಿಗಳ ಲೋಳೆಯ ಪೇನವಿತಾನ ವೀಂಟಿ ನಿ ।
ಶ್ವಸಿತದ ಗಾಳಿ ಚಾಳಿಸೆ ತೆರಳ್ಗಡಿಗಳ್ಗಿತು ಧೂಳಿಜಾಳಮುಂ ॥ ೩೬ ॥

ಕಂ॥ ಕರಿಯ ಮದಪಂಕಜಳ ಮಾ ।
ವರಿಸಿದ ವಾಹಿನಿಯೊಳಲೆಯೆ ಮಾರುತರಜಕಂ ॥
ಪರಿದ ರಜದಿಂದೆ ಮಾಸಿದ ।
ಹರಿದಂಬರ ಮೆಯ್ದಿ ಜಲಕನಾಯ್ತಿದು ಚಿತ್ರಂ ॥ ೩೭ ॥

ವ॥ ಅಂತು ಜಗತೀದಿಗಂತಗಗನತಳವಳಯಮತಿವಿವಿಧಪತಾಂಸುಪಟಲ ಮಾಗೆ.

ಕಂ॥ ಶತ್ರುಕ್ಷತ್ರಿಯಮುಖಶತ ।
ಪತ್ರಗ್ಲಾನಿಯಿ ನತುಚ್ಛನೃಪಕಟಕಮಹಾ ॥
ಯಾತ್ರಾವಿಳಾಸಚಂದ್ರಿಕೆ ।
ನೇತ್ರೋತ್ಪಳಶುಭದ ಮಾಯ್ತು ನೋಟ್ಪಿರ್ಗೆನಸುಂ ॥ ೩೪ ॥

ವ॥ ಆಗಳಲ್ಲಿ.

ಮ॥ ಮುದದಿಂ ಯಾನವಿಳಾಸ ಮೊಪ್ಪೆ ಮೆಱೆದರ್ ತಂತಮ್ಮ ಸಂಪತ್ತಿಯಂ ।
ಕದನೋಚ್ಚಂಡಭುಜರ್ ಮಹಾಮಹಿಭುಜರ್ ಶೌರ್ಯೋಗ್ರಧೀಮಂತ ರಂ ॥
ಕದ ನಾಮಂತ ರುದಾರವೀರವಿಭವಶ್ರೀಮನ್ನಿಯರ್ ಮನ್ನಿಯರ್ ।
ಮದವದ್ವೈರಿವಿಮರ್ದನಿರ್ದಯಕನತ್ಕೌಹ್ಲೇಯಕರ್ ನಾಯಕರ್ ॥ ೩೫ ॥

ಮ॥ ಕ್ರಮಸಿಂಹಾಸನವೊಂದೆ ಭೇದಮಿವರ್ಗಂ ಭೂಪಂಗ ಮುಂತಾನಭೇ ।
ದಮು ಮಿಲ್ಲಾತ್ಮವಿಳಾಸದಿಂ ವಿಭವದಿಂ ನಾಮಗ್ರಿಯಿಂ ತೇಜದಿಂ ॥
ಸಮ ನೆಂಬಂತಿರಶೇಷರಾಜ್ಯಭರಧುರ್ಯರ್ ಪೂರ್ಣಕಾರ್ಯರ್ ನಯಾ ।
ಗಮವಿದ್ಯಾವುರುಷರ್ ಪ್ರಧಾನಪುರುಷರ್ ಬಂದರ್ ನಿಜಾನಂದದಿಂ ॥ ೪೦ ॥

ಉ॥ ಪೊನ್ನೊಱೆ ಚಿಕ್ಕಗೇಣ್ ಪಳಿಯ ಟೊಪ್ಪಿಗೆ ಬೆಳ್ಮೊಗಸುತ್ತು ನೇಲ್ದ ಗ ।
ಡ್ಡನ್ನಸುಜೋಲ್ದ ಡೊಳ್ಳು ಪುಟದಂಗಿಗೆ ಶಿಷ್ಟವರಿಗ್ರಹಂ ಬುಧೋ ॥
ತ್ತನ್ನಸುಭಾಷಿತಂ ತಱಿಸಿಯ ತಣ್ಣೆಳಲಂದಣ ವಾರ್ಯವೇಷಮುಂ ।
ಕನ್ನಡಿಸಲ್ಕೆ ಬಂದ ರವನೀಶನಿಯೋಗಿಗ ಳುದ್ಭಭೋಗಿಗಳ್ ॥ ೪೧ ॥

ಚಂ॥ ನಿರುಪಮಲೀಲೆ ಕಣ್ದೆಱಿಯೆ ಬೆಜ್ಜರು ಮಜ್ಜರು ಮುಂಗರಕ್ಕರುಂ ।
ಕರವಳರುಂ ವಿಳಾಸಿನಿಯರುಂ ನಗೆಕಾಱಿರು ಮಿಚ್ಚೆಕಾಱಿರುಂ ॥
ಸರಸವಿನೋದಿಗಳ್ ಸುಮನದೀಮನೆವಕ್ಕಳು ಮಿರ್ಕ್ಕೆಲಂಗಳೊಳ್ ।
ಬರೆ ನಡೆತಂದರಂದಿರದೆ ರಾಜಕುಮಾರ ರುದಾರ ರಟ್ಟಿಯಿಂ ॥ ೪೨ ॥

ಶಾ॥ ಕಾಳವ್ಯಾಳಕರಾಳಚಾಪಚಟುಳಂ ಸದ್ಬಾಣತೂಣೀರಬಂ ।
ಧಾಳಂಬಂ ಗುಣಘೃಷ್ಟಿನಿಷ್ಠುರಕಿಣಭ್ರಾಜದ್ಭುಜಂ ಬಂಧುರಾ ॥
ಭೀಳಜ್ಯಾರವಭೈರವಂ ಸಚಳಿತಂ ವಿದ್ಯಾಟವೀಯಾಟನೋ ।
ಲ್ಲೀಲಂ ಬಿಲ್ವಡೆ ಕಾದಿ ಗೆಲ್ವೊಡೆ ಜವಂಗಂ[1] ಮೊಗ್ಗಿದಲ್ತೆಂಬಿನಂ ॥ ೪೩ ॥

ಮೊಱಿಗುವ ಪರಿಗೆಯ ರಭಸಂ ।
ಮೊಱಿಗುವ ವಿಳೆಯಾಭೃಕುಟಿಯ ಳುರ್ಜನ ವೆನಲಿಂ ॥
ಮೊಱಿಗುವ ದನಿಗೆಣೆಯೆನೆ ತ ।
ಕ್ಕಱಿಯದೆ ನಡೆತಂದುದಂದು ನೃಪತಳತಂತ್ರಂ ॥ ೪೪ ॥

[1] ಜವಂಗೇಂ ಮೊಗ್ಗೆ ಪೇಱಿಶಿಂಬಿನಂ.

ಕಂ॥ ಕಡಿತಲೆಯವ ರೇಟಿಕ್ಕಿಗೆ ನಾ ।
ಲ್ಕಡಿತಲೆಗೆಟ್ಟೋದ ದೂತರಾರಿನೆ ನಡೆದರ್ ॥
ಕಡಿತಲೆಯ ಭಟರ್ ಮುಂಡದ ।
ಕಡಿ ತಲೆಯೊಡನುರುಳೆ ಪೊಯ್ವು ಕಡುವಿನ್ನಣಿಗರ್ ॥ ೪೫ ॥

ವ॥ ಅಂತುಗ್ರೋಗ್ರತರಸಮುಗ್ರನಾಮುಗ್ರಿವೆರಸು ವಿಗ್ರಹೋದಗ್ರಭೂಪಾಗ್ರಿಯಂ ಕತಿಪಯ ಪ್ರಯಾಣಂಗಳಿಂ ಭದ್ರಾವತೀಪುರಮ ನೆಯ್ದಿ.

ಕಂ॥ ಮೆಲೆತ್ತಿ ಮಹಾಪದ್ಮನ ।
ಪಾಲಕ ನೆಟ್ಟಿಂದ ನೆಂದೊಡಗಿದೋಡಿದ ನಾ ॥
ಲೋಲಬಲಂ ಗತಭುಜಬಲ ।
ನಾಲಾಪಂಗೆಟ್ಟು ಬಿಟ್ಟವಂ ಗಜಕರ್ಣಂ ॥ ೪೬ ॥

ವ॥ ಆಗಳೆವನಖರ್ವಚಾತುರ್ಬಲಮ ನೆಟ್ಟಿಟ್ಟ ಸರ್ವಸ್ವಮುಂ ಸೂರೆಗೊಂಡು ಗಜಕರ್ಣನಂ ಪಿಡಿವೊಲಂಗೊಂಡು ಜಯಶ್ರೀಯಂ ಕೈಕೊಂಡು ಭದ್ರಾವತೀಪುರಮುಂ ಪುಗುವಲ್ಲಿ.

ಮ॥ ಲಲಿತೋತ್ತುಂಗವಿಳಾಸದೇವಭವನವ್ರಾತಂಗಳೊಳ್ ನಿಂದು ನಿ ।
ರ್ಮಲಹರ್ಮ್ಯಂಗಳ ನೇಱಿ ಸೌಧಶಿಖರಪ್ರಾಗ್ಭಾಗಮುಂ ಪತ್ತಿ ಪಾ ॥
ಗಲ[ನಾ]ಶ್ಲೇಸಿ ನಿಜಾಂಗಸಂತತಿಗೆ ನಾರ್ದಟ್ಟಾಳಮುಂ ಮೆಟ್ಟಿ ನೋ ।
ಪ್ಪಿ ಲತಾತಸ್ವಿಯ ರಂಬರೇಚರಿಯ ರೆಂಬಾಶಂಕೆಯಂ ಮಾಡಿದರ್ ॥ ೪೭ ॥

ವ॥ ಅಂತು ತಂತಮ್ಮ ಬಹುವಿಧವ್ಯಾಪಾರಂಗಳಂ ವರಿಹರಿಸಿ ವರಿತಂದು ಪುರಮುಶೇಷುಂವುರಂಧ್ರೀ ನಿಕರಮುಯ ಮಾದುದೆಂಬಿನಂ ನೆರೆದು ನೆರವಿಗೊಂಡು ಕೌತುಕಂಗೊಂಡು ಕಾಮುರಾಗನಾಗರದ ಬಹಳಲಹರೀಸಹಸ್ರಂಗಳೆನಿಪನೇಕಭಾವಂಗಳುದಯಿಸೆ ಬಯಸಿ ನೋಪ್ಪಿ ನಗರೀನಾರೀಕದಂಬಕದ ನಗೆ ಮೊಗದ ಕಾಂತಿಮೃಗಧರನ ಚೆಲ್ವಂತಗುಳ್ಚೆಯುಂ, ಕಡೆಗಣ್ಣ ಕಾಂತಿಯೆಚೊನ್ನದಚೆನ್ನನೀಯೆಯುಂ, ಕಂಕಣದ ನುಣ್ಚರದ ನುಣ್ಪು ಕಳಕಂಠಸ್ವನಮ ನವಟಯ್ಸುಯುಂ, ಸುಲಿಪಲ್ಲ ಪೊಳೆಪು ಮಲ್ಲಿಕಾಕುಟ್ಮಳಮ ನುಜ್ಜ್ವಳಿಸೆಯುಂ, ಭದ್ರಾವತೀಪುರದ ವರಮೋತ್ಸವಕ್ಷೋಭಶೋಭೆಯಂ ಬಸಂತಸಮುಯವನೊಳಗುಮಾಡಿ ಯಧಿರಾಜಂ ರಾಜಮಾರ್ಗದೊಳಗಣಿಂ ದಗಣ್ಯಪುಣ್ಯಾಂಗನಾಕರಕಮಳವಿಕೀರ್ಯಮಾಣಮುಂಗಳಲಾಜಾಕ್ಷತಂಗಳುಮುಂ, ಕುಸುಮೋಪಹಾರಂಗಳುಮುಂ, ನಿರೀಕ್ಷಿಸುತುಂ ನಡೆತಂದುನವಾಮ್ರಚಂಪಕಾಶೋಕಪಲ್ಲವೋಲ್ಲಸಿತಮಣಿತೋರಣಂಗಳೊಳಂ,ಪರಿಮುಕ್ತಮುಕ್ತಾದಾಮ ಕಮನೀಯ ವಿಚಿತ್ರನೇತ್ರದೇವಾಂಗವಿತಾನದೊಳಂ ಆ ಬದ್ಧರತ್ನ ರಾಜಿವಿರಾಜಿತಶಾತಕುಂಭಕುಂಭಂಗಳೊಳ, ಮಾಲಿಖಿತ ವಿಚಿತ್ರಚಿತ್ರಭಿತ್ತಿಗಳೊಳ, ಮಾವೋದಿತಮೃಗಮದಕರ್ದಮಾಲಿಪ್ತಮಣಿಕುಟ್ಟಿಮರಚಿತಕರ್ಪೂರಪರಾಗರಂಗವಲ್ಲೀ ವಿತಾನದೊಳ,ಮಾಕೀರ್ಣಸುವರ್ಣಕಲಶಶೋಭಿತಶಿಖರಂಗಳೊಳೆಸೆವ ಸೌಧಾಲಯಂಗಳ ನೊಳಕೊಂಡ ರಾಜಭವನದ ರಾಜಾಂಗಣಮುಂ ಪೊಕ್ಕು.

ಕಂ॥ ಸಮುದ (ಜಯ) ದ್ವಿಪದಿಂ ದಿಟ್ಟಿ ।
ದು ಮಹಾಪದ್ಮಾವನೀಶ್ವರಂ ತಾಂ ಕಟ್ಟಿವಮಾ ॥
ಡೆವು ನೀಟ್ಟಿದ ನನುನಯದಿಂ ।
ಕಮಳಪ್ರಿಯ ನೀಟ್ಟಿವಂತಿರುದಯಾಚಲಮುಂ ॥ ೪೮ ॥

ವ॥ ಈ ಪ್ರಕಾರದಿಂ ಕಟ್ಟಿವಮಾಡದುಪ್ಪರಿಗೆಯ ನೀಟ್ಟಿ.

ಕಂ॥ ನಾನಾವುಂಗಳವಸ್ತು ವಿ ।
ತಾನದಿ ನೊವ್ಪುವ ಜಯಾಂಗನಾಪರಿಣಯನಾ ॥
ಸ್ಥಾನ ವೆನಿಸಿರ್ಪ ಜಯವ ।
ರ್ಮಾನೂನಾವಾಸಮುಂ ಮಹೀಶಂ ಪೊಕ್ಕಂ ॥ ೪೯ ॥

ವ॥ ಪೊಕ್ಕು ಮಾತುಳಂಗಂ ಮಾತುಳಾನಿಗಂ ತುಟಿಲ್ಗೆಯ್ವುದು ಮವರನೇಕನಲ್ವರಕೆಗಳ್ವಿ ರಸು ಪರಮೋತ್ಸವಪರಂಪರೆಯ ನೆಯ್ದಿ ಮಟ್ಟುದೆವಸಂ ಮೌಹೂರ್ತಿಕರಂ ಬರಿಸಿ ತಾಂಬೂಲವಾ ಲ್ಯಾದಿವುರಸ್ಸರಂ ವಿವಾಹಲಗ್ನಮುಂ ಬೆಸಗೊಳ್ವುದುಂ, ನವಗ್ರಹಂಗಳೆಲ್ಲಂ ಸ್ವೋಚ್ಚಸ್ವಕ್ಷೇತ್ರಮಿತ್ರ ಸ್ಥಾನಂಗಳೊಳೇಕಾದಶಭಳವ್ರದಂಗಳಾಗೆ ಲಗ್ನಮುಂ ನಿಶ್ಚೈಸಿ ಪೇಟ್ಟಿವುದು ಮಾಕ್ಷಣದೊಳೆ ಪುರ ದೊಳಷ್ಟಶೋಭೆಯಂ ಮಾಡಲುಂ ವಿವಾಹಮಂಟಪಮಂ ಸವೆಯಿಸಲುಂ ಗೃಹಮಹತ್ತರಂಗೆ ಬೆಸ ಸುವುದುಂ.

ಚಂ॥ ಪುರಜನವಾಗಳೊಂದಿ ಪರಮೋತ್ಸವದಿಂ ವರಮಾಲ್ಯಮುಂಜುಳಾ ।
ಭರಣನವಾಂಗರಾಗವಿವಿಧಾಂಶುಕಲೀಲೆಯ ನೆಯ್ದಿ ತಾಳ್ದಿ ತಾ ॥
ಪುರದೊಳಗುಣ್ಮಿ ಪೊಣ್ಮಿ ಕೃತಮುಂಗಳತೂರ್ಯನಿನಾದ ವೆತ್ತಲುಂ ।
ಸುರುಚಿರತೋರಣಂ ತುಟ್ಟಿಗೆ ತಳ್ತಿರೆ ನೇತ್ರವಿಚಿತ್ರಕೇತನಂ ॥ ೫೦ ॥

ವ॥ ಅಂತು ಮುಲ್ಲದೆಯುಂ ಪದ್ಮರಾಗದ ನೆಲೆಗಟ್ಟಿನೊಳಂ, ವಳುಕಿನ ಕಂಬಂಗಳೊಳಂ,ಹರಿನೀಲದ ನಾಗವೇದಿಕೆಯೊಳಂ,ವೈಡೂರ್ಯದ ತೊಲೆಯೊಳಂ,ಪವಳದ ಜಂತೆಯೊಳಂ ಕರ್ಕೇತನದ ನಾಲಭಂಜಿಕೆ ಗಳೊಳಂ, ಗೇವೆಯೇಧಿಕದ ಭಿತ್ತಿಯೊಳಂ, ಚಂದ್ರಕಾಂತದ ಗವಾಕ್ಷಂಗಳೊಳಂ, ಪುಷ್ಯರಾಗದ ಮೊಗ ನಾಲೆಗಳೊಳಂ,ಕೋದ ಮುತ್ತಿನ ನೂಸಕದೊಳಂ, ಚೆಂಬೊನ್ನ ತಿಂಗಿಣಿಯೊಳಂ, ಚೀನದ ದೇವಾಂಗದ ನೇತ್ರದ ಮೇಲ್ಕಟ್ಟಿನೊಳಂ, ವಿರಚಿಸಿದ ವಿವಿಧಕುಸುಮದಾಮಂಗಳೊಳಂ, ಸರಸಸಹಕಾರನಾರಂಗ ಮಾತುಳುಂಗನಾಳಿಕೇರಕದಳೀಫಲಾವಳಿಗಳೊಳಂ, ಕತ್ತುರಿನೀರ ಚಳೆಯದೊಳಂ, ಬಿಡುಮುತ್ತಿನ ರಂಗವಲ್ಲಿಯೊಳಂ, ವಿಚಿತ್ರಾಂಶುಕವಿವಿಧಧ್ವಜಂಗಳೊಳಂ, ಬಹುವಿಧನೂತ್ನರತ್ನತೋರಣಂಗ ಳೊಳಂ ನೆಲಿಸಿದು.

ಕಂ॥ ಶತಮುಖ ನಿರ್ಮಿರಿಸಿಟ್ಟಂ ।
ಕೃತಮುತಿ ನುತಋತುವಿಮಾನಮಂ ದೈತ್ಯರ ವಿ ॥
ಸ್ತೃತಬಾಧೆಗಟ್ಟಿ ತಾನೆನ ।
ಲತಿಶಯ ಮಾದತ್ತು ಪರಮಪರಿಣಯನಗೃಹಂ ॥ ೫೧ ॥

ವ॥ ಅನಂತರಂ ಮಹಾಪದ್ಮರಾಜಂ ಮಾಂಗಲ್ಯಪ್ರಸಾಧನೋಚಿತಾಲಂಕೃತ ನಾದಾಗಳ್.

ಕಂ॥ ಪೇರುರ ಮೆಂಬಬ್ಜಿನಿಯೊಳ್ ।
ರಾರಾಜಿಪ ಪಿರಿಯ ಸಿರಿಯ ತರಳೇಕ್ಷಣನೀ ॥
ಹಾರದ ರುಚಿ ಯೆನೆ ಸುರುಚಿರ ।
ಹಾರಂ ಸೊಗಯಿಸಿತು ತನ್ನರೀಂದ್ರನ ಕೊರಲೊಳ್ ॥ ೫೦ ॥

ಮಿಸುಗುವ ಮಣಿಮಯಮಂಡನ ।
ವಿಸರಪ್ರಭೆಯೊಳ್ ಪಳಂಚಿ ತನುರುಚಿ ಚೆಲ್ವಂ ॥
ಪಸರಿಸಿ ದೆನೆದೆನೆಯೊಳ್ ಕರ ।
ಮೆಸೆದಿರಲೆನೆದಂ ನರೀಂದ್ರಚೂಡಾರತ್ನಂ ॥ ೫೧ ॥

ವ॥ ಮತ್ತಮಿತ್ತ ಚತುರಚತುರಿಕೆಯರಪ್ಪ ಪರಿಚಾರಕಿಯರುಂ, ವಿದಗ್ಧಸೀಮಂತಿನೀಕದಂಬ ಮುಂ ಭಾನುಮತಿಯುಂ ಮಂಗಳವಸದನಂಗೊಳಿಸಲವಸರಂಬಡೆದು.

ಮ॥ ನವನೀಳಾಭರಣಾಂಶುಗಳ್ ಮೃಗಮದವ್ಯಾಳೇಪಮುಂ ಮೌಕ್ತಿಕಾ ।
ನಿವಹಾಳಂಕೃತಿರಶ್ಮಿಗಳ್ ಮಳಯಜವ್ಯಾಲೇಪಮುಂ ಪದ್ಮರಾ ॥
ಗವಿಭೂಷಾಕಿರಣಂಗ ಳಾರ್ದ್ರ ಕುಸುಮವ್ಯಾಲೇಪಮುಂ ಬೀಱಿ ಬೀ ।
ಱಿ ವಧೂವೃಂದಕ ವಂದು ಬಂದು ಪದಿಪಿಂ ಕೆಯ್ಗೊಯ್ಸಿದರ್ ದೇವಿಯಂ ॥ ೫೪ ॥

ಕಂ॥ ಪೊಸಮುತ್ತಿನ ತಲೆದುಡುಗೆಯ ।
ಪಸರಿಪ ಕಾಂತಿಯು ದಗುಂತಿ ಮೂಲೆವೊಲಿರೆ ಕಂ ॥
ಡು ಸಮಂತ್ತುಮುಗ್ದಿಯರ್ ಮುಡಿ ।
ಯಿಸರಿ ಕೆಲರ್ ಮುಂಚಿ ಮುಡಿದರೆಂಬೀಭ್ರಮೆಯಿಂ ॥ ೫೫ ॥

ಕಟಕಂಗಳಿಂ ಸುರಾದ್ರಿಯ ।
ಕಟಕಂಗಳ ತೆಱದಿ ರುಚಿರಕಲ್ಯಾಣ ಪಶ್ರಾ ॥
ಕಟಕರ ಮೆನುತ್ತು ಮುರೆಬರ್ ।
ಕುಟಿಳಾಳಕಿಗೊಲ್ದು ಕಂಕಣಂಗಳ ನಿಟ್ಟರ್ ॥ ೫೬ ॥

ಕುಚಕೋಕಂಗಳ್ ದಶನಾಂ ।
ಶುಜಳಚ್ಛಂದ್ರಿಕೆಯಿ ನಗಲದಂತು ಮುಖಾಗ್ರ ॥
ಪ್ರಚುರಶ್ರೀಬಿಸಲತೆಯನೆ ।
ಖಚಿಯಿಸಿದವೊಲಿಕ್ಕೆ ಹಾರ ಮೆಸೆದುದು ಕೊರಲೊಳ್ ॥ ೫೭ ॥

ಕಂ॥ ಅರುಣಾಧರರುಚಿಯಿ ನಧಃ ।
ಕರಿಸದಿ ರಿನ್ನಿವ್ಮ ನೆಂದು ಕಾಲ್ವಿಡಿದಿರ್ಪಂ ॥
ತಿರೆ ಪದ್ಮರಾಗಮಣಿನೂ ।
ಪುರಮಂ ನೃಪವಧುಗೆ ತುಡಿಸಿದಳ್ ಮುತ್ತೊರ್ವಳ್ ॥ ೫೮ ॥

ಏಱಿಸದಿಕ್ಷುಶರಾಸನ ।
ವೇಱಿಸಿದಪುದೀಗಳಂಗಭವನಿಂದೆನೆ ನೀ ॥
ರೇಱಿದ ಮಂಗಳವಸದನ ।
ಮೇಱಿತಿ ಮನಂಗೊಳಿಸಲಾರ್ತುದಾಕೋಮಳೆಯಾ ॥ ೫೯ ॥

ವ॥ ಅಂತು ಕೆಯ್ಗೊಯ್ಸಿ ಭಾನುಮತಿಯಂ ಮಂಗಳಾಚರಣೋಚ್ಚಾರಣರವಂಗಳುಂ, ಮಂಗಳ ಗೇಯರವಂಗಳುಂ, ಮಂಗಳತೂರ್ಯಸ್ವನಂಗಳುಂ, ಪುಣ್ಯಾಹಘೋಷಂಗಳು ಮೆನೆಯೆ ವೃದ್ಧಕಂಚು ಕಿವುರಸ್ಸರ ಮೊಡಗೊಂಡುಬಂದು ವಿವಾಹಮಂಟಪಮಧ್ಯಸ್ಥಿತವೇದಿಕಾತಳಮು ನಳಂಕರಿಸಿದ ಮಣಿ ಮಯಪೀಠದೊಳಿಸಿರಿ ಮಹಾಪದ್ಮರಾಜನಂ ಬರಿಸಿ.

ಕಂ॥ ಪುರಿಪುಂಡರೀಕಿಣೀಶಂ ।
ಗುರುತರಶೌರ್ಯಾಂಬುನಿಧಿಗೆ ಜಯವರ್ಮನೃಪಂ ॥
ವರವೋತ್ಸವದೆ ಪುರೋಹಿತ ।
ಪುರಸ್ಸರಂ ತಾನೆ ಬಂದು ಕೆಯ್ನೀರಿಱಿಸಿದಂ ॥ ೬೦ ॥

ರತಿಪತಿಯುಂ ರತಿಯುಂ ಜನ ।
ನುತರಕಾತ್ರಶೋಕಮುಹಿಜವುಂ ಬಲಗೊಳ್ವಂ ॥
ತತಿಶಯದಿಂ ಬಲಗೊಂಡರ್ ।
ಕ್ಷಿತಿಪತಿಯುಂ ಸತಿಯು ಮೊಗೆದ ಹೋಮಾನಲನಂ ॥ ೬೧ ॥

ಭೂಪತಿ ತಳೆದಂ ಪ್ರಗುಣಗು ।
ಣೋಪೇತಂ ಭಾನುಮತಿಯ ನುತ್ಸವತೂರ್ಯಂ ॥
ವ್ಯಾಪಿಸೆ ದೆಸೆಯಂ ನೃಪತಿ ಮು ।
ಹಾಪದ್ಮಂಗಿತ್ತು ಪೆರ್ಮೆಯಂ ಜಯವರ್ಮಂ ॥ ೬೨ ॥

ವ॥ ಅಂತು ವಿವಾಹೋತ್ಸವಂ ಸಕಳಜನಮನೋತ್ಸವಮಾಗೆ ತದನಂತರ ಮನಂತಸಾಮಂತ ಸೀಮಂತಿನೀಪ್ರಮುಖವೃದ್ಧಕಂಚುಕಿಸಹಿತಂ ಪುರಪುರಂಧ್ರಿಯರುಂ, ಪುರೋಹಿತಪುರಸ್ಸರಂ ಧರಾ ಮುರರುಂ ಪರಸಿ ನೇನೆಯನಿಕ್ಕೆ ಮಂಗಳಪಾರಕರ್ ನಿಂದು.

ಕಂ॥ ಆಯುಂ ಶ್ರೀಯುಂ ವಿಜಯಮು ।
ಮಾಯತಿಯುಂ ನಿಮ್ಮೊಳೊದವಿ ಸುಸ್ಥಿರಮಪ್ಪಂ ॥
ತೀಯುತ್ತುಮಿರ್ಕೆ ಕಾಂಚನ ।
ಕಾಯಂ ಪ್ರಭು ಶಾಂತಿ ನಿನಗೆ ವಿಭುಶಾಂತಿಜಿನಂ ॥ ೬೩ ॥

ಮು॥ ದಿನಪಾಬ್ಜಾರಬುಧಾಮರೇಜ್ಯಸಿತಮಂದಾಹೀಂದ್ರಕೇತುವ್ರಜಂ ।
ನಿನಗೇಕಾದಶರಕ್ಕೆ ಸೂಕ್ತಿಸತಿಯುಂ ಶ್ರೀಕಾಂತೆಯುಂ ಜೈನಶಾ ॥
ಸನದೇವೀಕುಳಮುಂ ಸಮಂತು ಸಮಸಂದಿಷ್ಟಾರ್ಥಮುಂ ಮಾಟಿಕ್ಕಿ ಕಾಂ ।
ತ ನೃಲೋಕಸ್ತುತ ನಿನ್ಮೊಳಿಂದು ವಿಜಯುಂ ಭದ್ರಂ ಶುಭಂ ಮುಂಗಳಂ ॥ ೬೪ ॥

ಮಾಸ್ರ॥ ಸ್ಥಿರಲಕ್ಷ್ಮೀಲಾಸ್ಯಲೀಲಾಭವನ ಮಗಲ್ದುರಂ ಭಾರತೀಚಂದ್ರಿಕಾಭಾ ।
ಸುರಚಂದ್ರಂ ಚಾರುವಕ್ತ್ರಂ ಸ್ಮರವಿಜಯವಧೂಕೇಳಿಶೈಳಂ ಭುಜಾಗ್ರಂ ॥
ಪರಮಶ್ರೀಲಕ್ಷ್ಯಸಲ್ಲಕ್ಷಣಮಣಿಗಣಗರ್ಭಾರ್ಣವಂ ಮೂರ್ತಿ ಯೆಂಬಂ ।
ತಿರೆ ಷೆಂಪಂ ತಾಳ್ದಿದಂ ನಾಪ್ಪಿಭು ಗುಣನಿಳಯಂ ಶಾಂತ ನುತ್ಕೀರ್ತಿಕಾಂತಂ ॥ ೬೫ ॥

ಚಂ॥ ಪರಹಿತದೊಳ್ ನಯಕ್ರಮದೊಳಾಯತಿಯೊಳ್ ಸುಚರಿತ್ರೆಯೊಳ್ ದಯಾ ।
ಪರಿಣತೆಯೊಳ್ ಕಳಾವಿಭವದೊಳ್ ಭುಜವಿಕ್ರಮದೊಳ್ ಗಭೀರದೊಳ್ ॥
ಗರಿಮೆಯೊಳೂರ್ಜಿತಪ್ರಭುತೆಯೊಳ್ ಪ್ರಭುಮಂಡನ ಶಾಂತಿವರ್ಮ ನಾ ।
ಕ್ಷರಸಮುದಾವಳಂಬ ನಿನಗಾರ್ ದೊರೆ ಮಾನವರೀಧರಿತ್ರಿಯೊಳ್ ॥ ೬೬ ॥

ಮು॥ ಜನಕಂ ವಿಶ್ರುತವಂದಿವೃಂದಜನಕಂ ಬಪ್ಪಂ ಲಸನ್ಮಾತೆ ಮಾ ।
ನಿನಿ ಮಾದಾಂಬಿಕೆ ಭಾವಮೆ ಭಾಮುಲೆ ಜಿನೇಂದ್ರಂ ದೈವ(ವ)ಮ್ಮಮ್ಮ ಕೀ ॥
ರ್ತಿನಿದಾನಂ ನೃಪಕಾರ್ತವೀರ್ಯ ನಹಿತಕ್ಷ್ಮಾಭೃದ್ಬಲಹದ್ವಜ್ರ ನಾ ।
ಳ್ದ ನೆನಲ್ ನಾಪ್ಪಿಭು ಶಾಂತಿವರ್ಮನ ನದಿನ್ನೇವಣ್ಣಿಪಂ ಬಣ್ಣಿಪಂ ॥ ೬೭ ॥

ಕಂ॥ ನಾಸಿರದೈತ್ಯಾಧಿಪರೆ ।
ಣ್ಣಾಸಿರ ಖಚರೇಂದ್ರ ರೀವ ಗುಣದೊಳ್ ವದಿನೆ ॥
ಣ್ಣಾಸಿರರವಿನಂದನರೇಂ ।
ನಾಸಟಿಯೂದಪರೆ ಭವ್ಯ ಚೂಡಾಮಣಿಯೊಳ್ ॥ ೬೮ ॥

ಪೊಳೆವಮೃತಕರನ ಕಿರಣದ ।
ಬೆಳವಿಗೆ ಮುಚ್ಚರಿಸುವಂತಿ ರೆಣ್ಪೆಸೆಗಂ ಬ ॥
ಳ್ವಳನೀಳ್ದು ಬಳೆದು ಚೆಲ್ವಂ ।
ತಳೆದುದು ಸಲೆ ಶಾಂತಿವರ್ಮ ಕೀರ್ತಿಪ್ರಸರಂ ॥ ೬೯ ॥

ವ॥ ಎಂದು ಮುಂಗಳವೃತ್ತಂಗಳ ನೋದಿಸುವ ಕವಿಜ(ನನು)ನಾನಲ್ಪಕಲ್ಪದ್ರುಮನ ಚತುರ ವಿತರಣದಿಂ ಸಂತೃಪ್ತರಾದ ರನ್ನೆಗ ಮಿತ್ತಲ್.

ಕಂ॥ [1] ಭೂಪತಿ ತಳೆದಂ ಪ್ರಗುಣಗು ।
ಣೋಪೇತಂ ಭಾನುಮತಿಯ ನುತ್ಸವತೂರ್ಯಂ ॥
ವ್ಯಾಪಿಸೆ ದೆಸೆಯಂ ನೃಪತಿವು ।
ಹಾಪದ್ಮಂಗಿತ್ತು [2] ಪೆರ್ಮೆಯಂ ಜಯವರ್ಮಂ ॥ ೭೦ ॥

[1] ೬೯ನೆಯ ಪದ್ಯವೂ ಇದೂ ಒಂದೇ ಆಗಿದೆ. [2] ಪೊರ್ದಿದಂ ಜಯವರ್ಮಂ.

* ಕಂ॥ ನಗರಂ ಪೃಥುಚಕ್ರವರ್ತಿ ।
ಭಗೀರಥಯಯಾತಿನಳಹರಿಶ್ಚಂದ್ರ[ನೃಪ]ರ್ ॥
ನೃಗನಹುಷಬಾಣಬಲಿ ದಶ ।
ಕಂಠರ್ ಪಾಸಟಿಯೆ ನಿನಗೆ ಜಿನೇಂದ್ರ ಚರಣಕಮಲ ಭೃಂಗಾ ॥ ೭೨ ॥

ವ॥ ಅಂತು ಬೀಯದ ಚಾಗದ ಪೆರ್ಮೆಯಂ ಮೆಱೆಸಿದು ಮದುವೆಯಂ ಮಾಡಿ ಕತಿಪಯದಿನಂಗಳಿಂ ಮಗಳ ನಳಿಯನುಮಂ ಪುಂಡರೀಕಿಣಿಗೆ ಕಳಿಪಿ ಬರ್ಪಾಗಳ್.

ಮ॥ ಕಮಳಿನಾನಂದಮು ನುಂಟುಮಾಡಿದುದು ಭಾಸ್ವನ್ಮಂಡಳಾಗ್ರಪ್ರಭಾ ।
ವಮು ನಂಗೀಕರಿಸಿತ್ತು ದಗ್ರಧರಣೀ ಭೃದ್ವಾಹಿನೀಜೀವನೋ ॥
ದ್ಯಮುಮುಂ ಪೀರ್ದುದು ವಿದ್ವಿಷತ್ಕುವಳಯಕ್ರೀಯಂ ಕಳಲ್ಚಿತ್ತದೇ ।
ನೊ ಮಹಾಪದ್ಮನೃಪಪ್ರತಾಪದಹನಜ್ವಾಳೋಷ್ಮಮೋ.ಗ್ರೀಷ್ಮಮೋ ॥ ೭೦ ॥

ಚಂ॥ ನಗಕುಳಕುಂಜರಂ ಜಳಧಿ ಕಾನನ ಮುರ್ವರೆ ಯೆಂಬಿವೆಲ್ಲಮಾ ।
ವಗವೊಳಗಾದುದೊ ಕುಳಿಶವಹ್ನಿಗೆ ವಾರಿದ..... ॥
..... ।
.....ಗೆತ್ತುದಿಲ್ಲಿ ಖಗಮುಂ ಮೃಗಮುಂ ಪರಿತಾಪದೇಟಿಸ್ಸಿಯೊಳ್ ॥ ೭೩ ॥

ಉ॥ ವುತ್ತಿನ ಬಾಯ್ಗಳಿಂ ವುಗುವ ಚಂಡಮರೀಚಿಮರೀಚಿ ಧಳ್ಳೈನಲ್ ।
ಕುತ್ತಿದ ಕೊಳ್ಳಿಯಂತೆ ಸುಡೆ ನೆತ್ತಿವರಲ್ಗಳರಲ್ಗಳೆಂದದಿಂ ॥
ಪೊತ್ತಿ ಸಿಡಿಲ್ದು ಪಾಱಿದುವು ವಕ್ತ್ರವಿಷಾನಲವಿಸ್ಫುಲಿಂಗ ಮು ।
ಣ್ಮುತ್ತಿರೆ ಕೋಪದಿಂ ವಿಷಧರಂಗಳೊಳೆಂಬಿನ ವಾನಿದಾಳ್ದುದೊಳ್ ॥ ೭೪ ॥

ಕಂ॥ ಕೆಂಡದ ಮಟಿಸಿ ಕೊಂಡೆವ್ಪುದ ।
ಜಾಂಡದಿ ನಿಳೆ ದೂವೆಗಿಚ್ಚ ನುಗುಳ್ದೆವ್ಪುದು ದಿ ॥
ಜ್ಮಾಂಡಲಮಿಂ ದುರಿಗೊಳ್ಳಿಯ ।
ತಂಡದೆ ಕೇರ್ಗಟ್ಟಿತೆನಿಸಿ ತೋಱುತ್ತದಱುತೊಳ್ ॥ ೭೫ ॥

ಉ॥ ತಾಱಿದ ಬಳ್ಳಿ ವಿಾಱಿದ ದವಾನಲ ನಾಱಿದ ಬೆಂಚೆ ತಾಯ್ಮಣ ।
ಲ್ದೋಱಿದ ಸಿಂಧು ಬೆಂದೊಡೆದು ಪಾಱಿದ ಬೆಟ್ಟು ಕರಿಂಕುವೋಗಿ ಕ ॥
ರ್ದೋಱಿದರಣ್ಯಭೂಮಿ ಬೆಮಱೋಱಿದ ದೇಹಿಸಮೂಹ ಮೂಷ್ಮೆಯಂ ।
ಪೋಱಿದ ಭಾನು ಭಾನುಬಿಸುಪೋಱಿದಿಳಾತಳ ಮಿಲ್ಲದೆಲ್ಲಿಯುಂ ॥ ೭೬ ॥

ಕಂ॥ ನಡುವಗಲ ವುಗಿಲ ಬಿಸಿಲೊಳ್ ।
ಬಿಡೆ ನಾಲಗೆಗಿಱ್ಱು ತೇಂಕಿ ತನ್ನಯ ನೆಱಲಂ ॥
ಕಡುಗಪ್ಪಲೆಂದು ಪೊರಳ ।
ಲ್ಕೊಡರಿಸಿ ಮೆಯ್ಯಿಕ್ಕಲಿರ್ದ ವನ್ಯಲುಲಾಯಂ ॥ ೭೭ ॥

---

* ಈ ಪದ್ಯವು ಪ್ರಕ್ಷಿಪ್ತವೆಂದು ತೋರುವುದು. ನಾಲ್ಕನೆಯ ಪಾದದಲ್ಲಿ ಏಕಾಸಕ್ಷರವುಕೆಟ್ಟಿರುವುದಲ್ಲದೆ ಮಾತ್ರೆಗಳೂ ಛಂದಸ್ಸಿಗನುಗುಣವಾಗಿಲ್ಲ. ಪೊಗರೇಂ ಪಾಸಟಿಯೆ ನಿನಗೆ ಜಿನಪದರಕ್ತಾ॥ ಎಂದು ತಿದ್ದಬಹುದು.

ಕಂ॥ ನೋಡಿದೆವೆಂ ಸೀಗು ಮೊಯ್ಕನೆ ।
ತೀಡಿದ ಬಗೆ ಬೇಗು ಮುರಿದೊಡುಗ್ರತೆಯಿಂ ಮಾ ॥
ತಾಡಿದ ಬಾಯ್ ಪೊತ್ತುಗು ಮೆನೆ ।
ನಾಡೆ ಯಗುರ್ವಿಸಿದುದನುಗತೋಷ್ಮಂ ಗ್ರೀಷ್ಮಂ ॥ ೭೪ ॥

ವ॥ ಅಂತೆನಿಸಿದ ನಿದಾಘದೊಳ್ ಬರುತ್ತಿರೆಯಿರೆ ಮುಂದೊಂದೆಡೆಯೊಳ್.

ಕಂ॥ ವನಮಿರ್ದು ದತಸುಗಿದು ಜೀ ।
ವನ ಮುಂಗ(ಜ)ಲಹ್ಲೀಗಿದುವೆ ವುದಿದೇಱುಂಜ ॥
ವ್ವನ ವಖಿಳಜಗತ್ರಯವಾ ।
ವನ ಮೆನೆ ರತಿಯು ನವಲಾಸ್ಯಲೀಲಾಭವನಂ ॥ ೭೯ ॥

ಮ॥ ವನಮಾಲಾಮಿಳಿತಂ ಸುವರ್ಣಲುಲಿತಂ ಸತ್ಕಾಂತಿಪೀತಾಂಬರಂ ।
ಘನಸುಚ್ಛಾಯ ವನಂತಭೋಗನಿಲಯಂ ಲಹ್ಲೀಸವೇತಂ ಸುದ ॥
ರ್ಶನಸೇವ್ಯಂ ಸುಮನಃಪ್ರತಾನನಿಚತಂ ತೋಡಾಯ್ತು ಪೇಂದ್ರಂಗೆ ಮ ।
ಜ್ಜನಕಂಗೀಮರ ನೆಂದು ಮಾಮರಕೆ ಕಾಮಂ ಕೊಟ್ಟ ನಾತಿಥ್ಯಮಂ ॥ ೮೦ ॥

ಉ॥ ಕಾದಲರಂ ಪಳಂಚಲೆವ ಪಂಚಶರಕ್ಕದಱುಂಕುರಂ (ಪುಣಂ) ।
ಬಾದುದು ಕೆಂದಳಿರ್ ಮಿಸುವ ಕೆಂಗಱು ಯಾದುದು ಹೂದೊಡಂಬೆ ಪಿ ॥
ಟ್ಟಾಕ್ಕುದುದು ಕೊಂಬು ಕೋಲಕುಟಿಲತ್ವಮು ನೋಜೆಗೆ ತಿರ್ದಲೊತ್ತುಗೊಂ ।
ಬಾದುದು ಬಟ್ಟಿದ್ದಿ ನೆಂದು ನಲಿದಂ ನುಡಿದಂ ನಡೆ ನೋಡಿ ಚೂತಪಮಂ ॥ ೮೧ ॥

ವ॥ ಆದಲ್ಲದೆಯುಂ.

ಮ॥ ಮೊದಲೊಳ್ ಕೂರಿಸಿ ಕೂರ್ತವರ್ ಬಟ್ಟಿಕಗಲ್ದಿರ್ದಂತೆ ‘‘ಕೊಲ್’’ಹಂದಿ ಸ ।
ತ್ತುದು ನಾಯ್ ಸತ್ತುದು ಪಾವಮಿಲ್ಲ ವಟ್ಟಿಯಿಲ್ಲೆಂ’’ದಂಗಜಂ ತೋಳ ನೀ ॥
ಳದ ಪತ್ರಂ ಬರೆದೀಯೆ ಕೊಂಡು ಮಧುಚೌತಂ ಪೂಸಿ ನೇರಿಚ್ಚ ಮಾ ।
ರ್ಗದೆ ಕಂಕೆಲ್ಲನಶೋಣಪಲ್ಲವಚಯಂ ಚೆಲ್ವಾದು ವುದ್ಯಾನದೊಳ್ ॥ ೮೨ ॥

ವ॥ ಅಂತು ನಯನಾನಂದ ಮವ್ವ ನಂದನಮುಂ ನೋಡುತ್ತುಂ ಬರ್ಪಲ್ಲಿ ಆತ್ಮೀಯಸುರಭಿ ನಿಶ್ವಾಸಂಗಳಿಂದ ಮುದ್ಯಾನಮುಂ ಸುರಭಿಸುತ್ತುಂ ಪುಷ್ಪಾವಚಯನಿರತ ರಾವಲ್ಲಿ.

ಕಂ॥ ರಂಜಿತಮಧುಮುಧುಕರಚಯ ।
ಮುಂ ಜಿತನಾನಾಪ್ರಸೂನಚಯ(ಮುಂ) ಮುದವ ॥
ತ್ಕುಂಜರಗಾಮಿನಿ ಪೆಱೆಳೇ ।
ಱುಂಜವ್ವನೆ ಕೊಯ್ದಳೊನೆದು ಪೊಸವುಲ್ಲಿಗೆಯಂ ॥ ೮೩ ॥

ವ॥ ಮತ್ತಮೊಂದೆಡೆಯೊ ಳವಧಾರಿತವಿದ್ಯಾವಿಳಾಸಿನೀವಿಭ್ರಮೆಯುಮುಪಹಸಿತಪುರಂದರ ಕಾಮಿನೀ ಸೌಂದರ್ಯರೂಪಕೃತ ಸೌಭಾಗ್ಯವತಿಯುಂ ಮೆನಿಸಿದಾಕೆ.

ಕಂ॥ ತರಳತರತಾರ ಹಾರೋ ।
ತ್ಕರರಚನೆಗೆ ಸುಟ್ಟಿದೋಱು ನೀರೇರುಹಬಂ ॥
ಧುರಗಂಧಿ ರಮಣನಿಂದಂ ।
ಸುರಹೊನ್ನೆಯ ನನೆಯ ನೆಸೆಯೆ ಕೊಯ್ಸಿದಳೊರ್ವಳ್ ॥ ೪೪ ॥

ವ॥ ಮತ್ತಮೊಂದೆಡೆಯೊಳ್ ಅವಿರಳಕುಸುಮಪರಿಮಳಮುದಿತಮುದವದಳಿಕುಲಮೃದುಮ ಧುರರವದಿಂ ಸುರಭಿತಸಹಕಾರಭೂರುಹಾಂತರದೊಳ್.

ಕಂ॥ ಉಪರಿಜಕುಸುಮಮ ನೋವನ ।
ನಪೂರ್ವಮಂ ತನಗೆ ಬೇಡಲಾಲಿಂಗನಲೋ ॥
ಲುವ ನೆತ್ತಿ ನೀನೆ ಕೊಯ್ಯೆಂ ।
ದುಪಾಯದಿಂದಪ್ಪಿಕೊಂಡ ನಲಳುಸ್ತನಿಯಂ ॥ ೪೫ ॥

ವ॥ ಮತ್ತಮೊಂದೆಡೆಯೊಳಖಿಳಯೌವನೋದ್ದಾಮರಾಮಾಭಿರಾಮಕಾಮಿನಿ ಯೆನಿಸಿದಾಕೆ.

ಕಂ॥ ಬೆನ್ನಂ ನೋರ್ಮುಡಿ ಮುಟ್ಟಿ ಸ ।
ಮುನ್ನತಕುಚೆ ಮುರನ ನಡೆರ್ವ ನೋಗೆಯು ತೆಱುದಿಂ ॥
ವುನ್ನಾಗದ ಬಿರಿಮುಗುಳಂ ।
ತನ್ನಿನಿಯನ ಪೆಗಲ ನೇಱು ಕೊಯ್ವುಳೆದೊರ್ವಳ್ ॥ ೪೬ ॥

ವು॥ ಮತ್ತಮೊಂಬೆಡೆಯೊಳೊರ್ವಳ್.

ಕಂ॥ ಎಳೆಮಾವಿನ ತಳಿರಂ ಕೊಳ ।
ಲೆಳೆಯುಳ್ ಕೆಂದಳಮು ನೊಯ್ಯೆ ತಳಮುಂ ತಳಿರ್ಗೆ ॥
ತ್ತೆಳಸಿ ಗಿಳಿ ಕರ್ದುಕೆ ಭಯವಿ ।
ಹ್ವಳೆ ಚೆಚ್ಚರ ಮಪ್ಪಿದಳ್ ನಿಜೇಶನ ಕೊರಲಂ ॥ ೪೭ ॥

ವ॥ ಆಗಳ್.

ಕಂ॥ ಖರಕರತಾಪಂ ಕರಮು ।
ಬ್ಬರಿಸೆ ತರತ್ತರಳತಾರಹಾರಾವಳಿಯಂ ॥
ತಿರೆ ಘರ್ಮಬಿಂದುಚಯ ಮುಂ ।
ಕುರಿಸಿದು ವಬಲೆಯರ ತನುಲತಾವಿತತಿಗಳೊಳ್ ॥ ೪೮ ॥

ವ॥ ಅಂತೊಗೆದ ಘರ್ಮೋದಬಿಂದುವಿಂ ಪರಿದಂಗರಾಗಮುಂ, ನಸುಗುಂದಿದ ಕುಸುಮವಿಭೂಷಣಂಗಳುಂ ಬೆರಸು ಮದಾಲಸಮರಾಳಗತಿಯಿಂ ಬಂದು ವನಲತಾಗೃಹಂಗಳೊಳ್ ವಿಶ್ರಮಿಸುತ್ತೆ ರೂಪಹೃತವನವಿಹರಣರಾಗಿ ಭಾನುಮತಿವುರಸ್ಸರಂ ಸಕಳಪೆಂಡವಾಸ ಮೊಡವರಿ ಜಲಕೇಳೀಲೋಲ ನೆನಿಸಿದ ಯೂಥಪತಿ ಕರೇಣುಯೂಥಂ ಬೆರಸು ಬರ್ಪಂತೆ ಬಂದು.

ಕಂ॥ ಮುರಹರನಂತೆ ರಥಾಂಗ ।
ಸ್ಫುರಿತಂ ನಕ್ಷತ್ರದಂತೆ ವಿಮಾನಾನ್ವಿತ ಮುಂ ॥
ಬರದಂತೆ ರಾಜಹಂಸೋ ।
ದ್ದುರಶೋಭಾಕರ ಮೆನಿಪ್ಪ ಕಮಳಾಕರಮುಂ ॥ ೪೯ ॥

ವ॥ ಅದಂ ಕಂಡೆಯ್ದೆ ವಂದು ಜಳಕೇಳೀವಿಳಾಸೋದ್ಯುಕ್ತನಾದಾಗಳ್.

ಉ॥ ಆಲಲನಾಕದಂಬಕ ವಿಶಾಲನಿತಂಬಸುಪೀವರಸ್ತನಾ ।
ನ್ಮಾಲನದಿಂದ ಮುಬ್ಜಿನಿ ಕಲಂಕಿ ತರತ್ತರಳೋರ್ಮಿಮಾಲೆಯಂ ॥
ಲೀಲೆಯಿ ನಾಂತುದಂತುಟಿ ಮಹದ್ವಿಮಳತ್ವಗಭೀರವೃತ್ತ ಮಾ ।
ಬಾಲೆಯ ತೋಳ್ ತಗುಳ್ತರಿ ವಿಕಾರಮು ನೆಯ್ದುವು ದಾವ ವಿಸ್ಮಯಂ ॥ ೫೦ ॥

ಕಂ॥ ಮತ್ತಗಜಕುಂಭಸದೃಶಕು ।
ಚಾತ್ತಪಯಃಕ್ಷೋಭದಿಂ ರಥಾಂಗಯುಗಂ ಮೆ ॥
ಯ್ವೆತ್ತಿರ್ದಗಲ್ದುದೇನು ।
ದ್ವ್ಯತ್ತಕೃತಾನ್ಯಪ್ರಸಾದ ಮೆಂಬುದು ಮುಂಟೇ ॥ ೫೧ ॥

ವ॥ ಅದಲ್ಲದೆಯುಂ.

ಕಂ॥ ಇನಿಯಳ್ ಮುನಿದೊಡೆ ತಿಳಿಪ ।
ಲ್ಕಿನಿಯಂ ಕಾಲ್ವಿಡಿಯಲೆಂದು ಮುಬಿಗಿದ ನಾಕಾ ॥
ಮಿನಿಗೆ ಜಲದಿವ್ಯದಿಂ ಶು ।
ದ್ಧನಪ್ಪ ಬಗೆ ಬಗೆಯೊಳೊಂದಿ ಮುಬಿಗುವ ತೆಱದಿಂ ॥ ೫೨ ॥

ವ॥ ಅದಲ್ಲದೆಯುಂ.

ಕಂ॥ ಇದು ವದನ ಮಿದು ಸರೋರುಹ ।
ಮಿದು ಕುಚ ಮಿದು ಚಕ್ರವಾಕ ಮಿದು ಕಣ್ಣಿದು ಮಾ ॥
ನಿದು ಕುರುಳಿದು ಮಧುಕರ ಮೆಂ ।
ಬುದ ನಱಿಯಲ್‌ಬಂದುದಿಲ್ಲ ಕಮಳಾಕರದೊಳ್ ॥ ೫೩ ॥

ಪಸರಿಸಿದಕೃತಕಸೌಂದ ।
ರ್ಯಸೌರಭಂ ಪಿಂಗೆ ಪಿಂಗದಂಗಂಗಳೊಳೇ ॥
ನೆನೆದುದೊ ಹೃದಯಂಗಮು ಮಾ ।
ಯ್ತನಸದಳವಾತ್ಮಾಂಗಸೌರಭಂ ಲಲನೆಯದಾ ॥ ೫೪ ॥

ವ॥ ಅಂತು ಜಲಕೇಳೀವಿನೋದದಿಂ ನೀಡುಂ ಪೊಟ್ಟುಗಳೆದಂದಿನ ದಿನ ಮಲ್ಲಿರ್ದು ಮುಱಿ ದಿವಸಂ ಪುಂಡರೀಕಿಣಿಗೆ ನಿಚ್ಚವಯಣಂ ಬಂದು.

ಕಂ॥ ಮಂಗಳತೂರ್ಯರವಂ ಮಿಗೆ ।
ಮಂಗಳಗಾಯಕನಿನಾದ ವೊಡರಿಸೆ ಭಾಸ್ವ ॥
ನ್ಮಂಗಳಪಾಠಕನಿನದಂ ।
ಸಂಗಳಿಸಿರೆ ನೃಪತಿ ರಾಜಗೃಹಮುಂ ಪೊಕ್ಕಂ ॥ ೯೫ ॥

ವ॥ ಪೊಕ್ಕು ಪದ್ಮರಾಜಂಗಂ ವನಮಾಳಿಕಾಮುಹಾದೇವಿಗಂ ನಿರ್ಭರಭಕ್ತಿಭರದಿಂ ಪೊಡ ಮಡುವುದು ಮವರ್ ತೆಗೆದು ತಟಿಶ್ಕೈಸಿಕೊಂಡು ಪಲವುನಲ್ವರಕೆಗಳಿಂ ಪರಸಿ ಪರಮೋತ್ಸವ ಪರಂಪರೆಯ ನೆಯ್ದಿ ಸುಖಮಿರ್ಪುದುಂ ಕತಿಪಯದಿನಂಗಳಿಂ (ಮಹಾ)ಪದ್ಮರಾಜನ ಮಹಾದೇವಿ ಯೆನಿಸಿದ ಭಾನುಮತಿಯ ಗರ್ಭದೊಳ್ ಪೂರ್ವಜನ್ಮಸಂಚಿತಾಗಣ್ಯ ಪುಣ್ಯಪ್ರಭಾವದಿಂ.

ಕಂ॥ ಜಿನವಾಕ್ಯಾಮೃತ ಮಣಿಭಾ ।
ಜನ ನಭಿನುತವಂಶವಾರ್ಧಿವರ್ಧನಲೀಲಾ ॥
ವನಧಿಸುತ ನರ್ಧಿಜನನಂ ।
(ದನ ನಾ)ಥನದೇವನೆಂಬ ಸುತ ನುದಯಿಸಿದಂ ॥ ೯೬ ॥

ವ॥ ಅಂತಿರ್ಪುದು ಮೊಂದುದಿವಸಂ ಮಹಾಪದ್ಮನಾಥಂ ಮಂಟಪಮಧ್ಯಸ್ಥಿತಸಿಂಹಾಸನಾಸೀನ ನೊಡ್ಡೋಲಂಗೊಟ್ಟರೆ.

ಕಂ॥ ದಿನಲಕ್ಷ್ಮೀ ವಾರುಣೀನೇ ।
ವನೆಗಿರ ದೆಟ್ಟಿರ್ಪ ಪದದೊ ಳೆವಳಡಿಯಿಂ ಬಿ ॥
ಟ್ಟಿನುಪಮಮಣಿಮಂಜೀರಕ ।
ವೆನಲಿನ ನವರಾದ್ರಿಶಿಖರಶೇಖರ ನಾವಂ ॥ ೯೭ ॥

ಚಂ॥ ಕಮಳಿನಿಯಂ ವಿಯೋಗಿನಿಯ ನೀಕ್ಷಿಸಿ ಮತ್ತೆ ಬೃಹದ್ವಿಯೋಗವೇ ।
ಗಮು ನೊಳಕೊಳ್ಗು ವಿಾಗಳೆ ಮದಾಗಮನೋತ್ಸವಮಂ ನಿವೇದಿಸೆಂ ॥
ದಮೃತಮರೀಚಿ ಪೇೞ್ದು ನಿಜದೂತಿಯ ನುತ್ಪಳಲಕ್ಷ್ಮಗಟ್ಟಿದಂ ।
ತಮುರ್ದೆಸೆದಿರ್ದ ಸಂಜೆ ವರಿರಂಜಿಸುತಿರ್ದುದಪೂರ್ವಶೋಭೆಯಿಂ ॥ ೯೮ ॥

ಮ॥ ಇನ ನಿನ್ನಾಸೆಯ ನೊಲ್ಲದೀಗಳಪರಾಶಾಯೋಷಿದಾಸಕ್ತನಾ ।
ದ ನವಂ ಸಂಚಳ ನಿನ್ನ ಪಕ್ಕದೊಳಗಿರ್ದುಂ ಸಯ್ತಿರಂ ಪೋಗಿ ಪ ॥
ದ್ಮಿನಿಯಂ ಪೊರ್ದುವೆ ನೆಂದು ನೊಂದು ಹರಿದಿಕ್ಕಾಂತಾನನಂ ಕಂದಿತೆಂ ।
ಬಿನೆಗಂ ಮರ್ಬು ಪೊದೞ್ದಿ ಪರ್ವಿದು ದಗುರ್ವಿಂ ಪೂರ್ವದಿಗ್ಭಾಗಮುಂ ॥ ೯೯ ॥

ಕಂ॥ ಕಾಲಿಂದಿಯ ನಮರಾಪಗೆ ।
ನೀಲಾದ್ರಿಯ ನಾಹರಾದ್ರಿ ಯಸಿತಾಬ್ಜಿನಿಯಂ ॥
ಪೋಲೆ ಸಿತಾಬ್ಜಿನಿ ಪೋಲ್ತಿರೆ ।
ಕಾಲದಮರ್ವುರ್ವಿ ಪರ್ವಿತುರ್ವಿತಲಮುಂ ॥ ೧೦೦ ॥

ವ॥ ಅಲ್ಲಿ.

ಮ॥ ದೆನೆಯಂ ನೋಡದಿರಕ್ಕ ನಿನ್ನ ಧವಳಾಪಾಂಗಂ ಪೊದಟ್ಟಿಪ್ಪುದಿ ।
ನ್ನುಸಿರಲ್ವೇಡೆಲೆ ಮುಗ್ಧೆ ನಿನ್ನದಶನಾಂಶುಜ್ಯೋತ್ಸ್ನೆ ನೀಳ್ದಪ್ಪುದೆಂ ॥
ದು ಸಮಾಲಿಂಗಿತಮೌನಿವಾಡಿ ಸಖಿಯಂ ಸಂಕೇತಸದ್ಮಕ್ಕೆ ಪ ।
ಳ್ಳಿಸರಂದೋಲಿಪಿತೆ ಮುಂತೆವುಮುಂತೆ ನಡೆದೊಯ್ದಳ್ ದೂತಿ ಚಾತುರ್ಯದಿಂ ॥ ೧೦೧ ॥

ಕಂ॥ ಇದು ಸಾಂಧ್ಯತಾಂಡವಾರಂ ।
ಭದೊಳೀಶ್ವರಬಾಹುನರ್ತನಕ್ಷೋವದೊಳು ॥
ಣ್ಮಿದ ಪುಷ್ಪಾಂಜಳಿ ಯೆನಲೇ ।
ನುದಯಿಸಿದುದೊ ಗಗನದೊಳಗೆ ತಾರಾನಿಕರಂ ॥ ೧೦೨ ॥

ಇನಿ[ಸಿನಿ]ಸಂ ತವುದೊಡ್ಡೊ ।
ಯ್ಯನೆ ತಾನೊರಸಿತಮು[ರೇಶ್ವ]ರಾಶಾವನಿತಾ ॥
ನನಮಿನಿಸಿನಿಸಂ ಬೆಳ್ಪಂ ।
ಜನಿಯಿಸಿದುದಯಾದ್ರಿಯಂ ಸುಧಾಕರ ನಡರ್ದಂ ॥ ೧೦೩ ॥

ವ॥ ಆಪ್ರಸಸ್ತಾವದೊಳ್.

ಮ॥ ಅವುರಾಧೀಶ್ವರಗಂಧಸಿಂಧುರ ಶಿರಸ್ಸಿಂಧೂರವಿಂದ್ರಾಲಯಾ ।
ಗ್ರಿಯಲೀಲಾರುಣನೂತ್ನರತ್ನ ಕಳಶಂ ಜಂಭಾರಿಶುಂಭತ್ಸರಾ ॥
ಗವಯ್ಯೈಕಾತಪವಾರಣಂ ಶತಮಖಶ್ರೀವಕ್ತ್ರಕಾಶ್ಮೀರರಾ ।
ಗ ವಿದೆಂಬೀಟಿಶ್ಲಿಯ ನಾಂತು ರಕ್ತರುಚಿಯಿಂ ಚೆಲ್ವಾಯ್ತು ಚಂದ್ರೋದಯಂ ॥ ೧೦೪ ॥

ವ॥ ಆದಲ್ಲದೆಯುಂ.

ಮ॥ ಅನಿಮೇಷಧ್ವಜವಶ್ಯಯಂತ್ರವಳಯಂ ಕಂದರ್ಪಶೌರ್ಯಪ್ರಶ ।
ಸ್ತಿನಿಯುಕ್ತಸ್ಥಿತಶಾಸನೈಕಫಳ(ಕಂ) ಪುಷ್ಪಾಸ್ತ್ರಕೇಳೀಲತಾ ॥
ವನವುಷ್ಪಸ್ತಬಕಂ ಮನೋಜವಿಜಯಪ್ರಸ್ಥಾನವಾಂಗಲ್ಯಪಾ ।
ವನವುಣ್ಯಾವೃತಕುಂಭ ವೆಂಬೆಸಕಮಂ ತಾಳ್ದಿತ್ತು ಚೆಲ್ವಿಂದುವಾ ॥ ೧೦೫ ॥

ಮಾ। ಸ್ರ॥ ಗಗನಂ ತೀವಲ್ಕೆ ಮೇಣೊರ್ವಿದುದೊ ತುಹಿನಕೃದ್ಬಿಂಬ ವಾಶಾಂತಮುಂ ಕೆ ।
ಯ್ಮಿಗೆ ಮೇಣ್‌ದುಗ್ಧಾಬ್ಧಿ ಬೆಳ್ಳಂಗೆಡೆದು ಕವಿದುದೋ ಲೀಲೆಯಂ ತಾಳ್ದಿಮೇಣೀ ॥
ಜಗಮುಂ ಶ್ರೀಶಾಂತಿವರ್ಮ ಪ್ರಥಿತಯಶಮೆ ತಾಳ್ದಿರ್ದುದೋ ಪೇಟಿರಿ ಮೆಂಬ ।
ನ್ನೆಗ ಮುರ್ವೀಚಕ್ರಮುಂ ಕಣ್ಗೊಳಿಸಿದುದು ಲಸಚ್ಚಂದ್ರಿಕಾಶ್ರೀವಿಳಾಸಂ ॥ ೧೦೬ ॥

ವ॥ ಆಗಳೊಲಗಮುಂ ವಿಸರ್ಜಿಸಿ ಸಂಧ್ಯಾಸಮಯಸಮುಚಿತನಿತ್ಯನಿಯಮಮುಮಂ ನಿರ್ವರ್ತಿಸಿ ಪ್ರಭುಗುಣಾರ್ಣವಪೂರ್ಣಚಂದ್ರಂ ಚಂದ್ರಿಕಾಶ್ರೀಯಂ ನೋಡಿ ಪುರಮುಂ ತೊಟಿಲ್ದು ನೋಡುವ ಖಗೆಯಿಂ ನಾಗರಿಕವಿಟವಿದೂಷಕಾದಿಗಳ್ವೆರಸು ರಾಜಭವನಮುಂ ಪೊಱಮಟ್ಟು.

ಕಂ॥ ಅಂಗಜನಿಭ ನೆಯ್ದಿದ ನರ।
ನಂ ಗಣಿಕಾವಾಟಮಂ ವಿಟೀವಿಟಜನತಾ ॥
ಸಂಗತಮಧುರವಚಸ್ತ ಬ।
ಕಂಗಳನಾತ್ಮೀಯ ಕರ್ಣಪೂರಂಮಾಡಲ್ ॥ ೧೦೬ ॥

ವ॥ ಆಪ್ರಸನ್ನಾವದೊಳ್.

ಮು। ಸ್ರ॥ ಲಳನಾಥಮಿಲ್ಲಮಾಲಾಕುಸುಮಪರಿಮಳಾವೋದಿ ಕಂದರ್ಪಕೇಳೀ।
ಚಳಿತಸ್ತ್ರೀಪುಂಸಘರ್ಮೋದಕಲವಕಿಕಿರಂ ಸೌಧವಾತಾಯನಪ್ರೋ ॥
ಚ್ಚಳಿತೋದ್ಯದ್ಧೂಪಧೂಮಪ್ರಬಳವಿಲುಳಿತಶ್ಯಾಮಳಾಲೀಲೆಯಿಂದಂ।
ಸುಭಗುಂ ಸೌಭಾಗ್ಯಘಂಟಾರವಮುಖರಿತಮಂದಪ್ರಚಾರಂ ಸವಿಸ್ತಾರಂ ॥ ೧೦೪ ॥

ಮು॥ ವನಿತಾನೂಪುರಜಾಲಚಾರುನಿನದಂ ಸೌಭಾಗ್ಯಘಂಟಾಚಳ।
ನ್ನಿನದಂ ಪಂಜರಕೀರಮಂಜುನಿನದಂ ಕಾಂಚೀಕನತ್ಕಿಂಕಿಣೀ ॥
ನಿನದಂ ರಂಜಿತಗೀತವಾದ್ಯನಿನದಂ ಮಾಧುರ್ಯವೀಣಾಲಸ।
ನ್ನಿನದಂ ಪೊಂಪುವಿಶೇಷಯಾದುದಚ್ಚರಿ ಯೆನಲ್ ವೇಶ್ಯಾಲಯಾನೀಕದೊಳ್ ॥ ೧೦೫ ॥

ವ॥ ಅಂತು ಮನೋಜರಾಜಲೀಲಾಕರಸೌಧಕೂಟದೊಳ್ ಬಪರ್ಗಳ್ ವಿವಿಧವಿಚಿತ್ರಭಿತ್ತಿ ಸಂಪತ್ತಿರಮ್ಯಹರ್ಮ್ಯತಳಖಚಿತಮರಕತಕುಟ್ಟಿಮಪರ್ಯಂಗಣವಿರಚಿತಮತ್ತವಾರಣಂಗಳಂ ನೆಮ್ಮಿ.

ಚಂ॥ ಚಳನನಿತಂಬಬಿಂಬಕುಚಕರ್ಣಕಪೋಲಲಲಾಟದೇಶದೊಳ್।
ತೊಳಗಿ ಪಿನದ್ಧನೂತ್ನಮಣಿನೂಪುರಕಾಂಚನಸೂತ್ರಹಾರಮುಂ ॥
ಡಳಮಕರಾಂಕಪತ್ರತಿಳಕಾವಳಿಗಳ್ ವಿಟಕೋಟಿಯುಂ ಪಳಂ।
ಚಲೆಯೆ ವಿಳಾಸಮುಂ ತಳೆದು ದೊತ್ತಿಗೆ ನಿಂದ ವಿಳಾಸಿನೀಜನಂ ॥ ೧೦೦ ॥

ಮು॥ ವನಜಾತಾನನೆ ಪೇಟಿಂ ಸುಧಾಂಶುಯಶ ಕೇಳ್ ಹಂಸಾಂಗನಾಯಾನೆ ಪೇಟಿಂ।
ಘನನಾದಾನ್ವಿತ ಕೇಳ್ ಮದದ್ವಿರದಕುಂಭೋರೋಜೆ ಪೇಟಿಂ ಸಿಂಹಶೌ ॥
ರ್ಯನಿಭಾ ಕೇಳಳಿಮಾಳಿಕಾಕಬರಿ ಪೇಟಿಂ ಸಚ್ಚಂಪಕಾವೋದ ಕೇ।
ಳೆನಲಾ ಕಾಂತೆಯ ನಂತೆ ಬಿಟ್ಟ ನದ ನಿನ್ನೇನೆಂಬೆ ನಾಶ್ಚರ್ಯಮುಂ ॥ ೧೦೧ ॥

ವ॥ ಮತ್ತವೊಂದೆಡೆಯೊ ಳೊರ್ವಂ ತನ್ನ ಕೆಳದಿಗಿಂತೆಂದಂ.

ಚಂ॥ ಅರಸನೆನೆ ರಂಜದಾನೆ ಹರಿದೆಯ್ದಿದೊಡಾಗಳೆ ನೂಂಕುತಿರ್ದು ವಾ।
ತುರಗಮು ನಕ್ಕೆ ಸೈರಿಸದೆ ಹೆಗ್ಗಡೆಗಂಜಿರೆ ಮನ್ಮನೋರಥಂ ॥
ವಿರಥಮು ನೆಯ್ದುಲಾಂ (ದ್ವಿವೆ.) ದೆಯ್ದಿದೆ ನಾಚತುರಂಗಯುಕ್ತಿ ಬೇ।
ರ್ವರಿದಿರೆ ಪೆಂಡಿರೊಲ್ದೊಲವನೇಱಿಸು ವಾತನೆ ಗಾಂಪ ನಲ್ಲನೇ ॥ ೧೦೭ ॥

ವ॥ ಮತ್ತವೊಂದೆಡೆಯೊಳೊರ್ವಳ್.

ಮ॥ ಇನಿಯಂ ಮೆಲ್ಲನೆ ತೂಗೆ ಬಣ್ಣಿಸೆ ಜನಂ ತನ್ನಂ ಮನೋರಾಗದಿಂ ।
ಕನಕಾಂದೋಳಮು ನೀಲಿ ಮನ್ಮಥನುರ್ಜ್ಯಾರಾವಮಂ ಪೋಲ್ತು ಗೀ ॥
ತನಿನಾದಂ ಬಗೆಗೊಂಡು ಕಾಮುಕಜನ ಪ್ರಕ್ಷೋಭಮಂ ಮಾಡೆ ಕಾ ।
ಮಿನಿ ಯೊರ್ವಳ್ ಪ್ರಭುಶಾಂತಿವರ್ಮನ ಯಶ್ರಶ್ಮೀಲೀಲೆಯಂ ಪಾಡಿದಳ್ ॥ ೧೧೩ ॥

ವ॥ ಮತ್ತಮೊಂದೆಡೆಯೊಳವಿರಳಕುಸುಮಮಾಳಾನಿಚಯರಚಿತ ವಿವಿಧಮಣಿಗಣ ಖಚಿತವಿಚಿತ್ರಚೀನಾಂಬರಾಡಂಬರಲೀಲಾಂದೋಳಕೇಳಿಯೊಳ್.

ಚಂ॥ ಪದಕೊರಲೊಳ್ಪು ಕಣ್ಣರಿವು ಕಿತ್ತು ಕೊದಳ್ಗವುಕಂ ನಯಂ ಬೆಡಂ ।
ಗೊದವೆ ಮಜ್ಜಿಲ್ದು ವಾರವಧು ವಾರವಧೂತ್ತಮೆ ಪಾಡಿದಳ್ ವಿಳಾ ॥
ಸದೆ ತೆರೆಯಲ್ಕೆ ಮೇಲುದಲೆದೆತ್ತಿದ ಸುತ್ತಿದ ಸೀಯನಪ್ಪ ಗೇ ।
ಯದ ಪೊಸಬಣ್ಣದೊಳ್ ಸೊಬಗೆ ಶಾಂತನ ನೂರ್ಜಿತ ಕೀರ್ತಿಕಾಂತನಂ ॥ ೧೧೪ ॥

ವ॥ ಮತ್ತಮೊರ್ವಳ್ ತನ್ನಿನಿಯಂ ತಡೆದು ಬಂದುದರ್ಕೀವಯ್ದಿ.

ಕಂ॥ ಮಾಣ್ಬಕ್ಕನೆ ನೀನವಳೊಳ್ ।
ಕಣ್ಬಲ್ಲದೆ ಪೋಗಿ ನೆರೆದು ಮೆಲ್ಲನೆ ಬಂದೈ ॥
ನಾಣ್ಬುವೆ ಯಲ್ಲೆನುತಂ ಕಿಸು ।
ಗಣ್ಬೆ ಸರೋಜಾಕ್ಷಿ ಬಡಿದಳಾತ್ಮಪ್ರಿಯನಂ ॥ ೧೧೫ ॥

ಪೋಗದೆ ತಡೆದಿರ್ದಗಣಿತ ।
ಭೋಗಾಮರ ಭಾನುಮತಿಯವದಹತದೊಳ್ ಪ ॥
ಕ್ಕಾಗದೆ ನೀಂ ನೃಪ ನೆಬ್ಜಿಗೆ ।
ಪೋಗೆಂದೆಂಬಂತೆ ಘಟಿಗೆ ಮೊಲಿಗಿತ್ತಾಗಳ್ ॥ ೧೧೬ ॥

ವ॥ ಅಂತು ರಾತ್ರಿ ಸಂಭೋಗಸ್ವೀಕೃತಮನೋರಾಗನು ಮಾಗಿ.

ಮ॥ ಮನವೊಲ್ದಾನಿರೆ ತಾರಕಾನಿಕರದೊಳ್ ಕೂಡಿರ್ದೆ ನೀನೆಂದು ಯಾ ।
ಮಿನಿ ಮೆಯ್ವೆರ್ಚಿದ ಕೋವದಿಂ ವಿಕಳಭಾಷಾವೇಷ ಮುಣ್ಮಲ್ಕೆ ಪೋ ॥
ಗೆ ನತಾಸ್ಯಂ ವಿಗತಾಂಬರಂ ಶಶಿ ವಿಕಾಸಂಗೆಟ್ಟು ಬೆಂಬಿಟ್ಟು ಪೋ ॥
ದನದೇಂ ಚೋದ್ಯವೊ ನೋಟಿಸ್ಪೊಡಂತುಟಿ ವಿಯೋಗೋದ್ಯೋಗಮೇಗೆಯ್ಯದೋ ॥೧೧೭॥

ಚಂ॥ ಹಿಮರುಚಿ ರಾಗದಿಂ ನೆರೆದು ಸತ್ಪಥಲಕ್ಷ್ಮಿಯ ನಸ್ತಶೈಲದೊಳ್ ।
ಸಮರತದಿಂ ಬಿಟಲ್ದೊರಗಲಾಕೆಯೆ ಮೆಯ್ವಿಡಿದಾಲಿಂತಿರ್ಪ ಮೆ ॥
ಯ್ವಿಮುರ್ವನಿಯಂತೆ ಬಾಂದೊಳಿಸಿಯೊಳೊಂದೆರಡಿರ್ದುವು ತಾರೆ ಬಿಟ್ಟಿ ಕುಂ ।
ಕುಮರುಚಿರಾಂಬರಂಬೊಲೆನೆದಿರ್ದುದು ಪೂರ್ವದಿಶಾರುಣಾಂಬರಂ ॥ ೧೧೮ ॥

ವ॥ ತದನಂತರಂ.

ಕಂ॥ ಜಳಜಭವಂ ಮಾನಸುರಾ ।
ಚಳದ ಸುರಾಚಳದ ಮೈಮೆಯಂ ತೂಗೆ ಸುರಾ ॥
ಚಳದಡರ್ದ ಕೊಱುತೆ ಗಿಕ್ಕಿದ ।
ತೊಳಗುವ ಗುಂಜೆ ಯೆನೆ ರಂಜಿಸಿದ ನುದಯಾರ್ಕಂ ॥ ೧೧೯ ॥

ವ॥ ಆಗಳ್ ನಿರ್ವರ್ತಿತನಿತ್ಯನಿಯಮನುಂ, ಕೃತದೇವತಾರ್ಚನನು ಮಾಗಿ ಮಹಾಪದ್ಮ ನಾ ಸ್ಥಾನಮಂಟಪಮೊಳಿರ್ದುದುಂ ಋಷಿನಿವೇದಕ ನೊರ್ವಂ ಪರಿತಂದು ನಿಟಿಳತಟಘಟಿತಕರಸರೋಜ ನಾಗಿ ಸಾಷ್ಟಾಂಗವೆಱಗಿ ಪೊಡೆವಟ್ಟು ದೇವ ನಿಮ್ಮ ಬಹಿರುದ್ಯಾನದೊಳ್ ಭೂತಹಿತಜಿನರ್ ಬಿಜಯಂ ಗೆಯ್ದರೆಂದು ಬಿನ್ನಪಂಗೆಯ್ಯಲವರಿರ್ದ ದೆಸೆಗೇಱಿಡಿಯಂ ನಡೆದು ಸಾಷ್ಟಾಂಗಪ್ರಣತ ನಾಗಿ ಋಷಿನಿ ವೇದಕಂ ಗಂಗಚಿತ್ತಮುಂ ಕೂಟ್ಟು ಸನ್ನಾಹಭೇರಿಯಂ ಪೊಯ್ಸಿ.

ಮ॥ ಧರಣೀಶಸ್ತ್ರಸಮಸ್ತಮುಂ ಬಳಿಕದಂಡಾಧೀಶಸಾಮಂತಸಾ ।
ಹ್ಮರಪೌರೋಹಿತಪೆಂಡವಾಸಲಲನಾಶುದ್ಧಾಂತಕಾಂತಾಲಸ ॥
ತ್ಪರಿವಾರಂ ಬೆರಸರ್ಚನಾವಳಿಸಮೇತಂ ನೂತನಾನಂದದಿಂ ।
ನರನಾಥಂ ಪೊಱಮಟ್ಟ ನಂದು ಪದೆಪಿಂ ಶ್ರೀಭವ್ಯರತ್ನಾರ್ಣವಂ ॥ ೧೨೦ ॥

ಗದ್ಯಂ

ಇದು ಸಮಸ್ತಭುವನಸಂಸ್ತುತಜಿನಾಗಮಕುಮುದ್ವತೀ
ಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿಕಮಳಗರ್ಭ
ಮುನೀಂದ್ರಪಂಡಿತದೇವ
ಸುವ್ಯಕ್ತಸೂಕ್ತಿ ಚಂದ್ರಿಕಾಪಾನಪರಿಪುಷ್ಟಮಾನಸಮರಾಳ
ಗುಣವರ್ಮನಿರ್ಮಿತಮುಪ್ಪ
ಪುಷ್ಪದಂತ ಪುರಾಣದೊಳ್
ಜಳಕೇಳೀವರ್ಣನಂ
ಅಷ್ಟಮಾಶ್ವಾಸಂ

ಶ್ರೀ

ಪುಷ್ಪದಂತ ಪುರಾಣಂ

ನವಮಾಶ್ವಾಸಂ.

ಕಂ॥ ಶ್ರೀನಿರತಿಶಯಗಭೀರನಿ !
ನಾದಂ ಸೌಜನ್ಯಮಂಡನಂ ಜಿನನಿರ್ದು ॥
ದ್ಯಾನವನ ಕ್ಕೆಯ್ತುಂದಂ ।
ಮಾನಧನಂ ಪ್ರಭುಗುಣಾಬ್ಧಿವನಕಳಹಂಸಂ ॥ ೧ ॥

ವ॥ ಅಂತು ಬಂದು.

ಬಲಗೊಂಡ ನಮರನಗಮಂ ।
ಬಲಗೊಳ್ವಿನನಂತಗಣ್ಯಪುಣ್ಯಾವಸಥಂ ॥
ಬಲರಿಪುಪರಿಪೂಜಿತಜಿನ ।
ನಿಲಯಮು ನನುನಯದಿ ನೆನೆವ ಭವ್ಯೋತ್ತಮು(ಮಂ) ॥ ೨ ॥

ವ॥ ಅಂತು ಬಲಗೊಂಡೊಳಗಂಪೊಕ್ಕು ಪ್ರಗಲ್ಭನಿರ್ಭರಭಕ್ತಿಯಿಂ ನಿಟಿಳತಟಘಟಿತಕರ ಸರೋಜ ನಾಗಿ.

ಚಂ॥ ಅತನುಮುದಪ್ರಭಂಜನ ಜನಸ್ತುತಸೂಕ್ತಿನಿವಾಸ ವಾಸವಾ ।
ರ್ಚಿತಪದವದ್ಮ ಪದ್ಮಸದನಾಸ್ಪದವಿಕ್ರಮ ವಿಕ್ರಮಾಂಗಜ ॥
ಕ್ಷಿತಿಧರವಜ್ರ ವಜ್ರಿರಚಿತಪ್ರಥಿತಾಯತತೂರ್ಯಘೋಷ ಘೋ ।
ಷಿತನವತತ್ವ ತತ್ವರಸವಾರಿದಿ [1]ನೀನೆ ವಲಂ ಜಿನೇಶ್ವರಾ ॥ ೩ ॥

ಮ॥ ಸಕಳಜ್ಞಾನಸುಖೈಕಮೂರ್ತಿ ಜಿನ ನಿನ್ನಂ ಕೀರ್ತಿಸಲ್ ನಾಕನಾ ।
ಯಕರಂ ಶಕ್ತಿವಿಮುಕ್ತರಾದರದಱಿಂ ದಾವೇವೆ ವೆಂಬೀನಿರ ॥
ರ್ಥಕವಾಗ್ವಾಣಿಕೆವೇಡೆ ಪೂರ್ಣ ಮತಿವಿಸ್ತೀರ್ಣಂ ಪ್ರಸನ್ನಂ ಯಶೋ ।
ಧಿಕ ಮಾಗಿರ್ದೊಡೆ ಮಬ್ಧಿಗೇವಿರಿದೊ ಪೆಂಪಿಂ ಪೇಟಿಸ್ ಸರೋಜಾಕರಂ ॥ ೪ ॥

ವ॥ ಎಂದಿವುಮೊದಲಾದನೇಕವಸ್ತುಸ್ತವಗುಣಸ್ತವರೂಪಸ್ತವಂಗಳಿಂ ಜಗತ್ಪ್ರಣೂತಭೂತಹಿತ ಜಿನರಂ ಸ್ತುತಿಯಿಸಿ ಪೊಡವಟ್ಟು ತದನಂತರಂ.

ರಗಳೆ॥ ಶ್ರೀಕನಕಕಲಶಭೃತನಿರ್ಮಳಜಲಂಗಳಿಂ ।
ಹಿಮಪುಷ್ಪಸೃಣಸಂಮಿಶ್ರನುಳಯಜರಸಂಗಳಿಂ ।
ಸುರಭಿಪರಿಮಳವಿರಳಕಳಮಾಹೃತಂಗಳಿಂ ।
ಮಂದಾರಸಿಂಧುವಾರಾದಿ ಕುಸುಮಮಂಗಳಿಂ ।
ಸರಸಮೃದುಭಕ್ಷ್ಯಯುತದಿವ್ಯಚರುಕಂಗಳಿಂ ।
ಶೋಣಮಣಿಕಿರಣರುಚಿರಚಿತದೀಪಂಗಳಿಂ ।

---

[1] ವಾರ್ಧಿಯೆ.

ಕಾಳಾಗುರುಪ್ರಮುಖಧೂಪಧೂಮಂಗಳಿಂ ।
ಪನಸಾಮ್ರನಾರಂಗದಾಡಿಮಫಲಂಗಳಿಂ ।
ಮತ್ತಮೆನಿತೊಳವೆನೆವ ಬಹುವಿಧಾರ್ಚನೆಗಳಿಂ ।
ಪೂಜಿಸಿದನನಘಜಿನಪಾದಯುಗಳಂಗಳಂ ।
ಭಾರತೀಚರಣಸರಸಿರುಹಯುಗ್ಮಂಗಳಂ ।
ಜಿನಮುನಿಪದಾಂಬುಜಯುಗಂಗಳಂ ಮುಂಗಳಂ । ॥ ೫ ॥

ವ॥ ಅಂತರ್ಚಿಸಿ ಗುರುಭಕ್ತಿಪೂರ್ವಕಂ ಪಂಚಮುಷ್ಟಿಯಿಂ ವಂದಿಸುವುದುಂ.

ಕಂ॥ ಕಾರುಣ್ಯಾಂಭೋನಿಧಿಗಂ ।
ಭೀರರವಂ ಪುದಿದುದೆನಿಸಿ ರಾರಾಜಿಸಿದ ॥
ತ್ಪಾರಾಜಸಭೆಗೆ ನಿರುಪಮ ।
ಸೂರಿಜನಂ ಪರಸೆ ಧರ್ಮವೃದ್ಧಿಯ ಘೋಷಂ ॥ ೬ ॥

ವ॥ ಅಂತು ಪರಸುವುದುಂ–ಮಹಾಪದ್ಮರಾಜಂ ಪರಮಾನಂದಮುಂ ಪಡೆವಂತೆ ಪರಮಾನಂದ ಪರಂಪರೆಯ ನಿಯ್ದಿ ಸಮುಚಿತಾಸನದೊಳ್ ಕುಳ್ಳಿರ್ಪುದುಂ, ಅವರ್ ಸದ್ಧರ್ಮಸ್ವರೂಪಮುಂ ಸಂಕ್ಷಿಪ್ತಮುದಿತ ನತ್ಯಾಸನ್ನಭವ್ಯ ನೆಂಬುದ ನಗಾಥಕೇವಳೆಬೋಧದಿಂದಱಿದು ಪಂಚಾಸ್ತಿಕಾಯ ಷಡ್ದ್ರವ್ಯಸಪ್ತತತ್ವ ನವಪದಾರ್ಥ ಸ್ವರೂಪಮುಂ ನಿರೂಪಿಸುವುದುಂ ಕೇಳ್ದು ತತ್ವಭಾವನೆಯಂ ಪರಿಭಾವಿಸುತ್ತು ಮಿರಲದುವೆ ವೈರಾಗ್ಯಹೇತುವಾಗೆ ಸಂಸಾರಶರೀರಭೋಗವಿರಕ್ತ ನಾಗಿ ತನ್ನ ರಾಜ್ಯಮುಂ ಧನದೇವಂಗೆಕೊಟ್ಟು.

ಕಂ॥ ಒಡಲಂ ಸಂಸೃತಿಲತಿಕೆಯ ।
ಮುಡಲಂ ಸಂಸಾರದುಃಖಲಹರಿಕೆಗಳ ಪೆ ॥
ರ್ಗ್ಗಡಲಂ ಸುಖಮುಖನಿದ್ರೆಯ ।
ವೊಡಲಂ ಬಿಡಲರಿಯದಂಗೆ ನಿರ್ವೃತಿ ಯುಂಟೇ ॥ ೭ ॥

ವ॥ ಎಂದು ಸಂಸಾರಭೀರುತ್ವದಿಂ ಸಂಸಾರಭೀರುಗಳು ಮುಪ್ಪ ಸಾಸಿರ್ವರರಸುಮುಕ್ಕಳ್ವೆಸು ದೀಕ್ಷೆಯಂ ಕೆಯ್ಕೊಂಡು.

ಮ॥ ಜಿನನಂ ನಮ್ರಸುರಾಸುರೇಂದ್ರಜನನಂ ದುರ್ವಾರಮಾರಪ್ರಭಂ ।
ಜನನಂ ಶಾಶ್ವತನಿಶ್ವತತ್ವಮನನಂ ಮಾಂಗಲ್ಯಕೈವಲ್ಯಲೋ ॥
ಚನನಂ ಸದ್ವಿನತೋವಶಾಂತಮನನಂ ಮುಕ್ತ್ಯಂಗನಾಲೋಚನಾಂ ।
ಜನನಂ ತಾಳ್ದಿದ ನಾತ್ಮಹೈತ್ಯಮಳದೊಳ್ ಯೋಗೀಂದ್ರವೃಂದಾರಕಂ ॥ ೮ ॥

ಕಂ॥ ನೆಲಿ೨ ನೃಪತಿ ದೀಕ್ಷೆಗೊಂಡೊಡೆ ।
ಬಲಿ೨ಗೊಂಡಂ ಗೂಡುಗೊಂಡ ನಾರ್ತಂಗೊಂಡಂ ॥
ಮಲಿ೨ಗೊಂಡ ನೊತ್ತುಗೊಂಡಂ ।
ಪೆಲಿತೇಂ ಸ್ಮರ ನಸ್ತಕಾಂಡ ನಪಕೋದಂಡಂ ॥ ೯ ॥

ವ॥ ಅಂತು ದೀಕ್ಷೆಯಂ ಕೆಯ್ಕೊಂಡು ಗ್ರಾಮನಗರಖೇಡಖರ್ವಡೆಮಡಂಬಾದಿಗಳಂ ವಿಹರಿಸುತ್ತುಂ ಚಿರಕಾಲ ಮಿರ್ದು ಯೀಕಾದಶಾಂಗಧರಂ ಷೋಡಶಭಾವನೆಗಳಿಂ ತೀರ್ಥಕರಪುಣ್ಯಮುಂ ಕಟ್ಟಿ ತದನಂತರದೊಳಾರಾಧನಾವಿಧಿಯಿಂ ಮುಡಿಪಿ ವಿಂಶತಿಸಾಗರೋಪಮಾನಾಯುಷ್ಯನುಂ ಮೂಱುವೊಱನರೆನಿಡಿಯನು ವಾಗಿ.

ಕಂ॥ ಪ್ರಾಣತಕಲ್ಪದೊಳೆತ್ತುಳ ।
ಪ್ರಾಣತಸುರರಾಜ ನಾಗಿ ಪಂಚಮಪೃಥ್ವೀ ॥
ಪ್ರಾಣಾವಧಿಬೋಧದಿ ನ ।
ಕ್ಷೀಣತರಾರಣವಿಮಾನದೊಳ್ ಸುಖಮಿರ್ದಂ ॥ ೧೦ ॥

ವ॥ ಅನ್ನೆಗ ಮಿತ್ತಲ್ ಜಂಬೂದ್ವೀಪಲಕ್ಷ್ಮಿಗೆ ವಿಲಾಸೋಪಕರಣ ಮೆನಿಸಿರ್ದ.

ಮ॥ ಸದಯಾರತ್ನಕರಂಡದೊಳ್ ಭರತಧಾತ್ರೀಖಂಡದೊಳ್ ರಂಜಿಸಿ ।
ರ್ಪುದು ಕಾಶೀವಿಷಯಂ ಮನೋಜವಿಷಯಾರಣ್ಯಂ ಜಗತ್ಕಾಮ್ಯ ಮುಂ ॥
ತದು ಪೃಥ್ವೀತಿಳಕಂ ಕ್ಷಮಾಕಟಕ ಮುರ್ವೀಕಾಂಚಿ ವಿಶ್ವಂಭರಾ ।
ವಿದಿತೋತ್ತಂಸ ಮಿಳಾವತಂಸ ಮವನೀಹಾರಂ ಮಹೀನೂಪುರಂ ॥ ೧೧ ॥

ಮಾ॥ ನವರತ್ನೋತ್ಪತ್ತಿಯಿಂ ಬೆಟ್ಟುಗ ಳಖಿಳಕುಜೋತ್ಪತ್ತಿಯಿಂ ಕಾಡುಗಳ್ ಕೈ ।
ರವಕಂಜೋತ್ಪತ್ತಿಯಿಂ ಸಿಂಧುಗ ಳನಘಜನೋತ್ಪತ್ತಿಯಿಂ ದುರ್ಗ ಳಂಗೋ ॥
ದ್ಭವಬೀಜೋತ್ಪತ್ತಿಯಿಂ ಭೋಗಿಗ ಳಖಿಳಫಲೋತ್ಪತ್ತಿಯಿಂ ಕೆಯ್ವೊಲಂಗಳ್ ।
ಧ್ರುವಸತ್ಯೋದ್ಭತ್ತಿಯಿಂ ಕ್ಷತ್ರಿಯರೆಸೆದು ಸುಖೋತ್ಪತ್ತಿಯುಂ ಬೀಱುತಿರ್ಪುರ್ ॥ ೧೨ ॥

ಕಂ॥ ಪ್ರಕಟಿಸುವು ವಖಿಳಧಾನ್ಯ ।
ಪ್ರಕರಂಗಳ್ ಕೆಲದ ಪೊಲದ ಸಿರಿಯಂ ಜನತಾ ॥
ಸುಕೃತಂ ಬೆಳೆವಂತಿರೆ ಬೆಳೆ ।
ದಕೃಷ್ಟಪಚ್ಯಂಗ ಳತುಳಫಲೆರುಚ್ಯಂಗಳ್ ॥ ೧೩ ॥

ಚಂ॥ ಕಳಮವನಕ್ಕೆ ಬಂದೆಱಪ ಕೀರದೆಱಂಕೆಯ ಗಾಳಿಯಿಂ ಶ್ರಮಂ ।
ಗಳೆದಪೆ ವೆಂದು ನಿಂದು ನಿವದಿಂ ಪಥಿಕರ್ ಗಿಳಿಸೋವ ಪಾಮರೀ ॥
ಕುಳಮು ನಗಲ್ದು ಪೋಗಲಣ ಮಾಱುದೆ ಸೋಲ್ತೆಳಿಸರ್ಪ ರಾಲಸ ।
ಲ್ಲಳನೆಯ ರಂಗಮೇಂ ಸ್ಮರವಿಳಾಸಕಳಾಪಮೊ ವಜ್ರಲೇಪಮೋ ॥ ೧೪ ॥

ವ॥ ಮತ್ತ ಮಲ್ಲಿ.

ಮಾ॥ ಸಕಳೋದ್ಯಾನಂಗಳೊಳ್ ಸಂತತಸರಸಫಳವ್ರಾತದಿಂ ಸೇವ್ಯ ಮುಲ್ಲ ।
ಲ್ಲಿ ಕರಂ ಖರ್ಜೂರವೃಂದಂ ಕ್ರಮುಕಸಮಿತಿ ನೀಪವ್ರಜಂ ಬೀಜಪೂರ ॥
ಪ್ರಕರಂ ನಾರಂಗಸಂಘಂ ಕದಳಿಸಮುದಯಂ ನಾಳಿಕೇರಾವನೀಭೂ ।
ನಿಕರಂ ಚೂತೋತ್ಕರಂ ದಾಡಿಮತತಿ ಪನಸಶ್ರೇಣಿ ಜಂಬೀರಜಾಳಂ ॥ ೧೫ ॥

ಚಂ॥ ಎನಸು ಮಶೋಕಭಾಗಿ ವನಮುಂ ಜನಮುಂ ಸುಮನಶ್ಶಿಲೀಮುಖಾ ।
ಸನಮದನಾನುಷಂಗಿ ವನಮುಂ ಜನಮುಂ ಸುಮನೋವಿಳಾಸನೂ ॥
ತನತಿಲಕಾವಿಶೋಭಿ ವನಮುಂ ಜನಮುಂ ಕಮಳಾಕರಾವಲಂ ।
ಬನಜನಿತಾರ್ದ್ರಭಾವಮಹಿತಂ ವನಮುಂ ಜನಮುಂ ತದುರ್ವಿಯೊಳ್ ॥ ೧೬ ॥

ಚಂ॥ ನಯವಿದರೆಲ್ಲ ಮಲ್ಲಿಯೆ ಕಳಿತ್ರಾನ್ವಿತ ರಲ್ಲಿಯೆ ಪುಣ್ಯವಂತ ರ ।
ಲ್ಲಿಯೆ ಸಿರಿವಂತ ರಲ್ಲಿಯೆ ಸುರೂಪಿಗ ಳಲ್ಲಿಯೆ ದಾನಶೂರ ರ ॥
ಲ್ಲಿಯೆ ರಣಶೂರ ರಲ್ಲಿಯೆ ವಿಭೋಗಿಗ ಳಲ್ಲಿಯೆ ಚಾಗಿವೃಂದವ ।
ಲ್ಲಿಯೆ ಎನೆ ಸಾರವೆಂಬಿನಗ ಮಾಮಹಿ ಪೋಲ್ವುದು ಭೋಗಭೂಮಿಯಂ ॥ ೧೭ ॥

ವ॥ ಅಂತೆನಿಸಿ.

ಉ॥ ಕೂಡೆ ಸಮಸ್ತವಸ್ತುಶತಸಾರಸಮೃದ್ಧಿಯಿ ನೊಪ್ಪುತಿರ್ಪುದಾ ।
ನಾಡು ದಿವಕ್ಕೆ ತೋಡು ಕುಸುಮೇಷುಗೆ ಬೀಡು ವೃಷದ್ವಿಪಕ್ಕೆತಾ ॥
ಯ್ನಾಡು ನಯಕ್ಕೆ ಪಾಡು ವಿಭವಕ್ಕಮದರ್ಮಾಡು ಸುಖಾಮೃತಕ್ಕೆ ನೀ ।
ರ್ಗೊಡು ತಮಕ್ಕೆ ನೀಡು ನಯನಕ್ಕೆಳದಿಂಗಳೆ ಕಾಡಿದೆಂಬಿನಂ ॥ ೧೪ ॥

ಶಾ॥ ಆನಾಡೆಂಬ ಸರೋವರಕ್ಕೆ ವಿಕಸತ್ಪಂಕೇಜ ಮೆಂಬಂತೆ ಲ ।
ಕ್ಷ್ಮೀನೀಡಂ ಭುವನೋನ್ನತಂ ಸುವಿಧಿಜನ್ಮಾವಾಸ ಮುದ್ಯದ್ಗುಣ ॥
ಸ್ಥಾನಂ ಶಶ್ವದಿನಪ್ರತಾಪಮುದಿತಂ ದೋಷಾಕರದ್ವೇಷಿ ನಿ ।
ತ್ಯಾನಂದಂ ಕವಿರಾಜಹಂಸರುಚಿರಂ ಕಾಕಂದಿನಾವಾಸಂ ಪುರಂ ॥ ೧೯ ॥

ಹರಿಣೀ॥ ಅದಱ ಬಹಿರುದ್ಯಾನಂ ನಾನಾಕುಜಾತನಿಕೇತನಂ ।
ಮದವದಳಿನೀಗಾನಸ್ಥಾನಂ ಸದಾನಿಲವಾರಣಾ ॥
ಭ್ಯುದಯವಿಪಿನಂ ಮಲ್ಲೀವಲ್ಲೀನಟೀನಟನಾಂಗಣಂ ।
ಮದನಕದನಕ್ರೀಡಾನೀಡಂ ವಿಯೋಗಿಭಯಂಕರಂ ॥ ೨೦ ॥

ಕಂ॥ ವನರಾಶಿಯೊಳಗೆ ಬೆಳೆದೆಸೆ ।
ವನೇಕವಿದ್ರುಮದ ಲತೆಯ ಪೊಂಪುಬಿಯವೊಲಾ ॥
ವನರಾಶಿಯೊಳಗೆ ಬೆಳೆದೆಸೆ ।
ವನೇಕವಿದ್ರುಮದ ಲತೆಯ ಪೊಂಪುಬಿ ರಯ್ಯಂ ॥ ೨೧ ॥

ವ॥ ಮತ್ತಮಲ್ಲಿ ಮನಸಿಜನ ಬಿಲ್ಲ ಬೀಜದಿಂ ಬೆಳೆಯದಿಕ್ಷುದಂಡಮಿಲ್ಲ, ಪಂಚಬಾಣಕ್ಕೆ ತಕ್ಕ ಕುಸುಮಶರಮಂ ಬೆಸಲೆಯಾಗದ ಮಲ್ಲೀವಲ್ಲರಿಗಳಿಲ್ಲ, ಹರಿಸುತಂಗೆ ಗಿರಿದುರ್ಗವಾಗಿ ಪಳಿಸದ ಕೃತಕಶೈಲಮಿಲ್ಲ, ಪದ್ಮಾಸನಸರಸೀದಳನರಸುತನದಿಂದಾಕ್ರಮಿಸದಬ್ಜಿನಿಗಳಿಲ್ಲ, ದಿನಕರನ ಕರದ ಕಮಳದೊಡವುಟ್ಟದ ಕಮಳವನಂಗಳಿಲ್ಲ, ವಸಂತಸಖಿಯರ ನಖನಿಕರಮಂ ನೆನೆಯಿಸದ ಕೇದಗೆಯಿಲ್ಲ, ಪಗೆಯನೆನಸುಂ ತುಂಬಿಗಳಂ ಪಲುಂಬಿಸದ ಸಂಪಗೆಗಳಿಲ್ಲ, ಮುಂದಾರಮಹೀಜಮುಂ ನಿಂದಿಸದ ವಾಕಂದಮಿಲ್ಲ, ನನೆವಿಲ್ಲ ಪಟಿಯಿಗೆಗೆ ತಕ್ಕ ಸುಬಿಂದಳಿರ ನೊಳಪೊಯ್ದು ಮಿಸುಗದಶೋಕಮಿಲ್ಲ,

ಕಾಮುಕಾಮಿನಿಯರ ಕಡೆಗಣ್ಣ ನೋಟದಿಂ ಪುಟಿಕಿಸದ ತಿಳಕ ಮಿಲ್ಲ, ವನದೇವತಾನಯನಾಂಶು ಹ್ಲೇರರಸನಿಷೇಕದಿಂ ಮುಕ್ಕುಳಿಸದ ವಕುಳಮಿಲ್ಲ, ಮಧುವಧುವ ನಿಪ್ಪ ತಳ್ವಿನಂ ಕುಸುಮಿಸದ ಕುರವಕಂಗಳಿಲ್ಲ, ಅಗ್ನಿಶಾವವರೆಯಾಗದರ ಗಿಳಿಗಳಿಲ್ಲ, ಶಂಬರಾರಿಯು ಕರ್ವ್ವಿವಿಲ್ಲಿನ ಮೌರ್ವಿಯಾಗದಳಿವಾಲೆಯ ಝಂಕಾರಮಿಲ್ಲ, ವಿರಂಚನಂಚೆಯುಂ ವಳಂಚಲೆಯದಂಚೆ ಯಿಲ್ಲ, ಕುಮಾರನ ಮಯೂರಮುಂ ಕೂರಿಸದ ಸೋಗೆವೆಣ್ಣಿಲ್ಲ, ರತಿಯುಕೃತಕಾಚಳಂಗಳೊಪ್ಪಮು ನದಿರ್ದ ಕೃತಕಾಚಳಂಗಳಿಲ್ಲದಲ್ಲ ದೆಯುಂ.

ಕಂ॥ ಭೂರಮಣಿಯ ಶೃಂಗಾರಾ ।
ಗಾರ ಮಿದೆನೆ ವಿರಹಿಜನಕೆ ಮದನನ ಕಾರಾ ॥
ಗಾರ ಮಿದೆನೆ ಬಗೆಗೊಳ್ವುವು ।
ಹಾರಿದ್ರಕಜೀರಕಾರ್ದ್ರಕೇಕ್ಷುವನಂಗಳ್ ॥ ೨೨ ॥

ವ॥ ಮತ್ತಮುತ್ತರಳಜಳಚರಾನೀಕಂಗಳೆನಿಸುವ ತಟಾಕಂಗಳುಂ, ಸಲ್ಲಲಿತಮೃದುಮೃಣಾಳ ದಂಡೆಂಗಳೆನಿವ ಕಮಲಷಂಡೆಂಗಳುಂ, ವಿರಹಿಜನಭೀಕರಂಗ ಳೆನಿಸುವ ಕುಮುದಾಕರಂಗಳುಂ, ಅವಗಾಹಿತವಧಿಕಜನಮನಕರುಣಿಗಳೆನಿಪ ಪುಷ್ಕರಿಣಿಗಳುಂ, ವಿಮಳರತ್ನಸೋಪಾನಕಳಾಪಂಗ ಳೆನಿಪ ಕೂಪಂಗಳುಂ, ಸರಸನಾರಸಕಳಾಪಿಗಳೆನಿಪ ವಾಪಿಗಳುಂ, ವನವನಿತೆಯ ದುಕೂಲದಂಚೆ ಯೆನಿಪ ಬೆಂಚೆಗಳುಂ, ಸಂತತಸಂತೃಪ್ತಗೋಕುಲಶ್ರೇಣಿಗಳೆನಿಪ್ಪ ದ್ರೋಣಿಗಳುಂ, ಮದನರಾಜ ವಿಜಯತಂತ್ರಂಗಳೆನಿಪ ಘಟೀಯಂತ್ರಂಗಳುಂ, ನದೀಲತಾಂಗಿಯ ಮೇಗಾಲ್ಗಳೆನಿಪ್ಪ ಪರಿಕಾಲ್ಗಳುಂ, ಅನಂಗಶೃಂಗಾರಲೀಲೆಗಳೆನಿಪ್ಪ ಪಾನೀಯಶಾಲೆಗಳುಂ, ಅಧಿಕಸೌಗಂಧಕೋಟಿಗಳೆನಿಪ್ಪ ಪುಷ್ಪ ವಾಟಗಳುಂ, ಪರಿಮಳಿತಮಂದಪವನಂಗಳೆನಿಪುಪವನಂಗಳುಂ, ಪೌರಜನಮನೋಭಿರಾಮಂಗಳೆನಿಸು ವಾರಾಮಂಗಳುಂ, ಆಶ್ರಿತಜನಕ್ಕಶೋಕನಿಳಯಮೆನಿಸಿದ ಸತ್ರನಿಳಯಂಗಳುಂ, ವಿವಿಧಲೋಕವಿಶ್ರ ಮಣಸುಖಪರಿಣತಂಗಳೆನಿಪ ಬೀಡುದಾಣಂಗಳುಂ, ಸಂಚಾರಿತತುರಗವರಿಮಳಿಗಾಹ್ಯಾಳಿಗಳೆನಿವ ಬಾಹ್ಯಾಳಿಗಳುಂ, ಅನುದಿನವಿನೋದಿತಾನೇಕಕರಿಗಳೆನಿಸುವಾನೆವಜ್ಜಿಗಳುಂ, ಸತತತಾಭ್ಯಾಸನಿರತ ಜನಾನುಗಾಮಿಗಳೆನಿಪ್ಪಾಯುಧಶ್ರಮಭೂಮಿಗಳುಂ, ಬೀರಸಿರಿಯ ಬಿಂಕದ ಬಳಗಂಗಳೆನಿಸುವವಂ ಕಂಗಳುಂ, ವಿವಿಧಗೋಕುಲಶ್ರೇಷ್ಮಂಗಳೆನಿಪ ಗೋಷ್ಮಂಗಳುಂ, ತನಗನೂನಶೋಭೆಯಂ ಪಡೆಯಿ.

ಕಂ॥ ಅಪರಿಮಿತಪೌರಕಳಕಳ ।
ಮಹೀತಬಾಳಾಪ್ರಪಂಚ ಮತಿವಿಶ್ರುತ ಮಿಂ ॥
ತುಪಶಲ್ಯಂ ವಿರಹಿಗಳೆರ್ದ ।
ಗುಪಶಲ್ಯ ಮಿದೆನಿಸಿ ಸಂತತಂ ಸೊಗಯಿಸುಗುಂ ॥ ೨೩ ॥

ವ॥ ಅದಕ್ಕನತಿದೂರವಾಗಿ.

ಚಂ॥ ಜಳವಿಹಗೀಸಹಸ್ರವಿರುತಂ ಮರುತಂ ಮರುತಂಗೆ ಕಂಪನೀ ।
ವಲರ್ಗಳಿ ನೊಪ್ಪೆ ವಾತಚಳಿತಂ ಲುಳಿತಂ ವಳಿತಂಮೊಳುಣ್ಮಿ ನಿ ॥
ಚ್ಚಲು ವೆಸೆದತ್ತು ಮತ್ಸ್ಯಮಕರಂ ಸುಕರಂ ಮಕರಂದರೇಣುವಿಂ ।
ಕಲಸಿ ಮಹಾಂಬುಜಾತ ಮೆಱಿಶಿಗುಂ ನೆಱಿಶಿಗುಂ ಕಱಿಶಿಗುಂ ಸುಶೋಭೆಯಂ ॥ ೨೪ ॥

ವ॥ ಅಲ್ಲಿಂದ ಮೊಳಗೆ.

ಕಂ॥ ಏಕಾರಂ ಕಾಂಚನರಚಿ ।
ತಾಕಾರಂ ಲಬ್ಧಲಲಿತಮಣಿತತಿಶೇಷ ॥
ಸ್ವೀಕಾರಂ ಧೃತವಿತತಪ ।
ತಾಕಾರಂಜಿತವಿಯತ್ತಳಂ ಸೊಗಯಿಸುಗುಂ ॥ ೭೫ ॥

ಮ॥ ಬಲವದ್ವಜ್ರಮಹಾಕವಾಟವೆರ್ದಗಳ್ಕಾಟಂ ರಿಪುಶ್ರೇಣಿಗ ।
ಟ್ಟಲೆ[ಗಳ್ನಾಲ್ವುದು]ವೈರಿವೀರರಸಮಂ ತೂಗಲ್ ಚತುರ್ಗೋಪುರಂ ॥
ವಿಲಸನ್ನೂಪುರ ವಾಳ್ವ ಭೂಭುಜನ ವೀರಶ್ರೀಗೆ ವಂಕಂ ಯುಗ ।
ಪ್ರಲಯಾತಂಕ ಮರಾತಿಗಳ್ಗೆನಿಸಿಜೆಲ್ವಾಕೋಟಿ ಸಂಗೀಕೃತಂ ॥ ೭೬ ॥

ಚಂ॥ ತೊಳೆಗುವ ಪೊನ್ನ ಕೋಟೆಯ ಹರಿನ್ಮಣಿಗೋಪುರದಿಂದ್ರನೀಲದ ।
ಟ್ಟಳೆಗಳ ಪದ್ಮರಾಗಜಿನಗೇಹದ ಸೌಧಗೃಹಂಗಳಂಶುಮಂ ॥
ಡಳಿ ನೆಗೆದಲ್ಲಿ ಮುಂಡಳಿಸೆ ಪೌರಜನಕ್ಕೆಸೆಗುಂ ವಿತಾನ ಮಾ ।
ಗಳವಡೆ ಪಂಚವರ್ಣದಿ ನಜಂ ಸಮೆದಂಬರದಂತಿರಂಬರಂ ॥ ೭೭ ॥

ವ॥ ಆದಱಿಂ೪ೊಳಗೆ

ಚಂ॥ ಪ್ರಣುತವನಪ್ರದೇಶದೊಳಗಿರ್ಪ ನವೋರುವಿನಂತೆ ಪೊನ್ನ ಕೇ ।
ವಣದೊಳಗಿರ್ಪ ನರ್ಘ್ಯಮಣಿನಾಯಕದಂತೆ ವಿರಾಜಿಸಲ್ ನಭೋಂ ॥
ಗಣದೊಳಗಿರ್ಪ ಪೂರ್ಣಶಶಿಮಂಡಳದಂತೆ ಸಮಸ್ತವಸ್ತುಳ ।
ಕ್ಷಣರಚಿತಾಭಿರಾಜ ಮೆಸೆದಿರ್ಪುದು ಬಂಧುರರಾಜಮಂದಿರಂ ॥ ೭೮ ॥

ವ॥ ಅಲ್ಲಿ ಸಲ್ಲಲಿತಸಪ್ತತಳವಿಳಾಸ(ವಿಳಸಿ)ತವಾಸಮುಂ, ವಿಚಿತ್ರಚಿತ್ರಕರ್ಮನಿರ್ಮಾಪಣ ಸೌಮ್ಯಮುಂ ಸಕಳರತ್ನಸಂದರ್ಭಸಾರಸೌಂದರ್ಯಸಂಪೂರ್ಣಮುಂ ಸಮಸ್ತವಸ್ತುವಿಸ್ತೀರ್ಣಮು ಮಾಗಿ.

ಮಾ ಸ್ರ॥ ನಿರುತಂ ಶುದ್ಧಾಂತಕಾಂತಾಗೃಹಪರಿವೃತಿಯಿಂ ಹಸ್ತಿಶಾಲಾದಿನಾನಾ ।
ಪರಿವಾರಾವಾಸವಿನ್ಯಾಸದಿ ನತುಳಪತಾಕಾವಳೀಲೀಲೆಯಿಂ ಭಾ ॥
ಸುರಘಂಟಾಜಾಲದಿಂ ತೋರಣರುಚಿನಿಚಿತದ್ವಾರದಿಂ ರಂಜಿಸಿರ್ಪುಂ ।
ಕರುಮೂಡಂ ಕಾಂತಿನೀಡಂ ಮಣಿಮಯಯಕಳಶಾಪೀಡ ಮುತ್ತುಂಗಚೂಡಂ ॥ ೭೯ ॥

ಚಂ॥ ಅಸುಗೆಯ ಕೆಂಪು ಬಾಳೆಯ ಪಸುರ್ವು ತವಾಳದ ಕರ್ವು ಚಂಪಕ ।
ಪ್ರಸರದ ಪೊನ್ನ ಬಣ್ಣ ವರೆಗುಂದದ ಕುಂದದ ಬೆಳ್ಪು ಸುತ್ತಲುಂ ॥
ಪಸರಿಸಿ ಪರ್ವಿ ಮಾಣಿಕದ ಪಚ್ಚೆಯ ನೀಳದ ಪೊನ್ನ ಬೆಳ್ಳಿಯಾ ।
ಪಸರದ ಚೆಲ್ವ ನಿಮ್ಮಡಿಸೆ ಭೂಪಗೃಹೋಪವನಂಗಳೊಪ್ಪುಗುಂ ॥ ೮೦ ॥

ವ॥ ಅಂತು ಮಗಧ ವಿಷಯದಂತೆ ರಾಜಗೃಹಸನಾಥಮುಂ, ನಾಟಕಪ್ರಕರದಂತೆ ವಿಪುಳವೀಥೀ ವಿಭಾಸಿಯುಂ, ಮೇಕುಪಟಳದಂತೆ ತಟಚ್ಛೃಂಗಾಟನಿರತಮುಂ, ಸಿತಪಕ್ಷದಂತೆ ಚಂದ್ರಕಿರಣಾಂಕಿತ ನಿಶಾಂತನುಂ, ಗ್ರಹಗ್ರಾಮದಂತೆ ವಿತತಕೇತುಶತಶೋಭೆಯುಂ, ಸೌಪರ್ಣನಂತೆ ಸಮಗ್ರಸಚಿವ ರಾಜಿತಪ್ರಭಾವಮುಂ, ಛಂದೋನಿಬಂಧನದಂತೆ ಯತಿಗಣಮುಂ, ಶರತ್ಸಮಯದಂತೆ ಸುಮನೋವ ನಾಭಿರಾಮಮುಂ, ವಿಜಯಾರ್ಧ ಕುಧರದಂತೆ ಅಶೇಷವಿದ್ಯಾಧರನಿವಾಸಮುಂ, ಮುಖಕಮಳದಂತೆ ಸದ್ದ್ವಿಜಕುಳೋಪಶೋಭಿಯುಂ, ದಕ್ಷಿಣಕ್ಷೋಣಿಯಂತೆ ಭರತಜನಪರೀತಮುಂ[1] ಚಾಪಗುಣದಂತೆ ಮಾರ್ಗಣನಿಷೇವ್ಯಮುಂ, ಸಮುದ್ರದಂತೆ ಸಹಜಲಾವಣ್ಯಕಾಂತಾರಾಗರಮ್ಯಮುಂ, ಪಾತಾಳದಂತೆ ಬಹುಭುಜಂಗಗಣಭೋಗಭಾಗಿಯುಂ, ಪವನವಥದಂತೆ ದಿವ್ಯಸಿಂಧುರವಿಭಾಸಿಯುಂ, ಫಲಿತವನದಂತೆ ಬಹುರಾಜಿವಾಚಿತಮುಂ, ಆದಿತ್ಯನಂತೆ ವಿವಿಧಗೋಕುಲಪ್ರಶಸ್ತಮುಂ, ಶುದ್ಧಾಂತನಿಳಯದಂತ ನೇಕಮಹಿಷೀಸಮೇತಮುಂ, ನೀಳಾಬ್ಜನಾಳದಂತೆ ನಿಷ್ಕಂಟಕಾತ್ಮಮುಂ, ಸತ್ಪುರುಷನಂತೆ ನಿಷ್ಕಪಟ ಮಹಿಮಾವಳಂಬಿಯುಂ, ಯಾಮ್ಯದಿಶೆಯಂತೆ ಧರ್ಮಪ್ರಭಾವವಿಭಾವಿತಮು ಮೆಂಬ ಮಹನೀಯ ಮಹಿಮೆಯಂ ತಳೆದು.

ಮ। ಸ್ರ॥ ಅತಿಲಾವಣ್ಯಾಪ್ಸರಃಸಂತತಿಗೆ ನೆಲೆ ಸುರಾಸೇವಿತಾನಂತದಾನಾ ।
ನ್ವಿತಮಾಧುರ್ಯಾಪ್ಸರಃಸಂತತಿಗೆ ನೆಲೆ ಸದಾಸೇವಿತಾನಿಂದ್ರಜನ್ಮಾ ॥
ತತ ಮಿಂದ್ರಾರಾಧ್ಯಜನ್ಮಪ್ರತಿತಮಹಿಮ ನಾನೆಂದು ಕಾಕಂದಿ ನಾಕೋ ।
ನ್ನತಿಯಂ ಪ್ರೋತ್ತುಂಗ ಸೌಧಾಂಶುಗಳೊಳೆ ನಗುವಂತಿರ್ಪುದಾಧಿಕ್ಯದಿಂದಂ ॥ ೩೧ ॥

ಚಂ॥ ಅದು ಸಲೆ ರಾಜಶೂನ್ಯ ಮುರುರಾಜವಿಭಾಸಿಯೆ ನಾಂ ದ್ವಿಜಿಹ್ವಸಂ ।
ಪದ ಮುದು ಸಜ್ಜನಕ್ಕೆ ಶರಣಾ ನವಿಚಾರಿ ನಿಪೃಷ್ಠಮಂತದಾಂ ॥
ಸದಮಳಧರ್ಮಮಾರ್ಗಿ ಯೆನೆ ಭೋಗವತೀಪುರ ನೆನ್ನ ನಿಂತು ಪೋ ।
ಲ್ವುದು ಚಿರ ಮೆಂದಥಃಕರಿಸುವಂತಿರೆ ಮೇಲೆನಿಸಿರ್ಪುದಾಪುರಂ ॥ ೩೨ ॥

ಮ॥ ಅದನಾಳ್ವಂ ಶರಣಾರ್ಥಿ ಪಾರ್ಥಿವಕುಳಕ್ಷೋಣೀಧರಂ ಬೋಧಿದು ।
ರ್ಮದಭೂಪಾಳಮದಾಂಧಸಿಂಧುರದಳತ್ಕುಂಭೀರವಂ ಧರ್ಮಸಂ ॥
ಪದುದೀರ್ಣಾರ್ಣವಪೂರ್ಣಚಂದ್ರ ನೆನಿಸಿರ್ಪಿಕ್ಷ್ವಾಕುವಂಶೋನ್ನತಂ ।
ಸದಯಂ ಕಾಶ್ಯಪಗೋತ್ರಪೂಜ್ಯತಿಲಕಂ ಸುಗ್ರೀವಭೂಪಾಲಕಂ ॥ ೩೩ ॥

ಕಂ॥ ಜಗಮೆಲ್ಲ ಮೊಂದೆ ಕೊರಲೊಳ್ ।
ಪೊಗಟಿಪೆ ಕೊರಲ್ಕೊಂಡು ಧರೆಯ ನುದ್ಧರಿಸಿ ಸಮಂ ॥
ತಗಲದೆ ಸಿರಿಕೊರ ಲೊಪ್ಪಿರೆ ।
ಸೊಗಯಿಸಿ ಸುಗ್ರೀವವೆಸರೊ ಳಾನೃಪ ನೆಸೆದಂ ॥ ೩೪ ॥

[1] ಭರಿತಮುಂ.

ಕಂ॥ ಎರೆದರ್ಥಿಗೀವ ದಾನದೊ ।
ಳರಿವಂಶವು ನಡೆಸಿ ಕಡಿವ ದಾನದೊಳಿಳೆಯಂ ॥
ಪರಿಪಾಲಿಪ ದಾನದೊಳೇಂ ।
ಕರಿಯಂತಿರನಂತದಾನ ನೆನಿಸಿದನೊ ನೃಪಂ ॥ ೩೫ ॥

ಆಹವದೊಳಹಿತನೃಪಸಂ ।
ದೋಹವು ನಾಕ್ರಮಿಸೆ ಬೀರಸಿರಿ ಜಯಲಕ್ಷ್ಮೀ ॥
ಗೇಹ ನೆನಿಸಿದ ಸುಕಂಠನ ।
ಬಾಹಾಬಳ ವಿಳೆಗೆ ಪೊಗಟ್ಟಲೇ ನಿನ್ನಳವೇ ॥ ೩೬ ॥

ವ॥ ಮತ್ತಂ.

ಚಂ॥ ಅರಿಹರಿಣಂಗಳಂಗ(ಜ)ಱಿ ಬೆರ್ಚಿಸಿ ವೀರವಿರೋಧಿಗಂಧಸಿಂ ।
ಧುರಗಣಮುಂ ಪಡಲ್ಪಡಿಸಿ ಕೂರಸಿದಾಡೆಯನೂನಸನ್ನಖೋ ॥
ತ್ಕರಮುಹಿತಾರುಣಾಂಬುರುಚಿ ಕೇಸರ ಮಾಗಿರೆ ವೀರಲಕ್ಷ್ಮಿ ಯಂ ।
ಬುರುವನಸಿಂಹಿಯಂ ಸ್ವಭುಜಪಂಜರದೊಳ್ ನೆಱಿಗೆಯ್ದ ನಾನೃಪಂ ॥ ೩೭ ॥

ಕಂ॥ ಘನಸಮಯದೊಳಗೆ ಘರ್ಮಂ ।
ಜನಿಯಿಸುವುದಾಗಳಂತೆ ಮಱಿಕೊಳ್ವವೊಲಾ ॥
ಜನಪನ ಕೋಪದ ಬಱಿಯೊಳ್ ।
ಜನಿಯಿಸಿ ಜನಮುಂ ಪ್ರಸಾದರಸ ವಾಱಿಸುಗುಂ ॥ ೩೮ ॥

ಕಂ॥ ಅನತರೊಳೆಂ ವಿನತರೊಳಂ ।
ಘನರಕ್ಷಾನಿಧಿಯಿ ನಧಿಕಸರಣಂ ತಾನೆಂ ॥
ಬಿನವೊದವಿಸಿ ಜೋದ್ಯ ಮಿದೆನೆ ।
ಮುನಿಸುಮ ನೊಸಗೆಯುಮ ನೊಡನೆ ಮೆಱಿವಿವಂ ಭೂಪಂ ॥ ೩೯ ॥

ವ॥ ಮತ್ತಮಾನೃಪಂ ಸಪ್ತಾಂಗಸಂಗಿಯಾಗಿಯುಂ ಸಪ್ತಾಂಗಸಂಗಿ ಯಲ್ಲ್ತು, ಸಕಳ ಭೂತ ಳೋಪಕಾರಿಯಾಗಿಯುಂ ಸಕಳಭೂತಳೋಪಕಾರಿ ಯಲ್ಲ್ತು, ಸಮುದನಾಗಿಯುಂ ಸಮುದ ನಲ್ಲ್ತು, ವಿಗ್ರಹಕರಾಳನಾಗಿಯುಂ ವಿಗ್ರಹಕರಾಳನಲ್ಲ್ತು, ಮಾರ್ಗಣಾನುರಕ್ತನಾಗಿಯುಂ, ಮಾರ್ಗಣಾನು ರಕ್ತ ನಲ್ಲ್ತು, ಪಟುಪ್ರತಾಪನಾಗಿಯುಂ ಪಟುಪ್ರತಾಪಿ ಯಲ್ಲ್ತು, ವಿದಗ್ಧಶರಣನಾಗಿಯುಂ ವಿದಗ್ಧ ಶರಣ ನಲ್ಲ್ತು, ಮಾನವಾಹಿತ ನಾಗಿಯುಂ ಮಾನವಾಹಿತ ನಲ್ಲ್ತು, ಮಾತಂಗಚರಿತನಾಗಿಯುಂ ಮಾ ತಂಗಚರಿತ ನಲ್ಲ್ತು, ಕ್ಷಿತಿನಾಥನಾಗಿಯುಂ, ಕ್ಷಿತಿನಾಥ ನಲ್ಲ್ತು, ಅನಂಗಸುಭಗನಾಗಿಯುಂ ಅನಂಗ ಸುಭಗ ನಲ್ಲ್ತು, ಪರಾರ್ಥಪರನಾಗಿಯುಂ ಪರಾರ್ಥಪರ ನಲ್ಲ್ತು, ಅನೀತಿರಹಿತನಾಗಿಯುಂ ಅನೀತಿ ರಹಿತನಲ್ಲ್ತು, ವಿದಿತಭೀರುಭಾವನಾಗಿಯುಂ ವಿದಿತಭೀರುಭಾವನಲ್ಲ್ತು, ಎಂಬ ವಿರುದ್ಧಗುಣಮು ನಳ ವಡಿಸಿ.

ಕಂ॥ ಭ್ರಮರಹಿತಂ ಗುಣಸಹಿತಂ ।
ಸುಮನೋ(ಮ)ಹಿತಂ ನಿಜಾಜ್ಞಾ ಪೂಮಾಲೆಯವೋ ॥
ಲೆ ಮಹೀಶಮಸ್ತಕಾಗ್ರದೊ ।
ಳಮರ್ದಿರೆ ಸುಗ್ರೀವ ನೇನಳಂಕರಿಸಿದನೋ ॥ ೪೦ ॥

ವ॥ ಅಂತೆನಿಸಿದ ಸುಗ್ರೀವಮಹಾರಾಜಂಗೆ ಸುಗ್ರೀವಕಂತಿಕೆಯೆನಿಪ್ಪ ಶೋಭಾಸಮೃದ್ಧಿಯುಮು, ನಾಕಾಶ್ಯಪಗೋತ್ರವ್ರದೀವಂಗೆ ದೀಪ್ತಿವಾಳಿಕೆಯೆನಿಪ್ಪ ಸಹಜಪ್ರಕಾಶಮುಮು, ವಾಸತ್ಯರತ್ನಾಕರಂಗೆ ಜಾಹ್ನವಿಯೆನಿಪ್ಪ ಜಗತ್ಪವಿತ್ರವೃತ್ತಿಯುಮು, ನಾಮನುಜೇಂದ್ರಚಂದ್ರಮಂಗೆ ಚಂದ್ರಿಕೆಯೆನಿಪ್ಪ ಕಾಂತಿಯಕ್ಕುಮು, ನಾಯಿಕ್ಷ್ವಾಕುವಂಶಮಾರ್ತಂಡಂಗೆ ದಿನಶ್ರೀಯೆನಿಪ್ಪ ತೇಜಮುಮು, ನಾಪ್ರತಿವನ್ನಮಂದರಂಗೆ ರುಚಿರವೇಖೆ ಯೆನಿಪ್ಪ ಮಹಿಮೆಯುಮು, ನಾಪರಾರ್ಘಪಾರಿಜಾತಂಗೆ ಕಲ್ಪಲತೆಯೆನಿಪ್ಪನೂನದಾನಮುಮು, ನಾವಿವೇಕಚತುರಾನನಂಗೆ ವಾಗ್ವಧು ವೆನಿಪ್ಪ ಚಾತುರ್ಯವಿಭವಮುಮು, ನಾಸೌಂದರ್ಯಕಂದರ್ಪಂಗೆ ರತಿಯೆನಿಪ್ಪ ಸೌಭಾಗ್ಯಗುಣಮುಮುಂ ಸಹಜಾನುಬಂಧಬಂಧುಪ್ರೇಮದಿಂದ ಮಪ್ಪುಕೆಯ್ದು.

ಉ॥ ನಾಮಜಮಂದಗಾಮಿನಿ ಜಿತಾಮರಕಾಮಿನಿ ಭವ್ಯಲೋಕರ ।
ಕ್ಷಾಮಣಿ ಮಾನಿನೀಜನಶಿರೋಮಣಿ ಸದ್ಗುಣಭೂಮಿ ಭಾಗ್ಯಪೌ ॥
ಳೋಮಿ ವಿಶುದ್ಧಗೋತ್ರೆ ಸುಚರಿತ್ರಪವಿತ್ರೆ ವಿವೇಕದೃಷ್ಟಿ ಥ ।
ರ್ಮಾಮೃತಸಾರಯಷ್ಟಿ ಜಯರಾಮೆ ಸುಶೀಲದ ಸೀಮೆ ರಂಜಿಪಳ್ ॥ ೪೧ ॥

ಕಂ॥ ಅನುರಕ್ತೆ ನಚ್ಚಿನಸಿಯವ ।
ಳನುವಮವಿಗ್ರಹವಿಳಾಸೆ ತೋಲ್ಪತ್ತುಗೆಯಂ ॥
ದೆನಗಿಸವಳಿಕೆಯ್ಯಂದದಿ ।
ಪನೀಯೆ ಜಯರಾಮೆಯೆಸರ ನಾಸತಿ ತಳೆದಳ್ ॥ ೪೨ ॥

ಚಂ॥ ನಡು ಮುಡು ಲೋಕಲೋಚನರುಷಕ್ಕೆ ಬೆರಲ್ ಸರಲಂಗಜಂಗೆ ಮೆ ।
ಲ್ಲಡಿ ಪಡಿ ವಲ್ಲವಕ್ಕೆ ವದನಂ ಸದನಂ ಸಿರಿ ಗಹ್ಗೆ(ವ)[1]ಹ್ಗೆ ಚೆ ॥
ಲ್ವಿಡಿದಲವರ್ವಿಲ್ಗೆ [2]ಸೊಮರ್ಮುಡಿ ಪದಿರ್ಮುಡಿ ಸೋಗೆಗೆ ಪುರ್ವು ಕೊರ್ವು ಚೆ ।
ಲ್ನುಡಿಗೆ ನಖಂ ಮುಖಂ ಪತಿಗ ತೋಳ್ ಕರವಾಳ್ ಮದನಂಗೆ ಕಾಂತೆಯಾ ॥ ೪೩ ॥

ವ॥ ಅಂತು ಮಿಲ್ಲದೆಯುಂ.

ಚಂ॥ ನಿಲೆನೊಲೆ ಕೊತ್ತಳಂ ಜಘನ ವಪ್ಪಳೆ ಮೇಲುದು ಪೊನ್ನಗೋಂಟಿ ಮೇ ।
ಖಲೆ ಪರಿಖಾಂಬು ನಾಭಿ ನಡುವೀಥಿ ಮುಖಂ ರಣಮಂಡಲಂ ಕಚಂ ॥
ಲಲಿತಪತಾಕೆ ಕಾಂತಿ ಜಳಸಂಪದ ಮಹ್ಗೆಮರೀಚಿ ಶಸ್ತ್ರಸಂ ।
ಕುಲ ಮೆನೆ ನೀರಿ ತೋಱುವ ಳನಂಗನ ಜಂಗಮದುರ್ಗಲಹ್ಗೆಯೋಲ್ ॥ ೪೪ ॥

ವ॥ ಮತ್ತಂ.

[1] ರಹ್ಗೆ. [2] ಕಾಮರ್ಮುಡಿ.

ಚಂ॥ ಕಣೆಯದ ಚೆಲ್ವು ಕಂಪಣ ಮುಡೆಂಗದ ಸುಯ್ ಪದೆಯಿಪ್ಪ ಶಕ್ತಿ ಕ।
ಣ್ಣೊಣರ್ಗಳವಟ್ಟ ಚಾಪಲತೆ ಮಿಕ್ಕ ಸರಂ ಕಟಮುಂಡಲಾಗ್ರದು ॥
ಲ್ಬಣತೆ ಲತಾಂಗಯಷ್ಟಿ ಕುಚಚಕ್ರದ ಮುಂತೆಲಸದ್ವಿಳಾಸಮೂ ।
ಳ್ಪಣಿಯರವಾದುದಾರಮಣಿ ಬಾಲೆಯೊ ಕಾಮನ ಕೀಣಶಾಲೆಯೋ ॥ ೪೫ ॥

ಮ॥ ಜಗದಾಲೋಕಸುಖಕ್ಕೆ ಕಣ್ದೆಱಿವಿಗಂ ಸಂಸಾರಸಾಫಲ್ಯ ಮು ।
ರ್ವಿಗೆ ಸರ್ವಾಭರಣಂ ಸ್ಮರಂಗೆ ವಿಜಯೋಸ್ತ್ರಂ(ಸಾರ)ಸೌಂದರ್ಯಸೈ ॥
ಸ್ತ್ರಿಗೆ ಬೀಜಂ ಸೊಬಗಿಂಗ ತಾಯ್ವನೆ ವಿಳಾಸಕ್ಕೊಂ ಲಾವಣ್ಯಲ ।
ಹ್ಮಿಗೆ ಸಂಕೇತನಿಕೇತ ಮೆಂಬುದು ಜನಂ ರೂಪಂ ಮಹಾದೇವಿಯಾ ॥ ೪೬ ॥

ವ॥ ಅದಲ್ಲದೆಯುಂ.

ಚಂ॥ ಅರಸನ ತೇಜ ಮಾಕ್ರಮಿಸೆ ಬೇವಸಮುತ್ತರಿಭೂವಕೋಟ ವಿ ।
ಸ್ತರಿಸುವುದಾಲತಾಂಗಿಯ ವದಾಶ್ರಯಮುಂ ಗೆಡೆಗೊಂದು ಚೋದ್ಯಮು ॥
ಲ್ತುರಿವರಿವುಗ್ರರೋಚಿಯ ಬಿಸಿಲ್ ಸುಡೆ ಬೇವಸಮುತ್ತು ಬಂದು ಒಂ ।
ಥರ ವಡೆ ಪೊರ್ದಿ ತತ್ಪ್ರಿಯವಯೋಜಿನಿಯುಂ ಸುಖಿ ಯಾಗಲಾಗದೇ ॥ ೪೭ ॥

ವ॥ ಇಂತೆನಿಸಿ ವನುವಮಪ್ರಭಾವಮುಂ ತಾಳ್ದಿದಾಮಹಾದೇವಿಯೊಳೆನೆ.

ಕಂ॥ ಕೂರ್ಮೆಯೊ ಳೆನುಭವಿಸುತ್ತು ಮು ।
ದೊರ್ಮೆಯು ಮುವಚಜುದೆ ಕಾಮಸುಖದಿಂ ಜನಪಂ ॥
ಪೆರ್ಮೆಗಿಡೆದಿರ್ದ ನಂತಿದು ।
ಧರ್ಮಾರ್ಥವಿರುದ್ಧ ಮಲ್ಲದೆನೆ ನಯನಿಪುಣರ್ ॥ ೪೮ ॥

ಮ॥ ಪ್ರಜೆಯಂ ಪಾಲಿಸಿ ಸತ್ಪರಿಗ್ರಹದ ಪೆರ್ಚಂ ಮಾಡಿ ದುಷ್ಟಾವನೀ ।
ಭುಜರಂ ಮರ್ದಿಸಿ ದಾನಧರ್ಮರುಚಿಯೊಳ್ ತಳ್ಪೊಯ್ದು ಯೋಗ್ಯಪ್ರಥಾ ॥
ನಜನನ್ಯಸ್ತಸಮಸ್ತರಾಜ್ಯಭರ ನಾಗಿರ್ದಾನೃಪಾಲಂಬೂ ಲಂ ।
ಗಜಕೇಳೀರತ ನಪ್ಪುದಲ್ಲದನಗಂ ಕೊಂಡಾಡೆ ಹಾಸ್ಯಾಸ್ಪದಂ ॥ ೪೯ ॥

ವ॥ ಎನಿಸಿ ಸುಖಸಂಕಥಾವಿನೋದದಿಂ ದಿರ್ಪನ್ನೆಗ ಮಿತ್ತಲ್.

ಕಂ॥ ಗೀರ್ವಾಣಲೋಕಸುಖಮಂ ।
ಪೂರ್ವೋಕ್ತಪ್ರಾಣತೇಂದ್ರ ನುಪಭೋಗಿಸಿ ತೀ ॥
ರ್ದುರ್ವಿಗೆ ಬರಲರೆ ಮುಂಚೆ ಸು ।
ವರ್ಮಾಗ್ರಸೇಗಾಯ್ತು ನಜ್ರಿಗಾಸನಕಂಪಂ ॥ ೫೦ ॥

ವ॥ ಅಂತು ತನಗಾಸನಕಂಪನಾಗೆ ಪಾಕಶಾಸನಂ ಭರತಕ್ಷೇತ್ರದೊಳ್ ಪರಮೇಶ್ವರ ಸ್ವರ್ಗಾವತರಣಕಲ್ಯಾಣ ಮಿನ್ನಱಿವುದಿಂಗಳಕ್ಕು ಮೆಂಬುದಂ ಜಲಕ್ಕನವಧಿಬೋಧದಿಂದ ಮಱಿದು.

ಕಂ॥ ಧನಪತಿಯಂ ನಿತ್ಯಾರ್ಚಿತ ।
ಜಿನಪತಿಯಂ ಭವ್ಯಜನಮನೋರಥನಳಿನೀ ॥
ದಿನಪತಿಯಂ ಕಿಂಪುರುಷ ।
ಜ್ಜನಪತಿಯಂ ಬರಿಸಿ ಪೇಟ್ದಿ ಮನದುತ್ಸವಮುಂ ॥ ೫೧ ॥

*ಮಃಸ್ರ॥ ಜಿನವಸ್ವರ್ಗಾವತಾರೋದ್ಯಮ ಮಿದು ಮಟಿಸಿಗಾಲಂ ಭವದ್ಭಕ್ತಿ ಕಾದಂ ।
ಬಿನಿ ಹೇಮದ್ಯೋತಿ ನೌದಾಮಿನಿ ಮಣಿನಿಚಯಚ್ಛಾಯೆ ಗೀರ್ವಾಣಬಾಣಾ ॥
ಸನಭಾಗಂ ತೂರ್ಯಘೋಷಂ ಸ್ತನಿತ ಮೆನಿ[ಸೆ] ಕಾಕಂದಿಯೊಳ್ ಭವ್ಯಸನ್ಯಾ ।
ವನಿಯೊಳ್ ರತ್ನೋತ್ಕರಾಸಾರಮ ನಖಿಳರ(ಜೋ)ಧೂಮಮಂ ಮಾಡು ನೀಡುಂ ॥೫೨॥

ವ॥ ಎಂದು ಬೆಸಸಲೊಡಂ.

ಕಂ॥ ಶತಮುಖನನುಮತ ವೆಂಬೆಲ ।
ರ ತೀಟದಿಂ ಯಕ್ಷಕಲ್ಪವೃಕ್ಷದ ಕುಸುಮಂ ।
ಪ್ರತಿಗಲ್ದೊಕ್ಕವು ದೆನೆ ಸೂ ।
ಸಿತಮಂದು ಸಾರ್ಧತ್ರಿಕೋಟಿ ರತ್ನಾಸಾರಂ ॥ ೫೩ ॥

ವ॥ ಅಂತು ಮಲ್ಲಬೆಯುಂ.

ಮ॥ ಸುರಿಯುತ್ತಿರ್ದವು ವೀಗಳಭ್ರನದಿ ಯಂಭೋಧಾರೆ ಶೈವಾಲವ ।
ಲ್ಲರಿ ರತ್ನೋತ್ಪಲವಂ(ಪೆ)ಮಂಡಳಿ ಮೃಣಾಲಶ್ರೇಣಿ ಭೃಂಗೀವರಂ ॥
ವರೆ ಯೆಂಬಂತಿರೆ ಮುತ್ತು ವಜ್ಜೆ ಪವಳಂ ವಜ್ರಂ ಸುನೀಲಂ ತರಂ ।
ತರದಿಂ ಸಾಲಿಡೆ ಪಂಚರತ್ನಮಯಧಾರಾಸಾರ ಮೇನೊಪ್ಪಿತೋ ॥ ೫೪ ॥

ವ॥ ಆಂತು.

ಕಂ॥ ಪಂಚಾಶ್ಚರ್ಯಸಮೇತಂ ।
ಪಂಚಮನಸುಧಾರೆ ಮೂಱುಪೊೞ್ತ್ತುಂ ಕಱುಶಿಯ ॥
ಲ್ಕೇಂ ಚೋದ್ಯಮಾಯ್ತೊ ಜಿನವರ ।
ಸಂಚಿತಪುಣ್ಯಪ್ರಭಾವದಿಂ ದಾಪೊೞಿಲೊಳ್ ॥ ೫೫ ॥

ವ॥ ಮತ್ತಂ

---

*ಮ॥ ವರಕಾದಂಬಿನಿ ನಿನ್ನ ಭಕ್ತಿ ಮಟಿಸಿಗಾಲಂ ಮತ್ಕೃತಾದೇಶ(ಮುಂ ।
ಬ್ದ)ರವಂ ಘೂರ್ಣಿಪದಿವ್ಯತೂರ್ಯ ವೆಳಮಿಂಚುದ್ದಾಮಹೇವಾಂಶುಗಳ್ ॥
ಸುರಚಾಪಪ್ರಭೆ ರತ್ನರಶ್ಮಿ ಯೆನೆ ನೀಂ ಸುಗ್ರೀವರಾಜೇಂದ್ರಮಂ ।
ದಿರದೊಳ್ ಮಾಡಱುದಿಂಗಳಪ್ಪಿನೆಗ ಮಿಂ ಮೆಯ್ವೆರ್ಚೆ ರೈವ್ವಿಟ್ಟಯಂ ॥

* ಇವೆರಡುಪದ್ಯಗಳೂ ಸಮಾನಾರ್ಥಕಗಳಾದುದರಿಂದ ಈ ಎರಡನೆಯದನ್ನು ರೇಖೆಯ ಕೆಳಗೆ ಬರೆದಿದೆ.

ಚಂ॥ ಅನಿಮಿಷರಾಜ ನಾನೆಗಟ್ಟಿ ಭಾವಿಜಿನಾಂಬಿಕೆ ಯಪ್ಪ ಪುಣ್ಯಭಾ ।
ಗಿನಿಯು ಸುಕಂಠವಲ್ಲಭೆಯು ವಿಭ್ರಮವರ್ಧನಕಂ ಗಕಾಂತಿವ ॥
ರ್ಧನಕೆ ವಿಳಾಸವರ್ಧನಕೆ ಪುಷ್ಟಿವಿವರ್ಧನಕುದ್ಯ ದಾನವ ।
ರ್ಧನಕೆ ವಿನೋದವರ್ಧನಕೆ ಕಾರಣಭೂತೆಯ ರಾಗೆ ಭಾವಿಸಲ್ ॥ ೫೬ ॥

ವ॥ ಕುಳಾಚಳೋತ್ತುಂಗಶೃಂಗಸದ್ಮವದ್ಯಾದಿಸರೋವರನಿವಾಸಿನಿಯರಪ್ಪಜುವರಂ ದೇವಿಯು ರುಮಂ.

ಕಂ॥ ಆ [1]ಹ್ರಸವಿಳಾಸಿನಿಯರಂ ।
ಶ್ರೀಹ್ರೀಧೃತಿಕೀರ್ತಿಬುದ್ಧಿಲಹ್ಮೀಯುಮಂ ಗಂ ॥
ಗಾಹ್ರದವಿಮಳೆಯರಂ ಕಾಂ ।
ತಾಹ್ರಾದಿನಿಗಮಳತನುಗಳಂ ಬೆಸವೇಟ್ಟಿಂ ॥ ೫೭ ॥

ವ॥ ಮತ್ತಂ.

ಕಂ॥ ಪ್ರಣುತಾಕೃತ್ರಿಮಚೈತ್ಯೋ ।
ಲ್ಬಣಮಣಿರುಚಿರುಚಿರವಪ್ಪ ರುಚಕಾದ್ರಿಯ ಮೂ ॥
ಡಣ ತೆಂಕಣ ಪಡುವಣ ಬಡ ।
ಗಣ ದಿನೆಗಳೊಳೊಗೆದುವಂದನುಕ್ರಮದಿಂದಂ ॥ ೫೮ ॥

ವ॥ ಒಪ್ಪುತಿರ್ಪ ವೈಡೂರ್ಯಕಾಂಚನಪ್ರಮುಖ ಕೂಟಾಷ್ಟಕಂಗಳೊಳ್ ರವಿಯಿಸುವ ವಿಜಯವೈಜಯಂತಿವೊದಲಾಗೆಯುಂ, ಅವೋಳುಸುವಪ್ರಬುದ್ಧಪ್ರಮುಖಶಿಖರಾಷ್ಟಕಂಗಳೊಳ್ ವಸಿಯಿಸುವ ಪ್ರತಿಷ್ಠೆಯುಪ್ರಣಿಧಿವೊದಲಾಗೆಯುಂ, ಲೋಹಿತಾಕ್ಷಜಗತ್ಕುಸುಮ ಪ್ರಮುಖಚೂಡಾಷ್ಟಕಂಗಳೊಳ್ ಕ್ರೀಡಿಸುವಿಳಾದೇವಿ[ಸುರಾದೇವಿ]ವೊದಲಾಗೆಯುಂ, ಸ್ಫಟಿಕಕಾಂಚನ ಪ್ರಮುಖಶೃಂಗಾಷ್ಟಕಂಗಳೊಳ್ ವರ್ತಿಸುವ ಲಂಬೂಷೆಚಿತ್ರಲೇಖೆ ವೊದಲಾಗೆಯುಂ, ನೆಗಟ್ಟಿತ್ತಿವೆತ್ತ ಮೂವತ್ತಿರ್ಬರ್‌ದಿಕ್ಕುಮಾರಿಯರುಮಂ ಮತ್ತಮಾನಗದ ವಿಮಳನಿತ್ಯಾಲೋಕ ಪ್ರಭೃತಿಗಳುಂ, ವೈಡೂರ್ಯ ರುಚಕಪ್ರಭೃತಿಗಳುಂ ರತ್ನ[ಕೂಟ]ರತ್ನಪ್ರಭಪ್ರಭೃತಿಗಳು ಮಪ್ಪ ಪೆಱಿಪೆಱಿವು ಮಜ್ಜುಕೆವೆಸರನೀಕ ಕೂಟಕೋಟಿಗಳೊಳಿಪ್ಪ ಚಿತ್ರೆ ಕನಕಚಿತ್ರೆವೊದಲಾದ ವಿದ್ಯುತ್ಕುಮಾರಿಕೆಯರುಮುಂ, ರುಚಕೆ ರುಚಕಾಂತೆವೊದಲಾದ ದಿಕ್ಕನ್ಯಕಾಮಹತ್ತರಿಯರುಮುಂ, ವಿಜಯೆವೈಜಯಂತಿವೊದಲಾದತಿ ಪ್ರಬುದ್ಧೆಯರೆನಿಪ ದೇವಿಯರನಿಬರುಮುಂ ಬರಿಸಿ.

ಕಂ॥ ಜಿನಮಾತೃಗರ್ಭಸಂಶೋ ।
ಧನಾದಿರಮಣೀರಹಸ್ಯಕುಶಲಕ್ರಿಯೆಗಂ ॥
ಬಿನದಕ್ಕಂ ಬೆಸಕಂ ಮುಂ ।
ಡನವಿಧಿಗಂ ನೆರೆದು ನೆಗಟ್ಟಿ ಮೆಲ್ಲಂದದೊಳಂ ॥ ೫೯ ॥

ವ॥ ಎಂದು ಬೆಸಸಿ ಮತ್ತಂ.

[1] ಅಹ್ರಸ್ಯ.

ರಗಳೆ॥ ಅವರೊಡನನೇಕನಗನಿವಾಸಿನಿಯರಪ್ಪ ।
ವಿವಿಧರಮ್ಯವ್ರದೇಶಂಗಳೊಳ್ ರಮಿಯಿಪ್ಪ ।
ಮಾಳಿನಿಕನತ್ಕನಕದೇವಿ ಮಾಳಿನಿ ಚಿತ್ರೆ ।
ಮಾಳಾವತಿ ತ್ರಿಸರೆ ಕನಕಚಿತ್ರೆ ಸುಚಿತ್ರೆ ।
ಪುಷ್ಪಮಾಳಿಕೆ ಸುರಾದೇವಿ ಕಾಂಚನಮಾಳೆ ।
ಪುಷ್ಪಿಕೆ ಯಿಳಾದೇವಿ ರುಚಕೆ ವಿದ್ಯುನ್ಮಾಳೆ ।
ರತ್ನಪ್ರಭೆ ಜಯಾನಂದೆ ಮಣಿಮಾಲೆ ।
ರತ್ನಮಾಳಿಕೆ ಚಂದ್ರರೇಖೆ ಚಂದ್ರಸುಮಾಲೆ ।
ಮುದಿರೆ ಮುದಲೇಖೆ ಮುಂದಾರಿಕೆ ಲತಾಕಳಿಕೆ ।
ಮದನಿಕೆ ಮರಾಳಿಕೆ ಲವಂಗಿಕೆ ಮಹೋತ್ಪಳಿಕೆ.
ತರಳಿಕೆ ತಮಾಳಿಕೆ ತರಂಗಿಕೆ ವಿಚಿತ್ರಲತೆ ।
ವರಿಮುಳಿಕೆ ಗಂಧವಾಹಿನಿ ವದ್ಮೆ ಪತ್ರಲತೆ ।
ಗಂಧರ್ವ ಸೇನೆ ಮನ್ಮಥಸೇನೆಬಂಧೂಕಕಳಿಕೆ ।
ಮಹಾಸೇನೆತಾಂಬೂಲಕಳಿಕೆ ।
ಎಂಬ ಪೆಱ್ಪೆಱ್ಪಿವುಮಱ್ಱಿಕೆಯ ಪೆಸರ್ಗಳ್ಮರಿಯರ್ ।
ಅಂಬುಜಸುಗಂಧಬಂಧುರಭ್ರಮರಿಯರ್ ।
ಇಸುವೆಸಕ್ಕಮರಪತಿ ಬಿಸವೇಟಿಂ ರಾಗದಿಂ ।
ಬೆಸಕೆಯ್ದು ಜಿನಜನನಿಗೆಱ್ಪಿಗುವುದ್ಯೋಗದಿಂ ।
ಪೊಳೆವ ಕಣ್ಗಳ ಬೆಳಗು ಬೆಳ್ಪಿಂಗಳಂ ಬೀಱ್ಪಿಂ ।
ವಿಳಿರ್ವ ಸುಱ್ಱಿಗುರುಳ ರುಚಿ ಕಾಳದಿರುಳಂ ಕಾಱ್ಪಿಂ ।
ಕೆಂದ(ಳದ) ಕೆಂವು ಕೆಂದಳಿರ ಚೆಲ್ವಂ ಪರಪೆ ।
ಮುಂದಹಾಸದ ಕಾಂತಿ ವಜ್ರರುಚಿಯುಂ ನೆರಪೆ ।
ನಗೆಮೊಗದ ಚೆಲ್ವು ಶಶಿಬಿಂಬಶತಮುಂ ಕೆದಱ್ಪಿಂ ।
ಬಿಗಿದೊಗೆದ ತೋರವೊಲೆ ಕನಕಕಳಶಮು ನೊದಱ್ಪಿಂ ।
ಘನಜಘನ ವಿಭಕುಂಭವಿಭ್ರಮವು ನತಿಗಱ್ಪಿಯೆ ।
ತನುಲತೆಯ ಕಾಂತಿ ಸೊಡರ್ಗುಡಿಯ ಚೆಲ್ವಂ ಪಱ್ಪಿಯೆ ।
ತೊಳಪ ತೊಡವಿನ ಬೆಳಗು ದೆಸೆದೆಸೆಗೆ ನೆಱ್ಪಿಂ ನಿಮಿರೆ ।
ಕಳನೂಪುರಂ ನೂಲ ತೊಂಗಲೊಡನುಲಿದವುರೆ ।
ಸೌಂದರ್ಯನಾರಸದನಂಗಳಿವರೆಂಬಂತೆ ।
ಕಂದರ್ಪಭುಜವಿಜಯವಧುಗಳಿವರೆಂಬಂತೆ ।
ಮನಸಿಜನ ಮಂತ್ರದೇವತೆಯು ರಿವರೆಂಬಂತೆ ।
ನನೆಗಣೆಯ ಮೋಹನಕ್ರಿಯೆಗಳಿವರೆಂಬಂತೆ ।
ಶೃಂಗಾರರಸತರಂಗಿಣಿಯು ರಿವರೆಂಬಂತೆ ।
ಮಾಂಗಲ್ಯಲಕ್ಷಣದ ಕಳೆಗಳಿವರೆಂಬಂತೆ ।

ಕರವೊಸೆದು ದೆನೆ ಬಿಸಲೆಯೂದುದಬಲೆಯರ ನೆನೆ ।
ಧರಣಿಸಕಳಂ ವಿವಿಧಯುವತಿಮಯ ಮಾದುದೆನೆ ॥
ಬಂದು ಕಾಕಂದಿಪುರಕೆ ನೋತ್ಸಾಹಮಂ ।
ಗೊಂದಣಿಸಿ ಪೊಕ್ಕರ್ ಸುಕಂತನೃಪಗೇಹಮಂ ॥ ೬೦ ॥

ವ॥ ಅಂತು ಪೊಕ್ಕು ಭಕ್ತಿಭರದಿಂದ ಮೆಱೆಗಿ.

ಮಾಸ್ರ॥ ದೊರೆವೆತ್ತಷ್ಟಾರ್ಘ್ಯಮಂ ಮಾಡಿದು ದಡಿವೊದಲೊಳ್ ಮುಂದಹಾಸಂ ಜಳಂ ಬಂ ।
ಧುರಗಂಧಂ ಶ್ವಾಸಗಂಧಂ ತಲೆದುಡುಗೆಯ ಮುತ್ತಕ್ಷತಂ ಚೆನ್ನಪೂ ಪೂ ॥ ·
ಕುರುಳ್ಗಳ್ವುಂ ಧೂಪ ಮುಂಗಾಭರಣರುಚಿ ಸೊಡರ್ ಕೇಕರಚ್ಛೇರಧಾರಾ ।
ಚರು ಬಿಂಬೋಪ್ಯಂ ಫಳಂ ತಾನೆನಿಸಿ ಜಿನನ ತಾಯ್ಗಿಂದ್ರಕಾಂತಾಕದಂಬಂ ॥ ೬೧ ॥

ವ॥ ಅಂತು ಪುರಂದರಂ ಸುರಪುರಂಧ್ರಿಕಾಮುಹತ್ತರಿಯುರ್ಗೆ ಸಮುಚಿತಕ್ರಿಯಾನುಯೋಗಂಗಳಂ ನಿಯಮಿಸಿ.

ಕಂ॥ ಆರಮುನೆಯೊ ಳತ್ತಲಿತ್ತಂ ।
ಚರಿಯಿಪ ದೇವಿಯರ ಪದತಳಾಂಶು ಬಯಲಲ್ದಾ ॥
ವರೆಯೆಸಳ ನೆಸಗಿದುವು ನೂ ।
ಪುರತತಿ ಬೀಱಿದುವು ಮುದನಮೌರ್ವೀರುತಿಯಂ ॥ ೬೨ ॥

ವ॥ ಆವರೊಳೊರ್ವಳ್.

ಕಂ॥ ಸತಿಯ ಕುಚಕೋಕಮುಂ ಮುಖ ।
ಶತಪತ್ರಮು ನೊಲ್ದಲರ್ಚಲೆಯ್ತಂದ ನಹ ॥
ಸ್ಪತಿ ಬಿಸುಪ ನುಱಿದು ಕೆಲಕೆನೆ ।
ಶತಮುಖವಧು ಪಿಡಿದಳೊಪ್ಪೆ ಮುತ್ತಿನ ಕೊಡೆಯಂ ॥ ೬೩ ॥

ವದನೇಂದುವಿನುದಯದೊಳೊದ ।
ವಿದ ಲಾವಣ್ಯಾಂಬುನಿಧಿಯ ನೊರೆದೊಂಗಲಿವೆಂ ॥
ಬುದನೆನಿಸಿ ಜಿನಾಂಬಿಕೆಗಿ ।
ಕ್ಕಿದ ರಮುರಿಯರಮುರಿ ಧವಳಚಮುರೀರುಹಮಂ ॥ ೬೪ ॥

ನಱುಸುಯ್ಗೆ ಸುಱಿವ ತುಂಬಿಯ ।
ಮುಱಿವಕ್ಕಿಯೋ ಕೇಶಕೃಷ್ಣಭುಜಗಿಗೆ ಕಡುಪಿಂ ॥
ದೆಱಿಗುವೆಳನವಿಲೊ ಪೇಟಿಶಿನೆ ।
ಮೆಱೆಸಿದುದು ಜಯರಾಮೆ ಗವುರಿ ಬೀಸುವ ಕುಂಚಂ ॥ ೬೫ ॥

ಕಂ॥ ಇಂದವೊಡನೋಲಗಿಸಲ್ ।
ಬಂದಂ ವಿಧು ದೇವಿ ನಿಮ್ಮ ನಾದರಿಸುವುದೆಂ ॥
ದಿಂದುವನೆ ತಂದು ಕಾಣಿಸು ।
ವಂದ [ಮಿದೆ]ನೆ ಕಾಂತೆ ಗಮರಿ ಕನ್ನಡಿವಿಡಿದಳ್ ॥ ೬೬ ॥

ಎಳಲತೆಯು ಕುಡಿಯು ತಳಿರೊಳ್ ।
ಒಳೆದುದು ಕಾವುಳ್ಳ ಕನಕಕಮಳಂ ಕೌತೂ ॥
ಹಳ ಮಿದೆನೆ ಪೊನ್ನ ಡವಕೆಯು ।
ನೆಳೆಯಳ್ ನಳಿತೋಳ ತಳದೊಳಳವಡೆ ಪಿಡಿದಳ್ ॥ ೬೭ ॥

ಅನುಭವಿಸುವ ಶಶಿಕಳೆಗಳ ।
ನಿನಿಸಂ ಸವಿದೋಯಿಲೆಂದು ನೀಡಿದವಳ್ ಮಾ ॥
ನಿನಿ ಗೆನೆ ಬಿಳಿಯೆಲೆಯಂ ಗಟಿ ।
ಸಿ ನೀಡುತಿರ್ಪಮರಿ ಪಡೆದ ಳೀಕ್ಷಣಸುಖಮುಂ ॥ ೬೮ ॥

ಎಳೆಮಿಂಚುಂ ಸಿಡಿಲುಂ ಬಂ ।
ದಳಸಿದ ಘನಮೂಳ ರಂಜಿವಂಜಿಪತಱಿನಂ ॥
ಲಳಿತೆಯು ರಕ್ಷೆಯಮರಿಯರ್ ।
ತಳೆದರ್ ಭೂಷಣದ ಬಾಳ ಪೊಳೆವುಗಳಿಂದಂ ॥ ೬೯ ॥

ರಮಣಿಗೆ ಪಡಿಯಱಿವೆಸಗೆ ।
ಯ್ವಮರಿಯರ ವಿಚಿತ್ರವೇತ್ರದಂಡಂಗ ಳವೇ ॥
ನಮದರ್ಮೊ ಮದನಜಯಶ್ರೀ ।
ರಮಣಿಯು ಕೆಳದಿಯರ ಕೆಯ್ಯ ಕಕ್ಕಡಿಗಳವೋಲ್ ॥ ೭೦ ॥

ಅಂಗರುಚಿಭೂಷಣಾಂಶುವ ।
ನಂಗಪ್ರಭೆ ಮಿಸಿಸೆ ಮತ್ತೆ ಮಜ್ಜನವಿಧಿ ತ ॥
ನ್ವಂಗಿಗೆ ಪುನರುಕ್ತ ಮಿದೆಂ ।
ದೆಂಗೆ ಜನಂ ದಿವಿಜಯುವತಿಕೃತಮಜ್ಜನಮುಂ ॥ ೭೧ ॥

ಯುವತಿಗೆ ನಿಱಿವಿಡಿದು ದುಕೂ ।
ಲವ ನುಡಿಸುವ ದಿವಿಜ ಕನಕನಗವೋಲೊಳೆಯಂ ॥
ಥವಳಾಭ್ರವಮಾಲೆಯುಂ ಸು ।
ತ್ತುವ ವಾರಿದಲಕ್ಷ್ಮ ಯಸಕಮುಂ ಪೊಸೆಯಿಸಿದಳ್ ॥ ೭೨ ॥

ಕಂ। ಜಿನಜನನಿಯ ಪದಸೇವೆಗೆ ।
ಘನಸಂಧ್ಯಾರಾಗಲಕ್ಷ್ಮಿಯಂ ತಂದೀಗಳ್ ॥
ದಿನಲಕ್ಷ್ಮಿ ಸಮರ್ಪಿಸಿದಪ ॥
ಳೆನಿಸಿದ ಳಡಿಯೂಡುವವುರಿ [1]ಯೂವಕರಸದಿಂ ॥ ೭೩ ॥

ಅಳಿವಾಳೆಯ ನರುಣಾಂಬುಜ ।
ದಳದೊಳ್ ತಂದಿರಿಸುವಂತಿರಿರಿಸಿದ ಳೊರ್ವಳ್ ॥
ಜಳಜಾಕ್ಷಿ ಯರುಣಚರಣದೊ ।
ಳಳವಡೆ ರಣಿತೇಂದ್ರನೀಲಮಣಿನೂಪುರಮಂ ॥ ೭೪ ॥

ಮೇಖಳೆ ಯಿದತನುಶೈಲದ ।
ಮೇಖಳೆ ಯೆನೆ ಸತಿಯು ಗುರುನಿತಂಬದೊ ಳಳುರ್ವಂ ॥
ತಾಖಂಡಲವಧು ರತ್ನವು ।
ಯೂಖೋಜ್ಜ್ವಳಕಾಂಚಿಯಂ ತೊಡರ್ಚಿದಳೊರ್ವಳ್ ॥ ೭೫ ॥

ವ॥ ಮತ್ತೊರ್ವಳ್.

ಕಂ॥ ಬಗೆದ ಪಯೋಧರತಟದೊಳ್ ।
ಸೊಗಯಿಪ ನಕ್ಷತ್ರಮಾಲೆ ಯೆನೆ ಬಾಲೆಯು ಮೇ ॥
ಲೊಗೆದ ಪಯೋಧರತಟದೊಳ್ ।
ಸೊಗಯಿಪ ನಕ್ಷತ್ರಮಾಲೆಯಂ ಯೋಜಿಸಿದಳ್ ॥ ೭೬ ॥

ನನೆಗಣ್ ವಿಾಂಗಳಿ ನೊಪ್ಪುವ ।
ಮೊಗ ಮೆಂಬಲರ್ಗೊಳೆದ ತಡಿಯೊಳಿರಿಸಿದ ಳಿವಳಂ ॥
ಚೆಗಳ ನೆನೆ ಸತಿಯು ಕವಿಯೊಳ್ ।
ತಗುಳಿಸಿದಳ್ ಹಂಸರಚನೆಯೋಲೆಯು ನೊರ್ವಳ್ ॥ ೭೭ ॥

ಸ್ಮರಮೋಹನ ಮಂತ್ರಮನು ।
ದ್ಧರಿಸಿದ ಳಿವಳಮಳಕನಕಪಟ್ಟದೊಳೆನೆ ನೌಂ ॥
ದರಿಯು ಕದವುಗಳೊಳೊರ್ವಳ್ ।
ಸುರವಧು ಬರೆದಳ್ ವಿಚಿತ್ರಪತ್ರಾವಳಿಯಂ ॥ ೭೮ ॥

ಪೆಱಿಶಿಯಂ ಮುಸುಕುವ ಮುಗಿಲಂ ।
ಪೆಱಿಪಿಂಗಿಪ ಳೀಮರುತ್ಕುಮಾರಿಕೆ ಯೆನೆ ಚೆ ॥
ಲ್ವೆಱಿಗಿನಿ ಸಮಱಿದ ಳರಸಿಯ ।
ಮಿಱುಗುವ ಪೆಱಿಶಿನೊಸಲ ಕುರುಳ ಬಂಬಲ ನೊರ್ವಳ್ ॥ ೭೯ ॥

[1] ಯೂವಲ.

ಕಂ॥ ಮಿಱುಪಲಗೊಂಚಲಿ ನೊಪ್ಪುವ ।
ನಿಱಿದಳಿರ ತವಮಾಳಶೋಭೆ ಯೆನೆ ಬಾಸಿಗದಿಂ ॥
ನಿಱಿಸಿಗೆ ಸಲೆ ಯೆಸೆಯೆ ಮುಡಿಸಿದ ।
ಳಿಱುಕದಿ ನೊರ್ವಳ್ ಸುಪರ್ವವಧು ನೃಪವಧುವಂ ॥ ೮೦ ॥

ಉಡಿಸುವ ವಿಚಿತ್ರವಸ್ತ್ರಂ ।
ಮುಡಿಸುವ ಮುಂದಾರಮಾಲೆ ತನುಲತೆಯೊಳ್ ನೀ ॥
ರ್ವಡಿಸುವ ನವಾಂಗರಾಗಂ ।
ತುಡಿಸುವ ತೊಡವರಸಿಗಮುರ್ದು ವಮರಿಯರಿಂದಂ ॥ ೮೧ ॥

ವ॥ ಅದಲ್ಲದೆಯುಂ.

ಕಂ॥ ಡೋಳಿತಾಕೇಳಿಯು ಕಂದುಕ ।
ಕೇಳಿಯು ಪರಿಹಾಸಕೇಳಿಯು ತಿಕುಶಲಕಳಿತಾ ॥
ಕೇಳಿಯು ವನಕೇಳಿಯು [ಜಲ ।
ಕೇಳಿಯು] ಬಿನದದೊಳೆ ಸತಿಯು ನವರೊಸೆಯಿಸಿದರ್ ॥ ೮೨ ॥

ವ॥ ಮತ್ತಂ.

ಚಂ॥ ಅಮುರ್ದಿನ ನೋನೆ ಜೇನ ಮುಟಿಸಿ ಕರ್ಣರಸಾಯನ ಮಿಂತಿದೆಂಬಿನಂ ।
ಗಮುಕದುಪಾಂಗದೊಟ್ಟಿಜೆಯ ರೀತಿಯು ಕಾಕಿನ ನುಣ್ಪಿನೋಜೆಯೂ ॥
ಕ್ರಮುಣೆಯ ಭಂಗಿ ಸಂಗಳಿಸಿದಿಂಪಿನ ಸೊಂಪಿನ ಸುವ್ರತೀತಗೀ ।
ತಮು ನನಿಶಂ ಜಿನಾಂಬಿಕೆಗೆ ಬೀಱಿದುದಿಂದ್ರನ ಗಾಯಿಕಾಜನಂ ॥ ೮೩ ॥

ಕಂ॥ ಯುವತಿ ತತವಿತತಳನಸುಷಿ ।
ರವಾದ್ಯವಿದ್ಯಾವಿನೋದದಿಂ ಸುರವಧುವಿರ್ ॥
ಸವಿಯಂ ಕಿವಿಗೀಯೆ ಸುಖಾ ।
ರ್ಣವದೊಳಗೋಲಾಡಲಾರ್ತಳಿರುಳುಂ ಪಗಲುಂ ॥ ೮೪ ॥

---

*ಕಂ॥ ಈಪರಿಯೊಳಮರಸ್ತ್ರೀಯರ್ ।
ತಾಪರಿತೋಷದೊ[ಳೆವರ]ಜಿನಾಂಬಿಕೆಪದನಂ ॥
ಶ್ರೀಪೆಯಕ್ಕಱಿಗಿ ನುತಿಸುತೆ ।
ತಾಪರಿತೋಷದೊಳೆ ಭಕ್ತಿಯಿಂದಿರುತಾಗಳ್

* (ಈ ಪದ್ಯವು ೮೩ ನೆಯ ಪದ್ಯವಾಗಿ ಹಸ್ತಲಿಖಿತಪ್ರತಿಯಲ್ಲಿ ಬರೆದಿದೆ. ಗ್ರಂಥಕರ್ತೃನಿಬದ್ಧವಲ್ಲವೆಂದು ತೋಱಿಬರುವುದಱಿಂದ ರೇಖೆಯ ಕೆಳಗೆ ಬರೆದಿದೆ.)

ಕಂ॥ ಕರಣಾಂಗಹಾರಪರಿಣತಿ ।
ನಿರುಪಮರಸಭಾವ ವಸವು ಮೂಗಿರೆ ಚೆಲ್ವೊ ॥
ತ್ತರಿಸೆ ನೃಪಸತಿಯು ಸಭೆಯೊಳ್ ।
ಸುರನಟಿಯರ್ ನರ್ತಿಪಂತ ವೋನೊಪ್ಪಿದುದೋ ॥ ೪೫ ॥

ವ॥ ಅವಲ್ಲದೆಯುಂ.

ಕಂ॥ ಶ್ರುತದೇವಿಯೆ ಓಲಗಿಸಿದ ।
ಳತನುಹರಾಂಬಿಕೆಯ ನೆನಿಸಿ ಪುಸ್ತಕಹಸ್ತಾ ॥
ನ್ವಿತೆ ಪುಣ್ಯಕಥೆಯ ನೊರ್ವಳ್ ।
ಜತುರಾಸ್ಯಪ್ರಿಯೆ ಸುರಾಗದಿಂ ವಾಚಿಸಿದಳ್ ॥ ೪೬ ॥

ವ॥ ಮತ್ತಂ.

ಚಂ॥ ಮುತ್ತಿದಿಗೆ ನೋಸವೆತ್ತು ವೆಡೆಯೊಡೆವ ಬಡ್ತಿಪ ಸೋದಿಪೊಳ್ಳಿತಂ ।
ನುಡಿಸುವ ಕಂಚನುಳ್ಳುಡಿವ ಕೆಯ್ಗೞಿವಾರತಿದೋರ್ವ ಕೆಂದಳಂ ॥
ದೊಡೆವನುಲೇವನಂಗುಡುವ ವೀಳೆಯಮುಂ ತೆಗೆದೀವ ದಂದುಗಂ ।
ತೊಡರೆ ಮನಂಗೊಳಲ್ ನೆರೆದರಿಂದ್ರಲತಾಂಗಿಯರನ್ನವಾಸದೊಳ್ ॥ ೪೭ ॥

ಕಂ॥ ಅರುಣಮಣಿಕಂಕಣಪ್ರಭೆ ।
ವರೆದಿರೆ ಪಚ್ಚಡಿಸುವಲ್ಲಿ ಕುಂಕುಮರಸದೊಳ್ ॥
ಪೊರೆದುದು ಪಚ್ಚಡೆ ಮೆಂದೋ ।
ಸರಿಯಿಸಿದಳೆ ಸಬ್ಜೆವಲ್ಲಿ ತನಮೇಂ ಮುದ್ದೋ ॥ ೪೮ ॥

ಅಮಳಾಂಗಪ್ರಭೆ ಮುನ್ನೆಮೆ ।
ತಮಮುಂ ಬೆದಱಿಸೆಯುಂ ಮುರಸಿ ಗಿರುಳಾಸ್ಥನೀ ॥
ಸಮಯೋಚಿತ ಮೆಂದು ತಟ ।
ತ್ತುವಾರಿಯರ್ ಪಿಡಿವರುಂತೆ ಕೆಯ್ದಾವಿಗೆಯುಂ ॥ ೪೯ ॥

ವ॥ ಆ ಸಮಯದೊಳ್.

ಉ॥ ಮುಂಗಳಗರ್ಭಶೋಧನಮು ನಿಂದ್ರನಿವಾಸದ ದಿವ್ಯವಸ್ತುವ ।
ರ್ಗಂಗಳಿ ನಂದು ಮಾಡೆ ಸುರಸುಂದರಿಯರ್ ಪೆಱಿತೊಂದು ಚೆಲ್ವು ತ ॥
ನ್ನಂಗದೊಳಾಗೆ ಕಾಂತಿಯು ದಗುಂತಿಯು ನಾಂತವಲೋಹ ಮಾವಗಂ ।
ಬಿಂಗಿವ ಪೊನ್ನ ಪುತ್ತಳಿಯೊಲೊಪ್ಪಿದಳಾವಧು ವಜ್ಜಭಾವದೊಳ್ ॥ ೫೦ ॥

ವ॥ ಅಂತುಬಹುವಿಧವ್ಯಾಪಾರಪರಿಕರಪರಿಭ್ರಾಂತೆಯರುಂ, ವಿವಿಧವಿನೋದವಿರಚನೈಕತತ್ಪರ ನ್ವಾಂತೆಯರು ಮಾಗಿ ದಿವಿಜಕಾಂತೆಯರ್ ಕಣ್ಣಱಿದು ಮನಮಱಿದು ಸಮಯವಱಿದು ಇಚ್ಛೆಯನಱಿದು ನಿಚ್ಚಮೋಲಗಿಸುತಿರ್ಪನಂ ಮತ್ತೊಂದು ಪುಣ್ಯದಿನದೊಳಂ.

ಚಂ॥ ನೆಳೆ ಬಿಸನಾಳ ಮಾಗಿರೆ ತಳಂ ದಳ ಮಾಗಿರೆ ಲೋಳೆನೀಳಕುಂ ।
ತಳ ಮುಳಿಮಾಲೆ ಯಾಗಿರೆ ವರಿಚ್ಛದಮಾದರುಣಾಂಬರಂ ಸಮುಂ ॥
ತೆಳಸಿದ ಬಾಳಭಾನುರುಚಿ ಯಾಗಿರೆ ಪುಷ್ಪಿತೆಯಾಗಿ ಪುಷ್ಪಕೋ ।
ಮಳೆ ಜಯರಾವೆಂ ಕಾಮುಕಮುಳಾಕರದಬ್ಜಿನಿಯಂತಿರೊಪ್ಪಿದಳ್ ॥ ೬೦ ॥

ಚಂ॥ ಕೃತಸಹಕಾರನಂದನವಿಳಾಸೆ ಲತಾರುಣಪಾದಪದ್ಮರಾ ।
ಜಿತೆ ಘನಸೌಮ್ಯನಿರ್ಗತಪಯೋಧರೆ ಪೂರ್ಣಹಿಮಪ್ರಭಾಸ್ಯೆ ಸಂ ॥
ಗತಮಹಿಕಾಂತೆ ಮಾಸದ ವಿಳಾಸವೆಂ ವೆಯ್ವುಟಿಯಾದ ದೇವಿ ತಾಂ ।
ಋತುಮತಿ ಯಪ್ಪದಚ್ಚರಿಯೆ ವತ್ಸರಲಹ್ಮಿವೊಲಿರ್ಪ ದೂಸಱುಂ ॥ ೬೦ ॥

ವ॥ ಎನಿಸಿರ್ದನಂತರಂ ನಿರ್ವರ್ತಿತಚತುರ್ಥಸ್ನಾನೆ ಯಾಗಿ.

ಚಂ॥ ವನಿತೆ ವಿಳಾಸದಿಂ ಸುಲಿದ ದಂತಚಯಂ ನಿಜರಾಗದಿಂ ಘನ ।
ಸ್ತನಕಳಶಾಗ್ರಮುಕ್ಕರುಣಪಲ್ಲವಲೀಲೆಯ ನೀವುತಿರ್ಪ ಮು ॥
ನ್ನಿನ ಬೆಸನಂ ಬಿಸುಟ್ಟು ನವಚಂದನಚರ್ಚೆಯ ನಿತ್ತು ವೇನವ ।
ಕ್ಕನುಪಮಮಂಗಳೋಪಕರಣಪ್ರತಿಹಾರನ ಕೇಳಿ ಸಾಜವೋ ॥ ೬೨ ॥

ವ॥ ಅದಲ್ಲದೆಯುಂ.

ಮ॥ ಧೃತಮುಕ್ತಾಭರಣಂ ಪಯಃಕಣಗಣಂ ಶ್ರೀಖಂಡಲಿಪ್ತಾಂಗದೀ ।
ಧಿತಿ ತೋಯಪ್ರಸರಂ ದುಕೂಲವಸನಂ ಫೇನೋದ್ಗಮಂ ಮುಲ್ಲಕಾ ॥
ಸ್ಮಿತದಾಮಂ ತೆರೆಮಾಲೆ ಯಾಗೆ ವಿಮಳಹ್ರೀರಾರ್ಣವಶ್ರೀಯು ನಾ ।
ಶತಪತ್ರಾನನೆ ಪೊಲ್ತು ಬೆಳ್ವಸದನಂಗೊಂಡೇಂ ಮನಂಗೂರ್ಪಳೋ ॥ ೬೩ ॥

ವ॥ ತದನಂತರಂ.

ಚಂ॥ ಅಳವಡೆ ತನ್ನ ವೆಯ್ಯೊಳಭಿರಾಮತೆಯಿಂ ಧವಳಪ್ರಸಾಧನಂ ।
ಪಳಿಕಿನ ಪೆಣ್ಣೊ ಕರ್ಪುರ[ದಪೆಣ್ಣೊ]ಸುರೂಪ್ಯದ ಪೆಣ್ಣೊ ಮುಲ್ಲಕಾ ॥
ಕಳಿಕೆಯ ಪೆಣ್ಣೊ ಮೌಕ್ತಿಕದ ಪೆಣ್ಣೊ[ಸುವಜ್ರದ ಪೆಣ್ಣೊ]ಪೇಟಿ ಮಾ ।
ವಳೊ ದಿಟ ವೆಂಬಿನಂ ರಮಣಿ ರಂಜಿಸಿ ಭೂಪನ ಸೂಟಿಕ್ಕಿವಂದಪಳ್ ॥ ೬೪ ॥

ಶಾ॥ ಮಾಳಿಕಾಭೃಂಗನಿನಾದದಿಂ ದಗುರುಧೂಪಪಾಮೋದದಿಂ ಸಾರತಾಂ ।
ಬೂಳಿಸಾವ್ವಾದದಿ ನುದ್ಗವಾಹ್ಲದೆಲರಿಂ ದಾಹ್ಲಾದದಿಂ ಭಿತ್ತಿ ಚೆ ॥
ತ್ರಾಳೋಕ್ಯೈಕವಿನೋದದಿಂ ದಿದು ಮೊದಲ್ ಪಂಚೇಂದ್ರಿಯಪ್ರೀತಿಗೆಂ ।
ಬಾಳೋಚಕ್ಕೆಡೆಯಾಗಿ ರಯ್ಯ ಮೆನಿಸಿತ್ತುರ್ವೀಶಶಯ್ಯಾಗೃಹಂ ॥ ೬೬ ॥

ವ॥ ಅಲ್ಲಿ.

ಚಂ॥ ನವಮಣಿಮಂಚದಿಂದೆ ಮಿಸುಪಂಚೆಯ ತುಪ್ಪುರಿ ತೂಳಿಯಿಂದೆ ಪ ।
ಚ್ಚವಡಿಸಿದಚ್ಚನುಣ್ಣುಗುಲದಿಂದೆ ವಿಚಿತ್ರವಿತಾನ[ದಿಂದ]ಮು ॥
ಣ್ಮುವ ತೊಡವಿಂದೆ ಪೊನ್ನ ಪಟೀವಾವುಗೆ ಯಿಂದೆಸೆದಿರ್ದ ಸೆಜ್ಜೆಯೊಳ್ ।
ಪವಡಿಸಿ ವಲ್ಲಭಂಬೆರಸು ಸಲ್ಲಲಿತಾಂಗಿ ನಿಶಾವಸಾನದೊಳ್ ॥ ೯೭ ॥

ಚಂ॥ ನಿಜಗಮನಕ್ಕೆ ಮಚ್ಚರಿಪ ಮಂಥರಯಾನದ ದಾನದಂತಿಯಂ ।
ನಿಜಪತಿಕಂಧರಕ್ಕೆ ದೊರೆಯಾದುರುಕಂದದ ವುಕ್ಷರಾಜನಂ ॥
ನಿಜವಿಭುವಿಭ್ರಮಕ್ಕೆಡರುತಿರ್ಪ ತೊಡರ್ಪಿನ ಸಿಂಹಪೋತಮಂ ।
ನಿಜನೃಪವಕ್ಷದಿಂದಿರೆಗೆ ತಾಂ ದೊರೆಯಾದರವಿಂದವಾಸೆಯಂ ॥ ೯೮ ॥

ಉ॥ ತನ್ನಯ ನೀಳ್ದ ತೋಳ್ಗಳ ವಿಳಾಸವು ನಾಂತ ಲತಾಂತವೂಲೆಯಂ ।
ತನ್ನಯ ವಕ್ತ್ರಕಾಂತಿಯ ದಗುಂತಿಯ ನಾಂತ ಸುಧಾಂಶುಬಿಂಬವುಂ ॥
ತನ್ನಯ ಭರ್ತೃತೇಜವು ನುದಾಹರಿಪುದ್ಗತಭಾನುಬಿಂಬವುಂ ।
ತನ್ನಯ ಚೆಲ್ವಗಣ್ಬೊಣರ ಲೀಲೆಯ ನೇಟೀಪ ಬಾಟಿಶಿವಿನ್ಗಳಂ ॥ ೯೯ ॥

ಚಂ॥ ಬಿಗಿದೊಗೆದಾತ್ಮತುಂಗಕುಚಕುಂಭವು ನೊಡ್ಡಿಪ ಪೂರ್ಣಕುಂಭವುಂ ।
ಸೊಗಯಿಸುವಾತ್ಮಕೇಳಿಕವುಳಾಕರವುಂ ನಗುವಬ್ಜಷಂಡವುಂ ॥
ಪೊಗಟೀಸುವಾತ್ಮವಾನಸಗಭೀರತೆಯುಂ ವಿಗುವಂಬುರಾಶಿಯುಂ ।
ಬಗೆಗೊಳಿಪಾತ್ಮಪೀನಕಟಿಯುಂ ಸರಿವಾಪ್ಪಿ ಮೃಗೇಂದ್ರಪೀಠವುಂ ॥ ೧೦೦ ॥

ಚಂ॥ ತನತುವಿಚಿತ್ರವುಪ್ಪ ನಡೆವೊಡೆದ ಗಾಡಿಯು ಸದ್ವಿವಾನವುಂ ।
ತನತು ಸುರಮ್ಯಹರ್ಮ್ಯದ ವಿಳಾಸದ ರುಂದ್ರಫಣೀಂದ್ರಗೇಹವುಂ ॥
ತನತು ವಿಚಿತ್ರಶೀಲಗುಣರತ್ನವಿಭಾಸುರರತ್ನರಾಶಿಯಂ ।
ತನತು ಪತಿವ್ರತಾಪದದ ರೂಪದುದಗ್ರಶಿಖಾವುಖಾಗ್ನಿಯಂ ॥ ೧೦೧ ॥

ಕಂ। ನಿಜವುಖದೊಳ್ ಪುಗುವ ವುತಂ ।
ಗಜಪತಿವೆರಸಿಂತು ಕನಸುಪದಿನಾಱಿವುವು ನಂ ॥
ಬುಜವದನೆ ಕಂಡೆಳಪಗತ ।
ವೃಜಿನಂಗಳ ನಖಿಳವುಂಗಳೋದ್ಯಾಸಿಗಳಂ ॥ ೧೦೨ ॥

ವ। ಆ ಪ್ರಸಕ್ತಾವದೊಳ್.

ವು॥ ಎಳಬಿಂದುಶ್ರೀಯ ನುಚ್ಚಾಟಿಸಿ ರತಿರಭಸಕ್ಲಾಂತಕಾಂತಾನುಲೇಪಂ ।
ಗಳ ಕಂಪಂ ಪೊತ್ತು ಪೊಂದಾವರೆಯೆಸಳ್ವೊರೆಯೊಳ್ ಸೊಕ್ಕಿ ಸಿಲ್ಕಿರ್ದ ಭೃಂಗಂ ॥
ಗಳ ನಾಟಂದೆತ್ತಿ ನಿದ್ರಾಭರನಿರತಜಕೋರಂಗಳಂ ಸೋಂಕಿ ನೆಯ್ದಿ ।
ಲ್ಗೊಳ್ಗಳದೊಳ್ ಮಿಂದಾಡಿ ತೀಡಿತ್ತ ಪಹೃತಜನತಾಸುಪ್ತಿಭಾರಂ ಸವಿಾರಂ ॥ ೧೦೩ ॥

ವ। ಅನಂತರಂ.

ಕ॥ ನಿಖಿಳಸರೋರುಹಕುಟ್ಮಳ ।
ಮುಖಲಗ್ನಮಯೂಖಲೇಖೆಯಿಂ ಸುಪ್ತಶಿಳೀ ॥
ಮುಖಕುಳಿಮ ನುರ್ಚಿ ರವಿ ಶತ ।
ಮುಖದಿಜ್ಮುಖಶಿಖರಿಶಿಖರಶೇಖರ ನಾದಂ ॥ ೧೦೪ ॥

ವ॥ ಆಗಳ್.

ಕಂ॥ ಪಪ್ಪವರ ಮಂಗಳೋಕ್ತಿಯಿ ।
ನುಪ್ಪವಡಿಸಿ ನೀರೆ ಕೃತ್ತ್ನಮಂಗಳಮಂ ಸೂ ॥
ಟ್ಟಿಪ್ಪದೆ ನಿರ್ವರ್ತಿಸಿ ಕ ।
ಣ್ಗೊಪ್ಪಿರೆ ಕೆಯ್ಗೊಯ್ದು ದೇವಿ ಪರಿಜನಸಹಿತಂ ॥ ೧೦೫ ॥

ತಿರುವಿಂ ಪೊಳಕಿದ ಕಾಮನ ।
ಸರಲಂತಿರೆ ಬಂದಳೆಸೆಯೆ ಪಕ್ಷ್ಮಾಳಿಯ ವೆಂ ॥
ಯ್ಸಿರಿಯುಂ ಋಜುತ್ವಮುಂ ಗುಣ ।
ಪರಿಚಯಮುಂ ಧರ್ಮಸೇವ್ಯಮುಂ ಸಫಲತೆಯುಂ ॥ ೧೦೬ ॥

ಉ॥ ಆವಳೊ ರೂಪಿನಿಂ ಸೊಬಗಿನಿಂ ಗುಣದಿಂ ಪೊಣರ್ವನ್ನಳೀಮಹಾ ।
ದೇವಿಯೊಳೆಂದು ಕಾಳೆವಿಡಿಸುತ್ತುಮಿಸಲ್ಬಿರುದಿಂಗೆ ಕಂತು ಕೆ ॥
ಯ್ದಾವಿಗೆಯುಂ ಪಗಲ್ವಿಡಿದು ಬರ್ಪವೊಲಾಯ್ತುಡೆನೂಲ ಕಿಂಕಿಣೀ ।
ರಾವಮು ಮುಂಗಕಾಂತಿಯೆ ದಗುಂತಿಯುಂ ಮುಂಗನೆ ಬರ್ಪ ತಾಣದೊಳ್ ॥ ೧೦೭ ॥

ವ॥ ಅಂತುಬಂದು.

ಮ॥ ಧರಣೀಪಾಳಕದಂಡನಾಯಕಮಹಾಸಾಮಂತಮಂತ್ರಿವ್ರಜಂ ।
ಬೆರಸಾಸ್ಥಾನದೊಳಿರ್ದು ಪೇಂದ್ರನಿಭನಂ ರುಂದ್ರದ್ವಿಪದ್ವಿಪ್ಪವಿ ॥
ಮ್ಮರವಿಶ್ರಾಂತನ ನಾತ್ಮಕಾಂತನ ನುಪಾಂತೋದ್ದಾಮಸೀಮಂತಿನೀ ।
ಕರಚಾಮಾಕರಚಾಮರೋತ್ಕರಮರುದ್ವ್ಯಾಕೀರ್ಣಕರ್ಣಾರ್ಭನಂ ॥ ೧೦೮ ॥

ವ॥ ಸಾರ್ತಂದು ತದರ್ಥಾಸನಪ್ರದೇಶಮ ನಳಂಕರಿಸಿ.

ಚಂ॥ ಇದು ವದನೇಂದುಬಿಂಬದಿ ನೊಸರ್ವಮರ್ದಿಂಬಿನ ಮುಣ್ಮಿಪೊಣ್ಮೆ ದಂ ।
ತದ ರುಚಿ ಕಾಮುಕಾರ್ಮುಕಗುಣಧ್ವನಿ ಯೆಂಬಿನ ಮುಣ್ಮಿಪೊಣ್ಮೆ ಸ ॥
ನ್ಮೃದುರುತಿ ತನ್ನ ಕಂಡ ಕನಸೆಲ್ಲಮ ನಂಗನೆ ಪೇಟಿಸಿ ಕೇಳ್ದು ರಾ ।
ಗದಿ ನಱಿದೆಂದ ನಂದವಧಿಬೋಧದಿ ನಾವಿಭು ತತ್ಫಲಂಗಳಂ ॥ ೧೦೯ ॥

ವ॥ ದೇವಿ ನೀನಿಂದು ವಿದಿತರಜತಾಚಳೋಪಮಶೋಭಮುಂ ಮಹಾಮದೇಭಮುಂ ಕಂಡುದಱಿಂ ನಖಿಳಭದ್ರಲಕ್ಷಣಾಸ್ಥಾನನು, ಮನೂನದಾನನುಂ; ಹಿಮಥವಳೋದ್ದಾಮರುಂದ್ರನಂ ಗವೇಂದ್ರನಂ ಕಂಡುದಱಿಂ ನುನ್ನತಲಲಾಮನುಂ, ವೃಷಭಾಭಿರಾಮನುಂ; ಸ್ಫುರದರುಣಕೇಸರಪೀಠಾಗ್ರಮುಂ

ಸಿಂಗವುಂ ಕಂಡುದಱಿ ನನೇಕಪಾಪಹರಣನುಂ, ಮಹಾಮಹೀಭೃಚ್ಛರಣನುಂ; ನಿಜಕೃತಾಭಿಮತ ಕಮಳೆಯುಂ ವಿಮಳೆಯುಂ ಕಂಡುದಱಿ ನಚ್ಯುತಸುಖೈಕಸದ್ಮನುಂ, ಪ್ರಶಸ್ತಪದ್ಮನುಂ; ಬಂಧುರ ಸುಗಂಧದಾವುಂಗಳಂ ಕುಸುಮದಾವುಂಗಳಂ ಕಂಡುದಱಿ ನಮಳಸುಮನೋಗುಣಾನುಬಂಧಮಹಿ ತನುಂ, ಭ್ರಮರಹಿತನುಂ; ಶಿಶಿರಥವಳಚಂದ್ರಿಕಾಸಾಂದ್ರನಂ ಚಂದ್ರನಂ ಕಂಡುದಱಿ ನುನ್ನತಲಹ್ಮೀ ವಿಳಾಸಿಯುಂ, ದಿಗಂಬರಪ್ರಕಾಶಿಯುಂ; ಉದಯಗಿರಿಶಿಖರಾಭರಣನಂ ಸಹಸ್ರಕಿರಣನಂ ಕಂಡು ದಱಿ ನಪಗತಾಶೇಷದೋಷಾನುವೃತ್ತನುಂ, ಸವ್ಯುದ್ಧರ್ಶನನಿಮಿತ್ತನುಂ; ಜಲಕೇಳೀಲುಳಿತ ಸರಸೀ ಬಿಸಂಗಳಂ ಝಷಂಗಳಂ ಕಂಡುದಱಿ ನಮಳಾವ್ಪರಗೀತಜನ್ಮೋತ್ಸವಪ್ರಸಂಗನುಂ, ಅನಿಮಿಷೋ ತ್ತುಂಗನುಂ; ಪುಣ್ಯಾಂಬುಪೂರ್ಣಸೌವರ್ಣಕಾಂತಿಸ್ಫುಟಂಗಳಂ ಘಟಂಗಳಂ ಕಂಡುದಱಿ ನನನ್ಯ ಸುಭಟಪ್ರಭಾವ ಭಾರನುಂ, ಜಾತರೂಪಸಾರನುಂ; ಲಾಲಿತವ್ಯಾಳದಂಡವುಂ ಕಮಳಷಂಡವುಂ ಕಂಡುದಱಿನುದ್ದಂಡಪುಂಡರೀಕಲಹ್ಮೀವಿಳಾಸಿಯುಂ, ಗುಣವಿಭಾಸಿಯುಂ; ವಿಲೋಲಕಲ್ಲೋಲ ಭದ್ರಮುಂ ನಮುದ್ರಮುಂ ಕಂಡುದಱಿ ನಶೇಷಭುವನಾಶ್ರಯಮಹತ್ವನುಂ, ಸಂತರ್ಪಿತಸಕಳಸತ್ವ ನುಂ; ಕನತ್ಕನಕರುಚಿವಿಲುರವುಂ ಸಿಂಹಪೀಠಮುಂ ಕಂಡುದಱಿಂ ರುಚಿರರಚನಾಪ್ರಚುರಕಲ್ಯಾ ಣಾನುವೃತ್ತಿಯುಂ, ಹರಿಪೂಜ್ಯಮೂರ್ತಿಯುಂ; ನಿರುಪಮನಿಳಿಂಪದಂಪತೀವಿಭಾವಮುಂ ಸುರವಿವಾ ನಮುಂ ಕಂಡುದಱಿ ನಖಿಲವೈಮಾನಿಕಸ್ತೋತ್ರಪಾತ್ರನುಂ, ಸತ್ಪಥಚರಿತ್ರನುಂ; ಪರಿಹಾಸಿತಕೈಳಾಸ ವಿಳಾಸನಗಮುಂ ಫಣಿಪತಿನಿವಾಸಮುಂ ಕಂಡುದಱಿ ನಶೇಷಭೋಗಾನುಭವರಕ್ತನುಂ, ಕುಮು(ಸ) ತೋನ್ನತಿರಿಕ್ತನುಂ; ಸ್ಫುರಿತಕಿರಣಪ್ರಕಾಶಿಯುಂ ರತ್ನರಾಶಿಯುಂ ಕಂಡುದಱಿ ನತಿಮಹಾಘ್ರ್ಯಾ ಯೋಜ್ಯನುಂ, ಸದಾಲೋಕಪೂಜ್ಯನುಂ; ನಿರ್ಧೂಮಶಿಖಾಳಿಯುಂ ಜ್ವಾಳಿಯುಂ ಕಂಡುದಱಿ ನಾಶ್ರಿತ ಸಂತರ್ಪಣಪ್ರಚಂಡತೇಜಃಪವಿತ್ರನುಂ, ಜಗತ್ಪ್ರಾಣನು ಮಪ್ಪಂ.

ಕಂ॥ ತೀರ್ಥಕರಂ ಭವ್ಯಜನ ।
ಸ್ವಾರ್ಥಕರಂ ನಮಗೆ ಪುತ್ರನಾದಪ ನಿದು ಸ ॥
ತ್ಯರ್ಥಂ ಭಾವಿಸೆ ನಾಮೆ ಕೈ ।
ತಾರ್ಥರೆ ಮಿನ್ನಖಿಳಜಗದೊಳನುಪಮಚರಿತೇ ॥ ೧೧೦ ॥

ಸ್ವಾಗತಂ॥ ಅಲ್ಲದೊಂದು ನಿಜಸಸ್ಮಿತವಕ್ತ್ರೋ ।
ತ್ಫುಲ್ಲಪಂಕರುಹದೊಳ್ ಪುಗುತರ್ಪಂ ॥
ದ್ರೋಲ್ಲಸದ್ಗಜಮುಮಂ ಕನಸಿಂ ನೀ ।
ನಲ್ಲದಂಗನೆಗೆ ಕಾಣ್ಬುದು ವೊಗ್ಗೇ ॥ ೧೧೧ ॥

ಎಂದು ಪೇೞ್ದಿ ನಿಜನಾಥನ ಮಾತಂ ।
ಬಿಂದುರೋಚಿ ಕುಡೆ ಹೃತ್ಕುಮುದಶ್ರೀ ॥
ಗೆಂದುಮಿಲ್ಲದ ಮಹೋತ್ಸವಮುಂ ಕೇ ।
ಳ್ದಂದು ದೇವಿ ಪುಳಕಾಂಕಿತೆ ಯಾದಳ್ ॥ ೧೧೨ ॥

ವ॥ ಆಗಿ ಸಂತೋಷಂಬಟ್ಟನಂತರ ಮುಚಿತತಾಂಬೂಲದಾನಸಮನ್ವಿತೆ ನಿಜನಿವಾಸಕ್ಕೆ ಬಂದು ಸುಖದಿ ನಿರೆ.

ಮ॥ ನಿರುತಂ ಫಾಲ್ಗುಣಮಾಸಕೃಷ್ಣನವಮೀರಾತ್ರ್ಯಂತದೊಳ್ ಮೂಲಮಾ ।
ಗಿರೆ ನಕ್ಷತ್ರ ಮವರ್ತ್ಯನಾಯಕಕೃತಸ್ವರ್ಗಾವತಾರೋತ್ಸವಂ ॥
ಪರಮಂ ಪರ್ಯಾಣತಕಲ್ಪದಾರುಣವಿಮಾನೋದ್ದೇಶದಿಂ ಬಂದು ಬಂ ।
ಧುರವಕ್ತ್ರಾಬ್ಜನಿವಿಷ್ಟ ನಾಶ್ರಯಿಸಿದಂ ರಾಮಾಂಬಿಕಾಗರ್ಭಮಂ ॥ ೧೧೩ ॥

ವ॥ ಅಂತಾಶ್ರಯಿಸಿ ಸುಗ್ರೀವನೆಂಬ ಥರ್ವರತ್ನಾಕರಗರ್ಭಶುಕ್ತಿ ಸಂಪುಟದೊಳ್ ಸುವೃತ್ತ ಮೌಕ್ತಿಕರತ್ನದಂತೆಯುಂ, ಜಠರಜಾಹ್ನವೀಜಳದೊಳಮಳಕಮಳದಂತೆಯುಂ ಪ್ರವರ್ಧಮಾನ ನಾಗಿ ಬಳೆವಲ್ಲಿ.

ಕಂ॥ ನಿಳೆಯದ ದುಗುಲದ ಜವನಿಕೆ ।
ಯೊಳಗಣ ಮಾಣಿಕದ ಸೊಡರ ಕುಡಿ ಬೆಳಗುವವೋಲ್ ॥
ಬೆಳಗಿದುದು ತಾಯ ತೆಳ್ವಸಿ ।
ಜಿಠೊಳಗಣ ಘನದಿನನ ತೇಜ ಮುಜಿವಿನ ಬೀಜಂ ॥ ೧೧೪ ॥

ನಳಿನೀವನಕಿಂಜಲ್ಕದೊ ।
ಳೆಳಸಿಯು ಮೆಳನೀಸಜಿಂತೆ ಪೀಡೆಯು ನವ್ಯಾ ॥
ಕುಳ ವಿಾಯದಂತಿರೀಯನೆ ।
ಲಳಿತೆಯು ಗರ್ಭದೊಳಗಿರ್ದು ಮೂರ್ಜಿತತೇಜಂ ॥ ೧೧೫ ॥

ವ॥ ಅದಲ್ಲದೆಯುಂ.

ಮ॥ ತನುರೋಮಾವಳಿಗೊಯ್ಯನೊಯ್ಯನೆ ಪಸುರ್ಪಂ ಚೂಚಕಕ್ಕೊಯ್ಯನೊ ।
ಯ್ಯನೆ ಕರ್ಪಂ ವಳಿಗೊಯ್ಯನೊಯ್ಯನಬಿವಂ ಶಾತೋದರಕ್ಕೊಯ್ಯನೊ ॥
ಯ್ಯನೆ ಕೊರ್ವಂ ಮೊಗಕೊಯ್ಯನೊಯ್ಯನೆ ಬೆಳರ್ಪಂ ಕುಂತಳಕ್ಕೊಯ್ಯನೊ ।
ಯ್ಯನೆ ನೀಳ್ಪಂ ವಿುಗೆ ಮಾಡುವಾಸತಿಯು ಗರ್ಭಾಧಾನ ಮೋನೊಪ್ಪಿತೋ ॥ ೧೧೬ ॥

ವ॥ ಮತ್ತಂ.

ಕಂ॥ ತನುಬಡವಪ್ಪ ತೂಂಕಡಿಸು ವಾಗುಳಿ ಪುಟ್ಟ ಕನಲ್ದೊನಲ್ದು ಸುಯ್ ।
ಜನಿಯಿಸುವಂಘ್ರಿ ರೊಮ್ಮಡರ್ವ ಪೊಂಗಿ ಬಸಿಱಿಲ್ ಬಿಗಿದನ್ಯಗರ್ಭಿಣೀ ॥
ಜನದ ವಿಕಾರ ಮಾಸತಿಯೊಳಾಗವೆ ತಾಂ ನೆಲಸಿರ್ಪ ತಾಣದೊಳ್ ।
ಜಿನನ ವಿಕಾರಿ ಜಾಡ್ಯದ ವಿಕಾರಮು ನೀಕಿರಲೀವ ನೆಂಬಿನಂ ॥ ೧೧೭ ॥

ವ॥ ಅದಲ್ಲದೆಯುಂ.

ಕಂ॥ ಸ್ಮರರಾಗೋದ್ರೇಕಂ ವೀ ।
ತರಾಗ ನಿರ್ದೆಡೆಯೊಳೇಕೆ ಪುಟ್ಟುಗು ಮೆನೆ ತ ॥
ತ್ಪರತೆಯಿ ನಂತರ್ವತ್ನಿಯೊ ।
ಳರಸ ನಪೇಕ್ಷಿಸನೆ ರತಿರಹಸ್ಯೋತ್ಸವಮಂ ॥ ೧೧೮ ॥

ವ॥ ಮತ್ತಂ.

ಮು॥ ಘನಸಂಭೋಗಸುಖಂ ವಿರಾಮವಿರಸಂ ಭಾವಿಪ್ಪೊಡಿಂಬಿಲ್ಲದೆಂ ।
ದು ನೃಪಂ ಮಾಣ್ದಹಮಿಂದ್ರನಂತೆ ತಣಿವಂ ಕಾಯಪ್ಪವೀಚಾರದೂ ॥
ರನೊಜಿಲ್ದೊಪಳ ರೂಪ ನೀಕ್ಷಿಪ ವಿದಗ್ಧಾಳಾಪಮಂ ಕೇಳ್ವ ನಾ ।
ರ್ದಿನಿಸಂ ಬಾಯ್ಸುವಿವಾನನಾಂಬುಜದ ಕಂಪಂ ಕೊಳ್ವ ಸಂಪ್ರೀತಿಯಿಂ ॥ ೧೦೯ ॥

ವ॥ ಆಸಮಯದೊಳ್.

ಮು॥ ಸುರಲೋಕೋದ್ಗತಸಾರವಸ್ತುಶತಮುಂ ಶಕ್ರಾಂಗನಾಕೋಟಿಯುಂ ।
ನರಲೋಕೋದ್ಗತಸಾರವಸ್ತುಶತಮುಂ ಸುಗ್ರೀವರಾಜೇಂದ್ರನುಂ ॥
ತರವೇಲಿಲ್ದಾಗಳೆ ತಂದು ಕೂಡೆ ನೆಜಿಪಿ ಸಾಫಲ್ಯಕ್ಕೆ ವಕ್ಕಾದಳಾ ।
ಹರಿಣೀಲೋಚನೆ ಗರ್ಭದೊಳ್ ಬಳೆಯೆ ಭಾಸ್ವದ್ಭವ್ಯರತ್ನಾರ್ಣವಂ ॥ ೧೧೦ ॥

ಗದ್ಯಂ

ಇದು ಸಮಸ್ತ ಭುವನಜನನಸಂಸ್ತುತಜಿನಾಗಮುಕುಮುದ್ವತೀಚಾರುಚಂದ್ರಾಯಮಾಣ
ಶ್ರೀಮದುಭಯಕವಿಕಮಳಗರ್ಭ ಮುನಿಚೆಂದ್ರ ಪಂಡಿತ ದೇವಸುವ್ಯಕ್ತಸೂಕ್ತಿಚಂದ್ರಿಕಾ
ಪಾನಪರಿಪುಷ್ಟಮಾನಸಮರಾಳ

ಗುಣವರ್ಮನಿರ್ಮಿತಮುಪ್ಪ

ಪುಷ್ಪದಂತಪುರಾಣದೊಳ್

ಗರ್ಭಾವತರಣಂ ನಾಮ

ನವಮಾಶ್ವಾಸಂ

ಶ್ರೀ

ಪುಷ್ಪದಂತ ಪುರಾಣಂ

ದಶಮಾಶ್ವಾಸಂ.

ಕಂ॥ ಶ್ರೀಜಯರಾಮೆ ಮನೋಜ ।
ಶ್ರೀಜಯರಾಮೆಯಪೊಲೆಸೆದ ಳಿನಿಯಂ ಗುದ್ಯ ॥
ತ್ತೇಜಂ ಬಳೆದಿರೆ ಗರ್ಭನ ।
ರೋಜಿನಿಯೊಳ್ ಪ್ರಭುಗುಣಾಬ್ಜಿನೀಕಳಹಂಸಂ ॥ ೧ ॥

ವ॥ ಅಂತಾವಿರ್ಭೂತಗರ್ಭನಿರ್ಭರವಿಕಾಸೆಯುಂ, ಸಫಳೀಕೃತಗರ್ಭದೋಹಳಪ್ರಕಾರೆಯು ಮಾಗುತ್ತು ಮಿರ್ದ ತನ್ಮಹಾದೇವಿಯ ಪರಿಪೂರ್ಣಪ್ರಸವಸಮಯಂ ಮಾರ್ಗಶಿರಬಹುಳದಶಮಿ ಯಾಗೆ.

ಮ॥ ಒದವಂ ಭವ್ಯಮುಖಾಂಬುಜಕ್ಕೆ ಮುದಮಂ ಸದ್ಧರ್ಮಚಕ್ರಕ್ಕೆ ಸಂ ।
ವದಮಂ ಲೋಕದ ದೃಷ್ಟಿಗಸ್ತವದಮಂ ದೋಷಾವಕಾಶಕ್ಕೆ ಹೃ ॥
ದ್ಗದಮಂ ದುರ್ಮ[1]ತಕೌಶಿಕಕ್ಕೆ ಪಡೆಯುತ್ತಿತ್ತಿಕ್ಷ್ವಾಕುವಂಶೇಂದ್ರಶೈ ।
ಲದಿ ನತ್ಯೂರ್ಜಿತತೇಜ ನುದ್ಭವಿಸಿದಂ ತ್ರೈಲೋಕ್ಯನಾಥಂ ಜನಂ ॥ ೨ ॥

ವ॥ ಆ ಪ್ರಸನ್ನಾವದೊಳ್.

ಮ॥ ಕುಜವಲ್ಲಿ[2] ಫಲಪುಷ್ಪಸಂಪ್ರಯುತ ಮಾಯ್ತುರ್ವೀತಳಂ ಸ್ಪಷ್ಟ ಮಾ ।
ಯ್ತು ಜಳಂ ಪ್ರಜ್ವಳವಾಯ್ತು ವಹ್ನಿ ಹಿಮಗಂಧೋದ್ಗಾರಿ ಯಾಯ್ತುಂದು ಗಾ ॥
ಳಿ ಜಿತಾಂಭೋದಕಳಂಕ ಮಾಯ್ತು ನಭ ಮೆಂತುಂ ಸರ್ವಭೂತೋಪಕಾ ।
ರಿ ಜಿನಂ ಪುಟ್ಟಿದೊಡೊಳ್ಪು ಪುಟ್ಟುವುದು ಪಂಗೇ ಪಂಚಭೂತಂಗಳೊಳ್ ॥ ೩ ॥

ಕಂ॥ ಅಟಿಃಪಿಂದೆ ಬಟಿಃಯು ನುಟಿಃಯದೆ ।
ಸುಟಿಃದುಗುಳುವ? ತುಂಬಿವಿಂಡೆ ನೆಳೆತರುತುಂ ಪೊಂ ॥
ಪುಟಿಃವೋಗೆ ಕಂವು ಪೂಮಟಿಃ ।
ಳುಟಿಃಲನೆ ದಟಿದಟಿಃಸಿ ಸುರಿಯೆ ದೆಸೆಗಳೊಳ್ಳಿಂ ॥ ೪ ॥

ವ॥ ಆಗಳಾ ಸೌಧರ್ಮೇಂದ್ರಂ ತನಗಾಸನಕಂಪ ಮಾಗಲೊಡಂ ಅವಧಿಬೋಧದಿಂ ತೀರ್ಥ ಕರೋತ್ಪತ್ತಿಯಂ ಜಲಕ್ಕನಟಿಃದು.

ಚಂ॥ ತಡೆದಿರದೆಟಿದ್ದು ವಿಪ್ಪುರದಿ ನಾನತಮಸ್ತಕ ನಾಗಿ ಮೂಜಿಸೂಟಿ್ ।
ಪೊಡೆವಡುವಲ್ಲಿ ಮಾಣಿಕದ ಮೌಳಿಮರೀಚಿ ಸಭಾವಿಭಾಗದೊಳ್ ॥
ಪೊಡದರ್ದು ಪೊದಟಿದ್ದು ಪಜ್ಜಳಿಸೆ ರಾಗರಸಾಪಸೆ ಬಂದು ನಿಂದ ಪೆ ।
ರ್ಮಡುವಿನೊಳೆಂದು ಮೂಡಿ ಮುಟಿಃಗಿರ್ಪ ಪೊಲೇನೆಸೆದಂ ಪುರಂದರಂ ॥ ೫ ॥

---

[1] ದುರ್ಮದ. [2] ಕುಜವೆಳ್ಳಂ (ಎಂದಿರಬಹುದು).

ವ॥ ಅನಂತರಂ ಪರಮೇಶ್ವರದ್ವಿತೀಯಕಲ್ಯಾಣಕರಣೋತ್ಸುಕಾಂತಃಕರಣ ನೈರಾವಣಾರೂಢಂ ಶಚೀನಮೇತನುಂ, ಚತುರ್ವಿಧಾಮರಪರೀತನುಂ ಮಾಗಿ ಪೊಱಮಡುವುದುಂ (ನಿಜಮಹಾವಿಭೂತಿಯಂ).

ಕಂ॥ ಪ್ರಕಟನೆ ನೆರೆದುದು ನಾವಮಾ ।
ನಿಕತ್ರಯತ್ರಿಂಶದಾತ್ಮರಕ್ಷಕ ದಿಕ್ಪಾ ॥
ಲಕ ಪರಿಷದಾಭಿಯೋಗ್ಯ ।
ಪ್ರಕೀರ್ಣಕಿಲ್ಬಿಷಕಭೇದ ಸುರಪರಿವಾರಂ ॥ ೬ ॥

ವ॥ ಮತ್ತಂ.

ಕಂ॥ ಘನಚಂದ್ರೋದಯದಬ್ಧಿಗ ।
ಳೆನಿಸಿದು ವತಿರಭಸ ಮೆನೆಯೆ ಕರಿತುರಗಸ್ಯಂ ॥
ದನಪತ್ತಿವೃಷಭಗಂಧ ।
ರ್ವನರ್ತಕೀಪ್ರಕರಯುತಸುರಾನೀಕಿನಿಗಳ್ ॥ ೭ ॥

ವ॥ ಅಂತು ನೆರೆದತಿಬಹುಳಕೋಳಾಹಳಕ್ಷೋಭ ಶೋಭಾವಳಂಬಿಯಾದಮರನೀನಾಸಹಸ್ರಸಮಿತಿ ವೆರಸು.

ಸ್ರ॥ ವ್ಯೋಮಂ ಚಿತ್ರಾತಪತ್ರಂಗಳಿ ನತುಳವತಾಕಾಪಟಶ್ರೇಣಿಯಿಂ ಪೌ ।
ಲೋಮಾದೃಕ್ಕಂದ್ರಿಕಾಜಾಲದಿ ನಸಮಿಷಕಾಂತಾಂಗಶೃಂಗಾರದಿಂ ನಾ ॥
ನಾವಾಂಗ[ಲ್ಯಾನ]ಕಥ್ವಾನದಿ ನಮರಗಜೋದ್ಯನ್ಮದಾಮೋದದಿಂ ದಿ ।
ಕ್ಸೀವಾಪ್ರಾಂತಂಬರಂ ತಿಂತಿಣಿ ಯೆನಿಸಿರೆ ಕಾಕಂದಿ ಗೆಟ್ಟಿಂದ ನಿಂದ್ರಂ ॥ ೮ ॥

ವ॥ ಅಂತು ಬಂದು ತತ್ಪುರಬಹಿರ್ಭಾಗದೊಳ್ ಸಕಳದೇವಕೋಟಿಯಂ ನಿಱಿಸಿ ಬರೆ ಪೊಱಮಟ್ಟಲೊಳ್.

ಕಂ॥ ಪಸರಿಪ ಪೂಮಟಿಶಿ ಯೊಡನೊಡ ।
ನೆಸೆವುತ್ಸವತೂರ್ಯನಿನದ ಮೊಡನೊಡನಲೆದಾ ॥
ಱಿಸುವ ಹಿಮಾನಿಳ ಮೊಡನೊಡ ।
ನೆಸೆದುದು ಜಯ ಜೀವ ನಂದ ವರ್ಧಸ್ವ ರವಂ ॥ ೯ ॥

ವರಮೇಶ್ವರ ನುದಯಿಸಿದಂ ।
ನೆರೆದೆಲ್ಲರು ಮೆಱಿಗಿ ವಿಾಗಳೆಂದು ಪುರಶ್ರೀ ॥
ಸುರನರಖಚರೋರಗರಂ ।
ಕರಿವಂತೊಪ್ಪಿದು ವಸಂಖ್ಯತೂರ್ಯರವಂಗಳ್ ॥ ೧೦ ॥

ವ॥ ಮತ್ತಮಾಸಮಯದೊಳ್.

ಮ॥ ತ್ರಿದಶರ್ ಬಾಜಿಪ ದಿವ್ಯತೂರ್ಯರವಮುಂ ನಿಷ್ಕಂಪಕರ್ಣಂಗಳಿಂ ।
ಗಿ ದಿಶಾಡಂತಿಗಳಿಂತಲಿಪಲ್ಲಿ ಮದಮುಂ ಗಂಡೆಸ್ಥಳೋದೀರ್ಣಕಂ ॥
ಪದೊಳಂ ಸೇವಿಸಿ ತುಂಬಿಗಳ್ ತಣಿದು ವೇನುತ್ಸಾಹಮುಂ ಮಾಡದಿ ।
ರ್ದುದೆ ಸನ್ಮಾರ್ಗದೊಳಂ ಕ್ರಮಾಧಿಕರೊಳುದ್ಯದ್ದಾನಸಂಪ್ರೀತಿಯುಂ ॥ ೧೧ ॥

ವ॥ ಅನ್ನೆಗ ಮಿತ್ತ ದೇವಲೋಕದೊಳ್.

ಹರಿಣೀ॥ ಅಮರಪಟಹಧ್ವಾನಂ ತನ್ನಿಂದೆ ತಾನೆ ವಿಘೂರ್ಣಿಸಿ ।
ತ್ತಮರಮಕುಟಾನೀಕಂ ತನ್ನಿಂದೆ ತಾನೆ ವಿನಮ್ರ ಮಾ ॥
ಯ್ತಮರಕುಸುಮಾಸಾರಂ ತನ್ನಿಂದೆ ತಾನೆ ಪೊದಟ್ಟಿದಂ ।
ದಮರನುತ ನಪ್ಪರ್ಹತ್ಪುಣ್ಯಪ್ರಭಾವದಿ ನೆತ್ತಲುಂ ॥ ೧೨ ॥

ಮ॥ ನಿರುತಂ ಭಾವನರುಂ ವನಾವಸಥರುಂ ಜ್ಯೋತಿಷ್ಕರುಂ ಕಲ್ಪವಾ ।
ಸರು ಮಾಗಿರ್ದ ಚತುರ್ವಿಧಾಮರರುದಾರರ್ ಸ್ತೋಮದೊಳ್‌ಕೂಡೆ ಭೋ ॥
ರ್ಗರೆಯುತ್ತಿರ್ದು ವನೇಕಶಂಖರವಭೇರೀಭೋಷಕಂಠೀರವ ।
ಸ್ವರಘಂಟಾರುತಿಗಳ್ ಯಥಾಕ್ರಮದಿ ನತ್ಯಾಶ್ಚರ್ಯ ವೆಂಬನ್ನೆಗಂ ॥ ೧೩ ॥

ಕಂ॥ ಸ್ಮರಹರ ನುದಯಮು ನಱಿಪುವ ।
ಸುರವಿಪ್ಪರದೊಡನೆ ನಡುಗಿ ತಲರ್ವಿಲ್ಲು ಮಿದ ॥
ಚ್ಚರಿ ನೇಣ ಭೇದ ವತನುವ ।
ಶರಾಸನಕ್ಕಂ ಸುರಾಸನಕ್ಕ ಮದೊಂದೇ ॥ ೧೪ ॥

ವ॥ ಅಂತು ಸಮುಚಿತಾಮರೇಂದ್ರಸಮಿತಿವೆರಸು ಬಂದು ನಿಜನಿಳಯ ನಿರ್ವಿಶೇಷಲೀಲಾ ವಿಲಾಸಮುಂ ವಿವಿಧಮಂಗಳಪರಂಪರಾಪರಿಕರವಿಭಾಸಮುಂ ಸುಗ್ರೀವನಿವಾಸಮುಂ ಪೊಕ್ಕು ನಿಯಮಿಸೆ.

ಕಂ॥ ಶತಮಖನನುಮತೆ ದಿಗ್ಗಜ ।
ಪತಿಯಿಂ ದಿಱಿದುಚಿತದೇವಿಯರ್ವೆರಸು ತಿರೋ ॥
ಹಿತದೇಹೆ ಯಾಗಿ [1]ವಿನಯನಿ ।
ಭೃತೆ ಪೊಕ್ಕಿಂದ್ರಾಣಿ ಸೂತಿಕಾಮಂದಿರಮುಂ ॥ ೧೫ ॥

ಉ॥ ಸ್ಫಾರಶರೀರಕಾಂತಿ ಜನನೀನಯನಾಬ್ಜಮ ನುಳ್ಳಲರ್ಚಿ ವಿ ।
ಸ್ತಾರಮನೋರಥಾಂಗಮ ನೊಣರ್ಚೆ ಬೆಳರ್ಪೆಳನೇಸಱಿಂತೆ ತೇ ॥
ಜೋರುಚಿರಾತ್ಮ ನಲ್ಲಿರೆ ಜಿನಾರ್ಭಕ ನೊರ್ಮ್ಮೆಯೆ ಕಂಡು ನಿಂದು ಕ ।
ಣ್ಣಾರೆ ವುಳೋಮವುತ್ರಿ ನಡೆ ನೋಡಿದಳಿಕ್ಕಿಱಿ ನುಂಟುಮಾಡಿದರ್ ॥ ೧೬ ॥

ವ॥ ಅಂತು ನೋಡಿ ತನಗದೃಷ್ಟಪೂರ್ವಮಪ್ಪ ಜಿನಾರ್ಭಕನ ಸರ್ವಾಂಗಸೌಂದರ್ಯಮುಂ, ಸರ್ವಲಕ್ಷಣಸಂಪತ್ತಿಯುಂ ಚಿತ್ತಮುಂ ಕೌತುಕಂಗೊಳಿಸೆ ನಿಟಿಲತಟಘಟಿತಕರಸರೋಜ ಯಾಗಿ.

[1] ನಯವಿನಿಭೃತೆ.

ಕಂ॥ ಜಿನನಿರ್ದ ಶಯನಸದನಮು ।
ನನಿಮಿಷವಧು ಮೂವೆ ಭಕ್ತಿಯಿಂ ಬಲಗೊಳುತಂ ॥
ಕನಕಾಬ್ಜವೊಳಗೆ ಸರಸಿಯ ।
ನನುನಯದಿಂ ಬಳಸುವಂಚೆಯಂ ನೆನೆಯಿಸಿದಳ್ ॥ ೧೭ ॥

ವ॥ ಅನಂತರಂ ತಾಯ ಮುಂದೆ ಮಾಯಾಶಿಶುವ ನಿರಿಸಿ.

ಕಂ॥ ಅಂಜಿಯುಂ ಮುಂಜದೆ ತೆಗೆದಳ್ ।
ರಂಜಿಪ ಜಿನಶಿಶುವ ನಂದು ಶಚಿ ಶುಚಿ ತೆಗೆವಂ ॥
ತಂಜಿಯುಂ ಮುಂಜದೆ ದಿವ್ಯಮು ।
ನಂಜದರಾರ್ ಮುಟ್ಟುವಲ್ಲಿ ತೇಜಸ್ವಿಗಳಂ ॥ ೧೮ ॥

ವ॥ ಅಂತು ತೆಗದತ್ತಿಕೊಂಡು ದೇವಾಂಗನಾಮುಂಗಳರವಂಗಳುಂ, ಮುಂಗಳಾನಕಂಗಳುಂ ಭೋಗ್ಗರೆಯೆ ಪೊಱಮಟ್ಟು ಬರ್ಪಲ್ಲಿ.

ಉ॥ ಭಾಸ್ವರಭಕ್ತಿಯಿಂ ದೆಱಿಗೆ ದೇವಗಣಂ ಜಯ ಜೀವ ನಂದ ವ ।
ರ್ಧಸ್ವ ಘನಸ್ವನಂ ನೆಗಟ್ಟಿಸಿ ಬೀಸುವ ಸೀಗುರಿ ಸೋಗೆ ಯಾಗೆ ಕಾ ॥
ರ್ತಸ್ವರಮೌಳಿಮಾಳೆ ಕುಡುವಿಂಚಿನ ಗೊಂಚಲ ಕಾಂತಿಸಾರಸ ।
ರ್ವಸ್ವಮು ನೀಯೆ ಪೋಲ್ತೆನೆದು ದಂದು ಘನಾಗಮಮಮಂ ಜಿನಾಗಮಂ ॥ ೧೯ ॥

ವ॥ ಆಗಳತಿಭಕ್ತಿಯಿಂ ದೆಱಿಗುವಂತೆಱಿಗುವಿಭಪತಿಯು ಮೇಗಣ್ಗೆ ದಿಕ್ಕರಿಕರಾನುಕಾರಿ ನಿಜ ಭುಜಾದಂಡೆಂಗಳಂ ನೀಡಿ ಶಚೀದೇವಿಯಿಂ ತೆಗದು ತತ್ಕರಸರೋಜಂಗಳತ್ತಣಿಂದೆತ್ತಿಕೊಂಡು.

ಕಂ॥ ತಲೆಯೊಳ್ ತಾಳ್ದುವ ನೊಸಲೊಳ್ ।
ನಿಲಿಪೆರ್ದೆಯೊಳ್ ತಳೆವ ಕುಳಿಸಿ ಚೂಡಾಮಣಿಗಂ ॥
[1]ತಿಲಕಕ್ಕೆಕ್ಕಸರಕ್ಕಂ ।
ನಲಿನಲಿ ದೆಸೆವಾಡಿದಂ ಜಿನೇಂದ್ರಾರ್ಭಕನಂ ॥ ೨೦ ॥

ವ॥ ಅನಂತರಂ ತದಂಗಸಂಗಸಂಜನಿತಪರಮಾನಂದರೋಮಾಂಚಕಂಚುಕಿತಗಾತ್ರಂ ಸಹಸ್ರ ನೇತ್ರಂ ನಿಜೋತ್ಸಂಗತುಂಗಸಿಂಹಾಸನಸ್ಥಿತಂಮಾಡಿದಾಗಳ್.

ಕಂ॥ ಇನ್ನೆವರ ಮಱಳ ಮೆನಿಸಿದು ।
ದೆನ್ನಹ್ಮಿಸಹಸ್ರ ದೊಂದುಜನ್ಮಮು[ಮ]ನಿಮೇ ॥
[2]ಷೋನ್ನತಿ(ಯಿಂ)ಗಳ್ ಜಿನ (ತನು) ।
ವನ್ನೋಡುವ ಸಯ್ಪಿನಿಂದ ಮಾ(ದುದು)[3]ಸಫಳಂ ॥ ೨೧ ॥

ವ॥ ಎಂದು ಪರಿತೋಷಪರಾಕಾಷ್ಠೆಯೊಳ್ ನಿಷ್ಠಿತಾತ್ಮ ನಾಗುತ್ತುಂ.

[1] ತಿಲಕಕ್ಕಮೆಕ್ಕಸರಕಂ. [2] ಷೋನ್ನತಿಯುವಿಗಳ್ ಜಿನನನ್ನೋಡುವ. [3] ಮಾಯ್ದುಂ.

ಚಂ॥ ತಳೆದು ನಿಜಾಂಗಪೀಠತಟದೊಳ್ ಜಿನನಂ ತನಿನೋಂಕಿ ಹಸ್ತದಿಂ ।
ಪುಳಕಿತಗಾತ್ರ ನಾಗಿ ಮಳುವಂ ಮೆಱಿಸಿದಂ ಪೆಱಿಗೇಱಿ ಬರ್ಪ ನ ॥
ಲ್ಲಳ ಕುಚಕುಂಭದೊಂದು ತನಿನೋಂಕಿನ ಸೌಖ್ಯ ಮುದಿಂತೆನಲ್ ಮನಂ ।
ಗೊಳೆ ತವರಾಜದಿಂಪ ನಱಿದಿಂ ಬಱಿಕಂ ಪರಿಗಿಂಬು [1]ಸೇವ್ಯಮೇ ॥ ೨೦ ॥

ವ॥ ಆಗಳತ್ಯಂತಕಳಧೌತಶೈಲಸನ್ನಿಧಿಯ ಕುಳಗಿರಿಗಳೆನಿಸಿದ ನಿಜನಿಜಗಜಂಗಳಂ ಸೌಧ ಮೆರ್ಮೀಂದ್ರ ನೇಱಿರ್ದೈರಾವತಕ್ಕೆ ಪಕ್ಕುವಮಾಡಿ.

ಕಂ॥ ಮುತ್ತಿನ ಬಿಂಬದ ಜಾಳದೆ ।
ಮುತ್ತಿನ ವಿಭ್ರಮದಿ ನೆಸೆವ ಬೆಳ್ಗೊಡೆ ಭಗಣಂ ॥
ಸುತ್ತಿರೆ ಮಿಸುಗುವ ಶಶಿ ಯೆನಿ ।
ಸುತ್ತಿರೆ ಜಿನಪತಿಗೆ ಪಿಡಿದ ನೀಶಾನೇಂದ್ರಂ ॥ ೨೩ ॥

ಮ॥ ನೆಗಟ್ದಿಸ್ಮಜ್ಜಳಮಂ ಜಿನಾಭಿಷವಣಕ್ಕೊಯ್ದೆಮ್ಮ ಜನ್ಮಕ್ಕೆ ಮಾ ।
ಡುಗೆ ಸಾಫಲ್ಯಮು ನಿಂದ್ರ ನೆಂದೆರೆದು ಗಂಗಾದೇವಿ ಪೇಟ್ದಿಟ್ಟದಂ ॥
ಜೆಗಳೆಂಬಂತೆಸೆವಂತು ಚಾಮರಮು ನತ್ಯುತ್ಸಾಹದಿಂ ದಿಕ್ಕಿದರ್ ।
ಜಗದೀಶಂಗೆ ಸನತ್ಕುಮಾರಪತಿಯುಂ ಮಾಹೇಂದ್ರಕಲ್ಪೇಂದ್ರನುಂ ॥ ೨೪ ॥

ಕಂ॥ ಬಿತ್ತರದಿ ನಿಕ್ಕಿದರ್ ಭಗ ।
ವತ್ತೀರ್ಥಕರಂಗೆ ಕುಂಚಮುಂ ಬ್ರಹ್ಮಬ್ರ ॥
ಹ್ಮೋತ್ತರಲಾಂತವಕಾಪಿ ।
(ಪ್ಪೋತ್ತ)ಮಕಲ್ಪವುರೇಂದ್ರ ರಿಂದ್ರನ ಕೆಲದೊಳ್ ॥ ೨೫ ॥

ವ॥ ಮುತ್ತಿತ್ತ ವಿತರಕಲ್ಪಂಗಳಪ್ಪ.

ಕಂ॥ ನುತಶುಕ್ರಮಹಾಶುಕ್ರದ ।
ಶತಾರಸಹನಾರದಾನತಪ್ರಾಣತದಾ ॥
ವಿತತಾರಣಾಚ್ಯುತೇಂದ್ರರ್ ।
ಪತಿಭಕ್ತಿಗೆ ಪಡೆ ಪಿಡಿದರಖಿಳಪಾಳಿಧ್ವಜಮುಂ ॥ ೨೬ ॥

ವ॥ ಅಂತು ತಮತಮಗೆ ವೀತರಾಗಸೇವಾನುರಾಗರಸರಂಜನಾಯತಚಿತ್ತರ್ ಸುತ್ತಿ ಮುತ್ತಿ ಸಮುಚಿತಯೋಗದಿಂ ನೆಗೆದು ನಿಂದನೇಕನಾಕನಾಯಕರ್ಬಿರಸು.

ಕಂ॥ ಜಿನವರನಂ ಮದುವೆಗೆ ಮು ।
ಕ್ತಿನಿತಂಬಿನಿ ಯತ್ತಲೊಯ್ವ ನಿಚ್ಚಣಿಗೆಗಳವೋಲ್ ॥
ಜನದೊಸಗೆ ನೆಗಟಿಸಿ ಪುಟ್ಟಿದ ।
ಮನೆಯಂ ಮುಂದಿಟ್ಟುಕೊಂಡು ಹರಿ ಪೊಱಮಟ್ಟಂ ॥ ೨೭ ॥

[1] ಪಟಿಗಬ್ಬ್ಯ (ಎಂದಿಗಬಹುದು) ಪಟಿಗರ್ವು(ಹಳಗ).

ವ॥ ಆಸಮಯದೊಳ್.

ಕಂ॥ ಸಕಳಜಗ ಮಿಂದೆ ಶಬ್ದಾ ।
ತ್ಮಕ ವಾಯ್ತೆನೆ ಪೊಲಿಗೆ ಬಧಿರಿತಾಶಾಕರಿಗಳ್ ॥
ಪ್ರಕಟಿಸಿದು ವಮರತೂರ್ಯ ।
ಪ್ರಕರಂಗಳ್ ನಾರ್ಧನಪ್ತ ಕೋಟಿಮಿತಂಗಳ್ ॥ ೨೪ ॥

ವ॥ ಆನಂತರಂ.

ಮು॥ ಜಗತೀವಿಶ್ರುತಮಂದರಕ್ಕೆ ನಡೆಯಲ್ ಪೇಟ್ದಿಂದ್ರ ನಾತ್ಮೀಯ ಸೇ ।
ನೆಗೆ ಸಂರಂಭದೆ ಸನ್ನಿಗೆಯ್ಯೆ ಜಿನಯಾತ್ರಾಯೋಗ್ಯ ಮಾಗಧ್ವಶ ॥
ದ್ಧಿಗೆ ಗಂಗಾಂಬುಪವಿತ್ರಪಾಣಿತಳದಿಂ ದಭ್ಯುಹ್ಷಣಂಮಾಡುವಂ ।
ತೊಗೆದಿಂಬಾದುದು ಕೆಯ್ಯ ಚಾಮರಚಳತ್ಪಾಂಡುಪ್ರಭಾಮಂಡಳಂ ॥ ೨೯ ॥

ವ॥ ಅಂತು ಸನ್ನಿಗೆಯ್ಯಲೊಡಂ.

ಕಂ॥ ಬಡಗಣ ದೆಸೆಗೆ ತೆರಳ್ದಾ ।
ಗಡೆ ಮುಂದರದತ್ತ ವೊಗಸಿ ಗಗನಮು ನೋರಂ ॥
ತೆಡೆಗೊಂಡುದು ಗೆಡೆಗೊಂಡುದು ।
ನಡೆಗೊಂಡುದು [1]ಹಾದಿಗೊಂಡು ದಮರಾನೀಕಂ ॥ ೩೦ ॥

ಚಂ॥ ತಳರ್ವ ವಿಮಾನಕೋಟಿ ನಡೆದೊಪ್ಪುವ ವಾರಣಕೋಟಿ ಬಾಜಿಪ ।
ಗ್ಗಳಿಕೆಯ ತೂರ್ಯಕೋಟಿ ನೆಗೆವಾತಪವಾರಣಕೋಟಿ ಬೀಸುವು ॥
ಜ್ಜ್ವಳಚಮರೀಜಕೋಟಿ ಮಿಳಿರ್ವುಚ್ಚಮಹಾಧ್ವಜಕೋಟಿ ಮಿಂಚಿ ಸಂ ।
ಚಳಿಸುವ ಶಸ್ತ್ರಕೋಟಿ ಬಗೆಗೊಂಡುದು ತಂಡದೆ ದೇವಕೋಟಿಯಾ ॥ ೩೧ ॥

ಚಂ॥ ಅನಿಮಿಷದೇಹದೀಪ್ತಿ ಜಳ ವೆತ್ತಿದ ಸತ್ತಿಗೆ ಛೇನರಾಜಿ ಕೇ ।
ತನಚಯ ಮೂರ್ಮಿಮಾಳೆ ಬಹುವಾಹನಸಂತತಿ ನಕ್ರಚಕ್ರ ವಂ ॥
ಗನೆಯರ ಕಣ್ಣೊಣರ್ ಪೊಳೆವ ವಿಂಬೊಣರೆಂಬಿನ ಮಾಗಳಿಂದ್ರವಾ ।
ಹಿನಿಯವೊಲಿಂದ್ರವಾಹಿನಿ ಮನೋಹರ ಮಾಯ್ತು ನಭೋವಿಭಾಗದೊಳ್ ॥ ೩೨ ॥

ಉ॥ ಈ ನಿಖಿಳಾಮರರ್ಗೆ ಜಿನಯಾತ್ರೆಯೊಳಾಗದು ಪಾಱಿಗೆಯ್ತು ಮು ।
ಧ್ವಾನಮು ನಿಂಬುವಾಡಿ ನಡಿಯಿಪ್ಪೆ ನೆನುತ್ತುಮೆ ಶಕ್ರವಿಕ್ರಿತಂ ॥
ಶ್ರೀ ನಿಱಿಸಿಟ್ಟ ನಿಚ್ಚಣಿಗೆ ಯೆಂಬಿನಿಗಂ ಸ್ಫಟಿಕೇಂದ್ರನೀಲಸೋ ।
ಪಾನದ ಮೂಱಿಪಚ್ಚೆ ನಿಮಿರ್ದೇನೆನೆದಿರ್ದುದೊ ಮುಂದರಂಬರಂ ॥ ೩೩ ॥

[1] ಹಾರಿ.

ಕಂ॥ ಸ್ಫುರಯಿಪ ತವಮಾಳವೀಥಿಗ ।
ಳೆರಡರ ನಡುವಲರ್ದ ಕುಂದವನದವೊಲೆನಿಸಿ ॥
ತ್ತೆರಡುಂ ನೀಲದ ಸೋಪಾ ।
ನರಾಜಿಗಳ ನಡುವಣಿಂದುಮಂಡಿಸೋಪಾನಂ ॥ ೩೪ ॥

ವ॥ ಅಲ್ಲಿ.

ಕಂ॥ ಅಂಚೆಯು ನಡೆಯು ಬೆಡಂಗಂ ।
ಮುಂಚಲ್ಪಡಿವಿರ್ದ ರಿವರ್ಗ ಳೆನೆ ಮೃದುಗತಿಯಿಂ ॥
ಕಾಂಚೀಕಳರುತಿ ನಿಮಿರ್ವಿನೆ ।
ಗಂ ಚೆಲ್ವಂ ಮೆಱಿಸಿದರಾಗಳಮರಾಂಗನೆಯರ್ ॥ ೩೫ ॥

ಚಂ॥ ಅಳಿಕುಳಕುಂತಳೆಂಗಳ ರಥಾಂಗಕುಚಂಗಳ ಕೋಕಿಳಸ್ವನಂ ।
ಗಳ ಕಳಹಂಸಮಂದಗಮನಂಗಳ ಚಾರುಚಕೋರಲೋಚನಂ ॥
ಗಳ ಶಶಿಮಂಡಲಾನನೆಯು ರೀಕೆಗ ಳೀಗುಣಪಕ್ಷದಿಂ ವಿಯ ।
ತ್ತಳಗಮನಕ್ಕೆ ತಕ್ಕರೆನೆ ಹಾರಿವೊಲೊಪ್ಪಿದರಿಂದ್ರನಾರಿಯರ್ ॥ ೩೬ ॥

ಚಂ॥ ಸುರುಚಿರ ವಿದ್ರುಮಾಧರದಿ ನುತ್ತಮಮೌಕ್ತಿಕದಂತದಿಂ ಮನೋ ।
ಹರಹರಿನೀಳಕುಂತಳದಿ ನುಜ್ವಳವಜ್ರನಖಂಗಳಿಂ ಸ್ಫುರ ॥
ನ್ಮರಕತವರ್ಣದಿಂ ದೆಸೆದುದಂದಮಿರೀತತಿ ಪಂಚರತ್ನದಿಂ ।
ವಿರಚಿಸಿ ಕೊಟ್ಟ ಬಣ್ಣಿಸರ ಮುಂಬರಲಕ್ಷ್ಮಿಗಿದೆಂಬಿನಂ ಜನಂ ॥ ೩೭ ॥

ಚಂ॥ ಸ್ಫುರಿತಪಯೋಧರಂಗಳೆ ಪಯೋಧರಮುಂ ಮುರಲೊತ್ತೆ ಸತ್ಪ್ರಭಾ ।
ಚರಣಮೆ ಸತ್ಪ್ರಭಾಚರಣಶೋಭೆಯು ನೀಯೆ ಚಳದ್ವಿಚಿತ್ರತಾಂ ॥
ಬರಮೆ ವಿಚಿತ್ರತಾಂಬರ ಮದಾಗೆ ಮುಖಾಬ್ಜ ಮದಬ್ಜಲೀಲೆಯುಂ ।
ತಿರೆ ಸುರಕಾಂತೆಯರ್ ಸಜಳಕಾಂತೆಯು ರೊಪ್ಪಿದರಾಪ್ರಯಾಣದೊಳ್ ॥ ೩೮ ॥

ಕಂ॥ ಮುಳಿವುಬಿಱಿವ ಬಯ್ವು ಬಗ್ಗಿಸು ।
ವೆಳಸುವ ತಿಳಿವೆರೆವ ನೆರೆವ ಬಸನದ ಬಿನದಂ ॥
ಗಳನೆ ಮೆಱಿಸಿದಭವನೊಸಗೆಗೆ ।
ತಳರ್ದುದದೇಂ ಭಕ್ತಿ ಪಿರಿದೊ ಸುರದಂಪತಿಯಾ ॥ ೩೯ ॥

ವ॥ ಆಗಳ್.

ಕಂ॥ ಎಡವಕ್ಕದ ಬಲವಕ್ಕದ ।
ಪಡಿಯಱಿದೆಡೆಯಱಿದು ನಡೆಯಿಪಿಂದ್ರನ ಪಲರುಂ ॥
ಪಡೆವಳರ ಜಡಿದು ನಡೆಯಿಪ ।
ಪಡಿಯಱಿರುಲಿ ಗೆಲಿದುದುಲಿವ ಜೀನಿಧಿಯುಲಿಯಂ ॥ ೪೦ ॥

ವ॥ ಮತ್ತಂ.

ಮ॥ ವುದಿದಲ್ಲಲ್ಲಿ ಮನೋಜ್ಞವಾದ್ಯರವದಿಂ ದಲ್ಲಲ್ಲಿ ಮಾಂಗಲ್ಯಗೇ ।
ಯದಿ ನಲ್ಲಲ್ಲಿ ಸುರಾಂಗನಾಲಟಹದಿಂ ದಲ್ಲಲ್ಲಿ ಸದ್ವಂದಿಭೋ ॥
ಷದಿ ನಲ್ಲಲ್ಲಿ ನತಾಮರಸ್ತುತಿಗಳಿಂ ದಲ್ಲಲ್ಲಿ ವುಪ್ಪೋಪಹಾ ।
ರದಿ ನಲ್ಲಲ್ಲಿ ವಿಕೀರ್ಣವರ್ಣರಜದಿಂ ಚೆಲ್ವಾಯ್ತು ದೇವಾಗಮಂ ॥ ೪೦ ॥

ಕಂ॥ ಪೊಯಿಲ ವಿಳಾಸಿಜನಂಗಳ ।
ನೆಯಿಲ್ ನಭೋಮುಕುರತಳದೊಳೆಸೆದವುದೆನೆ ಪೊಂ ॥
ವುಯ್ಯಿಯಿಂ ನಿಳಿಂಪಸೈನ್ಯಂ ।
ಕೆಳಗಿರ್ದೀಕ್ಷಿಪರ ಕಣ್ಗೆ ತೋಱಿತುದಿನಿಸಂ ॥ ೪೬ ॥

ಅಂತಂತೆ ನಡೆಯೆ ನಡೆಯೆ ನ ।
ಭೋಂತರದೊಳ್ ರೂಪುದೋರ್ಪುದುಂ ಮಾಣ್ಬ ಮರು ॥
ತ್ಸಂತಾನದ ಕಳಕಳಮೆ ನಿ ।
ರಂತರಿತಂ ಕೇಳಲಾಗಿ ಭಾವಿಸಿತು ಜನಂ ॥ ೪೭ ॥

ವ॥ ಆಗಳುತ್ಸಾಹಗೇಹದಂತೆ ಧೃತಪೂರ್ಣಕುಂಭಮುಂ, ರವಿಮಧ್ಯಸಮಯದಂತೆ ನವಗ್ರಹ ವಿಭಾಸಿಯುಂ, ಪಿಪ್ಪಳಿಮಹೀಜದಂತೆ ಮುದವತ್ಕರಟಮುಂ, ಜಿನಭವನದಂತೆ ಶ್ರವಣಸಂಗಿಯು, ವೈದ್ಯಜನದಂತೆ ಸಗರಾನುವರ್ತಿಯುಂ, ನರೇಂದ್ರಭವನದಂತಂತಃಪುರಪ್ರಭಾವಮುಂ, ಮುಕುರ ದಂತೆ ಸಂಗತಪ್ರತಿಮಾನಮುಂ, ಮದಿರಾಂಗವೃಕ್ಷದಂತೆ ಶುಂಡಾನುಬಂಧಿಯುಂ, ದೇವಮುಖದಂತೆ ವುಪ್ಪುರಸ್ಫುರಿತಮುಂ, ವಿಳಾಸಿನೀಕರ್ಣದಂತೆ ಕರ್ಣಿಕಾಕಳಿತಮುಂ, ಬಾಳಾ[ಸ್ಪದ]ವಿಳಾಸದಂತೆ ಸಲಿಲತಾಳುತಳಲಾಲಿತಮುಂ ? ಜಯರಾಮಾಮುಖಾದೇವಿಯಂತೆ ಸುಗ್ರೀವಾವಳಂಬಿಯುಂ, ವನ ಪ್ರವೇಶದಂತೆ ವಿವುಳಾಸನ ಪ್ರಭಾಸಿಯುಂ, ದ್ವಿಜನ್ಮನಂತೆ ಸಮುತ್ತುಂಗವಂಶಮುಂ, ಸುಕೇಶಿ ಯಂತೆ ಸಂಸ್ನಿಗ್ಧಜಾಲಮುಂ, ಹಿರಣ್ಯದಂತಜಕುಕ್ಷಿಲಕ್ಷ್ಯಮುಂ, ಪ್ರವೀಣೇಶಭವನದಂತೆ ಸತ್ಕೋಶ ಭಾಸಿಯುಂ, ಪ್ರಭಾತದಂತೆ ನೂತನಖರಾಂಶುಸಲಿಲಪಾದಮುಂ, ರುದ್ರನಂತೆ ಶುಚಿರೋಮಾಂಗ ಸಂಗಿಯುಂ, ನಿಧಿಯಂತನಂತಪದ್ಮಾವಳಂಬಿಯುಂ ಬಲಭದ್ರನಂತೆ ದಾನವಾರಿಪ್ರಯುಕ್ತಮುಂ, ತಿಮಿರದಂತೆ ಬಹುಲಕ್ಷಣಾವಲಂಬಿತಮು ಮೆನಿಸಿ.

[1][ಭಾಳ]ಕಪೋಲಕರ್ಣ ಕರಚೂಚಕಲೋಚನಕೇಶರೋಮುಕೂ ।
ಪಾಳಿಯಿ ನುಣ್ಮೆ ಪೊಣ್ಮುವ ಮದಪ್ರಸರಂ ಲವಲೀ ಲವಂಗ ತ ॥
ಕ್ಕೋಳಿ ತಮಾಳ ಸಪ್ತದಳ ಸೌರಭಮಂಗರನಾಳಿಗಂ ವಿಲೋ ।
ಳಾಳಿಗ ಮೊಪ್ಪಿತಲ್ಲಿ ಮಣಿಕುಂಡಲನಬಂಧುರ ವಿಂದ್ರಸಿಂಧುರಂ ॥ ೪೪ ॥

---

[1] ತೊಳಪ ಕಪೋಲಕರ್ಣ ಕರಚೂಚಕಲೋಚನ ರೋಮುಕೂ ।
ಪಾವಳಿಗಳಿ ನುಣ್ಮೆ ಪೊಣ್ಮುವ ಮದಪ್ರಸರಂ ಲವಲೀಲವಂಗ ತ ॥
ಕೊಳಿ (ತ) ತಮಾಲಸಪ್ತದಳ ಸೌರಭಮಂಗರ ನಾಳಿಗಂ ವಿಲೋ
ಳಾಳಿಗ ಮೊಪ್ಪಿತಲ್ಲಿ ಮಣಿನಿಕುಂಡಲನ ಬಂಧುರ ವಿಂದ್ರಸಿಂಧುರಂ
(೪೪) ಈ ಪದ್ಯದಲ್ಲಿ ಛಂದೋಭಂಗವಿರುವುದರಿಂದ ತಿದ್ದಿಮೇಲೆ ಮುದ್ರಿಸಿದೆ.)

ರಗಳೆ॥ ಆನೆಗಲ್ದಿ ನಿಳಿಂಪಮದದ್ವಿಪಕ್ಕೆ ।
ಪಕ್ಕೆನೆ ಮಣಿಘಂಟಾಗಣದ ಮನಕ ।
ಮನಕಲಿದ ರವಂಗಳಿ ನಂದೆನೆಯೆ ।
ದೆನೆಯೆಲ್ಲಂ ಬಧಿರಿತ ಮೆನಿಸುವನ್ನ ।
ವನ್ನಗ ಮುಚ್ಚರದ ವಿವಿಧಶೋಭಿ ।
ಶೋಭಿಸೆ ಮೂವತ್ತೆರಡೊಗೆದುವಾಸ್ಯ ।
ವಾಸ್ಯದೊಳೋರೊಂದಱಿಂ ಕೊಳೆಂಟುಕೊಂಬು ।
ಕೊಂಬುಗಳೋರೊಂದಱಿಂ ಕೆರಡುಸರಸಿ ।
ಸರಸಿಗಳೋರೊಂದಱಿಂ ಕೋರೊಂದು ನಳಿನಿ ।
ನಳಿನಿಗಳೋರೊಂದಱಿಂ ಕಾದ ಮಲರ್ದು ।
ಮಲರ್ದಿರೆ ಮೂವತ್ತೆರಡೊಪ್ಪುವಬ್ಜ ।
ವಬ್ಜದೊಳೋರೊಂದಱಿಂ ಕೆಸಳ ರಾಜಿ ।
ರಾಜಿಸೆ ಮೂವತ್ತೆರಡದ [ಱಿ] ಮೇಲೆ ।
ಮೇಲೆನೆ ಚೆಲ್ವು ಮದಕ್ಕೆ ಮತ್ತೆ ।
ಮತ್ತೆನಿಸದೆ ಮೂವತ್ತಿರ್ವರಾಗಿ ।
ರಾಗಿಸಿ ನಲಿದವುರಿಯುರಾಡುವಲ್ಲಿ ।
ವಲ್ಲಿಗಳೆನೆ ನಳಿತೋಳ್ಗಳ್ ತುಱುಗೆ ।
ತುಱುಗೆವೆಗಣ್ಗಳ್ ಮಿಗೆ ತೊಳಗಿ ಬೆಳಗೆ ।
ಬೆಳಗೆಯು ರಸಭಾವಕ್ಕನಿಸೆ ಮಾರ್ಗ ।
ಮಾರ್ಗಂ ಮುದಮುಂ ದೇಸಿ ಪಡೆಯೆ ।
ಪಡೆಯೆಲ್ಲಂ ಮೆಚ್ಚಿದು ದಮುರಪತಿಯ ।
ಪತಿಯೊಸಗೆಯು ನೊದವಿಪ ವಿಮಳಮತಿಯು ॥ ೪೫ ॥

ಚಂ॥ ಜಳರುಹಪತ್ರಪತ್ರಗಳ ಮೇಲೆನಸುಂ ಕುಣಿವಂಗನಾಜನಂ ।
ಗಳೆ ನಳಿತೋಳ ತಕ್ಕೆ ಬಿಸವಲ್ಲಿಗಳಂ ವದಪಾಣಿ ವಲ್ಲವಂ ॥
ಗಳೆ ಮುಖ ವಂಬುಜಂಗಳೊದವಂ ತರಳಾಳಕಜಾಳಕಂಗಳು ।
ಚ್ಚಳದಳಿವಾಳೆಯಂ ದ್ವಿಗುಣಿಸಲ್ ನೆಱೆದಿರ್ದುವು ತತ್ಪ್ರದೇಶದೊಳ್ ॥ ೪೬ ॥

ಕಂ॥ ಓವದೆ ತುಱಿದೇಕೇಂದ್ರಿಯ ।
ಜೀವಮು ನೀಜಳಜಕುಳಮು ನಳರಿಸೆ ಸಾರ್ಗುಂ ॥
ಸಾವದ್ಯ ವೆಮ್ಮ ನೆಂಬವೊ ।
ಲಾವನಿತೆಯುರೆಸಳ ನಿನಿಸು ಮುಟ್ಟದೆ ಕುಣಿದರ್ ॥ ೪೭ ॥

ವ॥ ಅಂತು ಮುಳ್ಳದೆಯುಂ.

ಚಂ॥ ಅಮಳಜಿನೋತ್ಸವಾಗಮನದೊಳ್ ಸುಪವಿತ್ರೆಯರೇಕೆ ಪೆಟ್ಟುವರ್ ।
ಕಮಳೆಮ ನೀರಜೋಧಿಕಮ ನಾಱಿಡಿದಾಣಮ ನಪ್ರಶಸ್ತ್ರಜ ॥
ನ್ಮೆಮ ನಥರೀಕೃತಾರ್ಥಗುಣಮುಂ ಮಧುಪಾತ್ರಮ ನುಗ್ರರುಕ್ಸಹಾ ।
ಯಮ ನುರುಕಂಟಕಾಂಗಮ ನೆನುತ್ತಿರೆ ಪೆಟ್ಟೆದರಿಲ್ಲ ನೃತ್ಯದೊಳ್ ॥ ೪೯ ॥

ಕಂ॥ ಆಕೆಗಳಿಂ ತುಱಿಗಿದ ತ ।
ನ್ನಾ ಕೃತಿ ಬರೆದಣ್ಕೆ[1]ಗೆಯ್ದ ರಸಚಿತ್ರಗತ ॥
ಸ್ತ್ರೀಕುಂಜರಮುಂ ಪೋಲ್ತ ।
ತ್ತಾ ಕುಂಜರ(ಮು)ಮಳಗಗನಫಳಕಸ್ಥಳದೊಳ್ ॥ ೫೦ ॥

ವ॥ ಅದಲ್ಲದೆಯುಂ.

ಮ॥ ಪಲವುಂ ಕಣ್ಗಳಿ ನೆಯ್ದಿ ನೋಱಿ ಪಲವುಂ ಹಸ್ತಂಗಳಿಂ ದರ್ಘ್ಯಮುಂ ।
ಗಲಮುಂ ಮಾಱಿಪ್ಪಿನಿತಿಲ್ಲದಾಂತರಿಯೆ ನೀತೀರ್ಥೇಶನುತ್ಸಾಹದೊಳ್ ॥
ನಲಿದೆಂಬಂತಱಿವತ್ತು ನಾಲ್ಕುನಯನಂ ಮೂವತ್ತೆರಟಿಕ್ಕೆಯ್ ಕುತೂ ।
ಹಲಮುಂ ಪುಟ್ಟಿನೆ ತಾಳ್ದಿ ವಿಕ್ರಿಯೆಯು ನೇಂ ಶಕ್ರೇಭ ವೊಪ್ಪಿರ್ದುದೋ ॥ ೫೦ ॥

ಕಂ॥ ಆತತಮದನಿರತಂ ಪುರು ।
ಹೂತಗಜಂ ಕರ್ಣತಾಳಪವನಾಹತಿಯಿಂ ॥
ಜ್ಯೋತಿರ್ಲೋಕವಿಮಾನ ।
ವ್ರಾತದ ಜೀವಮೂತದೊಡ್ಡ ನಥರಿಸಿತೆನಸುಂ ॥ ೫೧ ॥

ವ॥ ಅಂತು ಬರೆವರೆ.

ಕಂ॥ ತಪನೀಯಶೈಲ ಮಮರಾ ।
ಧಿಪ ನಹ್ಕಿಗೆ ಲಕ್ಷ್ಯ ಮಾಗೆ ಸೊಗಯಿಸಿದುದು ರಾ ॥
ಜಿಪ ಋತುವಿಮಾನ ಮೆಂಬಾ ।
ತಪತ್ರದುದ್ದಾಮಹೇಮದಂಡಾಕೃತಿಯಿಂ ॥ ೫೨ ॥

ವ॥ ಆ ಸಮಯದೊಳ್.

* ಮ॥ ಪದುಳಂ ನಿರ್ಝರವಾರಿಯಂ ತಳಿಯುತುಂ ಮಂದಾರಕಾಗಂಧಮುಂ ।
ಕೆದರುತ್ತುಂ ಮುಗಿಲಚ್ಚಮುತ್ತ ನುಗುತಂ ಪುಷ್ಪಾಂಗಳಿಂ ಸೂಸುತುಂ ॥
ತ್ರಿದಶಾರಾಧ್ಯನ ನರ್ಘ್ಯಪೂರ್ವ ವಿಧಿಗೊರ್ವಳ್ವಂತಾಗಿ ಬಂದಾನಿಳಂ ।
ದ್ರದ ಮಂದಾನಿಳ ನಾಱಿಸಿತ್ತು ನಯದಿಂ ದೇವಾಗಮಶ್ರಾಂತಿಯಂ ॥ ೫೩ ॥

ವ॥ (ಅಂತು ಬಂದು (ತಣ್ಪಿಸಿ)ದ ಮಂದಪವನನಿಂದ ಮಱಿಳಬೃಂದಾರಕಬೃಂದಮಂದಿರಸಾನಂದಿತಾಂಗನಾಗಿ) ತದನಂತರಂ ಪುರುಹೂತನಿಂದಾಣಿಗಾ ಗಿರೀಂದ್ರಮುಂ ತೋಱಿಸಿ.

[1] ದಂಕೆ.

ಚಂ॥ ಬಹುತರಸಾನುಶಾಖೆಗಳಿ ನುನ್ಮುಖರತ್ನಮಯೂಖಮುಂಡಳೀ ।
ಋಹಳವಿಚಿತ್ರಪತ್ರಚಯದಿಂ ಭಗಣೋಜ್ವಳಪುಷ್ಪದಿಂ ನವ ॥
ಗ್ರಹಫಳವೃಂದದಿಂ ದಿವಿಜಯುಗ್ಮವಿಹಂಗಮರಾವದಿಂ ಮಹೀ ।
ಮಹಿತ ಮಿದಲ್ತೆ ಮೇರುನಗ ಮೆಂಬ ನಮೇರುನಗಂ ಮೃಗೇಕ್ಷಣೇ ॥ ೫೪ ॥

ಕಂ॥ ಪವಣಿಸಿ ಜಿನೇಂದ್ರಮತದಿಂ ।
ನವನವತಿಸಹಸ್ರಯೋಜನೋಚ್ಛ್ರಯದಿಂ ಸಂ ॥
ಭವಿಸಿದ ಸಹಸ್ರಯೋಜನ ।
ದವಗಾಹದಿ ನೆಸೆವುದೀನಗಂ ಶಶಿವದನೇ ॥ ೫೫ ॥

ಜಿನಭವನಚತುಷ್ಟಯನೀ ।
ವನಮೊಂದೊಂದೆನಿಸಿ ಮಿಸುಪ ಮೇಖಳೆ ನಾಲ್ಕುಂ ॥
ತನಗವುರೆ ನಿಮಿರ್ದುದೀಕಾಂ ।
ಚನಶೈಳಂ ಋತುವಿವಮಾನಚುಂಬಿತಚೂಳಂ ॥ ೫೬ ॥

ಮು॥ ವಿನುತೋದ್ಯತ್ಫಲಭದ್ರಶಾಲೆ ಯೆನೆದತ್ತೀ ಭದ್ರಶಾಲಂ ಸುನಂ ।
ದನವಾಗಿರ್ದುದು ದಿವ್ಯನಂದನ ವಿದಿಂತೊಪ್ಪಿರ್ದುದೀಸಾರಸೌ ॥
ಮನಸಂ ಸೌಮನಸಂ ವಿಕಾಸಿಕುಸುಮಶ್ರೀಪಾಂಡುಕಂ ಪಾಂಡುಕಂ ।
ಮನಕಿಂಬಾಯ್ತುದೆ ನೋಡ ತನ್ವಿ ಗಿರಿಗೀ ನಾಲ್ಕುಂಬನಂ ಜವ್ವನಂ ॥ ೫೭ ॥

ವ॥ ಅದಲ್ಲದೆಯುಂ.

ಮು॥ ವಿಳಸತ್ಪಾಂಡುಕ ಪಾಂಡುಕಂಬಳಶಿಲಾಪಟ್ಟಂ ಶಿಲಾಪಟ್ಟಕಂ ।
ಬಳಸತ್ಕಾಂತ್ಯತಿರತ್ನಸಂಚಳಶಿಲಾಪಟ್ಟಂಗಳಂ ನಾಲ್ಕುಕೊ ॥
ಣ್ಗಿಳೊಳೊಪ್ಪಿರ್ಪುವು ಭಾರತಾಪರವಿದೇಹೈರಾವತಪ್ರಾಗ್ವಿದೇ ।
ಹಲಸದ್ಭೂತಜಿನವ್ರಜಕ್ಕೆ ಸವನಸ್ಥಾನಂಗಳೀಶೈಳದೊಳ್ ॥ ೫೮ ॥

ವ॥ ಎಂದು ವಸ್ತುಕಥನಂ ಮೆಱೆಸಿದು.

ಕಂ॥ ಈನಗದ ನಿಶಿತವಜ್ರದ ।
ಸಾನುಗಳಿಂ ದೊಗೆದ ಚಂದ್ರಬಿಂಬದಿ ನಮೃತಂ ॥
ಸೋನೆ ಸುರಿವಂತು ಸುರಿತರೆ ।
ಮಾನವರುಂತಮುರ ರಕ್ಕು ಮೆಂದಪೆ ನಬಳೇ ॥ ೫೯ ॥

---

* ಮು॥ ವಿಳಸನ್ನಿರ್ಝರನೀರಸಾರ ಮುಪಕಂತಾಂಭೋಜಿನೀಗಂಧಸಿಂ ।
ಥುಳತಾಕಟ್ಮಳಜಾಳಶಾಳಿನಿಕಟೋದ್ಯಾನಪ್ರಸೂನಾನ್ವಿತಂ ॥
ಜಳಗಂಧಾಕ್ಷತಪುಷ್ಪದಿಂದ ಮಿದಿಗೊಂಡಿಂದಾರ್ಚಿತಂಗರ್ಘ್ಯಮುಂ ।
ಗಳಮುಂ ಮಾಪ್ಪಿವೊಲಾಯ್ತು ಮುಂದರನಗೇಂದಾರ್ಯಾತಶೀತಾನಿಳಂ ॥

* ೫೩ ನೆಯಪದ್ಯವೂ ಈ ಪದ್ಯವೂ ಸವಮಾನಾರ್ಥಕವಾಗಿರುವುದರಿಂದ ಈ ಪದ್ಯವನ್ನು ರೇಖೆಯಕೆಳಗೆ ಬರೆದಿದೆ.

ಕಂ॥ ಮೆಚ್ಚಿ ಜಿನಜನ್ಮದೊಸಗೆಯ ।
ನಚ್ಚರಿವಟ್ಟೀಸುರಾದ್ರಿ ತಲೆದೂಗುವವೋಲ್ ॥
ನಿಚ್ಚ ಮೆಸೆದವುದು ನೋಡೆ ಮ ।
ರುಚ್ಚಂಚಳಮೇಳುಪಟಳಪರಿವೃತಶಿಖರಂ ॥ ೬೦ ॥

ಮ॥ ಪರಮಶ್ರೀಪತಿ ಬಂದೊಡಿಂದೊಸಗೆಯೊಳ್ ನೇಸಿಕ್ಕುತುಂ ಪಾಡುತುಂ ।
ಪರಸುತ್ತುಂ ನಲಿದಾಡುತುಂ ನಗುತು ವಿರ್ಪಂತಲ್ಲುಗುತ್ತಿರ್ಪ ಪೂ ॥
ಮರದಿಂ ತುಂಬಿಯು ಗೇಯದಿಂ ಬಹುವಿಹಂಗಾಳಾಪದಿಂ ಲೋಲವ ।
ಲ್ಲರಿಯಿಂ ಪುಷ್ಪವಿಕಾಸದಿಂ ನೊಗಯಿಕುಂ ನೋಡೀನಗೋಪತ್ಯಕಂ ॥ ೬೧ ॥

ವ॥ ಎಂದು ಪೊಗಟ್ದಿನಂತರಂ.

ಮ॥ ಕ್ಷ್ಮೆಯೆಯಂ ತಾಳ್ದಿದ ಪೆಂಪು ಗೋತ್ರನುತ ಮುಪಪ್ಪತ್ಯೋದಯಂ ಮುಂದರಾ ।
ಗ ವೆನಿಪ್ಪುನ್ನತಿ ಜಾತರೂಪಧರ ವಾಗಿಪ್ಪೊರ್ಪಳ್ಪು ಲೋಕತ್ರಯಾ ॥
ವ್ತಮಹತ್ವಂ ಹರಿವಿಷ್ಟರಾರ್ಹಮಹಿಮಾವಷ್ಟಂಭ ವೊಪ್ಪಲ್ಕದೇಂ ।
ಸಮನಾದತ್ತೊ ಜಿನಂಗೆನುತ್ತೆಱಗಿದಂ ಲೇಖಾದ್ರಿಗಾಖಂಡಳಂ ॥ ೬೨ ॥

ವ॥ ಅನಂತರಂ.

ಕಂ॥ ಅಭಿಷವಮಂಗಳಪೀಠಂ ।
ತ್ರಿಭುವನಗುರುಗಿಂತೆಂದು ಮುಂದರಕ್ಕೆ ಶಚೀ ॥
ಪ್ರಭು ಮಾಡೆ ಭಕ್ತಿಯಿಂದೇಂ ।
ಪ್ರಭವಿಸಿತೋ ತ್ರಿಃಪ್ರದಕ್ಷಿಣೈಕವಿಧಾನಂ ॥ ೬೩ ॥

ಭೂಷಾಂಶುರುಚಿರ ಮಪ್ಪನಿ ।
ಮೇಷಗಣಂ ಬಲಗೊಳುತ್ತು ವಿರ್ದೆಡೆಯೊಳ್ ಲಂ ॥
ಬೂಷನಗ ವೊಪ್ಪಿದುದು ಪರಿ ।
ವೇಷಂಗೊಂಡರುಣತರಣಿಬಿಂಬದ ತೆಱದಿಂ ॥ ೬೪ ॥

ವ॥ ಅಂತು ಬಲಗೊಂಡು ತದನಂತರಂ.

ಮ॥ ಗುರುಪಾದಂ ಕಳಧೌತಗೌರರುಚಿರಚ್ಛಾಯಂ ಕರಕ್ರಾಂತವು !
ಷ್ಕರದೇಶಂ ಪೃಥುಚೂಳಿಕಾವಿಳಸಿತಂ ನಕ್ಷತ್ರಮಾಳಾವೃತಂ ॥
ಧರಣೀಂದ್ರಂ ಬಹುಕುಂಜರಾಜಿತವಿಳಾಸಂ ತನ್ಮರುದ್ದಂತಿ ಮಂ ।
ದರಮುಂ ಮುಂದರವೇಱುದವ್ದಿದು ಬೇಱಿಂಬಂತದೇನೇಱುತೋ ॥ ೬೫ ॥

ವ॥ ಅಂತು ಮಲ್ಲದೆಯುಂ.

ಕಂ॥ ಕಾಂಚನಘಂಟಾದ್ಯುತಿ ಕುಡು ।
ಮಿಂಚೆನೆ ಬೃಂಹಿತದ ಪೊಲಿಗು ಪೊಲಿಗೆನೆ ಭೂ ॥
ಷಾಂಚಿತರುಚಿ ಸುರಧನು ವೆನೆ ।
ಸಂಚಿತಶರದಭ್ರ ಮೆನಿಸಿ ತಡೆರ್ವ ಭ್ರಗಜಂ ॥ ೬೬ ॥

ಉ॥ ಲೋಲತೆಯಿಂ ಸುರಾಗದ ಸುರಾಗದ ಪೂವ ನುದಿರ್ಚುತಂ ಲತಾ ।
ಜಾಳಕಜಾಳಕಂಗಳನೆಲಿಲ್ಚುತ ವಳ್ಳಿಲಿಂದಭ್ರದಭ್ರಮಂ ॥
ಚಾಳಿಸುತುಂ ಮದಾಳಿಯ ಮದಾಳಿಯ ನೋವದೆ ಸೋವುತುಂ ಸುರ ।
ವ್ಯಾಳಗಜಂ ವಿನೋದಿತ ವಿನೋದಿತಸಮ್ಮದ ವೇಱುತದ್ರಿಯಂ ॥ ೬೭ ॥

ಕಂ॥ ವಾಸವಗಜದೊಡನಡೆರ್ವ ವಿ ।
ಳಾಸದ ಸುರಜನದ ಹಾರಿ ಪೋಲ್ತುದು ಗಿರಿಗ ॥
ಬ್ಜಾಸನನೆ ಪಂಚರತ್ನದ ।
ಸೂಸಕಮಂ ಮಾಲೆವೂವ ನೆಲಿಲಿಕ್ಕಿದವೋಲ್ ॥ ೬೮ ॥

ಚಂ॥ ಸ್ಫುರಿಪ ನಿತಂಬದಿಂ ಗುರಪಯೋಧರದಿಂ ಸುಮನೋವಿಳಾಸದಿಂ ।
ಪರಿಚಿತರಾಜಹಂಸಗತಿಯಿಂ ನುತಪಾದದಿ ನುದ್ಯಮೇಖಳಾ ॥
ಭರಣದಿ ನಿಮ್ಮೊಳೊಡ್ಡಿವು ದಿದೆಂದುಲಿದೀಕೆಗಳಿಕ್ಕಿ ಮೆಟ್ಟಿದರ್ ।
ಪುರುಡಿನೊಳೀನಗೇಂದ್ರಮು ನಿನಲ್ಕಡರ್ದೀಱಿದ ರಿಂದ್ರಕಾಂತೆಯರ್ ॥ ೬೯ ॥

ಅನಿಮಿಷಕಾಂತೆಯರ್ ಪರಿದನುಕ್ರಮದಿಂದಮೆ ಭದ್ರಶಾಲದೊಳ್ ।
ನನೆಗಳ ನಾಯ್ದು ನಂದನದ ಕೆಂದಳಿರಂ ತಳವಾರೆ ಕೊಯ್ದು ಸೌ ॥
ಮನಸದ ಪೂಗಳಂ ತಿಱಿದು ಪಾಂಡುಕದೊಳ್ ಮಿಡಿಯಂ ತೆರಳ್ದು ಮಂ ।
ಡನಕೆ ವಿನೋದಮಂ ಮೆಱಿಸಿದು ತೀರ್ದಿದ ರಾತ್ಮಮನೋರಥಂಗಳಂ ॥ ೭೦ ॥

ವ॥ ಆಗಳಾಸುಪರ್ವಪರ್ವತದ ನಾಲ್ಕನೆಯ ಮೇಖಳೆಗೆ ಮೇಖಳೆಯಂತಿರ್ದ ಪಾಂಡುಕವನ ಪ್ರದೇಶಮುಂ ವಾಸವಂ ಮುಟ್ಟಿವರ್ಪುದುಂ ಅದಱಿ ಪೂರ್ವದಿಗ್ಭಾಗದೊಳ್ ಭರತಕ್ಷೇತ್ರಜನಿತಜಿನ ಜನದ ಜನನಸವಕ್ಕೆ ಯೋಗ್ಯಮಾಗಿರ್ದು.

ಕಂ॥ ತನಗೆಸೆಯೆ ನೂಱುಯೋಜನ ।
ದ ನೀಳ್ಪು ಮದಱಿರ್ಧ ಮೆನಿಸಿದಗಲಮು ಮರೆಯೋ ॥
ಜನ ಮೆನಿಪುನ್ನತಿಯುಂ ಚೆ ।
ಲ್ವೆನಿಸಿತು ಪಾಂಡುಕಶಿಳಾತಳಂ ಸಮಪಟ್ಟಂ ॥ ೭೧ ॥

ಅದು ಶರದಭ್ರದ ಶಶಿಬಿಂ ।
ಬದ ಶಂಖದ ರಸದ ಬಿಸದ ಬೆಳ್ಳಿಯ ಬೆಳ್ಪಿಂ ॥
ಬಿದಿ ಸಮೆದಂತಿರೆ ಥಳಥಳಿ ।
ಪುದು ವಿಮಳದ್ಯುತಿಯಿ ನರ್ಧಚಂದ್ರಾಕೃತಿಯಿಂ ॥ ೭೨ ॥

ಚಂ॥ ಪೊಳೆವಲರ್ಗಣ್ಗಳುನ್ನತಕುಚಂಗಳ ಮುದ್ದುವೊಗಂಗಳೊಳ್ಗರು ।
ಳ್ಗಳ ನಳಿತೋಳ್ಗ ಳಚ್ಚರಿಯರಿಂ ಪ್ರತಿಬಿಂಬಿತವಾಗಿ ಬಾಳವಿಾಂ ॥
ಗಳ ಪೊಣರ್ವ ಕ್ಕಿವಿಂಡುಗಳ ತಾವರೆವೂಗಳ ತುಂಬಿವೆಣ್ಗಳು ।
ದ್ವಳಿಗಳ ಸಂಗದಿಂ ದೆಸೆವ ಗಂಗೆವೊಲೊಪ್ಪಿದು ದಾಶಿಳಾತಳಂ ॥ ೭೩ ॥

ವ॥ ಅಲ್ಲಿ.

ಮ॥ಸ್ರ॥ ಅತುಳಶ್ರೀದಂಡಿಕಾಮಂಡಿತ ಮಮರವಮಣಿಸ್ತಂಭಸಂಭಾರವಾಳಿಾಂ ।
ಚಿತಘುಂಟಾಜಾಳಲೀಲಂ ರುಚಿನಿಚಿತವಿಚಿತ್ರಾಂಬರೋದ್ಯದ್ವಿತಾನಂ ॥
ನುತಮುಕ್ತಾಲಂಬಚುಂಬಂ ಧೃತವಿತತಪತಾಕಾಳಿ ನೌಥರ್ಮನಿರ್ಮಾ ।
ಪಿತ ಮುತ್ತುಂಗಂ ಬೆಡಂಗಾಯ್ತು ಭಿಷವಣಮಹಾಮಂಡಪಂ ದಿವ್ಯನೇಪ್ಯಂ ॥ ೭೪ ॥

ಕಂ॥ ಆಮಂಡಪಮಧ್ಯದೊಳು ।
ದ್ದಾಮವೃಷಗೇಂದ್ರಾಸನಂ ಕನನ್ಮಣಿಕಿರಣ ॥
ಶ್ರೀಮನೃಣ ಮೆನೆದುದಚ್ಛಸ ।
ರೋಮಧ್ಯದೊಳಲರ್ದ ಮಲರ್ದ ಪೊಂದಾವರೆವೋಲ್ ॥ ೭೫ ॥

ಹರಿಪೀಠಕನಕರುಚಿಯಂ ।
ವರಪಾಂಡುಕಪಾಂಡುರುಚಿಯು ಮೊಂದೊಂದಕ್ಕೊರ್ ॥
ನರಿಸದೆ ಮಲೆದು ಪಳಂಚುವ ।
ಪರಿ ಪೋರ್ಕುಳಿಯಾಡುವರ್ಕ ಶಶಿರುಚಿ ಯೆನಿಕುಂ ॥ ೭೬ ॥

ಅದಱಿರೊಳ್ ಸುರಪತಿ ತಂದಿರಿ ।
ಸಿದೊಡತಿತೇಜಸ್ವಿ ಪೂರ್ವಮುಖ ನಾಗಿರ್ದೊ ॥
ಪ್ಪಿದ ನಾಗಳುದಯಗಿರಿಶಿಖ ।
ರದ ತರುಣದಿನೇಶನಂತೆ ತರುಣಜಿನೇಶಂ ॥ ೭೭ ॥

ಮ॥ ಜಯರಾವಮಾಂಗನೆಯುಂ ಸುರದ್ವಿಪಮು ಮಾನುಂ ನೋಂತೆ ವೆಮ್ಮಂತು ಪೆ ।
ರ್ಮೆಯಿ ನಿಂತಾಂತುವೆ ಬೇಱಿರಿ ಮತ್ತಿನ ವಧೂಗರ್ಭಾಶಯಂ ಮತ್ತಿನಾ ॥
ನೆಯು ಬೇಱಮತ್ತಿನ ಬೀಡ ಮೀಜಿನನ ನೆಂದಹ್ಲೋಣಮಾಣಿಕ್ಯರ ।
ಶ್ಮಿಯಿ ನಾವಿಪ್ಕೃತರಾಗ ವಾದುದೆನಿಸಿತ್ತು ತ್ತುಂಗಸಿಂಹಾಸನಂ ॥ ೭೮ ॥

ಕಂ॥ ಅದಱಿರ್ಕ್ಕೆಲದೊಳ್ ನಸುದ ।
ಗ್ಗಿ ದಲಿರೆ ಭದ್ರಾಸನಂಗ ಳುನ್ಮುಖರುಚಿಗಳ್ ॥
ಮುದದಿಂ ನೆಲಸಿದ ರದಱಿರೊಳ್ ।
ಪದುಳಂ ಪ್ರಥಮದ್ವಿತೀಯಕಲ್ಪಾಧೀಶರ್ ॥ ೭೯ ॥

ವ॥ ಅವರೊಡನೆ ಮತ್ತ ಮಿತರಕಲ್ಪಾಧಿನಾಯಕರ್ ಬೆಸಸೆ.

ಕಂ॥ ನುತಸುರಪತಿಯುಂ ಸ್ವಾಹಾ ।
ಪತಿಯುಂ ಪಿತೃಪತಿಯು ಮಸುರ ಯಾದಃ ॥
ಪತಿಯುಂ ರಯಪತಿಯುಂ ಧನ ।
ಪತಿಯುಂ ಪಶುಪತಿಯು ಮೆನಿಸಿದಾಶಾಪತಿಗಳ್ ॥ ೮೦ ॥

ತಂತಮ್ಮ ವಾಹನಾಯುಧ ।
ಕಾಂತಾಜನಪರಿಜನಪ್ರಸಾಧನಚಿಹ್ನಾ ॥
ನಂತವಿಭೂತಿಯಿ ನುಚಿತದಿ ।
ಗಂತದೊಳುಚಿತಾಸನಪ್ರದೇಶದೊಳಿರ್ದರ್ ॥ ೮೧ ॥

ವ॥ ಮತ್ತಂ.

ಕಂ॥ ಪರಿಚಾರಕರೆನಿದಂದಿ ।
ರ್ದರಮುರವೈರೋಚನಾದಿ ಸತ್ಪುರುಷಮಹಾ ॥
ಪುರುಷಾದಿ ಚಂದ್ರಸೂರ್ಯಾ ।
ದಿ ರೂಢಭಾವನವನಾಶ್ರಯು ಜ್ಯೋತಿಷ್ಕರ್ ॥ ೮೨ ॥

ಜಿನಸಭೆಯೊಳಗನ್ಯೋನ್ಯಂ ।
ಮುನಿಸಿಕ್ಕುವೆ ನೋಡ ಬಿಸಿಲ ಬೆಳ್ದಿಂಗಳ ವು ॥
ರ್ಬಿನ ನಿರವಿ ನಿರೆದುದೆನಿಸಿದು ।
ವನೇಕವಮಣಿಮಕುಟರುಚಿಗಳೆಮರಾಧಿಪರಾ ॥ ೮೩ ॥

ವ॥ ಮತ್ತಮಲ್ಲಿ.

ಮು॥ ಕಳಶಂ ಪೆರ್ಮೊಲೆ ರನ್ನಗನ್ನಡಿ ಕಪೋಲಂ ಲಾಜೆ ದಂತಾಂಶು ಕೋ ।
ಮಳೆದೂರ್ವಾಲತೆ ಪುರ್ವ್ವ ದೀಪ ಮಥರಂ ಪೂಮಾಲೆ ದೃಗ್ದೀಪ್ತಿ ಕೆಂ ॥
ದಳಿರ್ಗಳ್ ಕೆಂದಳ ಮೂಗೆ ಮುಂಗಳ (ಮೆ) ಮೆಯ್ವೆತ್ತಂತೆ ಬಂದಿರ್ದ್ದ ಮುಂ ।
ಗಳವಸ್ತುಪ್ರಕರಂಗಳಂ ಪಸರಿಸುತ್ತಿಂದಾ್ರಣಿ ಕಣ್ಗೊಪ್ಪಿದಳ್ ॥ ೮೪ ॥

ವ॥ ಆಗಳಾಸಭೆಯು ಸನ್ನಿಧಿಯೊಳುಚಿತಪರಿಚಾರಿಕಾನಿಯೋಗದೊಳ್ ನಿರೆದು.

ಮು॥ ಕುಮುಂದಂ ದೃಷ್ಟಿ ಶಿರೀಷಮಾಲೆ ನಳಿತೋಳ್ ಬಂಧೂಕ ವೋಷ್ಠಂ ಮುಖಂ ।
ಕಮಳಂ ಸಂಪಗೆ ಮೂಗು ಕೇದಗೆ ನಖಂ ಕುಂದೋದ್ಗಮಂ ದಂತವಿ ॥
ಭ್ರಮು ಮುಂಗಚ್ಚವಿ ಕರ್ಣಿಕಾರ ಮೆನೆ ಮೆಯ್ಯಾಂತಿರ್ದ ಸೌಂದರ್ಯದಿಂ ।
ಸುಮನಸ್ತ್ರೀಯ ರೆನಿಪ್ಪು ದಪ್ಪುದವರ್ಗೆಂಬಂತೊಪ್ಪಿದರ್ ದೇವಿಯರ್ ॥ ೮೫ ॥

ಕಂ॥ ಕಳಶಂ ಕನ್ನಡಿ ಸೊಡರೆಳ ।
ದಳಿರಚ್ಚಗಜಿಂಕೆ ಲಾಜೆ ಪೂಮಾಲೆ ಮೊಸರ್ ॥
ಫಳ ವಹ್ನಿತೆ ಜಾಗಂ ಮುಂ ।
ಗಳಪರಿಕರ ಮೆನೆದುವಿಂದ್ರಸತಿಯರ ಕೆಯ್ಯೊಳ್ ॥ ೮೬ ॥

ಉತ್ಸಾಹಂ॥ ಚಾರುಚಾಮರಾತಪತ್ರಪಾಳಿಕೇತುಕಳಶಭೃಂ ।
ಗಾರಮುಕುರಸುಪ್ರತಿಷ್ಠತಾಳವೃಂದವೆಂಬ ವಿ ॥
ನ್ತಾರಿತಾಷ್ಟಮಂಗಳಂಗಳೆನೆದು ವಷ್ಟಕರ್ಮಕಾಂ ।
ತಾರದಾವದಹನ ಮಪ್ಪ ದೇವನೊಸಗೆ ಯಿಸಕದೊಳ್ ॥ ೪೭ ॥

ಕಂ॥ ಅಷ್ಟೋತ್ತರದಶ[ಸ]ವಿತಿಗ ।
ಳಷ್ಟೋತ್ತರಮೂರ್ತಿಗಷ್ಟಯೋಜನಗಾಹ ॥
ಕ್ಕಷ್ಟಾರ್ಧ ಕೋಣಶೋಭೆಗೆ ।
ವಿಷ್ಟರ ಮಾದೇಕಯೋಜನಾನ್ಯಘಟಂಗಳ್ ॥ ೪೮ ॥

ಮುಂಗಳಜಲಪೂರ್ಣಂಗಳ್ ।
ಸಂಗತಮಣಿಭೂಷಣಂಗ ಳುರುಚಂದನಚ ॥
ರ್ಚಂಗಳ್ ಪಲ್ಲವವಿಹಿತಮು ।
ಖಂಗಳ್ ಸೊಗಯಿಸಿದು ವಮುಳಸೂತ್ರವೃತಂಗಳ್ ॥ ೪೯ ॥

ವು॥ ಅಮರೀಬಂಧುರದೇಹಗಂಧ ಮಮಳಶ್ರೀಖಂಡಕರ್ಪೂರಕುಂ ।
ಕುಮುಸೌರಭ್ಯ ಮನಲ್ಪಕಲ್ಪಲತಿಕಾಪುಷ್ಪಸ್ರಜಾವೋದ ಮು ॥
ತ್ತಮುಕೃಷ್ಣಾಗರುಧೂಪಧೂಮಪಟಲೀಸೌಗಂಧ್ಯಮಂದೀಕೃತ ।
ಭ್ರಮರಂ ತೆಕ್ಕನೆ ತೀವೆ ಗಂಧವುಯ ವಾಯ್ತ್ತಂದಾಮಹಾಮಂಡಪಂ ॥ ೯೦ ॥

ಕಂ॥ ಕಾಳಾಗರುವಿನ ಹೊಗೆ ಹರಿ ।
ನೀಳಸ್ತಂಭದ ಮರೀಚಿಯಿಂ ಸುಟಿವಳಿನೀ ॥
ಜಾಳದ ಕರ್ಪ್ಪಿಂ ಕೊರ್ವಿ ತ ।
ವಾಳದ ಲತೆಯೆನಿಸಿ ಪರ್ವಿತಾವಮಂಡಪವುಂ ॥ ೯೧ ॥

ಶಾ॥ ನಾನಾವುಂಗಳವಸ್ತ್ರಭೂಷಣಶುಚೀಭೂತಂ ಶಚೀನಾಥ ನೀ ।
ಶಾನೇಂದ್ರಂಬೆರಸಿರ್ದು ಪಾವನಪಯೋಗಂಧಾಹ್ಲತೋತ್ಫುಲ್ಲಪು ॥
ಷ್ಪಾನೀಕಂಗಳಿ ನಂದು ವಾಡಿದ ನುದಂಚನ್ಮಂತ್ರಪೂತಾನನಂ ।
ತಾ ನಭ್ಯರ್ಚಿಸಿದ್ಧರಣೋಚಿತಕ್ರಿಯೆಯು ನಾದಂ ಭವ್ಯರತ್ನಾರ್ಣವಂ ॥ ೯೨ ॥

ಗದ್ಯಂ

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀ
ಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿಕಮಳಗರ್ಭ
ಮುನಿಚಂದ್ರವಂಡಿತದೇವ
ಸುವ್ಯಕ್ತಸೂಕ್ತಿ ಚಂದ್ರಿಕಾಪಾನವರಿವುಷ್ಯಮಾನಸಮರ್ಚಾಳ
ಗುಣವರ್ಮನಿರ್ಮಿತಮಪ್ಪ
ಪುಷ್ಪದಂತ ಪುರಾಣದೊಳ್
ದೇವಾಗಮವರ್ಣನಂ
ದಶಮಾಶ್ವಾಸಂ.

ಶ್ರೀ

ಪುಷ್ಪದಂತ ಪುರಾಣಂ

ಏಕಾದಶಾಶ್ವಾಸಂ.

ಕಂ॥ ಶ್ರೀ ಸಕಳಮುಂಗಳಾನಕ ।
ವಾಸವಮಯದೊಳೆಸೆಯ ಲೆಸಗಿದಂ ಮುಕ್ತಿರವಾ ॥
ವಾಸಂಗಳ್ಯಾರ್ಯಾದಿಯ ನು ।
ರ್ವೀಸೇವ್ಯಂ ಪ್ರಭುಗುಣಾಬ್ಜಿನೀಕಳಹಂಸಂ ॥ ೧ ॥

ವ! ಅನಂತರ ಮಾಪ್ರಥಮದ್ವಿತೀಯಕಲ್ಪಾವುರೀಂದ್ರರಿರ್ವರುಂ ಸರ್ವಜ್ಞ ನುಭಯಪಾರ್ಶ್ವ ದೊಳುತ್ತರದಕ್ಷಿಣಾಭಿಮುಖರಾಗಿ ಸಜ್ಜೀಕೃತಮಜ್ಜನೋಪಕರಣ ರಿರ್ದು ಮಜ್ಜನಕುಜ್ಜುಗಂಗೆಯ್ದು.

ಉ॥ ಮುಂಗಳತೂರ್ಯಕೋಟಿ ಮೊಲಿಗುತ್ತಿರೆ ಮುಂಗಳಗೇಯ ಮುಣ್ಮೆ ದೇ ।
ವಾಂಗನೆಯರ್ ಪಲರ್ ಪರನೆ ಮುಂಗಳವಾಕ್ಯಮು ನೋದೆ ಪಾರಕರ್ ॥
ಮುಂಗಳಮುಂ ಸಮುಂತು ಕಳಶೋದ್ಧರಣೋಚಿತಮುಂತ್ರಪೂರ್ವಕಂ ।
ಪೊಂಗಳಸಂಗಳಂ ನೆಗಪಿ ಸಪ್ರಣವೋಚ್ಚರಣಾನನಾಂಬುಜರ್ ॥ ೨ ॥

ಕಂ॥ ಬೇರ್ವರಿವ ಪುಣ್ಯವಿಟಪಿಗೆ ।
ನೀರ್ವೊಯ್ವಂತನಘಜಿನನ ಮಸ್ತಕದೊಳ್ ಪೊ ॥
ಯ್ದರ್ ವಿಪುಳಹರ್ಷದಿಂ ನಲಿ ।
ದಾರ್ವಮರರ ಬೊಬ್ಬೆ ಮಿಗೆ ಪಯೋಧಾರೆಗಳಂ ॥ ೩ ॥

ಜಯಜಯ ಜಿತದುರಿತ ಜಗ ।
ತ್ರಯವಲ್ಲಭ ದೇವದೇವ ಪರಮೇಷ್ಠಿ ದಯಾ ॥
ಶ್ರಯ ಶರಣ ವೆಂಬ ಸುರಕೋ ।
ಟಯ ಕಳಕಳ ಮಿಸೆದುದೆಸೆಯೆ ನೊಸಲೊಳ್ ಕೆಯ್ಗಳ್ ॥ ೪ ॥

ಮಾ॥ ಇದು ಮುಕ್ತಿಪ್ರಮದಾಸ್ವಯಂವರದ ಮಚ್ಛೀವಮಾಲೆ ವೇಣಿಂತಿದಾ ।
ಸುದತೀಕೇಕರಕಾಂತಿಜಾಳ ವಿದು ವೇಣ್ ತತ್ಕಾಂತೆ ಲಂಚಂಗುಡಲ್ ॥
ಪದೆಪಿಂದಟ್ಟಿದ ಹಾರಯಷ್ಟಿ ಸುಭಗಂಗೀಸ್ವಾಮಿಗೆಂಬಂತಿರೊ ।
ಪ್ಪಿದು ದಿಂದ್ರಚ್ಯುತದುಗ್ಧಧಾರೆ ಸವನಪ್ರಾರಂಭಸಂರಂಭದೊಳ್ ॥ ೫ ॥

ವ॥ ಆನಂತರಂ ಶಂಖಕಾಹಳಾಮೃದಂಗಝಲ್ಲರೀದುಂದುಭಿಗಭೀರತೂರ್ಯಸ್ವನಂಗಳು, ಮುಖ ರ್ವಗೀರ್ವಾಣಗಂಧರ್ವಗಾಯಿನೀಶ್ರುತಿಸುಖಾಧೇಯಗೇಯನಾದಂಗಳು, ಮನೀಕಲೋಕಪಾಳಕ ನಿಕಾಯಜಯಜಯಾನಂದಸಂದರ್ಭಿತಾಕೀರವಂಗಳು, ಮಶೇಷಾನಿಮಿಷಮುಖಮುಖರೀಜನಿತಜಿನ ಗುಣಸ್ತವಾಲಾಪಕಳಾಪಕೋಳಾಹಳೆಂಗಳುಂ ಬಧಿರಿತಬ್ರಹ್ಮಾಂಡದಿಙ್ಮಂಡಳೆಂಗಳಾಗೆ.

ಮ॥ ವರಪದ್ಮಾದಿಪವಿತ್ರತೀರ್ಥಸರಸೀಪುಣ್ಯೋದಕಸ್ನಾನಮುಂ ।
ನಿರವದ್ಯಾಮಳನಾಳಿಕೇರಫಲತೋಯಸ್ನಾನಮುಂ ನಿರ್ಮಳೇ ॥
ಕ್ಷುರಸಸ್ನಾನಮು ಮತ್ಯುದಾರಸಹಕಾರೋದ್ಯತ್ಸಳವ್ರಾತಜಾ ।
ತರಸಸ್ನಾನಮು [1]ಮಾಯ್ತು ಪಾತ್ತಸುರಸೇನಾಚಕ್ರನಿಂ ಶಕ್ರನಿಂ ॥ ೬ ॥

ವ॥ ಅನಂತರಂ.

ಕಂ॥ ಪಂಚಮಜಲನಿಧಿ ಯಲ್ಲದೆ ।
ಪಂಚಮಗತಿಪತಿಯ ಸವನಕೆಯ್ದಿಸವು ಪಯಃ ॥
ಸಂಚಯಮು ನುಟಿಸಿದ ತೊಜಸಿ ಕೆಜಸಿ ।
ಬೆಂಚೆ ಕೊಳಂ ಕೂವ ಮೆಂದು ಹರಿ ಬೆಸಸುವುದುಂ ॥ ೭ ॥

ಎಱಿವೆಸ ನಾದೊಡೆ ಮುಕ್ಕೆಮು ।
ಗೆಱಿವೆಸ ನೆನೆ ಜಿನನ ಸವನ ಮಿಂದ್ರನ ಬೆಸನಿ ॥
ತ್ತೆಱಿದಿಂ ನಿಷ್ಕಲ ಮುಲ್ತಿಮು ।
ಗುಱಿವುದಿದೆಂದುಲಿದು ನಲಿದು ದೇವಸಮೂಹಂ ॥ ೮ ॥

ಅಮೃತಾರ್ಣವಮನೆ ಮೇರುವಿ ।
ನ ಮೇಖಳಾವನಕೆ ತಿರ್ದಿ ವರಿಯಿಸಲಿಂದ್ರಂ ॥
ಸಮೆವೇಱಿವೊಲೆರಡೋಳಿಯೆ ।
ನಿಮಿರ್ದೆನೆದುದುಹಾರಿಗೊಂಡು ಕೇರ್ಗಟ್ಟಿದವೋಲ್ ॥ ೯ ॥

ಮ॥ ಚಳಬಾಹಾಲಹರೀಸಹಸ್ರಲಲಿತಂ ವೃಜ್ಜೋನಸಂತಾನಸಂ ।
ವಳಿತಂ ಕುಂಭಕುಳಾದ್ರಿಕೋಟಿಕಳಿತಂ ಭೂಷಾಮಣಿಶ್ರೇಣಿರು ॥
ಜ್ವಳಿತಂ ಸ್ಫಾರಗಭೀರಘೋಷಲುಳಿತಂ ದೇವಾಳಿ ಕಣ್ಗೊಪ್ಪಿತಾ ।
ಗಳಿದೊಂದಿಂಗಡಲಿಂಗಡಲ್ಗೆ ಬಳೆನಂದತ್ತೊಯ್ಕನೆಂಬನ್ನೆಗಂ ॥ ೧೦ ॥

ವ॥ ಆವ್ರಸ್ನಾವದೊಳ್.

ಮ।ಸ್ರ॥ ಅತುಳಸ್ವಚ್ಛಾಂಬುವಿಂ ವಾಃಕಣಗಣಸಿತಶೇಷಾಹ್ಲತ ಶ್ರೇಣಿಯಿಂ ಫೇ ।
ನತತಿಶ್ರೇಖಂಡಪಿಂಡದ್ರವದಿ ನಖಿಳರತ್ನಾಂಶುವುಪ್ಪಂಗಳಿಂ ನಿ ॥
ರ್ವ್ಯತಿನಾಥಂ ಗರ್ಭ್ಯಮುಂ ತತ್ಸವನವಿಧಿಯೊಳೀವಂತುಟಾಯ್ತುತ್ತರಂಗಾ ।
ಯತಹಸ್ತಂ ಸ್ತೋತ್ರಮಂತ್ರಸ್ವನ ವೆಸಿನೆ ಘನಧ್ವಾನ ಮುಂಭೋನಿಧಾನಂ ॥ ೧೧ ॥

[1] ಯಾಯ್ತು ಪೊತ್ತ. [2] ಹಾದಿಗೊಂಡು.

ಪು॥ ಭಗವನ್ಮಜ್ಜನಯೋಗ್ಯಮಾದ ಕಡಲೆನ್ನಂತಾವುದೆಂದುರ್ವಿ ಭೂ ।
ರಿಗಭೀರಸ್ವನದಿಂದೆ ಪೆರ್ಚಿ ನುಡಿವಂತಾಶುಕ್ತಿಮುಕ್ತಾಂಶುವಿಂ ॥
ನಗುವಂತುನ್ಮುಖಪದ್ಮರಾಗರುಚಿಯಿಂ ರಾಗಾರ್ಥಮಾದಂತೆ ವೀ ।
ಚಿಗಳಿಂ ಕೆಯ್ನೀಡಿದಾಡುವಂತೆನೆದುದೀಸುಸ್ನಿಗ್ಧದುಗ್ಧಾರ್ಣವಂ ॥ ೧೦ ॥

ವ॥ ಮತ್ತಂ.

ಚಂ॥ ಕವಿದು ನಿಲಿಂಪಕೋಟಿ ಮೊಗೆಯುತ್ತಿರೆ ಶಂಖದ ಬಳ್ಳಿ ತಳ್ತುದೋ ।
ಪವಳದ ಬಳ್ಳಿ ಪರ್ವಿದುದೊ ಪಾವನೆ ಬಳ್ಳಿ ವಗಿಲ್ತುದೋ ಸಮು ॥
ದ್ರವ ನೆನೆ ಚಂದ್ರಕಾಂತಕಲಶಾಂಶುಗಳುಂ ಕಿಸುಗಲ್ಲ ಕರ್ಕರ ।
ಚ್ಛವಿಗಳು ಮುಶ್ಮಗರ್ಭಘುಟರಶ್ಮಿಗಳುಂ ಪುದಿದಿರ್ದು ವಬ್ಧಿಯುಂ ॥ ೧೩ ॥

ಕಂ॥ ತುಂಗಘುಟಕೋಟಿ ಮೊಗೆಯೆ ತ ।
ರಂಗಪರಂಪರೆ ಪೊದಪಿಪ್ಪ ನಿಮಿರ್ದುದು ಯುಕ್ತಂ ॥
ಭಂಗಂ ನಿಮಿರ್ವುದು ಕಡಲೊಳ್ ।
ಸಂಗತ ಮೆನೆ ಕುಂಭಸಂಭವವ್ಯತಿಕರದಿಂ ॥ ೧೪ ॥

ಮಾಸ್ರ॥ ಕಡಲೊಳ್ ನೀರ್ದರ್ವ್ವುದಭಶ್ಯಾಸಿಗಳಿವು ನೆರವಕ್ಕೆಂದು ಶಕ್ರಂ ಬೆಸಂಬೇ ।
ಟಿಸಿ್ದಡೆ ನಾನಾವರ್ಣದಭ್ರಾವಳಿ ನೆರೆದು ನಿಜಾಧೀಶನಾದೇಶದಿಂ ತಂ ॥
ಮ್ಮೊಡನಧ್ಯಕ್ಷಂ ಬರಲ್ಕೀನಡೆದಪುದೆನೆ ಚೆಲ್ವಾದು ವಾಕಾಶದೊಳ್ ನೇ ।
ರ್ಪಡೆ ದೇವರ್ ತರ್ವ ನಾನಾಮಣಿಕನಕಘಟಂಗಳ್ ವಯಃಪೂರಿತಂಗಳ್ ॥ ೧೫ ॥

ಮ॥ ಪಗೆಗೊಂಡಾಡದೆ ದೇವನಿರ್ದ ಸಭೆಯೊಳ್ ಕಾರುಣ್ಯಮಂ ವಜ್ರಿ ಮಾ ।
ಡುಗು ವಾಂ ಸಂಧಿಪೊಡಿಂದಿನೀವದನೆ ಲೇಸೆಂದಬ್ಧಿ ತನ್ನಾಶ್ರಿತಾ ॥
ದ್ರಿಗಳಂ ಕಾಣಿಸಲಿಂದ್ರನಲ್ಲಿಗೆ ತರುತ್ತಿರ್ದಪ್ಪುದಂಬಂತೆ ಮೇ ।
ರುಗಿರೀಂದ್ರಾಗತದೇವಕೋಟಿಘುಟಕೋಟೀಯೂಥ ಮೇನೊಪ್ಪಿತೋ ॥ ೧೬ ॥

ಚಂ॥ ಸದಮಳಚಂದ್ರಕಾಂತಮಣಿಕುಂಭದ ರುಂದ್ರಮಹೇಂದ್ರನೀಲಕುಂ ।
ಭದ ನುತಶಾತಕುಂಭಮಯಕುಂಭದ ಮೊತ್ತದ ಮಾಲೆ ಲೀಲೆವೆ ॥
ತ್ತುದು ಬಹುರಾಜರಾಹುರವಿಮಂಡಳ ಮಂಡಳಿ ನಣ್ಪುಗೊಂಡು ತಂ ।
ಡವೆ ನಡೆಗೊಂಡು ದೀಗಳೆನೆ ನಿಂದಮರಾವಳಿ ನೀಡೆ ಹಾರಿಯೊಳ್ ॥ ೧೭ ॥

ವ॥ ಅದಲ್ಲದೆಯುಂ.

ಮ॥ ಕೆಲರೋರೊರ್ವರೆ ಪೋಪ ಪೋಗಿ ಕಡಲಂ ಕೆಯ್ಕೊಳ್ವ ಕೆಯ್ಕೊಂಡು ತ ।
ಜ್ಜಲಮಂ ತೀವುವ ತೀವಿ ಪೊಂಗೊಡನ ನಣ್ಮಿಂದೆತ್ತಿ ಕೊಳ್ವೆತ್ತಿ ಕೊಂ ॥
ಡೊಲವಿಂ ಮೇರುಗೆ ಬರ್ಪ ಬಂದು ಮಳುವಂಗೀವಿತ್ತು ಮತ್ತಾಗಳಂ ।
ತೊಲೆದಲ್ಲಿಂ ಮಗುಟಿಶ್ವಿಂದು ಹಂದುಗದಿ ನಾಟಂವರ್ ಮನೋವೇಗದಿಂ ॥ ೧೮ ॥

ಚಂ॥ ಉದಧಿಯ ನೆಯ್ದುವಲ್ಲಿ ಮೊಗೆವಲ್ಲಿ ಘಟಂಗಳ ನೆತ್ತುವಲ್ಲಿ ನಿ ।
ಲ್ಲದೆ ಮಗುಟ್ವಿಲ್ಲಿ ಪೊತ್ತು ಪರಿವಲ್ಲಿ ಸುರಾದ್ರಿಯ ನೀಲಿವಲ್ಲಿ ತಂ ॥
ದಿದಿರೊಳಿಟ್ಟಿಪ್ಪುವಲ್ಲಿ ಕುಡುವಲ್ಲಿ ಕೆಲರ್ ಮುನಿವಂದೆ ಮುಂಚುವರ್ ।
[1]ತ್ರಿದಶರಿ ನಿಂದ್ರಜಾಲ ಮೆನೆ ತನ್ಮಯವಾಗಿರೆ ರೂಪುದೋಱುತುಂ ॥ ೧೯ ॥

ಕಂ॥ ಎನೆವಭವಸವನವಿಭವಮು ।
ನುಸಿರ್ದೀವಣ್ಣಿಪುದೊ ನೆರೆಯೆ ಬಳೆದಪುದೆನಿಸಿ ॥
ತ್ತೊನೆದಡಕು ವಮರರರಿಂ ಹ್ಮೀ ।
ರಸಮುದ್ರಂ ದರ್ಪಸಮುದ್ರ ವಾಜ್ಯಸಮುದ್ರಂ ॥ ೨೦ ॥

ಅಂತಮುರಸೇನೆ ತಂದು ನಿ ।
ರಂತರ ಮೆನೆ ನೀಡೆ ಕನಕಘಟಕೋಟಿಯು ನೊ ॥
ಲ್ದಾಂತ ನನಿತಕ್ಕ ವನಿತೆ ಭು ।
ಜಾಂತರಮು ನಗುರ್ವಿನಿಂ ವಿಗುರ್ವಿನೆ ಶಕ್ರಂ ॥ ೨೧ ॥

ಚಂ॥ ತೊಳಗುವ ಜಂಘೆ ಜಂಘೆಗೆ ಮುಖಂ ಮುಖಶೋಭೆಗೆ ತಾರಹಾರ ಮು ।
ಜ್ಜ್ವಳಮಣಿತೋರಣಕ್ಕೆ ಕಿವಿ ತಾಂ ಕಿಱರಕ್ಕೆ ಚಳತ್ಕಾಂಚಳಂ ಧ್ವಜಾಂ ॥
ಚಳಕೆಣೆಯಾಗೆ ಸತ್ಕಳಶವೃಂದಮು ನಾತ್ಮಭುಜಾಸಹಸ್ರದೊಳ್ ।
ತಳೆದು ಸಹಸ್ರಕೂಟಜಿನಮುಂದಿರದಂತೆನಿದಂ ಪುರಂದರಂ ॥ ೨೨ ॥

ವ॥ ಅಂತೆನಿದು.

ಕಂ॥ ನಿರ್ಝರಜಲವೃಷ್ಟಿಯು ನಾ ।
ವಿರ್ಭೂಷಣವಿದ್ಯುದುಜ್ಜ್ವಳಂ ಪರ್ಜನ್ಯಂ ॥
ಭೋರ್ಭೋರೆನೆ ಸುರಿಯಲ್ಕೆ ಜಿ ।
ನಾರ್ಚಕ ನೊದವಿದ ನಗಣ್ಯಪುಣ್ಯಕ್ಷೇತ್ರಂ ॥ ೨೩ ॥

ವ॥ ಆಗಳಖಿಳಮಜ್ಜನೋಪಕರಣಸರಣಿಯರಪ್ಪ ಸುರಪುರಂಧ್ರಿಕಾಜನವುರಸ್ಸರಿಯಾಗಿರ್ದು.

ಉ॥ ಕೆಂದಳಿರೆನ್ನ ಕೆಂದಳಕೆ ಪೊಂಗೊಡೆ ನೆನ್ನ ಘನಸ್ತನಕ್ಕೆ ಚೆ ।
ಲ್ವಿಂದೆಣೆಯಾಗಲಾರ್ತ್ತವುವೆ ನೋಡೆನುತಂ ಪಡಿಗಟ್ಟಿ ತೋರ್ಪವೋಲ್ ॥
ಕೆಂದಳದಿಂದ ಮೆತ್ತಿ ಕುಚಕುಂಭದೊಳಾಂತು ವಿಳಾಸದಿಂ ಶಚೀ ।
ಸೌಂದರಿ ಪಲ್ಲವಾಂಚಿತಘಟಂಗಳ ನಿಂದ್ರನ ಕೆಯ್ಗೆ ನೀಡಿದಳ್ ॥ ೨೪ ॥

ಕಂ॥ ಪೊಂಗಳಸಂಗಳ ರುಚಿಯಿಂ ।
ಪಿಂಗಳರುಚಿವಡೆಯಿ ಪಾಲಧಾರೆ ಜಿನೇಂದ್ರಂ ॥
ಗೇಂ ಗಳ ಘೃತಾಭಿಷೇಕದ ।
ಮಂಗಳ ವಿದು ಮೊದಲೊಳೆನಿಸಲಾರ್ತ್ತುದೊ ಸುರರಿಂ ॥ ೨೫ ॥

[1] ತ್ರಿದಶ ಮಹೇಂದ್ರಜಾಲ.

ಚಂ॥ ಪಳಿಕಿನ ಕುಂಭದಿಂ ಕುಳಿಶ ಪೊಯ್ವ ಪಯೋರಸಧಾರೆ ಚಂದ್ರಮುಂ ।
ಡಳದಿ ನುದೀರ್ಣಮಾಗಿ ನಿಮಿರ್ವುಜ್ಜ್ವಳಚಂದ್ರಿಕೆ ಯೆಂಬಿನಂ ಸುರ ॥
ಕ್ಕ್ಕಳ ನಯನೋತ್ಪಳಂಗಳಲರ್ವಂತು ಸುಖಾಂಬುಧಿ ಕೊರ್ವುವಂತು ಕೋ ।
ಮಳಕರಕಂಜಕೋಟಿ ಮುಗಿವಂತೆನೆದತ್ತು ಜಿನಾಭಿಷೇಕದೊಳ್ ॥ ೨೬ ॥

ಕಂ॥ ಅರುಣಮಣಿಕಳಶದಿಂ ಹರಿ ।
ಸುರಿವ ಸುಧಾಧಾರೆ ತನ್ಮಯೂಖಾಹತಿಯಿಂ ॥
ತರುಣಾರ್ಕ ಬಿಂಬದಿಂ ಬಿ ।
ತ್ತರಿಪೆಳಬಿಸಿಲೆನಿಸಿ ಕಳೆದು ದಳುತಾವುಸವುಂ ॥ ೨೭ ॥

ತುಂಗಹರಿನೀಳಕಳಶಮು ।
ಖಂಗಳ ಜಳಧಾರೆ ಧಾರ್ತರಾಷ್ಟ್ರಮುರಾಳಂ ॥
ನುಂಗಿ ಮಗುಟಿದ್ದುಗುಳ್ವ ಬಿಸದಂ ।
ಡೆಂಗಳ ನಭಿನಯಿಸಿ ತಭವನಭಿಷವವಿಧಿಯೊಳ್ ॥ ೨೮ ॥

ವ॥ ಆಗಳ್.

ಚಂ॥ ತ್ರಿದಶಗಣಾಧಿಪರ್ ಸುರಿಯುತಿರ್ಪ ತನಿರ್ಮಳದುಗ್ಧವಾರಿಪೂ ।
ರದೊಳಚಳಾತ್ಮನುಂ ಸಹಜಭದ್ರನು ಮಪ್ಪ ವಿಶುದ್ಧಮೂರ್ತಿ ತಾಂ ॥
ಪುದಿದ ತುಷಾರಪುಂಜದೊಳಗಿರ್ವ ಹಿಮಾದ್ರಿವೊ ಲೆಂದ್ರಸಿಂಧುವೂ ।
ರದೊಳವಗಾಹ ವಿಪ್ಪ ಸುರದಂತಿವೊ ಲೊಪ್ಪಿದ ನಿಂದ್ರವಂದಿತಂ ॥ ೨೯ ॥

ವ॥ ಅಂತು ಮುಳ್ಗಿದೆಯುಂ.

ಕಂ॥ ಇಂದ್ರಕರಕಳಿತಕಳಶದೆ ।
ರುಂದ್ರತರಕ್ಷೀರಪೂರ ವಾವರಿಸೆ ಶರ ॥
ಚ್ಛಂದ್ರಿಕೆಯ ಬಳಸಿನೊಳಗಣ ।
ಚಂದ್ರಮನಂತಿರ್ದ ನನುಪಮುಂ ಜಿನಚಂದ್ರಂ ॥ ೩೦ ॥

ವ॥ ಆಸಮುಯದೊಳ್.

ಚಂ॥ ಅಱಿಯ ನನಂತಕುಂಭಶತಮುಂ ಪಸುಗೂಸಿನ ಮೇಲೆ ಪೊಯ್ದುಪಂ ।
ನೆಱಿ ಮುರುಳಿಂದ್ರ ನೆಂದೊಣರ್ವ ಮುಗ್ದನಿಳಿಂಪರ ಶಂಕೆ ಚಿತ್ತದಿಂ ॥
ಪಱಿಪಡುವಂತು [1]ಬಾಲ ನಿನಿಸಂ ತಱಿಸಂದೊಡೆ ವಕ್ತ್ರವಾಯುವಿಂ ।
ತಱಿಗೆಲೆಯಂತೆ ಬಾಱಿದುವು ರುಂದ್ರಸುರೇಂದ್ರವಿಮಾನಕೋಟಿಗಳ್ ॥ ೩೧ ॥

ವ॥ ಅನ್ನೆಗಂ.

---

[1] ಬಾಲನಿನಿಸೀಂತೆಡೆಸಂದೊಡೆ. (ಎಂದು ಇರಬಹುದು).

ಕಂ॥ ಆಕಾಶಕ್ಕುಚ್ಚಳಿಪಭಿ ।
ಷೇಕದ ಜಲಬಿಂದುಮಾಲೆ ಮುಕ್ತಾ ॥
ನೀಕದ ತೆಱದಿಂ ಜ್ಯೋತಿ ।
ರ್ಲೋಕವಿಮಾನಕ್ಕೆ ಪಡೆದು ದಿವ್ಯಾಡಿಜೆಲ್ವಂ ॥ ೩೦ ॥

ಮ॥ ಅಮರಶ್ರೇಣಿಗೆ ಮುತ್ತಿನಾಭರಣಮಂ ದಿಗ್ದಂತಿಯೂಥಕ್ಕೆ ಚಿ ।
ಬ್ಬುಮ ನುದ್ಯಾನವನಕ್ಕೆ ಪೂದುಱಿಗಲಂ ವ್ಯೋಮಕ್ಕೆ ತಾರಾಸಮೂ ॥
ಹಮ ನಭ್ರಾವಳಿಗಾಲಿಗಲ್ಲ ಸಿರಿಯಂ ಮೆಯ್ವೆರ್ಚಸಲ್ ನಾಲ್ದು ತ ।
ಳ್ತೆಮದೊಪ್ಪಿರ್ದುದುದೀರ್ಣ ಕೀರ್ಣ ಪವನಾಂಭಃಶೀಕರಂ ಶ್ರೀಕರಂ ॥ ೩೩ ॥

ವ॥ ಅಂತುಮಲ್ಲದೆಯುಂ.

ಕಂ॥ ಸ್ವೇದಾಂಬುಬಿಂದು ವುಟ್ಟಿದು ।
ವೀದಿವಿಜರ್ಗಿದು ವಿಚಿತ್ರ ಮೆನೆ ಕಿಱುಮುತ್ತಂ ॥
ಕೋದಂತೆ ಸಿಡಿಲ್ದಡರ್ದಿಂ ।
ಬಾದುವು ಜಿನಸವನಜನಿತಜಲಲವ ಮುವರೊಳ್ ॥ ೩೪ ॥

ವ॥ ಅನ್ನೆಗಂ.

ಚಂ॥ ಕಡೆದು ಕಳಂಕಿ ಮುನ್ನಖಿಳವಸ್ತುಗಳಂ ಪೊಱಗಿಕ್ಕಿ ಸಂವದಂ ।
ಗಿಡಿಸಿದ ಮೇರು ದೈವದಿ ನಿದಿಂದೊಳಗಾಯ್ತೆನಗೆಂದು ಬಂದು ಪಾ ॥
ಲ್ಗಡಲಮರಾದ್ರಿಯಂ ಮುಳಿದು ಮುತ್ತಿದು ದೆಂಬಿನ ಮೊಪ್ಪತೆತ್ತ ನೋ ।
ಟಿಪ್ಪೊಡೆ ಮಭವಾಭಿಷೇಕವಿಧಿಯೊಳ್ ಪೊಱಿಸೂಸುವ ಪಾಲ ಕಾಟಿಪ್ಪಿರಂ ॥ ೩೫ ॥

ಕಂ॥ ಗಲ್ಗಲನೆ ಪರಿವ ಪಾಲ ಪೊ ।
ನಲ್ಗಳೊಳೊಳಗಾಗಿ ನಗದ ನಾಲ್ದೆಸೆಗಳ ತ ॥
ಟ್ಟಿಲ್ಗಳೊಳೆಸೆದುವು ತೇಂಕುವ ।
ರಲ್ಗಳ ಸಂಕರ ಮಿದೆನಿಸಿ ತಾರಾವಳಿಗಳ್ ॥ ೩೬ ॥

ಜಿನಮಜ್ಜನಾಂಬುವಿಂದಂ ।
ಕನಕಾಚಳತಳದೊಳಿರ್ದು ಬಿಸುಪಟಿಸಿದು ಬೆಳ ॥
ರ್ದಿನಬಿಂಬ ವಾಗಳಾಗಳೆ ।
ವನಧಿಯೊಳೊಗೆವಿಂದುಬಿಂಬ ಮೆನಿಸಿದು ದೆನಸುಂ ॥ ೩೭ ॥

ಪೊನಲೊಳ್ ಮುಟಿಗಿಸಿ ಹಿಮಕರ ।
ದಿನಕರರಂ ಮುಸುಳಿಸಿತ್ತು ಜಿನಸವನಪಯೋಂ ॥
ಮುನಿಕಾಯಂ ದೋಷಾಕರ ।
ನೆನಿಪನ ಭೂತಾಪಕಾರಿ ಯೆನಿಪನ ಸಿರಿ ಯೇಂ ॥ ೩೮ ॥

ವ॥ ಅಹಲ್ಲದೆಯುಂ.

ಕಂ॥ ಜಿನಸವನಸಲಿಲದಿಂ ಬೆ ।
ಳ್ಪನಾಳ್ದ ವರ್ಜುನಕುಜಂಗಳೆನಿಸವೆ ಚಿತ್ರಂ ॥
ನನೆವಡೆದು ಪಾಂಡುಕದ ನೌ ।
ಮನಸದ ನಂದನದ ಭದ್ರಶಾಲದ ತರುಗಳ್ ॥ ೩೯ ॥

ಮುಗ್ಧಜನದಱಿತ ಮೆನಿಸಿ ವಿ ।
ದಗ್ಧರು ಮಿದು ಕನಕಗಿರಿಯೊ ರಜತಾದ್ರಿಯೊ ಸಂ ॥
ದಿಗ್ಧ ಮೆನಿಸಿದುದು ಸುರಗಿರಿ ।
ದುಗ್ಧಪ್ರಸರೋಪದಿಗ್ಧ ಮುಧಿಕಸ್ನಿಗ್ಧಂ ॥ ೪೦ ॥

ವ॥ ಆದಲ್ಲದೆಯುಂ.

ಕಂ॥ ಆಹೇಮಗಿರಿಯ [1] ನಿಕಟಸ ।
ಮೂಹದೊಳಿರ ದೋಡಿದುವು ಪೊನಲ್ಗಳ್ ದಿಕ್ಸಂ ॥
ದೋಹಕ್ಕೆ ನಿತಾದೊಡೆ ಮೇಂ ।
ವಾಹಂಗಳ್ ಕುಂಜರಾಜಿಯೊಳ್ ನಿಂದವುವೇ ॥ ೪೧ ॥

ವ॥ ಮತ್ತಂ.

ಕಂ॥ ನೊರೆವಾಲ ಮೊಸರ ತುಪ್ಪದ ।
ಪರಿವೊನಲಾಗಿರಿಯು ಪಿರಿಯು ನಾನುಗಳೊಳ್ ನಿ ॥
ರ್ಝರ ಮೆಂಬ ನೆವದಿ ನಿನ್ನುಂ ।
ಪರಿದಪು ವೇಂ ಪಿರಿದೊ ಜಿನನ ಜನ್ಮಸ್ನಾನಂ ॥ ೪೨ ॥

ವ॥ ಆಗಳ್.

ಮ॥ ಅಕಳಂಕಾಕೃತಿವರ್ತನಂಗೆ ಘನಕಲ್ಕೋದ್ವರ್ತನಂ ವೀತಸ ।
ರ್ವಕಷಾಯಂಗೆ ಕಷಾಯತೋಯಸವನಂ ದೇಹೋಲ್ಲಸದ್ದಿವ್ಯಗಂ ॥
ಥಕದಂಬಂಗೆ ಸುಗಂಧಬಂಧುರಜಳಸ್ನಾನಂ ಸ್ಫುರದ್ವರ್ಣಪೂ ।
ರ್ಣ ಕನನ್ಮೂರ್ತಿಗೆ ವರ್ಣಪೂರವಿಳಸ ನ್ನೀರಾಜನಂ [2]ಮಾಟ್ಪುಮೇ ॥ ೪೩ ॥

ವ॥ ಆದೊಡೆಂ ಮುಂಗಳೋಪಚಾರ ವಿಲ್ಲಿಗವಸರೋಚಿತಂ ಬೇಟ್ಪು ಮೆಂದು ವಿವಿಧನವವರ್ಣ ಚೂರ್ಣ [3]ಪಿಷ್ಟೋಪಳುಪ್ಪಿಯುಮು, ನಕ್ಷರೀಕ್ಷೀರವೃಕ್ಷವಲ್ಕಸಂನ್ಯಾರವಾರಿಸವನಮುಮು ನವನವ್ನು ಭುವನಂಗೆ ಮಾಡಿದಿಂಬಟ್ಟಿಯಂ.

[1] ವಿಟಪಸಮೂಹ (ಎಂದಿರಬಹುದು). [2] ಬೇಟ್ಪುಮೇ (ಎಂದಿರಬಹುದು). [3] ದಿಷ್ಟೋ.

ಕಂ॥ ನಂದನವನಸಂಭವಹರಿ ।
ಚಂದನಸಂತಾನಪಾರಿಜಾತಕವಿಲಸ ॥
ನ್ಮಂದಾರನಮೇರುದ್ರುಮ ।
ಸಂದೋಹದ ಕುಸುಮಕೋಟಿಯಂ ವಾಸಿತವುಂ ॥ ೪೪ ॥

ಮಲಯಜಕುಂಕುಮಜಾತೀ ।
ಫಲಜಾತೀಪತ್ರ[ಕಂ]ತುರುಷ್ಕತುಷಾರೋ ॥
ಪಳಕಾಳಾಗುರುತಕ್ಕೋ ।
ಳಲವಂಗಪ್ರಮುಖಸುರಭಿಪರಿಕರಯುತವುಂ ॥ ೪೫ ॥

ಮ॥ ಜಳಮುಂ ಶೀತಳಮುಂ ನಿರಸ್ತಮಳಮುಂ ತೀವಿರ್ದ ಕುಂಭಂಗಳಾ ।
ಗಳೆ ಗಂಧಾಂಧಮುದಾಳಿಗಳ್ ಮುಸುಱಿ ನೀಲೀವಸ್ತ್ರಸಂಘಾದಿತಂ ॥
ಗಳವೋಲ್‌ತೋರ್ಪಿನ ಮೆತ್ತಿ ಬತ್ತರಿಸಿದರ್ ಗಂಧೋದಕನ್ನಾನವುಂ ।
ಗಳಮುಂ ತೀರ್ಥಕರಂಗೆ ಮಂಗಳರವಂ ಕೆಯ್ಗಣ್ಮೆ ಕಲ್ಪೇಶ್ವರರ್ ॥ ೪೬ ॥

ವ॥ ಆಗಳ್.

ಮ॥ ನವಗಂಧೋದಕಪೂರದೊಳ್ ಪುದಿದು ಪೂವುಂ ತುಂಬಿವಿಂಡುಂ ತೆರ ।
ಳ್ದುವು ಪೇಱಿ ಪುಷ್ಪಕಿಳೀಮುಖಂ ಮಧುಯುತಂ ಭಂಗಕ್ಕೆ ಪಕ್ಕಕ್ಕುವ ॥
ಲ್ಲವಱಿಸಿಕೊಳ್ [1]ಕೂಡವು ಕಾಂತಿಗುಂದವು ಪರಾಗೋದಚ್ಛಸಿಯರ್ ಪಾಡಿ ತೇಂ ।
ಕುವ ಜಾಡ್ಯಕ್ಕೆಡೆಯಾಗದೊಡ್ಡುಗುಮೆ ಮೋಹಧ್ವಂಸನಾಸಾಧ್ಯನದೊಳ್ ॥ ೪೭ ॥

ಕಂ॥ ಬಂಧುರನವನೋತ್ಸವಸುರ ।
ಸಿಂಧುವಿನೊಳ್ ಪುಟ್ಟಿ ಜಗಮನಾಱಿಪ ಪೂರ್ಣೋ ॥
ದ್ಗಂಧಿಯ ನೇವೊಗಟಿಲ್ವುದೊ ಜಿನ ।
ಗಂಧೋದಕಮುಂ ಭವಾಗ್ನಿವಿಚ್ಛೇದಕಮುಂ ॥ ೪೮ ॥

ಉ॥ ಆದುದು ಕರ್ಮಧರ್ಮದ ಪೊಡರ್ಪ ನಡೆಂಗಿಸ ಲತ್ಯಗಣ್ಯವು ।
ಣ್ಯೋದಯಸಸ್ಯಮುಂ ಬೆಳೆಯಿಸಲ್ ಕುಚರಿತ್ರಕಳಂಕಪಂಕಮುಂ ॥
ಛೇದಿಸ ಲಿಂತಿದೆಂದು ದಿವಿಜರ್ ನೆರೆದೀಱುಳಿಗೊಂಡು ಕೊಂಡ ಗಂ ।
ಧೋದಕ [2]ದಿಂದೆ ತಮ್ಮ ತನುವಂ ಶುಚಿ ಮಾಡಿದ ರಿಂಡೆಯಾಡಿದರ್ ॥ ೪೯ ॥

ಕಂ॥ ಅಗವೆಲ್ಲಂ ನಗವೆಲ್ಲಂ ।
ಮೃಗವೆಲ್ಲಂ ನದಿಗಳೆಲ್ಲ ಮುದಧಿಗಳೆಲ್ಲಂ ॥
ಖಗಮೆಲ್ಲಂ ದೆಸೆಯೆಲ್ಲಂ ।
ಭಗವಜ್ಜಿನಸವನಜಲದಿ ನಾಯ್ತು ಪವಿತ್ರಂ ॥ ೫೦ ॥

ವ॥ ಅಂತು.

[1] ಕೂಡುವ. [2] ವಿಂತವುತ್ತು ತನು.

ಉ॥ ಕೂಡೆ ಪವಿತ್ರ ಮಾಯ್ತು ಜಲ ಮೊಂದೆಡೆವಾಡುವ ವಜ್ರಪಾಣಿ ಕೆ ।
ಯ್ಗೂಡಿದ ವಸ್ತು ನೀಡಿದಮರಾವಳಿ ನೋಡಿದ ಲೋಕಪಾಲರೋ ॥
ಲಾಡಿದ ಮೇರು ಪಾಡಿದಮರೀಜನ ಮೆಯ್ದೆ ಪವಿತ್ರವೃತ್ತಿಯೊಳ್ ।
ಕೂಡುವುದಾವ ಪಂಗೆನಿಸಿ ತೇವೊಗಟಿಶ್ವಿಂ ಜಿನಪಾಭಿಷೇಕಮಂ ॥ ೫೦ ॥

ವ॥ ಆಗಳಿಂದ್ರಂಗಿಂದ್ರಾಣಿ ಮುಂದೆ ತಂದವಟಯಿಸ್ಸುವುದುಂ.

ಕಂ॥ ಬಹುಕುಸುಮಬಹುಫಳಾನ್ವಿತ ।
ಬಹುತಂಡುಳವರ್ಣಹಾರದಿಂ ದವತಾರಂ ॥
ವಿಹಿತಕ್ರಮಸಹಿತಂ ಮುಳೆ ।
ರಹಿತಂ ಗೆನೆವಂತು ಮಾಡಿದಂ ಸುರಮಹಿತಂ ॥ ೫೧ ॥

ವ॥ ಅದಱಿಂ[1]ಮೊಡನೆ.

ಕಂ॥ ಆರಾಜನ ಪಕ್ಕದೆ ನುತ ।
ರಾರಾಜಿಪ ಭಿಗಣಮೆನಿಸೆ ಮುಂಗಳದೀಪಂ ॥
ನೀರಾಜನಮುಂ ಮುಕ್ತಿ ।
ಶ್ರೀರಾಜನ ಮುಂದೆ ನೆಗಟ್ಟಿದ್ದ ದಮರಾಧಿಪನಿಂ ॥ ೫೨ ॥

ವ॥ ಅಂತಳ್ಗಶಾಸನಂಗೆ ಪೊಕಶಾಸನಂ ಮಾಟ್ಪಿ ಜನ್ಮಾಭಿಷೇಕವಿಧಾನಮುಂ ನಿರ್ವರ್ತಿಸಿ ತದನಂತರಂ.

ಮ॥ ಹರಿಣಾಂಕದ್ಯುತಿಹಾರಿ ವಾರಿ ಸುರಭಿಶ್ರೀನಂದನಂ ಚಂದನಂ ।
ಪರಿಮುಕ್ತಾಕ್ಷತ ಮಕ್ಷತಂ ಪರಿಮಳಾಸ್ಥಾನಂ ಪ್ರಸೂನಂ ಮನೋ ॥
ಹರರೂಪಂ ಹಿಮಧೂಪ ಮುದ್ಧೃತಕಳಾಪಂ ರತ್ನದೀಪಂ ಸುಧಾ ।
ಗುರು ಭಾಸ್ವಚ್ಚರು ನಿರ್ಮಳಂ ಪಳ ಮೆನುತ್ತೀಮುಂಗಳದ್ರವ್ಯದಿಂ ॥ ೫೪ ॥

ಕಂ॥ * ಅಷ್ಟಾರ್ಧಘಾತಿಮಥನಂ ।
ಗಷ್ಟಾಪದಶಿಖರಿಶಿಖರಶೇಖರರೂಪಂ ॥
ಗಷ್ಟಾಪದರಿಪುಪೀಠಂ ।
ಗಷ್ಟವಿಧಾರ್ಚನೆಗಳೆನೆಯೆ ಪದೆದರ್ಚಿಸಿದಂ ॥ ೫೫ ॥

ಮ॥ ಕ್ರಮದಿಂ ಪೂಜಿಸುವಂ ಶತಕ್ರತುವೆ ಪೂಜಾವಸ್ತು ಕಲ್ಪದ್ರುಜಾ ।
ತಮೆ ಪೂಜ್ಯಂ ಭುವನತ್ರಯೇಶ್ವರನೆ ಪೂಜಾಲಭ್ಯೆ ಮಕ್ಷೋಣಮೋ ॥
ಕ್ಷಮೆ ತಾ ನೆಂದೆನಲಾವ ನಿನ್ನದಱಿ ಪೆಂಪಂ "ನಾಗರಂ ನಾಗರೋ ।
ಪಮ"ವೆಂದೆಂದಿರಲಲ್ಲದೆಯ್ದೆ ಪೊಗಟಿಲ್ಕುಂತಾರ್ಗು ಮೇಂ ತೀರ್ಗುಮೇ ॥ ೫೬ ॥

* ಈ ಪದ್ಯವು ಒಂದು ಪ್ರತಿಯಲ್ಲಿ ಮಾತ್ರ ಈ ಸ್ಥಳದಲ್ಲಿದೆ. [1] ದಮನಂ.

ವ॥ ಎಂದು ಬಣ್ಣಿಸುತ್ತ ಜಯಜಯಘೋಷಮುಖರಮುಖದ ದೇವಕೋಟಿ ವೆರಸು ನಿಟಿಲಘಟಿತ ಕರಸರೋಜನಾಗಿ.

ನಮೋ ಜಿನಾಯ ತೇ ತಸ್ಮೈ ಸರ್ವಸತ್ವಾಶ್ರಯಾತ್ಮನೇ ।
ಸನ್ಮತಾಂಭೋಧಯೇ ಯಸ್ಮಾದ್ಧತ್ತೇ ಧರ್ಮಾಮೃತಂ ಜಗತ್ ॥ ೧ ॥

ನಮೋ ಜಿನಾಯ ತೇ ತಸ್ಮೈ ಸತ್ಪಾತ್ರಸ್ನೇಹವರ್ತಿನೇ ।
ಸುತಪೋದೀಪ್ರದೀಪಾಯ ಯತ್ರಾನಂಗಃ ಪತಂಗವತ್ ॥ ೨ ॥

ನಮೋಜಿನಾಯ ತೇ ತಸ್ಮೈ [1]ದೋಷಾದೋಷವಿಲೋಪಿನೇ ।
ಕಾಳವ್ಯಾಳೇಭಸಿಂಹಾಯ ಭಾತಿ ಯತ್ ಸೂಕ್ತಿವರ್ಜಿತಃ? ॥ ೩ ॥

ನಮೋ ಜಿನಾಯ ತೇ ತಸ್ಮೈ ಕಾಂತಾರಾಗಕ್ಷಯಾತ್ಮನೇ ।
ಸದ್ಯಾಜ್ಞಾನಭಾನವೇ ಯಸ್ಯ ಪ್ರಕಾಶೇ ನಿಸ್ತಮೋ ಜಗತ್ ॥ ೪ ॥

ನಮೋ ಜಿನಾಯ ತೆ ತಸ್ಮೈ ಸರ್ವಾಶಾಂಬರಭಾಸಿನೇ ।
ಭವ್ಯೋತ್ಪಲೇಂದವೇ ಯೇನ ಕರ್ಮಘರ್ಮಾತಪೋ ಹೃತಃ ॥ ೫ ॥

ಕಂ॥ ಜಿನ ನಿನ್ನ ಮೂರ್ತಿ ಜಿನ ನಿ ।
ನ್ನ ನಯಂ ಜಿನ ನಿನ್ನ ಸಮತೆ ಜಿನ ನಿನ್ನೆಸಕಂ ॥
ಜಿನ ನಿನ್ನ ಮಹಿಮೆ ಜಿನ ನಿ ।
ನ್ನನಘತೆ ಜಿನ ನಿನ್ನ ಕಾಣ್ಕೆ ವರ್ಣಿಸಲಳವೇ ॥ ೫೭ ॥

ವ॥ ಎಂದು.

ಕಂ॥ ಇವು ಮೊದಲಾಗಿರೆ ನಸ್ತು ।
ಸ್ತವರೂಪಸ್ತವಗುಣಸ್ತವಂಗಳೆ ನಿಂದ್ಯಂ ॥
ಭವರಿವುವಂ ಸ್ತುತಿಯಿಸಿ ಮಿಕು ।
ಟವಿಘಟ್ಯತಪಾದ ನಾದ ನನುನಯದಿಂದಂ ॥ ೫೮ ॥

ವ॥ ತದನಂತರಂ.

ಕಂ॥ ಚಂದನಲತೆ ಕಿಸಲಯಚಯ ।
ದಿಂದಂ ತೊಡೆದವುದು ಮಲಯನೆಗನಿರ್ಝರನಿ ॥
ಸ್ಯಂದಮು ನೆನೆ ದಿವ್ಯಾಂಬರ ।
ದಿಂ ಶಚಿ ತೊಡೆದ ಳಭವಸವನದ್ರವಮಂ ॥ ೫೯ ॥

ವ॥ ಆಗಳ್.

[1] ಒಂದು ಪ್ರತಿಯಲ್ಲಿ ೩-೪ ನೆಯ ಪದ್ಯಗಳ ಎರಡನೆಯ ಪಾದಗಳು ವ್ಯತ್ಯಸ್ತಗಳಾಗಿವೆ.

ಕಂ॥ ಜಿನತನುಬಿಂಬಿತನೀರಾ ।
ಜನದೀಪಕಳಾಪರುಚಿಗಳೊಪ್ಪಿದುವು ಜಲ ॥
ಕ್ಕನೆ ಚಿತ್ತದೊಳಗೆ ಬೆಳಗುವ ।
ಘನಧರ್ಮಧ್ಯಾನದೀಪ್ತಿ ಪೊಲಿಪೊಣ್ಮುವವೋಲ್ ॥ ೬೦ ॥

ವ॥ ಅನಂತರಂ ಶಿರೀಷಧಾಮಕೋಮಳೆಂಗಳಪ್ಪ ನಿಜಭುಜಂಗಳ್ಗೆ ರೋಮಾಂಚಸಂಚಯಂ ನೆಗೆಯೆ ನೆಗಪಿಕೊಂಡು

ಮ॥ ಉದಯಾದ್ರೀಂದ್ರದೊಳಿಂದ್ರದಿಗ್ವಧು ಲಸದ್ಬಾಳಾರ್ಕನಂ ತಾಳ್ದುವಂ ।
ದದಿ ನಿಂದ್ರಾಣಿ ಜಿನೇಂದ್ರಬಾಳಕನ ನಾತ್ಮೋತ್ಸಂಗದೊಳ್ ತಾಳ್ದಿ ರಾ ॥
ಗದಿ ನಿರ್ದಂದಿನ ಮೈಮೆಗಂದಿನ ವಿಳಾಸಕ್ಕಂದಿನಾನಂದದೊಂ ।
ದೊದವಿಂ ಗಂದಿನ ಪುಣ್ಯಕಂದಿನಿಸಕಕ್ಕುಂತಾವಳುಂ ನೋಂತಳೇ ॥ ೬೧ ॥

ವ॥ ಎನಿಸಿರ್ದನಂತರಂ.

ಕಂ॥ ಪರಮಜಿನದಿವ್ಯಗಂಧದ ।
ಪರಿಚಯದಿಂ ಸಕಳಸಾರಸೌರಭ್ಯಮು ನಾ ॥
ಳ್ದಿರಲಿವು ನೋಂತು ವೆನು ।
ತ್ತಿರೆ ವಿರಚಿಸಿದಳ್ ಶಚಿ ಸುಗಂಧಲೇಪನವಿಧಿಯಂ ॥ ೬೨ ॥

ವ॥ ಮತ್ತಂ ಮುಕ್ತಿಲಲನಾಲಲಾಟತಿಲಕನುಂ, ಪಂಚಮಭೂಮಿಭಾಮಿನೀವಶ್ಯಾಂಜನನುಂ, ಅಪವರ್ಗಸಂಪದ್ವಿಳಾಸಿನೀಲಲಾಮನುಂ, ಅಕ್ಷಯರವಮಾಂಗನಾಸುವರ್ಣಕುಂತೆಲನುಂ, ಆತ್ಯಂತಿಕ ಗತಿಗೃಹವೇಯಕನುಂ, ಅಮೃತಕಾಮಿನೀಕನಕಕಂಕಣನುಂ, ನಿಶ್ರೇಯಸಶ್ರೀಪ್ರಿಯಾರತ್ನಕೇಯೂರನುಂ, ಮೋಕ್ಷಲಕ್ಷ್ಮೀಕರಾಂಗುಲೀಯಕನುಂ, ನಿರ್ವೃತಿವಧೂಪದವಿಲಾಸನೂಪುರನುಂ, ನಿರ್ವಾಣನಿತಂಬಿನೀನಿತಂಬಸೂತ್ರನು ವೆನಿಸಿದಿತ್ರಿಭುವನೈಕಭೂಷಣವಿಳಾಸಂಗೆ ಭೂಷಣವಿಳಾಸ ಮುಖಿಳ ಲೋಕಲೋಚನಲೋಭನೀಯಸಹಜಾಂಗಸೌಂದರ್ಯಸಂಪತ್ತಿಯಂಮುಟ್ಟಿಶಿಯಿಸಲಲ್ಲದೆಮುಟ್ಟಿಶಿಯಿಸಲ್ ನಿಮಿತ್ತ ಮಲ್ತು, ಆವೆಡೆಗಂ ಮಂಗಳೋಪಚಾರ ಮಿಲ್ಲಿ ಕರಣೀಯಂ. ಎಂದು ಸಂಕ್ರಂದನಂ ಬೆಸಸೆ.

ಚಂ॥ ತಿಳಕಮು ನಿಟ್ಟು ಕಜ್ಜಳಮು ನೆಚ್ಚಿ ಲಲಾಮವು ನಪ್ಪುಕೆಯ್ಸಿ ಕುಂ ।
ಡೆಳೆಮು ನಮರ್ಚಿ ಕಂಠಿಕೆಯ ನರ್ಪಿಸಿ ಕಂಕಣಮುಂ ತಗುಳ್ಚಿ ದೋ ॥
ರ್ವಳಯುಮು ನಿಕ್ಕಿ ಮುದ್ರಿಕೆಯ ನೀಡುಸಿ ನೂಪುರಮುಂ ತೊಡರ್ಚಿ ಮುಂ ।
ಜುಳಕಟಸೂತ್ರಮುಂ ತುಡಿಸಿ ಕೆಯ್ಗೊಯ ಕಕ್ಕೆಸೆಹಂ ಜಿನಾರ್ಭಕಂ ॥ ೬೩ ॥

ಕಂ॥ ಸುರನೇತ್ರ ಪ್ರತಿಬಿಂಬಂ ।
ಸ್ವರುಚಿಯೊಳಾವರಿಸಿ ತಾನೆ ತನ್ನಂ ನೋಡಲ್ ॥
ಪರಮನ ತನು ಕಣ್ಪೆಱಿದಂ ।
ತಿರೆ ನೊಗಯಿಸಿ ಪೋಲ್ತು ದಲರ್ದ ತಾವರೆಗೊಳನಂ ॥ ೬೪ ॥

ವ॥ ಆಗಳ್.

ಮ॥ ವರಭೂಷಾಬಲದಿಂದೆ ಶೋಭೆವಡೆದನ್ಯಾಕಾರದಂತಲ್ಲದಾ ।
ಭರಣಕ್ಕಾಭರಣಂ ಜಿತಸ್ಮರನ ರೂಪೆಂದೀಕ್ಷಿಸಲ್ ತನ್ನ ನಾ ॥
ಸಿರ ಕಣ್ಣೆಯ್ದದೆ ಕೋಟಿ ಕಣ್ಗಳ ಬಯಸುತ್ತಿರ್ಕುರ್ಮು ತಲ್ಲಿಕ್ಕಯುಸ್ಸತು ।
ದ್ಧರಿಸಿರ್ದಂ ಹರಿ ಕಾಂಕ್ಷಿಸುತ್ತೊಲವಿನಿಂ ಶ್ರೀ ಭವ್ಯರತ್ನಾಕರಂ ॥ ೬೫ ॥

ಗದ್ಯಂ

ಇದು ಸಮಸ್ತ ಭುವನಜನಸಂಸ್ತುತಜಿನಾಗಮಕುವುದ್ವತೀಚಾರುಚಂದ್ರಾಯಮಾಣ ಮಾನಿತ
ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರ ಪಂಡಿತ ದೇವಸುವ್ಯಕ್ತಸೂಕ್ತಿಚಂದ್ರಿಕಾ
ಪಾನಪರಿಪುಷ್ಟಮಾನಸಮುರಾಳ

ಗು ಣ ವ ರ್ಮ ನಿ ರ್ಮಿ ತ ಮು ಪ್ಪ

ಪುಷ್ಪದಂತಪುರಾಣದೊಳ್

ಜನ್ಮಾಭಿಷೇಕೋತ್ಸವಸಂಪದ್ವರ್ಣನಂ

ಏಕಾದಶಾಶ್ವಾಸಂ

ಕಂ॥ ಶ್ರೀಪೃಥುಳೈಶ್ವರ್ಯನಗತ ।
ಲೇಪನ ದರ್ಶನದೊಳಾದ ಪರಮಾನಂದ ॥
ಶ್ರೀಪದದೊಳ್ ರಂಜಿಸಿದ ನಿ ।
ಳಾಪೂಜ್ಯಂ ಪ್ರಭುಗುಣಾಬ್ಜವನಕಳಹಂಸಂ ॥ ೧ ॥

ವ॥ ಅಂತು ಜನ್ಮಾಭಿಷೇಕೋತ್ಸವವ್ಯಾಪಾರಮಂ ತೀರ್ಚಿ ಮಾರಮದವಾರಣಂ ಬೆರಸು ಮದ ವಾರಣಸ್ಕಂಧಮ ನಲಂಕರಿಸಿ ಸರ್ವಗೀರ್ವಾಣ ಸೈನಿಕಸಹಸ್ರವರಿವೃತಂ ಸಹಸ್ರಲೋಚನಾಮರಂ ಧರಾಮರನಂತೆ ದಕ್ಷಿಣಾಭಿಮುಖ ನಾಗಿ ತಳರೆ.

ಕಂ॥ ನೆಲಸಿರ್ದ ಪಕ್ಕಿವಿಂಡೆಗ ।
ಳುಲಿದೆಟ್ಟಿದ ವಿಭಾತಸಮಯದೊಳ್ ಪೋಗಲೊಡಂ ॥
(ಸ)ಲೆ ಬಿನ್ನನಪ್ಪ ವೃಕ್ಷಂ ।
ಬೊಲಿರ್ದುದಮರಾದ್ರಿ ದಿವಿಜಕಳಕಳಶೂನ್ಯಂ ॥ ೨ ॥

ವ॥ ಆಗಳ್.

ಮ॥ ಭುವನಾಭೋಗಮ ನೆಯ್ದಿ [1]ತೀವಿದಳಿದರ್ಹನ್ಮಜ್ಜನಕ್ಷೀರಪೂ ।
ರ ವೆನಲ್ಕಭ್ರಗಜೇಂದ್ರಶುಭ್ರರುಚಿಯುಂ ದೇವೀದೃಗಾಲೋಕಮುಂ ॥
ಧವಳಚ್ಛತ್ರಚಯಾಂಶುವುಂ ಜಿನತನುಪ್ರದ್ಯೋತಿಯುಂ ಪರ್ವ ತ ।
ತ್ಪ್ಲವದೊಳ್ ವಾಸವ ನೀಸುವಂತೆ ತಳರ್ದಿಟ್ಟಿಂದಂ ತದದ್ರೀಂದ್ರದಿಂ ॥ ೩ ॥

ವ॥ ಅಂತು.

ಮ॥ ಅಮರಾನೀಕವಿಮಾನವಿಸ್ತೃತವಿಯಚ್ಚಕ್ರಂ ಶಚೀಲೋಚನ ।
ಭ್ರಮರಾನಂದಜಿನೇಂದ್ರವಕ್ತ್ರಕಮಳಾಲೋಕೈಕಲಗ್ನಂ ದಿಶಾ ॥
ರಮಣೀಕರ್ಣವಿಹಾರಿ ತೂರ್ಯರಭಸಂ ಮಾಂಗಲ್ಯಸಾಕಲ್ಯಸಂ ।
ಭ್ರಮಿ ಕಾಕಂದಿಯ ನೆಯ್ದಿ ಪೊಕ್ಕ ನವನೀಶಾವಾಸ(ವಂ) ವಾಸವಂ ॥ ೪ ॥

ವ॥ ಅಂತು ಪೊಕ್ಕು.

ಉ॥ ತನ್ನ ನಿಯೋಗದಿಂ ದಿವಿಜಶಿಲ್ಪಿಗಳಿರ್ದು ಸಮಸ್ತವಸ್ತುಸಂ ।
ಪನ್ನ ಮತಿಪ್ರಶಸ್ತರಚನಾಂಚಿತ ಮುರ್ವಿಗಪೂರ್ವ ಮೆಂಬಿನಂ ॥
ಮುನ್ನಮೆ ನಿರ್ಮಿಸಿಟ್ಟ ಮಣಿಮಂಟಪಮಧ್ಯದ ಸಿಂಹಪೀಠದೊಳ್ ।
ಸನ್ನುತಲೀಲೆಯಿಂ ದಿರಿಸಿ ಬಾಲಕನಂ ಸುರಲೋಕಪಾಲಕಂ ॥ ೫ ॥

---

[1] ತೀವಿದಣಿದ.

ಕಂ॥ ಚಂದ್ರನ ಪಕ್ಕದ ಭಗಣ ವು ।
ಗೇಂದ್ರನೆ ಪಕ್ಕದ ಕುಳಾದ್ರಿಕುಳ ಮೆನಿಸಿರೆ ಕ ॥
ಲ್ಪೇಂದ್ರತತಿ ಜಿನನ ಪಕ್ಕದೊ ।
ಳಿಂದ್ರಾಣಿಸಹಿತ ಮಿರ್ದುದುಚಿತಾಸನದೊಳ್ ॥ ೬ ॥

ವ॥ ಆಗಳತಿಬಹಳಕೋಳಾಹಳಕುಳಿನಿಳಿಂಪಜನ ದನೇಕಮಂಗಳಾನಕಸಮುದ್ರಸದ್ರಭಸದಿಂದ ಮುನ್ನಿದ್ರಿಯಾದ ಮಹಾದೇವಿವೆರಸು ಪುತ್ರಮುಖದರ್ಶನೋತ್ಕಂತೆ ಸುಕಂತರಾಜ ನೆರಡನೆಯ ದಿವಿಜರಾಜನಂತೆ ಮಹನೀಯಮಹಿಮ ನಾಮಹಾಮಂಟಪಕ್ಕೆ ವಂದು ಸಮುಚಿತಾಸನಾಸೀನ ನಾದಲ್ಲಿ.

ಕಂ॥ ನರಪತಿಯುಂ ಸುರಪತಿಯುಂ ।
ನರೇಂದ್ರವಧುವುಂ ಸುರೇಂದ್ರವಧುವುಂ ನರರುಂ ॥
ಸುರರು ಮಣ ಮುಱಿಯಲಾಗದೆ ।
ಸಿರಿಯೊಳ್ ಮೆಯ್ಸಿರಿಯೊ ಳೆವರದೇನನುಪಮರೋ ॥ ೭ ॥

ವ॥ ಆಸಮಯದೊಳ್.

ಕಂ॥ ಭುವನತ್ರಯಸಾವಮ್ರಾಜ್ಯ ವು ।
ದಿವರ್ಗೀಕಚ್ಛತ್ರ ಮಾದುದೆನಿಪನಿತು ಮಹೋ ॥
ತ್ಸವ ಮಾದುದವರ್ಗೆ ಲೋಚನ ।
ಕುವಳಯಮು ನಲರ್ಚೆ ಪುತ್ರಮುಖಶಶಿಬಿಂಬಂ ॥ ೮ ॥

ಬಾಳಕನಂ ವಿಲುಳಿತಲಂ ।
ಬಾಳಕನಂ ನೋಡುವಲ್ಲ ಸುಗ್ರೀವನ ತ ॥
ದ್ಬಾಳೆಯು ನಿಡುನಿಡುಗಣ್ಗಳ್ ।
ಬಾಳೆಯು ನಿಟಿಸಿದುವು ಹರ್ಷರಸಮಗ್ನಂಗಳ್ ॥ ೯ ॥

ವ॥ ಅನಂತರಂ.

ಆಜಂಪತಿಗಳ ವದನಾಂ ।
ಭೋಜಂಗಳ ನಾತ್ಮದೃಕ್ಸಹಸ್ರಭ್ರಮರೀ
ರಾಜಿಗೆಡೆವಾಡಿ ನೋಡಿ ಬಿ ।
ಡೌಜಂ ದಶನಾಂಶುರಾಜಿ ರಾಜಿಸೆ ನುಡಿದಂ ॥ ೧೦ ॥

ಹರಿಣಿ॥ ನಿಮಗೆ ತನಯಂ ತ್ರೈಲೋಕ್ಯಾಧೀಶ ನೀಜಿನನಾಥ ನಾ ।
ನಮರಗಿರಿಗೊಯ್ದಾಗಳ್ ಜನ್ಮಾಭಿಷೇಕ ವಿಭೂತಿಯಂ ॥
ನಮೆದು ಸುಕೃತಂಬೆತ್ತೆಟ್ಟಿಂದೆಂ ಕೃತಾರ್ಥನೆ ನಾದೆ ನಿ ।
ನ್ನಿಮತು ದನೆಯಿಂದನ್ಯರ್ ನಿಮ್ಮಂತು ಮಾನ್ಯರೆ ಧನ್ಯರೇ ॥ ೧೧ ॥

ಕಂ। ಗುರುಗಳ್ ನೀ ವಿಶ್ವತ್ರಿಭುವನ ।
ಗುರುಗದಱಿಂ ದೆಮಗೆ ಗುರುಗಳಖಿಳಜನಕ್ಕಂ ॥
ಗುರುಗಳ್ ನೀಮೆ ।।ಗುರೋರಪಿ ।
ಗುರು" ವೆಂಬೀನುಡಿಯು ಪೆಂಪ ನಾಂತಿರ್ ನೋಂತಿರ್ ॥ ೧೦ ॥

ವ॥ ಎಂದು ವಿನಯೋಕ್ತಿಪೂರ್ವಕ ವಿರ್ವರುಮುಂ ಸ್ತುತಿಯಿಸಿ.

ಮ॥ ಇದು ಸರ್ವೋರ್ವಿಗಮತ್ಯಪೂರ್ವ ಮೆನೆ ಗೀರ್ವಾಣವ್ರಜಂ ತಂದು ನೀ ।
ಡಿದ ವಸ್ತ್ರಾಂಗವಿಭೂಷಣಾಂಗವಿಕಸನ್ಮಾಲ್ಯಾಂಗದೀಪಾಂಗವೃ ॥
ಕ್ಷದ ದಿವ್ಯಾಂಬರದಿಂ ದಲಂಕರಣದಿಂ ಪೂಮಾಲೆಯಿಂ ದಂಗರಾ ।
ಗದಿ ನುದ್ಯಾಜಿಸುವಂತು ಪೂಜಿಸಿದ ನಿಂದ್ರಂ ತತ್ಪಿತೃದ್ವಂದ್ವಮುಂ ॥ ೧೩ ॥

ಕಂ॥ ಪುರದೊಳಗಿನ್ನುಂ ರನ್ನದ ।
ಸರಿ ಸುರಿದಪುದಿಂದ್ರ ನಿಂತು ಬಂದೋಲಗಿಪಂ ॥
ನರಲೋಕದೊಳಿವರ್ಗಳ್ ನೋಂ ।
ತರಿಂತು ಪಡೆದನ್ನರಾರೊ ಕುಳದೀಪಕನಂ ॥ ೧೪ ॥

ಚಂ॥ ಕರಿರಿವು ಪುಟ್ಟೆ ವಿಂಧ್ಯಗಿರಿ ತಾವರೆ ಪುಟ್ಟೆ ಸರೋವರಂ ಮನೋ ।
ಹರಮಣಿ ಪುಟ್ಟೆ ರೋಹಣಮಹಾದ್ರಿ ಸುಧಾರುಚಿ ಪುಟ್ಟೆ ಪಾಲ್ಗಡಲ್ ॥
ಸುರತರು ಪುಟ್ಟೆ ನಂದನ ವಭಿಷ್ಟುತ ಮವ್ವವೊಲಾದುದೀಗಳೀ ।
ಸ್ಮರರಿವು ಪುಟ್ಟೆ ಧಾರಿಣಿಗೆ ಕಾಶ್ಯಪಗೋತ್ರ ವಿದೇಂ ಪವಿತ್ರವೋ ॥ ೧೫ ॥

ವ॥ ಎಂದು ಸುರಜನಂಗಳುಂ ಪುರಜನಂಗಳುಂ ಪೊಗಟ್ಪಿ ಪರವೂನಂದ ಪರವಶೀಭೂತ ಚೇತಸ್ಕ ರಾಗಿರ್ದು ಜಾತಕರ್ಮ ಕಲ್ಯಾಣದೊಸಗೆಯಂ ಮಾಡಿಸಿ.

ಕಂ। ನಗರದ ಮನೆಮನೆದಪ್ಪದೆ ।
ಸೊಗಯಿಸೆ ಬಹುವರ್ಣ ವಿವಿಧಪಟದೊಳ್ಗುಡಿಗಳ್ ॥
ನೆಗಟ್ಪಿರ್ದಿರೆ ಬಹುಪ್ರಕಾರದ ।
ಮುಗಿಲೊಗೆದಪುವೆನಿಸಿತಾಗಳಾಕಾಶತಳಂ ॥ ೧೬ ॥

ಒಸೆದು ದಿಗಧೀಶ್ವರರ್ ಜಿನ ।
ನೊಸಗೆಗೆ ಬರ್ಪಲ್ಲಿ ತಚ್ಚಮೂಪದಹತಿಯಿಂ ॥
ಮುಸುಕಿದ ಕೆಂಧೂಳಿ ಯಿದೆನೆ ।
ಪಸರಿಸಿ ಪಟವಾಸಚೂರ್ಣಮೆನೆದುವು ದೆಸೆಯೊಳ್ ॥ ೧೭ ॥

ಎಡೆವಱಿಯದಂತಪುರದೊಳ್ ।
ಕಡೆಯಿಕ್ಕುವ ತೋರಮುತ್ತು ಕಟ್ಟುವ ಗುಡಿ ನೀ ॥
ರ್ಪಡೆ ಚೆಲ್ವೆತ್ತುವ ತೋರಣ ।
ವಡಿಗಡಿಗುತ್ಸವದೆ ತಳಿವ ಪಟವಾಸಚಯಂ ॥ ೧೮ ॥

ಕಂ॥ ಆವರಿಸುವ ಪೂವಲಿ ತ ।
ಳಿತ್ತವಗ ಮಿರದುಣ್ಮು ವುಚಿತಮುಂಗಳರುಚಿ ಸ ॥
ದ್ಭಾವದೊಳೆ ಕುಣಿವ ಪೆಕ್ಕಣ ।
ಮಾವೃತಶುಭನಿಧಿಗಳೀವ ಬಾಯಿನ ಮೆಸೆಗುಂ ॥ ೧೯ ॥

ಚಂ॥ ಸುದತಿಯುರಾಸ್ಯಗಂಧಮು ನಪೂರ್ವಮು ದೆಂದು ನಮೇರುವುಪ್ಪವ ।
ರ್ಪದ ಬಯಿಸಂದು ಬಂದ ಸುರಲೋಕದ ತುಂಬಿಗಳಾಸೆಗೆಯ್ದು ಮು ॥
ಚ್ಚಿದುವು ತದಾನನಾಂಬುಜದ ತುಂಬಿಗಳಂ ಸುರಪುಷ್ಪ ವೃಷ್ಟಿ ತಾಂ ।
ಪದನಿಸಲಾರ್ತುದಿಲ್ಲ ನಿಜಗಂಧದಿ ನೇನದಱಿಂಪಳ್ಪಳುಂಬವೋ ॥ ೨೦ ॥

ಚಂ॥ ಸುರವನಿತಾಜನಂಗಳೆ ಸುರೂಪವಿಳಾಸೆಯ ರಿಂದು ಬೀಗಿ ಧಿ ।
ಕ್ಕರಿಸುವ ನಿಂದ್ರ ನೆಮ್ಮುಮು ನವಂದಿರುಮುಂ ಪಡಿಗಟ್ಟಿ ನೋಡುಗೀ ॥
ಬರವಿನೊಳಾದ ಚೆಲ್ವು ಮಿಗಿಲಿಲ್ಲಿಯೆ ಕಂಡಪ ನೆಂದು ತೋರ್ಪವೋಲ್ ।
ನೆರೆದುದು ಪೆಂಡವಾಸದೆಳವೆಂಡಿರ ತಂಡ ಮದಿಂಡೆಯಾಟದೊಳ್ ॥ ೨೧ ॥

ಕಂ। ಒಸಗೆಮರುಳೆಳ್ಗಾಂಡಾಡುವ ।
ರಸಭಾವಾತ್ಮೆಯರ ನೂಪುರಂಗಳ ದನಿಯುಂ ॥
ಕುಸುಮೋಪಹಾರದಳಿಗಳ ।
ರಸಿತಮು ಮೊದವಿಸಿತು ಮದನಚಾಪಧ್ವನಿಯಂ ॥ ೨೨ ॥

ವ॥ ಅಂತಶೇಷಪುರಜನಾಂತಃಪುರಜನಪ್ರಮೋದಸಮುದ್ದೀರ್ಣಘೂರ್ಣಿತಾರ್ಣವಕ್ಷೋಭ ಶೋಭಾವಳಂಬಿಯಾದ ತನ್ಮಹೋತ್ಸವದೊಳ್.

ಕಂ॥ ಆಡುವರಂ ಕಂಡಾಡುವ ।
ಪಾಡುವರಂ ಕಂಡು ಪಾಡುವಂದಾನಂದ ॥
ಕ್ರೀಡೆಗೆ ಮಳುವನ ಬಗೆಯುಂ ।
ತೀಡಿದುದೇಂ ಪಿರಿದೊ ಜಿನನ ಪುಣ್ಯಾತಿಶಯಂ ॥ ೨೩ ॥

ವ॥ ಅಂತು ಜಗತ್ತ್ರಯಪವಿತ್ರಸುಕೃತಸೂತ್ರಧಾರನಮುಂದೆ ಸುತ್ರಾಮ ನುದ್ದಾಮಸಂಗೀತಕ ಪ್ರಸಂಗಮುಂ ಮೆಱಿಯಲ್ ಮನಂದಂದು ತಮ್ಮ ಮೊಗಮುಂ ನೋಟಿಪ್ಪುದುಂ ಕಲ್ಪಾಮರಮುಖ ರಿಗಳ್ ತಮಗವಸರಂಬಡೆದು ಸಂಕ್ರಮಿಸೆ.

ಮಾ। ಸ್ವರವರ್ಣಶ್ರುತಿಮೂರ್ಛನಾಗತಿಯತಿಸ್ಥಾನಪ್ರಯೋಗಕ್ರಿಯಾ ।
ನಿರತಂ ತಾಳಲಯಾಶ್ರಯಪ್ರಣಯನಾನಾವೇಣುವೀಣಾನುಗಂ ॥
ಸರಸಂ ಸಂಗತಮಾರ್ಗದೇಸಿ ಯೆನೆ ರಾಗಪ್ರೌಢಿಯಂ ಬೀಱಿ ಬಿ ।
ತ್ತರದಿಂ ಪಾಡಿದರೊಜೆಯಿಂ ಶ್ರುತಿಸುಖಕ್ರೀಡಾಯಕರ್ ಗಾಯಕರ್ ॥ ೨೪ ॥

ಉ॥ ಇಂತಿದು ಕಾಮುಕಾರ್ಮುಕಲತಾಗುಣದಿಂಚರ ಮೆಂಬ ಕಾಂತಿವೆ ।
ತ್ತಿಂತಿದು ವಿಶ್ವಲೋಕಜನಮೋಹನಮುಂತ್ರನಿನಾದ ಮೆಂಬ ಮು ॥
ತ್ತಿಂತಿದು ಕಾಟಿಪ್ಪರಂಬರಿವ ಕರ್ಣರಸಾಯನ ಮೆಂಬ ನುಣ್ಪಿನಿಂ ।
ಪಿಂತಲೆ ತೂಗಿಸಿತ್ತು ರಸತುಷ್ಟನರಾಮರರೊಂದು ಗಾವರಂ[1] ॥ ೨೫ ॥

ವ॥ ಅದಱಿತೊಡನೆ.

ಚಂ॥ ಬಹುಲಯಭೇದದೋಜೆ ಗತಿಭೇದದೊಡಂಬಡು ಚಾರಿ ಭೇದದು ।
ರ್ವಹಿತೆ ತಗುಳ್ದ ಳಂಕರಣಭೇದದಮರ್ಕ್ಕೆ ನಿಮಿರ್ಕೆಯಿಂ ರಸಾ ॥
ವಹ ಮೆನೆ ಕೆಯ್ಗೆ [2]ನಾಲಗೆ ಕವಲ್ತವೊಲಾಗಿರೆ ಹೃದ್ಯವಾದ್ಯಮುಂ ।
ಬಹಳಿಕೆವೆತ್ತು ಬಿತ್ತರಿಸಿ ಬಾಜಿಸಿದರ್ ದಿವಿಜೇಂದ್ರವಾದಕರ್ ॥ ೨೬ ॥

ಕಂ॥ ಕಂಕರಿಯ ಸಿವಿಲಿ [3]ಪೆಂಪಿನ ।
ಝಂಕಟ [4]ಬೊಂಬುಟಿಲಿಯ ಪಟಿವದುಳಿಕೆಯ ಢಕ್ಕೆ ॥
ಸಂಕುಳವ ತಾಳದುಲಿ ನೆಗ ।
ಟಿಶ್ಶಿಂ ಕ್ಷಣಾರ್ಧ ವೃತಸವುದ್ಭಘೂರ್ಣನ ಮಾಯ್ತ್ರೊ ॥ ೨೭ ॥

ವ॥ ಅಂತು ವಸ್ತುಗೀತಂ ವಿಸ್ತರಿಸೆಯುಂ, ನಿರವದ್ಯವಾದ್ಯಂ ಚೋದ್ಯ ಮಾಗೆಯುಂ ರಾಗರಸ ರಂಜಿತಾಂತರಂಗ ನಾಗಿ.

ಮಾಲಿನಿ॥ ರಚಿತರುಚಿರನೇಪಥ್ಯಂ ಬಡಂಗಾಗೆ ಮುಂತ್ರೋ ।
ಪಚಿತಬಲಿವಿಧಾನಂ ಪೂರ್ವರಂಗಪ್ರಸಂಗಂ ॥
ರುಚಿರ ಮೆನಿಸೆ ನಾಂದೀಪೂಜೆಯುಂ ಮಾಡಿ ಚೆಲ್ವಂ ।
ಶಚಿಪತಿ ಕೃತ[ಸ] ತ್ಪುಷ್ಪಾಂಜಲಿಕ್ಷೇಪನಾವಂ ॥ ೨೮ ॥

ವ॥ ಆಗಿ ರಂಗಂಬೊಕ್ಕು.

ಕಂ॥ ಆಖಂಡಳಂ ಸಹಸ್ರಮು ।
ಯೂಖನ ತೆಱಿದಿಂ ಪ್ರಕೀರ್ಣಪಾದನ್ಯಾಸಂ ॥
ವ್ಯಾಖಂಡಿತ ಮೆನಿಸಿದ ವೈ ।
ಶಾಖಸ್ಥಾನದೊ ಳಳುರ್ಕೆವೆತ್ತೆಸೆದಿರ್ದಂ ॥ ೨೯ ॥

ಕಟಿಸೂತ್ರ ಮೆನೆದು ದಿಂದ್ರನ ।
ಕಟಿತಟವಿನ್ಯಸ್ತಹಸ್ತನಖರುಚಿಯಿ ನದಂ ॥
ತುಟಿ ಪುಣ್ಯಾತ್ಮಕರಾಶ್ರಯ ।
ಘಟನೆಯಿ ನಿನೆದಿರ್ಕು ಮುಲ್ತೆ ಮುಧ್ಯಸ್ಥಗುಣಂ ॥ ೩೦ ॥

ವ॥ ಆಗಳ್[5].

[1] ರಾಗಮುಂ, ಗಾವುರಂ. [2] ನಾಲಗೆಯುಕಲ್ತ. [3] ಸಿಪ್ಪಿನ. [4] ದೂಂದುಟಿಲಿ (ಎಂದರಬಹುದು).

ಕಂ॥ ದೇವೇಂದ್ರ ನಿಬೀಯಿಸಿದ ನು ।
ದ್ಭಾವವಿಭೈವು ವಿಕಚಕುಂಚಿತಾಲಸದೃಷ್ಟಿ ॥
ಶ್ರೀ ವಿಭವದಿ ನೊಳ್ಗಾವಿನ ।
ಪೂವಿನ ಬಿರಿವುಗುಳ ನೆಲೆಯ ನೆಯ್ದಿಲ್ಗೊಳನಂ ॥ ೩೧ ॥

ಭಾವಂಗಳ ವಿಭವಮು ನನು ।
ಭಾವಂಗಳ ತುಜಿಗಲಂ ವಿಭಾವಂಗಳ ಸ ॥
ದ್ಭಾವಮ ನಖಿಳರಸಂಗಳ ।
ಜೀವನಗಳೆವೆನಿಸಿ ಮೆಜಿಶಿದ ನಿಂದ್ರ ನತಂದ್ರಂ ॥ ೩೨ ॥

ಶತಮಖನ ಸಂಯುತಾಸಂ ।
ಯತಂಗಳಜಿವತ್ತು ನಾಲ್ಕು ಹಸ್ತಂಗಳು ಮಾ ॥
ಯತಭುಜದೊಳೆಸೆಯೆ ಕುಣಿವ ।
ಶ್ಲಿ ತಳಿರ್ತು ಮಡಲ್ತಶೋಕತರುವಂ ಪೋಲ್ತಂ ॥ ೩೩ ॥

ಉರಚಲ್ಲಿಯ ಕಟಿಚಲ್ಲಿಯ ।
ಕರಣದ ರೇಚಕದ ಕಣ್ಣ ಕಾಲ್ದುಜಿಗಲ ಕಂ ॥
ಥರವಳೆಯದ ಭುಜಚಳನದ ।
ಪರಿಣತಿಯಿಂ ನಾಟ್ಯವೇದಮೂರ್ತಿವೊಲೆಸೆದಂ ॥ ೩೪ ॥

ಮಾ ಸ್ರ॥ ಜಿನಪೂಜಾನಂದಮುಂದಾನಿಲನಲೆಪದಿ ನಂದಾಡುತಿರ್ಪೊಂದುಸಂಕ್ರಂ ।
ದನಕಲ್ಪೋರ್ವಿರ್ಜದೊಳ್ ರಾಜಿಸಿದುದು ವಿಲಸದ್ಬಾಹುಸಂದೋಹಶಾಖಾ ॥
ವನನಂ ಪಾಣಿಪ್ರವಾಳಪ್ರಚಯವಿಚಳನಂ ಸ್ಪಷ್ಟದೃಷ್ಟಿಪ್ರಭಾವು ।
ಪ್ಪನಿಕಾಯೋಲ್ಲಾಸ ಮುದ್ಯನ್ಮಕುಟಮಣಿಫಳಶ್ರಾತುಚ್ಛಗುಚ್ಛಪ್ರಕಂಪಂ ॥ ೩೫ ॥

ಮು॥ ಪದವಿನ್ಯಾಸದಿ ನೆಯ್ದಿ ಕಂಪಿಸೆ ಮಹೀಚಕ್ರಂ ಮಹೀಚಕ್ರಭಾ ।
ರದಿ ನದ್ರಿವ್ರಜ ಮದ್ರಿಸಂಚಳನದಿಂ ದಿಗ್ದಂತಿ ದಿಗ್ದಂತಿ ಜೋ ॥
ಲ್ದುದಜಿಂ ವಾಸುಗಿ ವಾಸುಗಿಕ್ಷುಭಿತದಿಂ ದಾಕೂರ್ಮ ನಾಕೂರ್ಮಕಂ ।
ಪದಿ ನಂಭೋಧಿ ಕಲಂಕಿದತ್ತೆನಿಸಿತೇ ನುಚ್ಚಂಡವೋ ತಾಂಡವಂ ॥ ೩೬ ॥

ವ॥ ಅಂತು ಮುಲ್ಲದೆಯುಂ.

ಮು॥ ವಿಭುಲೋಕಂ ವಿಹಟತ್ಕಿರೀಟಹತಿಯಿಂ ದತ್ತತ್ತ ದಿಗ್ಭಿತ್ತಿ ಭೂ ।
ರಿಭುಜಾದಂಡಸಹಸ್ರಸಂವಳನದಿಂ ದತ್ತತ್ತ ಭೂಭಾಗಮುಂ ॥
ಪ್ರಭವಸ್ಫೀತನಿಘಾತದಿಂ ತಳರ್ದು ದತ್ತತ್ತಂಬಿನಂ ರಂಜಿಪಾ ।
ರಭಟೀವೃತ್ತಿಯೊಳುದ್ಧತಾಭಿನಯದಿಂ ಕಣ್ಗೊಂಡ ನಾಖಂಡಳಂ ॥ ೩೭ ॥

ಕಂ॥ ದ್ವಿಗುಣಿಸಿದುವು ಶಕ್ರನ ನಿಮಿ ।
ದ್ರೋಗೆವ ಭುಜಂಗಳ ನಖಂಗಳಿಂ ಭಗಣಂಗಳ್ ॥
ನೆಗೆದ ನವಗ್ರಹಕಂಕಣ ।
ದ ಗಭಸ್ತಿಗಳಿಂ ನವಗ್ರಹಂಗಳ ರುಚಿಗಳ್ ॥ ೩೪ ॥

ವ॥ ಅಂತು ನರ್ತಿಸುತ್ತ ವಂತಂತ ಪರಮಹರ್ಷ ಪ್ರಕರ್ಷ ಪ್ರಮುತ್ತಚಿತ್ತ ನಾವಿರ್ಭೂತ ನೈಕವರ್ಣಾಕರಣ ನಾಗಿ.

ಕಂ॥ ಎಮೆಯಿಕ್ಕುವನಿತುಬೀಗ ।
ಕ್ಕೆ ಮರುತ್ಪಥದೊಳ್ ದಿಗಂತದೊಳ್ ನೆಲದೊಳ್ ತೋ ॥
ರ್ಪಮರೇಂದ್ರ ನೊಂದೆ ರೂಪಿಂ ।
ದಮೆ ತನ್ಮಯ ವಾಯ್ತು ಜಗದ ಸಚರಾಚರವುಂ ॥ ೩೯ ॥

ವಸುಧಾಗಗನಸ್ಥತೆ ದೂ ।
ರಸವಿಾಪತೆ ಸೂಹ್ಮಗುರುತೆ ಶಾಂತೋಗ್ರತೆ ನೀ ॥
ಚಸಮುಚ್ಚತೆ ಯುವತರುಣತೆ ।
ಪಸರಿಸಿತೇಂ ಪಿರಿದೊ ಶಕ್ರವಿಕ್ರಿಯೆ ಯೆಸಕಂ ॥ ೪೦ ॥

ಭ್ರಮೆಗೊಂಡು ಸುಕೇಶಿತಿಲೋ ।
ತ್ತಮೆ ಮೇನಕಿ ಮಂಜುಘೋಷೆ ಯೂರ್ವಸಿ ಯೆಂಬೀ ॥
ಪ್ರಮದೆಯರ ರಮದೆಯ ರಾದರ್ ।
ತಮಗಿಂದ್ರನ ನಾಟ್ಯ ವಿಾಯೆ ಹೃತ್ಕೌತುಕವುಂ ॥ ೪೧ ॥

ಬಳರಿಪುವ ನಾಟ್ಯರಸದೊಳೆ ಬಳೆ ।
ದೆಳಲತೆಗಳವೊಲೊಡನೆ ಕುಣಿವ ವು(ರ್ವ್ಯ)ನಟೀ ॥
ಕುಳ ವೆಸೆದುದಳಿಗಳಳಕಂ ।
ತಳಿರ್ಗಳ್ ತಳ ವುಲರ್ಗಳಹ್ಲೆ ಯೆನೆ ಜಿನಸಭೆಯೊಳ್ ॥ ೪೨ ॥

ಗೊಂದಣವೆಕ್ಕಣದವುರೀ ।
ವೃಂದಂಗಳ ಬಿಳಿಯ ನಿಡಿಯ ಕಣ್ಗಳ ಬೆಳ್ಪುಂ ॥
ಕೆಂದಳದ ಕೆಂವು ವಾಂತುವು ।
ಚಂದನಸಿಂಧೂರರಸದ ಪೊಸಕಾಟಿಪ್ಪರವುಂ ॥ ೪೩ ॥

ಶತವುಖನು ವುವುರಿಯರು ವಾ ।
ಡೆ ತಗುಳ್ದಾರಭಟಿಯಿಂದ ಕೈಶಿಕೆಯಿಂ ದು ॥
ದ್ಧತ ಮೆನಿಪ ಲಲಿತ ಮೆನಿಪಭಿ ।
ನುತತಾಂಡವಲಾಸ್ಯ ಪೊಡನೆ ತೋಱಿದು ವೆರಡುಂ ॥ ೪೪ ॥

ಕಂ॥ ನಿಜದಿಂ ಪುಳಿೋವುಬಳಪಾ ।
ಕಜಂಭನಮುಚಿಗಳನೆಲೆದ ಜಿಷ್ಣುವ ಪಲರುಂ ॥
ವಿಜಯಶ್ರೀದೇವಿಗಳೆನೆ ।
ಭುಜಕೋಟಿಯೊಳಿರ್ದು ಕುಣಿದ ರಮರಿಯ ರರೆಬರ್ ॥ ೪೫ ॥

ರೋಚಿಸೆ ನಾನಾರಸಭಾ ।
ವೋಚಿತಕರಣಾಂಗಹಾರವಿಧ ವಲ್ಲಿ ಕೆಲರ್ ॥
ಸೂಚಿಸೆ ನಾಟ್ಯಮು ನಾಡಿದ ।
ರಾಚತುರಾಮರಿಯ ರರೆಬ ರಿಂದ್ರನ [1]ನಖದೊಳ್ ॥ ೪೬ ॥

ವ॥ ಮತ್ತಂ.

ಕಂ॥ ಕೆಲವಜುಶಿೊಳೆಮರಕುವಮಾರರ್ ।
ಕೆಲವಜುಶಿೊಳಚ್ಚರಸಿಯರ್ಕಳಾಡೆ ಭುಜಾಸಂ ॥
ಕುಲದೊಳ್ ಪುಂಸ್ತ್ರೀಜನಮಯ ।
ಫಲಪನಸ ವಿದೊಂದಪೂರ್ವಮೆನಿಸಿದ ನಿಂದ್ರಂ ॥ ೪೭ ॥

ವ॥ ಅಂತು ಮಲ್ಲದೆಯುಂ.

ಮ॥ ಅಳಿಯಿಂ ಶಕ್ರನ ವಿಕ್ರಮಾಂಗದ ಪದಪ್ರಾಗ್ಭಾಗದೊಳ್ ಜಾನುಮಂ ।
ಡಳದೊಳ್ ಸಿಂಹಕಟೀಪ್ರದೇಶದೊಳುರೋವಿಸ್ತಾರದೊಳ್ ಬಾಹುಸಂ ॥
ಕುಳದೊಳ್ ಕೆಂದಳದೊಳ್ ಕರಾಂಗುಲಿಗಳೊಳ್ ನಿಂದಾಡೆ ದೇವಾಂಗನಾ ।
ಕುಳಮುಂ ಸ್ತ್ರೀಮಯ ಮಾಗಿಸಿತ್ತೊ ಮುಹಿದಿಗ್ಬ್ರಹ್ಮಾಂಡಮುಂ ತಾಂಡವಂ ॥ ೪೮ ॥

ಉ॥ ಆಡುವ ನಾಕನಾಯಕನ ಬಾಹುಸಮೂಹದ ಮೇಲೆ ಲೀಲೆವೆ ।
ತಾಡುವ ದೇವಕನ್ನೆಯರ ಭೂಷಣರಶ್ಮಿ ಕಟಾಕ್ಷಕಾಂತಿ ಕೈ ॥
ಗೂಡಿದ ದೇಹದೀಪ್ತಿ ನಭಮುಂ ಬಳಸುತ್ತಿರೆ ಲೋಕಮೆಲ್ಲ ಮೋ ।
ಲಾಡುವ ಮಾಜುಶ್ಮಿ ಯಾಯ್ತು ನವನಾಟ್ಯರಸಾಮೃತಸಾರಪೂರದೊಳ್ ॥ ೪೯ ॥

ವ॥ ಅಂತು.

ಮಾಸ್ರ॥ ಜನಹರ್ಷೋದಾರಕೇದಾರದ ಶಶಿಗೆ ಸುಧಾಸಾರಮುಂ ಸೂಸೆ ದೇವೀ ।
ಜನಗೇಯಂ ಗೇಯಮುಂ ನೋಯಿಸಿದನುನಯದಿಂ ಪೊಣ್ಮೆ ನಾನಾಲಯಾಲಂ ॥
ಬನವಾದ್ಯಂ ವಾದ್ಯಮುಂ ಹೃದ್ಯಮು ನನುಗತಮುಂ ಮಾಡೆ ಗೀರ್ವಾಣವಾಕ್ಯಾ ।
ಭಿನುತಶ್ರೀಲಾಸ್ಯಮುಂ ಲಾಸ್ಯದೊಳಮರ್ದಿನೆದತ್ತಿಂದ್ರನಾನಂದನೃತ್ಯಂ ॥ ೫೦ ॥

ವ॥ ಅಂತು.

[1]ಕರದೊಳ್.

ಮು॥ ರಸಿಕರ್ ಬಣ್ಣಿಸೆ ಭಾವಕರ್ ಪೊಗಟಿಸಿ ಜಾಯಾಜೀವಿಗಳ್ ಕೂರ್ತು ಕೀ ।
ರ್ತಿಸೆ ತಜ್ಜ್ಞರ್ ತಲೆದೂಗೆ ದೇವಸಭೆ ಸಂತೋಷಕ್ಕೆ ಪಕ್ಕಾಗೆ ತ ॥
ದ್ವಸುಧೇಶಂ ಬೆಱಗಾಗೆ ಮುಚ್ಚಿ ಮೆಱಿಸಿದಂ ಮಿಕ್ಕಿಂತು ಸಂಕ್ರಂದನಂ ।
ರಸಭಾವಾಂಗಿಕವಾಚಿಕಾಭಿನಯಲೀಲೋತ್ಪಾಟ್ಯವಂ ನಾಟ್ಯವಂ ॥ ೫೧ ॥

ಕಂ॥ ಮಚ್ಚುವುಳಿಸಿಲ್ಲದಭವಂ ।
ಮಚ್ಚುವುದದು ಕೂಡೆದೆನಗೆ ನಟವೃತ್ತಿ ಕರಂ ॥
ತುಚ್ಚತನ ವೆನ್ನದಾಡಿದ ।
ನಚ್ಚರಿ ಯೆನೆ ವಜ್ರಿ ಭಕ್ತಿವಶ ರೇಗೆಯ್ಯರ್ ॥ ೫೨ ॥

ವ॥ ಅಂತು ನರ್ತಿಸಿದ ನರ್ತನ ದನಂತರ ಮನಂತವುಂಗಳೋಪಕರಣಪರಿಚಿತ ಮಾಗೆ ನಾಮುಕ ರಣಕಲ್ಯಾಣದೊಸಗೆಯುಮು ನಸದಳಂವಾಡಿ.

ಕಂ॥ ವ್ರವಿತತಪುಣ್ಯೋದಯದಿಂ ।
ಭುವನಸ್ತುತಸುಕೃತಿ ಯೆನಿಪ ಕುವಳಯಯುಕಮಳೋ ॥
ತ್ಸವಕರ ನೆನಿಪೀಸ್ವಾಮಿಗೆ ।
ಸುವಿಧಿವೆಸರ್ ಪುಷ್ಪದಂತವೆಸರನ್ವರ್ಥಂ ॥ ೫೩ ॥

ವ॥ ಎಂದು ಪೆಸರ ನಿಟ್ಟು.

ಕಂ॥ ಗೋತ್ರಾರಿ ಬಸಸೆ ನೆಗಟ್ಟಿಪ ।
ಗೋತ್ರಾರಿಯ ಶೈಶವೋಚಿತಕ್ರಿಯೆಗೆಲ್ಲಂ ॥
ಧಾತ್ರೀಜನಮಾಗಿಸಿದಂ ।
ಧಾತ್ರೀಜನಚಾರುಚತುರದೇವೀಜನಮುಂ ॥ ೫೪ ॥

ವ॥ ಮತ್ತಂ.

ಕಂ॥ ಓರಗೆಗಳಪ್ಪ ಬಹುವ್ಯಂ ।
ದಾರಕದಾರಕರ ನಂದು ಸಹಪಾಂಸುಕ್ರೀ ॥
ಡಾರಸದೊಳ್ ಸಮುಚಿತಸೇ ।
ವಾರತಿಯೊಳ್ ನೆಱಿಸಿದು ನೆಗಟಿಸಿ ನಿರವಿಸಿ ಮತ್ತಂ ॥ ೫೫ ॥

ನೆಜ್ಜಿವಳರ್ ಬಾಣಸಿಗರ್ ।
ಮಜ್ಜನವಳೆ ರಣಿಗ ರಂಗರಕ್ಷಕ ರಾಗಿ ॥
ರ್ವುಜ್ಜುಗ ಕಮರರ ಗಣಮನೆ ।
ಪಜ್ಜತಿಯಿಂ ದಿರಿಸಿ ಶತಮುಖಂ ಕೃತಕೃತ್ಯಂ ॥ ೫೬ ॥

ಹರಿಣೀವೃತ್ತಂ॥ ಪರಮಗುರುವಂ ಬೀಡಿಸಿಕ್ಕೊಂಡಿಂದ್ರರ್ಕಳಂ ಗೆಡೆಗೊಂಡು ಸೌಂ ।
ದರಿಯನೊಡೆಗೊಂಡೆಡ್ಡಂ ಕೈಕೊಂಡು ನಾಕದ ಬಟ್ಟೆಗೊಂ ॥
ಡಿರದೆ ನಡೆಗೊಂಡಾರೊಡ್ಡೈರಾವತದ್ವಿಪನೆಯ್ದಿದಂ ।
ತ್ವರಿತಗತಿಯಿಂ ಶ್ರೇಯಶ್ಶ್ರೀತಲ್ಪವುಂ ನಿಜಕಲ್ಪವುಂ ॥ ೫೭ ॥

ವ॥ ಅಂತಿಂದ್ರ ನಿಂದ್ರಲೋಕಕ್ಕೆ ಪೋಪುದು ಮಿತ್ತಲ್.

ಚಂ॥ ಭುವನದ ಪಾಪತಾಪ ಮುಗಿಯಲ್ ಮುಗಿಯಲ್ ಕರಕಂಜಪುಂಜ ಮೊ ।
ಪ್ಪುವ ವೃಷವಾರ್ದ್ಧಿ ವೃದ್ಧಿವಡೆಯಲ್ ಸೆಡೆಯಲ್ ದುರಿತಾಂಧಕಾರಗಾ ॥
ರವಮಿರೆ ತನ್ನ ಶೈಶವಗುಣೋದ್ಗಮದಿಂ ಕ್ರಮದಿಂದ ಮೇಟ್ಪಿನಾ ।
ಡಿವದೆಳೆದಿಂಗಳಂತೆ ಬಳೆದಂ ತಳೆದೊಂದೊದವಂ ಜಿನಾರ್ಭಕಂ ॥ ೫೮ ॥

ಕಂ॥ ಸಂಕ್ರಂದನನಿಹಿತಸುಧಾ ।
ಸಂಕ್ರಮಣಮು ನಾತ್ಮಹಸ್ತಮಧ್ಯಾಂಗುಳಿಯಂ ॥
ತಾಂ ಕ್ರಮದೆ ಪೀರುತಂ ತಣಿ ।
ದಂ ಕ್ರೀಡಾಮುದಿತಜನಕಜಸೀಹೃದಯಂ ॥ ೫೯ ॥

ಕೆಂದಾವರೆ ಯೆಳವಳ್ಳಿಯ ।
ಗೊಂದಣದೊಳ್ ಸುಪ್ತಿವ ಹಂಸಬಾಲಕನಪೊಲಾ ॥
ನಂದದೆ ತಮತಮು ಗೆತ್ತುವ ।
ಕೆಂದಳೆದಮರಿಯರ ತೋಳ ತುಜ್ಜುಗಲೊಳೆಸೆದಂ ॥ ೬೦ ॥

ಪರಿದಿರೆ ಕಜ್ಜಳದಳಕಂ ।
ತರುಣನ ಮೊಗ ಮುದಿತವಿದಿತಲಾಂಛನಶಶಿಯೊಳ್ ॥
ದೊರೆಯಾಗಿ ಮೆಱೆದು ಗೆಲ್ದ ।
ತ್ತುರುಚಳವಳಿಮಿಳಿತದಳಿತಲಳಿತಾಂಬುಜಮಂ ॥ ೬೧ ॥

* ಕಂ॥ [ಬಗೆಯೆ]ಮಧುಪಪ್ರಶಸ್ತಂ ।
ನೆಗಟ್ಟಿಂದೆಱಿಡಾಣ ಮುಬ್ಜ ಮೆನಗಡಱುವುದೇ ॥
ಕೆ ಗಡೆಂದು ನಗುವ ತೆಱದಿಂ ।
ಸೊಗಯಿಸಿ ತನಿವಿತ್ತ ಹಸಿತಲಸಿತಮುಖಾಬ್ಜಂ ॥ ೬೨ ॥

ಅತಿಸೇವ್ಯದಿವ್ಯಭಾಷಾ ।
ಲತೆಗಗೆವೊಯ್ದರ್ಥಬೀಜದೆಳೆಮೊಳೆಯಂತೇಂ ॥
ಸ್ಮಿತರಸದೊಳೆಸೆವ ಪನಿಗಳ್ ।
ಜಿತಮದನನ ವದನದೊಳ್ ಮನಂಗೊಳಿಸಿದುಪೋ ॥ ೬೩ ॥

* ಮೂಲಪ್ರತಿಗಳಲ್ಲಿ ಈ ಕಂದದ ಆರಂಭದಲ್ಲಿ "ಸ್ವಾಗತವೃತ್ತಂ" ಎಂದು ಬರೆದಿದೆ.

ಕಂ॥ ಹದಪಿನ ದಾದಿಯರ ಮನ ।
ಕ್ಕಿದಿಷ್ಟಮೆನೆ ಮುದ್ದುನುಡಿಯು ನಿನಿಸೆನಗಿದ ನಂ ॥
ತದು ತಕ್ಕುದೆ ಧಾತ್ರೀಜನ ।
ಹೃದಯಪ್ರಿಯಹಿತವಿತೋಕ್ತಿ ಜಿನಪತಿಗೆರವೇ ॥ ೬೪ ॥

ಅನುಪಾಂಶುಕೇಳಿ ಸದ್ಗುರು ।
ಜನಕ್ಕೆ ಸಂತಸವು ನೀವುದೆಂದಜಿಪುವವೋ ॥
ಲನುಪಾಂಶುಕೇಳಿ ಸದ್ಗುರು ।
ಜನಕ್ಕೆ ಸಂತಸವು ನೀಯೆ ಬಾಳಕ ನೆನೆದಂ ॥ ೬೫ ॥

ಅಳರೆಲೆಗಳಲುಗೆ ಮಾಂಗಾಯ್ ।
ಚಳಿಯಿಸೆ ಕಿಂಕಿಣಿಗಳುಲಿಯೆ ಶಿಶು ನಡೆಗಲ್ವಂ ॥
ದಿಳಿಸಿದ ನೆಳದಳಿರುಚ್ಚಳಿ ।
ಪೆಳಮಿಡಿ ತೊನೆವಳಿಗಳುಲಿವ ನವಸುರತರುವಂ ॥ ೬೬ ॥

ಮೆಟ್ಟದೊಡಕ್ಕುಂ ತ್ರಸನಂ ।
ಘಟ್ಟನ ಮೆಂದೋವುವಂತೆ ಮೆಲ್ಮೆಲನನಘಂ ॥
ದಟ್ಟಡಿಯಿಡೆ ಪದನಖರುಚಿ ।
ಕುಟ್ಟಿಸುದೊಳ್ ನಿಮಿರ್ದು ವೊಡನೆ ವಡಿಲೇಖಿಪವೋಲ್ ॥ ೬೭ ॥

ವ॥ ಅಂತಗಣ್ಯಪುಣ್ಯವಲ್ಲರೀಜಾಲಕ ನೆನಿಪ್ಪ ಬಾಲಕಂ ವಿವಿಧಮುಗ್ಧಭಾವಪಾಲ್ಯಮುಂ ಬಾಲ್ಯಮುಂ ಪಿಂಗಿಸಿ ಕುಮಾರಕಾಲದೊಳ್.

ಮ॥ ಸಮಸಂದೋದದೆ ಸರ್ವಶಾಸ್ತ್ರವಿದ ನಾದಂ ಬಲ್ಲರೊಳ್ ಕಲ್ಲದೆ ।
ಲ್ಲಮು ನಹ್ಷೂಣಕಳಾವಳೀಕುಶಲ ನಾದಂ ಪುಷ್ಪದಂತಂ ಭವೋ ॥
ತ್ತಮಸಂಸಾರ ನದಾಪವಚೋದ್ಯ ಮಲಗೆರ್ಗೊಳ್ಗಂವುಂ ಶಶಾಂಕಂಗ ಶೈ ।
ತ್ಯಮು ಮುಷ್ಣಾಂಶುಗೆ ತೇಜಮುಂ ನಿಜ ಮವಂ ಮತ್ತೊರ್ವರಾರ್ ಮಾಡಿದರ್॥ ೬೮ ॥

---

* ಬಾಲದುಡುಗೆಯಲ್ಲಿ ' ಅರಳೆಲೆ" ಎಂಬುದೊಂದಂದು ಕವಿಗಳು ಕಾವ್ಯಗಳಲ್ಲಿ ವರ್ಣಿಸಿರುವರು. ಈಶಬ್ದಸ್ವರೂಪದಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಪ್ರಯೋಗಿಸಿರುವರು. ಕವಿರುಪ್ಪನು, ಜಗನ್ನಾಥವಿಜಯದಲ್ಲಿ "ಸೊಸಲಕಣ್ಣೊಲರಲೆಲೆ ಯೆನೆಗುಂ" ಎಂದು ಪ್ರಯೋಗಿಸಿರುವನು, ಆದರೆ ಇದು ಪಾಸಸ್ಥಳವಲ್ಲ.

ನಾಗಚಂದ್ರನು, ಮಲ್ಲಿನಾಥಪುರಾಣದಲ್ಲಿ ಪಾಸನಸ್ಥಾನದಲ್ಲಿ.

ಅಳರೆಲೆಪೊಂಗುನೂಲ್.....ಸಂ । ದಳಯುಗ .... . ॥
ಕಳಮಹಿನೂಪುರ.....ಮನಂ । ಗೊಳಿ... .. ॥

ಎಂದು ಪ್ರಯೋಗಿಸಿರುವನು. ಈ ಕವಿಯುಕೂಡ ಕುಳಹ್ಷಳಾಹ್ಷರಪಾಸದಲ್ಲಿಯೇ ಪ್ರಯೋಗಿಸಿರುವುದರಿಂದ ಅಳರೆಲೆಎಂಬ ಶಬ್ದವೇ ಗಾಮ್ಯವೆಂದು ತೋರುವುದು.

ಮ॥ ಸಕಳವ್ಯಾಕರಣಾರ್ಥ ಶಾಸ್ತ್ರಗಣಿತಾಲೇಖ್ಯಕ್ರಿಯಾಕಾವ್ಯನಾ ।
ಟಕನಾಟ್ಯಾಗಮವಾಸ್ತುವೈದ್ಯಗಜವಾಹಾರೋಹನಾಮುದ್ರಚಿ ॥
ತ್ರಕಳಾನೀತಿನಿಮಿತ್ತ ಶಾಸ್ತ್ರಶಕುನಾದಿಪ್ರೌಢಿಯೊಳ್ ರೂಢಿ ಯಾ ।
ಯ್ತು ಕುಮಾರಂಗೆ ಮತಿಶ್ರುತಾವಧಿವಿಬೋಧಾತ್ಮಂಗಿದಾಶ್ಚರ್ಯಮೇ ॥ ೬೯ ॥

ವ॥ ಅಂತು ಸಕಳವಿದ್ಯಾವಿಳಾಸಭವನ ನಾಗೆ.

ಚಂ॥ ಸುವಿಧಿಕುಮಾರನಂ ಸುರಕುಮಾರಕ ರಚ್ಚರಿ ಯಾಗೆ ಮೆಚ್ಚಿವು ।
ತ್ಸವದೊಳೆ ಮುಲ್ಲವೇಷಮಹಿಷದ್ವಿಪಲಾವಕರೂಪರಾಗಿ ಸಂ ॥
ಭವಿಸಿದ ವಿಕ್ರಿಯಾವಿಭವದಿಂದೆ ವಿಗುರ್ವಿಸಿ ಬಂದು ಪೋರ್ವ ತಾ ।
ಗುವ ತಲೆಯಿಕ್ಕುವಾಂತಿಱಿವ ಕಾದುವ ದಂದುಗದಿಂದ ಮೊಪ್ಪಿದರ್ ॥ ೭೦ ॥

ಚಂ॥ ಅರಗಿಳಿಯಾಗಿ ಮುಂಗಳಮು ನೋದುವ ತುಂಬಿಯು ಬಂಬಲಾಗಿ ಗಾ ।
ವರಿಸುವ ಗಂಡುಗೋಗಿಲೆಗಳಾಗಿ ಗೃಹಪ್ರತಿಹಾರವೃತ್ತಿ ಮಿ ॥
ಕ್ಕಿರೆ ಪುಗಲೆಂಬ ಸೋಗೆನವಿಲಾಗಿ ವಿನರ್ತಿಸು ವಂಚೆಯಾಗಿ ಸಂ ।
ಚರಿಪ ವಿಳಾಸಮಂ ಮೆಱಿಸಿವ ದೇವರೊಱಿಲ್ಲಿದ ರಿಂದ್ರವಂದ್ಯನಂ ॥ ೭೧ ॥

ವ॥ ಮತ್ತಂ.

ಕಂ॥ ಬಹುವಿಧವಾಹನರೂಪದಿ ।
ನಹಮಿಕೆಯಂ[1] ಬಿಟ್ಟು ರಮ್ಯ ಮುಪ್ಪೆಡೆಗಳೊಳಾ ॥
ಗ್ರಹದಿಂ ದೊಯ್ದೊಯ್ದು[2]ರೆಬರ್ ।
ವಿಹಿತವಿನೋದಕ್ಕೆ ಪಕ್ಕುವಾಡಿದ ರಮರರ್ ॥ ೭೨ ॥

ಚಂ॥ ಸಮದಮಯೂರ ವಾಕ್ರಮಿಪ ಪೆರ್ಬುಲಿ ಯಾಕ್ರಮಿವುಗ್ರಸಿಂಹ ವಾ ।
ಕ್ರಮಿಪಹಿರೂಪದಿಂದೆ ಹರಿಣಾಕೃತಿಯಿಂ ದಿಭಮೂರ್ತಿಯಿಂದೆ ಸಂ ॥
ಭ್ರಮಿಸೆ ಶರಣ್ಗೆ ವಂದ ವಿಕೃತಾಮರರಂ ಪರಿರಕ್ಷಗೆಯ್ಸಿತು ।
ತ್ತಮ ಕರುಣಾರಸಂ ವನವಿಹಾರವಿನೋದದೊಳಿಂದ್ರವಂದ್ಯನಾ ॥ ೭೩ ॥

ವ॥ ಅದಲ್ಲದೆಯುಂ.

ಕಂ॥ ಓರಂತೆ ಮಜ್ಜನಂಬುಗ ।
ಲಾರೋಗಿಸಲುಡೆ ತುಡಲ್ ತುಱುಂಬಲ್ ಪೂಸಲ್ ॥
ಸಾರಿರ್ದನುವಿಪ ಸುರವ್ಯಂ ।
ದಾರಕರಿಂ ಸಂದು ವಂದು ನಿತ್ಯಕ್ರಿಯೆಗಳ್ ॥ ೭೪ ॥

[1] ಅಹಮಹಮಿಕೆ ಎಂಬುದನ್ನು ಅಹಮಿಕೆಯೆಂದು ಪ್ರಯೋಗಿಸಿರುವನು. [2] ಯ್ದನಿಬರ್.

ಮು॥ ಅಮೃತಾಹಾರವು ನುಂಡು ದಿವ್ಯಸುರಭಿದ್ರವ್ಯಂಗಳಂ ಪೂಸಿ ಕ ।
ಲ್ಪಮಹೀಜಂಗಳೆ ಮಾಲೆವೊವ ನವತಂಸಂಮಾಡಿ ದೇವಾಂಗವ ॥
ಸ್ತ್ರೀಮ ನುಟ್ಟಗ್ಗದ ಸಗ್ಗದಾಭರಣಮಂ ತೊಟ್ಟಂತು ನಿಚ್ಚಂ ಶಚೀ ।
ರಮಣಪ್ರಾಪಿತವಸ್ತುವಿಂ ಸಲಿಸಿದಂ ಭೋಗೋಪಭೋಗಂಗಳಂ ॥ ೭೫ ॥

ವ॥ ಅಂತು ಸಮುಚಿತಕ್ರಿಯಾನಿಯೋಗದೊಳ್ ನಿಳಿಂಪನಿಕರ ಮೋಲ್ಮೈಸೆ ನಿರಂತರೋಪ ಚಯದಿಂದ ಮುಂತಂತೆ ಸಂಪೂರ್ಣನಾಗಿ.

ಕಂ॥ ಅಮಳತೆ ಯಿನಂತವೀರ್ಯತೆ ।
ಸಮುಚಿತುರಸ್ರವ್ರಶಸ್ತಸಂಸ್ಥಾನತೆ ಯು ॥
ತ್ತಮವಜ್ರವೃಷಭನಾರಾ ।
ಚಮಹಾಸಂಹನನದೃಢತೆ ಸೌಷ್ಯತೆ ಮುತ್ತಂ ॥ ೭೬ ॥

ಸುಸ್ವಾದುಧವಳರುಚಿರತೆ ।
ನಿಸ್ವೇದೋದ್ಗಮತೆ ಸುರಭಿಗಂಧತೆ ಗಂಭೀ ॥
ರಸ್ವರತೆ ಸುಲಕ್ಷಣತೆ ವಿ ।
ಭಾಸ್ವರ ಮಿವಶವಿಧಸ್ವಭಾವಾತಿಶಯಂ ॥ ೭೭ ॥

ಸ್ಫುರಿಯಿಸೆ ತನ್ನೊಳ್ ಪರಮನ ।
ಪರಮೌದಾರಿಕಶರೀರ ಮೊಪ್ಪಿದುದು ಸುಧಾ ॥
ಪರಿಪಾಂಡುವರ್ಣದಿಂ ಸುರ ।
ನರನಯನಚಕೋರಚಂದ್ರಬಿಂಬ ಮಳುಂಬಂ ॥ ೭೮ ॥

ವ॥ ಅಲ್ಲಿ ತಿಲಮಸೂರಿಕಾಪ್ರಮುಖನವಶತವ್ಯಂಜನಂಗಳೊಳ್ ಕೂಡಿ.

ಕಂ॥ ಶ್ರೀವೃಕ್ಷಸ್ವಸ್ತಿಕನಂ ।
ದ್ಯಾವರ್ತಚ್ಛತ್ರಚಾಮರಾದ್ಯಂ ನೂಱಿಂ ॥
ಟಾವರಿಸೆ ಸೊಗಯಿಸಿರ್ದುವು ।
ದೇವನ ಲಕ್ಷಣ ಮವಿಂತು ಸಾಷ್ಟಸಹಸ್ರಂ ॥ ೭೯ ॥

ವ॥ ಮತ್ತಂ.

ಉತ್ಸಾಹವೃತ್ತಂ॥ ಶೀತವಾತವಿದ್ಯುದಾತಪಾಗ್ನಿ ಕಾಷ್ಮಕಂಟಕ ।
ವ್ರಾತಖಗಮೃಗೋರಗೋಪಳಾಭಿಘಾತಶಸ್ತ್ರಸಂ ॥
ಘಾತಗರಳವನಚರಾದಿಬಾಧೆ ಪೊರ್ದ ವೆಂಬ ವಿ ।
ಖ್ಯಾತಿವೆತ್ತು ಪರಮುಚರಮುದೇಹ ಮೆನಿಸಿದು ದಸದಳಂ ॥ ೮೦ ॥

ವ॥ ಅಂತಷ್ಟೋತ್ತರಸಹಸ್ರಲಕ್ಷಣೈಕಪೂರ್ಣಮುಂ, ಕುಂದೇಂದುದಾಮಧವಳವರ್ಣಮುಂ ಶತಶರಾಸನೋತ್ಸೇಧಪರಿಮಾಣಮುಂ, ದ್ವಿಲಕ್ಷಪೂರ್ವಪರಮಾಯುಃಪ್ರಮಾಣಮುಂ, ನಿರಂತರ ಸುಖಾನುಭವಜನ್ಮಭೂಮಿಯುಂ, ನಿಸರ್ಗಮಹಿಮಾತಿಶಯಗುಣಾನುಗಾಮಿಯುಂ ಮೆನಿಪ್ಪ ಮೂರ್ತಿಯಿಂ ಸ್ಫೂರ್ತಿವಡೆದಿರ್ಪಲ್ಲಿ.

ಮ॥ ಎಳಮೂವಂ ಪೊಸಸುಗ್ಗಿ ಸುಗ್ಗಿಯಿರುಳಂ ಶೀತಾಂಶು ಶೀತಾಂಶುಮುಂ ।
ಡೆಳಮುಂ ಚಂದ್ರಿಕೆ ಚಂದ್ರಿಕೋಚ್ಚಳಿತದುಗ್ಧಾಂಭೋಧಿಯಂ ಫೇನಮುಂ ॥
ಡೆಳಿ ಚೆಲ್ವಿಂ ಗೆಡೆವಾಡುವಂತಿರೆಡೆವಾಡಿತ್ತಂಗನಾಲೋಚನೋ ।
ತ್ಪಳವಾಲಾರ್ಚಿತ(ಮುಂ)ಕುವಾರನ ಜಗತ್ಸೇವ್ಯಾಂಗಮುಂ ಜವ್ವನಂ ॥ ೪೦ ॥

ಮು॥ ಸ್ಮರಸಂತಾವಮು ನುಂತೆ ಮಾಡಿದೆಳವೆಂಡಿರ್ಗಿತ್ತನಂತಾಗುಣಾ ।
ಭರಣಂ ತಾಂ ಬಸವಾದುದಿಲ್ಲವರ ಸೌಂದರ್ಯಕ್ಕಿದಾಶ್ಚರ್ಯ ಮು ॥
ಲ್ತರುಣಾಶ್ಮಂ ನಿಜರಶ್ಮಿಯಿಂ ಸ್ಫಟಿಕಮುಂ ರಾಗಾತ್ಮಕಂಮಾಟಿಸ್ಕಿ ಮಾ ।
ಸ್ಫುರಿತಸ್ಫಾಟಿಕದೀಪ್ತಿ ಶೋಣಮಣಿಯಂ ಪಾಂಡೊಕ್ಕೃತಂವಾಟಿಸ್ಕಿವೋ ॥ ೪೧ ॥

ಹರಿಣೀವೃತ್ತಂ॥ ಕಟಿಲ ನಳಲಂ ಬಾಡಂ ಕೋಡಂ ಹಿವಮಾತಪಬಾಧೆಯಿಂ ।
ಬಟಿಲ ನೆಳಲಂ ನೋಯುಂ ಬೇಯುಂ ಮನೋಜಶರಾಗ್ನಿಯಿಂ ॥
ಕುಟಿಯುಂ ನಟಿಯುಂ ಕಂದಂ ಕುಂದಂ ಕ್ಷುಧಾತಿತೃಷ್ಣಾರ್ತಿಯಿಂ ।
ದುಟಿದ ಜನನಜ್ವಾಲಾ[1]ಮಾಳಾಪ್ರತಪ್ತರವೋಲ್ ಜಿನಂ ॥ ೪೨ ॥

ವ॥ ಮತ್ತಂ.

ಕಂ॥ ಆಗುಳಿಸುವ ತಳಮುಳಿಸುವ ।
ಜೋಗಂಬೋಪ ಲಸುವಗಿವ ತೂಂಕಡಿಸುವ ಬಿ ॥
ಳಾತ್ತಗುವ ಬಿಕ್ಕುವ ತೇಂಕುವ ।
ತೇಗುವ ಕಂಟಳಿಸುವಖಿಳವಿಕೃತಿಗೆ ಸಲ್ಲಂ ॥ ೪೪ ॥

ವಂದಿಪ ನಿಂದಿಪ ಮೋಹಿವ ।
ಸಂದೇಹಿಪ ಪುಸಿವ ಕುಸಿವ ಬೆಸೆವೊಸೆವ ಮನಂ ॥
ಗುಂದುವ ಮುಳಿವಳಿವೊಂದುಂ ।
ದಂದುಗದೊಳಗೆ ಸಗ ನೆಲ್ಲಿಯುಂ ಮುನಿಮಾರ್ಗಂ ॥ ೪೫ ॥

ವ॥ ಅಂತು.

ಉ॥ ಆವಂ(ಗಂ)ಜಿತವೋಹ ನೀಜಿನ ನಜೇಯುಂ ಸಲ್ಲದಿನ್ನಿಲ್ಲಿ ವೈ ।
ರಾವಪ್ಪಂಭವಿಡಂಬವೆಂದತನು ದೇವಂಗಳ್ಕಿ ತದ್ರೂಪವೀ ॥
ಶ್ರೀವಿಭ್ರಾಂತೆಯರಪ್ಪ ಕಾಂತೆಯರ ನೆಚ್ಚಾವಿಷ್ಕೃತಂಮಾಡಿದಂ ।
"ದೇವಂಗಾಱಿದೆ ಧರ್ಮಿಯುಂ [2]ಬಡಿದರೆಂ" ಬೀಸಂದ ನಾಟಿಗ್ಗಾದೆಯುಂ ॥ ೪೬ ॥

[1] ಜಾಲಪ್ರ. [2]ಸದೆದರೆಂಬೀ.

ವ॥ ಅಂತು ಮುಲ್ಲದೆಯುಂ.

ಕಂ॥ ಅನವಸದಿ ನಬಲೆಯರ ನೆ ।
ಚ್ಚಿಸನೆ ಕುಮಾರನ ನಿದೇನೊ ಮಾರನ ಬಗೆ ಭಾ ॥
ವಿಸಿದೆಂ ''ಬಡೆವಂ ಬಡಿದಂ ।
ಜಿಸುವಂ ಬಲ್ಲಿತ್ತ''ನೆಂದ ನಕ್ಕುಂ ಭ್ರಾಂತಂ ॥ ೪೭ ॥

ಉ॥ ಕಾತರ ನನ್ಯದೇವರವೊಲಲ್ಮಿಗು ಮೀಜಿನ ನೆಂದು ಬಂದು ಹೃ ।
ಜ್ಞಾತನಿದಿರ್ಚ ನೋಲ್ತು ಮಕರಧ್ವಜಮುಂ ಬಿಸುಟೋಡಿ ಪೋಗೆ ವಿ ॥
ಖ್ಯಾತಿಯ ಪುಷ್ಪದಂತ ನದ ನೀಳ್ಕುಟಿಗೊಂಡುದ ನಾವೆ ಪೇಟ್ದುದಂ ।
ದೇತೂದಳೆಂಬಿನಂ ಮಕರಲಾಂಛನ ನಾದುದು ತಾನೆ ಪೇಟ್ದುದೇ ॥ ೪೮ ॥

ವ॥ ಎನೆ ಜನಮನೋಹಾರಿಯಾದ ಮೋಹಾರಿಯ ನವಯವ್ವನವಿಳಾಸಾವಳಂಬನಮುಮುಂ, ನಿಸರ್ಗನಿಃಕಾಂಕ್ಷತಾಳಂಬನಮುಮುಂ, ಕಂಡು ಸುಗ್ರೀವಮಹಾರಾಜ ನೊಂದುದಿವಸ ಮಾತ್ಮವಲ್ಲ ಭೆಯವದನಾರವಿಂದಮುಂ ನೋಡಿ.

ಮಾ॥ ಜಯಮುಂ ಕಂತುಗೆ ಮಾಪ್ಪಿ ಜವ್ವನದೊಳಂ ವೈರಾಗ್ಯ ಮುದ್ದೀವನ ।
ಕ್ರಿಯೆ ತಾನಾಗಿರೆ ಕಾಮಭೋಗಸುಖಮೆಂಬಾಳಾನದೊಳ್ ನಿಲ್ಲದೊ ॥
ಟ್ಟಯಿಪೀಪುತ್ರ[ನ]ಚಿತ್ತಮುತ್ತಗಜಮುಂ ಸೀಮುಂತಿನೀಶೃಂಖಳಾ ।
ನಿಯತಂಮಾಡುವುಪಾಯ ಮಾವುದಲ್ಲಿಯೆಂ ಪಂಕೇಜಪತ್ರೇಕ್ಷಣೇ ॥ ೪೯ ॥

ಉ॥ ಈವಿಭು ಕಾಮಭೋಗಮ ನುಪೇಕ್ಷಿಸೆ ಕಾಮನ ಗಂಡು ಬೆಂಡು ಕೇ ।
ಳೀವನಲೀಲೆ ಪಾಲಿಲ್ ವಿಷಯದೊಟ್ಟಜೆ ಮೊಟ್ಟಿ ನಿತಂಬಿನೀವಧೂ ॥
ಶ್ರೀ ವಿಫಲಂ ವಸಂತದೆಸಕಂ ವೃಥೆ ಚಂದ್ರನ ದರ್ಪ ಮೊಪ್ಪದೆಂ ।
ಬಾವುದು ಮೇನೊ ಲೋಕದನಿತುಂ ವ್ಯವಹಾರ ಮನಾರ ಮಾಗದೇ ॥ ೯೦ ॥

ಕಂ॥ ಅದಱಿಂದ ವಿಮಾಮಹಾತ್ಮಂ ।
ಮುದುವೆನಿಲಲ್ವೇಟಿಕ್ಕ ಮಂತು ನಿಂದೊಡೆ ರಾಜ್ಯಾ ॥
ಭ್ಯುದಯ ಮಳವಡುಗು ಮಳವಡೆ ।
ಪದುಳಂ ಲೋಕಕ್ಕೆ ಧರ್ಮಸಂತತಿ ನಿಲ್ಕುಂ ॥ ೯೧ ॥

ವ॥ ಎಂದು ನುಡಿದಿರ್ವರುಂ ಗೀರ್ವಾಣಪೂಜ್ಯ ಮುಪ್ಪ ನಿರ್ವಾಣಪದವಿಗೆ ಪಲುಂಬಿ ನಿಜಾಪತ್ಯ ನಪತ್ಯಫಲಸಂಕಲ್ಪಕಲ್ಪನಿಯಮಮುಪ್ಪ ತಮ್ಮನುಪ್ಮಿತಕ್ಕನುಮತವು ನೀಗು ವಿಾಯ ನೆಂಬ ಸಂದಿ ಗ್ಧದದಂದುಗದೊಳಿಾಂದೋಳಚಿತ್ತರಾಗುತ್ತು ವೆಟ್ಟಿಂದು ವಿನತವಿಷ್ಟಪನ ಕೆಲದೊಳುಚಿತವಿಷ್ಟ ರೋಪವಿಷ್ಟರಾಗಿ ವಿಹಿತವಿನೇಯಕ್ರಿಯಾನಿಯೋಗದಿಂದ ವಿರ್ದು.

ಚಂ॥ ಜನಪರಿತಾಪಲೋಪಿಯು ಸುವೃತ್ತವಿಳಾಸನ ನಿರ್ಮಳಸ್ವಭಾ ।
ವನ ಭುವನಸ್ತುತಾತ್ಮನ ಮಹಾತ್ಮಗುಣಾರ್ಹನ ನಿನ್ನ ಜನ್ಮದಿಂ ॥
ಜನನುತರಾದೆ ವಾ ವಮಳಮೌಕ್ತಿಕರತ್ನ[ಕೆ]ಜನ್ಮಭೂಮಿ ಯಾ ।
ದನುಪಮಶುಕ್ತಿಸಂಪುಟದವೋಲ್ ಸುರಶೇಖರರತ್ನಪೂಜಿತಾ ॥ ೯೦ ॥

ಕಂ॥ ದೇವನಿಜೋದಯದಯದಿಂ ।
ಪಾವನವಾಗಿರ್ದು ಪೂಜ್ಯರೆನಿಸಿದೆ ವಾ ಮಿಂ ॥
ತಾವನ ತಾಯ್ಗಂ ತಂದಗ ।
ಮಾವಗ ಮೆಱೆಗಿದುದೆ ಸುರನರೋರಗಲೋಕಂ ॥ ೯೨ ॥

ಉ॥ ನೀನೆ ಸಮಸ್ತವಿಷ್ಟಪಹಿತಾರ್ಥಚರಿತ್ರನೆ ನೀನೆ ಲೋಕರ ।
ಕ್ಷಾನಿಯವೈಕಯಾಮಿಕನೆ ನೀನೆ ಜಗತ್ತ್ರಯಸೂತ್ರಧಾರವಿ ॥
ಜ್ಞಾನನೆ ದೇವ ನಿನ್ನಿತದಿಂ ಪೊಱಗಿಲ್ಲ ಪದಾರ್ಥ ಮಾದೊಡಂ ।
ಮಾನಿತ ಮಕ್ಕೆ ಬಿನ್ನವಿಪೆ ವಾ ವಿನಿಸಂಜದೆ ಪೆತ್ತ ಮೋಳ್ದಿಂ ॥ ೯೪ ॥

ಮ॥ ಬಹುಜಲ್ಪಂ ವೃಥೆ ಧರ್ಮಸಂತತಿನಿಮಿತ್ತಂ ಧರ್ಮಪತ್ನೀವರಿ ।
ಗ್ರಹಮಂ ಕೈಕೊಳವೇಟ್ಪಿ ದಲ್ಲದೊಡೆ ಲೋಕಕ್ಕಿಲ್ಲ ನಿನ್ಪಾರ ವೀ ॥
ವಿಹಿತಪ್ರಾರ್ಥನೆಗಿಂಬುಗೆ [1]ಯ್ವುದೆವುಗೆಂದೆಲ್ಲಂದದಿಂ ಮಾಣದಾ ।
ಗ್ರಹಮಂ ಮಾಡಿದ ತಾಯ್ಗೆ ತಂದಗಿನಿಸಂ ಸನ್ನೇಹ ನಾದಂ ಜಿನಂ ॥ ೯೫ ॥

ವ॥ ಅಂತು ನಿಜಮುಖಾರವಿಂದಮುಂದಸ್ಮಿತವರಿಸ್ಪಂದವಚನವಸನಾನುಮತ ನಾಗಿ.

ಮ॥ ಸಮಸಂದಾತ್ಮಗುರೂವರೋಧದಿ ನೊಡಂಬಟ್ಟಂ ನಿರಾಕಾಂಕ್ಷೆ ನ ।
ಪ್ಪವಮಳಜ್ಞಾನವಿಭಾಸ ನಪ್ಪ ಜಿನನುಂ ಜಾಯಾಪರಿಸ್ಪಂದಬಂ ॥
ಥಮ ನಿಂತೊಪ್ಪುಗುಮೇ ''ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ'' ಎಂ ।
ಬ ಮುನೀಂದ್ರೋಕ್ತಿ ಶುಭಾಶುಭಾನುಭವವಾಕ್ಸಂಸಾರಿಜೀವಂಗಳೊಳ್ ॥ ೯೬ ॥

ಕಂ॥ ಪರಮಗುರು ಪುಟ್ಟಿದಂದಿನ ।
ಪರಿತೋಷದ ಪರಮಕೋಟಿ ಪೆಂಪಿನೊಳಿದಱಿಂ ॥
ದೊರೆಗಂ [2]ದೊರೆಗಂ ಬಾರದು ।
ಪರಿಕಿಪೊಡೆನಿ ಹೈಷ್ಮರಾದ ರಾದಂಪತಿಗಳ್ ॥ ೯೭ ॥

ವ॥ ಆಗಿ ಮಂತ್ರಶಾಲೆಗೆಬ್ಬಿಂದು ಕುಲವೃದ್ಧಬುದ್ಧಿವೃದ್ಧವಯೋವೃದ್ಧರಪ್ಪ ಬಂಧುಜನಮಂತ್ರಿ ಜನಪರಿಜನಂಗಳಾಲೋಚನದಿಂ.

[1] ಗೆಯ್ವುದು ಯೆನುತ್ತೆಲ್ಲಂದದಿಂ (ಪಾ). [2] ಸರಿಗಂ (ಪಾ).

ಚಂ॥ ಒದವಿದ ನಾಥವಂಶದೆಸಕಂ ಕುರುವಂಶದ ಮೈಮೆ ಯಿಕ್ಷ್ವುವಂ।
ಶದ ಜನ ಮುಗ್ರವಂಶದುದಯಂ ಹರಿವಂಶದ ಪೆಂಪು ಸೂರ್ಯವಂ॥
ಶದ ದೆಸೆ ಸೋಮವಂಶದ ನೆಗಟ್ಪಿತ್ತಿ ಪೊಗಟ್ಪಿತ್ತಿಗಳುಂಬ ಮುಪ್ಪಿನಂ।
ಮದುವೆಗೆ ತತ್ಪ್ರಭೂತನೃಪಕನ್ನೆಯರಂ ಸಮಕಟ್ಟದಂ ನೃಪಂ ॥ ೯೮ ॥

ವ॥ ಅಂತು ಸಮಕಟ್ಟಿ ಸಮುಚಿತಾನೂನದಾನಸನ್ಮಾನದಿಂದೆ ತನ್ಮಹೀನಾಥಯೂಥಮುಂ ಸಂತೋಷಿಂಬಡಿಸಿ.

ಕಂ॥ ಚೆನ್ನೆಯರಂ ವಿವಿಧಕುಲೋ।
ತ್ಪನ್ನೆಯರಂ ಗುಣವಿವೇಕನವಯೌವನಸಂ॥
ಪನ್ನೆಯರಂ ಸಾಸಿರ್ವರ್।
ಕನ್ನೆಯರಂ ದೇಹದೀಪ್ತಿಸಂಪನ್ನೆಯರಂ ॥ ೯೯ ॥

ವ॥ ತರಿಸಿ ಶುಭದಿನದೊಳ್ ಗೃಹಮಹತ್ತರಂಗೆ ವಿವಾಹಗೇಹವುಂ ಸವೆಯಿಸಿಂದು ಬೆಸಸುವುದು ಮಲ್ಲಿಂ ಮುನ್ನೆ ಸುತ್ರಾಮಸೂತ್ರಧಾರಸೂತ್ರಿತ ಮಾಗಿ ಕಲ್ಪಶಿಲ್ಪಿಗಳ್ ಸವೆಯೆ.

ಉ॥ ಶ್ರೀರಮಣೀನಿವಾಸ ಮೆನೆ ಮುತ್ತಿನ ಸೂಸಕದೋಳಿ ತುಂಗಭೃಂ।
ಗಾರದ ಶೋಭೆ ಜಾಗದಡಕಿಲ್ಗಳೊಡಂಬಡೆ ಚಿತ್ರಭಿತ್ತಿವಿ॥
ಸ್ತಾರದ ಚೆಲ್ವು ಚೀನದ ವಿತಾನದ ನೇರ್ಪುರುರತ್ನರಂಜಿತಾ।
ಕಾರದ ಕಂಬದೂಪ್ಪ ಮುಮುರ್ವಂತೆನೆದತ್ತು ವಿವಾಹಮಂಡಪಂ ॥ ೧೦೦ ॥

ವ॥ ಅಲ್ಲಿ.

ಕಂ॥ ಗುಡಿ ತೋರಣ ಮುಕ್ಷತೆ ಕ।
ನ್ನಡಿ ಕಳಶಂ ದಧಿ ಕಱುಂಕೆ ಪೂಮಾಲೆ ಫಳಂ॥
ಸೊಡರೆಳದಳಿರೆಂಬಿವು ನೆಗೆ।
ದೆಡೆಗಿಱಿದೊಪ್ಪಿದುವು ಮಂಗಳದ್ರವ್ಯಂಗಳ್ ॥ ೧೦೧ ॥

ವ॥ ಅದಲ್ಲದೆಯುಂ.

ಮ॥ ಕಡೆಯಿಕ್ಕೆಂಬುಪವೇದಿಯಂ ರಚಿಯಿಸೆಂಬೊಳ್ಪುವ ನೆತ್ತೆಂಬ ಕ।
ನ್ನಡಿಯಂ ಮುಂತಿರಿಸೆಂಬ ಪೊಂಗಳಸಮುಂ ನೀಡೆಂಬ ಕಾಶ್ಮೀರಮುಂ॥
ತೊಡೆ ಯೆಂಬೀಸೊಡೆರ್ಮೊತ್ತಿಸೆಂಬ ವಸೆಯುಂ ಪಾಸೆಂಬ ನೀಂ ಬಾಯಿನಂ।
ಗುಡು ತಂದೆಂಬ ನರಾಮರಾಂಗನೆಯರಿಂ ದಾಯ್ತುಂದು ಕೋಳಾಹಳಂ ॥ ೧೦೨ ॥

ವ। ಆಗಳಮರಲೋಕದಿಂದೆ ಬಂದು ಬಂಧುರನವೀರುಮುಂದಾರಪಾರಿಜಾತಹರಿಚಂದನ ಪ್ರಮುಖಸುರತರುವ್ರಜದ ಸರಸಸರಸೀರುಹಸುರಭಿಪರಿಮಳಪರಿಭ್ರಾಂತಭೃಂಗಸಂಘಾತಲಂಘಿತಲತಾಂತವನಾಲೆಗಳೊಳ, ಮುಭಯಕರ್ಮಕಾರೋಹಣದುಕೂಲದೇವಾಂಗನಾರಂಗವಟ್ಟ ಸೂತ್ರನೇತ್ರ ಚೀನಾದ್ಯತಿಸವಿಶಾಚೀನವಸನವಿಸರಂಗಳೊಳ, ಮಗರುನಾರಕುನನಾರಕಾಶ್ಮೀರಮಳಯರುಹ

ಯಕ್ಷಕರ್ದಮಬಂಧುರಸುಗಂಧಲೇಪನಂಗಳೊಳ ಮಖಿಳಭುವನಪಾವನಪರಾರ್ಧ್ಯರತ್ನರಾಜಿರಚನಾವಿಚಿತ್ರಕಟಿಸೂತ್ರಕೇಯೂರಹಾರಕುಂಡಲೋತ್ತಂಸಮುಖ್ಯವಿವಿಧಭೂಷಣವಿಶೇಷಂಗಳೊಳ, ಮಖಂಡಮುಂಡನಕ್ರಿಯಾಸುಭಗಶೋಭಾಚಮತ್ಕಾರಕರಣಪರಿಣತನಾಂದ್ರಸೌಂದರೀ, ಸಂದೋಹ ಮಾವಧೂಕದಂಬಕಮುಂ, ಸಮುತ್ತುಂಗಮಾಂಗಲ್ಯ ಶೃಂಗಾರರಸಶಿಕ್ಷಾವಿಚಕ್ಷಣನಿಳಿಂಪನಿಕರಮುಂ, ತ್ರಿಲೋಕತಿಲಕನುಮು ನಳಂಕರಿಸಿದಾಗಳ್.

ಕಂ॥ ರತಿ ಪೊರೆದನಂಗಜಂಗಮು ।
ಲತೆಗಳ್ ಕುಸುಮಿಸಿದು ವಖಿಳಭುವನತ್ರಯಕ ॥
ಲ್ಪಿತಕಲ್ಪಭೂರುಹಂ ವು ।
ಪ್ಪಿತ ಮಾಯ್ತ್ತೆನಿಸಿರ್ದರಾಕೆಗಳ್ ಮಾವಿಭುವಂ ॥ ೧೦೩ ॥

ಉ॥ ಮಂಗಳಮಂಡನಕ್ಕೆ ನೆಲೆಯಾದ ಕುಮಾರನ ಭೂಪಣಾಂಶು ದಿ ।
ವ್ಯಾಂಗದ ಕಾಂತಿಯೊಳ್ ತೊಡರ್ದು ರಂಜಿಸಲಾಜಿವೆ ದೀಪ್ರದೀಪಿಕಾ ॥
ಸಂಗತದೀಪ್ತಿಜಾಳ ವೆನಿತಗ್ಗಳಮಾದೊಡ ಮೊಂದಿದಚ್ಚವೆ ।
ಲ್ದಿಂಗಳ ರಶ್ಮಿಯೊಳ್ ತೊಡರ್ದು ವಳ್ಚನೆ ರಂಜಿಸಲಾಜಿಪಂದದಿಂ ॥ ೧೦೪ ॥

ವ॥ ಅನಂತರಂ.

ಮಾಸ್ರ॥ ಸುರತೂರ್ಯಧ್ವಾನ ಮೆಲ್ಲಾದೆಸೆಗೆ ನಿಮಿರೆ ಮಾಂಗಲ್ಯಗೀತಾರವಂ ಕಿಂ ।
ನರನಾರೀವೃಂದದಿಂ ಸಂಘಿಸೆ ವರಿಣಯನೋತ್ಸಾಹಗೇಹಕ್ಕೆ ಬಂದಂ ॥
ಸುರವೃಂದಂ ಲೀಲೆಯಿಂದಂ ತರೆ ವಿಹಿತಲಸನ್ಮಂಗಳದ್ರವ್ಯದೇವೀ ।
ಪರಿವಾರಂ ನಿರ್ವಿಕಾರಂ ಸುರತರುಸುಮನಃಕರ್ಣಪೂರಂ ಕುಮಾರಂ ॥ ೧೦೫ ॥

ವ॥ ಆಗಳಾಮುನೋಜಮುಂಗಳವತಾಕೆಗಳ ನಾತ್ಮೀಯಮುಹನೀಯಮುಹಿಮಾತಿಶಯವಿಭೂತಿಯಿಂದೆ ಮುಂದಿಟ್ಟು ತಂದು ತಜ್ಜನಕರಪ್ಪ ಜನಪರಿಜನಂಗಳ್ ವಿವಾಹಮುಂಡವಕ್ಕೆ ಮುಂಡನಂಮಾಡಿ.

ಮ॥ ನಿಮಿರ್ದೂರ್ಗ್ಗಣ್ಬೊಣರಿಂ ಕುರುಳ್ದುಜುಗಲಿಂ ವಕ್ಷೋಜದಿಂ ವಕ್ತ್ರವಿ ।
ಭ್ರಮದಿಂ ಕೆಂದಳದಿಂ ಸ್ಮಿತೋತ್ಪಳಮಯಂ ಭೃಂಗೀಮಯಂ ಚಕ್ರವಾ ॥
ಕಮಯಂ ಚಂದ್ರಮಯಂ ಪ್ರವಾಳಮಯ ಮಾಯ್ತ್ತೀಲೋಕ ಮೆಂಬಂತದೇಂ ।
ಸಮಸಂದಿರ್ದುದೊ ಬಂದು ಗೊಂದಣಿಸಿ ತದ್ರಾಜನ್ಯಕನ್ಯಾಜನಂ ॥ ೧೦೬ ॥

ವ॥ ಅನಂತರ ಮಪಾರಗಂಭೀರಮಂಗಳಾತೋದ್ಯನಾದಂಗಳೆಸೆದು ಘೂರ್ಣಿಸೆ ಯಥೋಚಿತವಿಧಾನಪೂರ್ವಕ ಮುದಾರತಾರಾಸಮೂಹಮುಂ ಚಂದ್ರನೊಳ್ ನೆರವುವಂತೆ ಇಕ್ಷ್ವಾಕುವಂಶವಾರಾಶಿಚಂದ್ರನೊಳ್ ಪವಿತ್ರಕ್ಷತ್ರಕುಳಗಗನರಂಗನೇತ್ರಮಾಳಿಕೆಗಳೆಂ ಪಾಣಿಗ್ರಹಣಂಗೆಯ್ದಿದಾಗಳ್.

ಮ॥ ಕರಿಣೀವೇಷ್ಟಿತಪುಷ್ಪದಂತದಿಗಿಭೇಂದ್ರಾಕಾರದಿಂ ದಾಗಳಾ ।
ತರುಣೀವೇಷ್ಟಿತಪುಷ್ಪದಂತ ನೆಸೆದಂ ವಂಶೋನ್ನತಂ ಸ್ಫಾರವು ॥
ಪ್ಕರಹಸ್ತಂ ಧೃತಭದ್ರಲಕ್ಷಣಗುಣಂ ವದ್ಯಾಭಿರಾಮಂ ನಿರಂ ।
ತರದಾನಂ ಮೃದುದೀರ್ಘವಾಳ ನಥಿಕವ್ಯಾಳಂ ಸದಾಪಾಶ್ರಯಂ ॥ ೧೦೭ ॥

ಮಾಸ್ಯ॥ ಘನಗಂಭೀರಸ್ವನಂ ಮೌಕ್ತಿಕಮಣಿದಶನಂ ಪದ್ಮರಾಗಾಧರಂ ವ ।
ಜನಖಂ ಪಾರೀನನೇತ್ರಂ ಕಮಠಚರಣ ನಕ್ಷೋಣಲಾವಣ್ಯಲಕ್ಷ್ಮೀ ॥
ಜನಕಂ ಡಿಂಡೀರಪಾಂಡುಪ್ರಭ ನೆನಿಪ ಗುಣಾಂಭೋಧಿಯೊಳ್ ಕೂಡಿ ಚೆಲ್ವಾ ।
ಯ್ತನುಕೂಲಂ ಸ್ವಚ್ಛಶೀಲಂ ಕುಲನದಿಯವೊಲಾಹ್ಲತ್ರಪುತ್ರೀಸಹಸ್ರಂ ॥ ೧೦೪ ॥

ಮು॥ ಪ್ರಣತೇಂದ್ರಂ ವರ ನಂದು ಬಂದಿಸೆವ ಸೌಧವರ್ಮಾದಿಗಳ್ ಬಂದ ನಿ ।
ಬ್ಬಣಿಗರ್ ಕಲ್ಪದನಲ್ಪವಸ್ತುನಿವಹಂ ತೆಲ್ಲಂಟಿ ದೇವಾಂಗನಾ ॥
ಗಣ ಮತ್ತಿತ್ತೆಡೆಯಾಡುವೈದೆಯರದಂ ಕೊಂಡಾಡಿ ಮಾಪ್ಪಂ ನೃಪಾ ।
ಗ್ರಣಿ ಸುಗ್ರೀವ ನೆನಲ್ಕದೇವೊಗಳ್ವೆ ನಾಂ ವೈವಾಹಿಕೋತ್ಸಾಹಮಂ ॥ ೧೦೫ ॥

ವ॥ ಆಗಳುತ್ಸಾಹಕಾರ್ಯ ಸಹಚರ್ಯವರ್ಯಪ್ಪಿನಿಪ್ಪಿತನಿಳಿಂವಕುಳ ನೃಪಕುಳಕುಟುಂಬಿನೀಜನ ಪರಿವೃತೆಯಪ್ಪ ಜಯರಾಮಾಮಹಾದೇವಿವೆರಸೊಸಗೆ ಮರುಳ್ಗೊಂಡು ವಿತರಣಸಮಗ್ರ ನಪ್ಪ ಸುಗ್ರೀವಮಹಾರಾಜಂ ಮಹಾಮಹಿಮೆಯುಂ ಮೆಱೆಶಿದು.

ಚಂ॥ ಪರಿಜನ ಮುರ್ವೆ ಬಂಧುತತಿ ಕೊರ್ವೆ ಯಶೋಲತೆ ಪರ್ವೆ ಯಿಷ್ಟಶಿ ।
ಷ್ಟರ ಬಗೆ ತೀರೆ ವಂದಿಜನ ಮಾರೆ ಸುರದ್ರುಮದಾರ್ಪು ನಾರೆ ಸ ॥
ತ್ಪರಹಿತವೃತ್ತ ನಸ್ಖಲಿತಚಿತ್ತ ನಲಂಪಿನೊ ಳಿತ್ತ ನಂಬರಾ ।
ಭರಣಗಜಾಶ್ವನಾರ್ಥಮ ನನರ್ಘ್ಯಪದಾರ್ಥಮ ನರ್ಥಿನಾರ್ಥಮಂ ॥ ೧೧೦ ॥

ವ॥ ಅಂತೊಸಗೆವಮಾಡಿ ನಿರ್ವರ್ತಿತವಿವಾಹೋತ್ಸವ ನಾಗಿ ಸುಖದಿ ನಿರ್ವಹ್ಲಿ.

ಕಂ॥ ಆಪುಷ್ಪಚಾಪಮಂಗಳ ।
ದೀಪಲತಾಕೃತಿಗಳೆಳಸಿ ಬೆಳಗಿದು ವೊಲವಿಂ ॥
ಶ್ರೀಪುಷ್ಪದಂತವಿಷಯ ।
ವ್ಯಾಪಾರಾಭ್ಯುದಯಹೃದಯರವ್ಯಸ್ಥಳದೊಳ್ ॥ ೧೧೧ ॥

ವ॥ ಅದಲ್ಲದೆಯುಂ.

ಮು॥ ಚಳವಿಾನೇಕ್ಷಣೆಯರ್ ಮೃಣಾಳಭುಜೆಯರ್ ಪದ್ಮಾಸ್ಯೆಯರ್ ಭೃಂಗಕುಂ ।
ತಳೆಯರ್ ಕೈರವಗಂಧಿಯರ್ ಜಲವಿಹಂಗೀನಾದೆಯರ್ ಶೀತಳೋ ॥
ಲ್ಲಲಿತಭ್ರೂಲತೆಯರ್ ಮುರಾಳಗತಿಗಳ್ ಚಕ್ರಾಂಕವಕ್ಷೋಜಮುಂ ।
ಡಳೆಯರ್ ವರ್ತಿಸಿದರ್ ಕುಮಾರನ ಮನಶ್ಚಿತ್ರಾಸಾರಕಾಸಾರದೊಳ್ ॥ ೧೧೨ ॥

ಕಂ॥ ಜಳ ಮೆನಿತಗ್ಗಲಿಸಿದೊಡಂ ।
ಜಳದಿಂದಂ ಮೇಲೆ ಮಿಗುವ ಜಳಜದವೋಲ್ ಕೋ ॥
ಮಳೆಯರನುಬಂಧ ಮೆನಿತ ।
ಗ್ಗಳಿಸಿದೊಡಂ ಮೇಲೆ ಮಿಕ್ಕುದರತಿನಿಬಂಧಂ ॥ ೧೧೩ ॥

ವ॥ ಅನಂತರಂ ಮತ್ತೊಂದು ಪುಣ್ಯದಿನದೊಳ್ ಉತ್ಸವವರಂಪರಾವರಿಗತಸ್ವಾಂತ ನಾಮುಹೀ ಕಾಂತ ನನೇಕಮೂರ್ಧಾಭಿಷಿಕ್ತಪಾರ್ಥಿವಜನಂಗಳ್ವೆರಸು ತೀರ್ಥಸಲಿಲಂಗಳಿಂ ರಾಜ್ಯಾಭಿಷೇಕಂ ಗೆಯ್ದು.

ಮಾಸ್ರ॥ ದಿವಿಜೇಂದ್ರಂ ಬಂದು ಮುನ್ನಂ ಜಿನನ ಸವನಮುಂ ಮಾಡುವಂದುಂ ವಿವಾಹೋ ।
ತ್ಸವಮುಂ ಕೊಂಡಾಡುವಂದುಂ ವಿಭವವು ನಿನಿತಂಕಾಣೆ ವೆಂಬನ್ನ ವಿಂಬಿಂ ॥
ಸುವಿಧೀಶಂ ಗಾತ್ಮಪುತ್ರಂಗಧಿಕಮಹಿಮೆಯಂ ಮಾಡಿದಂ ಪಟ್ಟಬಂಧೋ ।
ತ್ಸವಮಂ ಸುಗ್ರೀವಭೂಪಾಳಕ ನತಿಮುದದಿಂ ಭವ್ಯರತ್ನಾರ್ಣವಾಂಕಂ ॥ ೧೧೪ ॥

ಗದ್ಯಂ

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀ
ಚಾರುಚಂದ್ರಾಯಮಾಣಮಾನಿತಶ್ರೀಮದುಭಯಕವಿಕಮಳಗರ್ಭ
ಮುನಿಚಂದ್ರಪಂಡಿತದೇವ
ಸುವ್ಯಕ್ತಸೂಕ್ತಿಚಂದ್ರಿಕಾಪರಿಪುಷ್ಟಮಾನಸಮರಾಳ
ಗುಣವರ್ಮನಿರ್ಮಿತಮುಷ್ಪ
ಪುಷ್ಪದಂತ ಪುರಾಣದೊಳ್
ಕುಮಾರಪರಿಣಯನೋತ್ಸವಪರಿವರ್ಣನಂ
ದ್ವಾದಶಾಶ್ವಾಸಂ
ಸಂಪೂರ್ಣಂ.

ಶ್ರೀ

ಪುಷ್ಪದಂತ ಪುರಾಣಂ

ತ್ರಯೋದಶಾಶ್ವಾಸಂ

ಕಂ॥ ಶ್ರೀರಾಜ್ಯಲಕ್ಷ್ಮೀ ತನ್ನಯ ।
ಪೇರುರದೊಳ್ ತಾರಹಾರಲತೆಯವೊಲತಿವಿ ॥
ನ್ನಾರಿಸಿರೆ ಶೋಭೆವೆತ್ತ ನಿ ।
ಳಾರಾಧ್ಯಂ ಪ್ರಭುಗುಣಾಬ್ಜವನಕಳಹಂಸಂ ॥ ೧ ॥

ವ॥ ಆಸಮಯದೊಳ್.

ಚಂ॥ ಪಿತೃ ಕೃತಕೃತ್ಯ ನಾಗೆ ಪಸವಂ ಜನಸಂತತಿ ನೀಗೆ ಶತ್ರುಸಂ ।
ತತಿ ತಲೆವಾಗೆ ಶಿಷ್ಟಜನದಾಱಿಡಿ ನಾಪ್ಪಿಡೆವೋಗೆ ತೇಜ ಮುಂ ॥
ವೃದ್ಧತರನೆ ಕೊಂದುಕೂಗೆ ಸಕಳಶಾವನಿ ರಾಗಿಸಿ ಬೀಗೆ ಕೀರ್ತಿ ದಿ ।
ಕ್ಕತಿಗಳ ಮೇಗೆ ತೇಗೆ ತಳೆದಂ ಭುವನಪ್ರಭು ರಾಜ್ಯಲಕ್ಷ್ಮೀಯಂ ॥ ೨ ॥

ಮ॥ ಸ್ಥಿರಮೂಲಂ [1]ಫತಿ ಶಾಖೆ ಮಂತ್ರಿನಿಚಯಂ ಕಂದಂ ಮಹೀಚಕ್ರ ಮುಂ ।
ಕುರಜಾಲಂ ಜಯಸೇನೆ ಪತ್ರನಿವಹಂ ಮಿತ್ರವ್ರಜಂ ಪುಷ್ಪಮಂ ॥
ಜರಿ ದುರ್ಗಂ ಫಲಕೋಟಿ ಕೋಶ ಮೆನೆ ಮೆಯ್ವೆತ್ತಿರ್ದ ಸಪ್ತಾಂಗಬಂ ।
ಧುರಲಕ್ಷ್ಮೀಲತೆ ಪತ್ತೆ ತನ್ನ ನೆಸೆದಂ ಸವ್ಯಕ್ತ್ವಾರತಾರ್ಣವಂ ॥ ೩ ॥

ಮ॥ ಅತಿಶಾಂತಾತ್ಮಕ ನಾದೊಡಂ ಹಿಮಕರಂ ಪಂಕೇಜಸಂಕೋಚನ ।
ಸ್ಥಿತಿಯಂ ಕೌಮುದಸೌಮುದಸ್ಥಿತಿಯ ನೌದಾಸೀನ್ಯದಿಂ ಮಾಪ್ಪುವೋಲ್ ॥
ಸತತಂ ಮಾಡಿದನೇಕರೂಪಮಹಿಮಂ ದುಷ್ಟರ್ಗೆ ಶಿಷ್ಟರ್ಗೆ ದು ।
ಸ್ಥಿತಿಯಂ ಸುಸ್ಥಿತಿಯಂ ನಿಜಂ ಸುವಿಧಿಗಿಂತೀವಿಕ್ರಮಂ ಪ್ರಕ್ರಮಂ ॥ ೪ ॥

ವ॥ ಅಂತು ಮಲ್ಲದೆಯುಂ.

ಕಂ॥ ಮೃದುಭಾವನಾಗಿಯುಂ ನೃಪ ।
ನುದಗ್ರವಿಗ್ರಹಕರೋರರಂ ಬಾಧಿಸಿದಂ ॥
ಮೃದುಶೀತ ವಚ್ಛ ವಾಗಿಯು ।
ಮುದಕಂ ಬಾಧಿಪವೊಲಧಿಕವಾತಾತ್ಮಕರಂ ॥ ೫ ॥

ವ॥ ಮತ್ತಂ.

ಚಂ॥ ಎಱಿಗದ ತೀರಭೂರುಹಮ ನೆಯ್ದೆ ಮೊದಲ್ಗಿಡೆ ಕೀಲ್ವಿ ಬೆಂಗೆ ಬಿ ।
ಟ್ಟಿಱಿಗಿದ ವಂಜುಳವ್ರಕರಮಂ ಪರಿವರ್ಧಿಪ ಸಿಂಧುತೋಯದಂ ॥
ತೆಱಿಗದರಂ ತಡಂಗಿಡಿಪ ನಮ್ಮರ ನುರ್ವಿಪ ರಾಜಲೀಲೆ ಕ ।
ಣ್ಡೆಱಿದುದು ಪುಷ್ಪದಂತಮಹಿಪಾಳನೊಳತ್ಯಮಳಾರ್ದ್ರ ಶೀಲನೊಳ್ ॥ ೬ ॥

(a) ಫಲಿ ಶಾಖೆಯದ್ರಿಯೆ ಜಯಸ್ಕಂಧಂ ಮಹೀ, (b) ಫಣಿಯದ್ರಿ.....,

ಚಂ॥ ಕುವಳಯಬಂಧುವಾಗಿಯು ಮಿನಂ ನವಯೌವ್ವನನಾಗಿಯುಂ ದಶೋ ।
ದ್ಭವತನು ಸೌಮ್ಯನಾಗಿಯು ಮಶೇಷಜಗದ್ಗುರು ಭೋಗಿ ಯಾಗಿಯುಂ ॥
ಪ್ರವಿಗತವಕ್ರವಾರ್ಗ ನಚಳಿತಾತ್ಮಕನಾಗಿಯು ಮತ್ಯುದಾತ್ತಸಂ ।
ಭವ ನೆನಿಸಿರ್ದು [1]ಮತ್ತಮವಿರುದ್ಧಗುಣೋನ್ನತ ನಾ[ದನಾ]ನೃಪಂ ॥ ೬ ॥

ವ॥ ಅಂತು ಗುರುಜನೋಪರೋಧದಿಂ ತನಗಿನಿಸನುಭೂಯವಮಾನೆಯಾದ ರಾಜ್ಯಲಕ್ಷ್ಮಿಯಂ ಸಮಧಿಕೈಶ್ವರ್ಯಮವಮತ್ತೆ ಯೆಂದು ಸಮುದವಮಾತಂಗಸಂಪತ್ತ್ರದಾನೆ ಯೆಂದು ನಿಸರ್ಗದುರ್ಗೋಪ ಸಂಚಿತಾರ್ಥಪ್ರವಂಚೆ ಯೆಂದು ಗುರುಜನೌಚಿತ್ಯವಿನಯೋಪಚಾರದೂರೆ ಯೆಂದು ಪ್ರತಿಕೂಲ ರಾಜವಿಷಯೋಪಭೋಗಲಂಪಟಾತ್ಮೆ ಯೆಂದು ದುಸ್ಸಹಮಹಾಕಲಹಕಲುಷಿತಸ್ವಭಾವೆ ಯೆಂದು ಪರವುರುಷಕಂಠಗ್ರಹಾನುರಕ್ತ ಭಾವವರಸಿಕೆ ಯೆಂದು ಮನದೊಳೇವಯಿಸಿ ಪುರುಡು ಪುಟ್ಟಿ ಮೇಗುದೋಱಿ ಸವತಿವಾಡುವಂತೆ.

ಉ॥ ಭೂವರ ನಪ್ಪ ಚಂದ್ರಿಳಪುರಾಧಿಪ ನಪ್ಪಿನವಂಶ ನಪ್ಪ ಶೌ ।
ರ್ಯಾವಹ ನಪ್ಪ ಸಿಂಹರಥರಾಜನ ನಂದನೆಗಂದು ಚಂದ್ರಿಕಾ ॥
ದೇವಿಗೆ ರೂಪವಿಭ್ರಮವಿಲಾಸಗುಣಾನ್ವಿತ ಸಚ್ಚರಿತ್ರಲೀ ।
ಲಾವತಿಗಿತ್ತ ನಗ್ರಮಹಿಷೀಪದಮಂ ಮನುಜೇಂದ್ರಚಂದ್ರಮಂ ॥ ೪ ॥

ಮ॥ ವಿನಯಂ ರೂಪು ವಿವೇಕ ಮನ್ವಯದ ಪೆಂಪೊಳ್ಪಾರ್ಪು ಸೌಭಾಗ್ಯ ಮೆಂ ।
ಬಿನಿತುಂ ರಾಣಿಯರ್ಗೆಲ್ಲ ಮುಳ್ಕೊಡೆಮಧೀಶಂ ಚಂದ್ರಿಕಾದೇವಿಗಿ ॥
ತ್ತ ನತಿಸ್ನೇಹದಿ ನಾಣೆಗೋಸಣೆಯು ನೇಂ ಸನ್ಪುಣ್ಯಪುಣ್ಯಪ್ರಭಾ ।
ವನೆ ಮೆಯ್ವೆತ್ತಮಹಾಸತೀಜಯಮು ನಾರ್ ಕೊಂಡಾಡರಾರ್ ಮನ್ನಿಸರ್ ॥ ೯ ॥

ವ॥ ಅಂತಾಜಗತ್ಪವಿತ್ರಚಾರಿತ್ರವಾರ್ಧಿಗರ್ಭಾಂಗಲಕ್ಷ್ಮೀಯಾದಾ ಮಹಾದೇವಿಯು ಗರ್ಭ ದೊಳ್ ಪೂರ್ವಜನ್ಮಸಂಚಿತಾಗಣ್ಯಪುಣ್ಯ ಪ್ರಭಾವದಿಂ.

ಮ॥ ಸ್ಮರಸೌಮ್ಯಾಕೃತಿ ವಿಶ್ರುತಂ ಶ್ರುತಕಳಾನಾಥಂ ಕಳಾನಾಥಭಾ ।
ಸುರವಕ್ತ್ರಂ ಸುರವಕ್ತ್ರಪಾವನಸದಾಚಾರಂ ಸದಾಚಾರಜ ॥
ಹ್ಲುರಭಿವ್ಯಕ್ತಪರಹ್ಲಿತೀಶಗೃಹವೃತ್ತಂ ವೃತ್ತದೋರ್ಬಂಧುರಂ ।
ಧುರಶೌರ್ಯಾರ್ಜಿತಕೀರ್ತಿ ಕೀರ್ತಿಧರ ನೆಂಬಂ ನಂದನಂ ಪುಟ್ಟಿದಂ ॥ ೧೦ ॥

ವ॥ ಆತನಿಂ ಬಲಿಕ್ಕೆ ಮಳಯಾನಿಲೆ ಮಣಿಮೂಲೆ ಮದನಲತೆ ಮಹಾನಂದೆ ಜಯನಂದೆ ಚಿತ್ರಲೇಖೆ ಕನಕಲತೆ ವೆಸರ ಪೆಱಪೆಱರು ಮಱಿಕೆ ಯರಸಿಯರ್ಗೆ.

ಕಂ॥ ನರದೇವ ನಿಂದ್ರವರ್ಮಂ ।
ಹರಿಷೇಣಂ ವಿಜಯ ನಶನಿಘೋಷ ನನಂತಂ ॥
ವರುಣನ ಜಬಾಹು ಸಂಜಯ ।
ನರನುಪಮ್ಯಾಣಜಯಮುಖ್ಯವೀರರು ದಾರರ್ ॥ ೧೧ ॥

---

[1] ಮತ್ತಮವಿರೋಧಗುಣಾನ್ವಿತ.

ಕಂ॥ ಅಂಶುಪ್ರಭ ರುದ್ಯೋತಿತ ।
ವಂಶರ್ ಪುಟ್ಟಿದ ರಪತ್ಯ ರನುಪಮಪುರು ಪು ॥
ಣ್ಯಾಂಶರ್ ದ್ವಿಗುಣಿಸಿದ ಚತು ।
ರ್ವಿಂಶತಿತೀರ್ಥಕದರೆನಿಸಿ ನಾಲ್ವತ್ತೆಣ್ಬರ್ ॥ ೧೦ ॥

ಚಂ॥ ಅವರ ವಿಳಾಸದೊಳ್ಪವರ ಮಾಂತನದೊಳ್ಪವರಾಭಿಜಾತ್ಯದೊ ।
ಳ್ಪವರ ವಿವೇಕದೊಳ್ಪವರ ವಿಕ್ರಮದೊಳ್ಪವರೀವ ಬಾಗದೊ ॥
ಳ್ಪವರ ಚರಿತ್ರದೊಳ್ಪು ಪೊಗಟಿಪ್ಪಾಗ ಳಚಿಂತ್ಯ ಮತರ್ಕ್ಯ ವತ್ಯಸಂ ।
ಭವಗಣನಾರ್ಹ ಮಪ್ರತಿಮಕಲ್ಪ ಮಜೇಯ ಮಮೇಯ ಮಪ್ಪಯಂ ॥ ೧೩ ॥

ಕಂ॥ ಪರಮೌದಾರಿಕಮೂರ್ತಿಗೆ ।
ಚರಮಾಂಗಂಗಖಿಳಗುರುಗೆ ಪುಟ್ಟಿದ ರೆನೆ ಮೆ ॥
ಯ್ಸಿರಿ ತೇಜಮಳವು ಪುಣ್ಯಂ ।
ಪುರುಷಾರ್ಥಂ ಮಹಿಮೆ ಯೆಂಬಿವಿವರ್ಗಚ್ಚರಿಯೇ ॥ ೧೪ ॥

ವ॥ ಎನಿಸಿದಾಕುಮಾರಕರೊಳಗ್ರಗಣ್ಯನು ಮಗಣ್ಯವಿಕ್ರಮನುಂ ಕ್ರಮಾರ್ಹನು ಮಪ್ಪ.

ಕಂ॥ ಶ್ರೀಕೀರ್ತಿವರಕುಮಾರಂ ।
ಗಾಕಂಪಿತರಿಪುನೃಪಂಗೆ ಪರಿಜನಚೇತೋ ॥
ಮಾಕಂದವಸಂತಂಗೆ ಮ ।
ಹೀಕಾಂತಂ ಯೌವರಾಜ್ಯಪದವಿಯ ನಿತ್ತಂ ॥ ೧೫ ॥

ವ॥ ಅಂತಿತ್ತು.

ಮ॥ ಪ್ರಿಯದಿಂ ನೂಡಿದ ಪುಷ್ಪಮಾಳಿಕೆ ವೊಲಾಜ್ಞಾಲಕ್ಷ್ಮೆಯುಂ ಕೀರ್ತಿಲ ।
ಕ್ಷ್ಮೆಯು ಮುರ್ವೀಶದಿಗೀಶಮಸ್ತಕದೊಳೊಪ್ಪಿಂ ನಿಲ್ವಿನಂ ರಾಜ್ಯಲ ॥
ಕ್ಷ್ಮೆಯ ನಯ್ವತ್ತುಸಹಸ್ರಪೂರ್ವದೊಡ ನಿಪ್ಪತ್ತಯ್ದುಪೂರ್ವಾಂಗಸಂ ।
ಖ್ಯೆಯ ಕಾಲಂ ಸಲೆ ತಾಳ್ದಿ ಭೋಗಿಸಿದ ನಿಂತಿಕ್ಷ್ವಾಕುವಂಶೋನ್ನತಂ ॥ ೧೬ ॥

ಮಾಸ್ರ॥ ಸ್ಫುರಿತೋಷ್ಣಾಂಶುಪ್ರಕಾಶಂ ದವದಹನಶಿಖಾಕ್ರಾಂತಕಾಂತಾರದೇಶಂ ।
ಪರಿಶುಷ್ಯತ್ಸಿಂಧುಪಾಥಂ ಸಲಿಲವಿಹರಣಾಸಕ್ತವನ್ಯೇಭಯೂಥಂ ॥
ನರನಾರೀಸ್ವೇದಬಿಂದುಪ್ರವಣಗುರು ನಿರಾರ್ದ್ರೀಕೃತಾರಣ್ಯವಲ್ಲೀ ।
ತರು ಬಂದತ್ತಂದು ಸಂಪಾದಿತಸಕಳವೃಗಗ್ಲಾನಿದಾಘಂ ನಿದಾಘಂ ॥ ೧೭ ॥

ವ॥ ಅಂತು ತನ್ನ ಭಾಸ್ವತ್ತೇಜದೊಡನೆ ಭಾಸ್ವತ್ತೇಜ ವೆಸೆಯೆಯೆಯುಂ, ತನ್ನ ಸನ್ಮಾರ್ಗದೊಡನೆ ಸನ್ಮಾರ್ಗ ಮುಜ್ಜ್ವಳಿಸೆಯುಂ, ತನ್ನ ವೈರಿಭೂಭೃತ್ಕಂಟಕದೊಡನೆ ಭೂಭೃತ್ಕಂಟಕ ಮುಪ ತಾಪತಪ್ತವಾಗೆಯುಂ, ತನ್ನ ಶತ್ರುವಾಹಿನಿಗಳೊಡನೆ ವಾಹಿನಿಗಳಂದವಟ್ಟದು ಕುಂದೆಯುಂ, ತನ್ನ ನಂದನಸಮೂಹದೊಡನೆ ನಂದನಸಮೂಹ ಮಾಶ್ರಿತಜನೋಪತಾಪಲೋಪವಾಗೆಯುಂ, ಬಂದ ಬೇಸಗೆಯ ನವನೀಶ್ವರಂ ಕಂಡು ಬಗೆಗೊಂಡು.

ಚಂ॥ ವನದೊಳೆ ಪೊಕ್ಕು ವರ್ತಿಸೆ ಜನಂ ಶಿಖಿಗಾಗೆ ಶಿಖಾಕಳಾಪ ವ ।
ರ್ಧನ ಮಿನನಂ ಘನಸ್ಫುರಣ ಮಾವರಿಸುತ್ತಿರೆ ಬೆಂಚೆಗಂಚೆಗಳ್ ॥
ಕಿನಿಸಿ ವಿಮುಗ್ಧಮಾನಸದೊಳೊಂದೆ ಚರತ್ಪಥಿಕರ್ಗೆ ಬೇವಸಂ ।
ಜನಿಯಿಸೆ ಬಂದು ಮುಟ್ಟಿದುದಿದೇಂ ಘನಕಾಲವೊ ಘರ್ಮಕಾಲವೋ ॥ ೧೪ ॥

ವ॥ ಎಂದುತ್ಪ್ರೇಕ್ಷಿಸಿ ನಿಜಾಂತಃಪುರದ ವಿಗ್ರಹಾಗ್ರಹದಿ ನುಪವನವಿಹಾರ ಶಿಶಿರೋಪಕೇಳೀ ಲೀಲೆಯಿಂ ಕಾಲೋಚಿತಕ್ರಿಯೆಯ ನಾಚರಿಸುತ್ತಿರ್ದೂಂದುದಿವಸಂ.

ಮ॥ ಸಿರಿಯುಂ ತೇಜಮು ಮಿಷ್ಟವರ್ಗದೊಲವುಂ ಸ್ತ್ರೀಸ್ನೇಹಮುಂ ದೇಹಮುಂ ।
ಸ್ಥಿರ ಮಲ್ಲೆಂದು ನಿವೇದಿಪಂತೆ ಕಿರಣಶ್ರೀ ತಾವಿಪೆ ಕಾಯ್ವೋಜಿಪೆ ರ ॥
ಕ್ತರಥಾಂಗಕ್ಕೆ ವಿಯೋಗ ಮಾಗೆ ನಳಿನೀರಾಗೋದಯಂ ಪೋಗೆ ಪೆ ।
ಯ್ಗುರೆದಿರ್ದಂ ರವಿ ವಾರ್ಧಿಯೊಳ್ ಭುವನತಾಪೋತ್ಪಾದಿ ಗಿಂಬಕ್ಕುಮೇ ॥ ೧೯ ॥

ವ॥ ಅನಂತರಂ.

ಕಂ॥ ರಾಗಮೆ ದೊರೆಕೊಳಿಕುಂ ದೋ ।
ಷಾಗಮನಮು ನೆಂದು ಪೇಟ್ವಿ ತೆಱದಿಂ ಸಂಧ್ಯಾ ॥
ರಾಗಮೆ ದೊರೆಕೊಳಿಸಿತು ತಿಮಿ ।
ರಾಗಮುಮಂ ಜಾರಚೋರಜನವಲ್ಲಭಮುಂ ॥ ೨೦ ॥

ದಿವಸದವಸಾನದೊಳ್ ಕಮು ।
ಳ್ವನಂ ನೀರೊಡಿ ನಾಡೆ ಬಾಡಿದುದೇಂ ಚಿ ॥
ತ್ರವೊ ಮಿತ್ರವಿರಹದೊಳ್ ಕೊರ ।
ಗುವುದೆರವೆ ರಜೋಧಿಕಂ ಜಡಾಶಯನಿಳೆಯುಂ ॥ ೨೧ ॥

ಉ॥ [1]ಬೇ(ರ)ದಿ ನರ್ಕನಸ್ತಮಿಸಿದಂ ಸುಗಿದತ್ತು ತದಿಷ್ಯಕೋಕಪಂ ।
ಕೇರುಹ ಮೆಂದು ಬೀಗದಿರು ಗೂಗೆ ಮುಲಂಗದಿರುತ್ಪಳಾಳಿ ಸಂ ॥
ಸಾರಿಗೆ ನಿಟ್ಟಿ ಯೆಲ್ಲದು ಸುಖಂ ನಿಮಗಂ ಮಗುಟಿಂತೆ ನಾಳೆ ದಲ್ ।
ದಾರುಣದುಃಖ ಮೆಂದುಲಿವವೋಲ್ ಕೊಳೆರ್ವಕ್ಕಿಯಿ ನಾದುದುಬ್ಬರಂ ॥ ೨೨ ॥

ಕಂ॥ ಜಿನಮತ ಮಿಲ್ಲದ ಪದದೊಳ್ ।
ಜನಿಯಿಪ ಕುಮತದೊಳೆ ಯುಕ್ತಿ ವಲ ಮೇನಾನುಂ ॥
ಮನಕೆನೆವಂತೆನೆದುವು ವಲ ।
ವಿನನಿಲ್ಲದ ಪದದೊಳೊಗೆದ ತಮದೊಳ್ ವಿಾಂಗಳ್ ॥ ೨೩ ॥

ವ॥ ಆಗ ಳರಸ ನಾಸ್ಥಾನಮುಂ ವಿಸರ್ಜಿಸಿ ನಿಜಾಭರಣಕಿರಣಜಾಳಂಗಳೊಳ್ ನೆಣಸಿ ಬೆಳಪ ಕಳೆದೀಪಿಕಾಕಳಾಪಮೆಳಸಿ ಬಳಿಸೆ ಬಂದು ಕತಿಪಯೋಂಗರಕ್ಷಕ ಪರೀತ ನಪಸಾರಿಕಾಭರಣಭಾರ ನಾಗೆ.

---

[1] ಬೇಗದಿನರ್ಕ.

ಮ॥ ಉದಯಾದ್ರೀಂದ್ರಮು ನೀಱುದಂ ಹಿಮುಕರಂ ಪ್ರಾಸಾದಮುಂ ಭೂಪ ನೊ ।
ಪ್ಪಿದ ನಿರ್ವಕ್ಕದ ತಾರಕಾಪ್ರಕಾರದಿಂ ಚಂದ್ರಂ ನೃಪಂ ರಾಜಲೋ ॥
ಕದಿ ನುದ್ಯೋತಿಸಿದಂ ಹಿಮಾಂಶು ರುಚಿಯಿಂ ದೇಹಾಂಶುವಿಂ ಭೂಭುಜಂ ।
ಮುದಮುಂ ಕೌಮುದಕಿತ್ತ ನಿತ್ತ [1](ನ ಬಲಾ)ನೇತ್ರಕ್ಕೆ ಧಾತ್ರೀಶ್ವರಂ ॥ ೨೪ ॥

ವ॥ ಅಂತು ನಿಜರಾಜಲೀಲೆಯಂತೆ ಜಲಕ್ಕನಾದ ರಾಜಲೀಲೆಯುಂ ನವಯೌವನಸ್ಯರಾಜಲೋಕ ಪರಿವೃತಂ ಪರಿಮಿತಾಂಗರಕ್ಷಕಪರೀತ ನಮ್ಯತಕರಧಾಮುಧವಳಪಟಳಪರಿಚ್ಛನ್ನಪರ್ಯಂಕನಿಷಣ್ಣ ನವಲೋಕಿಸುತ್ತು ಮಿರ್ಪಲ್ಲಿ.

ಶಾ॥ ಶ್ವೇತದ್ವೀಪ ಮಿದೆಂಬ ಶಂಕೆ ಮಿಗೆ ಜಂಬೂದ್ವೀಪಮುಂ ಪಾಂಡುರುಕ್ ।
ಖಾತಂ ಕೂಡಿ ಪೊದಮ್ದಿ ವಜ್ಜಳಿವ ಚಂದ್ರಾಲೋಕಮುಂ ಕಂಡು ತ ॥
ತ್ಪೂತಾತ್ಮಂ ನೆನೆದಂ ತನತ್ತು ಜನನಸ್ನಾನಕ್ಕೆ ಕಲ್ಪಾಮರ ।
ವ್ಯಾತಂ ಮೇರುಗೆ ತಂದು ಪೊಯ್ಯೆ ಕವಿದಬ್ಧಿಕ್ಷೀರಪೂರೌಘಮುಂ ॥ ೨೫ ॥

ವ॥ ಆಸಮಯದೊಳ್.

ಮ॥ ಇದು ರಾಗಾಂಗದ ಮೋಹವಾರ್ಧಿಗೆ ಪೊದಮ್ದಿರ್ವಾನಳಜ್ವಾಲೆ ಮೇ ।
ಣಿದು ಸಂಸಾರಸುಖಾತ್ತ ಚಿತ್ತಗಹನಾತಂಕಕ್ಕೆ ಮೇಣ್ ದಾವ ಮಿಂ ॥
ತಿದು ವೈರಾಗ್ಯದ ರೂಪುಗಾಣಿಸುವ ದೀವಜ್ಯೋತಿ ಯೆಂಬಂತಿರಾ ।
ದುದು ಭೋಂಕಲ್ ನಭದಿಂ ಪ್ರಭಾಸುಭಗಮುಳ್ಕಾಪಾತ ಮತ್ಯದ್ಭುತಂ ॥ ೨೬ ॥

ವ॥ ಆಗಳದಂ ಕಂಡು ಗರ್ಜನ್ಮೃಗೇಂದ್ರದಂಷ್ಟ್ರವುಂ ಕಂಡ ವೇತಂಡದಂತೆಯುಂ, ದಾವ ಪಾವಕಜ್ವಾಲೆಯಂ ಕಂಡ ವನಕರಿಖಂಡಿಯಂತೆಯುಂ, ಗರುಡಚಂಚುವಂ ಕಂಡ ಕಂಚುಕೀಂದ್ರನಂತೆಯುಂ, ಭಯಂಗೊಂಡು.

ಕಂ॥ ಪುತ್ರಕಳತ್ರಪರಿಗ್ರಹ ।
ಗಾತ್ರಧನೈಶ್ವರ್ಯಮೆಂಬಿವಾರ್ಗ ಮನಿತ್ಯಂ ॥
ಧಾತ್ರಿಯೊಳ್ತೆಂಬುದ ನೀಗಳ್ ।
ಸೂತ್ರಿಸಿತೆನ್ನಿರ್ದೆಯೊಳುಳ್ಕಿ ಬಿಬ್ಬಿರ್ಯುಳುಳ್ಕುಂ ॥ ೨೭ ॥

ವ॥ ಎಂದು ನಿರ್ವೇಗಪರ ನಾಗಿ.

---

[1] ಮೂಲಪ್ರತಿಗಳಲ್ಲಿ- ಕೌಮುದಕಿತ್ತ ನಿತ್ತು ರಮಣೀನೇತ್ರಕ್ಕೆ-ಎಂದಿರುವುದು. ಚಂದ್ರನಮತ್ತು ಅರಸನ ವಿಷಯವನ್ನು ಹೇಳುವ ಈ ಪದ್ಯದಲ್ಲಿ ಚಂದ್ರನಪರವಾಗಿ ಒಂದುವಾಕ್ಯವೂ ಅದಕ್ಕೆಸದೃಶವಾಗಿ ರಾಜನಪರವಾಗಿ ಮತ್ತೊಂದು ವಾಕ್ಯವೂ ಇರುವುದರಿಂದ ಚಂದ್ರನು, ಮುದಮುಂ ಕೌಮುದಕಿತ್ತಂ ಧಾತ್ರೀಶ್ವರಂ ಅಬಲಾನೇತ್ರಕ್ಕೆ ಮುದಮುಂ ಇತ್ತಂ ಎಂದು ಎರಡು ವಾಕ್ಯವಿರುವುದು ಯುಕ್ತವಾದುದರಿಂದ ''ನಿತ್ತು ರಮಣೀ'' ಎಂಬ ಭಾಗವನ್ನು ''ನಿತ್ತನಬಲಾ'' ಎಂದು ತಿದ್ದಿದೆ.

ಕಂ॥ ಸೊದರಿರೆ ಕಟ್ಟಿಲೆಗೋಡುವ ।
ಜಡರವೊಲಿನ್ನಿವರ ಮುಱಿದು ಮುಱಿಯದೆ ಮುಱಿದಿ ॥
ರ್ದುಡಪನಿ ನಾದುದೆ ನಾಲ್ವುದು ।
ತಡೆದಿರದಾಂ ಪಱಿವೆ ನುಱಿದೆ ಸಂಸೃತಿಲತೆಯಂ ॥ ೨೪ ॥

ಮಾ॥ ತನು ಪೆಂಪಿಂಗೆಡೆಯೇ ವಯೋಗತಿ ಕುಲೀನಾಚಾರಮೇ ನೇವೆಯೊಳ್ ।
ಕನಕಂ ಸೊಕ್ಕಿಸವೇ ಕಷಾಯ ಮಿನಿದೇ ಭೋಗಂ ಭಯಂದೋಱಿದೇ ॥
ವನಿತಾಸಂಗಸುಖಂ ಜಘನ್ಯಮೆನೆ ತಪ್ಪೇ ರಾಜಲೀಲಾನುವ ।
ರ್ತನೆ ದೋಷಾವೃತಮಲ್ಲದೇ ಕ್ಷಿತಿ ಮನಕ್ಕುದ್ವೇಗಮುಂ ಮಾಡದೇ ॥ ೨೫ ॥

ಉ॥ ನಿಟ್ಟಿ ಯಿದೇ ಬೆಡಂಗೆ ನರರೀಖಳಸಂಸೃತಿಯೊಳ್ ಜವಂಜವಂ ।
ಗೆಟ್ಟೊಡೆ ಮೃತ್ಯು ಸತ್ತೊಡೆ ಬಲಂ ಸಲೆ ನಿಂದೊಡೆ ಮುಪ್ಪು ತಪ್ಪುಕೀ ॥
ಳ್ವಟ್ಟೊಡೆ ಪೊಗದಂತಿರಸುನಂಬುಗೆಗೊಟ್ಟೊಡೆ ದೋಗರ್ರಾಜಿ ಕೋ ।
ಳ್ಪಟ್ಟೊಡೆ ಕಾಲ ಮೆಯ್ದಿ ಕಡೆಗಾಲಮು ನೆಯ್ದುದೊಡಾತ್ಮದೇಹಮುಂ ॥ ೨೦ ॥

ಮು॥ ಅತಿನಿಸ್ಸಾರ ಮಿದೆಲ್ಲ ಮೆಂದಱಿದು ವೆನ್ನೊಳ್ ಮತ್ತೆ ಸಂಸಾರಮು ।
ಹ್ಯತೆ ಮತ್ತಾಪ್ತ ಕಳತ್ರವುತ್ರಜನಮೋಹಂ ಮತ್ತೆ ರಾಜ್ಯಾಂಗಸಂ ॥
ಗತಿ ಮತ್ತಿಪ್ಸ್ಯಸುಖೋಪಭೋಗರತಿ ಮತ್ತರ್ಥಾರ್ಜನಾಪೇಕ್ಷೆ ಮ ।
ತ್ತೆ ತದಾನುಗ್ರಹನಿಗ್ರಹಕ್ರಿಯೆ ಗಡೇಂ ಚಿಃ ಕಷ್ಟ ವಿಾಚೆಗಿಷ್ಟಿತಂ ॥ ೨೧ ॥

ಕಂ॥ ಸಮನಿಸುವ ಸಹಜಶಾರೀ ।
ರಮಾನನಾಗಂತುಕವ್ರಕರ ವೆನಿಸಿದ ನಾ ॥
ಲ್ಕು ಮುದಗ್ರಪೀತೆ ಗೆಡೆಯಾ ।
ದ ಮಾನವಂಗಾವ ಭವದೊಳಂ ಸುಖ ಮುಂಟೇ ॥ ೨೨ ॥

ಒಡಲಂ ಸಂಸೃತಿಲತಿಕೆಯ ।
ಮುಡಲಂ ಬಹುದುಃಖಬಹಳಲಹರಿಕೆಗಳ ಪೆ ॥
ರ್ಗಡಲಂ ಸುಖಮುಖಮುದ್ರೆಯ ।
ಹೊಡಲಂ ಬಿಡಲಱಿಯದಂಗೆ ನಿರ್ವೃತಿ ಯುಂಟೇ ॥ ೨೩ ॥

ಚಂ॥ ಬಗೆಗಿಡೆ ಮುಪ್ಪು ಚಪ್ಪರಿಸದನ್ನಿಗ ಮುನ್ನ ತಶಕ್ತಿ ಕುಂದದ ।
ನ್ನಿಗ ಪೆಳವೆಂಡಿ ರಿಚ್ಚೆ ಕಿಡದನ್ನಿಗ ಮೆತ್ತಿದ ಕುತ್ತ ವೊತ್ತದ ॥
ನ್ನಿಗ ಮನುಜೀವಿಗಳ್ ಮನದೆ ಬೇಸಱಿದನ್ನಿಗ ಮುಗ್ರಮೃತ್ಯು ಬಂ ।
ದುಗುಬ್ಬಿಗದನ್ನಿಗಂ ಪರಮದೀಕ್ಷೆಗುಪೇಕ್ಷಿಸಿದಂ ವಿವೇಕಿಯೇ ॥ ೨೪ ॥

ಚಂ॥ ಗತಬಲನಾಗಿ ವಜ್ರಧರನಲ್ತು ವಯೋಧಿಕನಾಗಿ ತಾರ್ಕ್ಷ್ಯನ ।
ಲ್ತತಿಜಡಭಾವಿಯಾಗಿ ಕಡಲಲ್ತು ನಿಜಶ್ರುತಿಶೂನ್ಯನಾಗಿ ಮಾ ॥
ರುತಭುಗುಮಲ್ತು ದಂಡಧರನಾಗಿ ದಿಟಂ ಜವ ನಲ್ತು ನೀರದ ।
ಸ್ಥಿತಿಗವಕಾಶನಾಗಿ ಗಿರಿ ಯಲ್ತೆನೆ ವೃದ್ಧ ನಿದೇಂ ವಿರುದ್ಧನೋ ॥ ೩೫ ॥

ಚಂ॥ ಸುದತಿಯ ರಾನನಾಂಬುಜವನಕ್ಕೆ ಹಿಮಂ ನಯನೋತ್ಪಲಕ್ಕೆ ಭಾ ।
ರ್ಮದ ಬಿಸಿಲಂಗವಲ್ಲರಿಗೆ ರೌದ್ರದವಾಗ್ನಿ ಮನೋಗಜಕ್ಕೆ ಸಿಂ ॥
ಗದ ದನಿ ರಾಗನಾಗನಿವಹಕ್ಕೆ ನವಿಲ್ ಪ್ರಣಯಪ್ರದೀಪನಂ ।
ಪದಕೆ ಸಮೀಹ ನಲ್ತೆ ರತಿಲಂಪಟವೃದ್ಧನ ಭೋಗದಾಗ್ರಹಂ ॥ ೩೬ ॥

ಕಂ॥ ನಿಜೀದಲೆಯಿಂ ಹಲ್ಲಿಂದಂ ।
ನೆಜಿಶಿ ತಣಿದಿರದಾತ್ಮಸಾರಸರ್ವಸ್ವಮುಮಂ ॥
ನೆಜಿಶಿಗೊಂಡು ತೇಪೆ ಜರೆ ಮು ।
ತ್ತುಜಿದಂಡಂ ಕೊಂಡೊಡಲ್ಲದೆಂತುಂ ನಡೆಸಳ್ ॥ ೩೭ ॥

ಉ॥ ಚಿಂತಿಪ ಸುಯ್ವ ಜಾನಿಸುವ ಕಂದುವ ಕುಂದುವ ದಿಟ್ಟಿಗೆಟ್ಟು ವಿ ।
ಭ್ರಾಂತಿಪ ಲಜ್ಜೆಯಂ ಮುಜಿಶಿವ [1]ಕೊಳ್ವುಗ ದಾಪ್ತರ ಮಾತುಗೇಳದಿ ॥
ರ್ಪಂತುಟ ನೊಲ್ಪಗಲ್ಪವರೊಳಾಗಿವ ರಂಗನೆಯರ್ಕಳೀಜರಾ ।
ಕಾಂತ ನರಂಗೆ ತಾ ನಗಲದಾಗಿವಳೇಂ ವಿಪರೀತವೃತ್ತಿಯೋ ॥ ೩೮ ॥

ವ॥ ಅದಲ್ಲದೆಯುಂ.

ಮ॥ ನರಕೋವ್ಯದ್ಗತಿ ಕಟ್ಟು ಕುಟ್ಟು ಕಡಿ ಸೀಳ್ ಕೊಲ್ಲೆಂಬ ದುಃಖಕ್ಕೆ ತಾ ।
ಯ್ಗರು ತಿರ್ಯಗ್ಗತಿ ಪೂಡು ಪೊಯ್ ನಡೆಸು ಕೊಯ್ ಮೂಗೂಜಿಃ ಪೇಜಿಶಿಂಬ ನಿ ॥
ಷ್ಠುರನಿಷ್ಪೀಡೆಗಡರ್ವು ಮರ್ತ್ಯಗತಿ ಕುತ್ತಂ ಮುಪ್ಪು ಕೊಳ್ವಾವು ದ ।
ಳ್ಳುರಿ ಶೋಕಂ ಸಿಡಿಲಸ್ತ್ರ ಮೆಂಬಿವಜಿ ನಪ್ಪುಗಾರ್ತಿಗಾಲಂಬನಂ ॥ ೩೯ ॥

ಚಂ॥ ಸುರಗತಿ ಜೀವಿತಾಂತ್ಯ ಮುಜಿದಿಂಗಳೆದಿನ್ನಿನೆ ಮುನ್ನೆ ಶೋಕದಿಂ ।
ಕೊರಗುವ ಸುಯ್ವ ಬಾಯಜಿವ ನಲ್ಲರಗಲ್ಕೆಗಜಿಲ್ವ ವಸ್ಥೆಗಾ ॥
ಗರ ಮದಜಿಂ ಚತುರ್ಗತಿಯ ನಾರಕರೊಳ್ ತಿರಿಕಂಗಳೊಳ್ ಮನು ।
ಷ್ಯರೊಳನಿಮೇಷರೊಳ್ ಸುಖಮು ನೀಖಲಸಂಸೃತಿ ಪುಟ್ಟಲೀಗುಮೇ ॥ ೪೦ ॥

ಉ॥ ಪುಟ್ಟಿದ ಯೋನಿ ಪೊಂದದೆಡೆ ಮಾಡದ ಪಾತಕ ಮೆಯ್ದದಚ್ಚಿಗಂ ।
ಮುಟ್ಟದ ನೋವು ಮುಚ್ಚಿರದತಿವ್ಯಸನಂ ಗೆಡೆಗೊಳ್ಳದಾಶ್ರಯಂ ॥
ಕಟ್ಟದ ಕರ್ಮ ಮಾಗದ ಪರಾಭವ ಮೊತ್ತದ ಕುತ್ತ ವನ್ಯರಿಂ ।
ಕಿಟ್ಟದ ಕೇಡು ದೇಹಿಗಳೊಳಿಲ್ಲೆನೆ ಸಂಸೃತಿ ಸೌಖ್ಯಸಾರಮೇ ॥ ೪೧ ॥

[1] ಕೂಬ್ವುಗ

ಮ॥ ಬಹುವಲೊಯ್ಯೇವಮನಾಗರೋವಮ ಮೆನಿಪ್ಪಾಯುಷ್ಯರಂ ವಿಸ್ಮಯಾ ।
ವಹನಾಮರ್ತ್ಯರು ಮುಪ್ಪ ದೇವರುಮ ನೇಕಸ್ವರ್ಗದುರ್ಗಸ್ಥರಂ ॥
ಗಹನಂಗೆಯ್ಯದೆ ಕೊಲ್ವ ನೆಂದೊಪಮಿಪಿದಲ್ಪಾಯುಷ್ಯನಾಮರ್ತ್ಯ ವಿಂ ।
ಮಹಿಯೊಳ್ ಮಾನವಕೀಟಕೋಟಿಯು ಮಿದೇಂ ಕಾಳಂಗ ಹೇಳಾಂಚಿತಂ ॥ ೪೦ ॥

ಮ॥ ನಿಜನೇನಾವತಿ ಮುಪ್ಪು ದಕ್ಷಸಚಿವಂ ಮೋಹಂ ಮಹಾದೇವಿ ತೃ ।
ಷ್ಣೆ ಜಯೋದಗ್ರಪರಿಗ್ರಹಂ ಪರಿಯರಾಗಂ ಚಕ್ರ ಮಂಗಾಮಯಂ ॥
ಗಜವಾಜಿಪ್ರಕರಂ ಕಷಾಯ ಮೆನೆ ಮೆಯ್ವೆತ್ತಿರ್ದ ಸುನಾರಥೋ ।
ರಜಗದ್ರಾಜ್ಯದೊಳಾರ ನಾಕ್ರಮಿಸ ನುಗ್ರಂ ಕಾಲಚಕ್ರೇಶ್ವರಂ ॥ ೪೩ ॥

ವ॥ ಎಂದಿಂತು ವರಮುನಿರ್ವೀಗವರನಾಗಿ ನುಡಿದನಿತಱಿಂ ಮಾಣದೆ ಮತ್ತಂ ದ್ವಾದಶಾನು ಪ್ರೇಕ್ಷೆಗಳ ನನುಗತಿಯಿ ನನುಸ್ಮರಿಸಲ್ ಬಗೆದು.

ಮಾ। ಸ್ರ॥ ಜಳರೇಖಾಸಂಚಳಂ ಜವ್ವನ ಮಮರಧನುರ್ಜಾಲ ಮಂಗಂ ತಟಚ್ಚಂ ।
ಚಳ ಮೈಶ್ವರ್ಯಂ ನದೀಬುದ್ಬುದಚಯಚವಳಂ ಪುತ್ರಮಿತ್ರಾನುಬಂಧಂ ॥
ಜಳಭೃದ್ವಾರಿಪ್ಲವಂ ಸಂಚಿಸಿದೊಡೆಮೆ ಹಿಮವ್ಯಾಕುಳಂ ಸ್ತ್ರೀಕುಳಂ ನಾ ।
ನಿಳವೀಧೀದೀಪ್ತರೋಚಿಸ್ತರಳ ಮಖಿಳಭೋಗೋಪಭೋಗಾನುಬಂಧಂ ॥ ೪೪ ॥

ಉ॥ ಕಾಯದು ಪುತ್ರಮಿತ್ರತತಿ ಕಾಯದು ತಂದೆಯ ತಾಯು ಕೆಯ್ವಲಂ ।
ಕಾಯದು ದೇವತಾಗಣದ ರಕ್ಷೆಗೆ ಕಾಯದು ವಜ್ರಪಂಜರಂ ॥
ಕಾಯದು ಮಂತ್ರತಂತ್ರವಿಧಿ ಕಾಯದು ದುರ್ಗಮದುರ್ಗದಾಶ್ರಯಂ ।
ಕಾಯದನಂತವಾಹಿನಿ ಜವಂ ಕೊಲೆ ಧರ್ಮಮೆ ಕಾಯ್ದು ಮಾರುಮಂ ॥ ೪೫ ॥

ಕಂ॥ ಸಮಸಂದು ಪುಣ್ಯಮುಂ ನೆರ ।
ಪುವ್ಲ ಪಾಪಮು ನುಪಾರ್ಜಿವ್ಲ ಬಲಿಕ್ಕಂ ॥
ತವಱಿ ಫಲ ಮುಪ್ಪ ಸುಖದುಃ ।
ಖಮ ನನುಭವಿವಲ್ಲಿ ಜೀವ ನೊರ್ವನೆ ಪೆಱುನೇ ॥ ೪೬ ॥

ನಿಗಮಿಪ್ಪಿನಗೆ ತಂದೆ ತಾಯ್‌ನೊನೆ ।
ಮಗಳಕ್ಕಂ ತಂಗಿ ತಮ್ಮನಣ್ಣಂ ಭಾವಂ ॥
ಮಗ ನಳಿಯಂ ಮೆಯ್ವುನ ನ ।
ತ್ತಿಗೆ ನಾದಿನಿ ಮಾವ ನತ್ತೆ ಪೆಂಡಿತಿ ಗಂಡಂ ॥ ೪೭ ॥

ಎಂಬೀ ಮೋಹದ ಬಂಬಲ ।
ವಂಬಲೊಳೇಂ ಮುನ್ನೆ ತನ್ನ ದೇಹಾಶ್ರಯದಿಂ ॥
[ದಂ] ಬಂದನುಬಂಧನ[ತನು ।
[1ವಂ] ಬೇಱುಪಿನೆ ದೇಹಿಗನ್ಯವಸ್ತು ವದುಂಟೇ ॥ ೪೮ ॥

[1] ತಾಂ.

ಮು॥ ಬಿಸುನೆತ್ತರ್ ತೊಗಲೆಲ್ವು ಕರ್ಬಸು ಕರುಳ್ ಹಿಂಪೊಂತೆ ಖಂಡಂ ಮಿದುಳ್ ।
ಬನೆ ಶುಕ್ಲಂ ಕ್ರಿಮಿ ಕೀವು ಕೀಣಿ ಕೊಳೆ ಸಿಂಬುಳ್ ಸಿಳ್ದುಗಳ್ ಲೋಳೆ ಲಾ ॥
ಳೆ ಸರನ್ಮೂತ್ರಜಳಂ ಮಳಂ ಮಜ್ಜುಕ ಮುಗ್ರವ್ಯಾಧಿ ದುರ್ಗಂಧ ಮು ।
ರ್ವಿಸುಗುಂ ಪೇಸು ಪತಂಕರಂ ಕಿಸುಗುಳಂ ಕಾಯಂ ಶುಚಿಪ್ರಾಯಮೇ ॥ ೪೯ ॥

ಕಂ॥ ನಿಯತಂ [1][ಬಳಿಸಿವ ವಾಯು] ।
ತ್ರಯದಿ ನಧಸ್ತಿರ್ಯಗೂರ್ಧ್ವ ಭೇದವಿಕಲ್ಪ ॥
ತ್ರಯದಿಂ ದ್ವಿಸಪ್ತರಜ್ಜು ।
ಚ್ಛ್ರಯದಿಂ ತ್ರಸನಾಳಗರ್ಭ ಮಿಕ್ಕುರ್ಕಂ ಲೋಕಂ ॥ ೫೦ ॥

ವ್ರತವಂ ಕೊಂಡೆಟ್ಟಿದೊಡೆ ವರ ।
ಮತಮುಂ ನಂಬಿದೊಡೆ ಖಳಕಷಾಯಂ ಮನದೊಳ್ ॥
ವೃತಮಾದೊಡೆ ವಿಷಯದೊಳಭಿ ।
ಮತ ಮಾ[ದೊ]ಡೆ ವಿಷ್ವಕರ್ಮದಾಶ್ರಯು ಮಕ್ಕುಂ ॥ ೫೧ ॥

ವರಮಗುಣವೊಂದೆ ಸಂಯಮಿ ।
ಗೆರಡು ತಪಂ ಮೂಜಿ ಗುಸ್ತಿ ನಾಲ್ಕುಕಷಾಯೋ ॥
ತ್ಕರದಟಿ ವೆಯ್ದಾಚಾರಂ ।
ದೂರಿಕೊಳಿಸಿವ ಸುಕೃತದೊವವು ಸಂವರೆ ಯಕ್ಕುಂ ॥ ೫೨ ॥

ಚಾರುತಪೋವ್ರತಗರುಜೋ ।
ದ್ಗಾರದ ಮಣಿಯಿಂದೆ ದೋಷವಿಷಧರವಿಷಸಂ ॥
ಹಾರಮು ನಾಗಿವ ಮುನಿವ್ರಂ ।
ದಾರಕನ ನೆಗಟ್ಟಿಸ್ತಿ ಕರ್ಮನಿರ್ಜರೆ ಗಾರ್ಮಂ ॥ ೫೩ ॥

ವ್ರತಿಭೆಗೆ ಫಲ ಮಜ್ಜೀವಿನ ಗತಿ ।
ಗತಿಗೆ ಫಲಂ ವಿಷಯವಿರತಿ ವಿರತಿಗೆ ಫಲ ವಾ ॥
ರ್ಹತಪರಮಪೀಕ್ಷೆ ದೀಕ್ಷೆಗೆ ।
ಸುತಪಂ ಫಲ ಮೆನೆ ನೆಗಟ್ಟಿದುದೆ ಬೋಧಿ ಫಲಂ ॥ ೫೪ ॥

ದಯೆ ವೃಕ್ಷಮೂಲ ಮೆಸಕುಂ ।
ನಿಯಮಂ ವೃತಿ ಶೀಲ ಮಾಳವಾಳ ಮೆನಲ್ಕೇ ॥
ಟಿಸ್ಸಿಯು ನಾಳ್ದು ಸುಖದ ಫಲಪ್ರಾ ।
ಪ್ತಿಯು ನಾಗಿವ ಕಲ್ಪವೃಕ್ಷ ಮುಲ್ಲದೆ ಧರ್ಮಂ ॥ ೫೫ ॥

[1] ನಿಯತಂ ದವಳೆಯ ತ್ರಯ.

ನಾರಕತಿರ್ಯಙ್ನರಬ್ಯಂ ।
ದಾರಕರೆನೆ ಗತಿಚತುಷ್ಟಯಂಗಳೆ ಸಲೆ ಸಂ ॥
ನಾರದ್ರವ್ಯಕ್ಷೇತ್ರಾ ।
ದ್ಯಾರೋಪಿತಭೇದದಿಂದ ಮದು ವಂಚಾತ್ಮಂ ॥ ೫೬ ॥

ವ॥ ಎಂದು ಭಾವಿಸುತ್ತು ಮಾಮಹಾತ್ಮಂ.

ಕಂ॥ ಆವಳುಮು ನುಟೀದು ಮುಕ್ತಿ ।
ಶ್ರೀವಧುಗೆ ಪಲುಂಬುತಿರ್ವ ನೀವಿಭು ಬಿಚೆನೆಂ ॥
ದೇವಯ್ಸಿ ಮುಳೆದವೋಲ್ ನಿ ।
ದ್ರಾವಧು ಬಾರದಿರೆ ಕಳೆದ ನಂದಿನ ದಿನಮುಂ ॥ ೫೭ ॥

ವ॥ ಆ ಸಮಯದೊಳ್.

ಕಮಳಾರ್ಧಿ ಮುಂದಭಾವಂ ।
ಕುಮುದಾತ್ತ ಮಪಾಯಗಮನವೋಚನಚತುರಂ ॥
ಭ್ರಮರಹಿತಂ ವೈಭಾತಿಕ ।
ಸಮಾರ ನಿಸಗಿದುದು ಪೋಲ್ತು ಸುವಿಧಿಯು ಬಗೆಯುಂ ॥ ೫೮ ॥

ಉ॥ ಮಿತ್ರಸವಾಗಮಕ್ಕೆ ಸೆಡೆವಂಬರಮುಂ ಬಿಡು(ತಿರ್ವಶೇಷ) ನ ।
ಹ್ಮತ್ರಗಣಂ ಕಳಲ್ವಿನ ಮಗಲ್ಚಿ ನಿಶಾಂತವಿರಕ್ತ ನಪ್ಪನಿ ॥
ರ್ಗೋತ್ರ ನೆನಿಪ್ಪ ಸತ್ಕುವಳಯೋದ್ಗತಲಕ್ಷ್ಮಿಯು ನೊಕ್ಕು ಪೋಗಲಿ ।
ರ್ವತ್ರಿಜ ನಂದು ಕನ್ನಡಿಸಿದಂ ಸುವಿಧೀಶನ ಚಿತ್ತವೃತ್ತಿಯಂ ॥ ೫೯ ॥

ವ॥ ತದನಂತರಂ.

ಚಂ॥ ತವೆ ತಮುದೊಡ್ಡು ರಾಜಿಸಲೊಡರ್ಚೆ ದಿಗಂಬರಲೀಲೆ ಪುಟ್ಟಿ ಭೂ ।
ಭುವನಜನಕ್ಕೆ ದರ್ಶನವಿಶುದ್ಧತೆ ಕುಂದೆ ಬಹುವ್ರತಾರಕೋ ॥
ದ್ಭವರುಚಿ ನೀರಜಸ್ಥಿತಿಯು ನಾತಪದೇಬಿಶ್ಲಿಯ ನಾಗಿಸಲ್ ಜಿನಂ ।
ಸವಿಗೆಯ ನೇಱುವಂ ತುದಯಶೈಲವು ನೇಱಿದ ನಂಬುಜಪ್ರಿಯಂ ॥ ೬೦ ॥

ಕಂ॥ ಕ್ರಮರಾಜ್ಯಲಕ್ಷ್ಮಿಗವಚ ।
ತ್ತಮಳತಪೋಲಕ್ಷ್ಮಿಗೆಳಸುವ ನಳಿನ ಮನಮುಂ ॥
ಕುಮುದಿನಿಗವಚತ್ತ ದಳ ।
ತ್ಕಮಳಿನಿಪೇಬಿಾಗಳೇನುದಾಹರಿಸಿದಳೋ ॥ ೬೧ ॥

ವ॥ ಅಂತು ನೇಸಮರ್ೂಡಲೊಡೆ ಮಾಮಹಾನುಭಾವನ ವಿರಾಗ ನಿರತಮಾನಸ ಸರೋಜಮು ನಲರ್ಚಿಲ್ ಮನಂದಂದು.

ಮ॥ ನೆರೆದೆಲ್ತಿರ್ಪಿನಮಂಡಳೆಂಗಳಿವು ಬೇಟಕ್ಕಿಂಬಂತೆ ಬಂದರ್ ದಿಗಂ ।
ಬರಮುಂ ವ್ಯಾಪಿಸೆ ಭೂಷಣಾಂಶುಪಟಳಂ ಸಾರಸ್ವತಾದಿತ್ಯವ ॥
ಹ್ಯಾರುಣವ್ಯಾಹತಗರ್ದತೋಯತುಷಿತಾರಿಷ್ಟರ್ಕ ಳೆಂಬಿನ್ನರುಂ ।
ವರಲೋಕಾಂಕಿತದೇವ ರತ್ಯಮಳಭಾವರ್ ಬ್ರಹ್ಮಲೋಕಾಂತದಿಂ ॥ ೬೦ ॥

ವ॥ ಅಂತು ಬಂದು.

ಕಂ॥ ಸುರಲೋಕಸುರಭಿಕುಸುಮೋ ।
ತ್ಕರಗಂಧಾಕ್ಷತದಿ ನಭವನಡಿದಳಿರ್ಗಳೆ ನಾ ॥
ದರದಿಂ ದರ್ಚಿಸಿ ಮುಕುಳಿತ ।
ಕರಕಮಳರ್ ನುಡಿದ ರತಿಗಭೀರಧ್ವನಿಯಿಂ ॥ ೬೨ ॥

ವರಮೋಷ್ಮಿಯೆ ಸಕಳಚರಾ ।
ಚರಗುರು ವೆ(ಸು) ವಿದಿತಸಕಳತತ್ವನೆ ತೀರ್ಥಂ ॥
ಕರನೆ ಭವಜಲಧಿತರಣಾ ।
ತರ ನಾದೈ ಪುಟ್ಟದಜಿತಸಂತಸ ಮೆಮ್ಮೊಳ್ ॥ ೬೩ ॥

ಮ॥ ಸಹಜಂ ಮುನ್ನೆಮೆ ದೇವ ನಿನ್ನ ಮನದೊಳ್ ವೈರಾಗ್ಯ ಮುಂಟಾದೊಡೆಂ ।
ಮಹಿಶಂ ರಕ್ಷಿಪ ಧರ್ಮಸಂತತಿನಿಮಿತ್ತಂ ರಾಜ್ಯಮುಂ ತಾಳ್ದಿ ನಿ ॥
ಸ್ಪೃಹ ನಾಗಿರ್ಪೞಿದೆ ನಿನ್ನೆವರ ವಿಾಗಳ್ ದ್ರೋಹದುರ್ವೀಹನಿ ।
ಗ್ರಹನಿಷ್ಕಾಗ್ರಹ ನಾಬೆ ಲೋಕಹಿತರಾರೆಲ್ಲಂದದಿಂ ನೀಂಬರಂ ॥ ೬೪ ॥

ಮ॥ ನವ ಮಂದಾರಲತಾಂತಗಂಧ ಮಿರೆ ಮೆಯ್ವೆತ್ತನ್ಯಪುಷ್ಪಪ್ರತಾ ।
ನವ ನಾಘ್ರಾಯಿಪ ತುಂಬಿಯಂತೆ ವಿನಮದ್ದೀರ್ವಾಣನಿರ್ವಾಣ ನೌ ॥
ಖ್ಯ ವಿರಲ್ಕೀಕ್ಷ್ಮಿತಿರಾಜ್ಯಸಂಪದಮು ನುಂತುಂ ನಚ್ಚೆ ಮೆಚ್ಚಿದ್ದೊಡೀ ।
ಭುವನಾಧೀಶ್ವರ ನಿನ್ನ ಬೋಧದೆಸಕಂ ಚುನ್ನಕ್ಕೆ ಪಕ್ಕಾಗದೇ ॥ ೬೬ ॥

ಕಂ॥ ಕಾಗೆ ಸವಿವಂತು ಸವಿಗುಮೆ ।
ರಾಗಿಸಿ ಮಿಂದುಳಿಯೆ ನೀರ ನಂಜೆ ಜಡಾತ್ಮರ್ ॥
ಭೋಗಿವವೋಲ್ ನಿವ್ಮನ್ನರ್ ।
ಭೋಗಿಸುವರೆ ದುರಿತಸುಖವ ನೈಹಿಕಸುಖಮುಂ ॥ ೬೭ ॥

ನಖದಿಂ ಕೆಱಿಂಕುದುಱಿಸುವ ।
ಸುಖಮುಂ [1] ಬಟಿಕೊ(ಳ್ಳ)ನುರಿವ ದುಃಖಮು ಮೆಂತಂ ॥
ತಖಿಳವಿಷಯೋಪಭೋಗದ ।
ಸುಖಲವ ಮನುದುಃಖ ಮನಘ ನೀ ನಱಿಯಮುದೇ ॥ ೬೮ ॥

[1] ಬಟಿಕೊಳ್ಳನುರಿವ.

ಕಂ॥ ನಿನ್ನಂ ಪ್ರತಿಬೋಧಿಪು ದೆ ।
ಗ್ಗಿನ್ನದಿರಧಿಕಾರ ಮಿವುಗಿದಱಿವಿನ ಮುದವ ॥
ಲ್ತುನ್ನತ ಪೇಟಿತ್ ಬೆಳಗುವುದೇ ।
ಕನ್ನಡಿಯಂ ಬೆಳಗುವಂತೆ ಕೆಯ್ಗಾವಲಿಯುಂ ॥ ೮೯ ॥

ಗುರುಗಳ ಮುಂದೋದುವುದುಂ ।
ವರಿವಿಡಿಗೆಯ್ವಂತೆ ನಿನ್ನ ಬಗೆದುದನೆ ಪುನಃ ॥
ಸ್ಮರಣಕ್ಕೆ ತಂದೆ ವಲ್ಲದೆ ।
ಪರಿಬೋಧಿವ ರಲ್ಲೆ ವಖಿಳರತ್ನಾಂಬುನಿಧೀ ॥ ೯೦ ॥

ವ॥ ಅದಱಿಂದಂ.

ಮ॥ ಅದಟಂ [1]ಮಿಱಿ[1]ವ್ತುವ (ತೊತ್ತಱಿಂ) ಮಿದಿವ ಕಾಳವ್ಯಾಳದಂತಾಳಿಯಂ ।
ಮೊದಲಿಂ ಕೀಱ್ವ ನವರ್ವದರ್ವ ಕನ ಕೂರ್ವಂ ಮೊಟ್ಟೆಮಾಱಿಪ್ಪ ಗ್ರಮೋ ॥
ಹದವಜ್ರಾಳಿಯ ನಾಂತು ತಱಿಸ್ಗಿಸುವ ಮುಕ್ತಿಶ್ರೀಯ ಶೃಂಗಾರಪೂ ।
ರದೊಳೋಲಾಡುವ ನಿನ್ನ ಪೇಕ್ಷೆ [2]ನಿಮಿಗರ್ಥಂ ಭವ್ಯಂ ಶುಭಂ ಮಂಗಳಂ ॥ ೯೧ ॥

ವ॥ ಎಂದು ಪ್ರತಿಬೋಧಿಸಿ ಬೀಱ್ಕೊಂಡು ಪೋಗಲೊಡಂ.

ಉ॥ ಶಾರದನೀರದಪ್ರಸರಮಧ್ಯದೊಳುಜ್ಜ್ವಳಿಸಿರ್ದ ಚಂದ್ರಮ ।
ಶ್ರೀರುಚಿ ಗೌರಸಂಗತಿಯಿ ನಿರ್ಮಡಿನಿರ್ಮಳಮಪ್ಪವೋಲ್ ರ್ದೋ ॥
ದೂರನ ನಿಶ್ಚಳಾಶಯದೊಳಾಗಳವರ್ ಪ್ರತಿಬೋಧಿಸಲ್ಕೆ ಸಂ ।
ಸಾರಶರೀರಭೋಗವಿರತಿತ್ರಯ ಮಗ್ಗಳವಾಯ್ತನರ್ಘಳಂ ॥ ೯೨ ॥

ವ॥ ತದನಂತರಂ.

ಮ॥ ಅವನೀಶಂ ನಿಜಮಂತ್ರಿಮುಂಡಳಮಹಾಸಾಮಂತ ಶುದ್ಧಾಂತಬಾಂ ।
ಧವವರ್ಗಕ್ಕೆ ಸಮಂತು ಸೂಚಿಸಿ ನಿಜಾಭಿಪ್ರಾಯಮುಂ ತೂರ್ಯಘೋ ॥
ಷ ವಶ್ಯಂ ದೆಸೆಯಂ ಪಳಂಚೆ ಸಿರಿದೊಂದುತ್ಸಾಹಮುಂ ಮಾಡಿ ಗಾ ।
ರವದಿಂ ಕೀರ್ತಿಧರಂಗೆ ಕೊಟ್ಟ ನಖಿಳಾಂಗಪ್ರಾಜ್ಯಮುಂ ರಾಜ್ಯಮುಂ ॥ ೯೩ ॥

ವ॥ ಅಂತು ಚಿರಂತನನರೇಂದ್ರಚಾರು ಚರಿತಕೀರ್ತಿಧರ ನಪ್ಪ ಕೀರ್ತಿಧರನ ನನ್ವಯಶ್ರೀಯೊಳಿಟ್ಟು ಮತ್ತುಮಿದ ನರದೇವಪ್ರಮುಖತನಯರುಮ ನವರ್ಗವರ್ಗ ತಕ್ಕ ವೃತ್ತಿಪ್ರಪತ್ತಿಯಿಂ ದೊಡಂಬಡಿಸಿದಾಗಳ್.

[1] ಮಿಱಿವ್ತುವ ಮಿಱಿವ್ತುವಂ [2] ನಿಮಗಿಂ.

ಚಂ॥ ಮಣಿಯದೆ ರಾಜ್ಯಲೋಭವಶದಿಂ ಪುರುಪಾರ್ಥಮು ನೊಕ್ಕು ಪಾರ್ಥಿವಾ ।
ಗ್ರಣಿಗಳನೀಕರುಂ ಜವನ ದಾಡೆಯೊ ಳಿಟ್ಟಿರ್ದ ರಿಂತು ಬಿಟ್ಟರಾ ॥
ರಣ ಮಱಿಪುಟ್ಟ ಮೈಲಗೆಯ ಸೂಡಿಪ ಬಾಸಿಗದೊಳ್ಮೆಗುಂಡ ಮೇ ।
ಲುಣಿಸಿನ ಮೆಲ್ದ ತಂಬುಲದ ಪಾಲಿಗೆಯಂದು ಸಮಸ್ತ ರಾಜ್ಯಮಂ ॥ ೭೪ ॥

ವ॥ ಎಂದು ಲೋಕಮೆಲ್ಲಂ ಪೊಗಟ್ಟಿ.

ಕಂ॥ ಬಿಡಿಸಿ ವಧೂಜನಮು ನೊಡಂ ।
ಬಡಿಸಿ ಪಿತೃದ್ರವ್ಯಮು ನಖಿಳವಿಷಯಸುಖಕ್ಕೋ ॥
ಗಡಿಸಿ ಭವಪಾಶಮಂ ವಱಿ ।
ವಡಿಸಿ ವಿಮೋಹಮು ನಳುರ್ಕೆಗಿಡಿಸಿ ನರೇಂದ್ರಂ ॥ ೭೫ ॥

ವರಿಚಿತಪರಿಜನಮಂ ವರಿ ।
ಹರಿಸಿ ವರಿಸ್ಪಂದ ಮೊಂದು ಮಿಲ್ಲೆನಿ ತನ್ನೊಳ್ ॥
ಪರಿನಿಷ್ಕ್ರಮಣಕ್ಕೆ ಮನಂ ।
ವರಿಯೆ[1] ವರಿಚ್ಛೇದಿಸಲ್ಕದೇಂ ಪರಿಣತನೋ ॥ ೭೬ ॥

ವ॥ ಆವ್ರಸ್ಥಾವದೊಳ್.

ಮ॥ ತ್ರಿಜಗತ್ಕ್ಷೋಭಿತಭುರ್ವಿಧಾಮರಚಮೂಕೋಳಾಹಳಂ ವ್ಯೋಮನಾ ।
ಮಜದಾನಾಂಬು [2]ಕರಂಬಿತಾಂಬರತಳಂ ದೇವೀಜನಾಪಾಂಗದೀ ॥
ಪ್ತಿಚಯಪಕ್ಷಾವೃತದಿಕ್ತಟಂ ದಿವದಿ ನೆಟ್ಟಿಂದಂ ಮಹೋತ್ಸಾಹದಿಂ ।
ನಿಜನೇತ್ರಾಳಿನಿಪೀಯಮಾನಶಚಿವಕ್ತ್ರಾಬ್ಜಾಸವಂ ವಾಸವಂ ॥ ೭೭ ॥

ವ॥ ಅಂತು ಬಂದಾಸಕಲಕಲ್ಪಾಮರವ್ರಕರವರಿವೃತಂ ರಾಜಭವನಮಂ ಪೊಕ್ಕು ಪೌಲೋಮಿ ವೆರಸು ವರಮು ನಡಿಗೆಱುಗಿ ಪರಿಮುವೊಸಗೆಮರುಳೆಳ್ಗಿಂಡು ಜಗತ್ತ್ರಿತಯಮಂಗಳನಾನುತ್ತುಂಗಮಂ ಗಳೆಸ್ನಾನಪೀಠದೊಳ್ ಕುಳ್ಳಿರಿಸಿ.

ಕಂ॥ ಮಂದರದೊಳ್ ವಾಡಿದೆ ವೀ ।
ಯಂದದೆ ಜನ್ಮಾಭಿಷವಮು ನಭವನ ಕಿಱಿಯಂ ॥
ದಿಂದು ಪುರಜನಕೆ ತೋರ್ಪವೊ ।
ಲೆಂದಮರರ್ ನೀಡೆ ದುಗ್ಧಜಲನಿಧಿಜಲಮಂ ॥ ೭೮ ॥

ಉ॥ ನೋಡೆ ಸಮಸ್ತ ಪೌರಜನ ವಾಡೆ ಮರುಪ್ಪಣಿಕಾಳಿ ಮಂಗಳಂ ।
ಬಾಡೆ ಪುಳೋಮಪುತ್ರಿ ಮಿಗೆ ವಾಡೆ ವಿಭೂತಿಯ ನಿಂದ್ರಕೋಟಿ ಕೈ ॥
ಗೂಡೆ ನಿಳಿಂಪತೂರ್ಯರವ ಮೋಡೆ ವಿನೇಯರ ಪಾಪಪೀಡೆ ಕೊಂ ।
ಡಾಡೆ ಜಗಂ ಜಿನಂಗೆಸಗಿದಂ ಪರಿನಿಷ್ಕ್ರಮಣಾಭಿಷೇಕಮಂ ॥ ೭೯ ॥

[1] ಪರಿಚ್ಛೇದಿಸಿದ ನದೇಂ. [2] ಕರಾಂಚಿತಾಂಬರ.

ವ॥ ಅನಂತರಂ.

ಕಂ॥ ದಿವ್ಯಾಂಬರ ಭೂಷಣಕುಸು।
ಮವ್ಯಾಲೇಪನವೆ ವಜ್ರಿ ಕೆಯ್ಗೆಯ್ಸಿ ಜಗ॥
ತ್ಸೇವ್ಯತಪಃಶ್ರೀಯು ವಿವಾ।
ಹವ್ಯಾಪ್ತಿಯು ನವವರಂಬೊಲೊಪ್ಪಿದ ನನಘಂ ॥ ೮೦॥

ವ॥ ಅಂತೊಪ್ಪಿ ವೃಂದಾರಕವಂದಿವೃಂದ ಜಯಜಯಧ್ವಾನ ವಗ್ಗಳಿಸೆ ಹರಿಪೀಠದಿಂದೆದ್ದಿರ್ದ.

ಮ॥ ಅನಿಮೇಷಾನಕಕೋಟಿಗಳ್ ಮೊಳಗೆ ಕಲ್ಪೇಂದ್ರಪ್ರತೀಹಾರತ।
ರ್ಜ್ಜನಕೋಳಾಹಳಮುಣ್ಮೆ ದೇವಗಣಿಕಾಸಂಗೀತಕಂ ಸೇವ್ಯ ಮಾ॥
ಗೆ ನಿಜಾವಾಸದಿ ನಿಂದ್ರಸಿಂಧುರಕರಸ್ಕಂಧಾವಳಂಬಂ ತಪೋ।
ವನದತ್ತಲ್ ತಳೆದರ್ದಂ ಪದದ್ಯುತಿವಿಳಾಸಂ ಪಾಸೆ ಪಂಕೇಜಮಂ[1] ॥ ೮೧॥

ವ॥ ಆಗಳ್.

ಚಂ॥ ಇದು ದಿವಿಜೇಂದ್ರಮಂದಿರದ ಮಾಟಿಕ್ಕಿಯು ನೀಲಿಕ್ಕಿಳಿಗೊಂಡುದಿಕ್ಕಿ ಮೆ।
ಟ್ಟದು ದಿದು ಕಿನ್ನರೇಶ್ವರನ ಪುಷ್ಪಕದೊಪ್ಪಮ ನೊಪ್ಪುಗೊಂಡು ದಿಂ॥
ತಿದು ನಿಜಲೀಲೆಯಿಂ ರಿತುವಿವಾನದ ಲೀಲೆಯು ನೆಂಬ ಚೆಲ್ವ ನಾ।
ಲ್ಪಿದಿರೊಳಳಂಕೃತಂ ಸಿವಿಗೆ ಬಂದೆಸೆದಿರ್ದುದು ದಿವ್ಯಕಲ್ಪಿತಂ ॥ ೮೨॥

ಉ॥ ಯಾಮಿನಿಯಂತೆ ಚಂದ್ರರುಚಿರಾಜಿತ ವಕ್ಷಯಮೂರ್ತಿಯಂತೆ ಮು।
ಕ್ತಾಮಯಭಾಸಿ ಬಾಲರವಿಯಂತೆ ಸಮುದ್ಗತಪದ್ಮರಾಗ ಮಿಂ॥
ದ್ರಾಮರನಂತೆ ವಜ್ರಕರಶೋಭಿ ವನಸ್ಥಳದಂತೆ ವಿದ್ರುಮ।
ಸ್ತೋಮವಿಳಾಸಿ ವಾಯುವಥವಂತದು ತಾಂ ಹರಿನೀಳಭಾಸುರಂ ॥ ೮೩॥

ಕಂ॥ ಬಿಸುವಂ ಬೀಜಿದು ಕುವಳೆಯ।
ದ ಸೊಂಪ ನುಡುಗಿಸದು ಮಿಕ್ಕ ಶತಪತ್ರಮನೆ॥
ಬಿಬ್ಬಿಸುತಂ ಸೂರ್ಯಪ್ರಭೆಯಂ।
ತೆನೆದುದು ಸೂರ್ಯಪ್ರಭಾಖ್ಯ ಶಿಬಿಕಾಯಾನಂ ॥ ೮೪॥

ವ॥ ಅಂತಾವಮಹೋತ್ಸವದೊಳುಚಿತಶಿಬಿಕಾನಿಜೋಪಖಚಿತ ಪದ್ಮರಾಗ ರುಚಿಯಿಂದೆ ರಾಗ ಮಂ ಬೀಜಿವಂತೆ, ಸೂಸಕದ ಮುತ್ತುಗಳ ಬೆಳಗಿನಿಂ ನಸುನಗೆಯ ನೆಸಗುವಂತೆ, ಬಳಸಿಯು ಮೆಬಿಲ್ವ ಬಾಸಿಗದ ಬಣ್ಣದಿಂ ಕಣ್ಣಾರೆ ನೋಡುವಂತೆ, ಮಿಜುಪ ಕಿಜಿಗೆಜ್ಜೆಯುಲಿಗಳಿಂ ನಲಿನಲಿದು ನುಡಿವಂತೆ, ಘನಘಟಿತಘಂಟಾರವಂಗಳಿಂ ಮುಂಗಳಂಬಾಡುವಂತೆ, ಮಿಳಿರ್ವ ಪಳಯಿಗೆಯ ತುಜಿಗಲಿಂ ಕೈನಿಜಿದು ನರ್ತಿಸುವಂತೆ ತೆತ್ತಿಸಿದ ಪುತ್ತಳಿಗಳಾಭರಣಕಿರಣದಿಂ ಸೇನೆಯಂ ಸೂಸುವಂತೆ ದೇಸೆವಡೆದೆಸೆವ ಸಿವಿಗೆಯಂ ನಿರ್ವಾಣನಿಳೆಯ ನಿಶ್ರೇಣಿಕಾರೋಹಣಮಂ ಮುಂದು(ಜಿ)ದೋಜಿದಂ ತೇಜಿದಾಗಳ್.

[1] ಪೋಲೆ ಪಂಕೇಜಮಂ.

ಕಂ॥ ಏಟಿಡಿಯಂ ಮುನ್ನವನಿಪ ।
ರೇಟಿಡಿಯಂ ಬಟ್ಟಿಕೆ ನಭದೊಳಂಬರಚರರ ॥
ತ್ತೇಟಿಡಿವರಂ ಸುರಾಸುರ ।
ರೇ[1]ಟಿಡಿಯೊನೆಯ್ದರ್ ಬಟ್ಟಿಕ್ಕ ಮಭವನ ನಿಂದ್ರರ್ ॥ ೪೫ ॥

ಬಂಧುರಮಣಿಮಯಶಿಬಿಕಾ ।
ಕಂಧರರೊಯ್ವಲ್ಲಿ ಜಿನನ ದೇಹಪ್ರಭೆಯಿಂ ॥
ಕಂಧರವದ ಮೆನೆಮುದು ಸುರ ।
ಸಿಂಧುವ ಪೊನಲೊಳಗೆ ಮೂಡಿ ಮುಟ್ಟಿಕ್ಕಾಡುವವೋಲ್ ॥ ೪೬ ॥

ಧೃತಪುಷ್ಪದಂತ ನೌಮ್ಯ ।
ದ್ಯುತಿ ಗುರುಸಿತನೀಳಕೇತು ಚಿತ್ರಾರಸವಿ ॥
ಸ್ಮೃತ ಮೋಂ ಜ್ಯೋತಿರ್ಲೋಕ ।
ಸ್ಥಿತಿಯವೊಲೆನಿಸಿದುದು ಸಿವಿಗೆ ಖಚರನ ಮನದೊಳ್ ॥ ೪೭ ॥

ವ॥ ಅಂತು ಪುರವರಕ್ಕನತಿದೂರ ಮಪ್ಪ ಪುಷ್ಪಕೋದ್ಯಾನಕ್ಕೆ ಪುಷ್ಪದಂತಪರಮೇಶ್ವರಂ ಪೋಗೆ ಪೋಗೆ.

ಕಂ॥ ಬಟ್ಟಿಸಂದು ಗುರುಜನಂಗಳ ।
ಪಟ್ಟಿಯರ ಮಂತ್ರಿಗಳ ನೃವರ ಕುವರರ ಮೊತ್ತಂ ॥
ಕಟ್ಟಿಪಲ್ಕೆ ಪೋಗೆ ವಿಭುವಂ ।
ಪೊಟ್ಟಿಲನುಕರಿಸಿದುದು ಬೀತ ನಂದನವನಮುಂ ॥ ೪೮ ॥

ವ॥ ಅಂತು ಪೊಟ್ಟಿಲ ಜನ ಮುಟ್ಟಿಲ ನಪ್ಪುಕೆಯ್ದು.

ಮ॥ ವ್ರಕಟರ್ ನೀತಿವಿದರ್ ನೃವರ್ ಪಟ್ಟಿಯರಿರ್ದಂತಾಪ್ತರಿರ್ದಂತೆ ಸೇ ।
ವಕರಿರ್ದಂತೊಳಪೊಯ್ದುದೋ ಪೆಱರ ನೆಂದುಂ ಬಂದು ಬಂದಾಗಳ ॥
ರ್ಥಕಮನ್ಯಕ್ರಿಯೆ ಯನ್ಯಜಾತಿ ಯೆನಿಪಿಂದ್ರರ್ ಪೊರ್ದಿ ವಿಶ್ವಾಸಘಾ ।
ತಕರೊಯ್ದರ್ ಮುಟ್ಟಿಪಿಕ್ಕಿ ನಮ್ಮರಸನಂ ತಮ್ಮಲ್ಲಿಗಿನ್ನೇವೆವೋ ॥ ೪೯ ॥

ಕಂ॥ ಪೊಡವಿಯೊಳಿಲ್ಲದ ವಸ್ತುವ ।
ನಡಿಗಡಿಗೆಡೆಯಾಗಿ ತಂದು ತಂದೀಯುತ್ತುಂ ॥
ಕಡುಠಕ್ಕ ನಿಕ್ಕಿ ಖಳರೆಡೆ ।
ವಡೆದಿಂತೊಯ್ವಂನ ಮೆಯ್ದೆ ಮುಟ್ಟಿಗಿದರರೆಬರ್ ॥ ೫೦ ॥

ವ॥ ಎಂದು ನೊಂದು ನುಡಿವ ಜಡಮತಿಗಳಂ ಕೆಲರ್ ಕೃತಮತಿಗಳ್ ಮಾಕೊಂಡು.

[1] ರೋಳಿಯಿನೊಯ್ದರ್.

ಮು। ಪರಮಜ್ಞಾನಿ ಮರಳ್ವನೇ ಪಿಱಿಗರ್ಗಣಂ ನಿರ್ವೇಗಚಿಂತಾನಿರಂ।
ತರಿತನಾವಂತ ನನಂತಲಹ್ಮಿಗೆ ಮರಳ್ದೀರಾಜ್ಯಲಹ್ಮೀಲವಂ ॥
ಸ್ಥಿರ ಮಲ್ತೆಂದು ಬಿನುಟ್ಟೊಡೆಂಬಡಿಸಿ ಪುತ್ರಂಗಿತ್ತು ತನ್ನೆಟ್ಟಿಯಿಂ।
ದರಸಂ ದೀಕ್ಷೆಗೆ ಪೋದ ನೀಕೆ ನುಡಿವಿರ್ ವೃಂದಾರಕರ್ ನಿಂವ್ಯರೇ ॥ ೯೦ ॥

ವ॥ ಎಂದೋರೊರ್ವರ್ಗರ್ಗೆ ನುಡಿವ ಪುರಜನಂಗಳ ಗುಜುಗುಜಿಯು ನಂತಃಪುರಮುಹತ್ತರಿ ನಱಿದು.

ಮುಸ್ರ॥ ಬರುತುಂ ಪೋಗುತ್ತು ಮುಳಿಲ್ಬಾಳಭರಣಕುಸುಮವಸ್ತ್ರಂಗಳಂ ಲಂಚ ಮಿತ್ತಿ ।
ತ್ತಿರದಿಂಬಿಂ ಸಗ್ಗದಗ್ಗಾಯಿಲೆಯರಸನಂ ಮೆಚ್ಚಿಸಲ್ಯಾರ್ತು ಕೊಂಡೊ ॥
ಯ್ದುರಲಂಬಿಂ ಬೀವೆ ವೆಂಪಂದಗಿಮು ಸುಗಿಮು ಸುಯುವ್ವುತ್ತುಲ್ದರ್ ಕಱಿಲ್ದರ್ ।
ಪುರುಡಿಂ ‘‘ಜಾಯೇಣ ನೇರ್ಷ್ಯಾಃ ಸ್ತ್ರಿಯ’’ ಏನೆ ನೃಪಕುದಾದ್ಧಾಂತಕಾಂತಾಜನಂಗಳ್ ॥ ೯೧ ॥

ವ॥ ಅಂತು ವಿಹ್ವಳೆಯರಾಗಿ.

ಚಂ। ವರಿಚಯ ಮಿಲ್ಲದಂತೆ ನಿಜಶಿ ಕಂನೆಜಿತಂ ತನಗಿಲ್ಲದಂತೆ ನಿ ।
ಷ್ಕರುಣ ನಗಲ್ದು ಪೋದ ನಧಿರಾಜನಿಳಾತಿಳಕಂ ರವಮಾಧವಂ ॥
ಸರಳ ನಶೋಕವೃತ್ತ ನಭಯಾತ್ಮಕ ನುದ್ಗುಣಪೂರ ನಾರ್ಜ್ಜವಂ ।
ವರಿಚಿತಸತ್ಕದಂಬ ನೆನಸುಂ ಮರವಾನಿಸ ನಾದ ನೆಂಬಿನಂ ॥ ೯೨ ॥

ಕಂ॥ ಆವಿರೆ ಯಿರೆ ಭರ್ತೃ ತವಃ ।
ಶ್ರೀವಧುಗೆಳಸಿರ್ದ ನೆಮ್ಮಗವೆತ್ತಣ ಸೊಬಗೆಂ ॥
ದೇವೈಸಿದಂತೆ ಜಿನದೀ ।
ಕ್ಷಾವಿಧಯ ನಪೇಕ್ಷೆಗೆಯ್ದು ರರಸಿಯ ರಾಗಳ್ ॥ ೯೪ ॥

ಆದರಿಸಿ ಪಿರಿಯ ಸಿರಿಗಾ ।
ಹ್ಲಾದದಿ ನಿಡೆಮೂಡಿ ಸುಖದಿ ನಿರಿಸಿವಧೀಶಂ ॥
ಪೋದೊಡೆ ಪೆಂಡಿರ್ ಬಱಿಸಂ ।
ದಾದುದ ನಾಗದೊಡೆ ಸಜ್ಜನಿಕ್ಕೆಗೆ ಪೆಂಪೇಂ ॥ ೯೫ ॥

ವ॥ ಎಂದಾವಿರಕ್ಕೆಯರು ಮೂವಲ್ಲಭಾನುಗಮನಾಸಕ್ಕೆಯರು ಮೊಂದಾಗಿ.

ಚಂ। ಅಡಪಮ ನತ್ತಲೊಯ್ ಡವಕೆಯಂ ಕಳೆ ಸೀಗುರಿ ಬೀಡೆ ಬೀಸದಿರ್ ।
ಕೊಡೆಯು ವಿಡೆಂಬ ಮೀಕೆ ಸಿರಿಗನ್ನಡಿಯುಂ ಪಿಱಿಸಾರ್ಚು ಭೂಮಿಯು ॥
ಗ್ಗಡಣೆಯ ಮಾತು ಮಾಣ್ಗೆ ಬಿಸುಪೆಂದಣಮುಂ ದಯೆಗೆಯ್ದು ವಲ್ಲಭಂ ।
ನಡೆವ ನದಾರ್ಗೆ ತೋಱುದಪೆ ವಾಂ ನೆಱಿಶಿದೀಬಹುರಾಜ್ಯಚಿಹ್ನಮುಂ ॥ ೯೬ ॥

ಮ॥ ಎವಗಿನ್ನಂಜನರಂಜನಂ ತಿಲಕಲೀಲಾಡಂಬರಂ ಪತ್ರಭಂ ।
ಗವಿಳಾಸಂ ಮಣಿಮೇಖಳಾವಿಳಸನಂ ಮುಂಜೀರಕೋಳಾಹಳಂ ॥
ನವಶೃಂಗಾರವಿಕಾರ ಮೇವುದೆನುತುಂ ಬಾಷ್ಪಾಂಬುವುಂ ಗದ್ಗದಾ ।
ರವಮುಂ ಪೊಣ್ಮೆ ಸಖೀಜನಕ್ಕೆ ನುಡಿದರ್ ವಿಭ್ರಾಂತೆಯರ್ ಕಾಂತೆಯರ್ ॥ ೯೬ ॥

ವ॥ ಅಂತು ನುಡಿದನಂತರಂ ನಿಜವಾಸದ ವಿಳಾಸವಿಹಗಂಗಳಂ ನೋಡಿ ಬಂಬಲಿಂಬಾಡಿ.

ಚಂ॥ ಬಿಡದಿರದಿಂತೆ ತಪ್ಪಿ ಬಿನದಕ್ಕೆನಸುಂ ನೆಲೆಗೆಯ್ದ ರೆಮ್ಮಿ ನೆಂ ।
ದೆಡಲಿಲಿ ಮನಃಕ್ಷತಂಬಿಡದೆ ಪಾಳಿಸಿ ಮೀಳಿಸಿ ಪುತ್ರಮೋಹದಿಂ ॥
ನಡೆಪಿದ ಕೂರ್ಮಯಂ ಬಗೆವುದಿಲ್ಲಿ ಸಲೀಲಮರಾಳವೇ ಮನಂ ।
ಬಡೆವ ಮಯೂರವೇ ಚಳಚಕೋರವೆ ರಾಜಿಪರಾಜಕೀರಮೇ ॥ ೯೭ ॥

ವ॥ ಎಂದವರ್ಕೆ ಕ್ಷಮೆಗೊಂಡು.

ಕಂ॥ ಲೀಳೆಯೊಳೆ ತಾಮು ನಡೆಪಿದ ।
ಕೇಳೀವನಲತೆಗಳಂ ನಿರೀಕ್ಷಿಸಿ [1]ಸುಯ್ದಾ ॥
ವಾಳವಳಯುಂಗಳಂ ಭ್ರಮು ।
ರಾಳಕಿಯರ್ ಬಾಷ್ಪವಾರಿಯಿಂ ಪೂರಿಸಿದರ್ ॥ ೯೮ ॥

ವ॥ ಅದಲ್ಲದೆಯುಂ.

ಚಂ॥ ಪಡಿಯಿಡೆ ನಿಮ್ಮ ನೆಮ್ಮವಯವಂಗಳೆ ನೋಡಿಸಿ ಕಾಡುತಿರ್ದುದಂ ।
ಕಡುದಿಟ ಮೆಂದು ನೋಯದೊಡನಾಡಿದ ನಣ್ಣನೆ ನೋಪಿಪ್ಪೆದೆಂಬಿನಂ ॥
ನುಡಿದ ನುನೈಸಿದರ್ ಕುಸುಮಕೋಮಳೆಯರ್ ವನಕುಂದಕೇತಕೀ ।
ಜಡರುಹಕರ್ಣಿಕಾರವಕುಳೋತ್ಪಳಪಾಟಲಚಂಪಕಂಗಳಂ ॥ ೯೯ ॥

ವ॥ ಅಂತು ಸಮುಚಿತಚರಾಚರವರಿಗ್ರಹಂಗಳಂ ಸರಸಸಾತ್ವಿಕೋಕ್ತಿಯಿಂದ ಮಾಟಿಸಿ ನುಡಿದನಂತರ ಮುಂತಃಪುರದ್ವಾರದಿಂ ಪೊಲಿಮಡುವ ಕುದ್ದಾಂತಕಾಂತೆಯರ ತಂಡಮುಂ ಕಂಡು.

ಮ॥ ಅರಸಂ ಬಂದಪ ನೀಗಳಿಂತೆ ನಿಮಗಿಂ ಭ್ರಾಂತೇಕೆ ಕೊಂಡೊಯ್ವುತುಂ ।
ತರುತುಂ ಸ್ವಾಮಿಯೆನಿಪ್ಪುದೇಂ ಪೊಸತೆ ಪೇಟಿಲ್ ದೇವಕರ್ಮಳಂತಾದೊಡಂ ।
ಧರಣೀಶಾಜ್ಞೆಯ ನಲ್ಲದೊರ್ವ ರುಮ ನಿಲ್ಲಿಂ ಪೋಗಲಾವೀಯೆ ವಿಂ ।
ತಿರಿ ಮೆಂದಲ್ಲಿಯೆ ತಾಗಿದರ್ ವಿಹಿತರಕ್ಷಾಕೋವಿದರ್ ಸೌವಿದರ್ ॥ ೧೦೧ ॥

ವ॥ ಅನ್ನೆಗಮಿತ್ತ.

[1] ಸುಯ್ದುಂ ತಾಳವಳಯುಂಗಳಂ.

ಕಂ॥ ವನದೇವಿಯು ರಭವನ ಬರ।
ವ ನಾರಯಲ್ ಮುದದಿ ನಿದಿರ ನಟ್ಟಿದ ಚರ ನೆಂ ॥
ಬಿನ ಮಾಱಿಸೆ ಬಂದೆಲರನ।
ಘನನಂ ದೊಯ್ದಿರಿಸಿದಮರರಂದಾಬನದೊಳ್ ॥ ೧೦೨ ॥

ವ॥ ಆಗಳಲ್ಲಿ.

ಮ॥ ಇದೆರೆಟ್ಟಿಂದಮರ್ದಪ್ಪುನಂತೆ ನಯದಿಂ ಸಂಭಾವಿವಂತರ್ಘ್ಯಮಂ।
ಪದೆದೀವಂತೆಸೆದಿರ್ದುದುಚ್ಚಳಿಪ ಕೇತುವ್ರಾತದಿಂ ರೂಪಗಂ।
ಥದ ತಣ್ಗಾಳಿಯಿ ನಾದ ಪೂವಲಿಯಭೃಂಗೀರಾವದಿಂ ಪಂಚರ।
ತ್ನದ ಸಂದರ್ಭದಿ ನಿಂದ್ರಕಿಲ್ಪಿರಚಿತಶ್ರೀಮಂಡಿತಂ ಮಂಡಪಂ ॥ ೧೦೩ ॥

ಚಂ॥ ಅದು ಭುವನಕ್ಕೆ ಮಂಗಳದ ಮುಂಗುಡಿ ಮೋಹದಪೊಹಭೂಮಿ ಸ।
ಗ್ಗದ ಸಿರಿಯೊಗ್ಗು ಥರ್ಮದ ತವರ್ಮನೆ ಶೋಭೆಯ ನಾಭಿ ಭವ್ಯರ॥
ಭ್ಯುದಯದ ಸಂಕು ಮುತ್ಸವದ ತಾಯ್ಗರು ಚಿತ್ತದ ಗೊತ್ತಗಣ್ಯಪು।
ಣ್ಯದ ಬೆಳೆನೊಳ್ಪಿನುದ್ಭವಗೃಹಂ ಬಹುಲಹ್ರ್ಮಯ ಲಾಸ್ಯಮಂದಿರಂ ॥ ೧೦೪ ॥

ವ॥ ಅಂತು ಮಹನೀಯಮಹಿಮಾವಳೆಂಬಿಯಾದ ತನ್ಮಹಾಮಂಟಪದೊಳಮರೇಂದ್ರವೃಂದ ಮಿಟಿಪೆ ಶಿಬಿಕೆಯಿಂದ ಮವತರಿಸಿ ವಿವಿಧಮಂಗಳೋಪಕರಣಪ್ರಶಸ್ತಹಸ್ತವಾಸವಿಳಾಸಿನೀವಿಕೀರ್ಣಶೇಷಾಕ್ಷತಂಗಳು, ಮನೇಕವೃಂದಾರಕಾನಂದದುಂದುಭೀಗಭೀರಸ್ವರಂಗಳು, ಮಶೇಷಾನಿಮಿಷ ಜಯಜಯವಿಶೇಷಘೋಷಂಗಳುಂ ನೆಗಟಿಸೆ ತಳೆರ್ವ ಘಬಲಾಂತಕಂಗೆ ಬಲಾಂತಕಂ ಕೆಯ್ಗೊಟ್ಟೊಳೆಯಿಂಕೆ ಬಿಜಯಂಗೆಯ್ಯಿಸಿ.

ಕಂ। ಧೃತಕನಕವೇತ್ರಲತೆ ಚ।
ತ್ರಿತ ವಾಗೆ ಕರಾಂಗುಳೀಯಕ ವ್ರಭೆಯಿಂದಂ ॥
ಪ್ರತಿಹಾರವದವಿಯಂ ತಳೆ।
ದು ತರ್ಜಿತದ್ಯುಚರಖಚರಕಳಕಳ ನಿರ್ದಂ ॥ ೧೦೫ ॥

ವ॥ ಆಗಳಾಗೃಹಾಭ್ಯಂತರದೊಳ್.

ಮ॥ ವಿಶದೋತ್ತಾಳದುಕೂಲಕಾಂಡಪಟದಿಂ ಮುಂಬಾರವುಷ್ಪೋಪಹಾ।
ರಶತಶ್ರೀಯ ನನೇಕಮುಂಗಳೆಶುಚಿದ್ರವ್ಯಂಗಳಿಂ ಪ್ರಾಡಕ ॥
ರ್ಮಶಚೀನಿರ್ಮಿತರತ್ನರಂಗವಲಿಯಿಂ ದೊಪ್ಪಿರ್ದುದಂ ಚಂದ್ರಕಾಂ।
ತಶಿಲಾಪಟ್ಟಮು ನೇಱಿಟದಂ ದೃಢಗುಣಂ ನೀರೇಱಿತೆ ಭವ್ಯೋತ್ಕರಂ ॥ ೧೦೬ ॥

ವ॥ ಅಂತು.

ಚಂ॥ ಸದಮಲಬೋಧ ನಾಕಿಲೆಯು ನೇಱಿದೊಡೆಂಗಜನಂಜಿ ಪುತ್ತನೇ ।
ಱಿದ ನಿನನುಟ್ಟುದಂ ಬಿಸುತೆ ತಲ್ಲಣದಿಂ ಮದನಂ ಬಿಸುಟ್ಟ ನು ॥
ಟ್ಟುದ ನಳುಮರ್ದನಂ ಕಳೆಯೆ ಮುಂಗಳಭೂಷಣಮುಂ ವಿಯೋಗವೇ ।
ಗದೆ ಕಳೆದಳ್ ಮನೋಜವಧು ತನ್ನಯ ಮುಂಗಳಭೂಷಣಂಗಳಂ ॥ ೧೦೬ ॥

ಚಂ॥ ಬಳಸಿದ ಬೆಳ್ಮುಗಿಲ್ ತೊಲಗೆ ನಿರ್ಝರ ವಂಚಿರ ವಾಗೆ ಮಿಂಚು ಸಂ ।
ಚಳಿಸಿ ಯಡಂಗೆ ರಂಜಿಪ ದಿನಾಧಿಪನಂತಿರೆ ಜಾತರೂಪಮಂ ।
ಜುಳ ನಿಸೆದಂ ತ್ರಿಸಾಹ್ನಯಿ ನಪೇತ ನತಾಂಶುಕನಾಗಿ ಮುಕ್ತಿಮಂ ।
ಗಳಶುಚಿಧಾಮ ನಾಗಿ ವಿಗತಾಭರಣಪ್ರಭ ನಾಗಿ ನಿಶ್ಚಳಂ ॥ ೧೦೯ ॥

ವ॥ ಅನಂತರಂ.

ಕಂ॥ ಬಗೆ ವನದಾನದ್ವಿಪದಾ ।
ದಿಗಳೊಳ್ ಮಿಥ್ಯಾತ್ವಮಾನಮಾಯಾದಿಗಳೊಳ್ ॥
ಪುಗದಿರೆ ಬಾಹ್ಯಾಭ್ಯಂತರ ।
ಯುಗಲಪರಿಸ್ಪಂದರಹಿತ ನುವಶಮಸಹಿತಂ ॥ ೧೦೯ ॥

ಮಾಳಿನಿ॥ ಸ್ವಗತನಿಬಿಡಪಲ್ಯಂಕಾಸನೋಲ್ಲಾಸ ನೈಂದ್ರೀ ।
ದಿಗಿಭಮುಖ ನುದಂಚತ್ಪಂಚಮುಷ್ಟಿಪ್ರಪಂಚಂ ॥
ಪ್ರಗುಣಮತಿ "ನಮಸ್ಸಿದ್ಧೇಭ್ಯ" ಯೆಂದಾತ್ಮಕೇಶಾ ।
ಳಿಗಳ ನಳುವ ಬೇರಂ ತೀರೆ ಕೀಲ್ವಂತೆ ಕಿೞ್ತಂ ॥ ೧೧೦ ॥

ಕಂ॥ ನಾಕೇಶ ನಾಗಲೊಡೆನೊತೆ ।
ನಾಕೇಶಮು ನಾಂತ ಶೋಣಮಣಿಪಟಳಕ ಮಾ ॥
ಲೋಕನದ ತಣಿವ ನಿತ್ತುದು ।
ಕೋಕನದ ವಿದಳಿಕಳಾಪವೃತ ಮೆಂಬಿನಿಗಂ ॥ ೧೧೧ ॥

ವ॥ ಆಗಳಮರಭೇರಿಗಳ್ ಮೊೞಗೆ.

ಮ॥ ಸ್ರ॥ ಜಳದೇವೀಪತ್ರರೇಖಾಮೃಗಮುದರುಚಿ ವೇಳಾವನಂ ತುಚ್ಛತಾಪಿ ।
ಚ್ಛಳತಾಗುಚ್ಛಪ್ರಭಾಮಂಜರಿ ವಿಮಳಜಳಸ್ಪಷ್ಟದೃಷ್ಟೀಂದ್ರ ನೀಳೋ ॥
ಪಳರೋಚಿರ್ಜಾಳ ಮೆಂಬಂತೆನೆ ದವೃತಸಮುದ್ರಕ್ಕಳಂಕಾರವಾಯ್ತಾ ।
ಗಳೆ ದೇವೇಂದ್ರರ್ಕಳೊಯ್ದಿಂತಭವನ ನವಲೋಲಾಳಿನೀಲಾಳಕ್ಕೌಳಂ ॥ ೧೧೨ ॥

ವ॥ ಅಂತು ಷಷ್ಠೋಪವಾಸದಿಂ.

ಕಂ॥ ನುತಮಾರ್ಗಶಿರದ ಶುದ್ಧ ।
ಪ್ರತಿಪದ್ವಿನದಪರಯೂಮದೊಳ್ ನಾಸಿರ್ವರ್ ॥
ಕ್ಷಿತಿಪತಿಗಳ್ವೀರಸು ಜಗ ।
ತ್ಪತಿ ತಳೆದಂ ತಪಮು ನತನುತಮಿರಾತಪಮಂ ॥ ೧೧೩ ॥

ವ॥ ಅಂತು ಪಂಚಶರಪ್ರಮಾದವಿಜಯಿ ಪಂಚಮಗತಿಪಪ್ರಾಪ್ತಿಗೆ ಸಂಚಕರಮುಂ ಕೊಳ್ವಂತೆ ದೀಕ್ಷೆಯಂ ಕೆಯ್ಕೊಳಲೊಡಂ.

ಕಂ॥ ಪ್ರವರಮನಃಪರ್ಯಯಬೋ ।
ಧ ಮೊಗೆಯೆ ಸಪ್ತರ್ದ್ಧಿನಿಧಿ ಚತುರ್ಜ್ಞಾನಧರಂ ॥
ಸುವಿಧಿ ಮಣಿದೀಪರುಚಿ ಬೆಳ ।
ಗುವ ಪಳಿಕಿನ ನಿಳಯದೆಸಕಮುಂ ಪೊಸಯಿಸಿದಂ ॥ ೧೧೪ ॥

ವ॥ ಆಗಳ್ತನೀಕಾರ್ಚನೆಗಳಿಂದೆ ನಿರ್ವಾಣಪತಿಯೆ ನರ್ಚಿಸಿ ಗೀರ್ವಾಣಪತಿ ನಿರ್ವರ್ತಿತತೃತೀಯಕಲ್ಯಾಣ ನಾಗಿ.

ಮ। ಸ್ರ॥ ಪರಮವ್ಯಾಮೋಹದಿಂ ಬೆಂಬಿಡೆಯಂ ನುಡಿಯದೆಬ್ಬಿಂದ ಸುಗ್ರೀವಧಾತ್ರೀ ।
ಶ್ವರನಂ ತತ್ಕಾಂತೆಯಂ ಕೀರ್ತಿಧರಸಹಿತ ಮಾತ್ಮಪ್ರಬೋಧೋಕ್ತಿಯಿಂದಂ ॥
ನಿರುತಂ ಸಂತೈಸಿ ಕಾಕಂದಿಗೆ ಕಳಿಪಿ ಬಳಿಕ್ಕಂತೆ ಬೀಡಿಕ್ಕೊಂಡು ತೀರ್ಥೇ ।
ಶ್ವರನಂ ಪೋದಂ ಶಚೀಲೋಚನಚಪಳಚಕೋರೀಶರಚ್ಚಂದ್ರ ನಿಂದ್ರಂ ॥ ೧೧೫ ॥

ವ॥ ತದನಂತರ ಮಾಮುನೀಶ್ವರಂ ಧ್ಯಾನಾಧೀನಮಾನಸ ನಂದಿನ ದಿವಸ ಮಿರ್ದು ಮಱಿಯ ದಿವಸಂ ಕೆಯ್ಯುತ್ತಿ ಪಾರಣೆಯಿಂ ಮಾರ್ಗಪ್ರಕಾಶಮಂ ಮಾಡಲೆಂದು.

ಕಂ॥ ಆರ್ಯನುತಂ ಕಣ್ಗಳ್ ತಾ ।
ತ್ಪರ್ಯ್ಯದೆ ಯುಗಮಾತ್ರಧಾತ್ರಿಯಂ ಪರಿಕಿಸೆ ಮುಂ ॥
ದೀರ್ಯ್ಯವಿಶುದ್ಧಿ ಸಮನಿಸೆ ।
ಚರ್ಯೆಗೆ ನಡೆತಂದ ನಮಳಹೃದಯಂ ಸದಯಂ ॥ ೧೧೬ ॥

ದ್ರುತವಿಳಂಬಿತಂ॥ ದ್ರುತವಿಳಂಬಿತಸಂಭ್ರಮವಿಸ್ಮಯಾ ।
(ವೃ)ತದಿಗಂತವಿಲೋಕವಿಕಾರವ ॥
ರ್ಜಿತಗತಿಕ್ರಮ ಮೊಪ್ಪಿ [1]ವನಾಂತದಿಂ ।
ವ್ರತಿ ಬರುತ್ತಿರೆ ಕಂಡತಿರಾಗದಿಂ ॥ ೧೧೭ ॥

ಮು॥ ಪುಳಕಂ ಕೆಯ್ಮಿಗೆ ಪುಷ್ಯಮಿತ್ರಮಹಿಪಂ ಕೈಗೆಯ್ದೆ ಸಂಪೂರ್ಣಮುಂ ।
ಗಳಮುಂ ಶೈಳಪುರಂ ವಿರಾಜಿಸಿತೊ ಕಾಶ್ಮೀರಾಕ್ಷ:ತಾಲೀಲೆಯಿಂ ॥
ವಿಳಸದ್ವಂದನಮಾಳೆಯಿಂ ತತಪತಾಕಾನೀಕದಿಂ ಕೀರ್ಣ ವು ।
ಪ್ಪಳಸತ್ಸಂಗದಿ ನಂಗನಾಲಪಹವಾದ್ಯವ್ರಾತದಿಂ ಗೀತದಿಂ ॥ ೧೧೮ ॥

ವ॥ ಆಗಳ್.

[1] ವನಾನದಿಂ.

ಉ॥ ಪಾಸುವ ಪಲ್ಲವಂಬೊಲಿರೆ ಕೇಸಡಿಗೆಂಪುಪಹಾರಪುಷ್ಪವಿ ।
ನ್ಯಾಸಮು ನುಂಟುವಾಡೆ ನಖದೀಪ್ತಿ ಮುಖೇಂದುಮಯೂಖಮಾನತೋ ॥
ಪಾಸಕಪಾಣಿಪದ್ಮವನಮುಂ ಮುಗಿಸುತ್ತಿರೆ ತತ್ಪುರಾಂತದೊಳ್ ।
ಸೂಸೆ ಲತಾಂತವೃಷ್ಟಿ ಪುಗುದಂತ ನನಶ್ವರ ನಾಮನೀಶ್ವರಂ ॥ ೧೦೯ ॥

ವ॥ ಅಂತು ಪೊಕ್ಕು ವಿಳೋಕನಕುತೂಹಳಾಕಳಿತಪುರಜನಾನು ಗವ್ಯಮಾನ ನಾನರೇಂದ್ರ ಮುಂದಿರದ ಮುಂದಣ್ಗೆ ಬರಲೊಜಂ.

ಉ॥ ಬಾಜಿಸೆ ತೂರ್ಯಕೋಟಿ ಕಳಶಂ ಗುಡಿ ಕನ್ನಡಿ ಸೇಸೆ ಬಾಸಿಗಂ ।
ಲಾಜೆ ಫಲಂ ಕಜುಂಕೆ ಲಲನಾಜನ ಮೆಂಬುಪಚಾರಮಂಗಳಂ ॥
ರಾಜಿಸೆ ಹೇಮವರ್ಣದ ನಿಜಚ್ಛವಿ ಮಂಗಳದೀವದಂತೆ ನೀ ।
ರಾಜಿಸೆ ಪುಷ್ಯಮಿತ್ರ ನಿದಿಗೊಂಡ ನಖಂಡಿತಭವ್ಯಮಿತ್ರನಂ ॥ ೧೧೦ ॥

ವ॥ ಅಂತಿದಿಗೊಂಡು ಪಂಚಮುಷ್ಟಿಯಿಂ ಬಂದಿಸಿ.

ಕಂ॥ ಅವನಿವತಿ ನಿಲಿಸಿದಂ ।
ಸುವಿಧಿಮುನೀಶ್ವರನ ನಂದು ಸಮಸಂದಿರೆ ಸ ॥
ಪ್ತಪಿಥಗುಣಂ ಶ್ರದ್ಧಾದ್ಯಂ ।
ನವವಿಧಪುಣ್ಯಂ ಪ್ರತಿಗ್ರಹಾದ್ಯಂ ತನ್ನೊಳ್ ॥ ೧೧೧

ವ॥ ಆಗಳ್.

ಕಂ॥ ಸುರಧೇನು ಪೊಸೆದು ಬಂದಂ ।
ತಿರೆ ನಿಧಿ ಬಂದಂತಿರಮರಭೂಜಂ ಬಂದಂ ॥
ತಿರೆ ಚಿಂತಾಮಣಿ ಬಂದಂ ।
ತಿರೆ ಸಿರಿ ಬಂದಂತಿರೊಸಗೆಯಾಯ್ತುರಮನೆಯೊಳ್ ॥ ೧೧೨ ॥

ಮ॥ ಮುನಿರಾಜಕ್ರಮಕಂಜಪುಂಜಿತರಜೋಲಾಲಾಮ ನುದ್ದಾಮಕಾಂ ।
ಚನಪೀಠಾಗ್ರದೊಳುಯ್ದು ಕುಳ್ಳಿರಿಸಿ ತತ್ಪಾದೋದಕಶ್ರೀನಿಪೇ ॥
ಚನದಿಂ ಪುತ್ರಕಳತ್ರಮಿತ್ರಸಹಿತಂ ಧಾತ್ರೀಪವಿತ್ರಾತ್ಮ ನಾ ।
ದನುಮೋಹ್ಲಾದನತಿಪ್ರಮೋದ ನರಸಂ ಶ್ರೀಭವ್ಯರತ್ನಾಕರಂ ॥ ೧೧೩ ॥

ಗದ್ಯಂ

ಇದು ಸಮಸ್ತ ಭುವನಜನಸಂಸ್ತುತಜಿನಾಗಮಕುಮುದ್ವತೀಚಾರುಚಂದ್ರಾಯಣಮಾನಿತ ಶ್ರೀಮದುಭಯಕವಿಕವಿಳಗರ್ಭ ಮುನಿಚಕೆಂದ್ರ ಪಂಡಿತ ದೇವಸುವ್ಯಕ್ತಸೂಕ್ತಿಚಂದ್ರಿಕಾ ಪಾನಪರಿಪುಷ್ಟಮಾನಸಮರಾಳಂ

ಗುಣವರ್ಮನಿರ್ಮಿತಮಪ್ಪ
ಪುಷ್ಪದಂತಪುರಾಣದೊಳ್
ಪರಿನಿಷ್ಕ್ರಮಣಕಲ್ಯಾಣವರ್ಣನಂ
ತ್ರಯೋದಶಾಶ್ವಾಸಂ

ಶ್ರೀ

ಪುಷ್ಪದಂತ ಪುರಾಣಂ

ಚತುರ್ದಶಾಶ್ವಾಸಂ.

ಕಂ॥ ಶ್ರೀಪದಮುನೀವ ಮುಕ್ತಿ ।
ಶ್ರೀಪದಮಂ ಪುಣ್ಯಜಲದಿ ನರ್ಚಿಸಿದಂ ಧಾ ॥
ತ್ರೀಪಾವನ ನುದ್ಭೂತರ ।
ಮಾಪೂರ್ಣಂ ಪ್ರಭುಗುಣಾಬ್ಜವನಕಳಹಂಸಂ ॥ ೧ ॥

ಘನಸಾರಘುಸೃಣಚಂದನ ।
ಘನಸಾರದ್ರವದಿ ನಖಿಳಭವ್ಯಮುನಃಕೋ ॥
ಕನದಂಗಳ ನತಿಕೃತಕೋ ।
ಕನದಂಗಳ ನನಘನಂಘ್ರಿಗಳ ನರ್ಚಿಸಿದಂ ॥ ೨ ॥

ಕಂದದ ಕುಂದದ ನವಬಿಸ ।
ಕಂದದ ಕುಂದದ ಬೆಡಂಗ ನಾಳ್ದಮುಳತೆ ಮೆ ॥
ಯ್ಸಂದಕ್ಷತದಿಂ ರುಚಿವೆರ ।
ಸಂದಕ್ಷತಗುಣರ ಚರಣಮುಂ ಪೂಜಿಸಿದಂ ॥ ೩ ॥

ಭ್ರಮರಹಿತಂ ಪೂಜಿಸಿದಂ ।
ಭ್ರಮರಹಿತಪ್ರಚುರಗಂಧ ಮೆಸಿಸಿದ ನಾನಾ ॥
ಸುಮನಸ್ಸಮಿತಿಯಿ ನಮುಳಿನ ।
ಸುಮನಸ್ಸಮಿತಿಯುತಯತಿಪದಾಂಭೋರುಹಮುಂ ॥ ೪ ॥

ಪೊಗೆವಗರುವ ಧೂವದಿ ನೊ ।
ಳ್ಪೊಗೆಪೊಗೆದವಧೂಪದಾರ್ಥ ವಿರತಾತ್ಮನಕೆಂ ॥
ಪಗಲದಕಳಂಕಪದಮುಂ ।
[1] ಪಗಲದಳಿನಳಿನವೆನಿಪುದಂಪೂಜಿಸಿದಂ ॥ ೫ ॥

ತರುಣಾಂಶುಬಿಂಬ ಮೆಂಬಂ ।
ತರುಣಾಂಶುವಿ ನಿಸೆದು ತಮುಮು ನಳಿಪಿಂಪ ಮಣಿಭಾ ॥
ಸುರದೀಪಕದಂಬಕದಿಂ ।
ಸುರದೀಪಕನರುಣಚರಣಮುಂ ಪೂಜಿಸಿದಂ ॥ ೬ ॥

---

[1] ಪಗಲದಳಿಂಗಳಿನ.

ಕಾಂಚನಭಾಜನರತ ಮುಖಿ ।
ಕಾಂಚನಭಾಜನ ಮೆನಿಪ್ಪ ಸುರುಚಿರಚರುವಿಂ ॥
ಸಂಚಿತಗುಣನಡಿಗಳ ನಿನಿ ।
ಸಂಚಿತಗುಣನಳಿನನಿಭಮು ನೊನೆದರ್ಚಿಸಿದಂ ॥ ೬ ॥

*ಪೂಗದ ನವನಾಗಲತಾ ।
ಪೂಗದಫಲಪತ್ರದೊಡನೆ ಬಹುವಿಧಫಲದಿಂ ॥
ರಾಗಯುತಕ್ರಮು ವಿರಹನ ।
ರಾಗಯುತಕ್ರಮುಮು ನವನಿಭುಜ ನರ್ಚಿಸಿದಂ ॥ ೮ ॥

ವ॥ ಅಂತಷ್ಟವಿಧಾರ್ಚನೆಗಳಿನರ್ಚಿಸಿ.

ಕಂ॥ ಎರಡನೆಯ ಪದಾರ್ಚನೆಯಿಂ ।
ವಿರಚಿಸಿದಪ ನೆನಿಸಿ ಪೆರ್ಚೆ ನಿಜಮುಕುಟಹಟ ॥
ತ್ಕಿರಣಗಣ ನೆಱಗಿದಂ ಮುನಿ ।
ವರನಂಘ್ರಿಗೆ ಪುಷ್ಪಮಿತ್ರ ನಮಳಚರಿತ್ರಂ ॥ ೯ ॥

ವ॥ ತದನಂತರಂ ವಿಧಿಪೂರ್ವಕಂ ಪ್ರಯತ್ನಪರನಾಗಿ.

ಕಂ॥ ಪಸರಿಸಿದ ಮುನೀಂದ್ರನ ಮೃದು ।
ಕಿಸಲಯ ಸಮುಪಾಣಿಪಾತ್ರದೊಳ್ ಶುದ್ಧನುನಂ ॥
ವಸುಧೇಶ ನಿಕ್ಕಿದಂ ಪಾ ।
ಯಸಮಂ ಪುಣ್ಯಫಲಭೂತನಿಶ್ರೇಯಸಮುಂ ॥ ೧೦ ॥

ವ॥ ಅಂತಾ ಜಗತ್ಪವಿತ್ರಚಾರಿತ್ರಪಾತ್ರಂಗೆ ಪುಷ್ಪಮಿತ್ರಂ ವಿಶುದ್ಧ ಮುಪಾಹಾರದಾನಮುಂ ನಿರಂತರಾಯಮಾಗಿ ಮಾಡಿದಾಗಳ್.

ಕಂ॥ ಆ ರಾಜಭವನದೊಳ್ ವಸು ।
ಧಾರೆಯ ತನ್ನೆಲರ ಪುಷ್ಪವೃಷ್ಟಿಯ ಸುರಭೇ ॥
ರೀರವದ ಪೊಗಟ್ವು ದೇವರ ।
ಹೋರಭಸದ ಪುಮವಿ:ನಾಯ್ತು ಪಂಚಾಶ್ಚರ್ಯಂ ॥ ೧೧ ॥

ವ॥ ಆಗಳ್.

ಮ॥ ಕ್ಷಿತಿಗೆಯ್ದಿನ್ನ ಗುಣಂ ಶಿಖಂಡಿಮಣಿ ಯಾಯ್ತೆನ್ನನ್ವಯಂ ಲೋಕಪೂ ।
ಜಿತ ಮಾಯ್ತೆನ್ನ ಪೆಸರ್ ಪ್ರಸಿದ್ಧಿಗೆಡೆಯಾಯ್ತೆನ್ನೀಭವಂ ಭವ್ಯಭಾ ॥
ವಿತ ಮಾಯ್ತೆನ್ನ ಮನೋರಥಂ ಸಫಳವಾಯ್ತೆನ್ನುಳ್ಳ ಸದ್ಭಕ್ತಿ ಚಿಂ ।
ತಿತಚಿಂತಾಮಣಿ ಯಾಯ್ತು ನಿನ್ನ ಬರವಿಂ ಕಾರುಣ್ಯಪುಣ್ಯಾಂಬುಧೀ ॥ ೧೨ ॥

* ಈ ಪದ್ಯವು ಒಂದು ಪ್ರತಿಯಲ್ಲಿ ಮಾತ್ರವಿದೆ.

ವ॥ ಎಂದು ಪೊಡೆವಡುವುದುಂ.

ಮ॥ ನಿನಗಿನ್ನಹ್ಲಯದಾನ ಮೆಂಬ ಪರಮಶ್ರೀರತ್ನಮಂ ಪುಷ್ಪಮಿ ।
ತ್ರನ ಕರ್ಣಕ್ಕವತಂಸ ಮಾಗಿಸಿ ಬಟಿಕ್ಕಳ್ಕಂದ ವೆಪ್ಪಿಂತೆ ಬೆ ॥
ನ್ನನೆ ಭವ್ಯರ್ ಕಟಿವುತ್ತೆ ಬಂದು ನಿಲೆ ಬಾಹ್ಯೋದ್ಯಾನದೊಳ್ ಬಂದ ನಂ ।
ದು ನಿಜಪ್ರಾಪ್ತಿನಿಮಿತ್ತ ಶೈಲಪುರದಿಂ ಶೀಲವ್ರಜಾಲಂಕೃತಂ ॥ ೧೩ ॥

ವ॥ ಅಂತು ಸಫಲೀಕೃತಭವ್ಯಜನವುನೋರಥನಿಕಾಯಸ್ಥಿತಿಯಪ್ಪ ಕಾಯಸ್ಥಿತಿಯಂ ನಿರ್ವರ್ತಿಸಿ ಕೆಯ್ಯೆತ್ತಿಕೊಂಡು.

ಕಂ॥ ತನತುವದಪಾಂಸುವಿಂ ಗ್ರಾ ।
ಮನಗರಖರ್ವಡೆಮಡೆಂಬಖೇಟದೊಣಾ ॥
ಸ್ಯನಿಗಮವತ್ತನತತಿ ಪಾ ।
ವನ ವಾಗೆ ವಿಹಾರಿಸುತ್ತೆ ಮೌನವ್ರತದಿಂ ॥ ೧೪ ॥

ಗತಗೌರವತ್ರಯಂ ನಿ ।
ರ್ಜಿತದಂಡತ್ರಯ ನಪೇತಶಲ್ಯತ್ರಯ ನ ॥
ಪ್ರತಿಹತಯೋಗತ್ರಯ್ಂನವ ।
ಗತಕಾಲತ್ರಯ ನನಾವ್ರತಗುಪ್ತಿತ್ರಿತಯಂ ॥ ೧೫ ॥

ವತ್ತುಂಧರ್ಮಂಗಳ್ ಮೂ ।
ವತ್ತಾಱುಂ ಗುಣದೊಳಮರೆ ಸನ್ಮಾರ್ಗಣ ವೋ ॥
ಹ್ಲಾತ್ತದೃಢಚಿತ್ತ ನುದ್ಭಟ ।
ವೃತ್ತಂ ಘಾತಿಸಲೊಡರ್ಚಿದಂ ಘಾತಿಗಳಂ ॥ ೧೬ ॥

ವ॥ ಅಂತೊಡರ್ಚಿ ಬುದ್ಧಿಕ್ರಿಯಾದ್ಯಷ್ಟವಿಧರಿದ್ಧಿಯುಂ, ನಾಮಸತ್ಯರೂಪ ಸತ್ಯಾದಿದಶವಿಧ ಸತ್ಯಮುಂ, ಕಾಯಶುದ್ಧಿವಿನೇಯಶುದ್ಧ್ಯಾದ್ಯನ್ಯಷ್ಟವಿಧಶುದ್ಧಿಯುಂ, ಉತ್ತಮಕ್ಷಮಾದಿ ದಶವಿಧ ಧರ್ಮಮುಮುಂ, ಅನಶನಾವಮೋದರ್ಯಾದಿಷಡ್ವಿಧ ಬಾಹ್ಯತಪಮುಂ ಪ್ರಾಯಶ್ಚಿತ್ತವಿನಯಾದಿ ಷಡಂತರಂಗತಪಮುಂ, ಕ್ಷುತ್ಪಿಪಾಸಾದಿದ್ವಾವಿಂಶತಿಪರೀಷಹಸಹಿಷ್ಣುತ್ವಮುಂ ಪಡ್ವಿೀವನಿಕಾಯ ಜೀವದಯೆಯುಂ, ಜೀವಾಜೀವಾದಿಸಪ್ತತತ್ವ ವಿಚಾರಮುಂ, ನೈಗಮಸಂಗ್ರಹಾದಿ ಸಪ್ತನಯಭಾವನೆಯುಂ, ಅನಂತಾನುಬಂಧಿ ಕ್ರೋಧಮಾನಾದಿಚತುಃ ಕಷಾಯವ್ಯಪಾಯಮುಂ, ಶಬ್ದಸ್ಪರ್ಶನಾದಿ ಪಂಚೇಂದ್ರಿಯವಿಷಯ ವಿಚ್ಛಿತ್ತಿಯುಂ ತನ್ನೊಳುಂ ಸಚ್ಛನ್ನವಾಗಿ.

ಕಂ॥ ಬಗೆಗೆ ಸುಖದುಃಖಮುಂ ವಟಿ ।
ಪೊಗಟಿಸ್ತಿಯುಂ ಹಾನಿವೃದ್ಧಿಯುಂ ಪಟಿಪೊಟಿಲುಂ ॥
ಪಗೆಕೆಳೆಯುಂ ಸಮನೆನೆ ಯೊಯೋ ।
ಗಿಗೆ ಸಮತೆ ಸಮುಂತು ಸಮನಿಸಿತ್ತು ಸಮಗ್ರಂ ॥ ೧೭ ॥

ವ॥ ಅಂತು ಪುಷ್ಪದಂತಯೋಗೀಶ್ವರಂ ಪುಷ್ಪದಂತಮಹಾತಪಶ್ರೀನಿವಾಸಿಯಾಗಿ ಮುನ್ನಿನ ಪುಷ್ಪೋದ್ಯಾನಕ್ಕೆ ವಂದು ವರಮಯೋಗನಿಯೋಗದೂಳ್ ನಿಲೆ.

ಉ॥ ಸಿಂಗದ ದಾಡೆಯುಂ ಸೆಳೆಯ ದಂತಿಗಳುಂತೆ ಮೃಣಾಳ ವೆಂದು ಸಾ ।
ರಂಗದ ಪಿಂಡು ಪೆರ್ಬುಲಿಯ ಪಿಂಡಿನೊಳೊರ್ಬುಳಿಯಾಡೆ ಕೀಕಿಪಿಂ ॥
ಭಂಗಳ ತಣ್ಣೆಲಿಲ್ಗೆಳಸಿ ಪಾವುಗಳಾತವಭೀತಿಯಿಂ ಜತಾ ।
ನಂಗಮುನೀಂದ್ರಶಾಂತರಸದಿಂ ದತಿಪಾವನ ಮಾದುದಾವನಂ ॥ ೧೪ ॥

ಕಂ॥ ಶರಭಂಗಳ್ ಕೇಸರಿಕೇ ।
ಸರಂಗಳಂ ಕ್ರೂರಘೋರವಾರ್ಜಾರಂಗಳ್ ॥
ತರುಣಾಖುಶಾಬಶತಕಂ ।
ಧರಮುಂ ನಖಮುಖದಿ ನುಜ್ಜಿಸಿ ತುಜ್ಜಿಸಿದು ಪೊಲಪಂ ॥ ೧೫ ॥

ಗಿಡಗಂಗಳೊಡನೆ ಸಾರಿಕೆ ।
ಬಿಡುಗುದುರೆಗಳೊಡನೆ ವನಲುಲಾಯಚಯಂ ಕಾ ॥
ಡೊಡೆಯರ ಕೌಲೇಯವ್ರಜ ।
ದೊಡನೆ ವೊಲಂ ನಲಿದು ಸಂತವಿರ್ದುವು ಪದಪಿಂ ॥ ೧೦ ॥

ವ॥ ಅಂತುವರಸ್ಪರವಿರೋಧಿಗಳಪ್ಪ ಬಹುವಿಧಪ್ರಾಣಿಗಳ್ ನಿಜನಿಸರ್ಗ ವೈರಮುಂ ಮುಱಿದು ಶಾಂತರಸತರಂಗಿಣಿಯೊಳೋಲಾಡುತ್ತಿರ್ದು ವದಲ್ಲದೆಯುಂ.

ಚಂ॥ ಉಪಶಮನಿಶ್ಚಳಾಸನಗತಂ ವಿಮಳಾಯತನೇತ್ರಶೋಭಿತಂ ।
ವಿಪುಳಜಟಾವಳಂಬಿ ಸುನುನೋದೃಢಬೋಧವಿಭಾಸಿ ಮನ್ಮಥಾ ॥
ನಪಹತರಾಗಿ ತಾಜ್ಞಾ ತಜ್ಞಾಸಂದಿರವಿಂ ಸಮನಾಯ್ತು ಯೋಗಿಗಾ ।
ವಿಪಿನಮು ಮಂತ ದಲ್ ಸಮತೆ ಸನ್ಮುನಿಸಂಗದಿ ನಾರಿಗಾಗದೋ ॥ ೧೭ ॥

ವ॥ ಮತ್ತಂ.

ಮ॥ ವನದುರ್ಗಸ್ಥಿತಕಾಮನಾಮುನಿಗ ಬೆಂಗೊಟ್ಟೋಡೆ ಸಿಂದಿರ್ದ ಪ ।
ದ್ಮಿನಿ ನೀವ್ರೊಕ್ಕುದು ತುಂಬಿ ಸಂಭ್ರಮಿಸಿ ತಾವ್ರಂ ಕೈದೂವಲ್ಕೊಂಡು ದಂ ॥
ದನಿಲಂ ಸಂಚಳವಾಯ್ತು ಕೀರಪಿಕವೃಂದಂ ಗೂಡುಗೊಂಡಿರ್ದು ವೆಂ ।
ಬಿನ ವಂತಿರ್ದ ವನಾಥತಂತ್ರ ಮಧಿಕರ್ ಬಂದೆಯ್ದೆ ಬಲ್ಗೆಯ್ಗುವೇ ॥ ೧೮ ॥

ಚಂ॥ ಅರಗಿಳಿವಿಂಡು ಬಂಡಳಿಪ ಸಾರಿಕೆ ಚಾವಳಿವುನ್ಮದಾಳಿ ಗಾ ।
ವರಿಸುವ ಸೋಗೆ ಕೇಗುವ ಪಿಕಂ ಜಡಿವಂಚೆ ಕುಕಿಲ್ವ ಕೊಂಚೆ ಯ ॥
ಬ್ಬರಿಪ ವಿಕಾರ ಮಿಲ್ಲದಿರೆಯುಂ ಬನ ವೊಪ್ಪಿದುದಾಮುನೀಂದ್ರನೊಳ್ ।
ಪರಿಚಯ ವಾದೊಡೊಪ್ಪದವರಾರೊ ಬಿಸುಟ್ಟು ವಯೋವಿಕಾರಮುಂ ॥ ೧೯ ॥

ವ॥ ಅಂತು ವುಳ್ಳದೆಯುಂ.

ಚಂ॥ ಸ್ಮರಪರಿವಾರ ಮೆಂದು ಮುನಿದೀಮುನಿ ದೀಪ್ತತಪೋಗ್ನಿಯಿಂ ಕಜ್ಜು ।
ತ್ತುರಿವುಗು ಮೆಂದು ಬೆರ್ಚಿ ಬೆಸಕೆಯ್ದೊಸೆದುಳ್ಳುದ ನಿತ್ತು ತೆತ್ತು ನಿ ॥
ತ್ತರಿಪವೊಲಾದುದಲ್ಲುಗುವ ವೃಕ್ಷಲತಾಫಲಪುಷ್ಪದಿಂ ವನಾಂ ।
ತರ ಮೆನೆ ಸಾಮಿ ಬಂದೊಡೆವಿನೀತಗುಣರ್ ಬೆಸಕೆಯ್ಯದಿರ್ಕುಮೇ ॥ ೨೪ ॥

ವ॥ ಮತ್ತಂ.

ಚಂ॥ ಉಲಿಯದಿ ರೀತಪೋನಿಧಿ ಸವೂಥಿಯೊಳಿರ್ದವ ನಿಂದ್ರುಸನ್ನಿಯಿಂ ।
ಜಲವಿಹಗವ್ರಜಕ್ಕೆ ಜಲದೇವತೆಯರ್ ತಲೆದೂಗಿ ಬಾರಿವಂ ॥
ತಲೆನೆಲರಿಂದ ಪೊಯ್ಯನಲುಗಾಡುವ ತಾವರೆಗಳ್ ನಿಜಾಗ್ರಮಂ ।
ಡಲಿತಮದಾಲಿಗಳ್ ಸೊಗಯಿಸಿರ್ದುವು ಪಂಡುಸರಃಪ್ರದೇಶದೊಳ್ ॥ ೨೫ ॥

ವ॥ ಮತ್ತಂ.

ಉ॥ ಆಜಿಡಿಗೊತ್ತು ಗೊಟ್ಟು ಮಧುವಂ ತವೆ ಪೀರ್ದು ರಜೋವಿಕಾರಮುಂ ।
ಪೋಜಿ ಕುಜಾತಿಯೊಳ್ ಬೆರಸಿ ವುಪ್ಪಿತೆಯಂ ಲತೆಯಂ ಪಳಂಚಿ ಮೆ ॥
ಯ್ದೋಜಿವುದಿಲ್ಲಿ ಸಲ್ಲದೆನಗೆಂಬವೊಲೋಸರಿಗೊಂಡು ಪೋಗುತಂ ।
ತೂಜಿದೆ ಪಣ್ಣನೂದಿದುದು ತಣ್ಣೆಲರಾಮುನಿಯಿರ್ದ ತಾಣದೊಳ್ ॥ ೨೬ ॥

ವ॥ ಅದಲ್ಲದೆಯುಂ.

ಕಂ॥ ಮನಮೊನೆದು ಗೂಢಕಮಳಿಕಾ ।
ಸನಮುಂ ಗುಪ್ತಾತಪತ್ರಮುಂ ಶತಪತ್ರಾ ॥
ನನೆ ಸುಖನೀರಧರಂಗಾ ।
ಮುನಿಗವಟಯ್ದಿದಳಿದೇ ನಗಣ್ಯವೊ ಪುಣ್ಯಂ ॥ ೨೭ ॥

ಖರಕಿರಣತಾಪ ಮೆನಿತು ।
ಬ್ಬರಿಸಿದೊಡಂ ಕಂದಿ ಕುಂದಿದಗವಿಂದದವೋಲ್ ॥
ಕೊರಗದೆ ಕರಗದೆ ಪರಮನ ।
ಚರಮಾಂಗಂ ದೀಪ್ರದೀಪ ಮೆನಿತೊದವಿದೊಡಂ ॥ ೨೮ ॥

ಮುನಿಪನ ವರಮೌದಾರಿಕ ।
ತನುವಂ ದುಸ್ಸಹಪರೀಷಹಂ ಬಾಧಿಸಿತಿ ॥
ಲ್ಲೆನಿಸುವುದು ಚಿತ್ರ ಮಲ್ಲದು ।
ತನಿಗೆಂಡಮು ನೊಜಿಲೆ ಪತ್ತಲೇ ನಜಿದವುದೇ ॥ ೨೯ ॥

ವ॥ ಎನಿಸಿದನುಪಮತಪಃಪ್ರಭಾವದಿಂ ದೆನೆದು ತದ್ವನಮಧ್ಯಪ್ರದೇಶದೊಳ್ ಚಿರಂತನಚಿತ್ರ ಕರನಪ್ಪ ಚೀರಳುಟ್ಟಶಂಖವಿಟ್ಟ ಖಟ್ವಗೆವಲಗೆಯಂ ತಚ್ಚಬೆಳ್ಪಿನಿಂ ಪಳಚ್ಚನಿರ್ದಪಳಿಕಿನ ವಿಶಾಲ ಪಟ್ಟದಮೇಲೆ ನೂಲುವೊಯ್ದು ತಿಟ್ಟವಿಟ್ಟಣ್ಕೆಗೆಯ್ದು ರುಜಾಸ್ಥಾಸಕದ ಸಮವರಿಜಿನ ನಂದಕ್ಕೆ ಪಡಿಚಂದವಾಗಿ.

ಕಂ॥ ಚತುರಂಗುಲಪ್ರಮಾಣಂ ।
ವಿತಸ್ತಿ ಪರಿಮಾಣ ಮೆರಡುಮಡಿಕಂಗುಷ್ಮ ॥
ದ್ವಿತಯದ ತೆಱಿಪಿನೆ ಸುವಿಧಿ ।
ವ್ರತಿ ಕಾಯೋತ್ಸರ್ಗ ಮಿರ್ದನಾಲಂಬಭುಜಂ ॥ ೩೦ ॥

ವ॥ ಮತ್ತಂ.

ಮು॥ ಕರಣಗ್ರಾಮ ಮಳುರ್ಕೆಗುಂದಿರೆ ಮನಂ ಭ್ರೂಮಧ್ಯದೊಳ್ ಸಯ್ತು ತ !
ಟ್ಟಿರೆ ನಾಸಾಗ್ರದೆ ದಿಟ್ಟಿ ಮಟ್ಟು ಮಿರೆ ಹಸ್ತದ್ವಂದ್ವ ಮೇಕಸ್ಥ ಮಾ ॥
ಗಿರೆ ದಂತಂ ಸಮಸಂದು ತಮ್ಮೊಳಿರೆ ವರ್ಯಂಕಾಸನನಾಸೀನ ನೇಂ ।
ಕರಮೊಪ್ಪಿರ್ದನೊ ಪುಷ್ಪದಂತಮುನಿವಂ ಯೋಗೋವಯೋಗಸ್ಥಿತಂ ॥ ೩೧ ॥

ಕಂ॥ ಧ್ಯಾನಾಗ್ನಿನೈಕಸವಮಾ ।
ಧಾನಮನಂ ಸ್ತಿಮಿತದೃಷ್ಟಿ ಪೋಲ್ತಂ ಮುನಿ ಮಂ ॥
ದಾನಿಳ ನಲೆಪಿಲ್ಲದ ಪಲ ।
ಶೀನಕುಲಂ ಪೊಳೆಯದಮಳಕಮಳಾಕರಮಂ ॥ ೩೩ ॥

ತವದಾಜ್ಞಾವಿಚಯ ಮಪಾ ।
ಕವಿಚಯ ವೆನಿಯುಂ ವಿಪಾಕವಿಚಯಂ ಸಂಸ್ಥಾ ॥
ನವಿಚಯ ವೆನಿಯುಂ ಪೆಸರ್ವೆ ।
ತ್ತುವು ನಾಲ್ಕುಂ ತಮ್ಮೊಳೆಸೆಯೆ ಧರ್ಮ ಧ್ಯಾನಂ ॥ ೩೨ ॥

ನತತ ಮನಂತಚತುಷ್ಟಯ ।
ವಿತರ್ಕ ಮವಗಹನಶಕ್ತಿ ಸೂಕ್ಷ್ಮತೆ ನಿರ್ಜಾ ॥
ಥತೆ ಗುರುಲಘುತ್ವ ಬಾಹ್ಯಾ ।
ತ್ಮತೆ ಸಿದ್ಧಗುಣಂಗಳೆಂಬವೆನುತುಂ ನಿನೆದಂ ॥ ೩೪ ॥

ಸನ್ನುತಸಿದ್ಧಪದಾಂಬುಜ ।
ಮನ್ನಿನೆದನಿತಱಿಪೊಳೆ ತಣಿದು ಮಾಣ್ದನೆ ಮುನಿವಂ ॥
ವನ್ನೆರಡು ಮನುಪೇಕ್ಷೆಗೆ ।
ತನ್ನ ಮನಂ ಲಕ್ಷ್ಯಮಾಗೆ ನಿಲೆ ಭಾವಿಸಿದಂ ॥ ೩೫ ॥

ಭಾವದೊಳೆ ಪಾರಿಣಾಮಿಕ ।
ಭಾವಮು ನೊಳಪೊಯ್ದು ಬಿಟ್ಟು ಸಕಳೇಂದ್ರಿಯದು ॥
ರ್ಭಾವಮು ನವಿನಾಭಾವದಿ ।
ನಾವಿಷ್ಕೃತತತ್ವ ನಿರ್ದಪಂ ಸುವಿಧೀಶಂ ॥ ೩೬ ॥

ವ॥ ಆಂತಿರಲೊಡಂ

ಮು॥ ಉರುಬೋಧಾವರಣೀಯವಾರ್ಥಿಗೆ ಪೊದಟಿಪ್ಪೌರ್ವಾನಳಂ ದರ್ಶನಾ ।
ವರಣೀಯೋತ್ಕರತಾಮಸಕ್ಕೆ ರವಿಬಿಂಬಂ ಮೋಹನೀಯಾದ್ರಿಗು ॥
ದ್ದುರಚಂಡಾಶನಿ ಯಂತರಾಯವನಕುದ್ಯದ್ದಾವ ಮೆಂಬಂತು ಘಾ ।
ತಿರಿವುವ್ರಾತವಿಘಾತಿ ಯಾಯ್ತು ಭವಶುಕ್ಲಧ್ಯಾನಚಾತುರ್ಬಳಂ ॥ ೩೭ ॥

ವ॥ ಅಂತು ಘಾತಿಕರ್ಮ ಚತುಷ್ಟ್ಯಯಂ ನಷ್ಟಮಾಗಲೊಡಂ.

ಕಂ॥ ವಿಭುದಾನಲಾಭಭೋಗೋ ।
ಪಭೋಗವೀರ್ಯಾಂತರಾಯಪಂಚಕಹಾನಿ ॥
ಪ್ರಭವ ಮನಂತಚತುಷ್ಟ್ಯಯ ।
ವಿಭವಂ ನಿಜವಾದಬೋಧವುಂ ಕೆಯ್ಕೊಂಡಂ ॥ ೩೮ ॥

ಸ್ಮರಮಥನನೆಂಬರೋಹಣ ।
ಗಿರಿಯೊಳ್ ಕೈವಲ್ಯಬೋಧ ಚಿಂತಾಮಣಿ ಭಾ ॥
ಸ್ವರ ಪೊಗೆದು ಬೆಳಗಿತವಿನ ।
ಶ್ವರಲಕ್ಷ್ಮಿಯ ನೀವುದಿನ್ನದಕ್ಕಚ್ಚರಿಯೇ ॥ ೩೯ ॥

ಸವಿಧಂ ದೂರಂ ಪ್ರತ್ಯಂ ।
ತ ವಿದೆನ್ನದೆ ಭೂತಭಾವಿಭವದಖಿಳಪದಾ ॥
ರ್ಥವ ನೊರ್ಮೆಯೆ ಕರಣವ ನಾ ।
ಸೆವಡೆಯದೆ ನೆಗಟ್ಟಿದ ತ್ತ್ರಿಗಾಥಬೋಧಂ ಜನನೊಳ್ ॥ ೪೦ ॥

ವ॥ ಆ ಪ್ರಸನ್ನಾವದೊಳ್.

ಕಂ॥ ಸುರಿದುದು ನವೋರುಕುಸುಮದ ।
ಸರಿ ವೊಲಿಗಿದು ದಮರಪಟಹ ಮೆಱಿಗಿದುದು ನಿಳಿಂ ॥
ಪರ ಮುಕುಟಕೋಟಿ ನೆಗಟ್ಟಿದುದು ।
ಸುರಜಯರವ ಮಾದುದಿಂದ್ರನಾಸನಕಂಪಂ ॥ ೪೧ ॥

ವ॥ ಮತ್ತಂ.

ಕಂ॥ ಅನುಗತಿಯಿ ನೊಡನೆ ಶಂಖ ।
ಧ್ವನಿ ಭೇರೀಧ್ವನಿ ಮೃಗಾಧಿಪಧ್ವನಿ ಘಂಟಾ ॥
ಧ್ವನಿ ಯಭವನ ಜ್ಯೋತಿಃಕ ।
ಲ್ಪನಿವಾಸದೊಳೆಸೆದು ದಮರರಱಿದೆಱಿಗುವಿನಂ ॥ ೪೨ ॥

ವ॥ ಅಂತೀಸ್ಪಷ್ಟವಿಷ್ಟಪಾಶ್ಚರ್ಯದೃಷ್ಟಹೇತುವಾದ ನಷ್ಟಘಾತಿಚತುಷ್ಟ್ಯಯನ ಚತುರ್ಥ ಕಲ್ಯಾಣದೊಸಗೆಗೆ ನಿಜಮನೋಮಧುಕರಕ್ಕೆ ಮಂದಾರಮಕರಂದ ಸುಂದರಸುಗಂಧನಂದೋಹ ಪೂಗಿಱರಿ ತೆಗೆಯಿ ನರಭಸಾನಂದ ನಿರ್ದು.

ಕಂ॥ ಸುರಪತಿಕರಿಪತಿಯುಂ ಶಚಿ ।
ವೆರಸೇಱಿ ವಿಳಾಸದಿಂದೆ ತಳರ್ವುದು ಮುಖಿಳಾ ॥
ಮುರಕೋಟಿ ತಳರ್ದುದೊಡನೆಯೆ ।
ನೆರೆದು ನಿಗುಂಬಿನೆ ನಿಯುಕ್ತನಿಜ ನಿಜವಿಭವಂ ॥ ೪೩ ॥

ಚಂ॥ ಬಳಸಿಚತುರ್ವಿಧಾಮರನಿಕಾಯದ ವಾಹನಕೋಟಿ ಭೂಷಣಂ ।
ಗಳ ಬೆಳಗಿಂದ ಮೊಪ್ಪಿ ನಿಲೆ ಶಕ್ರಶರಾಸನರಶ್ಮಿ ರಾಜಿಪುಂ ॥
ಗಳಿತವಿಚಿತ್ರಮೇಘಪಟಳಂ ಬಳಸಲ್ಕೆನೆದರ್ದು ಮುಂದರಾ ।
ಚಳ ಮೆನೆ ಪೋಲ್ದು ಬಂದುದು ಪುರಂದರ ನೇಱಿದ ಗಂಧಸಿಂಧುರಂ ॥ ೪೪ ॥

ವ॥ ಅಂತುಬರೆ.

ಮ॥ ಅಮರಸ್ತ್ರೀನಿಚಯಂ ವಿಚಿತ್ರಲತೆಯುಂ ಛತ್ರಾಳಿ ಭೂಜಂಗಳಂ ।
ಚಮರೀಜಾವಳಿ ಪುಷ್ಪವುಂಜರಿಯ ನುಚ್ಚೈತುವ್ರಜಂ ಪಲ್ಲವೋ ॥
ದ್ಗಮಶಾಖಾಳಿಯ ನಾನಕಧ್ವನಿ ವಿಹಂಗಧ್ವಾನವುಂ ಪೋಲೆ ವಿ ।
ಭ್ರಮದಿಂ ಬಂದ ನದೊಂದುನಂದನವನಂ ಬರ್ವಂತ ಸಂಕ್ರಂದನಂ ॥ ೪೫ ॥

ತ್ರಿದಶಾಧೀಶನ ಮುಂದೆ ಸಿಂಧುರಘಟಾಸಂದೋಹದಿಂ ವಾಜಿವ ।
ರ್ಗದ ಪರ್ವಿಂ ರಥಕಟ್ಯದೊಡ್ಡಣದಿ ನೊಳ್ಕಾಳ್ಗಳೋಳಿಯಿಂ ದುಕ್ಷಯೂ ॥
ಥದ ಸೊಂಪಿಂ ನವನರ್ತಕೀನಿವಹದಿಂ ಗಂಧರ್ವಸಂದೋಹದಿಂ ।
ದಿದು ಸಪ್ತಾಬ್ಧಿ ಯೆನಲ್ಕೆ ಸಪ್ತವಿಧ ಸೇನಾಚಕ್ರ ಮೇನೊಪ್ಪಿತೋ ॥ ೪೬ ॥

ಮುಗಿಲೊಡ್ಡಂ ಕುಡುಮಿಂಚ ನಬ್ದರವಮುಂ ಶಕ್ರಾಸ್ತ್ರಮುಂ ತಂದಲಂ ।
ನಗಭಿದ್ಘೋವಕಳಾವಮುಂ ಕಚಭರಂ ದೃಗ್ಗೀಪ್ತಿ ಕಾಂಚೀರವಂ ॥
ನೊಗಯಿಪ್ಪಾಭರಣಾಂಶು ದೇಹರುಚ ಕೆಂಬಾಯ್‌ಪೋಲೆ ಕಾರ್ಗಾಲಮುಂ ।
ಗಗನಾಭೋಗದೊಳೆಯ್ದೆ ತೋಱಿಪು ತಿಳಿಗೆಟ್ಟಿರ್ದಿಂದ್ರಕಾಂತಾಜನಂ ॥ ೪೭ ॥

ಮದನಾರಾತಿಯ ಮುನ್ನಿನುತ್ಸವಕೆ ಬರ್ವಂದಲ್ಲಿ ಮಿಾಯೊಪ್ಪ ವಿ ।
ಲ್ಲಿದು ಮತ್ತೊಂದು ಮದೇಭಶೋಭೆ ಯಿದು ಮತ್ತೊಂದಿಂದ್ರಸೌಂದರ್ಯ ಮಿಂ ॥
ತಿದು ಮತ್ತೊಂದಮರೀವಿಲಾಸ ಮಿದು ಮತ್ತೊಂದುದ್ಬಲಾಟೋಪ ಮೆಂ ।
ಬುದ ನೆಂಬಂತೆಸೆದುರ್ವಿಗೇಂ ಪಡೆದುದೋ ದೇವಾಗಮಂ ರಾಗಮಂ ॥ ೪೮ ॥

ವ॥ ಅಂತು ಚತುರ್ನಿಕಾಯಾಮರಕುಳಕಳಕಳನಿನಾದಂ ದೆಸೆಯಂವಳಂಚಲೆಯೆ ಸೌಧ ಮೆರ್ಗೆಂದ್ರಂ ಬಂದು ಧನದಂಗೆ ಸಮವಸೃತಿಯಂ ನಿರ್ಮಿಸಲ್ವೇಡಿ ಬೆಸಸುವುದುಂ.

ಸ್ರ॥ ಶ್ರೀಮತ್ಪ್ರಾಸಾದಹೈತ್ಯಾವನಿ ವನಪರಿಖಾಶೋಭೆ ವಲ್ಲೀವನಂ ದೃ ।
ಗ್ರಾಮೋದ್ಯಾನಂ ಕನತ್ಕೇತನಮಹಿ ಸುರಭೂಜೋರ್ವಿ ಸಂಗೀತಸದ್ಮ ॥
ಸ್ತೋಮಂ ಲಹ್ಮೀಲಸನ್ಮಂಡಪ ಮೆನಿಸಿ ಗಣವ್ಯಾವೃತೋದ್ಯತ್ತ್ರಿಪೀಠೀ ।
ಧಾವಾಗ್ರೋದ್ಯಾಸಿ ಸಿಂಹಾಸನದೊಳೆನಿದಪಂ ಪುಷ್ಪದಂತಾಧಿನಾಥಂ ॥ ೪೯ ॥

ವ॥ ಅಂತುಯಕ್ಷನಿರ್ಮಿತಸಮವಸೃತಿಯಂ ನೋಡಿ ಶಚಿಯುಂ ಶಚೀಪತಿಯುಂ ಪರಮಭಕ್ತಿಯಿಂ ಪರಮನಿರ್ಗ ಗಂಧಕುಟಿಯಂ ತ್ರಿಪ್ರದಕ್ಷಿಣಂ ಬಂದನೇಕವಸ್ತುಸ್ತವರೂಪವಸ್ತವಗುಣಸ್ತವಂಗಳಿಂ ಸ್ತುತಿಯಿಸಿ ದೇವಲೋಕದನೇಕನವ್ಯದಿವ್ಯಾರ್ಚನೆಗಳಿಂ ದರ್ಚಿಸಿ ಕೇವಲಜ್ಞಾನಮಹಾಕಲ್ಯಾಣ ಪೂಜೆಯಂ ಮಾಡಿ.

ಕಂ॥ ಸಾಸಿರದೆಂಟನ್ವರ್ಥೋ ।
ದ್ಭಾಸುರನಾಮಂಗಳಂ ಮಹೋತ್ಸವದಿಂದಂ ॥
ವಾಸವ ನೊಲ್ದಿಡೆ ತಾಳ್ದಿವ ।
ನಾಸುವಿಧಜಿನೇಂದ್ರ ನುರುದಯಾಂಘ್ರಿಚಂದ್ರಂ ॥ ೫೦ ॥

ವ॥ ಅಂತರ್ಚಿಸಿ ಸುರಪತಿ ಜಿನಪತಿಯಂ ಬೀೞ್ಕೊಂಡು ಪೋದ ನನ್ನಿಗ ಮಿತ್ತಲ್‌ವಿದರ್ಭ ಸ್ವಾಮಿಗಳ್ ಮೊದಲಾಗೆಂಭತ್ತೆಣ್ಬರ್‌ಗಣಧರರುಂ, ಸಾಸಿರದಯ್ನೂರ್ವರ್‌ಪೂರ್ವಧರರುಂ, ಮೊಂಭತ್ತುಲಕ್ಕೆಯು ಮಯ್ವತ್ತುಸಾಸಿರದಯ್ನೂರ್ವರ್ ಶಿಕ್ಷಕರುಂ, ಎಂಬುಸಾಸಿರದನಾನೂರ್ವರವಧಿಜ್ಞಾನಿಗಳು, ಮೆಣ್ಭತ್ತಾಸಿರ್ವರ್ ಕೇವಳಿಗಳುಂ, ಪದಿಮೂಜುಸಾಸಿರ್ವರ್ ವಿಕ್ರಿಯರ್ಧಿಪ್ರಾಪ್ತರುಂ, ಎಣ್ಭತ್ತಾಸಿರದ್ವಯ್ನೂರ್ವರ್ ಮನಃಪರ್ಯಯಜ್ಞಾನಿಗಳುಂ, ಆಱುಸಾಸಿರದಱುನೂರ್ವರ್ ವಾದಿಗಳುಂ, ಘೋಷಾರ್ಯಿಕೆಯರ್ ಮೊದಲಾಗೆ ಮೂಜುಲಕ್ಕೆಯು ಮೆಂಭತ್ತುಸಾಸಿರರ್ಜಿಕೆಯರು ಮೆರಡು ಲಕ್ಕೆಶ್ರಾವಕರುಂ, ನಾಲ್ಕುಲಕ್ಷಶ್ರಾವಕಿಯರುಂ ಮಸಂಖ್ಯಾತದೇವರುಂ, ದೇವಿಯರುಂ ಮಸಂಖ್ಯಾತ ತಿರ್ಯಗ್ಜಾತಿಗಳುಂ, ಬೆರಸು ಧರ್ಮೋಪದೇಶಂಗೆಯ್ಯುತ್ತು ಮಿಪ್ಪತ್ತಂಟುಪೂರ್ವಾಂಗಮುಂ ನಾಲ್ಕುವರ್ಷದಿಂ ಕುಂದಿದೊಂದುಪೂರ್ವಂ ವಿಹರಿಸುತ್ತುಮಿರ್ದು.

ಕಂ॥ ಮಹಿಮಾಬ್ಧಿ ಯೊಂದುತಿಂಗಳ ।
ವಿಹರಣಮುಂ ಮಾಣ್ದು ಬಂದು ಸಮ್ಮೇದಮಹಾ ।
ಮಹಿಧರದೊಳ್ ಸಾಸಿರ್ವರ್ ।
ಮಹಿಮಹಿತಮುನೀಂದ್ರರೊಡನೆ ಯೋಗದೊಳಿರ್ದಂ ॥ ೫೧ ॥

ವ॥ ಅಂತಪ್ರತಿಮವ್ರತಿಮಾಯೋಗಾನಿಯೋಗದೊಳಿರ್ದನಂತರಂ ಸ್ವಸ್ಥಾನಸ್ವಯೋಗಕೇವಳಿ ಪ್ರದೇಶನಿರ್ಜರೆಯಂ ಮಾಡುತ್ತು ಮುಂತರ್ಮುಹೂರ್ತಕಾಲದೊಳ್ ದಂಡಕವಾಟಪ್ರತರಣಾಲೋಕಪೂರಣಸಮುದ್ಘಾತಕ್ರಿಯಾಸಮಾಪ್ತಿಯಂ ಕ್ರಮುಕ್ರಮದಿಂ ಮಾಡಿ, ಮತ್ತಂ ಸೂಕ್ಷ್ಮಕ್ರಿಯಾಪ್ರತಿಪತ್ತಿ ಯೆಂಬ ಮೂಜನಿಯಶುಕ್ಲಧ್ಯಾನಾಧೀನನಾಗಿ ನಾಮಗೋತ್ರವೇದನೀಯಾಯುಷ್ಯಾಭಿಧಾನಾಘಾತಿಜತುಷ್ಟಯಮಂ ದಗ್ಧರಜ್ಜುಸಮಾನಮಂಮಾಡಿ ಪಂಚಾಕ್ಷರೋಚ್ಚಾರಣ ಕಾಲ ಪರ್ಯಂತಂ ತಪಿಲೊಳಗಣಬೀಜದಂತೆ ದ್ರವ್ಯಮನೋವಾಕ್ಕಾಯದೊಳೊಂದದೆ ನಮುಚ್ಛಿನ್ನಕ್ರಿಯಾಪ್ರತಿಪತ್ತಿ ಶುಕ್ಲಧ್ಯಾನಾಪೂರ್ಣತೆಯಿನ ಶೇಷಶೀಲಗುಣನಿಳಯನಘಾತಿಸಮ್ಮಂಧ ಮಪ್ಪ ವೃತ್ತರೋತ್ತರಪ್ರಕೃತಿಗಳಂ ಕ್ರಮುಕ್ರಮದಿಂ ನಿರವಶೇಷಂ ಕಿಡಿಸಿ.

ಕಂ॥ ಅನುಪಮ ಮಪ್ಪೆಂಬುಗುಣಂ ।
ತನಗಮರ್ದಿರೆ ಸೌಖ್ಯನಿಧಿಯು ಮಖಿಳಜಗತ್ಪಾ ॥
ವನನೇಂ ಮುನಿಜನಗಮ್ಯನು ।
ವೆನೆ ತನ್ನೊಳೆ ನೆಜಿಪಿದು ಸುವಿಧಿ ಮುಕ್ತಿಗೆ ಸಂದಂ ॥ ೫೦ ॥

ಸ್ಥಿರಭಾದ್ರಪದಸಿತಾಷ್ಟಮಿ ।
ಗಿರದೊಪ್ಪಿರೆ ಮೂಲಭಗಣ ಮವರಾಹ್ನಕದೊಳ್ ॥
ವರಪುಷ್ಪದಂತಜಿನಪತಿ ।
ಪರಮಕ್ರೀಮುಕ್ತಿಲಕ್ಷ್ಮಿಯಂ ಕೆಯ್ಕೊಂಡಂ ॥ ೫೨ ॥

ವ॥ ಅಂತು ಪುಷ್ಪದಂತಸ್ವಾಮಿ ''ಸಕಳಕರ್ಮವಿಪ್ರಮೋಕ್ಷೋನ್ಮೋಕ್ಷಃ'' ಎಂಬ ನಿಜಮುಖ ಕಮಳನಿರ್ಗತಾರ್ಹತಮತವಚನಮ ನನ್ವರ್ಥಂಮಾಡಿ ತ್ರಿಲೋಕ ಶಿಖರಿಶೇಖರನಾಗಿ ಯನಂತಸಹಜ ಸೌಖ್ಯಾವ್ಯಾಹತವನಧಿವಿಧುವಾಗಿ ನೆಲಸಿರ್ದನ್ನಿಗ ಮಿತ್ತ ಚತುರ್ನಿಕಾಯಾಮರನಿಕಾಯಂ ಸುವಿಧೀಶ್ವರಂಗೆ ವರನಿರ್ವಾಣಕಲ್ಯಾಣಮಹಾಪೂಜೆಯಂ ಮಾಪ್ಪಿ ಭಕ್ತಿಯಿಂ ಬಂದು ನಿರ್ವಾಣಭೂಮಿಯಂ ದೇವಲೋಕದನೇಕಸುರಭಿ ಸುರತರುಕುಸುಮವಿಸರ ಬಂಧುರಗಂಧಾಕ್ಷತೆಗಳಿಂ ದರ್ಚಿಸಿ.

ಕಂ॥ ಮನದನುನಯದಿಂ ದಾನಂ ।
ದನೃತ್ಯಮುಂ ದಿವಿಜರಾಜ ನಖಿಳಧರಿತ್ರೀ ॥
ಜನದ ಮನಕ್ಕಚ್ಚರಿಯ ।
ಪ್ಪಿನ ಮೊಡರಿಸಿ ಪರಮಸುಖಮನೇಂ ತಾಳ್ದಿದನೋ ॥ ೫೪ ॥

ವ॥ ಆಗಳ್ ನಿಜಗುರುವಿಯೋಗದಿಂ ಕೀರ್ತಿವರ್ಮ ನಾದಂ ರೋದನನಾನಳದದಹ್ಯಮಾನ ನಾವಿದರ್ಭಗಣಧರಸ್ವಾಮಿಗಳ್ ಬೋಧಿಸೆ(ಯುಂ) ರೋದನ(ವು)ಂಮಾಣ್ದು ತಾನುಂ ಗುರುನಿಯಾಮದಿಂ ಗುರುನಿರ್ವಾಣಭೂಮಿಯ ನಪೂರ್ವಾರ್ಚನೆಗಳಿಂ ದರ್ಚಿಸಿ ಕೃತಾರ್ಥ ನಪ್ಪೆ ನೆಂದು.

ಮ॥ ಸುರಪಂ ಮಾಡಿದ ನೂನದಿವ್ಯಪರಿನಿರ್ವಾಣೋದ್ಭವಕಲ್ಯಾಣ ವಿ ।
ಸ್ತರಪೂಜಾತಿಶಯಕ್ಕ ಮಿಂತಿದೆನಸುಂ ಮೇಲೆಂಬಿನಂ ಮಾಡಿದಂ ॥
ಪರಮಾರ್ಹತ್ವದಪೂಜೆಯಂ ಬಹುವಿಧದ್ರವ್ಯಾರ್ಚನಾನೀಕದಿಂ ।
ಧರಣೀವಿಶ್ರುತಕೀರ್ತಿ ಕೀರ್ತಿಧರಭೂಪಂ ಭವ್ಯರತ್ನಾರ್ಣವಂ ॥ ೫೫ ॥

ಚಂ॥ ನವರಸಮುಂ ನಿಮಿರ್ಚುವ ಬೆಡಂಗ ನಮರ್ಚುವ ದೋಷಮುಂ ತಳ ।
ರ್ಚುವ ಗುಣಮುಂ ಕರಿಲ್ವುವ ಮರ್ದಿಂಪ ನೊಡರ್ಚುವ ಬಂಧಮುಂ ತೊಡ ॥
ರ್ಚುವ ಕಿವಿಪೊಕ್ಕಲರ್ಚು ವೆಳೆನುಣ್ಪನೊಡರ್ಚುವ ಕಾವ್ಯಸತ್ಕಳಾ ।
ರ್ಣವ ಮೃಗಲಕ್ಷ್ಮಲಕ್ಷಣವಚೋವಧುವಂ ಋಧರೊಲ್ದು ವರ್ಣಿಕುಂ ॥ ೫೬ ॥

* ಶಲ್ಯವಿದೂರಬಂಕರನನಂಕದ ಮಾಚೆಯ ತಂದೆ ನಿತ್ಯವೂಂ ।
ಗಲ್ಯಸುಶೀಲಯುಕ್ತೆ ಮಹದೇವಿಯ ವಲ್ಲಭನೊಪ್ಪುವೆತ್ತ ಸಾ ॥
ಕಲ್ಯಕುಲಾಮೃತಾಂಬುನಿಧಿ ಸೋಮನ ಚಾಮನ ಸೂನು ಪೊಲ್ತ ಸಾ ।
ಕಲ್ಯಗುಣಾಸ್ಪದಂ ಬರೆದಪಂ ಬುಧವಾಧವ ನೀಪ್ರಬಂಧವಂ ॥ ೫೭ ॥

* ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊಕ್ಕುದು ಚೆಲ್ವು ಮಾತ್ರೆಯೊಳ್ ।
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂವಿಸರ್ಗದೂ ॥
ಳ್ಪೊಂದಿರಲಕ್ಕರಕ್ಕೆ ಬರೆವಂ ಚತುರರ್ ಪರಿವರ್ಣಿಸಲ್ ನವಿ ।
ಲ್ಗುಂದದ ಮಾದಿರಾಜವಿಬುಧಂ ವಿಬುಧೋತ್ಥಿತನವ್ಯಕಾವ್ಯವುಂ ॥ ೫೮ ॥

ಗದ್ಯ

ಇದು ಸಮಸ್ತಭುವನಸಂಸ್ತುತಜಿನಾಗಮಕುಮುದ್ವತೀ
ಚಾರುಚಂದ್ರಾಯಮಾಣಮಾನಿತಶ್ರೀಮದುಭಯಕವಿಕಮಳಗರ್ಭ
ಮುನಿಚಂದ್ರಪಂಡಿತದೇವ
ಸುವ್ಯಕ್ತಸೂಕ್ತಿಚಂದ್ರಿಕಾಪಾನವರಿವುಷ್ಪಮಾನಸಮರಾಳ
ಗುಣವರ್ಮನಿರ್ಮಿತಮಪ್ಪ
ಪುಷ್ಪದಂತ ಪುರಾಣದೊಳ್
ಪರಿನಿರ್ವಾಣ ಮಹಾಕಲ್ಯಾಣಾಭಿವರ್ಣನಂ
ಚತುರ್ದಶಾಶ್ವಾಸಂ
ಪುಷ್ಪದಂತಪುರಾಣಂ ಸಂಪೂರ್ಣಂ
ಮಂಗಳಮಹಾಶ್ರೀ

* ಈ ಎರಡುಪದ್ಯಗಳು ಮದ್ರಾಸ್ ಓರಿಯಂಟಲ್ ಲೈಬರಿಯಲ್ಲಿರುವ ತಾಳಪ್ರತಿಯಲ್ಲಿ ಮಾತ್ರವಿವೆ.

ಪರಿಶಿಷ್ಟಂ. ೧.

ಗುಣವರ್ಮವಿರಚಿತಂ

ಚಂದ್ರನಾಥಾಷ್ಟಕಂ

ಸ್ರ॥ ಶ್ರೀಪಾದಂ ಗೋಮಿನೀಭಂಗಿಗೆ ನವನಳಿನಶ್ರೀಮುಖಂ ಶ್ರವ್ಯದಿವ್ಯಾ ।
ಳಾಪಜ್ಯೋತ್ಸ್ನಾವಿಲಾಸ ಕ್ಕಮಲಹಿಮಕರಸ್ವಚ್ಛಶೋಭಂ ತ್ರಿಲೋಕೀ ॥
ರೂ[1][ಪಾದರ್ಶಕ್ಕ]ವಾತ್ಮಾಕೃತಿ ಶಿವಸುಖವಲ್ಲೀಪಿತಾನ ಕ್ಕರ್ಪರ್ವ ।
ದಾಪೂರ್ಣೈಶ್ವರ್ಯಮುಂ ಪೂಡೆಪುಗೆ ಸುಖಾವಾಪ್ತಿಯುಂ ಚಂದ್ರನಾಥಾ ॥ ೧ ॥

ಮಾಸ್ರ॥ ನೆನೆವಂದಾನಂದದಿಂ ತಣ್ಣನೆ ತಣಿದು ಜಿಗಿಲ್ಕುಂ ಮನಂ ಬಂದು ಕಂಡೆಂ ।
ದನಸುಂ ತಣ್ಪಿಂ ಕುಳಿರ್ಕೊಂಡಿಗು ಮುಮರ್ದಿನೊಳೆಬ್ಬಿಂತೆ (ಕಣ್‌ಬಣ್ಣಿ)ಪಂದಿಂ ॥
ಪಿನಲಂಪಂ ನೇವಿವಂತಗ್ಗಲಿ(ಸಿ)ನಲಿಗು ವಿಾಜಿಹ್ವೆ ಯೆಂದಂದು ನಿನ್ನಂ ।
ನೆನಿದುಂ ಕಂಡುಂ ಪೊಗಟ್ಟಿದ್ದಂ ಸುಖಿ[2]ಯೆನಿಸಿದವಂ ಧನ್ಯನೈ ಚಂದ್ರನಾಥಾ ॥ ೨ ॥

ನಿನಗಿಂದ್ರಂ ಪಂಚಕಲ್ಯಾಣಮು ನಿಸಗಿ ಮಹೈಶ್ವರ್ಯ ನಾದಂ ಕಡಲ್ ಪೆರಾ ।
ಲ್ವೊನಲಂ ಜನ್ಮಾಭಿಷೇಕಕ್ರಿಯೆಗೆ ಸಲಿಸಿ ಗಂಭೀರ ಮಾಯ್ತ್ತಿಪ್ರಪಂ ಮು ॥
ಜ್ಜನಲೀಲಾಪೀರ ಮಾಗಿರ್ದವಿಚಳೆ ಮೆನಿಸಿತ್ತೆಂದೊಡೈಶ್ವರ್ಯಗಾಂಭೀ ।
ರ್ಯನುತಸ್ಥೈರ್ಯಕ್ಕೆ ಲೋಕತ್ರಯದೊಳೆಡೆ ಯಡಾರ್ ನಿನ್ನವೋಲ್ ಚಂದ್ರನಾಥಾ ॥ ೩ ॥

ಸುದತೀಲೀಲಾಂಗಮುಂ ಸೋಂಕದ ನವಯುವತೀಸ್ನಿಗ್ಧಮುಗ್ಧಾಸ್ಯಮುಂ ನೋ ।
ಡದ ಕಾಂತಾಳಾಪಮುಂ ಕೇಳದ ವನಜಮುಖೀವಕ್ತ್ರಸೌರಭ್ಯಮುಂ ಕೊ ॥
ಳ್ಳಿದ ರಾಮಾರಮ್ಯಬಿಂಬಾಧರರಸಮು ನಡುತ್ತಿರ್ದಿಂಬ ದಕ್ಷೋಣಮೋಕ್ಷಾ ।
ಸ್ಪದಲಕ್ಷ್ಮೀಸಂಗಸೌಖ್ಯೋನ್ನತಿ ನಿನಗೆ ನಿಜಂ ದೇವರೊಳ್ ಚಂದ್ರನಾಥಾ ॥ ೪ ॥

ಹರಿಪೀಠಂ ಮೋಹಮಾತಂಗಮು ನಳರಿಸಿತೋ ಚಾಮರಂ ಕಾಮುದೀಪಾಂ ।
ಕುರಮುಂ ಬೀಸಿತ್ತೊ ಭಾಮಂಡಲ(ವಳು)ತಮುಪುಂ ತೂಳ್ದಿತೊ ಪುಂಡರೀಕಂ ॥
ಪುರಿದತ್ತೋ ಜನ್ಮಸಂತಾಪಮು ನಳಿಪಿಸಿತೋ ಶೋಕಮುಂ ತಳ್ತ ಶೋಕಂ ।
ಭರದಿಂ ದೆಂಬಂತೆ ಮೆಯ್ದೋಱುವು ನಿಜಸಭೆಯೊಳ್ ತದ್ಭಯಂ ಚಂದ್ರನಾಥಾ ॥ ೫ ॥

---

1 ಮೂಲದಲ್ಲಿ–ರೂಪಕರ್ಷಾಶವಾತ್ಮಾಕೃತಿ–ಎಂದುದು–ಇಲ್ಲಿ ವೃತ್ತಕ್ಕೆ ಬಂದಕ್ಷರವುಕಡಿಮೆಯಾಗಿರುವುದು. ಹಿಂದೆ ಮುಖಾದಿಗಳಿಗೆ ಬಂದೊಂದು ವಿಶೇಷಣವಿರುವುದು. ಆದುದರಿಂದ ಈ ಕ್ರಮಕ್ಕನುಗುಣವಾಗಿ—ಆತ್ಮಾಕೃತಿಗೂ ಆಕಾಶವೆಂಬ ವಿಶೇಷಣವಿರುವಂತೆ, ರೂಪಕರ್ಷಾ(ಕಾ)ಶವಾತ್ಮಾಕೃತಿ, (ಆಕಾಶಂ-ಸುತ್ತಲೂ ಚೆನ್ನಾಗಿಪ್ರಕಾಶಿಸತಕ್ಕ) ಎಂದೂ ತಿದ್ದಬಹುದು. ಪ್ರಕೃತದಲ್ಲಿ ರೂ[ಪಾದರ್ಶಕ್ಕ]ವಾತ್ಮಾಕೃತಿ ಎಂದು ತಿದ್ದಿದೆ. 2 ಯೆನಿಸದವಂ ಧನ್ಯನೇ ಚಂದ್ರನಾಥಾ.

ಮಾಸ್ರ॥ ಮೃಗತೃಷ್ಣಾಭೋಗಮಂ ತಿದ್ದಿದ ನಿಡುಮಡು ವೆಂದೆಯ್ದು ವಾಭೀಳಕಾಳೋ ।
ರಗನಂ ನೇವಾ(ಳ)ಹೆಂದೆತ್ತುವ ನಿಶಿತಕನತ್ಖಡ್ಗಮಂ ನೆಯ್ದಿಲೊಳ್ವಾ ॥
ಸಿಗ ಮೆಂದಾಂಪಂತೆ ನೀನಲ್ಲದ ಕುಮತಶತಭ್ರಾಂತರಂ ದೇವರೆಂದೋ ।
ಲಗಿಪೆಗ್ಗರ್ಗಾದ ಬೋಧಂ ನಗಿಸುವು ದಭವತ್ಪ್ರಾಪ್ತರಿಂ ಚಂದ್ರನಾಥಾ ॥ ೬ ॥

ಗಳಿತಂ (ಘಾ)ತಿವ್ರಜಂ ಪಿಂಗಿದ ಜವನಿಕೆ ವುಷೊಪ್ಪೀಲ್ಲಸದ್ದ್ವಷ್ಟಿ ವುಷ್ಪಾಂ ।
ಜಳಿ ದಿವ್ಯಶ್ರವ್ಯನಾದಂ ಸರಸಮಧುರಗೀತಸ್ವನಂ ದೇವಭೇರೀ ॥
ಕುಳನಾದಂ ಮಿಕ್ಕ ಧಕ್ಕಾರವ ಮೆನೆ ಭವದಾಸ್ಥಾನದೊಳ್ ರಂಜಿಕುಂ ಮುಂ ।
ಜುಳಮುಕ್ತಿಶ್ರೀವಧೂಸಂಗದೊಳಭಿನವಸಂಗೀತಕಂ ಚಂದ್ರನಾಥಾ ॥ ೭ ॥

ಸ್ಫುರಿತಶ್ರೀಪಾದ ಮುದ್ಯೋತಿಸೆ ಕಿಡೆ ತಮ ವಾಶಾಂಬರಶ್ರೀ ಪೊದಟಿಪ್ಪಾ ।
ಪ್ಪಿರೆ ಸತ್ಪಂದೋಹ ವಾರಾಜಿಸೆ ಕುವಲಯ ವಾನಂದಮುಂ ತಾಳ್ದೆ ಕಾವಾ ॥
ತುರಚಕ್ರಕ್ಕಾಗೆ ರಾಗಕ್ಷಯ ಮುಮೃತನಿಧಿಸ್ಫೂರ್ತಿ ಕೆಯ್ಗಣ್ಮೆ ನಿಚ್ಚಂ ।
ಧರಣೀಲೋಕಕ್ಕೆ ನಿನ್ನಿಂ ದ್ವಿಗುಣಿಸುವುದು ಚಂದ್ರೋದಯಂ ಚಂದ್ರನಾಥಾ ॥ ೮ ॥

ಬಹುವಿದ್ಯಾಮುಂತೆನಂ ಪಂಡಿತಮುನಿಪತಿಚಂದ್ರವ್ರತಿಶ್ರೀಪದಾಂಭೋ ।
ರುಹನೇವಾಸಂಗಭೃಂಗಂ ಕ್ಷಿತಿನುತಗುಣವರ್ಮಂ ವಚೋವಾಲೆಯಿಂ ದ ॥
ನ್ವಹ ಮಾದಂ ಪೂಜಿಸಲ್ ರಾಜಿಪ [ವದ]ನನಳಿಂ ಮಾಟಿಸ್ಕಿ ಭವ್ಯರ್ಗೆ ಸೌಖ್ಯಾ ।
ವಹಮುಂ ಕೊಲ್ಲಾಪುರಶ್ರೀತ್ರಿಭುವನತಿಳಕಾಲಂಕೃತಂ ಚಂದ್ರನಾಥಂ ॥ ೯ ॥

ಚಂದ್ರನಾಥಾಷ್ಟಕಂ
ಸಂಪೂರ್ಣಂ

ಪರಿಶಿಷ್ಟ ೨.

ಪದ್ಯಗಳ ಆದಿಯನ್ನು

ಅಕಾರಾದ್ಯನುಕ್ರಮದಲ್ಲಿ ತಿಳಿಸುವ ಪಟ್ಟಿಕೆ.

ಅ

ಪದ್ಯಗಳ ಆದಿ	ಆ. ಪ.
ಅಕಳಂಕಾಕೃತಿ	11-43
ಅಕ್ಕಟ ಖಳನಂ	1-54
ಅಗಲೆ ನಿಜೀಪ್ಸಿಚಕ್ರ	8-6
ಅಗವೆಲ್ಲಂ ನಗ	11-50
ಅಂಗಜ ನಿಭ	8-107
ಅಂಗ ಭವನಂಗ	3-87
ಅಂಗರುಚಿ	9-71
ಅಂಚೆಯು ನಡೆ	10-35
ಅಂಜನ ಮುಹ್ಲಿ	3-91
ಅಂಜಿಯುವುಂ	10-18
ಅಟವೀ ಸವಿೂಪ	6-17
ಅಡಪವುನತ್ತ್ಮ	13-96
ಅಡಿಗಿಕ್ಕಿವೆಟ್ಟಿ	3-26
ಅಡಿವೊದಲಿಂಗೆ	1-94
ಅಣಕವಿುದೇನೊ	7-33
ಅತನುಗುಣೋನ್ನತಂ	3-132
ಅತನುವುದ	9-3
ಅತನುಸಮರ್ಥ	2-97
ಅತಿ ನಿಸ್ಸಾರ	13-31
ಅತಿ ಲಾವಣ್ಯ	9-31
ಅತಿ ಶಯತಪದಿಂ	1-17
ಅತಿ ಶಾಂತಾತ್ಮಕ	15-4
ಅತಿ ಸೇವ್ಯದಿವ್ಯ	12-63
ಅತಿ ಸೌವ್ಯ	8-27
ಅತುಳಶ್ರೀ	10-74
ಅತುಳಸ್ವಚ್ಛಾಂಬು	11-11
ಅಂತವುರ	11-21
ಅಂತಸ್ತಾಪ	3-70
ಅಂತಂತೆನಡೆಂತು	10-43
ಅದನಾಳ್ವಂ	9-33
ಅದನೇವೇಳುಶ್ವಿನೊ	3-129
ಅದಱಬಹಿರುದ್ಯಾನ	9-20
ಅದಱಿರ್ಕೆಲ	10-79
ಅದಱಿಂದಂ	12-91
ಅದಱಿಶೊಡನೆ	2-34
ಅದಱಿಶೊಳ್ ನಾವುಾಜ್ಯ	2-96
ಅದಱಿಶೊಳ್‌ಸುರ	10-77
ಅದು ಗುಹ್ಯಕೋವನತ	2-33
ಅದು ಪೊಸವೊನ್ನ	2-93
ಅದು ಭುವನಕ್ಕೆ	13-104
ಅದು ಶರದ	10-72
ಅದುಸನ್ಮಾರ್ಗ	8-35
ಅದು ಸಲೆ	9-32
ಅಂದುಗೆಯು	3-96
ಅಂದೆವಿಶ್ವ	4-29
ಅಧಟಂವಿಟ್ಟುವ	13-71
ಅಧಟಂ	5-104
ಅಧಟನೊಳಂದು	5-62
ಅನತಕ್ಷತ್ರಿಯು	5-50
ಅನತರೊಳಂ	9-39
ಅನತೋರ್ವಿ	7-48
ಅನಲಂಕಾನನ	5-52
ಅನಿವಿಷಕಾಂತೆ	10-70
ಅನಿವಿಷದೇಹ	10-32
ಅನಿವಿಷರಾಜ	9-56
ಅನಿವೇಷ	8-105
ಅನಿವೇಷಾನಕ	13-81
ಅನಿಶಂ ಸ್ವಾತ್ಮ	1-2
ಅನುಗತಿಯಿಂ	14-42
ಅನುಗುಣವಾಗಿ	1-56
ಅನುಗುಣವಾಗೆ	1-39

ಅನುನಯದಿಂ	5-54
ಅನುಪಮಜೈನ	1-19
ಅನುಪಮ	14-52
ಅನುಪಮಸುಗಂಧಿ	3-49
ಅನುಪಾಂಶು	12-65
ಅನುಭವಿಸುವಜನ	5-88
ಅನುಭವಿಸುವಶಕಿ	9-68
ಅನುರಕ್ತೆ	9-42
ಅನುವಶವೃತ್ತಿ	3-71
ಅಪರಿಮಿತ	9-23
ಅಂಬರತಳ	6-28
ಅಭಿನವಸಂ	4-82
ಅಭಿಷವ	10-63
ಅಮರಪಟಹ	10-12
ಅಮರಶ್ರೇಣಿ	11-33
ಅಮರಸ್ತ್ರೀ	14-45
ಅಮರಾಧೀಶ್ವರ	8-104
ಅಮರಾನೀಕ	12-4
ಅಮರೀಬಂಧುರ	10-90
ಅಮರೆ ಮಡಿಲ್ಲು	6-14
ಅಮರ್ದಿನ	9-83
ಅಮರ್ದಿನ ಮಟಿಲೆ	8-2
ಅಮಳಕುಳ	7-39
ಅಮಳತೆಯ	12-76
ಅಮಳಮುಖೋಂದು	5-16
ಅಮಳಶ್ರೀ	2-3
ಅಮಳಾಂಗ	9-89
ಅಮಳಜಿನೋತ್ಸವ	10-48
ಅಮಿತೋದ್ಯ	5-75
ಅಮೃತಸ್ಯಂದ	5-113
ಅಮೃತಾರ್ಣವದೊಳ್	8-16
ಅಮೃತಾರ್ಣವಮನೆ	11-9
ಅಮೃತಾಶ್ರಯ	5-65
ಅಮೃತಾಹಾರ	12-75
ಅಮೃತೋದ್ಭವ	4-21
ಅರಗಿಳಿಯಾಗಿ	12-71
ಅರಗಿಳಿವಿಂಡು	14-23
ಅರಗಿಳಿವೆಣ್ಣ	4-18
ಅರಮನೆ ಮೂಗು	2-32
ಅರಮನೆಯೊಳಿತ್ತ	9-62
ಅರಮನೆವಾಗಿಲೊಳ್	3-98
ಅರ್ಹದ್ಬಲಿ	1-20
ಅರಲ ಸರಲ್ಗಡಾರ	2-27
ಅರಸನ ತೇಜ	9-47
ಅರಸೆನೆ ರಂಜ	8-112
ಅರಸಂ ಬಂದ	13-101
ಅರಿಹರಿಣಂಗಳೆಂ	9-37
ಅರುಣಮಣಿ	11-27
ಅರುಣಮಣಿಕಂಕಣ	9-88
ಅರುಣಾಧರ	8-58
ಅರ್ಘಿಗೆ ಮುನ್ನ	4-43
ಅರ್ಜುನನನಂತ	11-31
ಅಲರ್ವಸೆಯೊಳ್	2-46
ಅಲಸುವ ಮೆಯ್ಯ್	4-15
ಅಲ್ಲದೊಂದು	9-111
ಅಲ್ಲಿ ಬಹುಕುಸುಮ(ರಗಳೆ)	2-44
ಅವತಂಸಲಹ್ಮ	3-54
ಅವನಿಪತಿ	13-121
ಅವನೀಶಂ	13-73
ಅವನೆನಗಪಕಾರಂ	6-5
ಅವರ ವಿಳಾಸ	13-13
ಅವರೊ ನನೇಕ (ರಗಳೆ)	9-60
ಅವಲವಲೆನೆ	7-76
ಅವಿಕಳರಾಜ್ಯ	4-73
ಅವಿದೊಳಗೆ ಜಿನು	4-47
ಅವಿರಳವಾದು	4-25
ಅಂಶುಪ್ರಭ ರುದ್ಯೋತಿತ	13-12
ಅಷ್ಟಮಿಯಿಂದೆ	3-103
ಅಷ್ಟವಿಧಕರ್ಮ	7-6
ಅಷ್ಟಾರ್ಧಘಾತಿ	11-55
ಅಷ್ಟೋತ್ತರ	10-88
ಅಸವಾನೋಗ್ರ	7-78
ಅಸವಸದ	12-87
ಅಸುಗೆಯಕೆಂಪು	9-30
ಅಹಿಯಂತೆ	2-51
ಅಳರೆಲೆ	12-66
ಅಳವಡೆತನ್ನ	9-95
ಅಳಿಕುಳಕುಂತಳ	10-36

ಅಳಿಗಲರ್ಗೊಂಚ 2-45
ಅಳಿವುಾಲೆ 9-74
ಅಳಿಯಂಬೊಱಿ 1-70
ಅಳಿಯಿಂಶಕ್ರನ 12-48
ಅಟ್ಟುಪಿಂದ 6-13
ಅಟ್ಟಿಪಿಂದೆ 10-4

ಆ

ಆ ಕನ್ನಿಕೆಯಂ 7-42
ಆಕಾಶಕ್ಕುಚ್ಚ 11-32
ಆಕೆಗಳಿಂ ತುಱಿ 10-49
ಆಖಂಡಳಂ ಸಹ 12-29
ಆಗಳ್ ಪುರೋಹಿತ 3-104
ಆಗಳ್ ನೆಜ್ಜಿಗೆ 6-22
ಆಗುಣತುಂಗ 5-47
ಆಗುಳಿಸುವ ತಳ 12-84
ಆಚಾರಾಂಗ 1-16
ಆಜಂಪತಿಗಳ 12-10
ಆಡುವ ನಾಕನಾಯಕ 12-49
ಆಡುವರಂ ಕಂಡಾಡು 12-23
ಆತತವುದ 10-51
ಆತನ ದಿಗ್ವಿಯ 3-19
ಆತನ ನಿಖಿಳ 1-73
ಆದವುದು 8-21
ಆದರಿಸಿ 13-95
ಆ ದಿವಸಕ್ಕ 6-20
ಆವುದು ಕರ್ಮ 11-49
ಆ ದೊರೆಯ 7-46
ಆನತರಾಗಿ 5-53
ಆನಾಡೊರೂರ್ದಪ್ಪದ 2-12
ಆನಾಡೆಂಬ 9-19
ಆನೆಗಬ್ಬಿನಿಳಿಂಪ (ರಗಳೆ) 10-45
ಆ ಪುಷ್ಪಚಾಪ 12-111
ಆಪೃಥಿವೀಧರೇಂದ್ರ 1-93
ಆ ಮಂಡಪ 10-75
ಆಯುಂ ಶ್ರೀಯುಂ 8-63
ಆ ರಾಜನ ಪಕ್ಕದೆ 11-53
ಆ ರಾಜಭವನ 14-11
ಆರುಮುಸತ್ಯದೊಳ್ 7-12
ಆರೊಳರೀಮಹಾ 5-111
ಆರ್ಯನುತಂ 13-116
ಆಱುಡಿಗೊತ್ತುಗೊಟ್ಟು 14-26
ಆಲಲನಾಕದಂಬ 8-90
ಆವರಿಸುವ 12-19
ಆವಳುಮು ನುಱಿದು 13-57
ಆವಳೊ ರೂಪಿನಿಂ 9-107
ಆವಿರೆ ಯಿರೆ 13-94
ಆವಂಗಂ ಜಿತ 12-86
ಆ ಸತಿಯೊಳ್ 3-61
ಆ ಸತಿವಸ 7-81
ಆಹವದೊಳ 9-36
ಆ ಹೇಮಗಿರಿಯ 11-41
ಆ ಹ್ರಸವಿಳಾ 9-57
ಆಳಿ ನಿಜಾಸ್ಯ 5-72
ಆಂಕೆಯಗಂಡ 8-30

ಇ

ಇದನಾಱಿಂದವ 7-72
ಇದನಿನ್ನೊಂದ 7-60
ಇದನೇವೇಱಿಶ್ವಿನೊ 6-2
ಇದಿರೆಱ್ಱಿಂದ 13-103
ಇದಿರೆಱ್ಱಿದ್ದುಱ್ಕಿಱಿಶೊಳಪ್ಪ 6-31
ಇದು ತಳರ್ದತ್ತಿ 6-38
ಇದು ತಳರ್ವ 8-18
ಇದು ತೆಱಿದಿರ್ದ 2-64
ಇದುದಿವಿ 13-82
ಇದು ದೀಹಾರ 5-68
ಇದು ದೈವಾಯತ್ತ 3-101
ಇದು ಪೂವಲಿ 2-85
ಇದು ಮುಕ್ತಿ 11-5
ಇದು ಮೇಲ್ಕೊಂತೆ 2-7
ಇದು ರಾಗಾಂಗದ 13-26
ಇದು ವದನ 8-93
ಇದುವದನೇಂದು 9-109
ಇದು ವಿಪರೀತ 5-107
ಇದು ಸಾಂಧ್ಯ 8-102
ಇದು ಸಂತ್ರಾಸ 5-61
ಇದು ಸರ್ವೋರ್ವಿ 12-13
ಇದೆ ಪೋ ಕಂದರ್ಪನ 3-39
ಇನ ನೆನ್ನಾಸೆ 8-99

ಇನಿಯನಮನಮಂ ೫	3-32
ಇನಿಯನ ಮನೋಮುದೇಭ	3-35
ಇನಿಯಳ್	8-92
ಇನಿಯಂಮೆಲ್ಲನೆ	8-113
ಇನಿಸಿನಿಸಂ	8-103
ಇನ್ನೆವರ	10-21
ಇನ್ನೊಲ್ದ ಕನ್ನೆ	7-61
ಇರೆ ಯಿರೆ ಪಾವೆ	6-48
ಇರೆ ಜಂಬೂದ್ವೀಪ	1-91
ಇಲ್ಲದಗುಣ	1-56
ಇಲ್ಲದೊಡಗ್ಗ	3-33
ಇವುಮೊದಲಾಗಿರೆ	11-58
ಇಹಪರಲೋಕ	3-82
ಇಹಪರಸೌಖ್ಯ	1-9
ಇಂಗಡಲೊಳಗ	7-27
ಇಂತಿದು ಕಾಮು	12-25
ಇಂದಿವ್ಮೊಡ	9-66
ಇಂದ್ರ ಕರಕಳಿತ	11-30
ಈ	
ಈಚಾರುರೂಪ	5-91
ಈ ತನುವಲ್ಲಿ	3-85
ಈ ತೆಱದಿಂ	3-72
ಈನಗದ	10-59
ಈ ನಿಖಿಳಾಮರರ್ಗೆ	10-33
*ಈ ಪರಿಯೊಳ	9-83
ಈಕೆ ಮದಲೇಖೆ	7-55
ಈ ವಿಭು ಕಾಮು	12-90
ಉ	
ಉಗಿಯಲ್ಕುಂಕುಶ	5-27
ಉಡಿದರೆಮೆಲ್ದು	5-81
ಉಡಿಸುವ ವಿಚಿತ್ರ	9-81
ಉಡೆವಣಿಕಟ್ಟುವ	4-51
ಉದಧಯ	11-19
ಉದಯಾದ್ರಿ	11-61
ಉದಯಾದ್ರೀಂದ್ರಮು	13-24
ಉದರೋದ್ದೇಶ	4-5
ಉಪರಿಜ	8-85
ಉಪಶಮು	14-21
ಉರಜಲ್ಲಿಯ	12-34
ಉರುಬೋಧಾ	14-37
ಉಱಿದುದ್ವೃತ್ತ	5-51
ಉಲಿಯದಿರೀ	14-25
ಉಂಡೊಡೆ, ಕಿಡುವುದು	2-84
ಎ	
ಎಡವಕ್ಕದ	10-40
ಎಡಬಲನಲ್ಲದೆ	3-50
ಎಡೆಗೊಂಡಿರೆ	3-16
ಎಡೆ ನೆಱಿಯ	5-43
ಎಡೆವಱಿಯ	12-18
ಎಣಿಸುವೊಡಂ	3-131
ಎಣೆಯಾಗಿ	1-45
ಎನಗವುರ್ದಿಂಪಿನೊಳ್	2-48
ಎನಗೆನಗೀವ	1-79
ಎನಸು ಮಶೋಕ	9-16
ಎಸಸುಂ ನೀರ್	6-11
ಎನಿತಂಪದ	1-38
ಎನ್ನಯನಡಪಿದ	3-77
ಎನ್ನಯ ವಂಶ	4-39
ಎನ್ನಯ್ಯ ನೆನ್ನೆ	4-74
ಎಂಬಿವುಮೊವ	6-24
ಎಂಬೀಮೋಹದ	13-48
ಎವುಗೀಗೆ	1-6
ಎರಡನೆಯ	14-9
ಎರೆದರ್ಥಿ	9-35
ಎಱಗದ ತೀರ	13-6
ಎಱಗುಗುಮೆ	7-47
ಎಱವೆಸಸಾದೊಡೆ	11-8
ಎಲೆವೆಱಿಸು	5-84
ಎವಗಿನ್ನೆಂಜನ	13-97
ಎವೆಯಿಕ್ಕು	12-39
ಎಸಗಿದುದು	4-23
ಎನೆದಿರೆ ಮಿತ್ರ	4-97
ಎನೆವಭವನ	11-20
ಎಳನೀರ	2-17
ಎಳಬಿಂದು	9-103
ಎಳಮಾವಂ	12-81
ಎಳಮಾವಿನ	8-87
ಎಳವಿಂಜಂ	4-37

ಎಳಮಿಂಚುಂ	9-69
ಎಳಮಿಂಚಿನ	5-23
ಎಳಲತೆ	9-67
ಎಳಲತೆವನೆ	2-41
ಎಳವೆಯೊಳಂ	4-63
ಎಳವೆಱಿಸಿ	4-38
ಎಳೆಸಿ ಮನ	7-59
ಎಂತೋ ಕಾಂತೆಯ	3-55
ಎಂದಿನ ತೆಱಿನಲ್ಲ	3-65
ಎಂದು ನೃಪಂಗೆ	6-34
ಎಂದು ಪೇೞ್ದಿ	9-112
ಎಂದು ಸಮಸ್ತ	7-82
ಎಂದೋರಂತಿ	1-67
ಎತ್ತಿನಡೆಯ	8-19

ಏ

ಏತೊದಳೊ	1-88
ಏನೆಂಬುದೊಂದು	3-78
ಏಲಾನದಿ	1-30
ಏೞಿಸದಿಹ್ಪು	8-59
ಏೞಿಡಿಯಂ	13-85
ಏಂ ಗಳ ಬಾಯುಂ	7-62

ಒ

ಒಸೆದೀವಾರ್ತೆ	4-28
ಒಗೆದ ಪಯೋಧರ	9-76
ಒಡಲಂ ಸಂಸೃತಿ	9-7
ಒಡಲಂ ಸಂಸೃತಿ	13-33
ಒತ್ತಿದುವಿರ್ಕೆಲನ	3-37
ಒದಗಿದ ಸೌಖ್ಯ	3-117
ಒದವಿದ ಘೋರ	7-11
ಒದವಂಭವ್ಯ	10-2
ಒದವಿದಲೋಕ	4-6
ಒದವಿದಶಾಲಿ	2-20
ಒದವಿದ ಲಾವಣ್ಯ	3-28
ಒದವಿದನಾಥ	12-98
ಒದವಿ ಪೊದೞ್ದಿ	2-60
ಒದವಿಸಲಾರ್ತುದಲ್ಲಿ	6-15
ಒನಕೆಕೊನತ್ತುರ್	5-93
ಒಸಗೆವುರುಳೊಂಡು	12-22
ಒಸಗೆವುರುಳ್ಗೊಂಡಾಡುವ	4-35
ಒಸಗೆವಱಿಸಿ	4-79
ಒಸರದಿದೇಕೆ	3-69
ಒಸೆಪು ದಿಗಧೀಶ್ವರರ್	12-17
ಒಳಕೆಯ್ದುವು	3-31
ಒಳಪೊಕ್ಕೆಯ್ದಿ	2-39

ಓ

ಓತೊಡನಿರ್ಪ	6-47
ಓರಗೆಗಳವ್ಪ	12-55
ಓರಂತೆ ತಾ	5-98
ಓರಂತೆ ಮಜ್ಜನಂ	12-74
ಓರೊಂದರೊಳಗೆ	2-2
ಓಲಗದೊಳ್	3-94
ಓಲಗಶಾಲೆ	2-50
ಓವದೆ ತುಳಿದೇ	10-47
ಓವುಗೆವುನ್ನತಿಯಂ	1-14

ಕ

ಕಟಕಂಗಳಿಂ	8-56
ಕಟಸೂತ್ರ	12-30
ಕಡಲೊಳ್ ನೀರ್	11-15
ಕಡಲೊಳಗಿರ್ಪ	6-50
ಕಡಿತಲೆಯವ	8-45
ಕಡೆದು ಕಲಂಕಿ	11-35
ಕಡೆಯಿಕ್ಕೆಂಬುವ	12-102
ಕಣೆಯದಚಿಲ್ವು	9-45
ಕತೆ ಕಿೞಿದಾದೊಡಂ	1-43
ಕದನಕ್ಷೇತ್ರ	3-18
ಕದಪನದೇಕೆ	3-68
ಕನಕಚ್ಛಾಯೆ	1-10
ಕನಕವುರದ್ಧ	7-51
ಕನಕಾದ್ರಿಯ	5-2
ಕನಕಾಂಬುಜ	4-46
ಕಮನೀಯಂ	7-36
ಕಮಳವೃಂದ	2-86
ಕಮಳಾನಂದ	8-72
ಕಮಳಾರ್ಥಿ	13-58
ಕಮಳಾಶ್ರಯ	5-66
ಕಮಳಿನಿಯಂ	8-98

ಕರಗಿಸಿದುದು	5-44	ಕಾದಲರಂ	8-81
ಕರಗಿಸುವಂತೆ	2-25	ಕಾಯದು ಪುತ್ರ	13-45
ಕರಣಗ್ರಾಮ	14-31	ಕಾರುಣ್ಯಾಂಭೋನಿಧಿ	9-6
ಕರಣಾಂಗ	9-85	ಕಾಲಿಂದಿಯ	8-100
ಕರಮೆನೆದಿ	6-54	ಕಾಸಿನಕಂಬಿ	5-99
ಕರವಾಳಕಣೆಯ	4-61	ಕಾಳವ್ಯಾಳ	8-43
ಕರಿಗಳವಗಾಹ	6-12	ಕಾಳಾಗರು	10-91
ಕರಿಣೀಕುಂಜರ	6-21	ಕಿಡೆಕೈಶತೆ	4-16
ಕರಿಣೀ ವೇಷ್ಟಿತ	12-107	ಕಿಡೆಮಧ್ಯದ	4-3
ಕರಿದಂತಂ	5-102	ಕಿನ್ನರಗಾಣ	3-20
ಕರಿಯಮದ	8-37	ಕಿಱುವುವಗೇಣ	2-61
ಕರಿಯೂಥಂ	6-36	ಕುಚಕೋಕಂಗಳ್	8-57
ಕರಿ ರಿವು	12-15	ಕುಜವಲ್ಲೀ	10-3
ಕರಿ ವೃಂದಂ	7-69	ಕುಡುವವನಂ	1-69
ಕಱು ಕೊರ್ವಿ	5-76	ಕುತ್ತದಬಿತ್ತು	6-4
ಕಳಮುಕ್ಷೇತ್ರ	4-95	ಕುಮುದಂ ದೃಷ್ಟಿ	10-85
ಕಲಿಕಾಲವಶದೆ	1-31	ಕುಲಭೂಭೃದ್ಭವೆ	2-8
ಕಲುಷತೆಯಂ	4-89	ಕುವಳೆಯಬಂಧು	13-7
ಕವಿಗಮಕಿ	1-64	ಕುಶಳೆಮೆ ಮಾತುಲಂಗೆ	7-38
ಕವಿತಾಗೋಷ್ಠಿ	4-77	ಕೂಡೆ ಪವಿತ್ರ	11-51
ಕವಿದಿಸುವ	7-74	ಕೂಡೆ ವಿಗುರ್ವಿಸಿ	7-71
ಕವಿದುನಿಳಿಂಪ	11-13	ಕೂಡೆ ಸಮಸ್ತ	9-18
ಕಳಧೌತೋದ್ದಾಮ	7-4	ಕೂರ್ಮೆಯೊ	9-48
ಕಳನೂಪುರ	3-30	ಕೃತಮತಿಗಳ	7-50
ಕಳಮುವನಂ	2-16	ಕೃತಯುಗಚಕ್ರ	8-29
ಕಳಮುವನಕ್ಕೆ	9-14	ಕೃತ ಸದ್ಯಃ	5-28
ಕಳರುತಿಯಂ	2-38	ಕೃತಸಹಕಾರ	9-92
ಕಳಸಂ ಕನ್ನಡಿರಂಗ	2-73	ಕೃತಿಗಡ ಕೊಳ್ವಂ	1-68
ಕಳಶಂ ಕನ್ನಡಿ	10-86	ಕೃತಿಬಲೆಯಿಂ	1-71
ಕಳಶಂ ಪೆರ್ಮೊಲೆ	10.84	ಕೆವಱಿದ	4-32
ಕಳಸಂ.ಪೆರ್ಮೊಲೆ	5-32	ಕೆಲದಡಪವಳ್ಳಿ	3-105
ಕಳಹಂಸೀ	6-10	ಕೆಲರೋರೊರ್ವರೆ	11-18
ಕಳಾರುಂದ್ರಂ	8-13	ಕೆಲವಱಿಶೊಳೆ	12-47
ಕಳಿಕೆನನೆ	6-42	ಕೌತುಕಮೇಂ	4-64
ಕಳೆದುಂಮಣಿ	3-116	ಕಂಕರಿಯ ಸಿವಿರ	12-27
ಕಱಿಲ ನಱಿಲಂ	12-83	ಕಂದಂಗೆರಾಜ್ಯ	3.90
ಕಾಗೆಸವಿ ವಂತು	13 67	ಕಂದದ ಕುಂದದ	14-3
ಕಾಡಮೃಗದೊಡನೆ	5-103	ಕಾಂಚನಶೃಂಟಾ	10-66
ಕಾತರನನ್ಯ	12-88	ಕಾಂಚನಭಾಜನ	14-7

ಕೆಂಡದಮಟಿಶಿ 8-75
ಕೆಂದಳಿರೆನ್ನ 11-24
ಕೆಂದಾವರೆ 3-95
ಕೆಂದಾವರೆ 12-60
ಕೊಂಡಾಡದರಂ 1-58
ಕೊಂದೊಡೆ ಬಿಡ 1-55
ಕ್ರಮದಿಂ ಪೂಜಿಸುವಂ 11-56
ಕ್ರಮರಾಜ್ಯಲಹ್ಮಿ 15-61
ಕ್ರಮು ಸಿಂಹಾಸನ 8-40
ಕ್ಷಮೆಯಂ ತಾ 10-62
ಕ್ಷಿತಿಗೆಯ್ದಿನ್ನ 14-12
ಕ್ಷಿತಿಪನ ಮಾಡಿದ 3-81
ಕ್ಷಿತಿಯೊಳ್ 1-72
ಕ್ಷೋಣಿಯೊಳಿನ್ನಾರೆನೆ 4-40

ಖ

ಖರಕರತಾ 8-88
ಖರಕಿರಣ 14-28
ಖಳನಂಗುಣ 1-52

ಗ

ಗಗನಂತೀವಲ್ಕೆ 8-106
ಗಣನಾತೀತ 5-13
ಗತಗೌರವ 14-15
ಗತಬಲನಾಗಿ 13-35
ಗಲ್ಗಲನೆ ಪರಿ 11-36
ಗಳಿತಂಘಾತಿ ಪರಿ 7
ಗಾಡಿ ಕಡೆಗಣ್ಮೆ 5-30
ಗ್ರಾವಸಮೂಹಂ 2-10
ಗಿಡುಗಂಗಳೊ 14-20
ಗಿರಿಗಳ್ 8-9
ಗಿಳಿಗಳ 2-15
ಗಿಳಿಸೋವಂಗನೆ 2-18
ಗೀರ್ವಾಣ 9-50
ಗುಡಿತೋರಣ 12-101
ಗುಣಭದ್ರಸ್ವಾಮಿ 1-28
ಗುಣಮಿಲ್ಲದ 2-31
ಗುಣಮೇಱಿದ 3-11
ಗುರುಗಳ್ 12-12
ಗುರುಗಳ 13-70
ಗುರುಜನಕಂ 1-75
ಗುರುತರ 4-20
ಗುರುಧರ್ಮ 2-75
ಗುರುಪಾದಂ 10-65
ಗುರುಮುಖ 4-57
ಗೋತ್ರಾರಿ ಬೆಸ 12-54
ಗೌತಮ ಸುಧರ್ಮ 1-13
ಗೊಂದಣವೆಕ್ಕಣ 12-43

ಘ

ಘನಕೇಶಂ 4-68
ಘನ ಗಂಭೀರಸ್ವನಂ ಮೌಕ್ತಿಕ 12-108
ಘನಗಂಭೀರಸ್ವನಂಮುಂಗಳೆ 7-23
ಘನಘಂಟಾ 7-2
ಘನಚಂದ್ರೋದಯಾಬ್ಧಿ 10-7
ಘನಬಾಹಾ 7-21
ಘನಸಮಯ 9-38
ಘನಸಾರಘುಸೃಣ 14-2
ಘನಸಾರದ್ರವ 7-5
ಘನಸಂಭೋಗ 9-119

ಚ

ಚಕಿತಮೃಗಾಕ್ಷಿ 5-34
ಚಂಡಿಕರಂ 8-22
ಚತುರಾನನ 1-37
ಚತುರುಪಧಾ 3-63
ಚತುರಂಗುಲ 14-30
ಚಂದನಲತೆ 11-59
ಚಂದ್ರನ ಪಕ್ಕದ 12-6
ಚರರಜೋಪೆ 3-127
ಚಳನನಿತಂಬ 8-110
ಚಳಬಾಹಾ 11-10
ಚಳಮಾನೇ 12-112
ಚಾರುಚಾಮರ 10-87
ಚಾರುತಪೋವ್ರತ 13-53
ಚಿಂತಾಪರ 3-66
ಚಿಂತಿಪಸುಯ್ವೆ 13-38
ಚಿತ್ರಾಂಗಂ ಮಣಿ 6-30
ಚಿರಸಂಬದ್ಧ 4-41
ಚೆನ್ನೆಯರಂ 12-99

ಜ

ಜಗತೀಪಾಲರ	5-57
ಜಗತೀವಿಶ್ರುತ	10-29
ಜಗದಾಲೋಕ	9-46
ಜಗದೊಳ್	1-76
ಜಗಮೆಲ್ಲಂಗಂಗೆ	3-14
ಜಗಮೆಲ್ಲವೊಂದೆ	9-34
ಜನಕಾದೇಶ	4-80
ಜನಕಂ ವಿಶ್ರುತ	8-67
ಜನಪನಜಯ	8-10
ಜನನೀಲೋಚನ	4-44
ಜನಿಯಿಸೆನೀಂ	7-10
ಜನಪರಿತಾಪ	12-92
ಜನಹರ್ಷೋದಾರ	12-50
ಜಯಜಯ	11-4
ಜಯವುಂಕಂತುಗೆ	12-89
ಜಯರಾಮಾಂಗನೆ	10-78
ಜಲಧಿಯೊಳಿಪ್ಪ	2-91
ಜವದಿಂ ಸೌಪರ್ಣನಂ	5-10
ಜಳಜಭವಂ	8-119
ಜಳದೇವೀ	13-112
ಜಳ ಮೆನಿತಗ್ಗಲಿಸಿ	12-113
ಜಳವುಂಶೀತ	11-46
ಜಳರುಹ	10-46
ಜಳರೇಖಾ	13-44
ಜಳವಿಹಗೀಸಹಸ್ರ	9-24
ಜಿತಮದನ	6-32
ಜಿತರತಿ	3-60
ಜಿನತನು	11-60
ಜಿನಪರಮೇಷ್ಠಿ	1-7
ಜಿನವಸ್ವರ್ಗಾವತಾರ	9-52
ಜಿನಪೂಜಾನಂದ	12-35
ಜಿನಜನನಿಯ	9-75
ಜಿನ ನಿನ್ನ	11-57
ಜಿನನಿರ್ದ	10-17
ಜಿನನಂ	9-8
ಜಿನಭವನ	10-56
ಜಿನಮತಮಿಲ್ಲದ	13-23
ಜಿನಮಜ್ಜನಾಂಬು	11-37
ಜಿನಮಾತೃಗರ್ಭಂ	9-59
ಜಿನವರನಂ	10-27
ಜಿನವಾಕ್ಯಾ	8-96
ಜಿನಸಭೆ	10-83
ಜಿನಸವನ	11-39
ಜೊನ್ನದ ರಾತ್ರಿ	4-65

ಡ

ಡೋಳಾಕೇಳಿಯ	9-82

ತ

ತಡೆದಿರದೆಬ್ಬಿ	10-5
ತಣಿವಂತಿರೆ	1-60
ತಂತಮ್ಮವಾಹನ	10-81
ತನಗಧಿನಾಥ	4-50
ತನಗಹಮಿಕೆ	4-71
ತನಗೆ ಭವಾಂತರ	5-109
ತನಗೆನೆಯೆ	10-71
ತನಗೆಂದುರ್ವೀಶ್ವರಂ	4-76
ತನಗೆಪತಿ	4-11
ತನತುಪದ	14-14
ತನತುವಿಚಿತ್ರ	9-101
ತನುಜನಖಿಳಾರ್ಥ	3-92
ತನು ಪೆಂಪಿಂ	13-29
ತನುಬಡವಪ್ಪ	9-117
ತನುರೋಮಾಳಿ	9-116
ತಪನೀಯ ಶೈಲ	10-52
ತರಳಕಟಾಕ್ಷೆ	6-45
ತರಳತರತಾರ	8-84
ತರುಣತಮಾಳ	6-9
ತರುಣಾಂಶು	14-6
ತರುಣಿಯರ	7-31
ತರುಣೀಮೋಹನ	4-66
ತಲೆದೂಗನೆ	1-49
ತಲೆಯೊಳ್ ತಾಳ್ದುವ	10-20
ತಲೆವೊತ್ತೆ	3-56
ತವದಾಜ್ಞಾ ನಿಚಯ	14-33
ತವೆ ತಮುದೊಡ್ಡು	13-60
ತಳೆದು ನಿಜಾ	10-22
ತಳರ್ವವಿವಾನ	10-31

ತಾಱಿದ ಬಳ್ಳಿ	8-76
ತಾವರೆಯಲ್ಲದೆ	7-63
ತಾಳಪ್ರಪಂಚ	5-64
ತಿರುವಿಂಪೊಳೆಕಿದ	9-106
ತಿಳಕಮನಿಟ್ಟು	11-63
ತಿಳಿಗೊಳನಂ	4-53
ತಿಳಿಗೊಳದಂತೆ	5-25
ತನ್ನನಿಯೋಗದಿಂ	12-5
ತನ್ನನ್ನನಗುಣತಿ	7-49
ತನ್ನಯನೀಲ್ದೆ	9-99
ತೀರ್ಥಕರಂ	9-110
ತುಱುಗಿದ	5-85
ತುಱುಗಿತುರಂಗ	3-64
ತೆಗೆದತಿನಿಷ್ಠುರ	3-4
ತೆಱಿಪಂ ಪಾಱುತ್ತು	6-3
ತೊಟ್ಟನೆ ಬೀೞಿಸಿ	5-100
ತೊಡುವುಡುವ	5-22
ತೊಲತೊಲಗೊಪ್ಪಿ	6-26
ತೊಳಗುವ ಜಂಘೆ	11-22
ತೊಳಗುವ ತಾರಾತತಿ	4-34
ತೊಳಗುವ ನಕ್ಷತ್ರಂ	8-14
ತೊಗುವ ನಭ	1-48
ತೊಳಗುವ ಪೊನ್ನ	9-27
ತೊಳಪ ಕಪೋಲ	10-44
ತೋಳವೊದಲ್	7-30
ತುಂಗಘಟ	11-14
ತುಂಗತರಂಗಂ	2-68
ತುಂಗಹರಿನೀಳ	11-28
ತ್ರಿಜಗತ್ಕ್ಷೋಭಿ	13-77
ತ್ರಿದಶಗಣಾಧಿಪರ್	11-29
ತ್ರಿದಶರ್ ಬಾಜಿಪ	10-11
ತ್ರಿದಶಾಧೀಶನ	14-46

ಥ

ಥಳಥಳಿಪ	1-47

ದ

ದರಹಾಸಲತೆಯ	4-48
ದಮನನನಧ್ವ	8-5
ದಯೆವೃಕ್ಷ	13-55
ದಶಪೂರ್ವಿಗಳ್	1-15
ದಿನಪನಕೆಯ್ಯ	2-37
ದಿನಪಾಬ್ಜಾರ	8-64
ದಿನಲಕ್ಷ್ಮೆ	8-97
ದಿವಸಕರೋ	3-100
ದಿವಸಪವಸಾನ	13-21
ದಿವಿಜೇಂದ್ರ	12-114
ದಿವ್ಯಾಂಬರ	13-80
ದಸೆಯೊಳ್	8-25
ದೆಸೆಯಂನೋಡ	8-101
ದೇವನಿಜಪ್ರಸಾದಮೆ	6-7
ದೇವನಿರೋದಯ	12-93
ದೇವಭವದ್ವಿರೋಧಿ	3-126
ದೇವಭವತ್ಪ್ರತಾಪ	7-22
ದೇವಭವತ್ಪಟ್ಟ	7-56
ದೇವರ್ದಿಗ್ವಿಜಯಂ	3-130
ದೇವಿಯಬಗೆ	3-74
ದೇವೇಂದ್ರನ	12-31
ದೊರೆವೆತ್ತಷ್ಟಾರ್ಘ್ಯಮಂ	9-61
ದ್ರುತವಿಳಂಬಿತ	13-117
ದ್ವಿಗುಣಿಸಿದುವು	12-38
ದ್ವಿಗುಣಿಸೆ	2-70
ದ್ವಿರದಾರೋಹ	4-54

ಧ

ಧನದನ ಕಾಂತನ	2-87
ಧನವತಿಯಂ	9-51
ಧರಣಿಯ	4-9
ಧರಣೀಪಾಳಕ	9-108
ಧರಣೀವಲ್ಲಭ	7-37
ಧರಣೀಶಸ್ತ	8-120
ಧರೆಯಂ ಸ್ಥಿರೆ	3-2
ಧರೆಯೆಲ್ಲಂ	5-35
ಧರೆಯೊಳಗುಳ್ಳ	3-12
ಧರ್ಮಮೆ ದೇಹಿ	3-108
ಧೃತಕನಕ	13-105
ಧೃತಧರ್ಮ	2-29
ಧೃತವುಪ್ಪ	13-87
ಧೃತವುಕ್ತಾ	9-94
ಧ್ಯಾನಾಧೀನೈಕ	14-32

ನ	
ನಖದಿಂಕೆಱಿಂಕು	13-68
ನಗಕುಳ	8-73
ನಗರದ	12-16
ನಗರ ನಾಯಕ	2-90
ನಡಪಿದವುಲ್ಲೆ	3-79
ನಡುಮಡು	9-43
ನಡುವಗಲ	8-77
ನಡೆವಳಿಯೊಳ್	1-29
ನನಿಗಣ್	9-77
ನನಿಗಣಿನಾಂಟಿ	5-33
ನನೆಯುಂಬಂ	2-26
ನಮೋಜಿನಾಯ(ಸಂಸ್ಕೃತ)ಪು.	194
ನಯ ನಿಪುಣ	2-56
ನಯಮಿದು	5-49
ನಯವೊದಱಿಶಿ	3-7
ನಯವಾದಂ	1-4
ನಯವಿದರೆಲ್ಲ	9-17
ನರಕೋದ್ಯದ್ಗತಿ	13-39
ನರನಾರೀ	2-36
ನರದೇವ	13-11
ನರಪತಿಯುಂ	12-7
ನಱಿಸುಯ್ದ	9-65
ನವ ಗಂಧೋದಕ	11-47
ನವ ನೀಳಾಭರಣಾಂಶು	8-54
ನವಮಣಿಮ	9-97
ನವ ಮುಂದಾರ	13-66
ನವರತ್ನ ರಾಜಿ	1-92
ನವ ರತ್ನೋತ್ಕರ	2-58
ನವ ರತ್ನೋತ್ಪತ್ತಿ	9-12
ನವರಸವುಂ	14-55
ನವರಾಜಲಹ್ಮಿ	4-93
ನವರಾಜ್ಯನಳಿನ	5-17
ನವಸವರ್ಷಧಿ	4-81
ನವವರರತ್ನ	3-110
ನಳಿದೋಳ್ಗಳ್	7-29
ನಳಿನದಳದೊಳ್	2-43
ನಳಿನೀವನ	9-115
ನಾಕೇಶನಾಗಲೊಡನೆ	13-111
ನಾನಾಜನ	2-89
ನಾನಾಮುಂಗಳ	8-49
ನಾನಾವಸ್ತು	8-28
ನಾರಕತಿರ್ಯಙ್ನರ	13-56
ನಿಖಿಳಸರೋರುಹ	9-104
ನಿಜಗಜರಾಜ	6-56
ನಿಜಗಮನಕ್ಕೆ	9-98
ನಿಜದಿಂ ಮುದಮಳಿನಂ	7-65
ನಿಜದಿಂ ವುಳ್ಕೋಮು	12-45
ನಿಜಮುಖದೊಳ್	9-102
ನಿಜನೇನಾವತಿ	13-43
ನಿಟ್ಟಿಯಿದೇ	13-30
ನಿಡುದೋಳುರ್ವಿ	3-15
ನಿನಗಿನ್ನಕ್ಷಯ	14-13
ನಿನಗನುರೂವ	7-52
ನಿನಗಿಂದ್ರಂ	ವರಿ-3
ನಿನಗೇವೇಱಿಶ್ವಿ	7-40
ನಿನಗೊರ್ವ	6-6
ನಿನ್ನಂ ವ್ರತಿಬೋಧಿಪುದೆ	13-69
ನಿಮಗೆ ತನಯಂ	12-11
ನಿಮಿರ್ದೊಳ್ಗಣ್ಬೊಣರಿಂ	12-106
ನಿಮ್ಮಭುಜವ್ರತಾಪ	5-4
ನಿಯತಂ ಬಳಸಿದ	13-50
ನಿಯಮಿಸುವರ್	2-59
ನಿಯಮುದಿ	5-97
ನಿರವದ್ಯ ಶ್ರೀ	1-82
ನಿರುತಂ ನಾಲ್ಕನುಯೋಗ	1-83
ನಿರುತಂಶ್ರೀಗೆ	4-42
ನಿರುತಂತ್ವತ್ಪಿತೃ	6-16
ನಿರುತಂ ಶುದ್ಧಾಂತ	9-29
ನಿರುತಂಭಾ	10-13
ನಿರುತಂ ಷಡ್ದ್ರವ್ಯ	1-87
ನಿರುತಂ ಫಾಲ್ಗುಣ	9-113
ನಿರುಪಮಲೀಲೆ	8-42
ನಿರುವಮುನರ	1-26
ನಿರ್ಭರಜಲ	11-23
ನಿರ್ಮಿಸಿದ	7-7
ನಿಱಿದಲೆಯಿಂ	13-37
ನಿನದಮುಸಂಖ್ಯಾತ	1-90

ನಿಸದಂ ತನ್ನ	1-24
ನಿಳೆಯೆದ	9-114
ನೀಡಿರದೆ	2-55
ನೀನಾರ್ಗೆ ನಿನ್ನ	5-112
ನೀನೆ ಸಮಸ್ತ	12-94
ನುಡಿದುದೆ	1-18
ನುಡಿದಾವಮಾತಿನ	3-73
ನುತವೂರ್ಗಶಿರ	13-113
ನುತಶುಕ್ರ	10-26
ನುತ ಸುರವತಿ	10-80
ನೆಗಟ್ಟಿಮಹಾಲಯ	2-4
ನೆಗಟ್ಟಿನವದ್ಯ	2-54
ನೆಗಟ್ಟಿದ್ದಂಡತೆ	5-56
ನೆಗಟ್ಟಿಸ್ಮತ್ತ	4-85
ನೆಗಟ್ಟಿಸ್ಮಜ್ಜಳ	10-24
ನೆಗಟ್ಟಿನಗೆ	13-47
ನೆಗಟ್ಟಿದಿನಾ	8-7
ನೆಗೆದುವು	4-31
ನೆನೆಯಿಪು ದೆಯ್ದೆ	1-95
ನೆನೆವಂದಾನಂವ	ವರಿ-2
ನೆಲಸಿರ್ದ	12-2
ನೆಲೆವೊಲೆ	9-44
ನೆಲೆ ವೊಲೆಯಿಂ	4-75
ನೆರಪಲ್	5-6
ನೆರಿದೆಟ್ಟಿರ್ಪಿನಮುಂಡಳಂ	13-62
ನೆರೆವದಳೆ	2-83
ನೆರೆವಾದಂ ನಮು	4-24
ನೆಱಿಶಿಕರ್ಣಾಮೃತ	7-34
ನೆಱಿಶಿ ನೃಪತಿ	9-9
ನೆವದಿಂ ತೃಷ್ಣೆ	2-22
ನೊರೆವಾಲ	11-42
ನೋಡಿದೆವೆಸೀಗು	8-78
ನೋಡಿರೆ ಪೂರ್ವ	1-42
ನೋಡೆನ್ನೋರಗೆ	3-80
ನೋಡೆ ಸಮಸ್ತ	13-79
ನಂದನವನ	11-44
ನಿಂದೊಡೆಕರಿ	8-73
ಪ	
ಪಗಗೊಂಡಾಡದೆ	11-16
ಪಗೆ ನೆಯ್ದಿಲ್	6-40
ಪಗೆಯು ನುಟಿದಪ್ಪಿ	5-96
ಪಡಿಯಿಡೆ	13-100
ಪಡೆದುವೆನಮ್ಮುನ್ನತಿ	3-29
ಪಡೆದೊಡದೇನೊ	3-84
ಪಡೆನಡೆವಲ್ಲಿ	5-38
ಪಣೆಕಟ್ಟೊಳ್ವೀಲಿ	5-101
ಪತ್ತುಂಧರ್ಮ	14-16
ಪದಪಿನ	12-64
ಪದಮಿಡೆ	1-46
ಪದಮೆಪದ	1-62
ಪದವಿನ್ಯಾಸ	12-36
ಪದಿನಾಱನೆ	3-114
ಪದುಳಂನಿರ್ಝರ	10-53
ಪದಕೊರಲೊಳ್	8-114
ಪದೆದಷ್ಟಾಹ್ನಿಕ	3-113
ಪಪ್ಪವರ	9-105
ಪರಕಲಿಸಿ	4-45
ಪರಚಕ್ರ	5-11
ಪರನೃಪ	4-70
ಪರಮಗುರುವಂ	12-57
ಪರಮಗುಣ	13-52
ಪರಮಗುರು	12-97
ಪರಮಜಿನ	11-62
ಪರಮಜ್ಞಾನಿ	13-91
ಪರಮವ್ಯಾವೋಹ	13-115
ಪರಮಶ್ರೀ	10-61
ಪರಮಶ್ರೀ	7-8
ಪರಮಾಶೀರ್ವಾದನಾದಂ	7-18
ಪರಮೇಶ್ವರ	10-10
ಪರಮೇಷ್ಠಿಯಿ	13-64
ಪರಮೌದಾರಿಕ	13-14
ಪರವಾಚಾಳ	5-7
ಪರಹಿತದೊಳ್ನಯ	8-66
ಪರಹಿತದೊಳ್	1-80
ಪರಿಕಲಿತ	5-83
ಪರಿಚಯ	13-93
ಪರಿಚಾರಕ	10-82
ಪರಿಚಿತಜನ	13-76

ಪರಿಜನಕೆ	4-2	ಪುತ್ರಕಳತ್ರ	13-27
ಪರಿಜನಮುರ್ವೆ	12-110	ಪುದಿದಲ್ಲಲ್ಲಿ	10-41
ಪರಿಣತಿವಡೆದಂ	4-62	ಪುದಿದೆನೆ	5-63
ಪರಿತಾಪಚ್ಯುತಿ	6-55	ಪುನ್ನಾಗವಿರಾಜ	5-67
ಪರಿಪೂರ್ಣಚಂದ್ರ	3-120	ಪುರಜನವೂಗಳೊಂದಿ	8-50
ಪರಿಪೂರ್ಣೇಂದು	3-53	ಪುರದೊಳಗಿನ್ನುಂ	12-14
ಪರಿವಚ್ಛಿಂಬುವ	5-79	ಪುರಪೂರ್ವ	2-69
ಪರಿವಾರದ	4-12	ಪುರವರದ	2-72
ಪರಿವೃತತೋಯ	1-89	ಪುರಿ ಪುಂಡರೀಕಿಣೀ	8-60
ಪರಿವೃತರಾಜ	3-3	ಪುರುಜಿನವೀರ	1-84
ಪರಿವೇಷಂ	2-62	ಪುಳಕಂಕೆಯ್ಮಿಗೆ	13-118
ಪರಿವಿರಿಕಜ್ಜಲ	12-61	ಪೂಗದ ನವ	14-8
ಪೆರ್ಚಿಸಿದ	3-89	ಪೆಣದಬಣಂಬೆ	7-75
ಪಲಬರವರೋಧ	3-62	ಪೆಱಿಮೆಟ್ಟ	3-51
ಪಲರ ನದಿರ್ಪಿ	8-3	ಪೆಱಿಶಿಯಂ ಮುಸುಕು	9-79
ಪಲವುಂಕಣ್ಗಳಿನೆಯ್ದಿ	10-50	ಪೆಸರ ಗಜಂ	6-29
ಪವಣಿಸಿ	10-55	ಪೆಸರ ನರೇಂದ್ರ	8-36
ಪಶುಶಿಶು	7-77	ಪೇರುರಮೆಂಬ	8-52
ಪಸರಿಪ	10-9	ಪೊಗಸಿನ ಚಂದ್ರನ	3-67
ಪಸರಿಸಿದ	14-10	ಪೊಗೆವಗರುವ	14-5
ಪಸರಿಸಿದಕೃತಕ	8-94	ಪೊಡವಿಯೊಳಿಲ್ಲದ	13-90
ಪಸರಿಸುವ	5-40	ಪೊಡರ್ವತ್ಯುದ್ಧತ	5-3
ಪಸರಿಸೆಜಾದಿ	6-52	ಪೊನಲೊಳ್	11-38
ಪಸುರ್ಗರ್ಪ್ಪಿಂ	3-76	ಪೂನ್ನೊಱಿ	8-41
ಪಳಿಕಿನ	11-26	ಪೂಱಿವೊಂಬಿಲ	2-63
ಪಾಣಿತಳ	7-28	ಪೊಲೆ ಪಿಂಗದೆ	3-86
ಪಾಯ್ದೊಡೆ	5-77	ಪೊಸತಲರ್ದ	6-41
ಪಾವಕದಿಕ್ಕಿನಂತೆ	2-53	ಪೊಸಮುತ್ತಿನ	8-55
ಪಾಸುವಪಲ್ಲವಂ	13-119	ಪೊಸಮುತ್ತಿನ	2-81
ಪಾಳಿಸುತುಂ	5-58	ಪೊಸಸಿರಿ	5-106
ಪಿಡಿಪೇರಾನೆ	5-19	ಪೊಳೆವವ್ಯೂತ	8-69
ಪಿತೃಕೃತಕೃತ್ಯ	13-2	ಪೊಳೆವಲರ್ಗಣ್ಗಳುನ್ನತ	10-73
ಪಿರಿದುಂಜಿನ	1-44	ಪೊಂಬಿಲವಿಲಾಸಿ	10-42
ಪಿರಿದುಂದೇವೇಂದ್ರ	3-125	ಪೋಗದೆ ತಡೆ	8-116
ಪಿರಿದುಂ ಮು	5-42	ಪಂಚಮಜಲ	11-7
ಪಿರಿದುಂ ಬೀರಮನಾಡಿ	7-66	ಪಂಚಾಶ್ಚರ್ಯ	9-55
ಪುಟ್ಟದ ಯೋನಿ	13-41	ಪೊಂಗಳಸಂ	11-25
ಪುಟ್ಟಿಸಿದನದೇಕೆಯೊ	1-51	ಪ್ರಕಟಂ ಸುಕವಿ	1-61
ಪುತ್ತಿನ ಬಾಯ್ಗಳಿಂ	8-74	ಪ್ರಕಟಿಸಿದತ್ತು	5-21

ಪ್ರಕಟಿಸುವು	9-13
ಪ್ರಕಟಿಸೆ	10-6
ಪ್ರಕಟರ್ ನೀತಿ	13-89
ಪ್ರಜೆಗಳೆದೃಷ್ಟ್ಯೋಪಾದಕನ	3-10
ಪ್ರಜೆಯಂಪಾಲಿಸಿ	9-49
ಪ್ರಣತಕ್ಷತ್ರಿಯ	7-20
ಪ್ರಣತೇಂದ್ರಂ	12-109
ಪ್ರಣಿಹಿತ	2-67
ಪ್ರಣುತವನ	9-28
ಪ್ರಣುತಾಕೃತ್ರಿಮ	9-58
ಪ್ರಣುತೋದಾತ್ತ	4-10
ಪ್ರತಿಪಕ್ಷೋರ್ವೀಶ	7-24
ಪ್ರತಿಭೆಗೆ	13-54
ಪ್ರತ್ಯಾಸನ್ನದೆ	2-65
ಪ್ರತ್ಯುಪಕಾರ	6-33
ಪ್ರಮದವನಕ್ಕೆ	3-75
ಪ್ರವರಮನಃ	13-114
ಪ್ರವಿತತ	12-53
ಪ್ರಾಕಾರಂ	9-25
ಪ್ರಾಣತಕಲ್ಪ	9-10
ಪ್ರಿಯದಿಂ	13-16
ಬ	
ಬಗೆಗಿಡೆಮುಪ್ಪು	13-34
ಬಗಗೆ ಸುಖ	14-17
ಬಗೆ ತತ್ವಾರ್ಥ	1-5
ಬಗೆಯದಿದಿರ್ಚ	5-48
ಬಗೆಯಿಮಧುಪ	12-62
ಬಗೆ ವನದಾನ	13-109
ಬಡಗಣ ದೆಸೆ	10-50
ಬರಿಸಕ್ಕಂ	6-19
ಬರುತಿಂ	12-92
ಬರಿಪಂಬಾಜನೆ	4 59
ಬರೆವೊಡೆ	1-92
ಬಲಗೊಂಡ	9-2
ಬಲಂಗೊಂಡಂ	7-80
ಬಲಭರ	5-36
ಬಲವದ್ವ	9-26
ಬಲಿಕುಸುಮ	4-19
ಬಹುಕುಸುಮ	11-52
ಬಹುಜಲ್ಪಂ	12-95
ಬಹುತರ	10-54
ಬಹುಪಲ್ಯೋಪಮ	13-42
ಬಹುಲಬೃಭೇದ	12-26
ಬಹುವಿದ್ಯಾ	6-27
ಬಹುವಿಧ	12-72
ಬಹುವಿದ್ಯಾ	ಪರಿ-9
ಬಳರಿವುವ	12-42
ಬಳವಳಿ	3-34
ಬಳಸುವ	2-78
ಬಳಸಿದ	6-39
ಬಳಸಿದಬೆಳ್ಮುಗಿಲ್	13-108
ಬಳಸಿ ಚತುರ್ವಿಧಾಮರ	14-44
ಬಳದುದೊಭೂತಳಂ	5-46
ಬಳೆದುದೊಭೂತಳಂ	8-53
ಬಳೆವನುರಾಗ	7-54
ಬಱಿಯನುಱಿಯ	5-108
ಬಱಿಸಂದು	13-88
ಬಾಜಸೆ ತೂರ್ಯ	13-120
ಬಾಡುವ ಕೆಂದಳಿಕ್	3-40
ಬಾರಿಪನಿಮ್ಮ	7-35
ಬಾಲಕನ	3-99
ಬಾಲಮರಾಳ	3-97
ಬಾಲಾಶೋಕ	2-28
ಬಾಸಣಿಸಿ	5-20
ಬಾಳಕನಂ	12-9
ಬಿಗಿದೊಗೆದಾತ್ಮ	9-100
ಬಿಡದಿರ	13-98
ಬಿಡಿಸಿ ವಧೂ	13-75
ಬಿತ್ತರದಿ	10-25
ಬಿತ್ತರಮಾಗೆ	1-22
ಬಿತ್ತರಿಪ ಶಿಶಿರ	6-51
ಬಿದಿರಿದ	5-89
ಬಿನ್ನಪ ಮುವನೀ	4-27
ಬಿರಯಿಗಳೆ	2-79
ಬಿರಿಕಿನೊಳೊಯ್ಯನೆ	5-87
ಬಿಸುನಿತ್ತರ್	13-49
ಬಿಸುಪಂಬೀಱಿದು	13-84
ಬೆದಱಿದ	5-55

ಬೆದಱಿದುದಭ್ರ	5-8
ಬೆನ್ನಂ ಸೋರ್ಮಡಿ	8-86
ಬೆಳತಿಗೆಗಣ್ಣ	5-24
ಬೆಳೆದುಪೊದಲ್ದಿ	4-94
ಬೇನೆಯಿನಹಿ	5-82
ಬೇರದಿನರ್ಕ	13-22
ಬೇರ್ವರಿವ	11-3
ಬಂದಪ ನೆತ್ತಿ	7-67
ಬಂದು ನೃಪ	7-43
ಬಂಧುರಮಣಿ	13 86
ಬಂಧುರಸವನೋತ್ಸವ	11-48
ಬಾಂಪೊಱಿ	2-71
ಬಿಂದುವಿನೊಂದು	14-58
ಭ	
ಭಗವನ್ಮಜ್ಜನ	11-12
ಭರದಿಂದುರ್ವಿದ	5-74
ಭರದಿಂ ಭೋಂಕನೆ	5-37
ಭರದಿಂಶೇಷನ	8-34
ಭರದಿಂ ಶೇಷನ	5-39
ಭವಭಾದೊಳ್	3-124
ಭಾವಿಸೆಚಿತ್ರ	1-59
ಭಾವೆ ನಿಜಾತ್ಮಜಂ	4-7
ಭಾವದೊಳೆ	14 36
ಭಾವಂಗಳ	12-32
ಭಾಸುರ ನಾಗ	5-60
ಭಾಸ್ವರಭಕ್ತಿ	10-19
ಭಾಳಕಪೋಳ	10-44
ಭುವನ ತ್ರಯ	12-8
ಭುವನದ ಪಾವ	12-59
ಭುವನದರಮಣೀ	2-35
ಭುವನನುತ	4-84
ಭುವನಾಭೋಗ	12-3
ಭೂತಬಲಿ	1-21
ಭೂತಭವದ್ಭಾವಿ	1-33
ಭೂಪತಿ ತಳೆದಂ	8-62
ಭೂಪತಿತ	8-70
ಭೂಪ ಶಿಖಂಡಿ	5-114
ಭೂರಮಣಿಯ	9-22
ಭೂವರನಪ್ಪ	13-8
ಭೂಷಾಂಶು	10-64
ಭ್ರಮರಹಿತಂ	14-4
ಭ್ರಮರಹಿತಂ	9.40
ಭ್ರಮೆಗೊಂಡು	12-41
ಮ	
ಮಚ್ಚುಮುಳಿಸು	12-52
ಮಡದಿಗೆ	9-87
ಮಡಿಯಿಂಮಡಿ	2-13
ಮಣಿಯದೆ	5-12
ಮಣಿಯದೆರಾಜ್ಯ	13-74
ಮಣಿಯಂತೇರಂಜಿಪಂ	1-35
ಮತ್ತಗಜಕುಂಭ	8-91
ಮತ್ತಿನಬಿಱಿನುಡಿ	7-58
ಮದಗಜದಂತ	5-92
ಮದಧಾರಾ	5-9
ಮದನನಕಟ್ಟಿದ	3-36
ಮದನನ ದಿಗ್ವಿಜಯ	3-57
ಮದವತ್ಸಿಂಹ	7-79
ಮದನಾರಾತಿಯ	14-48
ಮನದನುನಯದಿಂ	14-53
ಮನ ಮೆಳಸಿದಾ	4-55
ಮನವೊಲ್ದಾನಿರೆ	8-117
ಮನವೊಸೆದು	4-69
ಮನವೊಸೆದುಗೂಢ	14-27
ಮನಸಿಜನ	2-76
ಮನಸಿಜನರ್ಚಿಸಿ	3-47
ಮನಸಿಜಸಿದ್ಧನ	3-38
ಮನ್ನಿಸದೆನ್ನ	7-68
ಮರಗೊಂಬಿಂದ	5-86
ಮರಿಚವ್ಯಾಕೀರ್ಣ	5-69
ಮಲಯಜದಣ್ಪು	3-118
ಮಲಯಜಕುಂಕುಮ	11-45
ಮಸಕಂಗುಂದೆ	8-23
ಮಸುಮಸುಳ	6.37
ಮಹಿವಾಬ್ಧಿ	14-51
ಮಾಗಧ ಮಂಗಳ	8-24
ಮಾಣ್ಬಕ್ಕನೆ ನೀನ	8-115
ಮಾದೇವಿಪಟ್ಟ	7-45
ಮಾಳಿಭೃಂಗ	9-96

ಮಿತ್ರಸಮಾಗಮ	13-59
ಮಿಜುಪಲರ್ಗೊಂಚಲಿ ನೊಪ್ಪುವ	9-80
ಮಿಸುಗುವ	8-53
ಮುಗಿಲಬ್ಬೆ	2-66
ಮುಗಿಲೊಡ್ಡಿಂ	14-47
ಮುಗ್ಧಜನ	11-40
ಮುಚ್ಚಮುಳಿಸಿ	12-52
ಮುಡಿಬಿಟ್ಟು	5-31
ಮುತ್ತಿನಬಿಂಬದ	10-23
ಮುದದಿಂಯೂಗ	8-29
ಮುನಿದಿನಿ	5-73
ಮುನಿದು ತವೆ	8-12
ಮುನಿಪನ ಪರಮೌದಾರಿಕ	14-29
ಮುನಿರಾಜಕ್ರಮು	13-123
ಮುರಹರನಂತೆ	8-89
ಮುಳಿಯದೆಯುಂ	7-14
ಮುಳಿವುಬಿವ	10-39
ಮುಳಿ ವೊಸೆವನ್ಯ	7-15
ಮೂಡಿದ ವೊಡವಿ	3-115
ಮೃಗಧರನಿಂತು	2-6
ಮೃಗನೇತ್ರೆ	3-27
ಮೃಗಭೊಕುಂಕುಮು	3-58
ಮೃಗಮುದದ	4-33
ಮೃಗತೃಷ್ಣಾ	ವರಿ-6
ಮೃದುತಳ	5-94
ಮೃದುವದ	1-40
ಮೃದುಭಾವ	13-5
ಮೆಚ್ಚಿಜಿನ ಜನ್ಮ	10-60
ಮೆಚ್ಚಿಯು ಮೇನೊ	1-50
ಮೆಟ್ಟೆ ದೊಡಕ್ಕು	12-67
ಮೇಖಳೆಯಿಂದತನು	9-75
ಮೇನಕೆರಂಭೆ	2-77
ಮೇಲೆತ್ತಿವುಹಾ	8-16
ಮೊದಲೊಳ್ತೀರ್ಥ	7-3
ಮೊದಲೊಳ್ ಕೊರಿಸಿ	8-82
ಮೊಲಿಗುವ	8-44
ಮೋಹನಲಕ್ಷಣ	3-52
ಮುಂಗಳಗರ್ಭ	9-90
ಮುಂಗಳಗಾಯಿಪಾ	3-121
ಮುಂಗಳ ತೂರ್ಯರವಂ	8-8
ಮುಂಗಳ ತೂರ್ಯಕೋಟಿ	8-95
ಮುಂಗಳತೂರ್ಯ	11-2
ಮುಂಗಳ ಜಳಪೂರ್ಣ	10-89
ಮುಂಗಳಮುಂಡನ	12-104
ಮುಂದಾನಿಲ	3-123
ಮುಂದರದೆ	13-78
ಮುಂನಿಸದೆನ್ನ	7-68
ಮೂಂದಿಸಿ ತಮುಮುಂ	1-25

ಯ

ಯೂವಿನಿಯಂತೆ	13-83
ಯುವತಿಗೆ	9-72
ಯುವತಿ ತತ	9-84
ಯುವತಿಯು ನಗೆ	3-44
ಯುವತೀ ನಿರ್ಮಾಣ	3-23
ಯುವರಾಜಕಂಠಿಕಾ	4-83
ಯುವರಾಜಂ	514

ರ

ರಕ್ಕೆವಣಿ	4-49
ರಚಿತರುಚಿ	12-28
ರತಿವತಿಯುಂ	8-61
ರತಿಪದದಂತೆ	1-66
ರತಿಪೊರೆದ	12-103
ರತಿಯಿಂ ನೌಂದಯರ್	3-25
ರತಿರಾಗಾಮೃತ	3-119
ರಥಮುಂ ವಾರ್ಥ್ಯವಕಂಠ	6.49
ರದನಂಗಳೋಳಿಯಿಂ	3-45
ರಮಣಿಗೆ	9-70
ರಸಮಯಮುಂ	1-57
ರಸವ್ಯತ್ಯಭಿ	1-41
ರಸಿಕರ್	12-51
ರಸೆಯಂಪೊಕ್ಕುಬಿ	3-128
ರಾಗವಿದೊರೆ	12-20
ರಾಗಿ ಮುಖೀಂದು	2-21
ರಾಣೀವಾಸ	7-32
ರಿವುರಾಜಮಂಡಳ	3.8
ರೋಚಿಸೆ ನಾನಾ	2146
ರೋಗಿಗೆದೇವ	7-13

ರಂಗತ್ಪಿಂಗಳ	5-70
ರಂಜಿತಮಧು	8-83
ಲ	
ಲತಿಕಾಪಲ್ಲವ	2-30
ಲಪನೇಂದು	7-41
ಲಲನೆಯಕರಜಂ	2-94
ಲಲನೆಯರ	3-42
ಲಲಿತಶ್ವೇತಾತಪತ್ರಂ	7-19
ಲಲಿತಾಂಗದ	2-19
ಲಲಿತಾಂತಃಪುರ	8-26
ಲಲಿತೋತ್ತುಂಗ	8-47
ಲಳನಾಥಮಿಲ್ಲ	8-108
ಲಳಿತವಿಳಾಸ	7-57
ಲಾವಣ್ಯಾಮೃತ	3-48
ಲಿಪಿಶಬ್ದ	4-58
ಲೀಳೆಯೊಳೆ	13-99
ಲೋಕೈಕಮಿತ್ರ	5-41
ಲೋಲತಯಂ	10-67
ಲಂಚಂ ಕವರ್ತೆ	2-5
ವ	
ವದನಮತಿ	1-32
ವದನೇಂದು	9-64
ವದನೋಗ್ರಸ್ವ	5-71
ವದನಂ ಗೆಲವಿಂ	3-46
ವನಚರ ರೆಚ್ಚು	5-95
ವನಜಾತಾನನೆ	8-111
ವನದುರ್ಗ	11-22
ವನದೇವತೆ	6-43
ವನದೇವಿಯ	13-102
ವನದೊಳ್ ನೆಟ್ಟನೆ	6-25
ವನದೊಳೆ	13-18
ವನಮಾಲಾವಿಳಿತಂ	8-80
ವನಮಾಲೆ ವನಕ್ರೀಡೆ	3-59
ವನಮಿರ್ದುದು	8-79
ವನಮೃಗಕೋಟಿ	5-80
ವನರಾಕಿಯೊಳಗೆ	9-21
ವನಲಹ್ಮಿಯ	2-47
ವನವಲ್ಲೀಲಾಸ್ಯ	2-24
ವನಿತಾನೂಪುರ	8-109
ವನಿತೆಯತನು	4-14
ವನಿತೆವಿಳಾಸ	9-93
*ವರಕಾದಂಬಿನಿ	9-*55
ವರಗುರುತ	4-56
ವರವಂಚಾಚಾರ	1-3
ವರವದ್ಯಾದಿ	11-6
ವರಭೂಷಾ	11-65
ವರ ವಕ್ಷಾರಮಹೀ	2-9
ವರವೇಲಿತಟ್ಟ	6-23
ವರ ವೀರಸೇನ	1-27
ವರ್ತಿವ ಬೃಂಹಿತಂ	2-57
ವಲ್ಲಭಯಂತ್ರ	2 88
ವಸನಂ ಮೇಖಳೆ	4-26
ವಸುಧಾಗಗನ	12-40
ವಸುಧೆಯೊಳೆಲ್ಲಿದ್ದ	1-77
ವಸುವಂ ಸನ್ಮಾರ್ಗ	3-9
ವಾಸವ ಗಜ	10-68
ವಿಕ್ರಮ ಮತ್ಸರ	7-26
ವಿತರಣ ಲಹ್ಮೆ	3-13
ವಿದಳಿತಕಂಜ	2-11
ವಿಧುವಿಂದಂ	3-122
ವಿನತೋದ್ಯತ್ಫಳ	10-57
ವಿನಯಂಗಳಿಂದವೆ	4-72
ವಿನಯಂ ರೂಪು	13-9
ವಿಪುಳಜಳ	4-96
ವಿಭುದಾನಲಾಭ	14-38
ವಿಭುಲೋಕಂ	12-37
ವಿರಹಭರೋತ್ಕಂರ	2-82
ವಿಲಸತ್ಪುಷ್ಕರ	5-15
ವಿಲಸದ್ಭೂ	5-18
ವಿವಿಧ ಕಳಾ	1-65
ವಿವಿಧಾತೋದ್ದ	4-13
ವಿಶದೋತ್ತಾಳ	13-106
ವಿಷದಿಂಕೊಲ್ವ	1-53
ವಿಷಯ ವಿಲೀನ	1-34
ವಿಸರ ನ್ಮೌಕ್ತಿಕ	5-26
ವಿಸ್ಮಯಮೆಂತೆಂತೆ	3-107
ವಿಹಗಮುಳಿಂ	2-42

ವಿಹಿತಂ ಕ್ಷತ್ರಿಯ	5-5
ವಿಳಸದನಂತ	2-52
ವಿಳಸದ್ಗೀತ	4-30
ವಿಳಸನ್ನಿರ್ಝರ	10-*53
ವಿಳಸನ್ನಿತ್ಯೋದ್ಯ	4-22
ವಿಳಸತ್ಪಾಂಡು	10-58
ವಿಳಸನ್ಮಜ್ಜನ	4-67
ವಿಳಸಿತ ಚಂದ್ರಾಲೋಕಂ	8-15
ವಿಳಸಿತವಿಯತ್ತಳ	7-70
ವ್ಯೋಮಂ ಚಿತ್ರಾತಪ	10-8
ವ್ರತಮಂ ಕೊಂಡೆಲೆಬೊತೆ	13-51
ವಂದಿಸುತುಂ	5-59
ವಂದಿಪ ನಿಂದಿಪ	12-85
ವ್ರತವೆನಿತೊಳವನಿತು	3-112

ಶ

ಶತಮುಖನನುಮತ	9-53
ಶತಮುಖನನುಮತ	10-15
ಶತಮುಖನನುಮತಾ	12-33
ಶತಮುಖನಿಲ್ಲ	8-51
ಶತಮುಖನುಮುಮರಿ	12-44
ಶತ್ರುಕ್ಷತ್ರಿಯ	8-38
ಶಯ್ಯಾಸದನ	8-20
ಶರಣಾಯಾತರ್ಕಳೆಂ	8-4
ಶರದದ	4-92
ಶರದೊಳಾದ	6 35
ಶರದಂಗನೆ	4-90
ಶರಧಿಯರತ್ನ	4-91
ಶರಭ ಮಿದಿರ್ದ	5-78
ಶರಭಂಗಳ್	14-19
ಶಲ್ಯವಿದೂರ	14-56
ಶಾರದನೀರದ	13-72
ಶಾಲಿಗಳಂ	2-14
ಶೀತವಾತ	12-80
ಶೃಂಗಾರಾಬ್ಧಿ	3 24
ಶ್ರೀಕನಕ(ರಗಳೆ)	9-5
ಶ್ರೀಕಾಂತೆ ತನ್ನುರ	3-1
ಶ್ರೀಕೀರ್ತಿವರ	13-15
ಶ್ರೀಗಜಯ	5-1
ಶ್ರೀಜಯರಾಮೆ	10-1
ಶ್ರೀಜಯಲಕ್ಷ್ಮೀ	8-1
ಶ್ರೀಜಿನಪತಿ	7-1
ಶ್ರೀಜಿನಪದ	4-1
ಶ್ರೀಧರನೆನಿ	3 22
ಶ್ರೀನಿಧಿಮಹಿ	2-1
ಶ್ರೀನಿರತಿಶಯ	9-1
ಶ್ರೀನೀಂ ಪುರವಬ್ಧಿ	2-74
ಶ್ರೀಪತಿ ಜನಪತಿ	7-53
ಶ್ರೀವದವನೀವ	14-1
ಶ್ರೀಪಾದಂ	ಪರಿ-1
ಶ್ರೀವೃಥುಳೈಶ್ವರ್ಯ	12-1
ಶ್ರೀ ಪೌಲೋಮಿಶ	1-1
ಶ್ರೀಪಾದಂ	ವರಿ-1
ಶ್ರೀಮತ್ಪ್ರಸಾದ	14-49
ಶ್ರೀಯುತಶಾಂತಿ	1-78
ಶ್ರೀರಮಣೀ	12-100
ಶ್ರೀರಾಜ್ಯ ಲಕ್ಷ್ಮಿ	13-1
ಶ್ರೀವಧುಗಿತ್ತು	7-9
ಶ್ರೀ ವಿದ್ಯಾಧರ	6-1
ಶ್ರೀ ವೃಷ್ಣಸ್ವಸ್ತಿಕ	12-79
ಶ್ರೀ ಸಕಳ ಮಂಗಳಾನಕ	10-1
ಶ್ರುತಮೀವಿಯ	9-86
ಶ್ವಸಿತವಕಂವು	2-80
ಶ್ವೇತದ್ವೀಪ	13-25

ಸ

ಸಕಳಜಗ ಮಿಂದೆ	10-28
ಸಕಳಜನ್ಮಿಕ	1-74
ಸಕಳಜ್ಞಾನ	9-4
ಸಕಳ ಪ್ರಾಣಿ	7-17
ಸಕಳವ್ಯಾಕರಣ	12-69
ಸಕಳೋದ್ಯಾನ	9-15
ಸಗರಂ	8-71*
ಸತತ ಮಕಳಂಕ	1-23
ಸತತಮನಂತ	14-34
ಸತಿಯ ಕುಚ	9-63
ಸತ್ಯಂ ಸಾತ್ವಿಕ	3-6
ಸದಮಲಬೋಧನಾ	13-107
ಸದಮಳಬೋಧ	7-16
ಸದಮಳಚಂದ್ರ	11-17

ಸದಯೂರತ್ನ	9-11
ಸನ್ನುತಸಿದ್ಧ	14 35
ಸಮುದಜಯ	8-48
ಸಮುದಮಯೂರ	12-73
ಸಮುದಾರಾತಿಗಳಂ	3-21
ಸಮುದಾರಾತಿಜಯೋತ್ಸುಕ	4 87
ಸಮುನಿಸುವ	13-32
ಸಮುಸಂದಾತ್ಮ	12-96
ಸಮುಸಂದು	13-46
ಸಮುಸಂದೋದದೆ	12-68
ಸಮುದೀರ್ಣ	8 31
ಸರ್ವಕಳಾ	3-83
ಸಲೆ ನಿಲೆ ಮಾವು	2-23
ಸವಿಥಂದೂರಂ	14-40
ಸಹಜಂ ಮುನ್ನಮೆ	13-65
ಸಹಪಾಂಸು	4-52
ಸಾಮಜಮಂದ	9-41
ಸಾಮಜಸಂಕುಲಂ	6-8
ಸಾಲದೆ ನೋಟದಿಂ	5-29
ಸಾಸಿರದೆಂಟನ್ವರ್ಥ	14-50
ಸಾಸಿರದೈತ್ಯಾಧಿಪ	8 68
ಸಿರಿಯುಂ	13-19
ಸುಕೃತಂ ಶಾಂತ	1-86
ಸುಮೆರ್ದಲೆ	5-90
ಸುತಜನ್ಮೋತ್ಸವ	3-106
ಸುತರಿಲ್ಲದ	3-102
ಸುತ್ತಿದಚಿತ್ರ	4-78
ಸುದತಿಳುನ	4-17
ಸುದತಿಯಬೆರಲಿಂ	3-41
ಸುದತಿಯರಾಸ್ಯ	12-20
ಸುದತಿಯರಾನನಾಂಬುಜ	13-36
ಸುದತೀ ಲೀಲಾಂಗ	ಪರಿ-4
ಸುರಕುಜ	4-8
ಸುರಗತಿ	13-40
ಸುರತೂರ್ಯಧ್ವಾನ	12-105
ಸುರಧೇನುವೊಸೆದು	13 122
ಸುರನರ	3-43
ಸುರನೇತ್ರ	11-64
ಸುರಪತಿ	14-43
ಸುರಪಂ	14-54
ಸುರಭಿಯು	3-109
ಸುರಲೋಕಸುರಭಿ	13-63
ಸುರಲೋಕೋದ್ಗತ	9-120
ಸುರವನಿತಾ	12-21
ಸುರವಿದ್ಯಾಧರ	6-18
ಸುರಿದುದು	14-41
ಸುರಿಯುತ್ತಿರ್ದವುವೀಗಳ್	9-54
ಸುರುಚಿರ	10-37
ಸುವಿದಿತ	3-88
ಸುವಿಧಿಕುಮಾರ	12-70
ಸುಸ್ವಾದು	12-77
ಸೆಜ್ಜೆವಳರ್	12-56
ಸೆಗಳಿಕೆ	6-53
ಸೆಳೆಬಿಸನಾಳ	9 91
ಸೊಗಯಿವ	2-95
ಸೊಗಯಿವಕೇತಕೀ	4-88
ಸೊಂಪಿರೆ ಕಟ್ಟಿಲೆ	13-28
ಸೊಂಪರ್ಗಳಿರುಳಿಣ್ಣೆ	8-17
ಸೊನೆತನಿವಣ್ಣ	2-40
ಸಂಕಳಿತ ಬಹುಳ	8-11
ಸಂಕ್ರಂದನ	12-59
ಸಂತತಪೋಲಗಿಪ್ಪ	7-25
ಸಂತಾನಶ್ರೀ	3-111
ಸಿಂಗದ ದಾಡೆ	14-18
ಸ್ಥಿರಮೂಲಂ	13-3
ಸ್ಥಿರಭಾದ್ರ	14-52
ಸ್ಥಿರಲಹ್ಮೀ	8-65
ಸ್ಥಾವರಶರೀರ	10-16
ಸ್ಫುರಯಿಸೆ	12 78
ಸ್ಫುರಯಿಸು	2-49
ಸ್ಫುರಯಿಪ	10-34
ಸ್ಫುರಿತಶ್ರೀ	ಪರಿ-8
ಸ್ಫುರಿತಪಯೋಧರ	10-38
ಸ್ಫುರಿತಮುಖಾಲೋಕಂ	೨-110
ಸ್ಫುರಿತೋದ್ಯತ್ತಾರ	1-81
ಸ್ಫುರಿತೋಷ್ಣಾಂಶು	13-17
ಸ್ಫುರಿಪ	10-69
ಸ್ಫೂರಿಪ...	1-11

ಸ್ಮರಪರಿವಾರ	14.24
ಸ್ಮರಮಥನ	14-39
ಸ್ಮರಮಂತ್ರ	4-60
ಸ್ಮರಮೋಹನ	9-78
ಸ್ಮರರಾಗೋದ್ರೇಕ	9-118
ಸ್ಮರಸೌಮ್ಯಾಕೃತಿ	13-10
ಸ್ಮರಸಂತಾಪ	12-82
ಸ್ಮರಹರನುದಯ	10-14
ಸ್ವಗತನಿಬಿಡ	13-110
ಸ್ವಚ್ಛಂಗಳ್	1-8
ಸ್ವರವರ್ಣ ಶ್ರುತಿ	12-24
ಸ್ವವಶಮನಿರದಿಂ	3-5
ಸ್ವೀಕೃತಜಿನ	1-63
ಸ್ವೀಕೃತಶುಭ	5-105
ಸ್ವೇದಾಂಬುಬಿಂದು	11-34

ಹ

ಹಯಲಾಲಾ	5-45
ಹರಿಣಾಂಕ	11-54
ಹರಿಚೀರಕನಕ	10-76
ಹರಿಪೀಠಂ	ಪರಿ-5
ಹರಿಮದ	3-17
ಹರಿಯಂ	1-85
ಹರಿವಂಶೋತ್ತಂಸ	7-44
ಹರಿಹರ	1-12
ಹರಿಷೇಷಾ	8-32
ಹಾರಕ್ಕದೊಂದೆ	3-93
ಹಿಮಕರನಿಂ	4-86
ಹಿಮಮೆಂಬ	6-46
ಹಿಮರುಚಿ	8-118
ಹಿಮಸಮಯ	6-44
ಹೃದಯದ	4-36
ಹೃದ್ಯಗುಣ	7-64

ಪರಿಶಿಷ್ಟಂ ೩.

ಆಶ್ವಾಸ ಕ್ರಮದಲ್ಲಿ ವೃತ್ತಗಳ ಹೆಸರು ಸಂಖ್ಯೆಗಳನ್ನು ತೋರಿಸುವ ಪಟ್ಟಿಕೆ.

	ವೃತ್ತಗಳ ಹೆಸರು.	ಆಶ್ವಾಸ ಮತ್ತು ಆಶ್ವಾಸದಲ್ಲಿರುವ ವೃತ್ತಸಂಖ್ಯೆ.													
		I	II	III	IV	V	VI	VII	VIII	IX	X	XI	XII	XIII	XIV	ಒಟ್ಟು
1	ಸ್ರಗ್ಧರೆ ...	1	...	...	...	...	...	...	...	...	1	...	...	.	1	3
2	ಮತ್ತೇಭಂ ...	9	13	7	22	25	11	15	24	15	18	14	21	29	10	233
3	ಮಹಾಸ್ರಗ್ಧರಿ ...	7	4	6	4	9	2	9	4	6	1	2	5	5	...	64
4	ಜಂವಕಪಾಲೆ ...	19	23	21	21	30	13	13	16	27	13	9	11	19	6	246
5	ಉತ್ಪಲಮಾಲೆ ...	6	6	10	6	12	5	10	7	5	5	4	9	12	4	101
6	ಶಾರ್ದೂಲವಿಕ್ರೀಡಿತಂ ...	2	1	1	. .	1	1	...	1	2	1	...	...	1	...	11
7	ತರಳವೃತ್ತಂ ...	...	1	. .	..	...	...	...	...	....	...	..			...	1
8	ಕಂದಂ ...	51	41	86	43	36	24	34	66	60	50	36	63	55	37	682
9	ರಗಳೆ ...	...	1	...	...	...	...	..	...	2	1	...	..			4
10	ಮುದ್ರಿಕೆ ...	...	1	.	...	. .	..	...	...	...	...	...	...	..	..	1
11	ಮಂದಾಕ್ರಾಂತಂ ..	...	..	1	...	...	..	...	...		...	...	. .			1
12	ಹರಿಣಿ ...	...	1	.	1	...	...	...	...	1	1	..	3	.	...	7
13	ಮಾಲಿನಿ ...	...	...	...	...	1	...	...	...		...		1	1	..	3
14	ಶಿಖರಿಣಿ ...	...	...	...	...	...	...	1	1		.	.	..	.	. .	2
15	ದ್ರುತ ವಿಲಂಬಿತಂ ...	...	...	...	...	...	...	...	...	...	.		...	1	. .	1
16	ಉತ್ಸಾಹಂ ...	...	...	...	...	...	...	...	1	...	1		1	.	...	3
17	ಸ್ವಾಗತಂ ...	...	...	..	...	...	...	...	...	2	..		...		..	2
		95	97	132	97	114	56	82	120	120	92	65	114	123	58	1365

ಸಂಸ್ಕೃತ ಶ್ಲೋಕ 5.

ಪರಿಶಿಷ್ಟ ಳ.

(ಚಾಮುಂತೆರಾಯ ಪುರಾಣಾಂತರ್ಗತ)

ಪುಷ್ಪದಂತ ಪುರಾಣಂ

ಕಂ॥ ಶ್ರೀವನಿತ್ತೀರ್ಥಕರತ್ವವು ।
ಹಾವಹಿವೊದಯೊತ್ಕಂಪಿತಾಸನಾವರಕ್ಕತವೂ ॥
ಜಾವಹಿಮರನಶ್ವರಸುಖ ।
ಧಾವ[ವ]ನೆವಗೀಗೆ ಪುಷ್ಪದಂತ ಜಿನೇಂದ್ರಂ ॥೧॥

ಪುಷ್ಕರವರದ್ವೀಪದ ಪೂರ್ವಾಪರಂದರದವರವಿದೇಹದ ಸೀತಾನದಿಯ ಬಡಗಣತಡಿಯ ಪುಷ್ಕಳಾವತೀ ವಿಷಯದ ಪುಂಡರೀಕಿಣಿಯ ನಾಳ್ವೊಂ ಮಹಾಪದ್ಮನೆಂಬರಸಂ ಮನೋಹರೋದ್ಯಾನದೊಳ್ ಇರ್ವ ಭೂತಹಿತಜಿನರ ವಕ್ಕಣ ಧರ್ಮಮಂ ಕೇಳ್ದು ತತ್ವಭಾವನೆಯಿಂ ಮೆದತ್ತನೆಂಬ ತನ್ನ ಮಗಂಗ ರಾಜ್ಯಮಂ ಕೊಟ್ಟು ಸಂಸಾರ ಭೀರುಗಳ್ ಪಲರುಂ ಬೆರಸು ತವಂ ಬಟ್ಟೀಕಾದ ಶಾಂಗಧರಂ ಷೋಡಶಭಾವನೆಗಳಿಂ ತೀರ್ಥಕರ ಪುಣ್ಯಮಂ ಕಟ್ಟಿ ಕಾಲಾಂತದೊಳಾರಾಧನಾ ವಿಧಿಯಿಂ ಪ್ರಾಣತಕಲ್ಪದೂಳಾರಣವಿಮಾನದೊಳ್ ಪ್ರಾಣತೇಂದ್ರನಾಗಿ ಪುಟ್ಟಿ ವಿರೆಶಂ ನಾಗರೋಪ ಮಾಯುಷ್ಯನುಂ ಮೂಜಿಲು ಮೊಬಿವರೆ ನಿಡಿಯನುಂ, ವಂಚಮಪೃಥ್ವೀಗತಾವಧಿಜ್ಞಾನನುಂ, ಶುಕ್ಲ ಲೇಶ್ಯಾವರಿಣಾಮನುಮಾಗಿ ಸುಖಮಿರ್ಪಿನಂ.

ಇತ್ತ ಜಂಬೂದ್ವೀಪದ ಭರತ ಕ್ಷೇತ್ರದ ಕಾಕಂದಿನಗ(ವು)ರಮನಾಳ್ವ ಕಾಶ್ಯಪಗೋತ್ರದ ಸುಗ್ರೀವಮಹಾರಾಜನರಸಿ ಜಯರಾಮಾನಾಹಾದೇವಿ ಫಾಲ್ಗುಣ ಬಹುಳ ನವಮಿಯ ಬೆಳಗಪ್ಪ ಜಾವದೊಳ್ ಮೂಲನಕ್ಷತ್ರನುಮಾಗೆ ಷೋಡಶಸ್ವಪ್ನಂಗಳಂ ಕಂಡೆವಧಿಜ್ಞಾನಿಯಪ್ಪ ತನ್ನರಸನಿಂ ತತ್ಫಲ ಮನರಿಯಿದು ಸುಖಮಿರ್ಪಿನಂ ಸ್ವರ್ಗಾವತರಣ ಮಹಾ ಕಲ್ಯಾಣಪೂಜಾಪೂರ್ವಕನಾಪ್ರಾಣತೇಂದ್ರ ನಾದೇವಿಯ ಗರ್ಭಕ್ಕವತರಿಸಿ ಮುಂ ಪೇಳ್ದಿ ಚಂದ್ರಪ್ರಭತೀರ್ಥ ಸಂತಾನಂ ಪತ್ತುಕೋಟಿ ಸಾಗ ರೋವಮಂ ಪ್ರವರ್ತಿಸುವಂದಾ ಕಾಲದೊಳ್ ಮಾರ್ಗಶಿರಶುದ್ಧ ಪೂಣಿವ ಜ್ಯೈತ್ರಯೋಗದೊಳ್ ತ್ರಿಜ್ಞಾನಧರಂ ಪುಟ್ಟ ಸೌಧರ್ಮೇಂದ್ರಂ ಬಂದು ಪುಷ್ಪೋವಮುದಂತನಪ್ಪುದಱಿಂ ಪುಷ್ಪದಂತನುಂ ಸುವಿಧಿಯು ಮೆಂದನ್ವರ್ಥನಾಮಮನಿಬ್ಬು ಪೋದಂ.

ಇತ್ತಲೆರಡುಲಕ್ಕೆ ಪೂರ್ವಂ ವರಮಾಯುಷ್ಯನು ನೂಜಿಲು ಬಿಲ್ನಿಡಿಯನುಂ ಧವಳವರ್ಣನು ಮಾಗಿ ಬಳೆದಯ್ವತ್ತುನಾಸಿರಪೂರ್ವಂ ಕುಮಾರಕಾಲಂ ಸಲೆ ರಾಜ್ಯಾಭಿಷೇಕ ಕಾಲಮಾಗಯ್ವತ್ತು ನಾಸಿರಪೂರ್ವ ಮಿಪ್ಪತ್ತಂಜು ಪೂರ್ವಾಂಗಮುಮಾಗಳುಲ್ಕಾಪತದರ್ಶನದಿಂ ನಿರ್ವೇಗಪರಂ ಲೋಕಾಂತಿಕದೇವರ್ ಪ್ರತಿಬೋಧಿಸೆ ತನ್ನ ಮಗಂಗೆ ರಾಜ್ಯಮಂ ಕೊಟ್ಟು ಸೌಧರ್ಮೇಂದ್ರಕೃತ ನಿಷ್ಕ್ರಮಣಾಭಿಷೇಕಂ ಸೂರ್ಯಪ್ರಭೆಯೆಂಬ ಶಿಬಿಕೆಯನೇಱಿ ಪುಷ್ಪಕೋದ್ಯಾನದೊಳ್ ಷಷ್ಠೋಪವಾಸದೊಳ್ ಪುಷ್ಯಮಾನದೇಕಾದಶಿಯವರಾಹ್ನದೂಳ್ ಅನೂರಾಧಾನಕ್ಷತ್ರದೊಳ್ ಸಾಸಿರ್ವರರಸುಗಳ್ವೆರಸು ಸಂಯಮಧರನಾಗಿ ಚತುರ್ಜ್ಞಾನಧರಂ ಮಱುದಿವಸಂ ನಳಿನಪುರಮ ನಾಳ್ವ ಸೋಮದತ್ತನ ಮನೆಯೊಳ್ ಪಂಚಾಶ್ಚರ್ಯಮಾಗೆ ಮೌನವ್ರತದಿಂ ಮೂಱುತಿಂಗಳ್

ಛದ್ಮಸ್ಥಕಾಲಂ ಸಲೆ ಪುಷ್ಪಕೋದ್ಯಾನದೊಳ್ ನಾಗವೃಕ್ಷದಡಿಯೊಳ್ ಕಾರ್ತಿಕ ಶುದ್ಧ ಬಿದಿಗೆಯಪ
ರಾಹ್ಣದೊಳ್ ಮೂಲನಕ್ಷತ್ರವಾಗೆ ಕೇವಲಜ್ಞಾನಮಹಾಕಲ್ಯಾಣ ಪೂಜೆಯನಿಯ್ದಿ ನಾಸಿರದೆಂಟ
ನ್ವರ್ಥನಾಮಂಗಳಂ ತಾಳ್ದಿ ವಿದರ್ಭನಾಮಿಗಳ್ ಮೊದಲಾಗೆಣ್ಬತ್ತೆಣ್ಬರ್ ಗಣಧರರುಂ, ನಾಸಿರ
ದಯ್ನೂರ್ವರ್ ಪೂರ್ವಧರರುಂ, ಒಂಬು ಲಕ್ಕೆಯುಮಯ್ನೂತ್ತು ನಾಸಿರದಯ್ನೂರ್ವರ್ ಶಿಕ್ಷ
ಕರುಂ, ಎಂಟು ನಾಸಿರದ ನಾನೂರ್ವರವಧಿಜ್ಞಾನಿಗಳುಂ ಎಂಟುನಾಸಿರ್ವರ್ ಕೇವಲಿಗಳುಂ ಪದಿ
ಮೂಱು ನಾಸಿರ್ವರ್ ವಿಕ್ರಯದ್ಧರ್ಪ್ರಾಪ್ತರುಂ, ಎಣ್ಣಾಸಿರದಯ್ನೂರ್ವರ್ ಮನಃಪರ್ಯಯ
ಜ್ಞಾನಿಗಳುಂ, ಆಱುನಾಸಿರದಱುನೂರ್ವರ್ ವಾದಿಗಳುಂ, ಘೋಷಾರ್ಯಿಕೆಯರ್ ಮೊದಲಾಗ
ಮೂಱುಲಕ್ಕೆಯುಂ ಮೆಣ್ಬತ್ತುನಾಸಿರ್ವರ್ ಅರ್ಜ್ಜಿಕೆಯರುಂ, ಎರಪೆಲಕ್ಕೆ ಶ್ರಾವಕರುಂ, ನಾಲ್ಕು
ಲಕ್ಕೆ ಶ್ರಾವಕಿಯರುಂ, ಅಸಂಖ್ಯಾತ ದೇವದೇವಿಯರುಂ, ಸಂಖ್ಯಾತ ತಿರ್ಯಗ್ಜಾತಿಗಳುಂ, ಬೆರಸು
ದ್ವಾದಶಗಣ(ಪರಿಷತ್)ಪರಿವೃತಂ ಧರ್ಮೋಪದೇಶಂ ಗೆಯ್ಯುತ್ತುಂ ಇಪ್ಪತ್ತೆಂಟು ಪೂರ್ವಾಂ
ಗಮುಂ ನಾಲ್ಕುವರ್ಷಂ ಕುಂದಿದೊಂದು ಲಕ್ಕೆ ಪೂರ್ವಂ ವಿಹರಿಸುತ್ತುವೊಂದು ತಿಂಗಳ್ ವಿಹರಣ
ವಿಧಿಯಂ ಮಾಣ್ದು ಸಂವೇದಗಿರಿಯೊಳ್ ನಾಸಿರ್ವರ್ ಮುನಿಗಳ್ವೆರಸು ಪ್ರತಿಮಾಯೋಗಧಾರಿ
ಭಾದ್ರಪದಶುದ್ಧ ಅಷ್ಟಮಿಯವರಾಹ್ಣದೊಳ್ ಮೂಲನಕ್ಷತ್ರವಾಗೆ ಪುಷ್ಪದಂತ ಸ್ವಾಮಿಗಳ್
ಮೋಕ್ಷಲಕ್ಷ್ಮಿಯಂ ಕೆಯ್ಕೊಂಡರ್. ದೇವೇಂದ್ರನುಂ ಪರಿನಿರ್ವಾಣಕಲ್ಯಾಣಪೂಳಾನಂದ ನೃತ್ಯಮ
ನಾಡಿ ಪೋದಂ.

ಗದ್ಯಂ

ಇದು ಸಕಲಶಾಸ್ತ್ರಸಂಯಮಸಂವನ್ನ ಶ್ರೀಮದಜಿತಸೇನಭಟ್ಟಾರಕ
ಚರಣಕಮಲ ಚಂಚರೀಕಂ ಧರ್ಮವಿಜಯ
ಶ್ರೀಮಚ್ಚಾಮುಂಡ ರಾಜವಿರಚಿತಮಪ್ಪ
ತ್ರಿಷಷ್ಟಿಲಕ್ಷಣ ಮಹಾಪುರಾಣದೊಳ್

ಪುಷ್ಪದಂತಪುರಾಣಂ.

ಪರಿಶಿಷ್ಟಂ ೫.

[1] ಶ್ರೀಪುರಾಣಾನ್ತರ್ಗತಮುಪ್ಪು
ಪುಷ್ಪದಂತಪುರಾಣಕಥೆ

(ತಮಿಳಿನ ಪರಿವರ್ತನೆ)
ಸಿದ್ಧಂ ನಮಃ

ಸುವಿಧಿಜಿನಪತಿ ಪುರಾಣಂ.—

[2] ಸದವದ್ಯಘ್ನ? ಜ್ಞಾನಗರ್ಭಂ ಚರಿತಮುಭಮತಂ ಮೋಕ್ಷಮಾರ್ಗಂ ಪ್ರಣೀತಾವ್ಯಾ ।
ಸಂಪತ್ಪ್ರಾಪ್ತ್ಯುದ್ಯೋಯಥಾರ್ಥಂ ಸುವಿಧಿರಿತಿ ಜಗನ್ಮಂಗಲಂ ನಾಮ ಸಮ್ಯಕ್ ॥
ಶ್ರೀಮದ್ದೇವೇಂದ್ರ ಗಂಧದ್ವಿರದಪತಿಲಸನ್ಮೌಳಿ ಮಾಣಿಕ್ಯಮಾಲಾ ।
ಜ್ಯೋತಸ್ನಾಹ್ಲೇರಾಭಿಷಿಕ್ತ ಕ್ರಮುಕಮಲಯುಗನ್ಸೋಽವತಾನ್ನೋ ಜಿನೇನ್ದ್ರಃ ॥

ಅಥ ಸುವಿಧಿಜಿನಪತಿ ಪುರಾಣಮುಚ್ಯತೇ.

ಪುಷ್ಕರಾರ್ದ್ಧ ಪೂರ್ವಮನ್ದರ ಪೂರ್ವವಿದೇಹ ಪುಷ್ಕಲಾವತೀವಿಷಯ ಪುಣ್ಡರೀಕಿಣೀ ನಗರದರಸು ಮಹಾಪದ್ಮಂ. ಅವನೊಂದುದಿವಸಂ ಮನೋಹರೋದ್ಯಾನದಲ್ಲಿ ದಯಮಾಡಿಸಿದ್ದ ಭೂತಹಿತಜಿನವತಿಯ ಸಮೀಪದಲ್ಲಿ ಧರ್ಮತತ್ವವಂ ಕೇಳಿದವನಾಗಿ ಸಂಸಾರದಲ್ಲಿ ವಿರಕ್ತಿವಡೆದು ಧನದೇವನೆಂಬ ಮಗನಿಗೆ ರಾಜ್ಯಪಟ್ಟವಂ ಕಟ್ಟಿ ಹಲವುಮಂದಿ ಅರಸರೊಡನೆ ಜಿನದೀಕ್ಷೆಯಂ ಪಡೆದು ಷೋಡಶಕಾರಣಭಾವನಾನಿಬನ್ಧ ತೀರ್ತ್ಥಕರನಾಮ ಮಹಾಪುಣ್ಯಕರ್ಮವಂ ಮಾಡಿದವನಾಗಿ ಸನ್ಯಾಸವಿಧಿಯಿಂದೆ ಶರೀರವಂ ತ್ಯಜಿಸಿ ಪ್ರಾಣತಕಲ್ಪದ ಆರಣವಿಮಾನದಲ್ಲಿ ಪ್ರಾಣತೇನ್ದ್ರನಾದನು.

ಬಳಿಕ ಜಂಬೂದ್ವೀಪ ಭರತಖಂಡದ ಕಾಕಂದಿ ಪುರಾಧಿಪತಿ ಇಕ್ಷ್ವಾಕುವಂಶ್ಯ ಕಾಶ್ಯಪ ಗೋತ್ರದ ಸುಗ್ರೀವರಾಜನೆಂಬುವನು. ಆತನ ದೇವಿ ಜಯರಾವೆಂ. ಪ್ರಾಣತಕಲ್ಪದ ಪ್ರಾಣತೇನ್ದ್ರನೆನಿಸಿದ್ದ ಭಗವಂತನಾದ ದೇವನು ಇಪ್ಪತ್ತುಕಡಲ್ ಪರಿಮಾಣದ ಅಮರಸುಖವನ್ನನುಭವಿಸಿ ಸ್ವರ್ಗಾವತರಣಕಲ್ಯಾಣ ಷೋಡಶಸ್ವಪ್ನ ವದನಪ್ರವೇಶಿಗಜದರ್ಶನಪುರಸ್ಸರನಾಗಿ ಫಾಲ್ಗುಣ ಮಾಸ ಕೃಷ್ಣನವಮಿಯಂದು ಮೂಲನಕ್ಷತ್ರ ಪ್ರಭಾತಸಮಯದಲ್ಲಿ ಜಯರಾಮಾದೇವಿಯ ಗರ್ಭವಾಸವನ್ನು ಪಡೆದು ಒಂಭತ್ತುತಿಂಗಳು ಪರಿಪೂರ್ಣವಾದ ಬಳಿಕ್ಕೆ ಮಾರ್ಗಶೀರ್ಷ ಮಾಸದ ಪೂರ್ವಪಕ್ಷದ ಪ್ರಥಮಾತಿಥಿಯಲ್ಲಿ ಮೂಲನಕ್ಷತ್ರ ಚೈತ್ರಯೋಗದಂದು ತ್ರಿಜ್ಞಾನಧರನಾಗಿರುವ (ಮತಿ, ಶ್ರುತ, ಅವಧಿ=ತ್ರಿಜ್ಞಾನ) ಭಗವಂತನು (ಜಿನನು) ಗರ್ಭಾವತರಣವಂ ಮಾಡಿದನು.

[1] ಶ್ರೀ ಪುರಾಣವೆಂಬುದು ಮಣಿಪ್ರವಾಳ ಶೈಲಿಯಲ್ಲಿ ಬರೆದಿರುವ ತಮಿಳ್‌ಭಾಷೆಯ ಗದ್ಯ ಗ್ರಂಥವು. ಇದರಲ್ಲಿ ತ್ರಿಷಷ್ಟಿಶಲಾಕಪುರುಷರ ಕಥೆಯು ಹೇಳಿದೆ. ಈ ಪರಿವರ್ತನದಲ್ಲಿ ವಾಕ್ಯವು ತಮಿಳಿನ ಶೈಲಿಯನ್ನೇ ಅನುಸರಿಸಿದೆ. [2] ಸದ್ಯದ್ಯಘ್ನ ಜ್ಞಾನಗರ್ಭಂ (ಎಂದಿರಬಹುದು)

ಆಪೊಬಿಶ್ತಿ ಚತುರ್ವಿಧಾಮರನಿಕಾಯವೂ, ದೇವೇಂದ್ರ ಸಮುದಯವೂ, ಬಂದು ಮಂದರಾಭಿಷೇಕ ಕಲ್ಯಾಣಾನಂತರದಲ್ಲಿ ಸುವಿಧಿಯೆಂಬ ಮಂಗಳನಾಮವನ್ನಿಟ್ಟು ಸ್ವಸ್ಥಾನಕ್ಕೆ ತೆರಳಿದುವು.

[1] ಚನ್ದ್ರಪ್ರಭಭಟ್ಟಾರಕರ ಧರ್ಮತೀರ್ಥ ಸಂತಾನಕಾಲವು ತೊಂಭತ್ತುನಾವಿರ ಸಾಗರೋಪಮ ಕೋಟಿಯಕ್ಕುಂ. ಅದಱಿಂತಪೊಳ್ ಅಂತರ್ಭೂತ ವರವಾಯುಷ್ಯವುಳ್ಳವನಾಗಿ ಅವತರಿಸಿದ ಪುಷ್ಪದಂತ ಭಗವಂತನ ನಂದ್ಯಾವರ್ತಪುಷ್ಪವರ್ಣ ದಿವ್ಯಶರೀರದ ಉತ್ಸೇಧವು ನೂಱು ಬಿಲ್ಲ ಪ್ರಮಾಣವುಳ್ಳುದು. ಇವರ ವರವಾಯುಷ್ಯವು ಎರಡು ನೂಱುನಾವಿರ ಪೂರ್ವವಕ್ಕುಂ. ಐವತ್ತುನಾವಿರ ಪೂರ್ವವಾವ ಕುಮಾರಕಾಲವು ಕಳೆದು ರಾಜ್ಯಾಭಿಷೇಕವೆಯ್ದಿ ಐವತ್ತುನಾವಿರ ಪೂರ್ವವೂ, ಇಪ್ಪತ್ತೆಂಟು ಪೂರ್ವಾಂಗವೂ ಆದ ರಾಜ್ಯ ಕಾಲಾವಧಿಯಲ್ಲಿ ಉಲ್ಕಾಪತನ ದರ್ಶನದಿಂದ ಉತ್ಪನ್ನಸಂಸಾರವೈರಾಗ್ಯವುಳ್ಳವನೂ, ಲೋಕಾಂತಿಕದೇವರಿಂದೆ ಪ್ರತಿಬೋಧಿತನೂ ಆದ ಬಳಿಕ್ಕೆ ಸುಮತಿಯೆಂಬ ಮಗನಿಗೆ ರಾಜ್ಯವವನ್ನಿತ್ತು ಸುರಪತಿನಿಹಿತ ನಿಷ್ಕ್ರಮಣ ಕಲ್ಯಾಣಾನಂತರದಲ್ಲಿ ಸೂರ್ಯಪ್ರಭೆಯೆಂಬ ಶಿಬಿಕೆಯ ಮೇಲೇಱಿ ಪುಷ್ಪಕವನಕ್ಕೆ ಸಹಸ್ರನರಪತಿಗಳೊಡನೆ ಷಷ್ಠೋಪವಾಸ ಸಹಿತನಾಗಿ ಮಾರ್ಗಶೀರ್ಷಮಾಸ ಶುಕ್ಲಪಕ್ಷ ಪ್ರಥಮೆಯಂದು ಮೂಲನಕ್ಷತ್ರಾವರಾಹ್ಣಕಾಲದಲ್ಲ ಜಿನದೀಕ್ಷೆಯುಂ ವಡೆದು, ತದನನ್ತರಂ ಮನಃಪರ್ಯಯ ಜ್ಞಾನಧಾರಿಯಾಗಿ ಮೂಱುದಿವಸಂ ಶೈಲಪುರದ ಪುಷ್ಪಮಿತ್ರ ನರಪತಿಯ ಗೃಹದಲ್ಲಿ ಪಂಚಾಶ್ಚರ್ಯಕರವಾದ ಪಾರಣೆಗೆಯ್ದು ಛದ್ಮಸ್ಥಕಾಲವಾದ ನಾಲ್ಕು ಸಂವತ್ಸರಂಗಳಂ ಸ್ವದೀಕ್ಷಾವನದಲ್ಲಿ ನಾಗವೃಕ್ಷಮೂಲದಲ್ಲಮ್ದ್ದು ಕೊಂಡು ಷಷ್ಠೋಪವಾಸಸಹಿತನಾಗಿ ಕಾರ್ತಿಕಮಾಸ ಶುಕ್ಲದ್ವಿತೀಯಾವಕ್ಷದಲ್ಲ ಮೂಲನಕ್ಷತ್ರಾಪರಾಹ್ಣಕಾಲದಂದು, ಘಾತಿಕರ್ಮಕ್ಷಯಾನಂತರದಲ್ಲ ಸಂಪ್ರಾಪ್ತಾನಂತ ಚತುಷ್ಟಯನಾಗಿ ಆದನು. ಆಪೊಬಿಶ್ತಿ ದೇವದೇವೇಂದ್ರರ್ಕಳ್ ಬಂದು ಸಮವಸರಣಾದಿ ವಿಭೂತಿಸಹಿತಂ ಕೇವಲೋತ್ಪತ್ತಿ ಕಲ್ಯಾಣವರರಾಗಿ ಸೇವಾತತ್ಪರರಾದರು.

ಸುವಿಧಿ ಭಗವಂತನಿಗೆ ವಿದರ್ಭರ್ ಮೊದಲಾದ ಗಣಧರರ್ ಎಂಭತ್ತೆಂಟುಮಂದಿಗಳ್. ಪೂರ್ವಧರರ್ ನಾಲ್ಕಿರದೈನೂರುಮಂದಿ, ಶಿಕ್ಷಕರ್ ನೂಱುನಾವಿರದೈವತ್ತೈದುನಾವಿರದೈನೂರ್ವರ್. ಅವಧಿಜ್ಞಾನಿಗಳ್ ಎಂಟುನಾವಿರದ ನಾನೂರುಮಂದಿ. ಕೇವಲಿಗಳ್ ಎಂಟುನಾವಿರಮಂದಿ, ವೈಕ್ರಿಯಿಕರ್ ಹದಿಮೂಱು ನಾವಿರಮಂದಿ, ಮನಃಪರ್ಯಯ ಜ್ಞಾನಿಗಳ್ ಎಂಟುನಾವಿರದೈನೂರ್ವರ್. ಮಹಾ ವಾದಿಗಳ್[2] ನಾವಿರದಾಱುನೂಱುಮಂದಿ, ಆಗಲ್ (ಒಟ್ಟಾಗಿ) ತಪೋಧನರ್ ನೂಱು ತೊಂಭತ್ತೊಂಭತ್ತು ನಾಪಿರ ದೈನೂಱೆಂಭತ್ತೆಂಟುಮಂದಿಗಳ್. [3] ಪೌಷ್ಟಿಷೇಣ ಮೊದಲಾದ ಆರ್ಯಾಂಗಳೈಗಳ್[4] ಮುನ್ನೂಱುನಾವಿರದೆಂಭತ್ತುನಾವಿರಮಂದಿ. ಶ್ರಾವಕರ್ ಇನ್ನೂಱು ನಾಸಿರ್ವರ್. ಶ್ರಾವಕಿಯರ್ಕಳ್[1] ಐನೂಱು ನಾಪಿರಮಂದಿ. ದೇವದೇವಿಗಳ್ ಅಸಂಖ್ಯಾತರ್. ತಿರ್ಯಗ್ಜಾತಿ ಸಂಖ್ಯಾತಂ. ಈ ದ್ವಾದಶಗಣ ವರಿವೃತನಾದ ಭಗವಂತನು ಸರ್ವಧರ್ಮಕ್ಷೇತ್ರಂಗಳೆಲ್ಲಂ ವಿಹರಿಸಿ ಇಪ್ಪತ್ತೆಂಟು ಪೂರ್ವಾಂಗಗಳುಂ ನಾಲ್ಕು ಸಂವತ್ಸರಂಗಳಿಂದೆ

---

[1] ಚಂದ್ರಪ್ರಭ ಭಟ್ಟಾರಕನು ಎಂಟನೆಯ ತೀರ್ಥಕರನು. [2] ಆರುನಾವಿರ (ಎಂದಿರಬೇಕು)
[3] ಘೋಷೆ ಮೊದಲಾದರ್ಜಿಕೆಯರ್ಕಳ್ (ಎಂದಿರಬಹುದು.) [4] ನಾನೂರುನಾವಿರ (ಎಂದಿರಬೇಕು)

ಕಮ್ಮಿಯಾವ ನೂಱಿನಾವಿರ ಪೂರ್ವಮುಂ ಆಗಿರುವ ಕೇವಲಿ ಕಾಲಾವನಾನದಲ್ಲಿ ಸಮ್ಮೇದಶಿಖರದಲ್ಲಿ ಒಂದುತಿಂಗಳ್ ಕಾಲಂಬರಂ ಪ್ರತಿಮಾಯೋಗಧಾರಿಯಾಗಿ ನಿಂದಿರ್ದು ಯೋಗತ್ರಯನಿರೋಧಂಗೆಯ್ದು ಸಹಸ್ರ ಮುನಿವತಿಗಳೊಡೆಗೂಡಿ ಭಾದ್ರಪದಮಾಸ ಶುಕ್ಲಾಷ್ಟಮಿ ಪಕ್ಷದಲ್ಲಿ ಮೂಲನಕ್ಷತ್ರಸಮಾಹ್ನ ಕಾಲದಲ್ಲಿ ಅವನಗರ್ಗವನ್ನು ಪಡೆದು ಪರಮಗೆಯ್ದಂ.

ಯೋಽಜಾಯತ ಕ್ಷಿತಿಭೃದತ್ರ ಮಹಾಡಿವಮ್ಯಾಂ।
ವಶ್ಯಾದಭೂದ್ವಿವಿ ಚತುರ್ದಶಕಲ್ಪನಾಥಃ ॥
ಪ್ರಾಂತೇ ಬಭೂವ ಭವತೀ ಸುವಿಧರ್ನ್ಯಪೇನ್ದ್ರಃ।
ತೀರ್ಥೇಶ್ವರಸ್ಯ ನವಮಃ ಕುರುತಾಚ್ಛ್ರಿಯಂ ವಃ ॥

ಇತಿ
ತ್ರಿಷಷ್ಟಿ ಲಕ್ಷಣ ಮಹಾಪುರಾಣಸಂಗ್ರಹೇ
ಸುವಿಧಿ ತೀರ್ಥಕರಪುರಾಣಮಿದಂ
ಪರಿಸಮಾಪ್ತಂ

ಪರಿಶಿಷ್ಟಂ ೬.

(ಮೂದರಿಗಾಗಿ—ಮೈಸೂರು ರಾಜಕೀಯವುಸ್ತಕ ಭಂಡಾರದ ಕಾಗದದಪ್ರತಿಯು (ಗ. ಪ್ರತಿ) ಒಂದೆರಡು ವಾಕ್ಯಗಳನ್ನು ಕೊಟ್ಟಿದೆ.)

ಆಶ್ವಾ. ೭-ವ. ೪೦. ವೈ ॥ ಎಂದು ಸಮಸ್ತಕಾರ್ಯ ಭರಮುಂ ಪಮನಂ ಸುಮನಂ ಜಗಜ್ಜನಾ। ನಂದಕರಂ ಪ್ರಶಸ್ತಯಶನ ಸುಮನಮಂದಾರನಂ ದೀನ ಜನೋದ್ಧಾರನಂ ಭವ್ಯಕುಲರತ್ನನಂ ಸುಕೀರ್ತಿವಂತನಂ ಶಾಂತನಂ ರಿವು ವಂಶಾಬ್ಜ ವೀಯಜ್ಞೇಶನಂ ವೈರಿಕುಲಪರ್ವತಂಗಳಿಗೆ ವಜ್ರಾಯುಧನಂ ಅರಿಮೇಳಮೆಂಬಲಗ ಜಂಝೂಮಾರುತನುಂ, ವೈರಿಗಳೆಂಬ ಸಾಗರಕೆ ಕುಂಭೋದ್ಭವನಂತೊಪ್ಪುವ ದಯಾ। ನಂದಕ ಶಸ್ತ್ರ ಭೂಷಿತವಿಶೇಷ ಕರಾಳಕರಾಗ್ರನಂ ನರೇಂದ್ರೇಂದುವನೆಯ್ದೆ ಕೇಳಿಸಿದವಂ ಮಿಗೆ ನಾಪ್ತಿಭುವಂಶ ಮೇರುವಂ.

ಆ-ವ. ೩೪ ವದ್ಯವಾದ ಬಬಿಕ ಇರುವ ಗದ್ಯ } ವ ॥ ಈ ಚತುರ್ಬಲಮುಂ ವರ್ಣಿವರೆನ್ನಿಂದಕೂಡದು, ಕೃತ ತ್ರೇತ ದ್ವಾಪರಯುಗದೊಳಿತಿರಥ ಮಹಾರಥ ಪೋಡಶಚಕ್ರವರ್ತಿಗಳ ಚತುರಂಗಬಲಕಿದಚ್ಚರಿಯೆನೆ ಕಣ್ಗೊಳಿಸಿತ್ತು ಮತಿ ಕಲಿಯುಗದೊಳೀ ನಾಚ್ಚರಿಯಂ.
ವ ॥ ಆಗಳಲ್ಲಿ.

,, — ೪೪ ನೆಯ ವದ್ಯವಾದ ಬಬಿಕ ಇರುವ ಗದ್ಯ } ವ ॥ ಂತು ಕೆಯ್ಗೊಯ್ದಾಗಳ್. ಜಿನಮತದೊಳವತರಿಸಿದ ಸುದತಿಯರವಯವ ಭಾವಿಸುವ ಪೋಡಿಯು ವಿವರವನೀನ ನರುಹುವೆ ನವಯವ್ವನತುಳುಕಾಡುವ ಕಾಂತಿಯಭುವನದಮೋಹಿನಿಯಂ। ಸತಿನಾಸಿಕವೀಕ್ಷಿಸುತಲೀ ಸಂಪಗೆ ಗತಿಯರಿಯದೆ ಯದುಸೇರಿತು ತರುವಿಗೆ ಮತಿದೋರದ ಲತೆಯಧರದ ರಂಗಿಗೆ ಪತಿಕರಿಸದು ಸತಿಮಲ್ಲಿಗೆಪಲ್ಲಿಗೆ ಪ್ರತಿಯೊಳ್ ಗತಿಯೇನೆನುತ ಚಿಂತಿಸುತಿರ್ಪೊಲ್. ಗಳದ ಭಾವವಕಂಡು ಮರುಗಿ ಮಯೂರವು ಹೊಳೆವಬಾಹು ಲತೆಗಳುಕಿಭವೃಂದವು ಥಳಥಳಿಪೆದೆನೋಡಿ ಕೋಕಕೆ ಶೋಕವು, ಬಳಲ್ವ ನಡುವಿನ ವೈಕರಿಯಾಭರನುಮತಿಯಕರಕಂಕಣ ನುಣ್ಗುರುಳ್‌ಕಾಂತಿಯು ಮುರಸುವೆನಿನುತಾ ಕೊರಳಿನವೌಕ್ತಿಯು ಸರವಲ್ಲದೆ ಸರ್ವರ್ಣದ ಮಾಲೆಯು ಕರನಪೊವು ಬಾಹುವಿಯಾಸತಿಯಾ। ಕದಳಿಗಳನು ಧಿಕ್ಕರಿಸುವ ತೊಡೆಗಳಪದವೊಲ್ದುದು ಮೃದು ಕೆಂದಾವರೆಗಳ, ಸುದತಿಯತನುಕಾಂತ್ಯರುಣಚ್ಛವಿಗಳ

ಸದರುಸುರರಪ್ಸರಿಯರ ಕಳಿಗಳ ವದನಕಂಡು ವಿರಹಿ
ಗಳೆದೆಗೆಟ್ಟರವೊ ವಿವಳಿಭಾವಂನೋಡೆ ॥ ಜಡಭಂಗರ
ನಿಟ್ಟಬಲೆಯು ಪಾಲವಲೊಡಬಿಡುವೋಲ್ ಬಟ್ಟಡುತಲಿ
ನಯನಕೆ ಕಡೆವಿಡಿದಿಟ್ಟಿಹ ಕಾಡಿಗೆಭಾವವ ಮಡದಿಯು
ಮುಗುಳ್ನಗೆ ವಿಂಚಿಗೆ ಸಮನವು ಯೇನೆಂಬೆ ಯುವತಿ
ಯು ಸಡಗರವುಂ ॥

ಆ-೯-ಪದ್ಯ ೯೭ ಆಡಬಳಿಕ. ವ॥ ಅಲ್ಲಿ=ವ॥ ಫಲವುಪ್ಪಂಗಳ ಹ್ರೀರಶರ್ಕರೆ ಘೃತಾಗಂಧ ಜವಾಜಿಯು
ತಾಂಬೂಲ ತಟ್ಟಿಗಳಿಂದಲಂಕರಿಸಿದ ಶಯ್ಯಾಗೃಹಕಂ
ವನಿತಾಮಣಿ ಬಂದಳಾಗ ಶಯನದ ಸೆಜ್ಜೆಗಂ ಸೊಬ
ಗಿಂವಂ ॥

ಶುದ್ಧಿಪತ್ರಿಕೆ.

ಪುಟ	ಪದ್ಯ	ಅಶುದ್ಧಂ	ಶುದ್ಧಂ
೫	೩೧	ಯೋಗೀಂದ್ರ	ಯೋಗೀಂದು (ಎಂದಿರಬೇಕು)
೭	೪೫	ಕವಿಯೊಳ್	ಕವಿಯೊಳ್
,,	ಬಪ್ಪಣಿಯಮ್ಮಿ	ದಂತಿದ	ದಂತಿವೆ
೧೦	೬೬	ಪೇಳ್ದವಂ	ಪೇಪ್ಪಿವಂ
೧೧	೭೧	ಪಜ್ಜಿತ್ತಿಯಿಂ	ವಜ್ರಿತ್ತಿಯಿಂ
೧೨	೭೪	ದೇಜಿಶ್ಗಿ	ದೇಲಿಶ್ಗಿ
೧೪	೯೦	ಬಳ್ಳವಳ್ಳಿ	ಬಳ್ಳಿವಳ್ಳಿ
೨೨	೩೯(ಗದ್ಯ)	ಬಂಡಿಳಿಸಿ	ಬಂಡೆಳಿಸಿ
,,	೪೦	ವೆಬ್ದಿರ್ದ	ವೆಬ್ದಿ
೨೩	೪೨	ಮರಸುತ್ತಿ	ಮುಜುಶಿಸುತ್ತಿ
,,	೪೩ (ಪಗ)	ಯೊಳ್ಗುಂಡೊಗುಜಿಲು	ಯೊಳಡಿಂಗುಜಿಲು
೨೪	೪೬	ದೆಳೆನೀಗರ್	ದೆಳನೀರ್ಗರ್
೨೫	೪೯	ಶಾಲೆ	ನಾಲೆ
,,	೫೦	ಘಟಿಕಾ	ಘಟಿಕಾ
೨೭	೬೦ (ಗದ್ಯ)	ನಿಗಳೆ	ನಿಗಟಿ
,,	೬೧	ಕಿಬ್ಬಿಪು	ಕಿಜ್ಜಿಪು
,,	೬೪	ನುಗುಬ್ಬಿನ್ನ	ನುಗುಳ್ಳಿನ್ನ
೨೯	೭೦	ದೆಳೆವಾಬಿಶೆ	ದೆಳವಾಬಿಶೆ
,,	೭೧	ತಗುಬಿಶ್ವಿ	ತಗುಳ್ವಿ
,,	೭೩	ತ್ರಿಲತಾ	ತ್ರಿಳತಾ
೩೦	೭೬	ಗೆಂಬಜಿ	ಗೆಂಬಜಿ
೩೨	೯೦	ಯಿಪ್ಪುದು	ಸಿಪ್ಪುದು
,,	೯೧	ಜಿಲಫಿ	ಬಲಫಿಯೊಳಿರ್ಪ
೩೪	೩	ಮೊದಜಿಶೆ	ಮೊದವಳೆ
೩೩	೧೧	ಕಾಯ್ದ	ಕಾದು
೩೯	೩೦	ಪೊಪಿವಾಜಿಂ	ಪೊಱವಾಜಿಂ
೪೦	೪೯	ಬಾಯ್ದೆಜಿಶೆ	ಬಾಯ್ವೆರೆ
,,	೪೨	ಲಲನೆ	ಲಳನೆ
೪೧	೫೦	ಕಣ್ಣೆಕೆಯೊ	ಕಣ್ಣೀಕೆಯೊ
೪೩	೫೯(ಗದ್ಯ)	ಸರಸಿಹ	ಸರಸಿರುಹ
,,	೬೦	ವಳಿ	ವಲಿ

೪೪	೬೫	ತ್ತೆಂದುದ	ತ್ತೆಂದದ
,,	೬೭	ತೆಲಿದಿಂ	ತೆಱನಂ
,,	೬೮	ಳಿಯಿದ	ಳಿಯಿದ
೪೬	೭೬(ಗದ್ಯ)	ತೊಱಿಸಿದ	ತೊರೆದ
,,	೨೬	ತೋಱುತ್ತ್ಯಂ	ತೋಱುತ್ತ್ಯಂ
೪೭	೮೦(ಗದ್ಯ)	ಗಱುದಳಲ	ಗಱುದಱಲ
೪೮	೮೯	ಪೆರ್ಚಿಸಿದ	ವಚ್ಚಿಸಿದ
೪೯	೯೦	ನುಱಿಸಿ	ನುಱಿಸಿ
೫೦	೧೦೦(ಗ)	ನಸುಗುತ್ತ್ಯಂ	ನಸುನಗುತ್ತ್ಯಂ
೫೦	೧೦೯	ಲಿಳಿನೆ	ಲಿಱಿನೆ
,,	೧೦೯	ಮೃತವೆನೆ	ಮೃತವನೆ
,,	೧೧೩	ಪೊಪಿತೆ	ಪೋಷಿತ
೫೩	೧೧೪(ಗ)	ನೆಗಜಿಶ್ತಿಗಂ	ನೆಗಱಿಶ್ತಿಗಂ
,,	೧೧೮	ಮಲಯ	ಮಳಯ
೫೪	೧೧೯	ಡೇಳ್ವ	ಡೇಱ್ವ
೫೫	೧೨೬	ಯನೀಳ್ಕುಳಿ	ಯನೀಱಿಕ್ಕುಳಿ
,,	೧೨೭	ವರ್ಮಧರಾ	ವರ್ಮನಿಳಾ?
೫೬	೧೨೯(ಗ)	ನೆಱಿಶಿಯದೆ	ನೆಱುಶಿಯದೆ
,,	,,	ತಲೆವೊರೆ	ತಲೆವೊಱುತ
೫೭	೧೩೧(ಗ)	ನೀಕಧನ	ನೀಕುವ್ಯಧನ?
೫೯	೧೧	ಜನಗುಟಿಕೆ	ಜನಳುಟಿಕೆ
೬೦	೨೫	ತೋಱಿ	ತೋರ
೬೩	೩೦	ಕೆದರಿ	ಕೆದಱು
೬೪	೩೪(ಗ)	ಕಣ್ಣಾಱಿಕೆ	ಕಣ್ಣಾರೆ
೬೪	೬೧(ಗ)	ರೋಧೋ	ರೋದೋ
೬೯	೬೬	ನೀಱ್ಪಂತೆ	ನೀಳ್ದಂತೆ
೭೦	೭೦(ಗ)	ಸಮಗ್ರತಾ್ವ	ಸಮಗ್ರಸತಾ್ವ
,,	೭೨	ವುಱಿಕಂ	ವುಳಕಂ
೭೧	೭೫	ಕಣ್ಮರಿಂ	ಕಣ್ಮಲರಿಂ
,,	,,	ವುಱಿಕ	ವುಳಕ
,,	೭೭	ಗಳೆವುತ್ತಿ	ಗಳೆಯುತ್ತಿ
೭೫	೯೪	ನೀಱ್ದಿ	ನಿಳ್ದ
೭೭	೪	ಕ್ರುಡಿಗಿತ್ತು	ಕ್ರುಡುಗಿತ್ತು
೪೦	೨೨	ವಡಿವೊಡು	ವಡಿಯೂಡು

,,	೨೩	ನುಗುಳ್ವ	ನುಗುಬ್ಬಿ
೪೧	೨೫	ಜಲರು	ಜಳರು
೪೨	೩೨	ರ್ಮಲ	ರ್ಮಳೆ
,,	೩೪೯	ಸಂಭ್ರ	ಸಸಂಭ್ರ
೪೪	೪೬	ತೆವರುಂ	ತೆವಱುಂ
೪೫	೪೭(ಗ)	ಉತ್ಪಾಖಬ್ಬಿ	ಉತ್ಪಾತಖಬ್ಬಿ
,,	೫೦	ನೀಱುದ್ದಿನ	ನೀಳ್ದಿನ
೪೬	೫೧	ವಿಶ್ರಾಂತ	ವಿಕ್ರಾಂತ
೪೦	೭೪	ಕಂಡಱುಕ್ಕ	ಕಂಡಳ್ಕಿ
,,	೭೭	ಯುಳ್ಳು	ಯುಬ್ಬಿ
೪೧	೪೪	ವೆಱಿಸು	ವೆರಸು
,,	,,	ವಳಿ	ವಲಿ
೪೨	೪೦	ನೀಱ್ದಿ	ನೀಳ್ದ
೪೩	೪೪	ಗೋಡೆದೆ	ಗೋಡದೆ
೪೬	೧೦೪	ತಱಿಪಿ	ತಳಿಸಿ
೪೪	೩	ದಿಂ। ಮುನ್ನುಱಿಶಿ	ದಿಂಮು। ನ್ನುಱಿಶಿ
೪೯	೪	ನೀಱಿಶ್ದಿರೆಗೊಂ	ನೀಳ್ದೆಱಿಶಿ
೧೦೦	೧೩	ಳುಳಿಲ	ಳುಬ್ಬಿಲನೆ
೧೦೧	೨೩	ತಳೆ...ವಾಳ್ವೆಱಿ	ತಱಿಶಿ...ವಾಳ್ವೇಱಿ
೧೦೨	೨೫	ಧಾಳಿಟ್ಟು	ದಾಬ್ಬಿಟಟ್ಟು
೧೦೩	೩೧	ಇದೆರೆ	ಇದಿರೆ
,,	೩೪	ಪೇಱುದ್ದಿ	ಪೇಱಿದ್ದಿ
೧೦೫	೪೧	ಮಿನುಗುವ	ಮಿಸುಗುವ
೧೦೪	೫	ಬಳಿ	ಬಱಿಶಿ
೧೦೯	೪	ದಱ್ಕಿರಿಂ	ದಱ್ಕಿಱಿಂ
,,	೧೧	ನೆಱಿಸಲ್ಕೆ	ನೆಳಸಲ್ಕೆ
೧೧೦	೧೪	ವಶಸಲ್ಲದೆ	ವಶನಲ್ಲದೆ
,,	೧೯	ಗಲ	ಗಳೆ
,,	,,	ಲಲಿತ	ಲಳಿತ
೧೧೨	೩೦	ಬಾಯ್ದೆಱಿಶಿ	ಬಾಯ್ದೆರೆ
,,	,,	ನ್ಮೀಲಿಸೆ	ನ್ಮೀಳಿಸೆ
,,	,,	ಪಾಲನ	ಪಾಳನ
೧೧೫	೪೩	ಬಿನಿತೆಂ	ಬಿನಿತೇಂ
೧೧೬	೫೪	ಮಿಳಿವುದು	ಮಿಱಿವುದು

೧೧೯	೬೭	ನಾರಿ	ನಾಜೂಕಿ
,,	೬೯(ಗದ್ಯ)	ಸಪ್ಪಳ್ವಜ್ಜಿಯ	ಕಾಪ್ಪೋಟಿ-ಯ
೧೨೦	೬೯	ನಿರುಂಕೆ	ನಿಡುಂಕೆ
,,	೭೦	ಬೀಳ್ವಳ	ಬೀಳ್ವಳಿ
,,	೭೩	ಮೂಬ್ಬರಿ	ಮೂಬ್ಬಿಟು
೧೨೧	೭೪	ಕುಲಿಲ್ಬು	ಕುಲಿಲ್ಬು
೧೨೩	೪	ನೆನಗನೆ ಮುಳ್ಗೀಳಲಾ	ನೆನಗ ಕಿವುಳ್ಗೀಳಲಾ
,,	೩	ಬಳಲ	ಬಲಂ
	,,	ಕಲುಂಬು	ಕಿಲುಂಬು
೧೨೪	೭	ಪೊಗರೇಜಿ	ಪೊಗರೇಜಿ
೧೨೫	೧೩	ಗಥಟಿನ	ಗಜಪಿನ
,,	೧೫	ವಿಳಸಿ	ವಿಲಸಿ
,,	,,	ಗ್ಲಳಿವ	ಗ್ಲಲಿವ
೧೨೬	೧೯(ಗ)	ದೆರಿಬ್ದಿ	ದೆರಿಬ್ದಿ
,,	,,	ಬಳಿಕ್ಕೆ	ಬಬಿಕ್ಕೆ
,,	,,	ವುಗಿಡಿ	ವುಡೆಗಿ?
,,	೨೦	ವಳವೆಯ್ಯ	ವಬಿವೆಯ್ಯ
೧೨೭	೨೬	ಲಲಿತಾ	ಲಳಿತಾ
೧೨೪	೨೪(ಗ)	ಗುಬಿನವ	ಗುಬಿದ
೧೨೯	೩೬	ಕಳತ್ತೆ	ಕಬಿತ್ತೆ
,,	,,	ಗಳ್ಗಿತು	ಗಬಿಗ್ಗಿತು
೧೩೦	೪೧	ವಳಿಯ	ವಬಿಯ
,,	,,	ತಣ್ಣಳಲಂ	ತಣ್ಣಬಿಲಂ
,,	೪೪	ವಿರಿಗಯ	ವಜಿರಿಗಳ?
,,	,,	ಕ್ಕಬಿಯವೆ	ಕ್ಕಬಿಟಿಯದೆ
೧೩೧	೪೬(ಗ)	ಸೂರೆ	ಸೂಜಿ
,,	೪೭(ಗ)	ಚೂನ್ನದ	ಜೂನ್ನದ
೧೩೨	೪೪	ಕಜುವಾಡೆ	ಕದುವಾಡ
,,	೫೧	ಗಜುಕ್ಕ	ಗಳ್ಕಿ
೧೩೪	೫೯	ನೀರೇಜುದ	ನೀಜುರೇಜುದ
,,	೫೯(ಗ)	ಳಿಸಿರಿ	ಳಿರಿಸಿ
೧೩೫	೬೯	ಬೆಳಲಿಗೆ	ಬಳಲಿಗೆ
೧೩೬	೭೧(ಗ)	ಬೀಯದ	ಬಿಯದ
,,	೭೨	ಕಳಲ್ಬಿ	ಕಬಿಲ್ಬಿ

,,	೩೫	ನುಗುಳ್ದ	ನುಗುಬ್ದಿ
,,	ಟಪ್ಪಣಿಯಲ್ಲಿ	ಪ್ರಾಸಕ್ಷರವು	ಪ್ರಾಸಾಕ್ಷರವು
೧೩೪	೪೨	ಎಳೆಮಾವಿ	ಎಳವಮಾವಿ
೧೪೨	೧೧೨	ನನವಂಬ	ನೆನಲಂಬಿ
,,	೧೧೦	ಜಳನ	ಚಲನ
	,,	ತೊಳಗಿ	ತೊಲಗಿ
	,,	ಮುಂಜೆಳ	ಮುಂಜೆಲ
೧೪೩	೧೧೪	ರಿವುಕಿತ್ತು ಕೊದಳ್	ಬಿಲ್ವುಕೆತ್ತು ತೊದಳ್
,,	೧೧೪	ಲ್ವೊರಗ	ಲ್ವೊಜಿಗ
೧೪೬	೭	ಲರಿಯ	ಲಜ್ಜೆಯ
೧೪೭	೯(ಗ)	ಯೇಕಾದಶಾಂ	ಏಕಾದಶಾಂ
,,	೧೦	ತ್ಯೋದ್ಧತಿ	ತ್ಯೋದ್ಧತ್ತಿ
೧೪೯	೨೧(ಗ)	ಪುಟಕಿನವ	ಪುಳಕಿನವ
,,	೨೪	ಜ ೪	೧ ೪
೧೫೦	೨೨	ಗಳಿಸ್ಕ ೧	ಗಟ್ಟಿಸ್ಕ ೧
೧೫೧	೩ ೧	ನುರನೆನ್ನ	ಸ್ಮರಿಸೆನ್ನ
೧೫೩	೪೨	ಬನಗಿನಳಿಕೆಯ್ಯಂ	ಬಿಡಾಗಿ ನವಮಿಕೆಯ್ಯಂ
,,	೪೪	ನೀರೆ	ನೀಱಿಕಿ
೧೫೭	೬೦(ರಗ)	ನಿಮಿರೆ	ನಿಮಿಱಿಕಿ
೧೫೪	೬೧	ಚೆನ್ನಪೂ	ಚಿನ್ನಪೂ
,,	೬೨	ಆರಮನೆ	ಅರಮನೆ
೧೫೯	೬೯	ಎಳೆಮಿಂಚು	ಎಳಮಿಂಚು
೧೬೯	೫	ಲೇನಿನೆ	ಲಂದೆನೆ
೧೭೧	೧೫	ದಿಱಿದು	ದಿಟ್ಟಿದು
,,	೧೬	ದಜ್ಜಿಜಿ	ದಟ್ಟಿಜಿ
೧೭೫	೪೦	ಎಡೆವಕ್ಕ	ಎಡವಕ್ಕ
೧೭೪	೫೦	ಮಾಱಿಪ್ಪಿನಿ	ಮಾಟ್ಟಿನಿ
,,	೫೩	ಕೆವರು	ಕೆದಱು
೧೭೯	(೬)	ನಾರ್ಥಿಕ	ನಾರ್ಥಕ
೧೯೨	೪೫	ಮಳೆಯ	ಮಲಯ
,,	,,	ಳೆಳೆವಂಗ	ಳೆಲವಂಗ
೨೧೯	೧೨	ಕಪರೆನಿಸಿ	ಕರರೆನಿಸಿ
,,	೧೫	ಕೀರ್ತಿವರ	ಕೀರ್ತಿಧರ?
೨೨೧	೨೪	ವ್ರಕಾರ	ವ್ರಕರ

೧೧೧	೧೭	ಯೊಳ್ತೆಂಬು	ಯೊಳೆಂಬು
೧೧೨	೧೪	ಸೊದರಿರೆ	ಸೊಡರಿರೆ
೧೧೩	೪೧	ಪುಟ್ಟದ	ಪುಟ್ಟಿದ
೧೧೪	೪೯	ಪೇಸುವತಂಕರಂ?	ಪೇಸನದೇಂಕರಂ?
೧೧೫	೬೨	ಲೋಕಾಂಕಿತ	ಲೋಕಾಂತಿಕ
,,	೬೫	ಮಿಂದುಳಿಯು	ಮಿಂದುಟಿಯು
೧೩೨	೯೧	ಮರಳ್ವ	ಮಱುಳ್ವ?
,,	೯೨	ಏನೆ	ಎನೆ
೧೩೪	೧೦೩	ಇದೆರೆ	ಇದಿರೆ
೧೪೦	೧೬(ಗ)	ವಿಧರಿದ್ದಿ	ವಿಧಮುದ್ದಿ
೧೪೧	೧೦	ಗಿಚೆಗಂ	ಗಿಡಿಗಂ
೧೪೨	೧೯(ಗ)	ಕಂಖವಿಟ್ಟ	ಕಿಟ್ಟವಿಟ್ಟ?
,,	,,	ನಂದಕ್ಕೆ	ನಂದನಕ್ಕೆ

ಪರಿಶಿಷ್ಟ ೧

೧೪೯	೧	ಯೆನಿಸಿ ..ನೈ	ಯೆನಿಸಿದ...ನೇಂ?

ಪರಿಶಿಷ್ಟ ೪

೧೩೧	೧	ಮೋದಯೋತ್ಕಂಪಿ	ಮೋತ್ಕಂಪಿ
,,	(ಗ) ಪಂ ೩	ಮೆದತ್ತ	ಧನದತ್ತ
,,	,, ಪಂ ೬	ವಿರಿಶಂತಿ	ವಿಂಶತಿ
೧೩೨	,, ಪಂ ೧೦	ವುಪ್ಪದಂ	ವುಪ್ಪದಂ

The Madras Publishing Housl Ltd, Madras—1933